ಕಲಾವಿದ ಎಂ. ಎ. ಚೆಟ್ಟಿಯವರ ಜೀವನ, ಕಲಾಕೃತಿಗಳು ಒಂದು ಅಧ್ಯಯನ

ಪಿಎಚ್.ಡಿ. ಪದವಿಗಾಗಿ, ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರ ಪಡಿಸಿದ ಮಹಾಪ್ರಬಂಧ

ಸಂಶೋಧಕರು
ಶ್ರೀಮತಿ ಲಕ್ಷ್ಮೀದೇವಿ ಗವಾಯಿ

ಮಾರ್ಗದರ್ಶಕರು
ಡಾ॥ ಎಸ್. ಸಿ. ಪಾಟೀಲ
ಪ್ರವಾಚಕರು ಮತ್ತು ಮುಖ್ಯಸ್ಥರು,
ಶಿಲ್ಪ ಮತ್ತು ವರ್ಣಚಿತ್ರ ಕಲಾವಿಭಾಗ,
ಕನ್ನಡ ವಿಶ್ವವಿದ್ಯಾಲಯದ ಶಾಖೆ,
ಬನಶಂಕರಿ ಬಾದಾಮಿ.

ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩೨೭೬

೨೦೦೨

ಕಲಾವಿದ ಎಂ. ಎ. ಚೆಟ್ಟಿಯವರ ಜೀವನ, ಕಲಾಕೃತಿಗಳ ಒಂದು ಅಧ್ಯಯನ

ಪಿಹೆಚ್. ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ
ಮಹಾಪ್ರಬಂಧ

ಸಂಶೋಧಕರು
ಶ್ರೀಮತಿ ಲಕ್ಷ್ಮೀದೇವಿ ಗವಾಯಿ

ಮಾರ್ಗದರ್ಶಕರು
ಡಾ. ಎಸ್. ಸಿ. ಪಾಟೀಲ್
ಪ್ರವಾಚಕರು ಹಾಗೂ ಮುಖ್ಯಸ್ಥರು
ಶಿಲ್ಪ ಮತ್ತು ವರ್ಣಚಿತ್ರ ಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ. ವಿದ್ಯಾರಣ್ಯ
ಶಾಖೆ : ಬನಶಂಕರಿ. ಬಾದಾಮಿ

ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ
೨೦೦೨

ಪ್ರಮಾಣ ಪತ್ರ

ಶ್ರೀಮತಿ ಲಕ್ಷ್ಮೀದೇವಿ ಗವಾಯಿ ಇವರು ಬರೆದು ಸಾದರಪಡಿಸಿದ **ಕಲಾವಿದ ಎಂ. ಎ. ಚೆಟ್ಟಿಯವರ ಜೀವನ, ಕಲಾಕೃತಿಗಳು : ಒಂದು ಅಧ್ಯಯನ** ಎಂಬ ವಿಷಯ ಕುರಿತ ಈ ಮಹಾಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು ಅವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ, ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗದಲ್ಲಿ ಸಂಶೋಧನೆ ನಡೆಸಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಈ ಸಂಶೋಧನ ಮಹಾಪ್ರಬಂಧವು ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣಪತ್ರ ನೀಡುತ್ತೇನೆ.

(ಡಾ. ಎಸ್. ಸಿ. ಪಾಟೀಲ)
ಮಾರ್ಗದರ್ಶಕರು

೨೮-೧-೨೦೦೨
ಶಿಲ್ಪ ಮತ್ತು ವರ್ಣಚಿತ್ರ ಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ. ಹಂಪಿ
ಶಾಖೆ : ಬನಶಂಕರಿ. ಬಾದಾಮಿ

ಘೋಷಣಾ ಪತ್ರ

ಕಲಾವಿದ ಎಂ. ಎ. ಚೆಟ್ಟಿಯವರ ಜೀವನ, ಕಲಾಕೃತಿಗಳು : ಒಂದು ಅಧ್ಯಯನ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಡಾ. ಎಸ್. ಸಿ. ಪಾಟೀಲ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರಾವುದೇ ಪದವಿಗಾಗಿಯಾಗಲಿ, ಇತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತೇನೆ.

(ಶ್ರೀಮತಿ ಲಕ್ಷ್ಮೀದೇವಿ ಗವಾಯಿ)
ಸಂಶೋಧನಾ ವಿದ್ಯಾರ್ಥಿ

೨೮-೧-೨೦೦೨
ಶಿಲ್ಪ ಮತ್ತು ವರ್ಣಚಿತ್ರ ಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ. ಹಂಪಿ
ಶಾಖೆ : ಬನಶಂಕರಿ. ಬಾದಾಮಿ

ಅರಿಕೆ

ನಾಡಿನ ಸುಪ್ರಸಿದ್ಧ ಸಂಗೀತ ಕಲಾವಿದರಾದ ದಿ. ಶ್ರೀ ಸಿದ್ಧರಾಮ ಜಂಬಲದಿನ್ನಿಯವರ ಮಗಳಾದ ನಾನು ತಂಬೂರಿಯ ನಾದಮಯ ಕಲಾವಾತಾವರಣದಲ್ಲೇ ಬೆಳೆದುಬಂದ ಕಾರಣವಾಗಿ ಲಲಿತಲೆಗಳಲ್ಲಿ ಸಹಜವಾಗಿ ಆಸಕ್ತಿ ಉಂಟಾಯಿತು. ಲಲಿತಕಲೆಗಳಲ್ಲಿ ಒಂದಾದ ಚಿತ್ರಕಲೆಯನ್ನು ಪದವಿ ತರಗತಿಯಲ್ಲಿ ಓದುತ್ತಿರುವಾಗಲೇ ಈ ಕ್ಷೇತ್ರದಲ್ಲಿ ಉನ್ನತ ವ್ಯಾಸಂಗ ಕೈಕೊಳ್ಳಬೇಕೆಂಬ ಒಲವು ಹೊಂದಿದ್ದೆ. ಮುಂದೆ ಚಿತ್ರಕಲೆಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದೆ. ಜೊತೆಗೆ ಎಂ. ಎ. ಕನ್ನಡ ಪದವಿಯನ್ನು ಪಡೆದು ಗದುಗಿನಲ್ಲಿ ಕನ್ನಡ ಉಪನ್ಯಾಸಕಿಯಾದೆನು. ಆದರೆ ಚಿತ್ರಕಲಾ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನ ಮಾಡಬೇಕೆಂಬ ನನ್ನ ಹಂಬಲ ಹಾಗೆಯೆ ಉಳಿದಿತ್ತು. ಕಾರಣ ಆ ಸಂದರ್ಭದಲ್ಲಿ ಈ ಕ್ಷೇತ್ರಕ್ಕೆ ಸಂಬಂಧಿಸಿದ ಮಾರ್ಗದರ್ಶಕರು ಯಾರೂ ಇರಲಿಲ್ಲ. ಒಮ್ಮೆ ಗದುಗಿನ ವಿಜಯ ಕಲಾಮಂದಿರದ ವಾರ್ಷಿಕೋತ್ಸವದಲ್ಲಿ ನಡೆದ ಕಲಾ ವಿಚಾರ ಸಂಕಿರಣದಲ್ಲಿ ಡಾ. ಎಸ್. ಸಿ. ಪಾಟೀಲ ಅವರೊಂದಿಗೆ ನಾನು ಪ್ರಬಂಧ ಮಂಡಿಸಿದ್ದೆ. ಕಾರ್ಯಕ್ರಮ ಮುಗಿದ ನಂತರ ನನ್ನನ್ನು ಕರೆದು ಸಂಶೋಧನೆ ಮಾಡಲು ಆಸಕ್ತಿ ಇದ್ದರೆ ಒಮ್ಮೆ ಹಂಪಿ ವಿ. ವಿ. ಗೆ ಬನ್ನಿರಿ ಎಂದು ಅವರು ಹೇಳಿದ್ದರು. ಮುಂದೆ ಕೆಲವು ದಿನಗಳಲ್ಲಿ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಅಧ್ಯಯನಕ್ಕೆ ಪ್ರಕಟಣೆ ಬಂದಿತು. ನನ್ನ ಮನೆಯವರೊಂದಿಗೆ ಈ ಅಭಿಲಾಷೆಯನ್ನು ಸಹಜವಾಗಿ ವ್ಯಕ್ತಪಡಿಸಿದೆ. ನನ್ನ ಪತಿಯವರು ಅಧ್ಯಯನಕ್ಕೆ ಸಂಬಂಧಿಸಿದಂತೆ ನಾನು ನಿನಗೆ ಎಲ್ಲ ರೀತಿಯಲ್ಲಿ ನೆರವಾಗುತ್ತೇನೆ ಎಂದು ಪ್ರೋತ್ಸಾಹಿಸಿ. ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕರೆದುಕೊಂಡು ಬಂದು ಡಾ. ಪಾಟೀಲ ಸರ್ ಅವರನ್ನು ಭೆಟ್ಟಿ ಮಾಡಿಸಿದರು. ಸಂಶೋಧನೆಯ ವಿಷಯ ಪ್ರಸ್ತಾಪ ಮಾಡಿದಾಗ ಅವರು ತುಂಬ ಪ್ರೀತಿಯಿಂದ ಮಾರ್ಗದರ್ಶಕರಾಗಲು ಒಪ್ಪಿಕೊಂಡು ವಿಷಯದ ಆಯ್ಕೆಯಿಂದ ಮಹಾಪ್ರಬಂಧ ಸಲ್ಲಿಸುವವರೆಗೆ ನನಗೆ ನೀಡಿದ ಸಲಹೆ ಮಾರ್ಗದರ್ಶನ ಅಮೂಲ್ಯವಾದುದು. ಗೃಹಿಣಿಯಾದ ನನಗೆ ಕೌಟುಂಬಿಕ ಒತ್ತಡದಲ್ಲಿ ಅಧ್ಯಯನ ನಿಲ್ಲಿಸಿ ಬಿಡುವ ಸಂದರ್ಭ ಬಂದಾಗಲೆಲ್ಲ ಅವರು ಧೈರ್ಯ. ಪ್ರೋತ್ಸಾಹ ನೀಡಿದ್ದಾರೆ. ಅವರು ನನಗೆ ಮಾರ್ಗದರ್ಶಕರಾಗಿ ಸಿಕ್ಕಿದ್ದು ಒಂದು ಯೋಗಾಯೋಗ. ಅವರಿಗೆ ನನ್ನ ಅನಂತ ಕೃತಜ್ಞತೆಗಳು.

ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಮಾನ್ಯ ಡಾ. ಎಂ. ಎಂ. ಕಲಬುರ್ಗಿಯವರ ಹತ್ತಿರ ಹೋಗಿ ಶ್ರೀ ಚಿಟ್ಟಿಯವರ ಬಗೆಗೆ ಸಂಶೋಧನೆ ಮಾಡುವ ಕುರಿತು ಪ್ರಸ್ತಾಪಿಸಿದಾಗ ಅವರು ಒಳ್ಳೆಯ ವಿಷಯವಿದೆ. ಚಿಟ್ಟಿಯವರಂತಹ ಕಲಾವಿದರ ಬಗ್ಗೆ ಯಾವತ್ತೋ ಅಧ್ಯಯನವಾಗಬೇಕಿತ್ತು. ಮಾಡಿರಿ ಎಂದು ಸಲಹೆ ಸೂಚನೆಗಳನ್ನು ನೀಡಿ ಪ್ರೋತ್ಸಾಹಿಸಿದ್ದಾರೆ. ಈಗಿನ ಕುಲಪತಿಗಳಾದ ಮಾನ್ಯ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರು ಪಿಎಚ್.ಡಿ. ಮಹಾಪ್ರಬಂಧದ ಪ್ರಸ್ತುತತೆಯನ್ನು ಕುರಿತು ಸಲಹೆ ನೀಡಿ ಉಪಕರಿಸಿದ್ದಾರೆ. ಅವರಿಗೆಲ್ಲಾ ನನ್ನ ಅನಂತ ಕೃತಜ್ಞತೆಗಳು.

ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಕೆ. ವ್ಹಿ. ನಾರಾಯಣ ಅವರನ್ನು ಮತ್ತು ಅಧ್ಯಯನಾಂಗದ ನಿರ್ದೇಶಕರಾದ ಡಾ. ಹಿ. ಚಿ. ಬೋರಲಿಂಗಯ್ಯ ಅವರನ್ನು ಲಲಿತಕಲಾ ನಿಕಾಯದ ಡೀನ ಪ್ರೊ. ಹನುಮಣ್ಣನಾಯಕ ದೊರೆಯವರನ್ನು ವಿಶ್ವವಿದ್ಯಾಲಯದ ಅಧ್ಯಾಪಕವರ್ಗದವರ ಸಹಾಯ ಸಹಕಾರವನ್ನು ಗೌರವದಿಂದ ಸ್ಮರಿಸಿಕೊಳ್ಳುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರಾದ ಡಾ. ಬಿ. ಆರ್. ಹಿರೇಮಠ ಅವರು. ಧಾರವಾಡದ ಕ. ವಿ. ವಿ. ಶೈಕ್ಷಣಿಕ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಆರ್. ಟಿ. ಜಂತ್ಲಿಯವರು ಅನೇಕ ರೀತಿಯಲ್ಲಿ ಸಹಾಯ ಮಾಡಿದ್ದಾರೆ. ಅವರಿಗೆ ನನ್ನ ಅನಂತ ಕೃತಜ್ಞತೆಗಳು.

ಗದಗ. ಹುಬ್ಬಳ್ಳಿ. ಧಾರವಾಡ. ಮುಂಡರಗಿ. ನಿಡಸೋಸಿ. ಶಿರಹಟ್ಟಿ. ಅವರಾದಿ. ಶ್ರವಣಬೆಳಗೊಳ. ಚೇಳ್ಳಗುರ್ಕಿ. ನರಗುಂದ ಈ ಎಲ್ಲ ಊರುಗಳ ಮಠಗಳ ಪೂಜ್ಯಮಹಾಸ್ವಾಮಿಗಳು. ಮಹಾಪ್ರಬಂಧದ ಕ್ಷೇತ್ರ ಕಾರ್ಯಕ್ಕೆ ಅನುವು ಮಾಡಿಕೊಟ್ಟು ಮಹತ್ವದ ಮಾಹಿತಿ ಒದಗಿಸಿದ್ದಕ್ಕಾಗಿ ಅವರೆಲ್ಲರಿಗೂ ಅನಂತ ಪ್ರಣಾಮಗಳನ್ನು ಸಮರ್ಪಿಸುತ್ತೇನೆ.

ಕಲಾವಿದರಾದ ಶ್ರೀ ಜೆ. ಎಸ್. ಖಂಡೇರಾವ್. ಶ್ರೀ ಆರ್. ಎಮ್. ಹಡಪದ. ಶ್ರೀ ವ್ಹಿ. ಜಿ. ಅಂದಾನಿ. ಶ್ರೀ ವ್ಹಿ. ಸಿ. ಮಾಲಗತ್ತಿ. ಶ್ರೀ ವ್ಹಿ. ಬಿ. ಹಿರೇಗೌಡರ. ಶ್ರೀ ಎಮ್. ಆರ್. ಬಾಳಿಕಾಯಿ. ಡಾ. ಬಿ. ಕೆ. ಹಿರೇಮಠ. ಶ್ರೀ ಎಸ್. ಜಿ. ಮುಂಗರವಾಡಿ. ಶ್ರೀ ಎಲ್. ಶಿವಲಿಂಗಪ್ಪ. ಶ್ರೀ ಅಶೋಕ ಅಕ್ಕಿ. ಶ್ರೀ ಕೆ. ವಿ. ಕುಂದಗೋಳ. ಶ್ರೀ ಕಾವೆಂಶ್ರೀ. ಪ್ರೊ. ಚೂಡಾಮಣಿ ನಂದಗೋಪಾಲ. ಪ್ರೊ. ವ್ಹಿ. ಜಿ. ಮಾರೀಹಾಳ. ಡಾ. ಶ್ಯಾಮಸುಂದರ ಬಿದರಕುಂದಿ. ಮತ್ತು ಶ್ರೀ ಅನ್ನದಾನಿ ಹಿರೇಮಠ ಅವರು ಅಧ್ಯಯನದಲ್ಲಿ ನೆರವಾಗಿ ಮಾಹಿತಿ ನೀಡಿದ್ದಾರೆ. ಅವರಿಗೆಲ್ಲ ನಮನಗಳು.

ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ಮುಂಬೈಯ ಜೆ. ಜೆ. ಸ್ಕೂಲ್ ಆಫ್ ಆರ್ಟ್‌ನ ಅಧ್ಯಾಪಕ ವರ್ಗ. ಗ್ರಂಥಾಲಯ. ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ ಬೆಳಗಾವಿ. ಮೂರುಸಾವಿರ ಮಠ ಗ್ರಂಥಾಲಯ ಹುಬ್ಬಳ್ಳಿ. ಆದರ್ಶ ಶಿಕ್ಷಣ ಸಮಿತಿ ಕಾಮರ್ಸ್ ಕಾಲೇಜ ಗದಗ. ವಿಜಯ ಕಲಾಮಂದಿರ ಗದಗ. ಹಾಗೂ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. ಕನ್ನಡ ವಿಶ್ವವಿದ್ಯಾಲಯ ಹಂಪಿ. ಈ ಎಲ್ಲ ಗ್ರಂಥಾಲಯಗಳ ಗ್ರಂಥಪಾಲಕರ ಸಹಕಾರವನ್ನು ಪ್ರೀತಿಯಿಂದ ನೆನೆಯುತ್ತೇನೆ.

ಈ ಮಹಾಪ್ರಬಂಧಕ್ಕೆ ಸೂಕ್ತವಾದ ದಾಖಲೆಗಳನ್ನು ಛಾಯಾಚಿತ್ರಗಳನ್ನು ನೀಡಿ. ಪ್ರೋತ್ಸಾಹಿಸಿದ ಶ್ರೀ ಮಹಾಲಿಂಗ ಯಾಳಗಿ ಮತ್ತು ಕಲಾವಿದ ಚೆಟ್ಟಿಯವರ ಮಗ ಶ್ರೀ ಬಸವರಾಜ ಎಂ. ಚೆಟ್ಟಿ. ತಮ್ಮನ ಮಗ ಶ್ರೀ ಬಸವರಾಜ ಜಿ. ಚೆಟ್ಟಿ. ಹೆಣ್ಣುಮಕ್ಕಳಾದ ಶ್ರೀಮತಿ ಮಹಾದೇವಿ ಕಿತ್ತೂರ. ಶ್ರೀಮತಿ ರತ್ನಾದೇವಿ ಯಾಳಗಿ ಸೊಸೆ ಶ್ರೀಮತಿ ಶಾಂತಾ ಎ. ಚೆಟ್ಟಿ ಇವರೆಲ್ಲರಿಗೂ ನಾನು ಚಿರಋಣಿ.

ಈ ಮಹಾ ಪ್ರಬಂಧಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡುವ ಮರಾಠಿ ಗ್ರಂಥ ಹಾಗೂ ಲೇಖನಗಳನ್ನು ಅನುವಾದ ಮಾಡಿಕೊಟ್ಟ ಪ್ರೊ. ಆನಂದ ಗೋಡಬಿಂದಿ ಆದರ್ಶ ಶಿಕ್ಷಣ ಸಮಿತಿ. ಕಾಮರ್ಸ್ ಕಾಲೇಜ ಗದಗ ಹಾಗೂ ಶ್ರೀಮತಿ ವ್ಹಿ. ಆರ್. ಭಗತ್ ಅವರಿಗೆ ನನ್ನ ಕೃತಜ್ಞತೆಗಳು.

ಕ್ಷೇತ್ರಕಾರ್ಯದಲ್ಲಿ ಛಾಯಾ ಚಿತ್ರಗಳನ್ನು ಮಾಡಿಕೊಟ್ಟ ಶ್ರೀ ಸಿ. ಎಂ. ಮುನವಳ್ಳಿ. ಶ್ರೀ ಎಸ್. ಎಫ್. ಬೆನಕಣ್ಣವರ, ಶ್ರೀ ಈರಣ್ಣ ರಂ. ಹೂಗಾರ, ಹಾಗೂ ವಿಡಿಯೋಗ್ರಾಫರ್ ಗಂಗಾಧರ ಹೂಗಾರ. ಛಾಯಾ ಚಿತ್ರಗಳನ್ನು ಹಚ್ಚುವ ಕಾರ್ಯದಲ್ಲಿ ನೆರವು ನೀಡಿದ ಮೆಸರ್ಸ ಮಡಿವಾಳಪ್ಪ ಆ್ಯಂಡ ಸನ್ಸ ಗದಗ. ಹಾಗೂ ಶ್ರೀ ಮನೋಹರ ಆರ್. ಫತ್ತೇಪೂರ ಹಾಗೂ ಇನ್ನಿತರ ಕೆಲಸಗಳಲ್ಲಿ ಸಹಾಯ ಮಾಡಿದ ರಮೇಶ ಹೂಗಾರ. ಗದಗ. ಬೆಂಗಳೂರಿನ ರಂಗನಾಥ ದೇಸಾಯಿ ಇವರಿಗೆ ನನ್ನ ವಂದನೆಗಳು.

ನನ್ನ ಶೈಕ್ಷಣಿಕ ಬೆಳವಣಿಗೆಯನ್ನು ಪ್ರೋತ್ಸಾಹಿಸಿ ಈ ಮಹಾಪ್ರಬಂಧವನ್ನು ಬರೆಯಲು ಅನುಕೂಲ ಮಾಡಿಕೊಟ್ಟ ಶ್ರೀ ಧೀರೇಂದ್ರ ಬಿ. ಹುಯಿಲಗೋಳ. ಅಧ್ಯಕ್ಷರು. ಹಾಗೂ ಎಲ್ಲ ಸದಸ್ಯರು ವಿದ್ಯಾದಾನ ಸಮಿತಿ ಗದಗ ಮತ್ತು ಶ್ರೀ ಎಂ. ಎಸ್. ಕುಲಕರ್ಣಿ ಪ್ರಾಚಾರ್ಯರು. ಸಹೋದ್ಯೋಗಿಗಳು. ವಿದ್ಯಾದಾನ ಸಮಿತಿ ಹೆಣ್ಣುಮಕ್ಕಳ ಪದವೀಪೂರ್ವ ಮಹಾವಿದ್ಯಾಲಯ ಗದಗ ಇವರೆಲ್ಲರ ಪ್ರೋತ್ಸಾಹ ವಿಶೇಷವಾಗಿದೆ. ಅವರಿಗೆಲ್ಲ ಅನಂತ ಕೃತಜ್ಞತೆಗಳು.

ಈ ಮಹಾಪ್ರಬಂಧದ ಅಕ್ಷರ ಜೋಡಣೆಯ ಕರಡು ತಿದ್ದುವ ಹಂತದಲ್ಲಿ ಶ್ರಮಿಸಿದ ಡಾ. ಯಾದಪ್ಪ ಬ. ಪರದೇಶಿ. ಶಿವಾನಂದ ಬಂಟನೂರು. ಸಿದ್ದು ಹಿರೇಮಠ. ಶಿವಪ್ರಕಾಶ ತುಕ್ಕಣ್ಣವರ ಇವರ ಸಹಾಯವನ್ನು ವಿಶೇಷವಾಗಿ ಸ್ಮರಿಸುತ್ತೇನೆ.

ನನ್ನ ಬಾಳಸಂಗಾತಿ ಪತಿ ವಿರೂಪಾಕ್ಷಪ್ಪ ಗವಾಯಿ ಅವರು ನನ್ನ ಅಧ್ಯಯನಕ್ಕೆ ಪ್ರೋತ್ಸಾಹಿಸಿ ಎಲ್ಲ ರೀತಿಯ ಸಹಕಾರ ನೀಡಿದ್ದಾರೆ. ನನ್ನ ಮಕ್ಕಳಾದ ಕು. ಶ್ವೇತಾ ಹಾಗೂ ಕು. ಕಾವ್ಯ ಇವರ ಸಹನೆಯಿಂದ ಸಹಕಾರ ನೀಡಿದ್ದಾರೆ. ಅತ್ತೆ. ಮಾವಂದಿರಾದ ಶ್ರೀ ಬಸವಣ್ಣೆಪ್ಪ ಗವಾಯಿ. ಶ್ರೀಮತಿ ಶಿವಲಿಂಗವ್ವ ಗವಾಯಿ. ಹಾಗೂ ಜಂಬಲದಿನ್ನಿ ಕುಟುಂಬದವರು ಗುಲ್ಬರ್ಗಾ. ಕ್ಷೇತ್ರಕಾರ್ಯದ ಕೊನೆಯ ಹಂತದಲ್ಲಿ ಹಲವಾರು ರೀತಿಯಲ್ಲಿ ಸಹಾಯ ಮಾಡಿದ ಗದುಗಿನ ಶ್ರೀ ಶಿವಪುತ್ರಪ್ಪ ಹೂಗಾರ. ಧಾರವಾಡದ ಶ್ರೀ ಜಯದೇವ ಸಿ. ಬೆನ್ನೂರ ಹಾಗೂ ಕುಟುಂಬದವರಿಗೆ ನನ್ನ ವಂದನೆಗಳು. ಅನೇಕ ಜನ ಕಲಾವಿದರು ಚಿಟ್ಟಿಯವರ ಕುರಿತು ಮಾಹಿತಿ ನೀಡಿದ್ದಾರೆ. ಅವರೆಲ್ಲರಿಗೂ ನನ್ನ ವಂದನೆಗಳು.


ಕಡಿಮೆ ಅವಧಿಯಲ್ಲಿ ಶ್ರಮವಹಿಸಿ ಅಕ್ಷರ ಜೋಡಣೆಯನ್ನು ಮಾಡಿಕೊಟ್ಟ ಧಾರವಾಡದ ಮನೋಹರ ಮುದ್ರಣಾಲಯದ ಮಾಲಿಕರಾದ ರವಿ-ಚಂದ್ರು ಆಕಳವಾಡಿ ಸಹೋದರರನ್ನು ಹಾಗೂ ಉತ್ತಮ ರೀತಿಯಲ್ಲಿ ಬೈಂಡಿಂಗ ಮಾಡಿಕೊಟ್ಟ ಎಸ್. ವ್ಹಿ. ಪಾಟೀಲರಿಗೆ ಹಾಗೂ ಅಧ್ಯಯನದುದ್ದಕ್ಕೂ ಅನೇಕ ರೀತಿಯಲ್ಲಿ ಸಹಾಯ ಮಾಡಿದ ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗದ ಆರ್. ವ್ಹಿ. ದೇಶಪಾಂಡೆ. ವಸಂತ. ಶಿವಾನಂದ ಕಟ್ಟಿ. ಅವರಿಗೆಲ್ಲ. ನನ್ನ ಕೃತಜ್ಞತೆಗಳು.

೨೮-೧-೨೦೦೨ ಶ್ರೀಮತಿ ಲಕ್ಷ್ಮೀದೇವಿ ಗವಾಯಿ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಹಾಗೂ ವಿಧಾನ



" ಪರಿಪಕ್ವ ಮನಸ್ಸಿನ ಪರಿಣತ ಫಲ ಸಂಸ್ಕೃತಿ. ಇದರ ಹಿನ್ನೆಲೆಯನ್ನು ಒಳಗೊಂಡ ಕಲಾಕೃತಿಗಳು ಕಲಾವಿದನ ಪ್ರತಿಭೆಯ ಪ್ರತಿನಿಧಿ ಮಾತ್ರವಲ್ಲದೇ ಜನಾಂಗದ ನಿಧಿಯೂ ಆಗುತ್ತವೆ. ಅವುಗಳ ವಿಕಾಸದಲ್ಲಿ ಜನಜೀವನದ ಪ್ರತಿಬಿಂಬವನ್ನೇ ಕಾಣುತ್ತೇವೆ ".[೧] ಹೀಗೆ ಒಂದು ಸಮುದಾಯದ ಕಲೆ ಜನಜೀವನಗಳು ಆ ನಾಡಿನ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತವೆ.

" ಯಾವುದೇ ಒಂದು ನಾಡಿನ ಸಾಹಿತ್ಯ. ಕಲೆ. ತತ್ವಜ್ಞಾನ ಮೊದಲಾದವು ಆ ದೇಶದ ಸಂಸ್ಕೃತಿಯ ತಿರುಳೇನೆಂದು ಜಗತ್ತಿಗೆ ಸಾರುವ ಕೃತಿಗಳಾಗುತ್ತವೆ. ದೇಶಿಯನೊಬ್ಬನು ತನ್ನ ನಾಡಿನಲ್ಲಿ ಬಾಳಿ. ಬದುಕಿ. ಅದರ ನೆಲದಲ್ಲಿ ನಡೆದು. ನೀರಲ್ಲಿ ಈಸಿ. ಗಾಳಿಯಲ್ಲಿ ಉಸಿರಾಡಿ. ಅಲ್ಲಿನ ಆವರಣವು ತನಗೆ ಒದಗಿಸುವ ಯಾವತ್ತೂ ಅನುಭವಗಳಿಂದ ತನ್ನ ಮನಸ್ಸನ್ನು ಬೆಳೆಯಿಸಿಕೊಂಡು ಪ್ರಬುದ್ಧನಾಗುತ್ತಾನೆ. ಆ ಆವರಣವು ಅವನಲ್ಲಿ ಹುಟ್ಟಿಸಿದ ನೂರಾರು ಸಿಹಿ ಕಹಿ ಅನುಭವಗಳನ್ನೆಲ್ಲ ಒಂದೊಂದು ಕಲಾಸಾಧನದ ಮೂಲಕ ಪ್ರಕಟಪಡಿಸಲು ಪ್ರಯತ್ನಿಸುತ್ತಾನೆ. ಅವನು ಜೀವನವನ್ನು ನೋಡುವ ನೋಟ. ನಡೆಸುವ ದಾರಿಗಳಿಗೂ ಕಲಾವಿದ ಬೆಳೆದು ಬಂದಿರುವ ಆವರಣವು ಕಾರಣವಾಗುತ್ತದೆ. ಈ ಆವರಣದಲ್ಲಿ ಅವನ ದೇಶಿಯ ಸಂಸ್ಕೃತಿಯೂ ಪ್ರಧಾನ ಪಾತ್ರವಹಿಸುತ್ತದೆ "[೨] ಎಂಬ ಅಂಶ ಯಾವುದೇ ಕಲಾವಿದರ ಜೀವನ ಮತ್ತು ಸಾಧನೆಯ ಅಧ್ಯಯನಕ್ಕೆ ಮುಖ್ಯಾಂಶವಾಗುತ್ತದೆ.

ಕಲಾಪ್ರಪಂಚದಲ್ಲಿ ಭಾರತೀಯ ಚಿತ್ರಕಲೆಯ ಕೊಡುಗೆ ಅಪಾರವಾದದ್ದು. ಇಲ್ಲಿಯ ಕಲಾಕೃತಿಗಳ ವಸ್ತು ವೈವಿಧ್ಯ ಮತ್ತು ಶೈಲಿಯ ವೈಶಿಷ್ಟ್ಯ ಇವುಗಳ ದೃಷ್ಟಿಯಿಂದ ನಮ್ಮ ಚಿತ್ರಕಲಾ ಪರಂಪರೆಯ ಸಂಪತ್ತು ಅಪೂರ್ವವಾಗಿದೆ. ಭಾರತದಾದ್ಯಂತವೂ ಕಂಡುಬರುವ ಈ ಚಿತ್ರಕಲೆಯ ಅಭಿವ್ಯಕ್ತಿ ತನ್ನ ಆದರ್ಶವನ್ನು ಎಲ್ಲಾ ಕಾಲದಲ್ಲಿ ಉಳಿಸಿಕೊಂಡು ಬಂದಿದೆ. ಇಂತಹ ಅನನ್ಯವಾದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ ಕಲಾಕೃತಿಗಳು. ಕಲಾತತ್ವಗಳು ಮತ್ತು ಅವುಗಳ ವಿಮರ್ಶೆ. ಕಲಾ ಇತಿಹಾಸ ಮುಂತಾದ ಅಂಶಗಳು ಹಾಗೂ ಕಲಾವಿದರ ಕುರಿತ

---

೧. ಎಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿಕ ಸಮೀಕ್ಷೆ. ಪುಟ ೭೦೪

೨. ಡಾ. ಎಸ್. ಸಿ. ಪಾಟೀಲ (ಸಂ.) : ಶಿಕ್ಷಣ ಸಂಪದ - ಪುಟ ೧೦೧

ಅಧ್ಯಯನಗಳು ಅಷ್ಟೊಂದು ಗಂಭೀರವಾಗಿ ನಮ್ಮ ದೇಶದಲ್ಲಿ ನಡೆದಿಲ್ಲ. ಕಲಾವಿದರು ಬಾಳಿ ಬದುಕಿದ ಪರಿಸರ ಮತ್ತು ಹಿನ್ನೆಲೆಯನ್ನು ಕುರಿತು ಯುರೋಪಿನ ಜನರು ಹೆಚ್ಚು ಆಸ್ಥೆ ವಹಿಸಿದ್ದಾರೆ. ಸುಮಾರು ಕ್ರಿ. ಶ. ೧೮-೧೯ ನೇ ಶತಮಾನದಿಂದ ಲಿಖಿತ ಸಾಹಿತ್ಯದ ಮೂಲಕ ಕಲಾಕೃತಿಗಳಲ್ಲಿಯ ಅವರ ಸಂಸ್ಕೃತಿಯ ಪರಿಚಯವನ್ನು ಮಾಡಿಕೊಡುತ್ತ ಬಂದಿದ್ದಾರೆ. ಪಾಶ್ಚಾತ್ಯರಲ್ಲಿ ಕಲಾ ಪ್ರಜ್ಞೆ ಹೀಗೆ ಉಚ್ಚಮಟ್ಟದಲ್ಲಿ ಬೆಳೆದು ಬಂದಿದೆ.

ನಮ್ಮ ದೇಶದಲ್ಲಿ ಈ ಕಲಾಸಾಹಿತ್ಯವು ಇತ್ತೀಚೆಗಷ್ಟೇ ಪ್ರಚಲಿತದಲ್ಲಿ ಬರುತ್ತಿರುವುದನ್ನು ಕಾಣುತ್ತೇವೆ. ಡಾ. ಶಿವರಾಮ ಕಾರಂತ ಅವರು ಅಭಿಪ್ರಾಯಪಡುವಂತೆ " ನಮ್ಮ ದೇಶದ ಮಟ್ಟಿಗೆ ಹೇಳುವಲ್ಲಿ ಬಹುಮಂದಿ ವಿದ್ಯಾವಂತರಿಗೆ ಜಗತ್ತಿನ ವಿವಿಧ ಕಲೆಗಳ ಪರಿಚಯ ಇರುವುದಂತಿರಲಿ ಸ್ವದೇಶದ ಚಿತ್ರ, ಶಿಲ್ಪಾದಿ ಕಲೆಗಳ ಪರಿಚಯವೂ ಸಾಕಷ್ಟಿಲ್ಲ. ಅವನ್ನು ಕುರಿತು ದೇಶ ಭಾಷೆಗಳಲ್ಲಿ ತಿಳಿಸಿ ಹೇಳುವ ಸಾಹಿತ್ಯಕ್ಕೂ ಕೊರತೆ ಇದೆ. ನಮ್ಮ ದೇಶ ಭಾಷೆಗಳಲ್ಲಿ ಕಾಣಿಸುವ ಈ ಶೂನ್ಯತೆ ಬೃಹತ್ ಗಾತ್ರದ್ದು" [೩] ಎಂಬ ಮಾತಿನಲ್ಲಿ ಸತ್ಯಾಂಶವಿದೆ.

ಕರ್ನಾಟಕದ ಚಿತ್ರಕಲೆ ತನ್ನದೇ ಆದ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಇದರ ಇತಿಹಾಸದಲ್ಲಿ ಅನೇಕ ಕಲಾವಿದರು ಹುಟ್ಟಿ ತಮ್ಮ ಪ್ರತಿಭೆಯನ್ನು ತೋರಿ ಮರೆಯಾಗಿದ್ದಾರೆ. ಆದರೆ ಅವರ ಹೆಸರುಗಳು ಮಾತ್ರ ಉಳಿದು ಬಂದಿಲ್ಲ. ಕಾರಣ ಆ ಕಾಲದ ಕಲಾವಿದರು ತಮ್ಮ ಹೆಸರುಗಳನ್ನು ಕಲಾಕೃತಿಗಳ ಮೇಲೆ ಸೂಚಿಸದೆ ಇರುವುದು. ಚಿತ್ರಕಲೆ ಶ್ರೇಷ್ಠಕಲೆ ಎಂಬ ಭಾವನೆ ಅವರಲ್ಲಿತ್ತಲ್ಲದೆ. ಅದು ಧರ್ಮಾರ್ಥಕಾಮ ಮೋಕ್ಷಪ್ರದವಾದುದೆಂದು ನಂಬಿಕೆಯಿತ್ತು. ಅಂತೆಯೇ ಚಿತ್ರಕಲೆ ಸರ್ವಕಲೆಗಳಲ್ಲಿ ಶ್ರೇಷ್ಠವೆಂಬುದಕ್ಕೆ ಖಚಿತಪಡಿಸುವ ಉಲ್ಲೇಖ ಹೀಗಿದೆ. ಮಾರ್ಕಂಡೇಯ ಪುರಾಣದ " ಕಲಾನಾಂ ಪ್ರವರಂ ಚಿತ್ರಂ ಧರ್ಮ ಕಾಮಾರ್ಥ ಮೋಕ್ಷಪ್ರದಮ್ ಮಾಂಗಲ್ಯಂ ಪ್ರಥಮಂ ಚೈತದ್ಗೃಹೇತ್ ಪ್ರತಿಷ್ಠಿತಮ್ " [೪] (ಕಲೆಗಳಲ್ಲಿ ಚಿತ್ರಕಲೆ ಉತ್ತಮವಾದುದು. ಧರ್ಮ. ಅರ್ಥ. ಕಾಮ. ಮೋಕ್ಷಕ್ಕೆ ಸಾಧನವಾದುದು. ಮನೆಯಲ್ಲಿ ಮಂಗಳಕರವೆಂದೂ ಗೃಹದೇವತೆಯನ್ನು ಸಂತೃಪ್ತಿಪಡಿಸುವ ಸಾಧನವೆಂದು ಅರ್ಥ). ಆದ್ದರಿಂದ ಕಲೆಯ ಮುಂದೆ ತಾನು ಅಲ್ಪವೆಂದು ಭಾವಿಸಿದ ಕಲಾವಿದರು ತಮ್ಮ ಹೆಸರನ್ನು ಸೂಚಿಸಿರಲಿಕ್ಕಿಲ್ಲ. ಚಾಲುಕ್ಯ, ಹೊಯ್ಸಳ ಶಿಲ್ಪಿಗಳ ಕೆಲವರ ಹೆಸರುಗಳು ಮಾತ್ರ ಅಲ್ಲಲ್ಲಿ ಉಳಿದಿವೆ. ಕನ್ನಡ ಕಾವ್ಯಗಳಲ್ಲಿ ಚಿತ್ರಕಲೆಯ ಪ್ರಸ್ತಾಪ ಬಂದಾಗಲೆಲ್ಲ ಚೀರಘಟ್ಟಿ ಎಂಬ ಕಲಾವಿದನೊಬ್ಬನ ಹೆಸರು ಮಾತ್ರ ಕೇಳಿ ಬರುತ್ತದೆ. ಅವನ ಕುರಿತು ಹೆಚ್ಚಿನ ಯಾವ ವಿವರಗಳು ತಿಳಿದು ಬಂದಿಲ್ಲ. ಹೀಗೆ ಅಲ್ಲಲ್ಲಿ ಕೇವಲ ಹೆಸರುಗಳನ್ನು ಮಾತ್ರ ಸೂಚಿಸಿರುವ ಅಂಶ ಕಂಡು ಬಂದಿದ್ದು ವಿವರವಾದ ಪರಿಚಯ ಇಲ್ಲ. ತನದನಂತರದ ಶತಮಾನದಲ್ಲಿ ಕಲಾವಿದರ ಪರಿಚಯ ಹಾಗೂ ಕಲೆಯ ಬಗ್ಗೆ ಸ್ವಲ್ಪಮಟ್ಟಿನ ಪ್ರಯತ್ನಗಳು ನಡೆದಿವೆ. ಆದರೆ ಕಲೆ. ಕಲಾವಿದರ ಕುರಿತಾದ ಸಂಶೋಧನೆಗಳು ಮಾತ್ರ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ.

---

೩. ಶಿವರಾಮ ಕಾರಂತ : ಕಲಾ ಪ್ರಪಂಚ. ಪುಟ ೩

೪. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ. ಪುಟ ೧೫

ಕಲಾವಿದನ ಬದುಕು. ಪರಿಸರ. ವ್ಯಾಸಂಗ. ಧ್ಯೇಯ. ಧೋರಣೆ. ಸಾಧನೆ. ಸಿದ್ಧಿ ಮುಂತಾದವುಗಳು ಆತನ ಕಲಾಕೃತಿಯ ಸೃಷ್ಟಿಯ ಪರಿಕರಗಳಾಗಿರುತ್ತವೆ. ಕಲಾವಿದ ಅವುಗಳಿಗೆ ಅತೀತನಾಗಿ ಕಲಾಕೃತಿ ನಿರ್ಮಾಣಕ್ಕೆ ಅವುಗಳನ್ನು ಹೇಗೆ ದುಡಿಸಿಕೊಳ್ಳುತ್ತಾನೆ. ಮತ್ತು ಕಲಾವಿದನ ಸ್ವಂತಿಕೆಯು ಹೇಗೆ ಅಲ್ಲಿ ಅಭಿವ್ಯಕ್ತಗೊಂಡಿರುತ್ತದೆ ಎಂಬುದು ಮುಖ್ಯವಾಗುತ್ತದೆ. ಕಲಾ ವಸ್ತುವಿನ ಆಯ್ಕೆಯಲ್ಲಿ ಕಲಾವಿದನ ಅಭಿರುಚಿಯೂ ಆ ವಸ್ತುವಿನ ಬಗ್ಗೆ ತೋರುವ ಆಸ್ಥೆ ಇಲ್ಲವೆ ಪ್ರತಿಕ್ರಿಯೆಯಲ್ಲಿ ಕಂಡುಬರುತ್ತದೆ. ಯಾವುದೇ ಕಲಾವಿದನ ಧೋರಣೆಯೂ ಅವನದೇ ಆದ ಅಭಿವ್ಯಕ್ತಿಯ ವೈಯಕ್ತಿಕತೆಯಲ್ಲಿ ಅವನ ಕಲಾ ಸೃಷ್ಟಿಯ ವಿಶಿಷ್ಟತೆಯನ್ನು ಗುರುತಿಸಬಹುದು. ಕಲಾವಿದರ ಈ ಹಿನ್ನೆಲೆಯಲ್ಲಿ ಜೀವನ ಚರಿತ್ರೆಯ ಅಧ್ಯಯನವು ಇಲ್ಲಿ ಅಷ್ಟೇ ಮಹತ್ವದ್ದಾಗಿದೆ.

ಕರ್ನಾಟಕದ ಚಿತ್ರಕಲೆ ತನ್ನದೇ ಆದ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ್ದು. ಈ ಕ್ಷೇತ್ರದ ಕುರಿತು ನಡೆದ ಸಂಶೋಧನೆಗಳು ಬೆರಳೆಣಿಕೆಯಷ್ಟು ಮಾತ್ರ. ಇದರ ಜೊತೆಯಲ್ಲಿಯೇ ಇರುವ ಸಂಗೀತ. ವಾಸ್ತುಶಿಲ್ಪ. ಸಾಹಿತ್ಯದಲ್ಲಿ ಸಾಕಷ್ಟು ರೀತಿಯ ಸಂಶೋಧನೆಗಳು ನಡೆದಿವೆ. ಆದರೆ ಚಿತ್ರಕಲೆಯ ಕ್ಷೇತ್ರದಲ್ಲಿ ಕಲೆಯ ಕುರಿತು. ಕಲಾವಿದರ ಕುರಿತು ಇಲ್ಲಿಯವರೆಗೆ ಅಷ್ಟೊಂದು ಗಂಭೀರವಾದ ಅಧ್ಯಯನಗಳು ನಡೆಯದೇ ಇರುವುದನ್ನು ಗಮನಿಸಿ ಪ್ರಸ್ತುತ ಕಲಾವಿದರಾದ ಎಂ. ಎ. ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳನ್ನು ಕುರಿತು ಅಧ್ಯಯನ ಮಾಡುವ ಉದ್ದೇಶ ಹೊಂದಿದೆ.

ನಾಡಿನ ಸಂಸ್ಕೃತಿಯ ಜೀವಂತಿಕೆಯ ಹಿಂದೆ ಹಲವು ವ್ಯಕ್ತಿಗಳ ಕಾಯಕದ ಶಕ್ತಿ ಕಾಣಬರುತ್ತದೆ. ಬದುಕನ್ನೇ ಕಲೆ. ಸಂಸ್ಕೃತಿಗಾಗಿ ಮೀಸಲಾಗಿರಿಸಿದ ಹಲವಾರು ಜನ ಕಲಾವಿದರಲ್ಲಿ ಎಂ. ಎ. ಚೆಟ್ಟಿಯವರು ಪ್ರಮುಖರು. ಚಿತ್ರ ಕಲೆಗಾಗಿಯೇ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡವರು. ರಾಷ್ಟ್ರೀಯ. ಅಂತರ್‌ರಾಷ್ಟ್ರೀಯ ಖ್ಯಾತಿಯನ್ನು ಹೊಂದಿದವರು. ವೈವಿಧ್ಯಮಯವಾದ ಕಲಾಕೃತಿಗಳಿಂದ ಜನಮನವನ್ನು ಸೂರೆಗೊಂಡ ಈ ಶತಮಾನದ ಒಬ್ಬ ಗಮನಾರ್ಹ ಕಲಾವಿದರು. ಸಾವಿರಾರು ಕಲಾಕೃತಿಗಳನ್ನು ನಿರ್ಮಿಸಿದ ದಣಿವರಿಯದ ಪ್ರತಿಭೆ ಶ್ರೀ ಚೆಟ್ಟಿಯವರದು. ರೇಖಾಚಿತ್ರ. ತೈಲವರ್ಣ. ಜಲವರ್ಣದಲ್ಲಿ ವಿಶಿಷ್ಟವಾದ ಕೊಡುಗೆಯನ್ನು ಕೊಟ್ಟವರು. ಅವರ ಕಲಾಕೃತಿಗಳ ಮೂಲಕ ನಮ್ಮ ಸಾಂಸ್ಕೃತಿಕ ವಿವರಗಳು ಹೇಗೆ ದಾಖಲುಗೊಂಡಿವೆ ಎಂಬುದರ ಅಧ್ಯಯನವು ಇಲ್ಲಿದೆ. ಚೆಟ್ಟಿಯವರ ಜೀವನ. ಸಾಧನೆಯನ್ನು ಮತ್ತು ಅವರ ಕಲಾಕೃತಿಗಳನ್ನು ಪರಿಚಯಿಸಿಕೊಡುವ ಪ್ರಮುಖ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಹೊಂದಿದೆ.

ಈ ಸಂಸ್ಕೃತಿಯ ಬಹುಮುಖ್ಯವಾದ ಅಭಿವ್ಯಕ್ತಿಯಲ್ಲಿ ಚಿತ್ರಕಲೆಯು ಒಂದು. ಯಾವುದೇ ಕಲಾ ಕೃತಿಯೊಂದರ ಅಧ್ಯಯನಕ್ಕೆ ಅದರ ಕರ್ತೃವಿನ ಜೀವನಾಭ್ಯಾಸವು ಅಗತ್ಯವಾಗಿರುತ್ತದೆ. ಕಲಾವಿದ ಬಾಳಿದ ಕಾಲ. ಪರಿಸರ. ಅಲ್ಲದೆ ಅವನ ಸಮಕಾಲೀನ ಅಂಶಗಳು ಹೇಗೆ ಕಲಾಕೃತಿಯಲ್ಲಿ ಒಡಮೂಡಿವೆ ಎಂಬ ಅಂಶಗಳನ್ನು ಅಭ್ಯಸಿಸಿದರೆ ಮಾತ್ರ ಕಲಾಕೃತಿಯನ್ನು ತಿಳಿದುಕೊಳ್ಳಲು ಸಾಧ್ಯ. ಅಂತೆಯೇ ಚೆಟ್ಟಿಯವರ ಜೀವನದೊಂದಿಗೆ ಅವರ ಕಲಾಸಾಧನೆ. ಅವರ

ಸಮಕಾಲೀನ ಕಲಾವಿದರು, ಶಿಕ್ಷಣ, ಪಠ್ಯಕ್ರಮ, ಕಲಾಕೃತಿಗಳ ವಸ್ತು, ಶೈಲಿ, ತಂತ್ರ ಇತ್ಯಾದಿ ಹತ್ತು ಹಲವಾರು ವಿವರಗಳನ್ನು ಪ್ರಸ್ತುತ ಅಧ್ಯಯನದ ಮೂಲಕ ಕಂಡುಕೊಳ್ಳುವ ಉದ್ದೇಶವನ್ನು ಇಲ್ಲಿ ಇಟ್ಟುಕೊಳ್ಳಲಾಗಿದೆ.

ಚೆಟ್ಟಿಯವರ ಕುರಿತು ನಡೆದ ಅಧ್ಯಯನ :

ಇಲ್ಲಿಯ ವರೆಗೆ ಕರ್ನಾಟಕದಲ್ಲಿ ಕಲಾವಿದರ ಜೀವನ ಹಾಗೂ ಕಲಾಕೃತಿಗಳನ್ನು ಕುರಿತ ಹೆಚ್ಚಿನ ಸಂಶೋಧನ-ಅಧ್ಯಯನಗಳು ನಡೆದಿಲ್ಲ. ಇತ್ತೀಚೆಗೆ ಒಬ್ಬರೇ, ಮಾಡಿದ್ದಾರೆ. ಅನಿವಾಸಿ ಭಾರತೀಯರಾದ ಶ್ರೀ ನಿಕೋಲಸ್ ರೋರಿಕ್ ಅವರನ್ನು ಕುರಿತು ಶ್ರೀಮತಿ ಪುಷ್ಪಾ ದ್ರಾವಿಡ್ ಅವರು ಸಂಶೋಧನ ಮಾಡಿ ಆಂಗ್ಲ ಭಾಷೆಯಲ್ಲಿ ಮಹಾಪ್ರಬಂಧವನ್ನು ಅರ್ಪಿಸಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪಡೆದಿದ್ದಾರೆ.

ಕರ್ನಾಟಕದ ಹಿರಿಯ ಕಲಾವಿದ ಶ್ರೀ ಎಂ. ಎ. ಚೆಟ್ಟಿಯವರ ಜೀವನ, ಕಲಾ ಕೃತಿಗಳ ಅಧ್ಯಯನ ಕನ್ನಡ ಭಾಷೆಯಲ್ಲಿ ಇದೇ ಮೊದಲ ಬಾರಿಗೆ ಕೈಕೊಳ್ಳಲಾಗಿದೆ. ಎಂ. ಎ. ಚೆಟ್ಟಿಯವರನ್ನು ಕುರಿತು ಈ ವರೆಗೆ ಬಂದ ಒಂದು " ಅಭಿನಂದನ ಗ್ರಂಥ " [೫] ಅಕಾಡೆಮಿಯಿಂದ ಪ್ರಕಟವಾದ " ಎಂ. ಎ. ಚೆಟ್ಟಿ " [೬] ಎಂಬ ಚಿಕ್ಕ ಪುಸ್ತಕ. ಇವು ಅವರ ಜೀವನದ ಮೇಲು ನೋಟದ ಕೆಲವು ವಿವರಗಳನ್ನು ಹೊಂದಿವೆ. ಅದರಲ್ಲಿ ಅಭಿನಂದನ ಗ್ರಂಥದಲ್ಲಂತೂ ಕಲಾವಿದರ ಜೀವನದ ಬಗ್ಗೆ ಅನೇಕರು ಒಂದೇ ತರಹದ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ. ಕಲಾಕೃತಿಗಳ ಅಧ್ಯಯನಕ್ಕೆ ಅದರಲ್ಲಿ ಮಹತ್ವ ನೀಡಿಲ್ಲದಿರುವುದು ಕಂಡು ಬರುತ್ತದೆ.

ಇನ್ನು ಕೆಲವು ಲೇಖನಗಳು ಇವರ ಕುರಿತು ಬಂದಿವೆ. ಹಾಲಭಾವಿಯವರು ಬರೆದ ಗ್ರಂಥ " My Contemporary Artists " [೭] ದಲ್ಲಿ ಇವರ ಕುರಿತಾದ ಲೇಖನವಿದೆ. " ಕರ್ನಾಟಕ ಕಲಾವಿದರ ಪರಿಚಯಾವಳಿ " [೮] " ಸ್ಕೂಲ ಆಫ್ ಆರ್ಟ್, ಧಾರವಾಡ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ ". [೯] " ಕರ್ನಾಟಕ ರಾಜ್ಯ ಗೆಝೆಟೀಯರ್ " [೧೦] " ಹಿರಿಯ ಕಲಾವಿದರ ಕಲಾಪ್ರದರ್ಶನ " [೧೧]. " ಕರ್ನಾಟಕ ಲಲಿತಕಲಾ ಅಕಾಡೆಮಿ

---

೫. ಮಹಾಲಿಂಗ ಯಾಳಗಿ (ಸಂ.) : ಕಲಾತಪಸ್ವಿ ಶ್ರೀ ಮುರಿಗೆಪ್ಪಣ್ಣ ಚೆಟ್ಟಿ ಅಭಿನಂದನ ಗ್ರಂಥ. ೧೯೯೧

೬. ಅನ್ನದಾನಿ ಹಿರೇಮಠ : ಎಂ. ಎ. ಚೆಟ್ಟಿ. ಲಲಿತಕಲಾ ಅಕಾಡೆಮಿ ಬೆಂಗಳೂರು. ೧೯೮೫

೭. ಡಿ. ವ್ಹಿ. ಹಾಲಭಾವಿ : " My contemporary Artists " ೧೯೬೮

೮. ಎಸ್. ಎನ್. ಚಂದ್ರಶೇಖರ (ಸಂ.) : ಕರ್ನಾಟಕ ಕಲಾವಿದರ ಪರಿಚಯಾವಳಿ. ಚೆಟ್ಟಿ ಮುರಿಗೆಪ್ಪ ಅಡಿವೆಪ್ಪ. ಪುಟ ೨೮

೯. ಎಚ್. ಜೆ. ಮುಲ್ಲಾ ಮತ್ತು ಎಮ್. ಪಂಚಪ್ಪ (ಸಂ.) : ಸ್ಕೂಲ್ ಆಫ್ ಆರ್ಟ್ಸ್. ಧಾರವಾಡ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ ಎಂ. ಎ. ಚೆಟ್ಟಿ . ಪುಟ ೫೦

೧೦. ಸೂರ್ಯನಾಥ ಯು. ಕಾಮತ (ಸಂ.) : ಕರ್ನಾಟಕ ರಾಜ್ಯ ಗೆಝೆಟೀಯರ್. ಭಾಗ - ೨. ಪುಟ ೬೧೦

೧೧. ಸೋಮಶೇಖರ ಸಾಲಿ (ಸಂ.) : ಹಿರಿಯ ಕಲಾವಿದರ ಕಲಾ ಪ್ರದರ್ಶನ. ಎಂ. ಎ. ಚೆಟ್ಟಿ. ೧೯೮೬

ಪ್ರಶಸ್ತಿ ಪಡೆದ ಕಲಾವಿದರು" [೧೨] ನವೋದಯ ದಿನಪತ್ರಿಕೆಯಲ್ಲಿ " ಚಿತ್ರಬ್ರಹ್ಮ ಎಂ. ಎ. ಚೆಟ್ಟಿ" [೧೩], " ಸಾವಿರ ಶಿವಾನುಭವ " [೧೪], " ಶಿಕ್ಷಣ ಸಂಪದ - ಪ್ರೊ. ವ್ಹಿ. ಜಿ. ಮಾರೀಹಾಳ ಅಭಿನಂದನ ಗ್ರಂಥ " [೧೫], ನವೋದಯ ದಿನಪತ್ರಿಕೆಯಲ್ಲಿ " ಮುರಿಗೆಪ್ಪಣ್ಣ ಚೆಟ್ಟಿ" [೧೬], " ಧಾರವಾಡ ಜಿಲ್ಲಾ ಗೆಝೆಟೀಯರ್ " [೧೭]. ತರಂಗ ವಾರಪತ್ರಿಕೆಯಲ್ಲಿ " ನೈಜಕಲೆಯ ರಸಋಷಿ ೯೦ ರ ಹರೆಯದ ಮುರಿಗೆಪ್ಪಣ್ಣ ಎ. ಚೆಟ್ಟಿ " [೧೮], ಕನ್ನಡ ಪ್ರಭ ದಿನಪತ್ರಿಕೆಯಲ್ಲಿ " ಶರಣಭಾವ. ರವಿವರ್ಮನ ಪ್ರಭಾವ " [೧೯]. ಕರ್ಮವೀರ ವಾರಪತ್ರಿಕೆಯಲ್ಲಿ " ವಯೋವೃದ್ಧನ ಕಲೆಗೆ ಸಿಕ್ಕ ತಕ್ಕ ಪುರಸ್ಕಾರ " [೨೦]. ಒಡನಾಟದಲ್ಲಿ " ನೈಜಕಲೆಯ ರಸಋಷಿ ೯೦ ರ ಹರೆಯದ ಮುರಿಗೆಪ್ಪಣ್ಣ ಎ. ಚೆಟ್ಟಿ" [೨೧]. ಕಲಾಚರಿತ್ರೆಯಲ್ಲಿ " ಮುರಿಗೆಪ್ಪ ಅಡಿವೆಪ್ಪ ಚೆಟ್ಟಿ" [೨೨]. ನೂತನ ವಾರಪತ್ರಿಕೆಯಲ್ಲಿ " ರಿಯಲಿಸ್ಟಿಕ್. ಕಲೆಯ ರಸಋಷಿ ಮುರಿಗೆಪ್ಪಣ್ಣ ಚೆಟ್ಟಿ" [೨೩] ಇವರನ್ನು ಕುರಿತಾದ ಈ ಲೇಖನಗಳು ಅವರ ಜೀವನ ಹಾಗೂ ಕಲಾಕೃತಿಗಳ ಬಗ್ಗೆ ಸ್ಥೂಲವಾದ ನೋಟ ಹರಿಸಿದ್ದನ್ನು ಕಾಣುತ್ತೇವೆ.

ಸನ್ಮಾನ ಪತ್ರಗಳು " ಶ್ರೀ ನಿ. ಪ್ರ. ಸ್ವ. ಮಹಾಂತ ಸ್ವಾಮಿಗಳು. ಶ್ರೀ ಮುರುಘಾಮಠ. ಧಾರವಾಡ " [೨೪]. " ಮೈಸೂರು ಪ್ರದೇಶ ಚಿತ್ರಕಲಾ ಪರಿಷತ್ " [೨೫]. " ಶ್ರೀ ಷ. ಬ್ರ. ಬಸವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ತೆಲಸಂಗ " [೨೬]. ಶ್ರೀ ಮದಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು [೨೭] ನೀಡಿದ ಈ ಎಲ್ಲ ಸನ್ಮಾನ ಪತ್ರಗಳಲ್ಲಿಯೂ ಅವರ ಜೀವನ ಹಾಗೂ ಕಲಾಕೃತಿಗಳ ಬಗ್ಗೆ ಕಿರುಪರಿಚಯವಿದೆ. ೧೯೮೫ ರಲ್ಲಿ ಕನ್ನಡ

---

೧೨. ಪಿ. ಆರ್. ತಿಪ್ಪೆಸ್ವಾಮಿ : ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪಡೆದ ಕಲಾವಿದರು. ಪುಟ ೧೩. ೧೯೮೭

೧೩. ವಿಶ್ವನಾಥ ಗುಗ್ಗರಿ : ನವೋದಯ ದಿನಪತ್ರಿಕೆ - ಚಿತ್ರಬ್ರಹ್ಮ ಎಂ. ಎ. ಚೆಟ್ಟಿ. ಪುಟ ೨, ೧೯೮೭

೧೪. ವೀರಶೈವ ಪ್ರಗತಿಶೀಲ ಯುವಕ ಸಂಘ ಗದಗ : ಸಾವಿರ ಶಿವಾನುಭವ. ಪುಟ ೧೪. ೧೯೯೧

೧೫. ಡಾ. ಎಸ್. ಸಿ. ಪಾಟೀಲ (ಸಂ.) : ಶಿಕ್ಷಣ ಸಂಪದ - ಪ್ರೊ. ವ್ಹಿ. ಜಿ. ಮಾರಿಹಾಳ ಅಭಿನಂದನ ಗ್ರಂಥ. ಪುಟ ೧೦೧

೧೬. ಸಿ. ಎಂ. ಹೊನಗುಡಿ : ನವೋದಯ ದಿನಪತ್ರಿಕೆ - ಮುರಿಗೆಪ್ಪಣ್ಣ ಚೆಟ್ಟಿ. ಪುಟ ೨. ೧೯೯೨

೧೭. ಸೂರ್ಯನಾಥ ಯು. ಕಾಮತ : ಧಾರವಾಡ ಜಿಲ್ಲಾ ಗೆಝೆಟೀಯರ್. ಪುಟ ೨೨೫. ೧೯೯೫

೧೮. ಕಾವೆಂಶ್ರಿ : ತರಂಗ ವಾರಪತ್ರಿಕೆ - ನೈಜ ಕಲೆಯ ರಸಋಷಿ ೯೦ ರ ಹರೆಯದ ಮುರಿಗೆಪ್ಪ ಎ. ಚೆಟ್ಟಿ. ಪುಟ ೭೭. ೧೨-೧೧-೧೯೯೬

೧೯. ಎಲ್. ಶಿವಲಿಂಗಪ್ಪ : ಕನ್ನಡ ಪ್ರಭ ದಿನಪತ್ರಿಕೆ (ಸಾಪ್ತಾಹಿಕ ಪ್ರಭ). ಶರಣ ಬಾವ. ರವಿವರ್ಮನ ಪ್ರಭಾವ. ಪುಟ ೧. ೧೬-೩-೧೯೯೭

೨೦. ಎಲ್. ಶಿವಲಿಂಗಪ್ಪ : ಕರ್ಮವೀರ ವಾರಪತ್ರಿಕೆ : ವಯೋವೃದ್ಧನ ಕಲೆಗೆ ಸಿಕ್ಕ ತಕ್ಕ ಪುರಸ್ಕಾರ. ಪುಟ ೩೪-೩೫. ೧೨-೪-೧೯೯೭

೨೧. ಕಾವೆಂಶ್ರೀ : ಒಡನಾಟ. ಪುಟ ೧೪

೨೨. ಅಶೋಕ ಅಕ್ಕಿ : ಕಲಾ ಚರಿತ್ರೆ. ಪುಟ ೧೬೦

೨೩. ಕಾವೆಂಶ್ರೀ : ನೂತನ ವಾರ ಪತ್ರಿಕೆ (ಲೇ) : ರಿಯಲಿಸ್ಟಿಕ್ ಕಲೆಯ ರಸಋಷಿ. ಪುಟ ೩೦

೨೪. ಮುರುಘಾಮಠ ಧಾರವಾಡ : ದಿನಾಂಕ ೨೭-೯-೧೯೭೧

೨೫. ಮೈಸೂರು ಪ್ರದೇಶದ ಚಿತ್ರಕಲಾ ಪರಿಷತ್ತು. ಮೈಸೂರು. ದಿನಾಂಕ ೩೦-೩-೧೯೭೩

೨೬. ತೆಲಸಂಗ ಹಿರಿಯಮಠ ತೇಲಸಂಗ. ದಿನಾಂಕ ೮-೧೦-೧೯೮೧

೨೭. ಶ್ರವಣಬೆಳಗೊಳ ಜೈನ ಮಠ. ೧೩-೪-೧೯೮೪

ಮತ್ತು ಸಂಸ್ಕೃತಿ ಇಲಾಖೆಯವರು ಚಿತ್ರಿಸಿದ ಸಾಕ್ಷ್ಯಚಿತ್ರ ಹಾಗೂ ೨೦೦೦ ದಲ್ಲಿ ಲಲಿತಕಲಾ ಅಕಾಡೆಮಿಯವರು ಚಿತ್ರಿಸಿದ ಸಾಕ್ಷ್ಯಚಿತ್ರ ಅವರ ಜೀವನ ಹಾಗೂ ಕಲಾಕೃತಿಗಳ ಸಂಕ್ಷಿಪ್ತ ವಿವರಗಳು ಸಿಗುತ್ತವೆ. ಹೀಗಾಗಿ ಚೆಟ್ಟಿಯವರ ಕುರಿತಾದ ಸಮಗ್ರ ಅಧ್ಯಯನದ ಕೊರತೆಯನ್ನು ಹೋಗಲಾಡಿಸುವ ದಿಸೆಯಲ್ಲಿ ಶ್ರೀ ಎಂ. ಎ. ಚೆಟ್ಟಿಯವರ ಜೀವನ ಹಾಗೂ ಕಲಾಕೃತಿಗಳ ವ್ಯಾಪಕವಾದ ಅಧ್ಯಯನವನ್ನು ಇಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ :

ಪ್ರಸ್ತುತ ಅಧ್ಯಯನವನ್ನು ಎಂಟು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡಿದ್ದು ಪ್ರತಿಯೊಂದು ಅಧ್ಯಾಯಗಳಲ್ಲಿ ಚರ್ಚಿಸುವ ವಿಷಯವನ್ನು ಕುರಿತಂತೆ ಅದರ ಸಂಕ್ಷಿಪ್ತ ಸ್ವರೂಪದ ವಿವರವನ್ನು ಇಲ್ಲಿ ಕೊಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ. ಸ್ವರೂಪ. ವಿಧಾನಗಳನ್ನು ಮತ್ತು ಆಕರ ಸಾಮಗ್ರಿಗಳನ್ನು ಕುರಿತಾದ ವಿವರಣೆ ಇರುವುದು

ಎರಡನೆಯ ಅಧ್ಯಾಯದಲ್ಲಿ ಚಿತ್ರಕಲಾ ಪ್ರಪಂಚಕ್ಕೆ ತಮ್ಮ ಜೀವನವನ್ನೇ ಧಾರೆಯೆರೆದ ಕಲಾವಿದ ಶ್ರೀ ಎಂ. ಎ. ಚೆಟ್ಟಿಯವರ ಬಾಲ್ಯ. ಪರಿಸರ. ಶೈಕ್ಷಣಿಕ ಹಾಗೂ ಕೌಟುಂಬಿಕ ಜೀವನದ ಅಧ್ಯಯನವಿದೆ.

ಮೂರನೆಯ ಅಧ್ಯಾಯದಲ್ಲಿ ಮುಂಬೈ ಜೆ. ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿಯ ಎಂ. ಎ. ಚೆಟ್ಟಿಯವರ ಕಲಾವ್ಯಾಸಂಗ. ಸಪ್ತವರ್ಣದ ಕನ್ನಡ ಕಲಾವಿದರು. ಪಠ್ಯಕ್ರಮ. ಅಧ್ಯಾಪಕವರ್ಗ. ಕಲಾ ವಾತಾವರಣ ಹಾಗೂ ಸಮಕಾಲೀನ ಕಲಾವಿದರ ಕುರಿತಾದ ವಿವರಗಳನ್ನು ಒಳಗೊಂಡಿರುತ್ತದೆ.

ನಾಲ್ಕನೆಯ ಅಧ್ಯಾಯದಲ್ಲಿ ಕಲಾವಿದ ಎಂ. ಎ. ಚೆಟ್ಟಿಯವರು ಚಿತ್ರಕಲಾ ಶಿಕ್ಷಣ ಮುಗಿಸಿದ ನಂತರದ ಅವರ ವೃತ್ತಿಜೀವನ ಕುರಿತು. ಅವರು ಟಿ. ಪಿ. ಅಕ್ಕಿಯವರು ಸ್ಥಾಪಿಸಿದ ವಿಜಯ ಕಲಾ ಮಂದಿರದಲ್ಲಿ ಶಿಕ್ಷಕರಾಗಿ. ಉಪಪ್ರಾಚಾರ್ಯರಾಗಿ ನೀಡಿದ ಕೊಡುಗೆ ಹಾಗೂ ರಚಿಸಿದ ಕಲಾಕೃತಿಗಳ ಕುರಿತಾದ ಚರ್ಚೆಯನ್ನು ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಎಂ. ಎ. ಚೆಟ್ಟಿಯವರ ರೇಖಾ ಚಿತ್ರಗಳ ಕುರಿತು ವಿಶೇಷವಾಗಿ ಅಧ್ಯಯನ ಮಾಡಲಾಗಿದೆ. ಇಲ್ಲಿ ಪೆನ್ಸಿಲ್. ಇಂಕ್ (ಮಸಿ). ಚಾರ್ಕೋಲ್ ಮಾಧ್ಯಮದ ರೇಖಾ ಚಿತ್ರಗಳ ಚರ್ಚೆ ಇರುತ್ತದೆ.

ಆರನೆಯ ಅಧ್ಯಾಯದಲ್ಲಿ ಎಂ. ಎ. ಚೆಟ್ಟಿಯವರ ವರ್ಣಚಿತ್ರಗಳ ಅಧ್ಯಯನಮಾಡಲಾಗಿದೆ. ಇಲ್ಲಿ ಜಲವರ್ಣ. ತೈಲವರ್ಣ ಹಾಗೂ ಪೆಸ್ಟಲ್ ಮಾಧ್ಯಮದ ವರ್ಣಚಿತ್ರಗಳ ವಿವರವಾದ ಚರ್ಚೆ ಇದೆ.

ಏಳನೆಯ ಅಧ್ಯಾಯದಲ್ಲಿ ಕಲಾವಿದ ಎಂ. ಎ. ಚೆಟ್ಟಿಯವರ ಚಿತ್ರಗಳಲ್ಲಿಯ ರೇಖಾವಿನ್ಯಾಸ. ಮೃದು ಬಣ್ಣಗಳ ಬಳಕೆಯ ಪ್ರಭಾವ. ಚಿತ್ರಗಳ ವಿಷಯವನ್ನು ಕಣ್ಣಿಗೆ ಕಟ್ಟಿ ನಿಲ್ಲಿಸುವ ಕಲಾತಂತ್ರ. ಶೈಲಿಯ ವಿಶಿಷ್ಟ ಕೊಡುಗೆಯ ವಿವರವನ್ನು ಗಮನಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಏಳೂ ಅಧ್ಯಾಯಗಳ ಸಂಕ್ಷಿಪ್ತ ಸಮಾಲೋಚನೆ ಹಾಗೂ ಪ್ರಸ್ತುತ ಅಧ್ಯಯನದಿಂದ ಹೊರಬಂದ ಪ್ರಮುಖ ವಿಷಯಗಳ ಸಮೀಕ್ಷೆ ಮಾಡಲಾಗಿದೆ.

ಅಧ್ಯಾಯನದ ವಿಧಾನ :

ಈ ಮಹಾಪ್ರಬಂಧದ ರಚನೆಗೆ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿ

೨. ಆನುಷಂಗಿಕ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿ :

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯ. ಇದರಲ್ಲಿ ಸಂದರ್ಶನ. ಧ್ವನಿಮುದ್ರಣ. ಛಾಯಾಚಿತ್ರಣ ಮಾಡುವುದು. ಅವರ ಬಗ್ಗೆ ಪ್ರಕಟವಾದ ಗ್ರಂಥ ಹಾಗೂ ಲೇಖನಗಳನ್ನು ಸಂಗ್ರಹಿಸಿ ವಿವರ ಪಡೆಯುವುದಾಗಿದೆ.

ಸಂದರ್ಶನ : ಕಲಾವಿದ ಚೆಟ್ಟಿಯವರನ್ನು ಸಂದರ್ಶಿಸಿ ಅವರ ಬಾಲ್ಯ. ಶಿಕ್ಷಣ. ಪ್ರಾಥಮಿಕ. ಮಾಧ್ಯಮಿಕ ಹಂತದಲ್ಲಿ ಕಲೆಯ ಕಡೆಗೆ ವಾಲಿದ ಅವರ ಮನಸ್ಸು. ಪ್ರೇರಣೆ ನೀಡಿದ ಕಲಾವಿದರು. ಗುರುಗಳು. ಕೌಟುಂಬಿಕ ಹಿನ್ನಲೆ. ಮುಂಬೈಯಲ್ಲಿಯ ಅವರ ಚಿತ್ರಕಲಾಭ್ಯಾಸ. ಕಲಾವಾತಾವರಣ. ಶಿಕ್ಷಕವೃಂದ. ವಿದ್ಯಾರ್ಥಿ ಜೀವನ ಗೆಳೆಯರ ಬಳಗ. ಚಿತ್ರಕಲಾ ಪ್ರದರ್ಶನ. ಕಲಾವೃತ್ತಿ. ಕಲಾಶಿಕ್ಷಕರಾದ ನಂತರ ಅವರ ಅನುಭವಗಳು. ಅವರ ಚಿತ್ರಶೈಲಿ. ತಂತ್ರ. ರೇಖಾವಿನ್ಯಾಸ ಹಾಗೂ ವರ್ಣಗಳ ಬಳಕೆ ಅಲ್ಲದೆ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಅನೇಕ ವಿಷಯಗಳನ್ನು ಅವರ ಸಂದರ್ಶನದ ಮುಖಾಂತರ ಸಂಗ್ರಹಿಸಲಾಯಿತು. ಅಲ್ಲದೆ ಅವರ ಕುಟುಂಬದವರ. ಸ್ನೇಹಿತರ. ನಿಕಟವರ್ತಿಗಳ ಸಂದರ್ಶನದ ವಿವರಗಳನ್ನು. ಸಂಗ್ರಹಿಸಲಾಗಿದೆ. ಅವರ ವ್ಯಕ್ತಿತ್ವದ ವಿವಿಧ ಮುಖಗಳನ್ನು ತಿಳಿದುಕೊಳ್ಳುವ ಉದ್ದೇಶದಿಂದ ಪ್ರಶ್ನಾವಳಿಯನ್ನು ಸಿದ್ಧಪಡಿಸಿ ಅದನ್ನು ಚೆಟ್ಟಿಯವರ ಪರಿಚಯವುಳ್ಳವರಿಗೆ. ಸ್ನೇಹಿತರಿಗೆ. ವಿದ್ಯಾರ್ಥಿಗಳಿಗೆ ಕಳಿಸಿ ಅವರಿಂದ ಬಂದ ಉತ್ತರ. ಅಭಿಪ್ರಾಯಗಳನ್ನು ಬಳಿಸಿಕೊಳ್ಳಲಾಗಿದೆ.

ಛಾಯಾಚಿತ್ರಣ : ಅವರ ಅಮೂಲ್ಯ ಚಿತ್ರಗಳ ಛಾಯಾಗ್ರಹಣಕ್ಕಾಗಿ ಕಲಾವಿದರ ಸ್ವಗೃಹಕ್ಕೆ ಭೆಟ್ಟಿಕೊಟ್ಟು ಅಲ್ಲಿರುವ ಅನೇಕ ಹಳೆಯ ಚಿತ್ರಗಳನ್ನು ವಿದ್ಯಾರ್ಥಿ ದೆಸೆಯಲ್ಲಿ ರಚಿಸಿದ. ತದನಂತರದಲ್ಲಿ ರಚಿಸಿದ ಚಿತ್ರಗಳ ಛಾಯಾಚಿತ್ರ ಮಾಡಲಾಯಿತು. ಅಲ್ಲದೇ ಅವರು ವಿದ್ಯಾರ್ಥಿ ಇರುವಾಗಿನಿಂದ ಕಲಾವೃತ್ತಿಯನ್ನು ಪ್ರಾರಂಭಿಸಿ ಮುಂದುವರಿಸಿದ ದಿನಗಳವರೆಗಿನ ಹಂತ ಹಂತವಾದ ರೇಖಾ ಚಿತ್ರಗಳನ್ನು ಕಂಪ್ಯೂಟರ್ ಮುಖಾಂತರ ಮುದ್ರಿಸಿಕೊಳ್ಳಲಾಗಿದೆ. ಅಲ್ಲದೆ ಅವರ ಚಿತ್ರಗಳಿರುವಂಥ ಸ್ಥಳಗಳಿಗೆ ಹೋಗಿ ಅಥಣಿ. ವಿಜಾಪುರ. ನಿಡಸೋಸಿ. ಧಾರವಾಡ. ಶ್ರವಣಬೆಳಗೊಳ: ಯಡೆಯೂರು. ಬೆಂಗಳೂರು. ಚಿಕ್ಕಗುರ್ಕಿ. ಅವರಾದಿ. ನರಗುಂದ. ಅಣ್ಣಿಗೇರಿ. ಮುಳಗುಂದ ಹೀಗೆ ಮುಂತಾದ ಮನೆ ಮಠಗಳನ್ನು ಸಂದರ್ಶಿಸಿ ಅವರ ಕಲಾಕೃತಿಗಳ ಛಾಯಾಚಿತ್ರಣ ಮಾಡಲಾಯಿತು. ಅಲ್ಲದೆ ಅವರು ಪುರಾಣ ಗ್ರಂಥಗಳಿಗಾಗಿ ರಚಿಸಿದ ಚಿತ್ರಗಳನ್ನು. ಅಂತಹ ಪುರಾಣ ಗ್ರಂಥಗಳ

ಸಂಗ್ರಹದ ಜೊತೆಗೆ ಛಾಯಾ ಚಿತ್ರಣ ಮಾಡಲಾಗಿದೆ. ಹೀಗೆ ಕ್ಷೇತ್ರಕಾರ್ಯದ ಅನುಭವವೇದ್ಯ ವಿವರಗಳನ್ನು ಅಭ್ಯಾಸಕ್ಕೆ. ಬರವಣಿಗೆಗೆ ಅನುಕೂಲವಾಗುವಂತೆ ಟಿಪ್ಪಣಿ. ಪಟ್ಟಿಕೆಗಳನ್ನು ಮಾಡಿಕೊಂಡು ಪ್ರಬಂಧಕ್ಕೆ ಅವಶ್ಯವಾದ ವಿಷಯವನ್ನು ಸಂಗ್ರಹಿಸಿಕೊಳ್ಳಲಾಗಿದೆ.

ಆನುಷಂಗಿಕ ಆಕರ ಸಾಮಗ್ರಿ :

ಸಂಶೋಧನ ಮಹಾಪ್ರಬಂಧಗಳು. ಪ್ರಕಟಿತ. ಅಪ್ರಕಟಿತ ಸಾಹಿತ್ಯ ಕೃತಿಗಳು. ನಿಘಂಟು, ವಿಶ್ವಕೋಶ. ಗೆಝೆಟೀಯರ್‌ಗಳು. ಅನುವಾದ ಗ್ರಂಥಗಳು. ಸಂಪಾದನ ಗ್ರಂಥಗಳು. ಬೇರೆ ಬೇರೆ ಸ್ಥಳಗಳಲ್ಲಿನ ಗ್ರಂಥಾಲಯಗಳು. ಕಲಾ ಶಾಲೆಗಳು ಮತ್ತು ಕಲಾಪ್ರದರ್ಶನಗಳಿಗೆ ಭೇಟಿ ನೀಡಿ ವಿಷಯ ಸಂಗ್ರಹಿಸಿಕೊಂಡು ಈ ಮಹಾಪ್ರಬಂಧ ಸಿದ್ಧಪಡಿಸಲಾಗಿದೆ.

ಅಧ್ಯಾಯ ಎರಡು :

ಎರಡನೆಯ ಅಧ್ಯಾಯದಲ್ಲಿ ಚಿತ್ರಕಲಾ ಪ್ರಪಂಚಕ್ಕೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಎಂ. ವಿ. ಚೆಟ್ಟಿಯವರ ವಂಶಾವಳಿ - ಜನನ ಬಾಲ್ಯ. ಪ್ರಾಥಮಿಕ ಶಿಕ್ಷಣದಲ್ಲಿ ಅವರೊಂದಿಗಿದ್ದ ಗೆಳೆಯರು. ಗುರುವೃಂದ. ಅವರು ಕಲಾವಿದರಾಗಿ ರೂಪುಗೊಳ್ಳುವಲ್ಲಿ ಪ್ರಭಾವ ಬೀರಿದ ಸಾಂಸ್ಕೃತಿಕ ಅಂಶಗಳು. ಚಿಕ್ಕಪ್ಪನವರ ಆಶ್ರಯ. ಪರಿಶುದ್ಧ ಕಾಯಕದ ಬದುಕು. ಕೌಟುಂಬಿಕ ಜೀವನದ ವಿವರಗಳನ್ನು ವಿವರಿಸಲಾಗುವುದು.

ಅಧ್ಯಾಯ ಮೂರು :

ಕಲಾವಿದ ಎಂ. ವಿ. ಚೆಟ್ಟಿಯವರು ಕಲಾಭ್ಯಾಸಂಗಕ್ಕಾಗಿ ಮುಂಬೈನ ಸರ್ ಜೆ. ಜೆ. ಕಲಾಶಾಲೆಯನ್ನು ಸೇರಿ. ಡ್ರಾಯಿಂಗ್ ಮತ್ತು ಪೇಂಟಿಂಗ್ ವಿಷಯ ಆರಿಸಿಕೊಂಡು ಅಧ್ಯಯನ ಮಾಡಿದ್ದಾರೆ. ಅಲ್ಲಿ ಖ್ಯಾತ ಕಲಾವಿದರಾದ ಶ್ರೀ ಕೆ. ಬಿ. ತಾಸ್ಕರ್. ಶ್ರೀ ಎಂ. ವಿ. ಧುರಂಧರ ಅವರು ಇವರಿಗೆ ಗುರುಗಳಾಗಿದ್ದರು. ಯುರೋಪಿಯನ್ ಡೈರೆಕ್ಟರ್‌ರಾದ ಕ್ಯಾಪ್ಟನ್ ಗ್ಲಾಡಸನ್ ಸಾಲೋಮನ್ನರವರು ಪ್ರಾಚಾರ್ಯರಾಗಿದ್ದು ಅವರ ಮಾರ್ಗದರ್ಶನದಲ್ಲಿ ಯಾವ ರೀತಿ ಕಲಾಭ್ಯಾಸವನ್ನು ಕಟ್ಟುನಿಟ್ಟಾಗಿ ಮಾಡಿದರು ಎಂಬುದರ ಬಗ್ಗೆ ಹೇಳುವುದರ ಜೊತೆಗೆ ಆಗಿನ ಕಾಲದ ಪಠ್ಯಕ್ರಮ. ಅಧ್ಯಾಪಕ ವರ್ಗ. ಅವರು ವರ್ಗದಲ್ಲಿ ತಿಳಿಸಿಕೊಡುವ ರೀತಿ. ವಿದ್ಯಾರ್ಥಿಗಳ ಮೇಲೆ ಅವರು ಬೀರಿದ ಪ್ರಭಾವ. ಅವರು ಚಿತ್ರಗಳನ್ನು ರಚಿಸುವ ಶೈಲಿ. ತಂತ್ರ. ಅಲ್ಲಿಯ ಕಲಾವಾತಾವರಣ. ಚಿತ್ರಪ್ರದರ್ಶನಗಳ ರೀತಿ. ಮತ್ತು ಚಿತ್ರ ರಚನೆಯ ಬಗ್ಗೆ ಆ ಕಾಲದ ಜನರ ಮನಸ್ಥಿತಿ ಮುಂತಾದ ವಿವರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಚೆಟ್ಟಿಯವರ ಅಧ್ಯಯನ ಕಾಲದಲ್ಲಿ ನಡೆದ ಅನೇಕ ಮಹತ್ವದ ಘಟನೆಗಳು. ಅಲ್ಲದೆ ಆಗ ಅಲ್ಲಿ ಕರ್ನಾಟಕದ ಏಳು ಜನ ಕಲಾವಿದರು ಶ್ರೇಷ್ಠ ದರ್ಜೆಯ ಕಲಾವಿದರೆಂದು ಹೆಸರಾಗಿದ್ದರು. ಇವರಿಗೆ ಸಪ್ತವರ್ಣದ ಕನ್ನಡ ಗುಂಪು ಎಂದು ಕರೆಯಲಾಗುತ್ತಿತ್ತು. ಅವರಲ್ಲಿ ೧) ಶ್ರೀ ಎಂ. ವ್ಹಿ. ಮಿಣಜಗಿ. ೨) ಶ್ರೀ ಡಿ. ಜಿ. ಬಡಿಗೇರ. ೩) ಶ್ರೀ ಅಮಿನ ಸಾಹೇಬ ಕಮಡೊಳ್ಳಿ. ೪) ಶ್ರೀ

ಡಿ. ವ್ಹಿ. ಹಾಲಭಾವಿ, ೫) ಶ್ರೀ ಜಿ. ಎಸ್. ದಂಡಾವತಿಮಠ. ೬) ಶ್ರೀ ಸಿ. ವ್ಹಿ. ಕಾರಡಗಿ. ೭) ಶ್ರೀ ಎಂ. ವಿ. ಚೆಟ್ಟಿಯವರು ಇವರೇ ಆ ಏಳು ಜನ ಕಲಾವಿದರು.

ಈ ಗುಂಪಿನ ಮಹತ್ವದ ವಿವರಗಳನ್ನು ಸ್ನೇಹಿತ ಬಳಗದ ಕಲಾಸಾಧನೆಯನ್ನು ಕುರಿತು ಇಲ್ಲಿ ಸ್ಥೂಲವಾಗಿ ಅಧ್ಯಯನ ಮಾಡುವವರೊಂದಿಗೆ ಚೆಟ್ಟಿಯವರ ಕಲಾಬದುಕು ಅರಳಿದ ಕುರಿತು ಗಮನಹರಿಸಲಾಗಿದೆ.

ಅಧ್ಯಾಯ ನಾಲ್ಕು :

ಇಲ್ಲಿ ಕಲಾವಿದ ಚೆಟ್ಟಿಯವರ ವೃತ್ತಿ ಜೀವನ ಹಾಗೂ ಕಲಾಕೃತಿಗಳ ರಚನೆಯ ಹಂತವನ್ನು ಕುರಿತು ವಿವರಣೆಯಿದೆ. ಶ್ರೀ ಚೆಟ್ಟಿಯವರು ಮುಂಬೈ ಸರ್ ಜೆ. ಜೆ. ಕಲಾ ಶಾಲೆಯಿಂದ ಡಿಪ್ಲೋಮಾ ಮುಗಿಸಿಕೊಂಡು ಸೊಲ್ಲಾಪುರಕ್ಕೆ ಬಂದು ನೆಲೆಸಿದರು. ಮೊಟ್ಟಮೊದಲು ಪುರಾಣಕ್ಕೆ ಚಿತ್ರ ರಚಿಸಿದ್ದು ಇಲ್ಲಿಯೇ. ಅಲ್ಲದೆ ಮೊದಲ ತೈಲವರ್ಣ ಚಿತ್ರವನ್ನು ರಚಿಸಿ. ಅಖಿಲ ಭಾರತ ಸ್ಪರ್ಧೆಯಲ್ಲಿ ಮೊದಲ ಸ್ಥಾನಗಳಿಸಿದ್ದು ಇಲ್ಲಿಯೇ. ಹೀಗಾಗಿ ಅವರ ಚಿತ್ರಕಲಾ ವೃತ್ತಿ ಇಲ್ಲಿಂದಲೇ ಪ್ರಾರಂಭವಾಗಿದ್ದು. ಅದಕ್ಕೆ ದೊರೆತ ಮನ್ನಣೆ. ಆಗಿನ ಅವರ ಅನುಭವಗಳ ಕುರಿತಾದ ವಿವರಗಳಿವೆ. ಮುಂದೆ ಗದುಗಿಗೆ ಬಂದು ನೆಲೆಸಿದರು. ಶ್ರೀ ಟಿ. ಪಿ. ಅಕ್ಕಿಯವರ ಜೊತೆಗೂಡಿ ವಿಜಯಕಲಾಮಂದಿರದಲ್ಲಿ ಶಿಕ್ಷಕರಾಗಿ. ಉಪಪ್ರಾಚಾರ್ಯರಾಗಿ ೨೫ ವರ್ಷ ಅಮೋಘವಾದ ಸೇವೆ ಸಲ್ಲಿಸಿದ್ದಾರೆ. ಚೆಟ್ಟಿಯವರು ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ ನೀಡಿದ್ದುದರ ಬಗ್ಗೆ. ಅವರ ಕಲಾಚಟುವಟಿಕೆಗಳ ಕುರಿತಾದ ಚರ್ಚೆಯಿದೆ. ಈ ಸಂದರ್ಭದಲ್ಲಿ ಇವರಿಗೆ ಭಾವಚಿತ್ರಗಳನ್ನು ರಚಿಸಲು ಮನೆ-ಮಠಗಳಿಂದ ಕರೆ ಬಂದುದರ ಬಗ್ಗೆ. ಚಿತ್ರಗಳ ನಿರ್ವಹಣೆಯ ಜೊತೆಗೆ ಕಲಾವಿದ ಚೆಟ್ಟಿಯವರ ವೃತ್ತಿ ಹಾಗೂ ಕಲಾ ಬದುಕಿನ ಮಹತ್ವದ ವಿವರಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ ಐದು :

ಐದನೆಯ ಅಧ್ಯಾಯದಲ್ಲಿ ಕಲಾವಿದ ಚೆಟ್ಟಿಯವರ ಪೆನ್ಸಿಲ್. ಇಂಕ್. ಚಾರ್ಕೋಲ್ ಮಾಧ್ಯಮದ ರೇಖಾ ಚಿತ್ರಗಳ ಕುರಿತು ಚರ್ಚೆಯಿದೆ.ಇದರಲ್ಲಿ ಶಿರಭಾವಚಿತ್ರ. ಜೀವಮಾದರಿಚಿತ್ರ. ಸ್ಥಿರವಸ್ತುಚಿತ್ರಣ. ನಿಸರ್ಗ ಚಿತ್ರಗಳು. ಸಂಯೋಜನಾ ಚಿತ್ರಗಳು ಎಂದು ಉಪಭಾಗಗಳಾಗಿ ವಿಂಗಡಿಸಿ ಅದರಲ್ಲಿ ಪುರಾಣಗ್ರಂಥ ಚಿತ್ರಗಳು. ಧಾರ್ಮಿಕ. ಐತಿಹಾಸಿಕ. ಸಾಮಾಜಿಕ ಮತ್ತು ದೈನಂದಿನ ಅಂಕನೆಗಳು (sketches) ಹಾಗೂ ಶಿಲ್ಪಗಳ ರೇಖಾಚಿತ್ರಗಳನ್ನು ಚರ್ಚಿಸಲಾಗಿದೆ. ರೇಖೆಗಳಲ್ಲಿಯ ಅವರ ಭಾವಾಭಿವ್ಯಕ್ತತೆ. ಸನ್ನಿವೇಶದ ಪರಿಣಾಮ. ಲಯ. ಆನಂದ. ಅನುಕಂಪ. ವಿಸ್ಮಯ ಮೊದಲಾದ ಭಾವಸಂಚಾರ. ಜೀವನೋಲ್ಲಾಸದ ಭಯ. ಕಾತರ. ನೋವು. ಮುಗ್ಧತೆ ಇಂಥವೆಲ್ಲ ಭಾವಗಳನ್ನು ಸಹಜವೆನಿಸುವ ರೀತಿಯಲ್ಲಿ ಅಭಿವ್ಯಕ್ತಿಸಿರುವುದರ ಬಗ್ಗೆ ವಿಶೇಷವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಆರು :

ಈ ಅಧ್ಯಾಯದಲ್ಲಿ ಕಲಾವಿದ ಚೆಟ್ಟಿಯವರ ವರ್ಣಚಿತ್ರಗಳ ಕುರಿತಾದ ಅಧ್ಯಯನವಿದೆ. ಇಲ್ಲಿ ಜಲವರ್ಣ. ತೈಲವರ್ಣ ಹಾಗೂ ಪೆಸ್ಟಲ್ ಮಾಧ್ಯಮದ ವರ್ಣಚಿತ್ರಗಳ ಬಗ್ಗೆ ಚರ್ಚಿಸಲಾಗಿದೆ. ಚೆಟ್ಟಿಯವರು ಸಂಪ್ರದಾಯ (ಪಾರಂಪರಿಕ) ಕಲಾವಿದರಾಗಿದ್ದು ನಮ್ಮ ನಾಡಿನ ಸಂಸ್ಕೃತಿ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದವರು. ವಿದೇಶಿ ಪದ್ಧತಿಯಲ್ಲಿ ಕಲಾ ಶಿಕ್ಷಣವನ್ನು ಪಡೆದರೂ ದೇಶೀಯತೆಯನ್ನು ತಮ್ಮ ಚಿತ್ರಗಳಲ್ಲಿ ಉಳಿಸಿಕೊಂಡು ಬಂದಿದ್ದಾರೆ. ಇಲ್ಲಿಯೂ ಸಹಿತ ಅಧ್ಯಯನಕ್ಕಾಗಿ ಉಪವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಅವು ಶಿರಭಾವಚಿತ್ರ. ಜೀವಮಾದರಿಚಿತ್ರ. ಸ್ಥಿರವಸ್ತು ಚಿತ್ರಣ. ನಿಸರ್ಗ ಚಿತ್ರಗಳು. ಸಂಯೋಜನಾ ಚಿತ್ರಗಳು. ಅದರಲ್ಲಿ ಪುರಾಣಗ್ರಂಥ ಚಿತ್ರಗಳು. ಧಾರ್ಮಿಕ. ಐತಿಹಾಸಿಕ. ಸಾಮಾಜಿಕ ಚಿತ್ರಗಳು. ಪುಸ್ತಕದ ಮುಖಪುಟ ಚಿತ್ರಗಳ ಬಗ್ಗೆ ವಿವರಣೆ ಇದೆ. ಚೆಟ್ಟಿಯವರ ಕಲಾರಚನೆಯ ಹಿಂದಿರುವ ಅಸಾಧಾರಣ ಪ್ರತಿಭಾ ಶಕ್ತಿಯ ಬಗ್ಗೆ. ಮತ್ತು ಅವರ ಕಲಾಕೃತಿಗಳ ಸಂಯೋಜನಾ ರೀತಿ. ಬಣ್ಣ. ರೇಖೆಗಳ ಬಗ್ಗೆಯೂ ವಿವರವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಏಳು :

ಈ ಅಧ್ಯಾಯದಲ್ಲಿ ಕಲಾವಿದ ಚೆಟ್ಟಿಯವರ ರೇಖಾ ವಿನ್ಯಾಸ. ವರ್ಣಗಾರಿಕೆ. ಕಲಾತಂತ್ರ. ಪ್ರಭಾವ. ಶೈಲಿ. ವಿಶಿಷ್ಟ ಕೊಡುಗೆಯ ಬಗ್ಗೆ ಚರ್ಚಿಸಲಾಗುವುದು. ಶ್ರೀ ಚೆಟ್ಟಿಯವರ ಕಾಲದಲ್ಲಿ ಆಗಿನ ಪರಿಸರ ನೈಜ ಚಿತ್ರಗಳನ್ನು ಹೆಚ್ಚು ಪ್ರೀತಿಸುತ್ತಿದ್ದುದರ ವಿವರಣೆಯನ್ನು ಮಾಡಲಾಗಿದೆ. ಮತ್ತು ಸಮಕಾಲೀನ ಕಲಾವಿದರ. ಕಲಾಗುರುಗಳ ಕೆಲಮಟ್ಟಿನ ಪ್ರಭಾವವು ಇವರ ಮೇಲೆ ಆಗಿರುವುದನ್ನು ಗಮನಿಸಲಾಗಿದೆ. ಚೆಟ್ಟಿಯವರು ವಿಶೇಷವಾಗಿ ಪಾರಂಪರಿಕ ಹಿನ್ನೆಲೆಯ ನೈಜವಾದ ಚಿತ್ರಗಳನ್ನು ಚಿತ್ರಿಸುವುದರಲ್ಲಿ ಸಿದ್ಧಹಸ್ತರಾಗಿದ್ದರು. ಇವರ ರೇಖಾ ವಿನ್ಯಾಸದಲ್ಲಿಯ ಭಾವಗಳು. ವಿಶೇಷವಾದ ವಿನ್ಯಾಸಗಳ ಸಮತೋಲನೆಯ ಬಗ್ಗೆ ಗಮನಹರಿಸಲಾಗಿದೆ. ಅತ್ಯಂತ ವಿರಳ ಬಣ್ಣಗಳ ಬಳಕೆ ಮಾಡಿದ ಕುರಿತು. ಸೌಮ್ಯ ವರ್ಣಗಳ ಜೊತೆಗೆ ಪ್ರಖರ ವರ್ಣಗಳ ಮೇಳಾಪದಿಂದ ಸೌಮ್ಯ ವಾತಾವರಣದ ಪರಿಣಾಮವನ್ನು ನೀಡುವ ರೀತಿ ಅವರದೇ ಆದ ವಿಶೇಷ ಕೊಡುಗೆಯಾಗಿದೆ. ಜಲವರ್ಣ. ತೈಲವರ್ಣಗಳ ಮೇಲಿನ ಅವರ ಪ್ರಭುತ್ವದ ಬಗ್ಗೆ ಹಾಗೂ ವರ್ಣಗಳನ್ನು ಬಳಸುವ ರೀತಿಯ ಕುರಿತು ಚರ್ಚಿಸಲಾಗಿದೆ. ಈ ಹಂತದಲ್ಲಿ ಚೆಟ್ಟಿಯವರ ಮೇಲಾದ ವಿವಿಧ ರೀತಿಯ ಕಲಾವಿದರ ಪ್ರಭಾವ ಮತ್ತು ಪ್ರೇರಣೆಯ ಬಗೆಗೆ ಸ್ಥೂಲವಾಗಿ ವಿವರಿಸಲಾಗಿದೆ. ಅವರು ಕಲಾಕೃತಿಯಲ್ಲಿ ಹಿನ್ನೆಲೆಯನ್ನು ಬಳಸಿಕೊಂಡ ಕಲಾತಂತ್ರ. ಅಲ್ಲದೇ ಇವರ ಕಲಾ ಶೈಲಿಯ ವಿಶಿಷ್ಟ ಕೊಡುಗೆಯನ್ನು ಕುರಿತಾದ ವಿವರಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ ಎಂಟು :

ಸಮಾರೋಪ ಎಂಟನೆಯ ಅಧ್ಯಾಯದಲ್ಲಿ ಎಲ್ಲಾ ಅಧ್ಯಾಯಗಳ ಒಟ್ಟು ಫಲಿತಗಳನ್ನು ಸಮೀಕ್ಷಿಸಲಾಗಿದೆ.

ಅಧ್ಯಾಯ ಎರಡು

ಕಲಾವಿದ ಚೆಟ್ಟಿಯವರ ಬಾಲ್ಯ, ಪರಿಸರ, ಶೈಕ್ಷಣಿಕ ಹಾಗೂ ಕೌಟುಂಬಿಕ ಜೀವನ



"ಭಾರತೀಯರು ನಿಸರ್ಗದ ನಿಗೂಢತೆಯಲ್ಲೂ ಅದರ ಅದ್ಭುತ ಸೌಂದರ್ಯದಲ್ಲೂ ಬದುಕಿನ ಗಾಢತೆಯನ್ನು ಹಾಗೂ ಶಿವಚೈತನ್ಯವನ್ನು ಕಂಡವರು. ಆ ಶಕ್ತಿಯನ್ನೇ ಕುರಿತು ಚಿಂತಿಸಿ ಪ್ರೀತಿಸಿದರು. ಆರಾಧಿಸಿದರು. ಅದರಲ್ಲೇ ಪರಮಶಾಂತಿಯನ್ನು ಕಂಡುಕೊಂಡರು. ಕೊನೆಗೆ ಅದನ್ನೇ ಜೀವನ ಮುಕ್ತಿಯ ಸಾಧನವನ್ನಾಗಿಸಿಕೊಂಡರು".[೧] ಈ ಹಿನ್ನೆಲೆಯಲ್ಲಿ ಮೈತಾಳಿದ ಕಲಾಪ್ರಕಾರಗಳೇ ವ್ಯಕ್ತಿ ಮತ್ತು ಸಮಷ್ಟಿಹಿತಕ್ಕೆ ಆನಂದವನ್ನು ನೀಡುವಂತಹವುಗಳಾಗಿವೆ. ಲಲಿತ ಕಲೆಗಳಲ್ಲಿ ಒಂದಾದ ಚಿತ್ರಕಲೆ ಗಮನಾರ್ಹವಾದ ಕಲೆಯಾಗಿದ್ದು ಈ ಕ್ಷೇತ್ರಕ್ಕಾಗಿ ಅರ್ಪಿಸಿಕೊಂಡ ಚಿತ್ರಕಾರ ಚೆಟ್ಟಿಯವರು ಶರಣತ್ವದಲ್ಲಿ ನಿಷ್ಠೆಹೊಂದಿದ ಆಧ್ಯಾತ್ಮದ ಬದುಕನ್ನು ಸವೆಸಿದವರು. ಚಿತ್ರಕಲೆಯೇ ಅವರ ಬದುಕಿನ ದೈವ. ದೇವರು - ಅದರಲ್ಲಿಯೇ ಜೀವನದ ಸಾರ್ಥಕ್ಯವನ್ನು ಕೂಡ ಕಂಡುಕೊಂಡವರು. ಹೀಗಾಗಿ ಕಲಾಕ್ಷೇತ್ರದಲ್ಲಿ ಶ್ರೀ ಚಟ್ಟಿಯವರದೇ ಒಂದು ವಿನೂತನ ಮಾರ್ಗ ನಿರ್ಮಾಣವಾಗಿದೆ.

ಬೆಳಗಾವಿ ಜಿಲ್ಲೆಯ ಅಥಣಿ ಒಂದು ತಾಲೂಕಾ ಪಟ್ಟಣ. ತಾಲೂಕಿನ ಉತ್ತರ ಮತ್ತು ಪಶ್ಚಿಮಕ್ಕೆ ಮಹಾರಾಷ್ಟ್ರ ರಾಜ್ಯವೂ ನೈಋತ್ಯಕ್ಕೆ ಚಿಕ್ಕೋಡಿ ತಾಲೂಕು. ದಕ್ಷಿಣದಲ್ಲಿ ರಾಯಬಾಗ ತಾಲೂಕು ಪೂರ್ವ ಮತ್ತು ಆಗ್ನೇಯಕ್ಕೆ ವಿಜಾಪುರ ಮತ್ತು ಜಮಖಂಡಿ ತಾಲೂಕುಗಳಿವೆ. ಕರ್ನಾಟಕ ಹಾಗೂ ಮಹಾರಾಷ್ಟ್ರದ ಗಡಿಪ್ರದೇಶ ಇದಾದ್ದರಿಂದ ಆ ಭಾಗದ ಜನರ ಭಾಷೆಯ ಮೇಲೆ ಮರಾಠಿ ಭಾಷೆಯ ಪ್ರಭಾವವನ್ನು ಇಲ್ಲಿ ಕಾಣಬಹುದು.

ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಅಥಣಿಯಿಂದ ಸುಮಾರು ೧೦ ಕಿ. ಮಿ. ವಾಯವ್ಯಕ್ಕಿರುವ ಬೆಳವಂಕಿ ಬೆಟ್ಟದ ಮೇಲೆ ಸಿದ್ದೇಶ್ವರ ಗುಹೆ ಇದೆ. ಮಿರಜ - ಚಿಕ್ಕೋಡಿ ಹಾದಿಯಲ್ಲಿರುವ ಕಾಗವಾಡ

---

೧. ಡಿ. ಎಸ್. ಅಕ್ಕಿ : ಎಂ. ಟಿ. ಭೋಪಲೆ. ಪುಟ ೧

ಆಧ್ಯಾತ್ಮಿಕ ವ್ಯಕ್ತಿಗಳು. ಶರಣರ. ಪೌರಾಣಿಕ. ದೇವಾನುದೇವತೆಗಳ ಚಿತ್ರಣದಲ್ಲಿ ಸಿದ್ಧಹಸ್ತರಾಗಿ. ಶರಣಮಾರ್ಗದ ವರ್ಣಚಿತ್ರಕಾರನೆಂದೇ ಗುರುತಿಸಿಕೊಂಡಿದ್ದಾರೆ. ಅವರು ಬೆಳೆದುಬಂದ ಸಾಂಸ್ಕೃತಿಕ ಪರಿಸರ ಅವರ ಕಲಾ ಕೃತಿಗಳ ಮೇಲೆ ಪ್ರಭಾವ ಬೀರಿರುವುದನ್ನು ಇಲ್ಲಿ ಕಾಣಬಹುದು.

ಗ್ರಾಮದಲ್ಲಿ ಬ್ರಹ್ಮನಾಥ (ಕಗ್ಗದರಾಯ) ಮತ್ತು ಸತವಾಯಿ ದೇವಾಲಯಗಳಿವೆ. ಇಲ್ಲಿಂದ ೧೪ ಕಿ. ಮಿ. ಪೂರ್ವಕ್ಕೆ ಇರುವ ಮಂಗಸೂಳಿ ಗ್ರಾಮದಲ್ಲಿ ಪ್ರತಿ ಮೇ ತಿಂಗಳಲ್ಲಿ ಮಲ್ಲೇಶ್ವರನ ಜಾತ್ರೆನಡೆಯುತ್ತದೆ. ಅಥಣಿಯಿಂದ ೧೬ ಕಿ. ಮಿ. ಆಗ್ನೇಯಕ್ಕಿರುವ ಕೊಕಟನೂರು ಐತಿಹಾಸಿಕ ಸ್ಥಳ. ಕೃಷ್ಣಾನದಿಯ ಬಲದಂಡೆಯಲ್ಲಿರುವ ಸಪ್ತಸಾಗರ ತೀರ್ಥಕ್ಷೇತ್ರ. ಸಪ್ತ ಋಷಿಗಳು ಏಳು ಸಮುದ್ರಗಳ ನೀರನ್ನು ಇಲ್ಲಿಗೆ ತಂದು ಬೆರಸಿದ್ದಾರೆ ಎಂದು ಐತಿಹ್ಯವಿದೆ. ಅಥಣಿಯಿಂದ ಸುಮಾರು ೨೪ ಕಿ.ಮಿ. ಈಶಾನ್ಯಕ್ಕಿರುವ ರಾಮತೀರ್ಥದಲ್ಲಿ ಆನಂದ ಪರ್ವತವೆಂಬ ಬೆಟ್ಟವಿದ್ದು, ಅದರಲ್ಲಿ ಆನಂದ ನಾಯಕಿ ದೇವಾಲಯ ಗುಹಾದೇವಾಲಯವೂ ಸಮೀಪದಲ್ಲಿ ಒಂದು ಸುಂದರ ರಾಮೇಶ್ವರ ದೇವಾಲಯವೂ ಇದೆ. ಕೃಷ್ಣಾನದಿಯ ಎಡದಂಡೆಯ ಮೇಲಿರುವ ಜುಗಲ ಗ್ರಾಮದಲ್ಲಿ ಮಸಬತಿ ಎಂಬ ಮುಸ್ಲಿಂ ಸಂತರ ಸಮಾಧಿ ಇದೆ.

೧೯ನೆಯ ಶತಮಾನದ ಅಥಣಿ ಶಿವಯೋಗಿಗಳ ಕಾಯಕ ಕ್ಷೇತ್ರ ಅಥಣಿ. ಇಲ್ಲಿಯ ಗಚ್ಚಿನಮಠದಲ್ಲಿ ತಮ್ಮ ಭಕ್ತಿ ಜ್ಞಾನ ವೈರಾಗ್ಯಗಳಿಂದ ಲೋಕದ ಗೌರವಕ್ಕೆ ಪಾತ್ರರಾದರು. ಇಂತಹ ಶರಣ ಸಂಸ್ಕೃತಿಯ ಮಠಕ್ಕೆ ಭಕ್ತರಾಗಿ ನಿಷ್ಠೆಯಿಂದ ಬದುಕಿದ ಮನೆತನ ಚಿಟ್ಟಿಯವರದು. ಇಂತಹ ಪರಿಸರದಲ್ಲಿ ಹುಟ್ಟಿ ಬೆಳೆದವರು ಎಂ. ಎ. ಚಿಟ್ಟಿಯವರು.

ಚಿಟ್ಟಿಯವರ ಮನೆತನ :

ಇವರ ಮನೆತನದ ಮೂಲ ವಂಶದವರ ಬಗೆಗೆ ನಮಗೆ ಹೆಳವರ ದಾಖಲೆ ಮಾಹಿತಿ ಕೊಡುತ್ತದೆ. ಮೂಲತಃ ಚಿಟ್ಟಿಯವರ ಮನೆತನದವರು ಯಳಮಲ್ಲಿ (ಆಲಮೇಲ) ಶೆಟ್ಟರು. ಇವರ ಮನೆತನದ ಗುರು ಆಲಮೇಲ ಪಟ್ಟದದೇವರು. ಇವರ ಮನೆತನದ ದೇವರು ಶ್ರೀಶೈಲ ಮಲ್ಲಿಕಾರ್ಜುನ. ಇವರು ಮುಂದೆ ಮಹಾಲಿಂಗಪೂರಕ್ಕೆ ನಂತರ ರಬಕವಿಗೆ ಬಂದರು. ರಬಕವಿಯಲ್ಲಿ ಒಂದುದಿನ ಬಾವಿಗೆ ಜಿಗಿದು ಸಾಯುವ ವ್ಯಕ್ತಿಯ ಪ್ರಾಣ ಉಳಿಸಿದ ಕೀರ್ತಿಗೆ ಭಾಜನರಾದರು. ಮುಂದೆ ಟೊಣಗೋಳ ಅಂತ ಅಡ್ಡಹೆಸರು ಬಂದಿತು. ನಂತರ ಅಥಣಿ ತಾಲೂಕಿನ ಇಂಗಳಗಾಂವಕ್ಕೆ ಬಂದರು. ಅಲ್ಲಿಂದ ರಾಯಬಾಗ ತಾಲೂಕಿನ ಹಿಡಕಲ್‌ಕ್ಕೆ ಬಂದು ಅಲ್ಲಿಂದ ಗಂದಕಕ್ಕೆ ಹೋದರು. ಅಲ್ಲಿ ಇವರಿಗೆ ಅಡ್ಡಹೆಸರು ಚಿಟ್ಟಿ ಎಂದು ಕರೆಯಲಾಯಿತು.[೨] ಎಂಬುದಾಗಿ ಹೆಳವರ ದಾಖಲೆಯಲ್ಲಿದೆ. ಇವರ ಮೂಲಪುರುಷ ಮಲ್ಲಪ್ಪ ಎಂದು ಅವರು ಹಿಡಕಲ್ಲದಲ್ಲಿ ದಲಾಲ ಬಾಹುಬಂದರು ಆಗಿದ್ದರೆಂದು ತಿಳಿದುಬರುತ್ತದೆ. ಆದರೆ ಕಾಲಾಂತರದಲ್ಲಿ ಇವರ ಮಕ್ಕಳು ಮೊಮ್ಮಕ್ಕಳು ಬೇರೆ ಬೇರೆ ಊರುಗಳಿಗೆ ವಲಸೆ ಹೋಗಿ ನೆಲೆಸಿರಬೇಕು. ತುಕಾರಾಮಪ್ಪ ಕೋಪರಡೆ ಅವರು ತಮ್ಮ 'ಚಿಟ್ಟಿ ಮಾಮಲೇದಾರರ ಚರಿತ್ರೆ' ಯಲ್ಲಿ ಈ ರೀತಿ ಉಲ್ಲೇಖಿಸಿದ್ದಾರೆ. 'ಮುಧೋಳ ಸಂಸ್ಥಾನದಲ್ಲಿ ಶೋಭಿಸುವ ಎತ್ನೂರ ಎಂಬ ಒಂದು ಗ್ರಾಮದಲ್ಲಿ ಹೆಸರಾದ ಶರಣ ಮನೆತನದ ಶಿವನ ಪರಮಭಕ್ತನಾಗಿರುವಂಥ ಸಂಗಪ್ಪನೆಂಬಾತಂಗೆ ಒಳ್ಳೆಯ ಮನಸ್ಸಿನ ಚನ್ನಬಸವ್ವಳೆಂಬ ವಿಧೇಯಳಾದ ಸಮಂಗುಣವತಿಯಾದ. ರೂಪವತಿಯಾದ ಸತಿ ಇದ್ದು ಅವರು ಬಡತನ ಮುಸುಕಿದ್ದರೂ ಪರಸ್ಪರ ಪ್ರೇಮದಿಂದ

೨. ಹೆಳವರ ದಾಖಲೆಯನ್ನು ನೋಡಿ.

ಬಾಳುವೆ ಸಾಗಿಸುತ್ತಿದ್ದರು. ಇವರಿಗೆ ಮೂವರು ಮಕ್ಕಳು ಅಡಿವೆಪ್ಪ, ಗುರಪ್ಪ ಹಾಗೂ ಬಶೆಟಪ್ಪಾ ಎಂದು. ಬಶೆಟಪ್ಪ ಮೂರು ವರುಷದವರಿದ್ದಾಗ ಮತ್ತೆ ಬಡತನ ಇನ್ನಷ್ಟು ಹೆಚ್ಚಾಯಿತು. ೧೮೮೬ ರಲ್ಲಿ ಅಥಣಿಗೆ ವಲಸೆ ಹೋದರು.[೩] ಎಂಬ ವಿವರ ಸಿಗುತ್ತದೆ. ಹೀಗೆ ಚೆಟ್ಟಿಯವರ ಅಜ್ಜ ಬಡತನದಿಂದಾಗಿ ಅಥಣಿಗೆ ವಲಸೆ ಬಂದರು. ಅಲ್ಲಿಗೆ ಬಂದಮೇಲೂ ಬಡತನ ಕಡಿಮೆಯಾಗಲಿಲ್ಲ. ಮಕ್ಕಳು ಚಿಕ್ಕವರಿರುವದರಿಂದ ಹಣ ಸಾಲದೆ ಮನೆ ನಡೆಯದಂತಾಗಲು ಪತ್ನಿ ಚನ್ನಬಸವ್ವ ಕೆಲವು ಸಣ್ಣಪುಟ್ಟ ಕಾಯಿಲೆ (ರೋಗ)ಗಳಿಗೆ ಆಯುರ್ವೇದದ ಔಷಧಿ ತಯಾರಿಸಿ ಚೀಟಿ ಕಟ್ಟಿ ಪತಿಗೆ ನೆರವಾದಳಂತೆ. ಚೆಟ್ಟಿ ಎಂಬ ಅಡ್ಡಹೆಸರು ಬರಲು ಕಾರಣ ಇದೇ ಆಗಿರಬಹುದು. ಚೆಟ್ಟಿಯವರೆ ಹೇಳುವಂತೆ " ನಮ್ಮ ಮನೆತನದ ಹೆಸರು ಇಂದು ಚೆಟ್ಟಿ ಅದೆ ಆದರೆ ಮೂಲತಃ ಅದು ಶೆಟ್ಟಿ. ವ್ಯಾಪಾರೋದ್ಯೋಗವನ್ನು ಕೈಕೊಂಡು ಶೆಟ್ಟಿ ಆಗಿತ್ತು. ಆದರೆ ನಮ್ಮ ಆಯಿ (ಅಜ್ಜಿ) ಆಗಿನ ಕಾಲದಲ್ಲಿ ಕಾಯಿಲೆಗಳಿಗೆ ಚೀಟು ಕಟ್ಟಿ ಔಷಧ ಕೊಡುವದರಲ್ಲಿ ಹೆಸರುವಾಸಿಯಾಗಿದ್ದಳು. ತಾನೇ ತಯಾರಿಸಿದ ಔಷಧಿಯನ್ನೂ ಚೀಟುಕಟ್ಟಿ ತನ್ನ ಲಿಂಗಪೂಜೆಯಾದ ನಂತರ ಎರಡು ಘಂಟೆಗಳವರೆಗೆ ಕೊಡುತ್ತಿದ್ದುದರಿಂದ ' ಚೀಟಿ 'ಯವರ ಮನೆ ಎಂದೇ ಕರೆಯಲ್ಪಡುತ್ತಿತ್ತು. ಬರಬರುತ್ತ ಚಿಟ್ಟಿ ಆಯಿತಂತೆ ಹೀಗೆ ಜನತೆಯ ಬಾಯಿಯಲ್ಲಿ ಶೆಟ್ಟಿ. ಚೀಟಿ. ಚಿಟ್ಟಿಹೋಗಿ ಚೆಟ್ಟಿ ಆಗಿದೆ "[೪]. ಎಂದು ತಿಳಿದುಬರುತ್ತದೆ.

ಸೆಟ್ಟಿ ಅನ್ನುವ ಶಬ್ದವೇ ಶ್ರೇಷ್ಠ ಶಬ್ದ ಸಂಜನಿತ ಕನ್ನಡ ಶಬ್ದ. ಅದರ ಅರ್ಥ ಶ್ರೀಮಂತ. ಆರ್ಥಿಕವಾಗಿ ಅವರು ಶ್ರೀಮಂತರಾಗಿರದಿದ್ದರೂ ತಮ್ಮ ಕಲಾ ಜೀವನದಲ್ಲಿ ಆ ಶ್ರೀಮಂತಿಕೆಯನ್ನು ಪ್ರತಿಬಿಂಬಿಸಿದ್ದಾರೆ. " ಸೆಟ್ಟಿ ಶಬ್ದ ಅವರ ಹೆಸರಿಗೆ ಅಂಟಿಸಿದ ಅಂಟು ಶಬ್ದವೋ ಅವರ ಮನೆತನದ ಬಳುವಳಿಯಾಗಿಬಂದ ನೆಂಟು ಶಬ್ದವೋ ಮಾತ್ರವಾಗಿರದೆ ಅದು ಅವರ ಗುಣ. ಗೌರವ. ಗಾಂಭೀರ್ಯ. ಘನತೆ ಧೀಮಂತಿಕೆ ಕಲಾಸಾಮ್ರಾಜ್ಯದ ಶ್ರೀಮಂತಿಕೆಗಳನ್ನು ಪ್ರತಿಧ್ವನಿಸುತ್ತದೆ "[೫] ಎನ್ನುವ ಮಾತು ಅಷ್ಟೇ ಸತ್ಯವಾಗಿದೆ.

ಮೂಲತಃ ಚೆಟ್ಟಿಯವರದು ಶರಣ ಸಂಸ್ಕೃತಿಯ ಮನೆತನ. ಅವರ ಮುತ್ತಜ್ಜನವರಾದ ಮುರಿಗೆಪ್ಪನವರು ಗುರುಲಿಂಗ ಜಂಗಮರಲ್ಲಿ ಅತ್ಯಂತ ಭಕ್ತಿ ಶ್ರದ್ಧೆ. ಗೌರವವುಳ್ಳವರಾಗಿದ್ದರಂತೆ. ಲಿಂಗ ಪೂಜೆಯೇ ಅವರ ಬದುಕಿನ ಅಂಗವಾಗಿತ್ತು. ಅದು ಇಂದಿಗೂ ಪರಂಪರೆಯಾಗಿ ಬಂದಿದೆ. ಅಲ್ಲದೆ ಅದಕ್ಕೆ ದೈವದ ಹಿನ್ನೆಲೆಯೂ ಇದೆ. ಚೆಟ್ಟಿಯವರೇ ಹೇಳುವಂತೆ " ಮುರಿಗೆಪ್ಪಜ್ಜನವರು ಪೂಜೆಗೆ ಕುಳಿತಾಗಲೆಲ್ಲ ಒಂದು ಘಟಸರ್ಪ ಹೆಡೆತೆಗೆದುಕೊಂಡು ಬಂದು ಇವರ ಮುಂದೆ ಪೂಜೆಮುಗಿಯುವವರೆಗೆ ಇರುತ್ತಿತ್ತು. ಪೂಜೆ ಮುಗಿದಾಕ್ಷಣ ಮುತ್ಯಾ (ಅಜ್ಜ) ತನ್ನ ಸೊಸೆ ಅಂದರೆ (ನಮ್ಮ ಅಜ್ಜ) ಚನ್ನಬಸಮ್ಮಳನ್ನು ಕರೆದು ' ತಾಯಿ ಅಜ್ಜ ಬಂದಾಽನ ನಾಗಜ್ಜ. ಆತಗಽ ಹಾಲ ತಂದಽ ಹಾಕವಾ ' ಎಂದು ಹೇಳುತ್ತಿದ್ದರಂತೆ ತಕ್ಷಣ ನಮ್ಮ ಆಯಿ ಬೆಳ್ಳಿ ಬಟ್ಟಲಿನಲ್ಲಿ ಹಾಲು ತಂದು ಇಟ್ಟಾಕ್ಷಣ ಅದು


---

೩. ತುಕಾರಾಮಪ್ಪ ಕೋಪರಡೆ : ಚೆಟ್ಟೀ ಮಾಮಲೇದಾರರ ಚರಿತ್ರೆ. ಪುಟ ೧೨

೪. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೩

೫. ಮಹಾಲಿಂಗ ಯಾಳಗಿ (ಸಂ.) : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೬೬

ಚೆಟ್ಟಿಯವರ ವಂಶಾವಳಿ



* (ಚಿತ್ರಕಲಾವಿದರು)

ಕುಡಿದು ಹೋಗುತ್ತಿತ್ತಂತೆ ".[೬] ಮುಂದೆ ಅವರ ತಂದೆ ಅಡಿವೆಪ್ಪ ಹಾಗೂ ಚಿಕ್ಕಪ್ಪ ಹುಟ್ಟಿದನಂತರ ಮನೆಯಲ್ಲಿ ಆ ಹಾವಿನ ಬಗ್ಗೆ ಚಿಂತೆಗೊಳಗಾದರು. ಅವರ ಅಜ್ಜ ಎಷ್ಟೇ ತಿಳಿಸಿ ಹೇಳಿದರೂ ಹೆಣ್ಣುಮಕ್ಕಳಿಗೆ ಸಮಾಧಾನವಾಗಲಿಲ್ಲ.

ಇವರದು ದಲಾಲಿ (ಅಡತಿ ಅಂದರೆ ಕಾಳು ಕಡಿ) ಅಂಗಡಿ ಇದ್ದು. ಅಲ್ಲಿ ಯಾರೋ ಒಬ್ಬರು ಒಂದು ದಿನ ಬೆಳ್ಳಿಯ ನಾಗರ ಹೆಡೆಯನ್ನು ಒತ್ತೆ ಇಟ್ಟುಹೋಗಿದ್ದರು. " ಒಂದು ದಿನ ಸ್ವಪ್ನದಲ್ಲಿ ಮಲ್ಲಿಕಾರ್ಜುನನ ಹೆಸರಿನಿಂದ ನನ್ನ ಪ್ರತಿರೂಪವಾದ ನಾಗರ ಹೆಡೆಯನ್ನು ಪೂಜೆ ಮಾಡಿರಿ. ನಾನು ಪ್ರತ್ಯಕ್ಷವಾಗಿ ಬರುವದಿಲ್ಲ. ನನ್ನ ಆಶೀರ್ವಾದ ನಿಮ್ಮ ಮೇಲಿದೆ "[೭] ಎಂದು ಹೇಳಲು ಚೆಟ್ಟಿಯವರ ಅಜ್ಜನವರು ಹಾಗೆ ಮಾಡಿದರು. ಮುಂದೆ ಆ ಘಟಸರ್ಪ ಕಾಣಲಿಲ್ಲವಂತೆ. ಸ್ವತಃ ಚೆಟ್ಟಿಯವರೇ ಈ ಮಾತುಗಳನ್ನು ಹೇಳಿದ್ದಾರೆ. ಇಂದಿಗೂ ಅವರ ಮನೆಯಲ್ಲಿ ಬೆಳ್ಳಿಯ ನಾಗಪ್ಪನನ್ನು ಜಗಲಿಯಲ್ಲಿಟ್ಟು ಪೂಜಿಸುತ್ತಾರೆ. ಧಾರ್ಮಿಕ ಮನೋಭಾವ ಬೆಳೆಯಲು ಇಂತಹ ಹಲವಾರು ಕಾರಣಗಳಿರುವಂತಿದೆ.

ಜನನ, ಬಾಲ್ಯ, ಶಿಕ್ಷಣ :

ಚೆಟ್ಟಿಯವರ ಅಜ್ಜ ಸಂಗಪ್ಪನವರಿಗೆ ಮೂವರು ಗಂಡುಮಕ್ಕಳು ಅಡಿವೆಪ್ಪ. ಗುರಪ್ಪ ಮತ್ತು ಬಸಟಪ್ಪ. ಇವರಲ್ಲಿ ಅಡಿವೆಪ್ಪನವರು ಚೆಟ್ಟಿಯವರ ತಂದೆ. ಇವರ ತಾಯಿ ಶಿವಗಂಗಮ್ಮ. ನಾಲ್ಕನೆಯ ಮಗನಾಗಿ ೧೯೦೭ ನೆಯ ಮಾರ್ಚ ೮ ರಂದು ಚೆಟ್ಟಿಯವರು ಜನ್ಮತಾಳಿದರು. ಇವರದು ಏಕತ್ರ ಘರಾಣೆ (ಅವಿಭಕ್ತ ಕುಟುಂಬ) ಎಲ್ಲರೂ ಕೂಡಿಯೆ ಇರುತ್ತಿದ್ದರು. ಅವರ ಜನ್ಮ ದಿನಾಂಕವನ್ನು ಅಭಿನಂದನ ಗ್ರಂಥ ಹಾಗೂ ಚಿತ್ರಕಲಾ ಅಕೆಡೆಮಿಯಿಂದ ಪ್ರಕಟವಾದ ಗ್ರಂಥದಲ್ಲಿ ಫೆಬ್ರುವರಿ ೮ ಎಂದು ನಮೂದಿಸಿದ್ದಾರೆ. ಆದರೆ ಚೆಟ್ಟಿಯವರು ಹುಕ್ಕೇರಿ ಶಾಲೆಯಿಂದ ೬ ನೇ ಇಯತ್ತೆ ಕಲಿಯುವದನ್ನು ಬಿಟ್ಟು ಇಂಗ್ಲಿಷ ಕಲಿಯುವ ಸಲುವಾಗಿ ಬೇರೆ ಶಾಲೆ ಸೇರುವ ಸಂದರ್ಭದಲ್ಲಿ ಶಾಲೆ ಬಿಟ್ಟಬಗ್ಗೆ ಶಾಲೆಯಿಂದ ಸರ್ಟಿಫಿಕೇಟು ತೆಗೆದುಕೊಂಡಿದ್ದಾರೆ. ಅದರಲ್ಲಿ ಅವರ ಜನ್ಮದಿನಾಂಕ ೧೯೦೭ ನೆಯ ಮಾರ್ಚ ೮ ಎಂದು ದಾಖಲಾಗಿದೆ.

ಚೆಟ್ಟಿಯವರ ಜನ್ಮ ವೃತ್ತಾಂತದ ಈ ಹಿನ್ನೆಲೆಯೂ ಸಹಿತ ಒಂದು ಮಹತ್ವದ ಘಟನೆಯಾಗಿದೆ. ಶಿವಗಂಗಮ್ಮನವರಿಗೆ ಒಂದರ ಮೇಲೊಂದರಂತೆ ಮೂವರು ಹೆಣ್ಣುಮಕ್ಕಳು ಜನಿಸಿದರು. ಶಿವನವ್ವ. ಈರವ್ವ ಮತ್ತು ನೀಲವ್ವ ಹೀಗೆ ಮೂವರು ಹೆಣ್ಣುಮಕ್ಕಳಾದರೂ ಗಂಡು ಮಗುವೊಂದು ಜನಿಸಲಿಲ್ಲವೆಂಬ ಅಸಮಾಧಾನ ಮನೆಯವರನ್ನು ಕಾಡುತ್ತಿತ್ತು. ಹಿಂದಿನ ಕಾಲದಲ್ಲಿ ಗಂಡು ಮಗುವಿನ ಬಗ್ಗೆ ಇರುವ ವಿಚಾರ. ಭಾವನೆಗಳು ಬೇರೆಯೇ ಆಗಿದ್ದವು. ಗಂಡು ಮಗುವಿಲ್ಲದೆ ಮೋಕ್ಷದೊರಕದು. ಆತನೇ ವಂಶೋದ್ಧಾರಕ. ಶ್ರೇಷ್ಠ ಎಂಬಿತ್ಯಾದಿ ತಿಳಿವಳಿಕೆಯನ್ನು ಹೊಂದಿದ್ದ ಕಾಲ. " ಮನೆಯಲ್ಲಿ ಅತ್ತೆ-ಮಾವಂದಿರು ನೆಗೆಣ್ಣಿ ನೆರೆ - ಹೊರೆಯವರು ನನ್ನ ತಾಯಿಗೆ ಏನೇ ಶಿವಗಂಗೂ ಬರೆ ಹೆಣ್ಣs ಹಡಿಲಾಕ ಹತ್ತಿವಲ್ಲ ಹಿಂಗಾದರ ಮುಂದ ಹ್ಯಾಂಗವಾs ಮನಿತಾನ ಬೆಳಸಲಾಕ ಒಂದಾದರೂ ಗಂಡ ಮಗ

---

೬. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೨

೭. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೨

ಬೇಕ ಬೇಕು "[೮] ಎಂದು ಆಡಿಕೊಳ್ಳುತ್ತಿದ್ದರಂತೆ. ಹೆಣ್ಣೆಂದರೆ ಕೊಟ್ಟ ಮನೆಗೆ ಹೋಗಿ ಅವರ ವಂಶದ ಉದ್ಧಾರ ಮಾಡುವಂಥವರು ಎನ್ನುವ ಭಾವನೆ ಅವರಲ್ಲಿ ಇತ್ತು. ಆ ಸಂದರ್ಭದಲ್ಲಿ ಶಿವಗಂಗವ್ವನ ಮನಸ್ಸಿಗೆ ಬಹಳ ನೋವುಂಟಾಗುತ್ತಿತ್ತು. ಆಗ ದೇವರ ಮನೆಯಲ್ಲಿ ಕುಳಿತು ಅತ್ತು ಸಮಾಧಾನ ಪಟ್ಟುಕೊಳ್ಳುತ್ತಿದ್ದಳು.

ಪ್ರತಿ ದಿನ ಮುಂಜಾನೆ ಸ್ನಾನ, ಲಿಂಗಪೂಜೆ ಮುಗಿದ ನಂತರ ಗಚ್ಚಿನ ಮಠಕ್ಕೆ ಹೋಗಿ ಎಡೆಕೊಡುವ ರೂಢಿ ಇತ್ತು. ಒಂದು ಸಲ ಅಮವಾಸ್ಯೆಯದಿನ ಇವರ ತಾಯಿ ಗಚ್ಚಿನ ಮಠಕ್ಕೆ ಎಡೆಕೊಡಲು ಹೋದಾಗ " ಶಿವಯೋಗಿಗಳ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡಳಂತೆ. ಕಣ್ಣಾಲೆಗಳು ತುಂಬಿ ನಿಂತಿದ್ದವು. ಶಿವಯೋಗಿಗಳು ಮುಗುಳು ನಗುತ್ತ ' ಯಾಕವಾs ತಂಗಿ. ಗಂಡ ಮಕ್ಕಳ ಆಸೆ ಆತೆನವಾ. ಆಗಲಿ ಸಂತೋಷ ' ಎಂದು ನುಡಿದವರೆ ನನ್ನ ತಾಯಿಯ ಉಡಿಯಲ್ಲಿ ಎರಡು ಉತ್ತತ್ತಿ ಹಾಕಿದರಂತೆ ಏನ ಚಿಂತಿ ಮಾಡಬ್ಯಾಡವಾ ಶಿವಾ ಇದ್ದಾನs ಅಪ್ಪ ಅದಾನ ಹೋಗು ತಾಯೀ ಎರಡು ಗಂಡಮಕ್ಕಳು ಹುಟ್ಟತಾವ "[೯] ಎಂದು ಆಶೀರ್ವದಿಸಿದಾಗ ಶಿವಗಂಗವ್ವ ಶಿವಯೋಗಿಗಳ ಶ್ರೀಪಾದಕ್ಕೆ ನಮಸ್ಕರಿಸಿ ಗಂಡು ಮಗು ಹುಟ್ಟುವದೆಂಬ ಸಂಭ್ರಮದಲ್ಲಿ ಮೇಲೇಳುವಾಗ ಉಡಿಯಲ್ಲಿದ್ದ ಎರಡು ಉತ್ತತ್ತಿಗಳಲ್ಲಿ ಒಂದು ಜಾರಿ ಕೆಳಕ್ಕೆ ಬಿದ್ದಿತು. " ಆಗ ಶಿವಯೋಗಿಗಳು ಆಶೀರ್ವಾದ ಗಟ್ಟಿ ಹಿಡಿಬೇಕವಾ.... ಎಂದು ನುಡಿದು ಒಂದು ಕ್ಷಣ ಕಣ್ಮುಚ್ಚಿಕೊಂಡು ಆಯಿತು ಶಿವನಿಚ್ಛಾ "[೧೦] ಎಂದರಂತೆ ತ್ರಿಕಾಲ ಜ್ಞಾನಿಗಳಾದ ಶಿವಯೋಗಿಗಳು. ಬಿದ್ದಂತ ಉತ್ತತ್ತಿ ತೆಗೆದುಕೊಂಡು ಶಿವಗಂಗಮ್ಮ ಮನೆಗೆ ಬಂದು ನಡೆದ ಸಂಗತಿಯನ್ನು ತಿಳಿಸಿದಾಗ ಎಲ್ಲರಿಗೂ ಆನಂದ. ಆನಂತರವೇ ಮುರಿಗೆಪ್ಪ ಚೆಟ್ಟಿಯವರು ಜನಿಸಿದರು. ಇದಕ್ಕೆಲ್ಲ ಶಿವಯೋಗಿಗಳ ಕೃಪಾಶೀರ್ವಾದವೇ ಕಾರಣವಾದ್ದರಿಂದ ಶಿವಯೋಗಿಗಳವರ ಹೆಸರನ್ನೇ (ಮುರುಗೇಶ) ಇಟ್ಟರಂತೆ "[೧೧] ಹೀಗೆ ಶಿವಯೋಗಿಗಳ ಕೃಪಾಶೀರ್ವಾದದಿಂದ ಜನಿಸಿದ ಚೆಟ್ಟಿಯವರು ಜೀವನದುದ್ದಕ್ಕೂ ಅಂತಹದೇ ಶರಣ ಮಾರ್ಗದಲ್ಲಿ ನಡೆದು ಬಂದುದು ಕುತೂಹಲದ ಸಂಗತಿಯೆಂದು ಹೇಳಬೇಕಾಗುತ್ತದೆ.

ಆ ಮೇಲೆ ಜನಿಸಿದ ತಮ್ಮನಿಗೆ ಮನೆ ದೇವರಾದ ಶ್ರೀಶೈಲನೆಂದು ಹೆಸರಿಟ್ಟರು. ಅವನು ಮದುವೆಯಾಗಿ ಎರಡು ಮಕ್ಕಳನ್ನು ಪಡೆದು ತೀರಿಕೊಂಡನು. ಅವನ ನಂತರ ತಂಗಿಯೋರ್ವಳು ಅಲ್ಪಾಯುಷಿಯಾಗಿ ತೀರಿಕೊಂಡಳು. " ಉಡಿಯಲ್ಲಿ ಜಾರಿಬಿದ್ದ ಉತ್ತತ್ತಿಗೂ ತಮ್ಮನ. ತಂಗಿಯ ಅಲ್ಪಾಯುಷ್ಯಕ್ಕೂ ಸಂಬಂಧವಿತ್ತೇನೋ ಯಾರಿಗೆ ಗೊತ್ತು ? ಅದು ಆ ಶಿವಯೋಗಿಗೆ ಮಾತ್ರ ಗೊತ್ತಿರಬೇಕು "[೧೨] ಎಂದು ಚೆಟ್ಟಿಯವರು ಅಭಿಪ್ರಾಯ ಪಡುತ್ತಾರೆ. ಶರಣವಾಣಿ ಎಂದೂ ಹುಸಿಹೋಗದು.

---

೮. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೩

೯. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೪

೧೦. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೪

೧೧. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೪

೧೨. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೪

ಚೆಟ್ಟಿಯವರ ತಂದೆ ಅಡಿವೆಪ್ಪನವರು ವಿಶಾಲ ಹೃದಯಿಗಳೂ ಪ್ರೀತಿ. ವಾತ್ಸಲ್ಯ ಹಾಗೂ ಕರುಣಾಮಯಿಗಳೂ ಆಗಿದ್ದರು. ತಂದೆ ಸಂಗಪ್ಪ ತೀರಿಕೊಂಡ ನಂತರ ಮನೆಯ ಜವಾಬ್ದಾರಿ ಅವರ ಮೇಲೆ ಬಿತ್ತು. ತಮ್ಮನಾದ ರಾವಸಾಹೇಬ ಬಸೆಟಪ್ಪನವರನ್ನು ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಅವರಿಬ್ಬರಲ್ಲಿಯ ಪ್ರೀತಿಯನ್ನು ಕಂಡು ಅಥಣಿಯ ಹಿರಿಯರೆಲ್ಲ ಅಡಿವೆಪ್ಪ-ಬಸೆಟೆಪ್ಪ ಅಣ್ಣತಮ್ಮಂದಿರಲ್ಲಿ ಒಬ್ಬರ ಪ್ರತಿಬಿಂಬ ಮತ್ತೊಬ್ಬರು. ದೇಹ ಎರಡಾದರೂ ಆತ್ಮ ಒಂದೇ ಅಣ್ಣತಮ್ಮರಿದ್ದರೆ ಹೀಗಿರಬೇಕು "[೧೩] ಎನ್ನುತ್ತಿದ್ದರಂತೆ ತಮ್ಮನ ಓದಿಗಾಗಿ ಸಾಕಷ್ಟು ಶ್ರಮ ಪಟ್ಟಿದ್ದಾರೆ ಯಾವುದೇ ರೀತಿಯಲ್ಲಿ ಆತನ ಓದು ನಿಲ್ಲಬಾರದು ಎಂದು " ಒಂದು ಸಲ ತಮ್ಮ ಬಸೆಟೆಪ್ಪನವರು ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತಾಗ್ಗೆ ಫೀ ತುಂಬಲು ಹಣದ ಕೊರತೆ ಆಯಿತಂತೆ ಆಗ್ಗೆ ನಮ್ಮ ತಂದೆಯವರು ತಮ್ಮ ಕೊರಳಲ್ಲಿಯ ಬೆಳ್ಳಿ ಚೌಕ (ಲಿಂಗದಕಾಯಿ) ವನ್ನು ಒತ್ತೆ ಇಟ್ಟು ಫೀ ತುಂಬಿದ್ದರಂತೆ ಈ ಮಾತನ್ನು ಸ್ವತಃ ನನ್ನ ಚಿಕ್ಕಪ್ಪ ಅವರು ಆಗಾಗ ಸ್ಮರಿಸಿಕೊಂಡು ಹೇಳುತ್ತಿದ್ದರು ".[೧೪] ಎಂದು ಚೆಟ್ಟಿಯವರು ತಮ್ಮ ಲೇಖನದಲ್ಲಿ ಬರೆದಿದ್ದಾರೆ.

ಪತಿಯ ಮಾರ್ಗವನ್ನೇ ಅನುಸರಿಸಿದ ತಾಯಿ ಶಿವಗಂಗಮ್ಮನಿಗೆ ಗುರುಲಿಂಗ - ಜಂಗಮರಲ್ಲಿ ಅಪಾರ ಭಕ್ತಿ. ಅವಿಭಕ್ತ ಕುಟುಂಬವಾಗಿದ್ದರೂ ಎಲ್ಲರೊಂದಿಗೂ ಹೊಂದಿಕೊಂಡು ನಗುತ್ತ ಇರುವ ಸ್ವಭಾವ. ಅಲ್ಲದೆ " ಅವಳ ಧ್ವನಿ ಅತ್ಯಂತ ಮಧುರವಾಗಿದ್ದು ಶಿವನಾಮಾವಳಿ ವಚನಗಳು. ಜನಪದ ಹಾಡುಗಳನ್ನು ಹಾಗೂ ದೇವರ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದಳು. ಇಂದಿಗೂ ಅವಳ ಹಾಡಿನ ಧ್ವನಿ ನನ್ನ ಕಿವಿಯಲ್ಲಿದೆ ".[೧೫] ಇಂತಹ ವಾತಾವರಣದಲ್ಲಿ ಬೆಳೆದ ಚೆಟ್ಟಿಯವರಿಗೆ ಚಿತ್ರಕಲೆ ಅಷ್ಟೇ ಅಲ್ಲ. ಸಂಗೀತದಲ್ಲಿಯೂ ಆಸಕ್ತಿ ಬೆಳೆದದ್ದು ಸಹಜ. ಅಂತೆಯೇ ಅವರ ಮನೆಯಲ್ಲಿ ಒಂದು ಹಾರ್ಮೋನಿಯಂ ಕೂಡ ಇದೆ. " ಬೆಳಿಗ್ಗೆ ೫ ರಿಂದ ೬ ಗಂಟೆಯ ವರೆಗೆ ಶ್ರುತಿ ಹಿಡಿದು ದೇವರ ನಾಮ ಹೇಳ್ತಾಇದ್ರು "[೧೬] ಎಂದು ಅವರ ಮಗ ಬಸವರಾಜ ಹೇಳುತ್ತಾರೆ. ಅಂದರೆ ಆತ್ಮ ಸಂತೋಷಕ್ಕಾಗಿ ಸಂಗೀತ ಅಭ್ಯಾಸದ ಒಲವು ಅವರಲ್ಲಿ ಸಹಜವಾಗಿ ಬೆಳೆದು ಬಂದಿತ್ತು.

ಚೆಟ್ಟಿಯವರಿಗೆ ಐದು ವರ್ಷತುಂಬಿದಾಗ ಅಂದರೆ ೧೯೧೨ ರಲ್ಲಿ ಅಥಣಿಯಲ್ಲಿಯೇ ಮನೆಗೆ ಸಮೀಪದಲ್ಲಿ ಮಿರ್ಜಿ ಹೆಸರಿನ ಕನ್ನಡ ಶಾಲೆ ಇದ್ದು ಇದಕ್ಕೆ ಖಾವಾಸ್ಕರ ವಾಡೆ ಎಂದು ಕರೆಯುವರು. ಮೊದಲು ರಾಜವಾಡೆ ಇದ್ದುದ್ದು ಅದು ನಶಿಸಿಹೋದದ್ದರಿಂದ ಆ ಸ್ಥಳದಲ್ಲಿ ಈ ಶಾಲೆಯನ್ನು ಪ್ರಾರಂಭಿಸಲಾಯಿತು[೧೭] ಇಲ್ಲಿ ೧೯೧೭ ರ ವರೆಗೆ ಐದನೇ ಇಯತ್ತೆವರೆಗೆ ಕಲಿತರು. ತಮ್ಮ ತಂದೆಯವರು ತಮಗೆ ತೋರಿಸುತ್ತಿದ್ದ ಪ್ರೀತಿ ವಾತ್ಸಲ್ಯದ ಬಗ್ಗೆ ಈ ರೀತಿ ಹೇಳಿದ್ದಾರೆ " ನಮ್ಮ ತಂದೆಯವರಿಗೆ ನನ್ನ ಮೇಲೆ ಬಹಳ ಪ್ರೀತಿ. ಬಹುಶಃ ಮೂರು

---

೧೩. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೬

೧೪. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೬

೧೫. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೩

೧೬. ಮಗ ಬಸವರಾಜ ಚೆಟ್ಟಿ ಅವರೊಂದಿಗಿನ ಸಂದರ್ಶನ. ೬-೮-೨೦೦೦. ವಿಜಾಪುರ

೧೭. ಅಥಣಿ ಕ್ಷೇತ್ರ ಕಾರ್ಯ ಮಾಡಿದಾಗ ದೊರೆತ ಮಾಹಿತಿ

ಹೆಣ್ಣುಮಕ್ಕಳ ಮೇಲೆ ಜನಿಸಿದ್ದಕ್ಕೆ ಕಾರಣವಿರಬಹುದು. ಮೂರು ಹೆಣ್ಣುಮಕ್ಕಳ ಮ್ಯಾಲ ಹುಟ್ಯಾನ. ಪ್ರಸಿದ್ಧ ವ್ಯಕ್ತಿ ಆಗ್ತಾನ. ಅಷ್ಟs ಅಲ್ಲ ಶಿವಯೋಗಿ ಅಪ್ಪನ ಕೃಪಾನುs ಅದ. ಎಂದು ತಮ್ಮ ಗೆಳೆಯರೊಂದಿಗೆ ನನ್ನ ಬಗ್ಗೆ ಆಗಾಗ್ಗೆ ಮಾತನಾಡುತ್ತಿದ್ದರಂತೆ "[೧೮]. ಅಲ್ಲದೆ "ನನ್ನ ತಂದೆಯವರು ನನ್ನ ಹಾಗೂ ನನ್ನ ತಮ್ಮನ ಮೇಲೆ ವಿಶೇಷ ಪ್ರೀತಿ ತೋರುತ್ತಿದ್ದರು. ಜರದ ಮಕಮಲ್ ಕೋಟು ಅದೇ ರೀತಿಯ ಚೊಣ್ಣ. ಮಕಮಲ್ ಟೊಪ್ಪಿಗೆ ಹಾಕಿಕೊಂಡು ಕೈಯಲ್ಲಿ ಪಾಟಿ ಹಿಡಿದುಕೊಂಡು ಶಾಲೆಗೆ ಹೋಗುವದೆಂದರೆ ಅದೊಂದು ಹಿಗ್ಗು. ಸಂಭ್ರಮ "[೧೯] ಹೀಗೆ ಅವರ ಬಾಲ್ಯದ ಬದುಕು ಬಹಳಷ್ಟು ಆನಂದಮಯವಾಗಿತ್ತು. ಮನೆಯಲ್ಲಿ ಮುದ್ದಿಸುವ ಅಜ್ಜಿ. ಪ್ರೀತಿಸುವ ಅಪ್ಪ. ಅಮ್ಮ. ಚಿಕ್ಕಪ್ಪ, ಚಿಕ್ಕಮ್ಮರ ವಾತ್ಸಲ್ಯ. ಅಕ್ಕಂದಿರ ವಿಶೇಷ ಒಲವು "ಬಾಳಸಂಪುಟದಲ್ಲಿ ಬಾಲ್ಯವೆಂಬುದೊಂದು ಅಳಿಸಲಾರದ ಮಧುರ ಭಾವಗೀತೆ" ಎನ್ನುವ ಕವಿವಾಣಿಯಂತೆ ನನ್ನ ಬಾಲ್ಯವು ಮಧುರ ಭಾವಗೀತೆಯಂತೆ ಹೃದಯಂಗಮವಾಗಿತ್ತು"[೨೦] ಎನ್ನುತ್ತಾರೆ ಚೆಟ್ಟಿಯವರು.

೧೯೧೫ ರಲ್ಲಿ ಅಥಣಿ ಊರಲ್ಲಿ ಪ್ಲೇಗ ಬೇನೆ ಪ್ರಾರಂಭವಾಯಿತು. ಎಲ್ಲಿ ನೋಡಿದಲ್ಲಿ ಹೆಣಗಳುರುಳತೊಡಗಿದವು. ಆ ಊರಿಗೆ ಬಂದ ಪ್ಲೇಗು ಚೆಟ್ಟಿಯವರ ಮನೆಗೂ ಬಂದು ಅವರ ತಂದೆಯನ್ನೇ ಬಲಿ ತೆಗೆದುಕೊಂಡಿತು. "ಅಂದು ಸೋಮವಾರ ಶಿವರಾತ್ರಿ ರಾತ್ರಿಯೆಲ್ಲ ಜಾಗರಣೆಯಲ್ಲಿ ಕಳೆದು ಮುಂಜಾನೆ ಸ್ನಾನ. ಲಿಂಗಪೂಜೆ ಮುಗಿಸಿಕೊಂಡ ನಮ್ಮ ತಂದೆಯವರು ಪ್ಲೇಗ ತಗಲಿ ಲಿಂಗೈಕ್ಯರಾದರು".[೨೧] ಅವರ ಪಾರ್ಥಿವ ಶರೀರವನ್ನು ಅಂತ್ಯ ಸಂಸ್ಕಾರಕ್ಕಾಗಿ ಗವಿಮಠದ ಮುಂದೆಯೇ ಏರ್ಪಾಡುಮಾಡಿದ್ದರು. ಊರಿನ ಜನರೆಲ್ಲ ಸೇರಿದ್ದರು. " ಚೆಟ್ಟಿ ಅಡಿವೆಪ್ಪನವರು ಪೂಜೆಗೆ ಬಂದರೇನು ಎಂದು ಶಿವಯೋಗಿಗಳು ನುಡಿದವರೆ ಸಮಾಧಿ ಮಾಡುವ ಸ್ಥಳಕ್ಕೆ ಬಂದು ನಮ್ಮ ತಂದೆಯವರ ಪಾರ್ಥಿವ ಶರೀರದ ಮೇಲೆ ಹೂ-ಪತ್ರಿಗಳನ್ನು ಏರಿಸಿವರು ".[೨೨] ಹೀಗೆ ಶಿವಯೋಗಿಗಳಿಂದಲೇ ಅಂತಿಮವಾಗಿ ಪುಷ್ಪಾಂಜಲಿ ಸಮರ್ಪಿಸಿಕೊಂಡರಂತೆ.

ತಂದೆ ತೀರಿಕೊಂಡನಂತರ ಚಿಕ್ಕಪ್ಪನವರಾದ ಬಶೆಟಪ್ಪನವರ ಆಶ್ರಯದಲ್ಲಿ ಬೆಳೆದರು. ಅವಿಭಕ್ತ ಕುಟುಂಬವಾದದ್ದರಿಂದ ಕುಟುಂಬದ ಭಾರವನ್ನು ಅವರೇ ಹೊರಬೇಕಾಯಿತು. ಆ ಎಲ್ಲ ಮಕ್ಕಳಿಗೂ. ತಂದೆಯ ಪ್ರೀತಿ ವಾತ್ಸಲ್ಯ ಕೊರತೆಯಾಗದಂತೆ ನೋಡಿಕೊಂಡರು. "ನಮ್ಮ ತಂದೆಯವರು ಲಿಂಗೈಕ್ಯರಾದ ಮೇಲೆ ತಂದೆಗಿಂತಲೂ ಹೆಚ್ಚಾಗಿ ಪ್ರೀತಿಯಿಂದ ನನ್ನನ್ನು ನೋಡಿಕೊಂಡರು ನಮ್ಮ ಚಿಕ್ಕಪ್ಪ ಅವರಿಗೂ ಗುರಪ್ಪ ಎಂಬ ಮಗನಿದ್ದರೂ ಬಂದವರೆಲ್ಲರ ಮುಂದೆ ಈ ಮುರಿಗೆಪ್ಪನೇ ನನ್ನ ಹಿರೇಮಗ. ನಮ್ಮ ಮನೆತನದ ಕೀರ್ತಿಯ ಕಳಶ ಎಂದೆಲ್ಲಾ ಹೇಳುತ್ತಿದ್ದರು "[೨೩] ಎಂದು ಚಿಕ್ಕಪ್ಪನವರ ವಿಶಾಲ ಮನೋಭಾವವನ್ನು ಚೆಟ್ಟಿಯವರು ಸ್ಮರಿಸಿದ್ದಾರೆ.

೧೮. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೫

೧೯. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೫

೨೦. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೫

೨೧. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೫

೨೨. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೬

೨೩. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೬

ಚೆಟ್ಟಿಯವರ ತಂದೆಯವರು ಲಿಂಗೈಕ್ಯರಾದ ಕೆಲವೇ ದಿನಗಳಲ್ಲಿ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಬಸೆಟಪ್ಪನವರಿಗೆ ಹುಕ್ಕೇರಿಗೆ ಸರ್ಕಲ್ ಇನ್ಸಪೆಕ್ಟರ್ ಅಂತ ವರ್ಗವಾಯಿತು. ಆಗ ನಾಲ್ಕನೆಯ ಇಯತ್ತೆ ಓದುತ್ತದ್ದ ಚೆಟ್ಟಿಯವರು ಅಥಣಿಯನ್ನು ಬಿಟ್ಟು ಬಂದು ಹುಕ್ಕೇರಿಯಲ್ಲಿ ೧೯೧೮ ರಲ್ಲಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ೫ ನೇ ಇಯತ್ತೆಗೆ ಪ್ರವೇಶ ಪಡೆದರು. ಆ ಶಾಲೆಯ ಶಿಕ್ಷಕರು ಹಾಗೂ ಗೆಳೆಯರ ಬಗ್ಗೆ ಚೆಟ್ಟಿಯವರು ಈ ರೀತಿ ಹೇಳುತ್ತಾರೆ : "ಆಗ ನಮಗೆ ಬಸವಪ್ರಭು ನಾಯಕ ಎಂಬುವರು ಡ್ರಾಯಿಂಗ ಮಾಸ್ತರರಾಗಿದ್ದರು. ಬಳವಂತರಾವ್ ಕುಲಕರ್ಣಿ. ಅರ್ಜುನವಾಡಕರ ಎನ್ನುವ ಇತರ ಶಿಕ್ಷಕರು"[೨೪] ಇದ್ದರು. ಮೊದಲಿನಿಂದಲೂ ರಂಗೋಲಿ ಹಾಕುವುದರಲ್ಲಿ. ಚಿತ್ರ ತೆಗೆಯುವಲ್ಲಿ ಆಸಕ್ತಿಯನ್ನು ಹೊಂದಿದ್ದ ಚೆಟ್ಟಿಯವರು (ಸ್ಲೇಟಿನ) ಪಾಟಿಯ ಮೇಲೆ ಯಾವಾಗಲೂ ಚಿತ್ರ ತೆಗೆಯುತ್ತಿದ್ದರು. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬಂತೆ ಚಿಕ್ಕಂದಿನಲ್ಲೇ ಅವರ ಕಲಾ ವ್ಯಕ್ತಿತ್ವದ ಲಕ್ಷಣಗಳು ಕಂಡಬಂದವು. ಇದನ್ನು ಗುರುತಿಸಿದ ಕಲಾ ಶಿಕ್ಷಕರಾಗಿದ್ದ ನಾಯಕ ಮಾಸ್ತರರು ಖಡುಕೊಟ್ಟು ಕರಿ ಹಲಿಗೆಯ ಮೇಲೆ ಚಿತ್ರ ತೆಗೆಯಲು ಹಚ್ಚುತ್ತಿದ್ದರು. "ಲೇ ತಮ್ಮಾ. ದಿನಾ ಹಿಂಗs ಚಿತ್ರ ತೆಗೆಯುವ ಸಾಧನಾ ಮಾಡು ಮುಂದ ಒಂದಿಲ್ಲೊಂದು ದಿನ ದೊಡ್ಡ ಚಿತ್ರಗಾರ ಆಗತಿ"[೨೫] ಎಂದು ಹೃದಯದುಂಬಿ ಹರಿಸಿದರು. ಅದೇ ಅವರ ಮುನ್ನಡೆಗೆ ಸ್ಫೂರ್ತಿ ಆಯಿತು. ಕಲಾ ಪ್ರಪಂಚದಲ್ಲಿ ಸ್ಥಿರವಾಗಿ ನಿಲ್ಲಲು ಕಾರಣವಾಯಿತು.

ಆ ಶಾಲೆಯಲ್ಲಿ ಅವರ ಗೆಳೆಯರ ಗುಂಪು ಅವರ ಜೊತೆ ಆಡಿದ ಆಟ ಪಾಟಗಳು ಇನ್ನೂ ಅವರ ಮನದಲ್ಲಿ ಅಚ್ಚೊತ್ತಿರುವದನ್ನು ಕಾಣುತ್ತೇವೆ. "ಅವರೊಂದಿಗೆ ಕಳೆದ ಆ ದಿನಗಳು ಮರಳಿ ಬಾರವು. ಅಂದಿನ ಗೆಳೆಯರಲ್ಲಿ ಹಲವರ ಹೆಸರು ಇನ್ನೂ ನನ್ನ ನೆನಪಿನ ಸುರುಳಿಯಲ್ಲಿ ಸುತ್ತಿಕೊಂಡಿವೆ. ಖಡೇದ ಪರಪ್ಪ. ಖಡೇದ ಮಲ್ಲಪ್ಪ. ಭೂಪಾಲ ಸನ್ಯಾಸಿ. ದೇಶಪಾಂಡೆ. ತುಬಚಿ ಚೆನ್ನಬಸಪ್ಪ. ಹೆದ್ದೂರ ಶೆಟ್ಟಿ. ಶಿವಬಸಪ್ಪ. ಪರಕನಟ್ಟಿ ಚೆನ್ನಬಸಪ್ಪನಾಯಕ. ಪರಗೌಡ ರುದ್ರಗೌಡ. ಅಲ್ಲಗೌಡ ಪಾಟೀಲ. ಶ್ರೀಶೈಲ. ಶಂಕರ. ಇವರೆಲ್ಲರೊಂದಿಗೆ ಆಡಿದ ಆಟ ನೆನಪಿನಲ್ಲಿ ಅಚ್ಚೊತ್ತಿದೆ"[೨೬] ಎಂದು ಆಗ ಆಡಿದ ಆಟವನ್ನು ಸಹಿತ ಇಲ್ಲಿ ನೆನಪಿಸಿಕೊಳ್ಳುತ್ತಾರೆ. ಅದೇ ತಾನೆ ಹುಕ್ಕೇರಿ ಕಛೇರಿ ಕಟ್ಟಲು ಪಾಯ ತೆಗೆದಿದ್ದರು. ನಾವೆಲ್ಲ ಆ ಪಾಯದ ತಗ್ಗಿನಲ್ಲಿ ಅಡಗಿಕೊಂಡು ಕಣ್ಣುಮುಚ್ಚಾಲೆ ಆಟ ಆಡುತ್ತಿದ್ದೆವು. ಆಗಾಗ್ಗೆ ನಾವೆಲ್ಲ ಕೂಡಿಕೊಂಡು ನೀರಲಗಿಯವರೆಗೂ ತಿರುಗಾಡುತ್ತ ಹೋಗುತ್ತಿದ್ದೆವು. ಆಗಾಗ್ಗೆ ಬುತ್ತಿ ಕಟ್ಟಿಕೊಂಡು ಹೋಗಿ ಎಲ್ಲರೊಂದಿಗೆ ತಿಂದು ಸಂತೋಷ ಹಂಚಿಕೊಳ್ಳುತ್ತಿದ್ದೆವು".[೨೭] ಹೀಗೆ ೧೯೨೦ ರ ವರೆಗೆ ಹುಕ್ಕೇರಿಯಲ್ಲಿ ೭ ನೇ ಇಯತ್ತೆಯ ವರೆಗೂ ಕಲಿತು ಮುಲ್ಕಿ ಪರೀಕ್ಷೆ ತೇರ್ಗಡೆಯಾದರು. ಅದೇ ವೇಳೆಗೆ ಅವರು ಮತ್ತೆ ಮರಳಿ ಅಥಣಿಗೆ ಬರಬೇಕಾಯಿತು.

೨೪. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೭

೨೫. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೭

೨೬. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೭

೨೭. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೭

ಹಾಯಸ್ಕೂಲಿಗೆ ಸೇರ್ಪಡೆ ಆಗಿ. ಇಂಗ್ಲಿಷ ನಾಲ್ಕನೆಯತ್ತೆಗೆ ಹೆಸರನ್ನು ಹಚ್ಚಿದರು. "ವರ್ಗದ ವಿಷಯಗಳಲ್ಲಿ ಅವರು ಅಷ್ಟೊಂದು ಪ್ರತಿಭಾವಂತರೆನಿಸಿರಲಿಲ್ಲ. ಅವರ ಬುದ್ಧಿ ಶಕ್ತಿ ಇನ್ನೂ ಬಲಿತಿರಲಿಲ್ಲವೆಂಬುದೇ ಅದಕ್ಕೆ ಕಾರಣವಿರಬಹುದು. ಇಂದು ಹೆಮ್ಮರವಾಗಿ ಬೆಳೆದು ಚಿತ್ರಕಲಾ ಪ್ರಪಂಚಕ್ಕೆ ಅಮೋಘ ಫಲಗಳನ್ನೀಯುವ ಅವರ ಕಲಾ ವೃಕ್ಷದ ಬೀಜಗಳು. ಇಂಗ್ಲೀಷ ೧ ನೇ ೨ ನೇ ಇಯತ್ತೆಯಲ್ಲಿ ಒಡೆದು ಕಾಣುತ್ತಿರಲಿಲ್ಲ" [೨೮] ಎಂದು ಅವರ ಬಾಲ್ಯ ಮಿತ್ರ ಅಥಣಿಯ ಶ್ರೀ ಆರ್. ಪಿ. ಕುಲಕರ್ಣಿಯವರು ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ. ಅಂದರೆ ಚಿಟ್ಟಿಯವರಿಗೆ ಪಠ್ಯವಿಷಯಕ್ಕಿಂತಲೂ ಹೆಚ್ಚಾಗಿ ಚಿತ್ರಕಲೆಯಲ್ಲೆ ಆಸಕ್ತಿ ಹೆಚ್ಚಾಗಿದ್ದದ್ದು ತಿಳಿದುಬರುತ್ತದೆ. ಆಗಲೇ ಅವರು ರವಿವರ್ಮನ ಲಕ್ಷ್ಮಿ. ಸರಸ್ವತಿ. ಗಣಪತಿಯ ಚಿತ್ರಗಳನ್ನು ನಕಲು ಮಾಡುತ್ತಿದ್ದರು. "೧೯೨೧ ರಲ್ಲಿ ಡ್ರಾಯಿಂಗ ಎಲಿಮೆಂಟ್ರಿ ಗ್ರೇಡ್ ಪಾಸಾಗಿ ೧೯೨೨ ರಲ್ಲಿ ಇಂಟರಮಿಡಿಯಟ್ ಗ್ರೇಡ ಪರೀಕ್ಷೆಯಲ್ಲಿ ೧ ನೇ ನಂಬರನಲ್ಲಿ ಪಾಸಾದೆನು" [೨೯] ಎಂದು ಹೇಳುವ ಚಿಟ್ಟಿಯವರು ೧೯೨೪ ರ ವರೆಗೆ ಮ್ಯಾಟ್ರಿಕ್ ಕಲಿತು ಉತ್ತೀರ್ಣರಾದರು.

ಆಗಿನ ಅಥಣಿ ಎಫ್. ಜಿ. ಎ. ವಿ ಶಾಲೆಯಲ್ಲಿನ ವಿದ್ಯಾರ್ಥಿ ಜೀವನದಲ್ಲಿ ಅಲ್ಲಿಯ ಶಿಕ್ಷಕರ ಬಗೆಗಿನ ಅವರ ಅನುಭವ ಈ ರೀತಿ ಇತ್ತು. "ಅಪ್ಪು ಎನ್ನುವವರು ನಮ್ಮ ಮುಖ್ಯೋಪಾಧ್ಯಾಯರಾಗಿದ್ದರು. ಕುಲಕರ್ಣಿ ಕೃಷ್ಣ. ದೇಶಪಾಂಡೆ. ಮಂಗಸೂಳಿ. ಅಂದಾನೆಪ್ಪ. ಶೆಟ್ಟಿ ಎಂಬ ಶಿಕ್ಷಕರಿದ್ದರು. ಹುಕ್ಕೇರಿಯ ಗೆಳೆಯರಂತೆ ಅಥಣಿಯಲ್ಲಿ ಕೂಡ ಬಾಳಪ್ಪ ಕಣ್ಣಿ. ಈರಪ್ಪ ಕಲಾದಗಿ. ಮುರಿಗೆಪ್ಪ ಕಲಾದಗಿ. ಪಾಂಗಿ ತಮ್ಮಣ್ಣ. ಪಾಂಗಿ ಅಪ್ಪಯ್ಯ. ಕಲ್ಯಾಣಿ ದುಂಡಪ್ಪ. ಮುಲ್ಲಾ. ಆರ್. ಪಿ. ಕುಲಕರ್ಣಿ. ಎಂ. ಪಿ. ಕುಲಕರ್ಣಿ. ಶೇಖ ಬುಕ್ಕಿಟಗಾರ ವಸ್ತ್ರದ" [೩೦] ಈ ರೀತಿ ಮಿತ್ರ ಬಳಗವಿತ್ತು.

ಆಗ ಅವರ ವರ್ಗ ಶಿಕ್ಷಕರಾಗಿದ್ದ ಮಂಗಸೂಳಿ ಅವರು ಮಾತು ಮಾತುಗಳಲ್ಲಿ ಯಾವ ರೀತಿ ಹಾಸ್ಯ ಹೊರಹೊಮ್ಮಿಸುತ್ತಿದ್ದರೆಂಬುದನ್ನು ಚಿಟ್ಟಿಯವರು ಹೇಳುತ್ತಾರೆ. "ನಮ್ಮ ವರ್ಗದಲ್ಲಿದ್ದ ಹನುಮಂತ ಪಲ್ಲೇದನಿಗೆ ಜಗಜಟ್ಟಿ ಹನುಮಪ್ಪನ ಕುಂಡ್ಯಾಗ ಲಂಗೋಟಿ ಎಂದು ಚೇಷ್ಟೆ ಮಾಡುತ್ತಿದ್ದರು". [೩೧]

ಈ ರೀತಿ ಬಾಲ್ಯದ ದಿನಗಳನ್ನು ಆನಂದದಿಂದ ಕಳೆದ ಚಿಟ್ಟಿಯವರು ಪ್ರಾಥಮಿಕ ಹಂತದಲ್ಲೇ ಕಲೆಯ ಬಗ್ಗೆ ಹೆಚ್ಚು ಆಸಕ್ತಿಯನ್ನು ಹೊಂದಿದವರಾಗಿದ್ದರಲ್ಲದೇ ತಮ್ಮ ಕಲಾ ಪ್ರತಿಭೆ ಬೆಳಗಲು ದೈವೀ ಶಕ್ತಿಯ ಒಲವೂ ತಮಗೊದಗಿದ್ದನ್ನು ಈ ರೀತಿ ಹೇಳುತ್ತಾರೆ. ಅವರ ತಾಯಿಯವರು ಚಿಟ್ಟಿಯವರು ಚಿಕ್ಕವರಿದ್ದಾಗ ದಿನಾಲೂ ಗಚ್ಚಿನಮಠಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಇದು ಪರಿಪಾಠವಾಗಿ ಮುಂದೆ ದೊಡ್ಡವರಾದ

---

೨೮. ಮಹಾಲಿಂಗ ಯಾಳಗಿ (ಸಂ.) : ಕಲಾತಪಸ್ವಿ ಎಂ. ವಿ. ಚಿಟ್ಟಿಯವರ ಅಭಿನಂದನ ಗ್ರಂಥ. ಪುಟ ೫೨

೨೯. ಚಿಟ್ಟಿಯವರು ಬರೆದ ಅಪ್ರಕಟಿತ ಹಸ್ತಪ್ರತಿ

೩೦. ಎಂ. ವಿ. ಚಿಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೮

೩೧. ಎಂ. ವಿ. ಚಿಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೮

ಮೇಲೆ ತಾವೇ ದಿನಾಲೂ ಊದಿನಕಡ್ಡಿ ತೆಗೆದುಕೊಂಡು ಮಠಕ್ಕೆ ಹೋಗುವ ರೂಢಿ ಇತ್ತು. ಇದರ ಜೊತೆಗೆ ಅವರು ದಿನಾಲೂ ನಸುಕಿನಲ್ಲಿ ಶಿವಯೋಗಿಗಳ ಮಠಕ್ಕೆ ಹೋದಾಗ ಅವರ ಕೋಣೆಯ ಮುಂದೆ ಕಸಗೂಡಿಸಿ ರಂಗೋಲಿಹಾಕಿ ಬರುತ್ತಿದ್ದರು. ಶಿವಯೋಗಿಗಳು ಕೋಣೆಯ ಬಾಗಿಲನ್ನು ತೆಗೆದು " ಏನಿದು ಎಂಥಾ ಛಲೋ ರಂಗೋಲಿ ಹಾಕ್ಯಾರ. ಯಾರು ಹಾಕಿದವರು ಎಂದು ತಮ್ಮ ಸೇವಾಮರಿಗಳನ್ನು ಕೇಳುತ್ತಿದ್ದರಂತೆ "[೩೨] ಒಂದು ದಿನ ಎಂದಿನಂತೆ ಚೆಟ್ಟಿಯವರು ರಂಗೋಲಿಯನ್ನು ಹಾಕುವ ಸಂದರ್ಭದಲ್ಲಿ ಶಿವಯೋಗಿಗಳು ತಮ್ಮ ಕೋಣೆಯ ಬಾಗಿಲು ತೆರೆದು ಬಂದವರೇ ಅವರ ಕೈಹಿಡಿದರು." ಶಿವಯೋಗಿಗಳವರು ನನ್ನ ಮೈದಡವುತ್ತ ಯಾರೋs ಬಾಳಾ ಯಾರ ಮಗಾ ನೀ ಎಂದಾಗ. ಆ ಅಮೃತ ಸ್ಪರ್ಶ ನನ್ನ ದೇಹದಲ್ಲಿ ದೈವ ಚೈತನ್ಯವನ್ನು ಹರಿಸಿತ್ತು. ನಾನು ನಡುಗುತ್ತ ಬುದ್ಧಿ.... ನಾ.... ನಾ ಚೆಟ್ಟಿ ಬಸೆಟಪ್ಪನವರ ಮಗಾ ಎಂದಾಗ ಶಿವಯೋಗಿಗಳು ನನ್ನ ಎರಡು ಕೈಗಳನ್ನು ತಮ್ಮ ಹಸ್ತದಲ್ಲಿರಿಸಿಕೊಂಡು ಬಲಗೈ ಬೆರಳು ನೀವುತ್ತ ಏನ ಛಂದs ರಂಗೋಲಿಹಾಕಿ ಬಾಳಾ.... ನಾಲ್ಕೈದು ತಿಂಗಳಿಂದ ದಿನಾ ನಾವೂ ನೋಡಿ ಆನಂದ ಪಡ್ತಿದ್ವಿ.... ನಿನ್ನ ಈ ಕೈಯ್ಯಾಗ ಅದ್ಭುತ ಶಕ್ತಿ ಐತಿ ಅದನ್ನ ಸದುಪಯೋಗ ಪಡಿಸಿಕೋ ಬಾಳ ಎಂದು ಹೇಳಿ ಕೈ ತುಂಬ ಕಲ್ಲುಸಕ್ಕರಿ ಉತ್ತತ್ತಿಕೊಟ್ಟು ಆಶೀರ್ವದಿಸಿದರು ".[೩೩] ಎಂಬ ಅಂದಿನ ಆ ನೆನಪು. ಅನುಭವ. ಸ್ಪರ್ಶಗಳನ್ನು ಇಂದೂ ನೆನಪು ಮಾಡಿಕೊಂಡಾಗಲೆಲ್ಲ ಚೆಟ್ಟಿ ಅವರ ಮೈ ಜುಂ ಎನ್ನುತ್ತದೆಯಂತೆ. ಆ ಹರಕೆಯ ಸದುಪಯೋಗ ಅವರ ಕಲಾಕೃತಿಗಳಲ್ಲಿ ಇಂದಿಗೂ ಮಾಸದೆ ಉಳಿದಿದೆ. ಈಗ ಅವರಿಗೆ ತೊಂಬತ್ನಾಲ್ಕು ವರ್ಷ ವಯಸ್ಸು. ಸತತ ಪ್ರಯತ್ನ: ಸಾಧನೆಯ ಜೊತೆಗೆ ದೈವದ ಒಲುಮೆ ಇದ್ದಾಗ ಸಾಧನೆಯ ಗುರಿ ತಲುಪಲು ಸಾಧ್ಯ. ಚೆಟ್ಟಿಯವರ ಜೀವನಕ್ಕೆ ಈ ಮಾತು ತುಂಬ ಅನ್ವಯವಾಗುವಂತಹುದು.

೧೯೨೪ ರಲ್ಲಿ ಚೆಟ್ಟಿಯವರು ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತಾಗ ಅವರ ಚಿಕ್ಕಪ್ಪನವರಿಗೆ ಶಿರಸ್ತೇದಾರರಾಗಿ ಬಡತಿಹೊಂದಿ ಬೆಳಗಾವಿಗೆ ವರ್ಗವಾಯಿತು. ಚೆಟ್ಟಿಯವರು ಬೆಳಗಾವಿಗೆ ಬಂದರು. ಚಿಕ್ಕಂದಿನಿಂದಲೇ ಕಲೆಯಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡ ಇವರಿಗೆ ಕಲಾಶಾಲೆ (ಆರ್ಟ ಸ್ಕೂಲ) ಗೆ ಸೇರಬೇಕೆಂಬ ತವಕ ಆಗ ಹುಟ್ಟಿಕೊಂಡಿತು. ಆಗ ಅವರ ಮನಸ್ಸಿನಲ್ಲಿ ದ್ವಂದ್ವ ಪ್ರಾರಂಭವಾಯಿತು. " ಒಂದು ಕಡೆ ಕಲೆ ಎಳೆಯುತ್ತಿದ್ದರೆ ಇನ್ನೊಂದೆಡೆ ಬಿ.ಎ.. ಎಲ್‌ಎಲ್.ಬಿ. ಮುಗಿಸಬೇಕು ನಮ್ಮ ಚಿಕ್ಕಪ್ಪನವರಂತೆ ಸರಕಾರಿ ಅಧಿಕಾರಿಯಾಗಬೇಕೆಂಬ ಸೆಳೆತ ಈ ಎಳೆತ-ಸೆಳೆತಗಳ ಮಧ್ಯದಲ್ಲಿ ಹೊಯ್ದಾಡಿ ಒಂದು ನಿರ್ಧಾರಕ್ಕೆ ಬಂದೆ "[೩೪] ಆ ನಿರ್ಧಾರ ಯಾವುದೆಂದರೆ ಕಲೆಯ ಅಭ್ಯಾಸ ಮಾಡುವುದು. ಈ ಕಲಾ ಅಧ್ಯಯನಕ್ಕೆ ಮುಂಬಯಿಗೆ ಹೋಗುವ ಸಂಕಲ್ಪವನ್ನು ಆ ಸಂದರ್ಭದಲ್ಲಿ ತೆಗೆದುಕೊಂಡರು.

ಒಂದು ದಿನ ಆ ಸಮಯ ಕೂಡಿ ಬಂದಿತು. ಚೆಟ್ಟಿಯವರು ತಾವು ಮುಂಬೈಗೆ ಕಲಾ ಅಭ್ಯಾಸಕ್ಕಾಗಿ ಹೋಗುತ್ತೇನೆಂದು ಹೇಳಿದಾಗ ಚಿಕ್ಕಪ್ಪ (ಕಾಕಾ) ಅವರಿಗೆ ಆಕಾಶವೇ ತಲೆಯ ಮೇಲೆ ಕಳಚಿ ಬಿದ್ದಂತಾಯಿತು.

---

೩೨. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೮

೩೩. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೯

೩೪. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೦

ಆಗ ಕಲಿಯುವದಕ್ಕೆ ಶಿರಸಂಗಿ ಲಿಂಗರಾಜ ಟ್ರಸ್ಟ ಫಂಡಿನಿಂದ ಸ್ಕಾಲರ್‌ಶಿಪ್ ಹಣವೂ ದೊರೆಯಿತು. ಈ ಎಲ್ಲ ಅನುಕೂಲತೆಗಳಿಂದ ೧೯೨೪ ರಲ್ಲಿ ಮುಂಬಯಿಯ ಜೆ. ಜೆ. ಸ್ಕೂಲ ಸೇರಿ ಸಮಗ್ರ ಆರು ವರ್ಷಗಳ ಕಾಲ ಡ್ರಾಯಿಂಗ ಹಾಗೂ ಪೇಂಟಿಂಗದಲ್ಲಿ ಅಭ್ಯಾಸ ಮಾಡಿ ಡಿಪ್ಲೋಮಾ ಪದವಿ, ಚಿನ್ನ ಹಾಗೂ ಬೆಳ್ಳಿ ಪದಕದೊಂದಿಗೆ ಪಾಸು ಮಾಡಿದರು. ಅವರು ಮುಂಬೈನಲ್ಲಿ ಅಭ್ಯಾಸ ಮಾಡಿದ ರೀತಿ ಹಾಗೂ ಆಗಿನ ಕಲಾ ಶಿಕ್ಷಣದ ಕುರಿತು ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ.

೧೯೩೪ ರಲ್ಲಿ ಡಿಪ್ಲೋಮಾ ಮುಗಿಸಿಕೊಂಡು ಸೊಲ್ಲಾಪುರಕ್ಕೆ ಬಂದರು. ಅಲ್ಲಿ ಶ್ರೀ ಮಲ್ಲಿಕಾರ್ಜುನಪ್ಪಣ್ಣಾ ಲಂಬಿ ಅವರು ಆಶ್ರಯ ಕೊಟ್ಟರು. ಅವರ ಮನೆಯಲ್ಲಿ ಪ್ರಸಾದ ತೀರಿಸಿಕೊಂಡು ಕಾಡಾದಿ ಅಣ್ಣಾ ಅವರ ಅಂಗಡಿಯ ಮೂರನೆಯ ಅಂತಸ್ತಿನಲ್ಲಿ ಕೆಲಸ ಮಾಡುತ್ತಿದ್ದರು. " ನನ್ನ ಕಲೆಯ ಬಗ್ಗೆ ಅತ್ಯಂತ ಅಭಿಮಾನವಿರಿಸಿಕೊಂಡವರಲ್ಲಿ ಅಲ್ಲಿಯ ವಾರದ ಬಾಬಾ ಸಾಹೇಬರು ಒಬ್ಬರು "[೩೬] ಎಂದು ಸ್ಮರಿಸುವ ಚೆಟ್ಟಿಯವರು ಇಲ್ಲಿಯೇ ಮೊಟ್ಟಮೊದಲು ತಮ್ಮ ವೃತ್ತಿಜೀವನ ಆರಂಭಿಸಿದ್ದು.

" ಒಬ್ಬನಲ್ಲಿ ಪ್ರತಿಭೆಯಿದೆ ಎಂಬುದನ್ನು ಕಂಡುಕೊಂಡ ಪ್ರಜ್ಞಾವಂತರು. ಹಿರಿಯ ಅನುಭವಿಕರು. ಇಂತಹ ಪ್ರತಿಭಾವಂತರನ್ನು ಎಲ್ಲಿಯೇ ಆದರೂ ಸಹಜವಾಗಿ ಗೌರವಿಸುತ್ತಾರೆ "[೩೭] ಎಂಬಂತೆ ಚೆಟ್ಟಿಯವರಿಗೂ ಅಂತಹ ಅವಕಾಶ ದೊರೆಯಿತು.

ಒಂದು ಸಲ ವಾರದ ಬಾಬಾ ಸಾಹೇಬರು ಚೆಟ್ಟಿಯವರನ್ನು ತಮ್ಮಲ್ಲಿಗೆ ಕರೆಸಿಕೊಂಡು ' ಚಿತ್ರಮಯ ಜಗತ್ತು' ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಚಿತ್ರಸ್ಪರ್ಧೆಯ ಜಾಹೀರಾತನ್ನು ತೋರಿಸಿದರು. ಅದಕ್ಕೆ ಪ್ರಥಮ ಬಹುಮಾನ ೫೦೦ ರೂ. ದ್ವಿತೀಯ ಬಹುಮಾನ ೩೦೦ ರೂ. ಹಾಗೂ ತೃತೀಯ ಬಹುಮಾನ ೨೦೦ ರೂ. ಗಳನ್ನು ಇಡಲಾಗಿತ್ತು. ಔಂಧ ಸಂಸ್ಥಾನದ ಶ್ರೀಪತರ ಪ್ರತಿನಿಧಿಗಳಾದ ಬಾಳಾಸಾಹೇಬ ಮಹಾರಾಜರು ಇಟ್ಟ ಸ್ಪರ್ಧೆಯಾಗಿತ್ತು. ಮುರಿಗೆಪ್ಪನವರು ಕಲಾಕಾರರೆಂದು ತಿಳಿದು ಅವರನ್ನು ಕರೆಸಿ " ಇಲ್ಲಿ ನೋಡ್ರಿ ಮುರಿಗೆಪ್ಪನವರs ಅಖಿಲ ಭಾರತೀಯ ಚಿತ್ರಕಲಾ ಸ್ಪರ್ಧೆ ಭಗವದ್ಗೀತೆಯ ಹದಿನಾಲ್ಕನೆಯ ಅಧ್ಯಾಯದಲ್ಲಿ ಬರುವ ' ವಿಶ್ವರೂಪದರ್ಶನ 'ದ ಚಿತ್ರ ತೆಗೆದವರಿಗೆ ಬಹುಮಾನಗಳನ್ನಿಟ್ಟಿದ್ದಾರೆ. ನೀವು ಇದರಲ್ಲಿ ಭಾಗವಹಿಸಿರೆಂದು "[೩೮] ಆದೇಶ ನೀಡಿದರು.

ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸುವದಾಗಿ ಒಪ್ಪಿಕೊಂಡುಬಂದ ಮುರಿಗೆಪ್ಪನವರಿಗೆ ಶ್ರೀ ಹರಿಯ ಆ ವಿಶ್ವರೂಪ ತಮ್ಮಂಥವರಿಂದ ದರ್ಶನ ಮಾಡಿಸಲು ಸಾಧ್ಯವಾದೀತೇ ಎಂದು ವಿಚಾರಮಾಡಿ. ಭಗವದ್ಗೀತೆಯ ಹದಿನಾಲ್ಕನೆಯ ಆ ವಿಶ್ವರೂಪದರ್ಶನದ ಪ್ರಸಂಗವನ್ನು ಒಂದು ತಿಂಗಳವರೆಗೆ ಅಧ್ಯಯನ ಮಾಡಿದರು. ಇದರಿಂದ ಅವರು ಯಾವದೇ ಒಂದು ಚಿತ್ರರಚನೆ ಮಾಡುವದಕ್ಕಿಂತ ಮೊದಲು ಆ ವಿಷಯದ ಬಗ್ಗೆ ಆಳವಾಗಿ ಅಧ್ಯಯನವನ್ನು

---

೩೬. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೮

೩೭. ಅನ್ನದಾನಿ ಹಿರೇಮಠ : ಎಂ. ಎ. ಚೆಟ್ಟಿ. ಪುಟ ೫

೩೮. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೮



ಎಂ. ಎ. ಚೆಟ್ಟಿಯವರ ಮನೆ - ಅಥಣಿ



ಎಂ. ಎ. ಚೆಟ್ಟಿಯವರು ಬಾಲ್ಯದಲ್ಲಿ ವಿದ್ಯಾಭ್ಯಾಸ ಮಾಡಿದ ಅಥಣಿಯ ಶಾಲೆಯಿದು, [illegible] [illegible]

ಮಾಡುತ್ತಿದ್ದರು. " ಸಾವಿರಾರು ವರ್ಷಗಳ ಹಿಂದಿನ ಆ ವಿಭೂತಿ ಪುರುಷನನ್ನು ಅವರ ಪವಾಡಮಯ ಬದುಕನ್ನು ತಂದು ಮತ್ತೆ ಕಣ್ಣೆದುರಿಗೆ ನಿಲ್ಲಿಸಿದಂತಾಗುತ್ತದೆ. ಆ ಜೀವಂತಿಕೆಯ ಭಾವನೆಗಳ ಚಿತ್ರಗಳು ನೋಡುಗನ ಮನಸ್ಸಿನ ಭಾವನೆಗಳಿಗೆ ನೇರವಾಗಿ ಸ್ಪಂದಿಸುವಂತಹ ಸಂವಹನ ಶಕ್ತಿ ಹೊಂದಿದೆ. ಇಷ್ಟೆಲ್ಲ ವಿಷಯದ ಅಧ್ಯಯನ ಮಾಡಿದ ನಂತರವೂ ಆ ಚಿತ್ರ ಹೇಗೆ ತೆಗೆಯಬೇಕು ಎಂಬ ಆಲೋಚನೆಯಲ್ಲಿ ಊಟ. ನಿದ್ದೆ ಸಹಿತ ಮರೆತುಹೋಗಿತ್ತು. ಎಷ್ಟು ಸ್ಕೆಚ್ ಮಾಡಿದರೂ ನನ್ನ ಮನಸ್ಸಿಗೆ ಹಿಡಿಸಲಿಲ್ಲ ಎನ್ನುವ ಚಿಟ್ಟಿಯವರು ಸತತ ಪ್ರಯತ್ನ ಮಾಡಿ 'ವಿಶ್ವರೂಪದರ್ಶನ'ದ ಪೇಂಟಿಂಗ ಮಾಡಲು ಪ್ರಾರಂಭಿಸಿದರು. ಹಗಲೂ ರಾತ್ರಿ ಬಿಡದೆ ೧೫ ದಿಗಳಲ್ಲಿ ಆ ಚಿತ್ರ ಮುಗಿಸಿರು. ಯಾವಾಗಲೂ ಮುರಿಗೆಪ್ಪನವರು ಚಿತ್ರ ತೆಗೆಯುವ ಮೊದಲು ಆರಾಧ್ಯ ದೈವ ಶಿವಯೋಗಿಯ ಸ್ಮರಣೆಯನ್ನು ಮಾಡುತ್ತಿದ್ದರು. ಆ ಚಿತ್ರ ಅತ್ಯದ್ಭುತವಾಗಿ ಮೂಡಿಬಂದಿತು. ೪' x ೩' ಅಡಿ ಅಳತೆಯ ತೈಲವರ್ಣದಿಂದ ಚಿತ್ರಸಲಾಗಿತ್ತು. ಆ ಸ್ಪರ್ಧೆಗೆ ಚಿತ್ರಕಲಾವಿದರು ಸ್ಪರ್ಧಿಸಿದ್ದರು. ಆ ಚಿತ್ರಕಲಾ ಸ್ಪರ್ಧೆಯ ಪರಿಣಾಮ ಹೊರಬಿದ್ದಾಗ ನನಗೇ ಆಶ್ಚರ್ಯವಾಯಿತು. ಪ್ರಥಮಬಹುಮಾನ ನನಗೇ ಬಂದಿತ್ತು. ದ್ವಿತೀಯ ಬಹುಮಾನ ಮಹಾರಾಜರ ಆಶ್ರಯದಲ್ಲಿದ್ದ ಕೋಟ್ಯಾಳಕರ ಕುಂಬಾರ ಅವರಿಗೆ ಹಾಗೂ ತೃತೀಯ ಬಹುಮಾನವನ್ನು ಚಿಮೂಲಕರ ಪಡೆದಿದ್ದರು "[೩೮] ಹೀಗೆ ಈ ಸ್ಪರ್ಧೆ ಅವರ ಪ್ರತಿಭೆಯನ್ನು ಅಖಿಲ ಭಾರತ ಮಟ್ಟಕ್ಕೇರಿಸಿತು. ಮತ್ತು ಅವರ ವೃತ್ತಿಜೀವನ ಪ್ರಾರಂಭವಾಯಿತು. ಅದರ ಮುಂದುವರಿಕೆ ಹಾಗೂ ಅವರ ಕಲಾ ಸಾಧನೆಯ ಪರಿಚಯವನ್ನು ಮುಂದಿನ ಅಧ್ಯಾಯಗಳಲ್ಲಿ ಮಾಡಲಾಗಿದೆ.

ಸೊಲ್ಲಾಪುರದಲ್ಲಿದ್ದಾಗ ತಮ್ಮ ಚಿಕ್ಕಪ್ಪನವರ ಆರ್ಥಿಕ ಪರಿಸ್ಥಿತಿಯನ್ನರಿತು ಸಾಕಷ್ಟು ಚಿತ್ರಗಳ ರಚನೆ ಮಾಡಿ ಬಂದ ಹರವನ್ನು ಆಗಾಗ್ಗೆ ಕಳಿಸುತ್ತಿದ್ದರು. ಅವರಿಗಾಗಿ ರೇಶ್ಮಿರುಮಾಲು-ಕೋಟು. ಶರ್ಟಗಳು ಬಟ್ಟೆ ಧೋತರ ತೆಗೆದುಕೊಂಡು ಹೋಗುತ್ತಿದ್ದರು. ಆ ಕಾಲದಲ್ಲಿ ಜರ್ಮನ್‌ದ ಸಿಲ್ವರ್ ತಾಟುಗಳು (ತಾಬಂಡಿಗಳು) ಅತ್ಯಂತ ಪ್ರಸಿದ್ಧವಾಗಿದ್ದವೆಂದು ತಿಳಿದುಬರುತ್ತದೆ. ಈಗಿನ ಸ್ಟೀಲು ತಟ್ಟೆಗಳಲ್ಲಿ ಊಟಮಾಡುವುದು ಪ್ರತಿಷ್ಠಿತವಾದಂತೆ ಆಗ ಜರ್ಮನ್ ಸಿಲ್ವರ್ ಬಳಸುತ್ತಿದ್ದರು. ಆಗಿನ ಪೇಟೆಯ ಬಗ್ಗೆ ಆ ಕಾಲದ ಹಣದ ಮೌಲ್ಯವನ್ನು ನಾವಿಲ್ಲಿ ಗಮನಿಸಬಹುದು. " ಆಗ ಒಂದು ರೂಪಾಯಿಗೆ ಒಂದು ಜರ್ಮನ್ ಸಿಲ್ವರ್ ತಾಟು ಒಂದುವರೆ ರೂಪಾಯಿಗೆ ಒಂದು ಚರಿಗೆ. ಎಂಟಾಣೆಗೊಂದು ಲೋಟ. ನಾನು ಆಗಾಗ್ಗೆ ಅವುಗಳನ್ನು ಊರಿಗೆ ಒಯ್ದು ಸಾಕಷ್ಟು ಸಾಮಾನುಗಳನ್ನು ಮಾಡಿದ್ದೆ "[೩೯] ಎಂದು ಮುರಿಗೆಪ್ಪನವರು ತಮ್ಮ ಸೊಲ್ಲಾಪೂರದ ವಾಸ್ತವ್ಯ ತಮ್ಮ ಬದುಕಿನಲ್ಲಿ ಒಂದು ತಿರುವನ್ನು ತಂದಿತೆಂದು ಹೇಳಿದ್ದಾರೆ.

ಕೌಟುಂಬಿಕ ಜೀವನ :

೧೯೨೮ ರಲ್ಲಿ ಚಿಟ್ಟಿಯವರ ಮದುವೆ ಆಯಿತು. ಅಥಣಿಯ ಜಿಂರಘರವಾಡ ಮನೆತನದ ಹೆಣ್ಣುಮಗಳು - ಅವರ ಸೋದರಮಾವನಾದ ಶ್ರೀ ಸಾತಪ್ಪ ಹಾಗೂ ಸೀಲಮ್ಮನವರ ಮಗಳಾದ ಸುಂದರಮ್ಮನವರನ್ನು

---

೩೮. ಎಂ. ವಿ. ಚಿಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೯

೩೯. ಎಂ. ವಿ. ಚಿಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೩೪

ಮದುವೆಯಾದರು. ಸತಿಯಾಗಿ ಬಂದ ಸುಂದರಮ್ಮ ಅಪರೋಕ್ಷವಾಗಿ ಕಲಾವಿದರ ಕಲೆಯ ಕಾಯಕದಲ್ಲಿ ಅಷ್ಟೇ ಅಲ್ಲದೆ ಪರೋಕ್ಷವಾಗಿ ಅತಿಥಿ ಸತ್ಕಾರದಲ್ಲೂ ಸಹಭಾಗಿಯಾಗಿದ್ದರು. ಅವರ ಮಗ ಬಸವರಾಜ ತಾಯಿಯವರ ಬಗ್ಗೆ ಈ ರೀತಿ ಹೇಳುತ್ತಾರೆ " ತಾಯಿಯವರು ನಮ್ಮ ತಂದೆಯ ದಿನನಿತ್ಯದ ಕೆಲಸದಲ್ಲಿ ಸಹಾಯ ಮಾಡ್ತಿದ್ರು. ಬಹಳ ಚೆನ್ನಾಗಿ ನೋಡಿಕೊಳ್ಳತಾ ಇದ್ರು ಇವತ್ತಿಗೂ ಜನ ಹೇಳ್ತಾರ. ' ಮನಿಗೆ ಹೋದಾಗ ನಿಮ್ಮ ತಾಯಿಯವರದು ಸತ್ಕಾರ ಅಗಾಧ ಎಂದು ' ನಮ್ಮ ಅಜ್ಜ ಬಸೆಟೆಪ್ಪನವರ ಮನ್ಯಾಗ ಮೂರ ಹೊತ್ತು ಲಿಂಗಪೂಜಾ ಮತ್ತು ಒಬ್ಬ ಸ್ವಾಮಿಗಳು ಇರಲೇಬೇಕು " [೪೦] ಹೀಗೆ ಎಲ್ಲ ಕೆಲಸಗಳನ್ನು ಸುಂದರಮ್ಮ ಜಾಣ್ಮೆಯಿಂದ ನಿಭಾಯಿಸಿಕೊಂಡು ಹೋಗುತ್ತಿದ್ದರು.

ಮುಂಬೈಯಿಂದ ನೇರವಾಗಿ ಸೊಲ್ಲಾಪೂರಕ್ಕೆ ಬಂದು ಅಲ್ಲಿ ಎಂಟು ವರ್ಷಗಳ ಕಾಲ ಕಲಾವೃತ್ತಿಯನ್ನು ಕೈಗೊಂಡ ಸಂದರ್ಭದಲ್ಲಿ ಬೆಳಗಾವಿಯಿಂದ ಗದುಗಿಗೆ ಮಾಮಲೇದಾರರಾಗಿ ಬಂದಿದ್ದ ಚಿಕ್ಕಪ್ಪ ಅವರು ಸೊಲ್ಲಾಪುರ ಬಿಟ್ಟು ಬರಬೇಕೆಂದು ತಾರು ಕೊಟ್ಟಿದ್ದರು. ಅಂದೇ ಸೊಲ್ಲಾಪುರಕ್ಕೆ ಶರಣು ಹೊಡೆದು ಗದುಗಿಗೆ ಬಂದರು. ಆಗ ಗದುಗಿನ ಜೋಡು ಹನುಮಂತ ದೇವರ ಗುಡಿಯ ಎದುರಿನ ಮನೆಯಲ್ಲಿ ಇವರ ಚಿಕ್ಕಪ್ಪ ವಾಸವಾಗಿದ್ದರು. " ನಾನು ಗಂಟು ಮೂಟೆ ಕಟ್ಟಿಕೊಂಡು ಬಂದದ್ದನ್ನು ನೋಡಿ ಸಂತೋಷಪಟ್ಟರಲ್ಲದೆ ನಿಜವಾಗಿಯೂ ನೀನೇ ನನ್ನ ಹಿರಿಯ ಮಗ. ನಿನ್ನಿಂದಲೇ ನಮ್ಮ ಮನೆತನ ಬೆಳಗಬೇಕು ಎಂದು ಆಶೀರ್ವದಿಸಿದರು " [೪೧] ಮುಂದೆ ಗದುಗಿನಲ್ಲಿಯೇ ಇರುವ ನಿರ್ಧಾರವನ್ನು ಚೆಟ್ಟಿಯವರು ತೆಗೆದುಕೊಂಡರು.

೧೯೪೦ ರಲ್ಲಿ ಅವರ ಕಾಕಾ ಮಾಮಲೇದಾರಕಿಯಿಂದ ನಿವೃತ್ತಿಹೊಂದಿ ಅಥಣಿಗೆ ಹೋದರು. ಹೋಗುವ ಮುನ್ನ ಇಡೀ ಸಂಸಾರದ ಭಾರ ಇವರ ಮೇಲೆ ಹಾಕಿದರು. ಹಾಗೇ ಒಂದು ಮಾತನ್ನು ತಿಳಿಹೇಳಿದರು. " ಉದಯ ಆಗೋ ಸೂರ್ಯನನ್ನು ಎಲ್ಲರೂ ಪೂಜೆ ಮಾಡ್ತಾರ. ಮುಳಗೋ ಸೂರ್ಯನ್ನ ಯಾರೂ ಪೂಜೆ ಮಾಡೋದಿಲ್ಲ. ಬದುಕಿನಲ್ಲಿ ನಾವು ನಮ್ಮ ಶೀಲ ಸಚ್ಚಾರಿತ್ರ್ಯದಿಂದ ಪ್ರತಿಷ್ಠೆಯನ್ನು ಗಳಿಸಿಕೊಂಡರೆ ಮಾತ್ರ ಎಲ್ಲರ ಬಾಯಿಯಲ್ಲಿ ಉಳಿಯುತ್ತೇವೆ. ಹಣ ಕಳೆದುಕೊಂಡರೆ ಮತ್ತೆ ದುಡಿದು ಗಳಿಸಬಹುದು. ಗುಣ ಕಳೆದುಕೊಂಡರೆ ಮುಗಿಯಿತು. ಜೀವನ ಇತಿಶ್ರೀ " [೪೨] ಎಂದು ಎದುರಿಗೆ ಕೂಡ್ರಿಸಿಕೊಂಡು ಹೇಳಿದ್ದರು.

ಅತ್ಯಂತ ಪ್ರಾಮಾಣಿಕ ದಕ್ಷ ಸೇವೆಯನ್ನು ಮಾಡುತ್ತಿದ್ದ ಅವರ ಚಿಕ್ಕಪ್ಪನವರು ಎಂದೂ ಪರಧನದ ಆಮಿಷಕ್ಕೆ ಒಳಗಾದವರಲ್ಲ. ಇದರಿಂದ ಸಾಲದ ಹೊರೆ ಸಾಕಷ್ಟಾಗಿತ್ತು. " ನಾನು ಶಿರಭಾವ ಚಿತ್ರ (ಪೋರ್ಟ್ರೇಟ್) ತೆಗೆಯುವ ಮೂಲಕ ನಮ್ಮ ಚಿಕ್ಕಪ್ಪನವರು ಮಾಡಿದ ಸಾಲವನ್ನೆಲ್ಲ ತೀರಿಸಿದೆನಲ್ಲದೆ. ಕುಟುಂಬದ ಭಾರವನ್ನೂ ಹೊತ್ತೆನು " [೪೩] ಎನ್ನುವ ಚೆಟ್ಟಿಯವರಿಗೆ ಚಿತ್ರಗಳನ್ನು ರಚಿಸುವುದೇ ಅವರ ಉಪಜೀವನಕ್ಕೆ ಆಧಾರವಾಯಿತು. ಅಂದಿನಿಂದ ಬೇರೆ

---

೪೦. ಬಸವರಾಜ ಚೆಟ್ಟಿಯವರ : ಸಂದರ್ಶನ ೬-೮-೨೦೦೦. ವಿಜಾಪುರ

೪೧. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೩೪

೪೨. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೩೪

೪೩. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೩೫

ಯಾರಿಂದಲೋ ಸಾಲ ಮಾಡಿದ್ದರೂ ಸಹ ಅವರಿಗೆ ಬೇಕಾದ ಚಿತ್ರ ತೆಗೆದುಕೊಟ್ಟು ಆ ಸಾಲವನ್ನು ತೀರಿಸಿ, ಋಣಮುಕ್ತರಾದರಂತೆ. ಮನುಷ್ಯರ ಜೀವನದಲ್ಲಿ ಸುಖ ದುಃಖಗಳು ಅನಿವಾರ್ಯ. ಪರಿಮಿತಗಳು ಇದ್ದ ಹಾಗೆ. ಅವರ ಚಿಕ್ಕಪ್ಪನ ಮಗ ಗುರಪ್ಪನವರ ಮ್ಯಾಟ್ರಿಕ್ ಪರೀಕ್ಷೆಯ ಹಣ ತುಂಬುವ ಸಲುವಾಗಿ ಅಷ್ಟಗಿ ವಕೀಲರ ಹತ್ತಿರ ಸಾಲ ಮಾಡಿದ್ದರು. ಅಷ್ಟಗಿ ವಕೀಲರು ಸಾಲದ ಹಣದ ವಿಷಯವಾಗಿ ಪತ್ರ ಬರೆದುದರಿಂದ ಒಂದು ದಿನ ಮುನ್ಸಿಫ ತಲ್ಲೂರ ಅವರು ಚಿಟ್ಟಿಯವರನ್ನು ತಮ್ಮ ಮನೆಗೆ ಬರಲು ಹೇಳಿಕಳಿಸಿದರು. ಆ ಸಮಯದಲ್ಲಿ ಚಿಟ್ಟಿಯವರ ಹತ್ತಿರ ಹಣವಿಲ್ಲದ್ದನ್ನು ಗಮನಿಸಿ ಅರ್ಥ ಮಾಡಿಕೊಂಡ ಶ್ರೀ ತಲ್ಲೂರ ಮುನ್ಸಿಫರು " ನೋಡ್ರಿ ಮುರಿಗೆಪ್ಪನವರ ನಮಗೊಂದು ಪೂಜಾ ಮಾಡಾಕ ಅಥಣಿ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳ ಚಿತ್ರ ಬರೆದುಕೊಡ್ರಿ. ಅಷ್ಟಗಿ ವಕೀಲರಿಗೆ ನೀವು ಕೊಡುವ ಹಣ ನಾವೇ ಕೊಡುತ್ತೇವೆ ಎಂದರು "[೪೪] ಹೀಗೆ ಸಾಲವನ್ನು ತೀರಿಸಿದ ಪ್ರಸಂಗಗಳು ಅನೇಕ.

ಮುಂಬಯಿಯಲ್ಲಿ ಕಲಾಭ್ಯಾಸವನ್ನು ಮಾಡಲು ಶಿರಸಂಗಿ ಟ್ರಸ್ಟ ಫಂಡ್ ಸ್ಕಾಲರ್‌ಶಿಪ್ ನೀಡಿ ಸಹಾಯ ಮಾಡಿತ್ತು. ಇದೇ ಸಮಯದಲ್ಲಿ ಶಿರಸಂಗಿ ಟ್ರಸ್ಟ ಫಂಡಿನವರಿಂದ ಇವರು ಪಡೆದ ಹಣ ೪೫೦ ರೂ. ಗಳನ್ನು ಪಾವತಿ ಮಾಡುವಂತೆ ಪತ್ರ ಬಂದಿತು. ತೊಂದರೆಗಳು ಬಂದರೆ ಮೇಲಿಂದ ಮೇಲೆ ಬರುತ್ತವೆ ಎನ್ನುವ ಮಾತಿನಂತೆ ತಮಗೆ ಬಂದ ಕಷ್ಟಗಳೆಲ್ಲ ಸತ್ವಪರೀಕ್ಷೆಗಾಗಿ ಎಂಬುದು ಅವರ ನಂಬಿಕೆಯಾಗಿತ್ತು. ಅಂತಹ ಸಂದರ್ಭದಲ್ಲಿ " ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವಾಗ ಶಿರಸಂಗಿ ಫಂಡಿನ ಹಣ ಹೇಗೆ ತುಂಬಬೇಕೆಂಬ ವಿಚಾರದಲ್ಲಿ ಬಿದ್ದಿರುವಾಗ ತಕ್ಷಣ ಯೋಚನೆಯೊಂದು ಹೊಳೆಯಿತು. ಅಲ್ಲಿಯವರೆಗೆ ದಾನವೀರ ಶಿರಸಂಗಿ ಲಿಂಗರಾಜರ ದೊಡ್ಡ ತೈಲ ಚಿತ್ರಗಳಿರಲಿಲ್ಲ. ಯಾರ ಹಣ ನನ್ನ ಈ ಕಲಾಧ್ಯಯನಕ್ಕೆ ಸಹಾಯ ಮಾಡಿತೋ ಅದೇ ಕಲೆಯನ್ನು ಬಳಸಿಕೊಂಡು ತೈಲ ಚಿತ್ರವನ್ನೇಕೆ ಮಾಡಬಾರದೆಂಬ ವಿಚಾರದಿಂದ ಆ ಕಮೀಟಿಗೆ ಪತ್ರ ಹಾಕಿದೆ "[೪೫] ಅದರಂತೆ ಚಿಟ್ಟಿಯವರು ಅವರ ಒಪ್ಪಿಗೆ ಪಡೆದು ೪' x ೩' ಅಳತೆಯ ಶ್ರೀ ಶಿರಸಂಗಿ ಲಿಂಗರಾಜರ ತೈಲ ಭಾವ ಚಿತ್ರವನ್ನು ತೆಗೆದುಕೊಟ್ಟರು. ಇಷ್ಟು ವರ್ಷಗಳಾದರೂ ಬಣ್ಣ ಮಾಸದೇ ಇಂದಿಗೂ ಆ ಟ್ರಸ್ಟಕಮೀಟಿಯ ಆಫೀಸಿನಲ್ಲಿ ಚಿತ್ರ ಕಂಗೊಳಿಸುತ್ತಿದೆ. ಇತ್ತೀತ್ತಲಾಗಿ ಆ ಚಿತ್ರದ ಬಣ್ಣ ಅಲ್ಲಲ್ಲಿ ಸ್ವಲ್ಪ ಬಿರುಕುಬಿಡುತ್ತಿರುವುದು ಕಂಡುಬರುತ್ತಿದೆ "[೪೬] ಹೀಗೆ ಹಣ ಹಿಂದಿರುಗಿಸಲಾಗದಿದ್ದರೂ ಚಿತ್ರಗಳನ್ನು ರಚಿಸಿಕೊಟ್ಟು ಆ ವ್ಯಕ್ತಿಗಳು ಕಲಾಕೃತಿಗಳಲ್ಲಿ ಚಿರಂತನವಾಗಿ ಉಳಿಯುವಂತೆ ಮಾಡಿ ಅವರ ಋಣದಿಂದ ಮುಕ್ತರಾಗಿದ್ದಾರೆ. ಹೀಗೆ ಪರಿಸ್ಥಿತಿಯ ಒತ್ತಡಗಳಿಗೆ ಸಿಲುಕಿ ಜೀವನ ನಡೆಸುತ್ತಿರುವಂಥ ಸಂದರ್ಭದಲ್ಲೇ ಅವ ದೊಡ್ಡ ಆಘಾತವೆಂದರೆ ಅವರ ಚಿಕ್ಕಪ್ಪ ಬಸೆಟೆಪ್ಪನವರು ೧೯೪೪ ರಲ್ಲಿ ಅಥಣಿಯಲ್ಲಿ ಕುದುರೆಯ ಮೇಲಿಂದ ಬಿದ್ದು ದುರ್ಮರಣಕ್ಕೆ ಈಡಾದರು. ಚಿಟ್ಟಿಯವರ ಬದುಕಿನಲ್ಲಿ ಇದೊಂದು ಮರೆಯಲಾರದ ದುಃಖದ ಪ್ರಸಂಗವಾಗಿದೆ. ತಂದೆಗಿಂತಲೂ ಹೆಚ್ಚಾಗಿ ಸಲುಹಿದ ಚಿಕ್ಕಪ್ಪ ಅವರ ಬಗ್ಗೆ ಚಿಟ್ಟಿಯವರಿಗೆ ತುಂಬಾ ಅಭಿಮಾನ. ಗೌರವ. ಪ್ರೀತಿ ಇತ್ತು

೪೪. ಎಂ. ಪಿ. ಚಿಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೩೫

೪೫. ಎಂ. ಪಿ. ಚಿಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೩೬

೪೬. ಬೆಳಗಾವಿಯ ಕ್ಷೇತ್ರ ಕಾರ್ಯಮಾಡಿದ ಸಂದರ್ಭ

ಅಂತೆಯೇ ಮೂರುನಾಲ್ಕು ದಿನ ಅಲ್ಲಿಯೇ ಇದ್ದು ಮನಮುಟ್ಟಿ ಸೇವೆಯನ್ನು ಮಾಡಿದರು. ನಾಲ್ಕು ದಿನಗಳವರೆಗೆ ಮೃತ್ಯುವಿನೊಂದಿಗೆ ಹೋರಾಟ ನಡೆಸಿ ಲಿಂಗೈಕ್ಯರಾದರು. ಈ ಸಂದರ್ಭದಲ್ಲಿ ಆಕಾಶವೇ ಅವರ ತಲೆಯ ಮೇಲೆ ಕಳಚಿ ಬಿದ್ದಂತಾಯಿತು. ಆದರೂ ಹಿರಿಯ ಮಗನಂತೆ ಎಲ್ಲ ಧೈರ್ಯ ತಂದುಕೊಂಡು ತಮ್ಮನಾದ ಗುರಪ್ಪನಿಗೆ ಸಮಾಧಾನ ಹೇಳಿ ತಮ್ಮದು ಮೊದಲಿನಿಂದಲೂ ಅವಿಭಕ್ತ ಕುಟುಂಬವಾಗಿರುವುದರಿಂದ ಈಗಲೂ ಅದೇ ರೀತಿ ಇರೋಣ ಎಂದು ತಮ್ಮನಿಗೆ ಹೇಳಿದರು. ' ತಾಮ್ರದ ದುಡ್ಡು ತಾಯಿಮಕ್ಕಳನ್ನ ಅಗಲಿಸುತ್ತದೆ ' ಎಂಬ ಗಾದೆ ಇದೆ. ಅದರಂತೆ ಸ್ವಲ್ಪ ಕಾಲದಲ್ಲಿ ಚಿಟ್ಟಿಯವರಿಗೆ ಮನಸ್ಸಿರದಿದ್ದರೂ ಅನಿವಾರ್ಯ ಕಾರಣಗಳಿಂದ ಕೋರ್ಟ ಮುಖಾಂತರವಾಗಿ ಹಿರಿಯರ ಆಸ್ತಿ ಪಾಲಾಯಿತು. ಅಷ್ಟರಲ್ಲಿ ಅಥಣಿಯಲ್ಲೇ ಇದ್ದ ಅವರ ತಮ್ಮ ಶ್ರೀ ಶೈಲಪ್ಪ ೧೯೪೨ ರಲ್ಲಿ ಪ್ಲೇಗದಿಂದ ತೀರಿಕೊಂಡ. ಇದರಿಂದಾಗಿ ಇವರ ಆರ್ಥಿಕ ಸ್ಥಿತಿ ಇನ್ನೂ ಹದಗೆಟ್ಟಿತು ಯಾಕೆಂದರೆ " ಅವನ ಹೆಂಡತಿ ಇಬ್ಬರು ಮಕ್ಕಳು ಗದುಗಿಗೆ ಬಂದಿದ್ದರು. ಅವರು ಮೂವರಲ್ಲದೇ ನನ್ನ ಹೆಂಡತಿ ನಾಲ್ವರು ಮಕ್ಕಳು. ನನ್ನ ತಾಯಿ ಒಟ್ಟು ೧೦ ಜನ ಮೇಲೆ ಬರಹೋಗುವವರು " ಅಲ್ಲದೇ ನಾನೊಬ್ಬನೇ ದುಡಿಯುತ್ತಿದ್ದುದು ಅದು ಚಿತ್ರ ರಚನೆಯ ಮೇಲೆಯೇ ನಮ್ಮ ಬದುಕು ಅವಲಂಬಿಸಿತ್ತು. ಅಥಣಿಯಲ್ಲಿಯ ಆಸ್ತಿ ಹೆಸರಿಗೇನೋ ಇತ್ತು ಆದರೆ ಅದರಿಂದ ಚಿಕ್ಕಾಸು ಲಾಭವಿರಲಿಲ್ಲ " [೪೭] ಎಂದು ಹೇಳುವ ಚಿಟ್ಟಿಯವರು ಭಾವಚಿತ್ರಗಳ ರಚನೆಯಿಂದಲೇ ಮನೆ ನಡೆಸುತ್ತಿದ್ದರು. ಅದರ ಜೊತೆಗೆ ಗದುಗಿನ ವಿಜಯ ಕಲಾ ಮಂದಿರಲ್ಲಿ ಮೂವತ್ತೆರಡು ವರ್ಷ ಕಲಾಶಿಕ್ಷಕರಾಗಿ. ಉಪಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. (ಚಿತ್ರಕಲಾ ಶಿಕ್ಷಕ ವೃತ್ತಿಯ ಬಗ್ಗೆ ನಾಲ್ಕನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ).

ಚಿಟ್ಟಿಯವರ ಮಕ್ಕಳು :

ಮುರಿಗೆಪ್ಪ ಚಿಟ್ಟಿಯವರಿಗೆ ನಾಲ್ವರು ಮಕ್ಕಳು. ಎರಡು ಗಂಡು ಎರಡು ಹೆಣ್ಣು. ಮೊದಲನೆಯವಳು ಮಹಾದೇವಿ - ಮ್ಯಾಟ್ರಿಕ್ ಪರೀಕ್ಷೆ ಮುಗಿದ ನಂತರ ಶಿಕ್ಷಕ ತರಬೇತಿಯನ್ನು ಪಡೆದು ಗದುಗಿನಲ್ಲಿ ಶಿಕ್ಷಕಿಯಾಗಿ ಕಾರ್ಯಗೈಯುತ್ತ ಬಡ್ತಿಹೊಂದಿ ಮುಖ್ಯಾಧ್ಯಾಪಕಿಯಾಗಿ ನಿವೃತ್ತಿ ಹೊಂದಿದ್ದಾರೆ. ಎರಡನೇ ಮಗ ಅಂದಾನೆಪ್ಪ ರೇಲ್ವೆ ಖಾತೆಯಲ್ಲಿ ಕೆಲಸ ಮಾಡುತ್ತಿದ್ದನು. ೧೯೭೬ ರಲ್ಲಿ ಕಾಮಣಿ ಬಂದು ತೀರಿಕೊಂಡನು. ಅವನ ಅಕಾಲ ನಿಧನ ಚಿಟ್ಟಿಯವರ ಮನಸ್ಸಿಗೆ ವಜ್ರಾಘಾತವನ್ನುಂಟು ಮಾಡಿತು. ಸೊಸೆ ಶಾಂತಾ ತನ್ನ ಪತಿಯು ಕಾರ್ಯ ಮಾಡುತ್ತಿದ್ದ ರೇಲ್ವೆ ಇಲಾಖೆಯಲ್ಲಿ ಸದ್ಯ ಹುಬ್ಬಳ್ಳಿಯಲ್ಲಿ ಕೆಲಸ ಮಾಡುತ್ತಿದ್ದಾಳೆ.

ಮೂರನೆಯ ಮಗಳು ಚಿ. ರತ್ನಾದೇವಿ. ಇವಳನ್ನು ಅವರ ಆಪ್ತರಾಗಿದ್ದ ಬಾಗಲಕೋಟೆಯ ಯಾಳಗಿ ವಿರೂಪಾಕ್ಷಪ್ಪನವರ ದ್ವಿತೀಯ ಪುತ್ರ ಶ್ರೀ ಮಹಾಲಿಂಗ ಯಾಳಗಿ ಅವರಿಗೆ ಕೊಟ್ಟು ಮದುವೆ ಮಾಡಿದರು.

---

೪೭. ಎಂ. ವಿ. ಚಿಟ್ಟಿ : ನೆನಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೫೨



ಬಿ. ಬಿ. ಚೆಟ್ಟಿಯವರ ಮನೆ - ಗದಗ



ಚೆಟ್ಟಿಯವರ ಇತ್ತೀಚಿನ ಭಾವ ಚಿತ್ರ



ಎಂ. ಎ. ಚೆಟ್ಟಿ ಹಾಗೂ ಧರ್ಮಪತ್ನಿ ಶ್ರೀಮತಿ ಸುಂದರಮ್ಮ



ಎಂ. ಎ. ಚೆಟ್ಟಿಯವರ ಸಂದರ್ಶನ ಮಾಡುತ್ತಿರುವ [illegible] ಶ್ರೀಮತಿ [illegible] [illegible]

ಕೊನೆಯ ಮಗ ಸದ್ಯ ವಿಜಾಪುರದಲ್ಲಿ ವಾಸ್ತವ್ಯ ಹೂಡಿದ್ದಾರೆ. ಇವರು ಮೊದಲು ಬೆಳಗಾವಿ ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಜನರಲ್ ಮ್ಯಾನೇಜರ್ ಆಗಿದ್ದರು. ಚೆಟ್ಟಿಯವರ ಕಲೆಯ ಅಂಶ ಬಸವರಾಜನಲ್ಲಿ ಹರಿದು ಬಂದಿದೆ. " ೭-೮ ವರ್ಷದ ಬಾಲಕನಿದ್ದಾಗ ಶಂಕರ್ಸ ವೀಕ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸಿ ಹಲವಾರು ಬಹುಮಾನಗಳನ್ನು ಪಡೆದಿರುವನು. ಅಂದು ಚಿ. ಬಸವರಾಜನನ್ನು ಕಿರಿಯ ಕಲಾವಿದನೆಂದು ಗುರುತಿಸಿದ ಜನ ಅವನು ಚಿತ್ರ ಬಿಡಿಸುವ ಕಲೆಯನ್ನು ನೋಡಲು ನಮ್ಮ ಮನೆಗೆ ಬರುತ್ತಿದ್ದರು "[೪೮] ಎಂದು ಚೆಟ್ಟಿಯವರು ಹೇಳಿದ್ದಾರೆ. ಆದರೆ ಅವರು ಆ ಮಾರ್ಗದಲ್ಲೇ ಮುಂದುವರಿಯದೆ ಬೇರೆ ಉದ್ಯೋಗವನ್ನು ಆಯ್ಕೆಮಾಡಿಕೊಂಡರು. ಈಗ ಚೆಟ್ಟಿಯವರ ಮನೆತನದ ಕಲೆ ಅವರಿಗೆ ಕೊನೆಗೊಂಡಂತಾಗಿದೆ.

ಚೆಟ್ಟಿಯವರ ವ್ಯಕ್ತಿತ್ವ :

ಚೆಟ್ಟಿಯವರು ತಮ್ಮ ಬದುಕಿನಲ್ಲಿ ಪಾಲಿಸಿಕೊಂಡು ಬಂದದ್ದು ಶಿಸ್ತು, ಅಚ್ಚುಕಟ್ಟುತನ ಹಾಗೂ ನಿರ್ಮಲತೆ. " ಶಿಸ್ತಿಲ್ಲದ ಸಂಸಾರ ಸುಂದರವಾಗುವುದಿಲ್ಲ ಅಚ್ಚುಕಟ್ಟುತನವಿಲ್ಲದಿದ್ದರೆ ಜೀವನ ಅಸ್ತವ್ಯಸ್ತವಾಗುತ್ತದೆ. ಕಾರಣ ನನಗೆ ಶಿಸ್ತು-ಸ್ವಚ್ಛತೆ ಓರಣಗಳು ನನ್ನ ಉಸಿರಿನಷ್ಟೇ ಅವಶ್ಯವಾಗಿವೆ "[೪೯] ಎಂದು ಹೇಳುವ ಚೆಟ್ಟಿಯವರು ಚಿತ್ರಿಸುವಾಗಲೂ ಸಹಿತ ಈ ನಿಯಮವನ್ನು ಪಾಲಿಸಿಕೊಂಡು ಬಂದಿದ್ದರು. ಮಡಿಯಾದ ಇಸ್ತ್ರಿ ಅರಿವೆಗಳನ್ನು ಧರಿಸಿ ಗರಿಗರಿಯಾದ ಮರ್ಸರಾಯಿಜ್ಡ ಧೋತರ ಉಟ್ಟುಕೊಂಡು ತಲೆಯ ಮೇಲೆ ಬಿಳಿಯ ರುಮಾಲು ಸುತ್ತಿಕೊಂಡು ಮೇಲೊಂದು ಕರಿಕೋಟು. ದಿವಾನರು ಮೆಟ್ಟುವಂತಹ ಪಾಲಿಶಮಾಡಿದ ಬೂಟು. ಅರ್ಧಮರ್ಧ ಕಪ್ಪಾಗಿ ಕಾಣುವ ತಿರುವಿದ ದಟ್ಟ ಮೀಸೆ. ಕೆಲವು ಸಲ ಕೈಯಲ್ಲಿ ಷೋಕಿ ಬೆತ್ತ ಹಿಡಿದು ಸದೃಢ ಕಾಯ ಹೊಂದಿದ ಮುರಿಗೆಪ್ಪನವರು ಹರೆಯದವರಂತೆ ತಿರುಗಾಡಬಲ್ಲಂತಹ ಸುಂದರ ವ್ಯಕ್ತಿತ್ವದ ಜೊತೆಗೆ ಅಸಾಧಾರಣ ಕಲಾ ಪ್ರತಿಭೆಯ ವ್ಯಕ್ತಿತ್ವವು ಅವಕ್ಕೆ ಮೆರಗು ತಂದು ಕೊಟ್ಟಿದೆ. ತೇಲಸಂಗ. ಹಾಲಳ್ಳಿ ಹಾಗೂ ಬನ್ನೂರಿನ ಭಕ್ತರು ಚೆಟ್ಟಿಯವರಿಗೆ ಕೊಟ್ಟ ಸನ್ಮಾನ ಪತ್ರದಲ್ಲಿ. " ನೀವಿರುವ ಶಿಸ್ತಿನಿಂದ ನಿಮ್ಮನ್ನು ನೋಡಿದಾಗಲೆಲ್ಲ ಕೆಳದಿ ಶಿವಪ್ಪನಾಯಕರ ನೆನಪು ಬರುವುದು "[೫೦] ಎಂಬುದಾಗಿ ವರ್ಣಿಸಿದ್ದಾರೆ.

" ದಿನಾಲೂ ನನಗೆ ಶೇವಿಂಗ ಆಗಲೇ ಬೇಕು. ನನಗೀಗ ವಯಸ್ಸು ೮೩ ಆಗಿದ್ದರೂ ನನ್ನ ಓರಣ ಶಿಸ್ತಿನ ಜೀವನದಲ್ಲಿ ಯಾವ ಬದಲಾವಣೆಯೂ ಇಲ್ಲ "[೫೧] ಎನ್ನುವ ಚೆಟ್ಟಿಯವರಿಗೆ ಈಗ ೯೪ ವರ್ಷ ವಯಸ್ಸು. ಈಗಲೂ ಹಾಗೇ ಇದ್ದಾರೆ. ಆದರೆ ಮೀಸೆಗೆ ಬಣ್ಣ ಹಚ್ಚುವದನ್ನು ಮಾತ್ರ ಬಿಟ್ಟಿದ್ದಾರೆ.

---

೪೮. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೫೭

೪೯. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೫೮

೫೦. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೫೯

೫೧. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೫೯

೧೯೮೮ ರ ಜುಲೈ ತಿಂಗಳಲ್ಲಿ ಚಿಟ್ಟಿಯವರು ಸ್ವಲ್ಪ ಅಸ್ತವ್ಯಸ್ತರಾದರು. ಆ ಕಾರಣವಾಗಿ ಅವರನ್ನು ಗದುಗಿನ ಜರ್ಮನ್ ಹಾಸ್ಪಿಟಲ್‌ನಲ್ಲಿ ದಾಖಲಿಸಲಾಗಿತ್ತು. "ಅವರ ಶುಶ್ರೂಷೆಗಾಗಿ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ೫೦೦೦/- ರೂಪಾಯಿಗಳನ್ನು ಮಂಜೂರುಮಾಡಲಾಗಿತ್ತು"[೫೨] ಮುಂದೆ ಚೇತರಿಸಿಕೊಂಡು ಮೊದಲಿನಂತಾದರು.

ಆದರೂ ಅವರು ಒಳ್ಳೇ ಸದೃಢಕಾಯರು. ಅದಕ್ಕೆ ಕಾರಣ ಅವರೇ ಹೇಳುತ್ತಾರೆ : "ನಾನು ಜಡ್ಡಿಗೆ ಬಿದ್ದದ್ದೇ ನೆನಪಿಲ್ಲ. ಅದಕ್ಕೆ ಕಾರಣ ನಾನು ತೆಗೆದುಕೊಳ್ಳುವ ಆಹಾರ. ಕೇವಲ ಎರಡು ಹೊತ್ತು ಊಟ ಮಾತ್ರ. ಅದು ಕೇವಲ ಒಂದೂವರೆ ರೊಟ್ಟಿ ಮೇಲೆ ಒಂದು ಮುಷ್ಟಿ ಅನ್ನ. ಖಾರಾ. ಉಪ್ಪು ಹುಳಿ ಅತ್ಯಂತ ಕಡಿಮೆ"[೫೩] "ಮತ್ತು ಸಿಹಿ ಮೇಲೆ ಬಹಳ ಪ್ರೀತಿ. ಅಡಿಗೆಯಲ್ಲೂ ಸಹಿತ ಸ್ವಲ್ಪ ಹುಳಿ ಹೆಚ್ಚಾದರೆ ಇವತ್ತಿಗೂ ತಿನ್ನುವದಿಲ್ಲ"[೫೪] ಹೀಗೆ ಮಿತ ಆಹಾರದಿಂದ ಆರೋಗ್ಯವನ್ನು ಕಾಯ್ದುಕೊಂಡು ಬಂದಿದ್ದಾರೆ.

ಚಿಟ್ಟಿಯವರ ದಿನಚರಿಯೂ ಅಷ್ಟೇ ಅಚ್ಚುಕಟ್ಟಾಗಿದೆ. "ಬೆಳಗಿನ ೪-೩೦ ಕ್ಕೆ ಏಳುತ್ತೇನೆ. ಮುಖ ಮಾರ್ಜನ ಮಾಡಿಕೊಂಡು ಶ್ರೀ ಶಿವಯೋಗಿಗಳವರಿಗೆ ಕೈ ಮುಗಿದು ೫-೩೦ ರಿಂದ ಬಣ್ಣ ಕುಂಚಗಳೊಂದಿಗೆ ಚಿತ್ರ ರಚಿಸುವ ಕಾರ್ಯ ಪ್ರಾರಂಭಿಸುತ್ತೇನೆ. ೬-೩೦ ಕ್ಕೆ ಹೊರಗೆ ತಿರುಗಾಡಲು ಹೋಗಿ ೭ ರ ಸುಮಾರಿಗೆ ಮರಳಿ ಬಂದು ಸ್ನಾನ. ಲಿಂಗ ಪೂಜೆ. ಮಾಡಿಕೊಂಡು ಅಟ್ಟಕ್ಕೇರಿದೆನೆಂದರೆ ಮುಗಿಯಿತು. ಮತ್ತೆ ಚಿತ್ರತೆಗೆಯುವ ಕೆಲಸ ಪ್ರಾರಂಭ. ಮಧ್ಯಾಹ್ನ ೧-೩೦ ಕ್ಕೆ ಊಟ. ಅನಂತರ ೨ ರಿಂದ ೩ ರ ವರೆಗೆ ಸ್ವಲ್ಪ ವಿಶ್ರಾಂತಿ. ಪತ್ರ ಬರೆಯುವದು. ಮತ್ತೆ ೬ ರ ವರೆಗೆ ಕೆಲಸ ಅನಂತರ ತಿರುಗಾಡಲು ಹೋಗುವದು. ಮರಳಿ ಬಂದೊಡನೆ ೮-೩೦ ಕ್ಕೆ ಊಟ. ೧೧ ರ ವರೆಗೆ ಚಿತ್ರರಚನೆ. ನಂತರ ನಿದ್ದೆ"[೫೫] ಇದು ಅವರ ದಿನಚರಿ. ಆದರೆ ಕೆಲವೊಮ್ಮೆ ಯಾವುದಾದರೂ ಚಿತ್ರ ಬೇಗನೆ ತೆಗೆದು ಕೊಡುವದಿದ್ದರೆ ಹಗಲೂ ರಾತ್ರಿ ಆ ಚಿತ್ರಗಳನ್ನು ರಚಿಸಿದ ಪ್ರಸಂಗಗಳೂ ಉಂಟು. ಚಿಟ್ಟಿಯವರ ಜೀವನದಲ್ಲಿ ಎರಡು ಉಪಾಸನೆಗಳನ್ನು ಮನನ ಮಾಡಿಕೊಂಡಿದ್ದರು. "ಲಿಂಗಪೂಜೆ ಉಪಾಸನೆ ಹಾಗೂ ಕಲೆಯ ಉಪಾಸನೆ. ಲಿಂಗಪೂಜೆಯ ಮೂಲಕ ನಮಗೆ ಆತ್ಮ ಸಾಕ್ಷಾತ್ಕಾರ ಎಷ್ಟಾಗುತ್ತದೋ ಅಷ್ಟೇ ಕಲೆಯ ಮುಖಾಂತರ ಆತ್ಮ ಸಾಕ್ಷಾತ್ಕಾರವಾಗುತ್ತದೆ. ಎಂದು ನಮಗೆ ಹೇಳುತ್ತಿದ್ದರು"[೫೬] ಎನ್ನುವ ಅವರ ಮಗ ಬಸವರಾಜ ಅವರು ಅನೇಕ ಸಲ ಅವರ ಪಕ್ಕದಲ್ಲಿ ಕುಳಿತು ಚಿತ್ರಿಸುವುದನ್ನು ನೋಡುತ್ತಿದ್ದರು. ದೇವರಧ್ಯಾನದಲ್ಲಿ ಒಂದಾಗುವಂತೆ "ನನ್ನ ತಂದೆಯವರು ಚಿತ್ರ ತೆಗೆಯುತ್ತಾ ಅದರಲ್ಲಿ ಒಂದಾಗುತ್ತಿದ್ದರು"[೫೭] ಎಂದಿದ್ದಾರೆ. ಹೀಗೆ ಏಕಾಗ್ರತೆಯ ಮೂಲಕ ಅವರು ಕಲೆಯಲ್ಲಿ ಪ್ರಭುತ್ವವನ್ನು ಪಡೆದಿದ್ದರು.

---

೫೨. ಮುಖ್ಯಮಂತ್ರಿಯವರ ಸಚಿವಾಲಯದಿಂದ ಬಂದ ಪತ್ರದ ಆಧಾರ

೫೩. ಎಂ. ವಿ. ಚಿಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೪೯

೫೪. ಬಸವರಾಜ ಚಿಟ್ಟಿ ಯವರ ಸಂದರ್ಶನ ೬-೮-೨೦೦೦. ವಿಜಾಪುರ

೫೫. ಎಂ. ವಿ. ಚಿಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೪೯

೫೬. ಬಸವರಾಜ ಚಿಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

೫೭. ಬಸವರಾಜ ಚಿಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

ಚಿಟ್ಟಿಯವರು ಮಕ್ಕಳಿಗೂ ಸಹಿತ ಯಾವರೀತಿ ಬದುಕಬೇಕು. ಎನ್ನುವುದನ್ನು ಕಲಿಸಿಕೊಟ್ಟರು. " ಅವರು ನನಗೆ ತಂದೆಯೂ ಹೌದು ಗುರುವೂ ಹೌದು. ಅವರ ಹತ್ತಿರ ದುಡ್ಡು ಇದ್ದರೆ ಅದನ್ನು ಅತಿಥಿ ದೇವೋಭವ ಎಂದು ಅತಿಥಿಗಳಿಗಾಗಿ ವಿನಿಯೋಗಿಸುತ್ತಿದ್ದರು. ಆದರೆ ನಮಗೆ ಮಾತ್ರ ಪ್ರತಿಯೊಂದಕ್ಕೂ ಲೆಕ್ಕ ಕೇಳುತ್ತಿದ್ದರು. ಅವರ ಉದ್ದೇಶ ಮಕ್ಕಳು ಶಿಸ್ತಿನಿಂದ ಬೆಳೆಯಬೇಕು ಮತ್ತು ತಂದೆ ತಾಯಿ ಮೇಲೆ ಅವಲಂಬಿತರಾಗಿರಬಾರದು. ತಮ್ಮ ಕಾಲಮೇಲೆ ತಾವು ನಿಲ್ಲಬೇಕು ಅನ್ನುವುದೇ ಅವರ ಉದ್ದೇಶ "[೫೮] ಅಲ್ಲದೇ ತಾವು ಸಹಿತ ವಿನಿಯೋಗಿಸಿದ ಹಣದ ಬಗ್ಗೆ ದಿನ ನಿತ್ಯ ತಮ್ಮ ಡೈರಿಯಲ್ಲೂ ಬರೆದಿಡುತ್ತಿದ್ದರು. ಯಾವ ವಸ್ತುವನ್ನೂ ನಿರ್ಲಕ್ಷ್ಯ ಭಾವದಿಂದ ನೋಡಬಾರದೆಂಬುದು ಅವರ ನಿಲುವಾಗಿತ್ತು. ಪೇಟೆಯಿಂದ ಜೋಳ, ಗೋದಿ ಮನೆಗೆ ತೆಗೆದುಕೊಂಡು ಬಂದಾಗ ಅದರಲ್ಲಿಯ ಕಾಳುಗಳು ಬಿದ್ದಿದ್ದರೆ ಒಂದೊಂದೇ ಕಾಳನ್ನು ಆರಿಸುತ್ತಿದ್ದರು. ಅಲ್ಲದೇ ಈ ರೀತಿ ಹೇಳುತ್ತಿದ್ದರು. " ಈ ಜೋಳ ಹುಟ್ಟಿಸಬಹುದು. ಆದರೆ ತಯಾರಿಸಲಿಕ್ಕೆ (ಅಂದರೆ ಜೋಳದ ರೂಪ ಕೊಡಲಿಕ್ಕೆ) ನಿನಗೆ ಬರುತ್ತೇನು ಎಂದು ಪರಮಾತ್ಮನು ಸೃಷ್ಟಿಸಿದಂಥದನ್ನು ಕೆಡಿಸಲಿಕ್ಕೆ ನಿಮಗೆ ಯಾವ ಅಧಿಕಾರನೂ ಇಲ್ಲ ಎನ್ನುತ್ತಿದ್ದರು. ತಾವು ಊಟ ಮುಗಿದನಂತರ ಸ್ವತಃ ಗಂಗಾಳ ತೊಳೆದು ಕುಡಿಯುತ್ತಿದ್ದರು "[೫೯] ಹೀಗೆ ಮಕ್ಕಳಿಗೆ ತಿಳಿಸಿ ಹೇಳುತ್ತಿದ್ದರು. ಇದರಿಂದ ಅವರು ತಮ್ಮ ಜೀವನ ಸುಧಾರಿಸಿಕೊಳ್ಳಲು ಸಹಾಯವಾಯಿತು. ಯಾಕೆಂದರೆ " ಜೀವನಕ್ಕ ಒಂದು ಚೌಕಟ್ಟು ಇರಬೇಕು. ಅದನ್ನು ಮೀರಬಾರದೆಂದು ಅಲ್ಲದೆ ನಾನು ಇಷ್ಟು ಉನ್ನತ ಮಟ್ಟಕ್ಕೆ ಬರಲು ಅವರೇ ಕಾರಣ. ನನಗೆ ನೌಕರಿ ಕೊಡಿಸಿದವರು ಅವರೆ. ನಾನು ಒಳ್ಳೆಯ ಸ್ಥಾನ ಗಳಿಸಿಕೊಳ್ಳಲಿಕ್ಕೆ ಅವರಿಂದ ನನಗೆ ಸಮಗ್ರ ಮಾರ್ಗದರ್ಶನ ಸಿಕ್ಕಿತು "[೬೦] ಎಂದು ಅವರ ಮಗ ಬಸವರಾಜ ತಂದೆಯ ಕುರಿತು ಹೇಳಿದ ಮಾತುಗಳಿವು.

ಚಿಕ್ಕಪ್ಪ ಬಸೆಟೆಪ್ಪನವರ ಜಂಗಮ ಸೇವೆಯ ಸಂಸ್ಕೃತಿ ಚಿಟ್ಟಿಯವರ ಜೀವನದಲ್ಲಿ ಆಳವಾಗಿ ಬೇರೂರಿತ್ತು ಇವರಿಗೂ ಸಹಿತ ಜಂಗಮ ಸೇವೆ ಎಂದರೆ ಎಲ್ಲಿಲ್ಲದ ಭಕ್ತಿ, ಪ್ರೀತಿ. ಅಂತೆಯೇ ಪ್ರತಿದಿನ ತಿರುಗಾಡಲಿಕ್ಕೆ ಹೋಗುವ ರೂಢಿ. " ಒಂದು ದಿನ ತಿರುಗಾಡಲಿಕ್ಕೆ ಹೋದಾಗ ಗದಗ ರೇಲ್ವೆ ನಿಲ್ದಾಣದಲ್ಲಿ ಸುಮಾರು ೮೦ ವರ್ಷ ವಯಸ್ಸಿನ ಒಬ್ಬ ಸ್ವಾಮಿಗಳು ಮತ್ತು ಅವರ ಒಬ್ಬ ಶಿಷ್ಯ ಅಲ್ಲಿ ಕುಳಿತಿದ್ದನ್ನು ಕಂಡು ವಿಚಾರಿಸಲಾಗಿ ಆ ಸ್ವಾಮಿಗಳು ವಿಜಾಪುರ ಜಿಲ್ಲೆಗೆ ಸಂಬಂಧಿಸಿದವರಿದ್ದು ಯಾವುದೋ ಕಾರ್ಯ ನಿಮಿತ್ತ ಹುಬ್ಬಳ್ಳಿಗೆ ಹೋಗಿದ್ದರು. ಕೆಲಸವನ್ನು ತೀರಿಸಿಕೊಂಡು ಮರಳಿ ವಿಜಾಪುರಕ್ಕೆ ಹೋಗುವ ಸಲುವಾಗಿ ಕಾಯುತ್ತ ಕುಳಿತಿದ್ದು. ನಿತ್ಯ ಲಿಂಗಪೂಜೆಯಾಗದೇ ಪ್ರಸಾದವನ್ನು ಸ್ವೀಕರಿಸುತ್ತಿರಲಿಲ್ಲ. ಸುಮಾರು ಮಧ್ಯಾಹ್ನ ೧ ಘಂಟೆ ಇರಬಹುದು. ಸಾಯಂಕಾಲ ವಿಜಾಪುರಕ್ಕೆ ರೈಲು ಇತ್ತು. ಪ್ರಸಾದವಿಲ್ಲದಲೇ ಉಪವಾಸ ಕುಳಿತದ್ದು ಅವರ ಶಿಷ್ಯರಿಂದ ನಮ್ಮ ತಂದೆಯವರಿಗೆ ಗೊತ್ತಾಯಿತು. ಆಗ ನಮ್ಮ ತಂದೆಯವರು ಆ ಸ್ವಾಮಿಗಳನ್ನು ಮನೆಗೆ ಬರಮಾಡಿಕೊಂಡು ಅವರ ಲಿಂಗಪೂಜೆಗೆ ವ್ಯವಸ್ಥೆ ಮಾಡಿದರು. ಅನಂತರ

---

೫೮. ಬಸವರಾಜ ಚಿಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

೫೯. ಬಸವರಾಜ ಚಿಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

೬೦. ಬಸವರಾಜ ಚಿಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

ಮನೆಯಲ್ಲಿ ಪ್ರಸಾದ ವ್ಯವಸ್ಥೆಯನ್ನು ಮಾಡಿಸಿ ಅವರನ್ನು ತಾವೇ ಸ್ವತಃ ಟಾಂಗಾ ತೆಗೆದುಕೊಂಡುಬಂದು ರೇಲ್ವೆ ನಿಲ್ದಾಣಕ್ಕೆ ಕರೆತಂದು ರೈಲುಹತ್ತಿಸಿದರು "[೬೧] ಇದರಿಂದ ನಮ್ಮ ತಂದೆಯವರ ಗುರು ಲಿಂಗ. ಜಂಗಮದ ನಿಷ್ಠೆಯನ್ನು ನಾನು ಸ್ವತಃ ನೋಡಿದ್ದೇನೆ. ಒಮ್ಮೆ ಓರ್ವ ಬಡ ಜಂಗಮರು ಭಿಕ್ಷಾಂದೇಹಿ ಎಂದು ಬಂದು ನಿಂತಾಗ ಚೆಟ್ಟಿಯವರು ತಮ್ಮ ಕೈಬೆರಳಿನಲ್ಲಿರವ ಉಂಗುರವನ್ನೇ ಜಂಗಮ ಮೂರ್ತಿಯ ಕೈ ಬೆರಳಿನಲ್ಲಿ ಇಟ್ಟಿದ್ದನ್ನು ನಾನೇ ಪ್ರತ್ಯಕ್ಷ ನೋಡಿದ್ದೇನೆ ಎಂದು ಅವರ ಆತ್ಮೀಯ ಮಿತ್ರರಾದ ಮಲ್ಲಿಕಾರ್ಜುನ ಸಿದ್ದಪ್ಪಾ ಹತ್ತಿ ಹೇಳಿದ್ದಾರೆ.[೬೨]

ಚೆಟ್ಟಿಯವರು ಸರ್ವ ಜೀವಿ ಹಾಗೂ ಪ್ರಾಣಿಗಳಲ್ಲಿ ದಯೆ ಮತ್ತು ಅನುಕಂಪವನ್ನು ಹೊಂದಿದ್ದರು. ಮನೆಯ ಮುಂದೆ ಯಾರೇ ಭಿಕ್ಷೆ ಬೇಡಲು ಬಂದಿರಲಿ. ಅವರನ್ನು ಎಂದೂ ಬರಿಗೈಯಿಂದ ಹಿಂದಕ್ಕೆ ಕಳಿಸುತ್ತಿರಲಿಲ್ಲ. ಒಂದು ಸಲ ಒಬ್ಬ ಭಿಕ್ಷುಕ ಬಂದು ಬಾಗಿಲಲ್ಲಿ ಒಂದೇ ಸಮನೇ ಕೂಗುತ್ತಿದ್ದ. ನಮ್ಮ ತಾಯಿಯವರು ಹಿತ್ತಲಲ್ಲಿ ಯಾವುದೋ ಕೆಲಸದಲ್ಲಿ ತೊಡಗಿದ್ದರು. ಭಿಕ್ಷುಕ ಕೂಗಿ ಕೂಗಿ ಇನ್ನೇನು ಹೋಗಬೇಕೆನ್ನುವಷ್ಟರಲ್ಲಿ ನಮ್ಮ ತಂದೆಯವರು ದೇವರ ಮನೆಯಲ್ಲಿ ಲಿಂಗಪೂಜೆಯನ್ನು ಮಾಡುತ್ತಿದ್ದರು. ಮನೆಯಲ್ಲಿ ಯಾರೂ ಭೀಕ್ಷೆ ನೀಡದೆ ಇದ್ದುದನ್ನು ಅರ್ಥಮಾಡಿಕೊಂಡು ಒಂದು ಕೈಯಲ್ಲಿ ಲಿಂಗ. ಒಂದು ಕೈಯಲ್ಲಿ ಅಕ್ಕಿಯನ್ನು ಬಟ್ಟಲಲ್ಲಿ ಹಾಕಿಕೊಂಡು ಬಾಗಿಲ ಹೊರಗೆ ಬಂದು ನೀಡುತ್ತಿದ್ದಾಗ. ಯಾವುದೋ ಕೆಲಸಕ್ಕೆ ಹೋಗಿದ್ದ ನಾನು ಅದೇ ಆಗ ಬಂದು ಅದನ್ನು ನೋಡಿ ಒಳಗೆ ಹೋಗಿ ನನ್ನ ತಾಯಿಗೆ ವಿಷಯ ತಿಳಿಸಿದೆ. ಅಂದಿನಿಂದ ನಮ್ಮ ಮನೆಗೆ ಯಾರೇ ಬರಲಿ ನಾವು ಹಾಗೆ ಕಳಿಸುವುದಿಲ್ಲ "[೬೩] ಎಂಬುದಾಗಿ ತಿಳಿದುಬರುತ್ತದೆ. ಅದರಂತೆ. ಪ್ರಾಣಿಗಳ ಮೇಲೂ ಸಹ ದಯೆಯನ್ನು ಹೊಂದಿದವರಾಗಿದ್ದರು. " ಪ್ರತಿದಿನ ಒಂದು ಆಕಳ ಕರು ಹಾಗೂ ಒಂದು ನಾಯಿ ಬರುತ್ತಿದ್ದವು. ಅವುಗಳಿಗೆ ದಿನಾಲೂ ಏನಾದರೂ ಆಹಾರ ಹಾಕುವವರೇ. ಪ್ರಾಣಿಗಳಿಗೆ ದೇವರು ಬಾಯಿ ಕೊಟ್ಟಿಲ್ಲ. ಅವುಗಳಿಗೆ ತುತ್ತು ಅನ್ನ ನೀಡಿದರೆ ಕೋಟಿಲಿಂಗಕ್ಕೆ ಅಭಿಷೇಕ ಮಾಡಿದಂತೆ. ಪ್ರಾಣಿಗಳಲ್ಲಿ ದಯೆ ಇರಬೇಕು "[೬೪] ಅಂತ ಯಾವಾಗಲೂ ಮಕ್ಕಳಿಗೆ ತಿಳಿಹೇಳುತ್ತಿದ್ದರು. ಇದು ಪ್ರತಿದಿನದ ದಿನಚರಿಯೇ ಆಗಿತ್ತು.

ನಿಸರ್ಗ ಪ್ರೇಮಿಯಾದ ಚೆಟ್ಟಿಯವರು ಪ್ರಕೃತಿಯಲ್ಲಿಯ ಪ್ರತಿಯೊಂದು ವಸ್ತುವಿನ ಸೌಂದರ್ಯವನ್ನು ಆಸ್ವಾದಿಸಿ ಅದರಲ್ಲಿಯೇ ಪರಮಾತ್ಮನಿರುವನೆಂಬ ನಂಬಿಕೆಯನ್ನು ಇಟ್ಟುಕೊಂಡವರು. ಸೌಂದರ್ಯವೇ ಶಿವನೆಂಬುದರಲ್ಲಿ ವಿಶ್ವಾಸ ತಳೆದವರು. ಅಂತೆಯೇ ಅವರ ಹಿತ್ತಲದಲ್ಲಿ ದಾಸವಾಳ. ಡೇರೆ ಅನೇಕ ಹೂವಿನ ಗಿಡಗಳನ್ನು ಹಚ್ಚಿದ್ದರು. ಒಮ್ಮೆ ದೀಪಾವಳಿಯ ದಿನ ದೇವರ ಪೂಜೆಗೆಂದು " ಮನೆಯಲ್ಲಿಯ ಹೂವನ್ನು ನಮ್ಮ ಹಿರಿಯ ಅಕ್ಕ ಕಿತ್ತು ತಂದು ಲಕ್ಷ್ಮೀ ಪೂಜೆ ಮಾಡುವ ಸಲುವಾಗಿ ಒಂದು ತಾಟಿನಲ್ಲಿ ತಂದಿಟ್ಟಿದ್ದಳು. ಆ ಹೂಗಳನ್ನು

---

೬೧. ಬಸವರಾಜ ಚೆಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪೂರ

೬೨. ಮಹಾಲಿಂಗ ಯಾಳಗಿ (ಸಂ.) : ಕಲಾತಪಸ್ವಿ ಎಂ. ಎ. ಚೆಟ್ಟಿ ಯವರ ಅಭಿನಂದನ ಗ್ರಂಥ. ಪುಟ ೨೫

೬೩. ಬಸವರಾಜ ಚೆಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪೂರ

೬೪. ಬಸವರಾಜ ಚೆಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪೂರ

ನೋಡಿ ನಮ್ಮ ತಂದೆ ಹರಿದವರಾರೆಂದು ಕೇಳಿದರು. ಆಗ ನಾನು ಅಕ್ಕನ ಹೆಸರನ್ನು ಹೇಳಿದೆ. ಆಗ ಅವಳನ್ನು ಕರೆದು " ಏನವ್ವಾ ಮಹಾದೇವಿ ಈ ಹೂ ಯಾಕ ಹರದಿ. ಈ ಹೂವನ್ನು ದೇವರಿಗೆ ಏರಿಸಿದರೆ ಅವನಿಗೇನು ಪ್ರೀತಿ ಆಗುವದಿಲ್ಲ. ಅದರ ಬದಲಾಗಿ ಆ ಹೂವನ್ನು ಗಿಡದಲ್ಲಿ ಬಿಟ್ಟಿದ್ರೆ ಎಷ್ಟು ಚಲೋ ಆಗ್ತಿತ್ತು. ಅಂತ ಹೂಗಳನ್ನು ನಮಗ ನಿರ್ಮಿಸಲಿಕ್ಕ ಆಗ್ತದ ? ಹೇಳು. ಗಿಡದಾಗ ಆ ಹೂ ಅರಳಿದ್ದು ನೋಡಿಯೇ ಸಂತೋಷ ಪಡಬೇಕು ವಿನಹ ಆ ಗಿಡದ ಸೌಂದರ್ಯವನ್ನು ಹಾಳುಮಾಡಬಾರದು. ಆ ಗಿಡಗಳಲ್ಲಿ ಅರಳಿದ ಹೂವಿನ ಸೌಂದರ್ಯದಲ್ಲಿ ಪರಮಾತ್ಮನಿದ್ದಾನ. ಅದನ್ನ ನೋಡಿ ಆನಂದಿಸಬೇಕು. ಅದಕ್ಕಿಂತ ಮಿಗಿಲಾದ ಪೂಜೆ ಇನ್ನೊಂದಿಲ್ಲ " [೬೫] ಎಂದು ಮಗಳಿಗೆ ಬುದ್ಧಿವಾದ ಹೇಳಿದರು.

ಚಿಟ್ಟಿಯವರು ಎಂದೂ ದೇವಸ್ಥಾನಕ್ಕೆ ಹೋದವರೆ ಅಲ್ಲ. ಮನೆಯಲ್ಲಿ ಮಾತ್ರ ಪ್ರತಿದಿನ ಲಿಂಗಪೂಜೆಯೊಂದನ್ನೇ ಎರಡೂ ಹೊತ್ತು ಮಾಡಿಕೊಳ್ಳುವ ಆಚಾರವಿತ್ತು. " ಬೇರೆ ಯಾವುದೇ ದೇವಸ್ಥಾನಕ್ಕಾಗಲಿ ಅವರು ಹೋಗಿದ್ದನ್ನು ನಾನು ಇಲ್ಲಿಯವರೆಗೆ ನೋಡಿಯೇ ಇಲ್ಲ" ನೀವು ದೇವಸ್ಥಾನಕ್ಕೆ ಏಕೆ ಹೋಗುವದಿಲ್ಲ ಅಂತಾ ಕೇಳಿದರೆ ಅವರಿಂದ ಬರುವ ಉತ್ತರವಿಷ್ಟೆ ಆ ಲಿಂಗಯ್ಯನನ್ನು ಪೂಜಿಸಿದರೆ ಎಲ್ಲವನ್ನು ಪೂಜಿಸಿದಂತೆ ಆಗುವುದು. ಇದು ನನ್ನ ನಿಜ ಅನುಭವ " [೬೬] ಅಂತ ಮಗ ಬಸವರಾಜ ಅವರಿಗೆ ಮಾರ್ಮಿಕವಾಗಿ ವಿವರಿಸುತ್ತಿದ್ದರಂತೆ.

ಚಿಟ್ಟಿಯವರು ಎಂದೂ ಯಾರ ಮೇಲೂ ಕೋಪಗೊಂಡವರಲ್ಲ. ಬಹಳ ಮೃದು ಸ್ವಭಾವದ ವ್ಯಕ್ತಿತ್ವವನ್ನು ಹೊಂದಿದ ಅವರು ಸರ್ವರನ್ನೂ ಪ್ರೀತಿ ಆದರದಿಂದ ನೋಡುವ ಪ್ರವೃತ್ತಿಯನ್ನು ಹೊಂದಿದ್ದರು. ಸಿಟ್ಟು ಬಂದರೆ ಅದನ್ನು ಕಡಿಮೆ ಮಾಡಬೇಕಾದರೆ ೧೦ ಹೆಜ್ಜೆ ನಡೆಯಬೇಕು. ಅಂದರೆ ಕಾಲಿನ ಮೇಲೆ ಆ ಎಲ್ಲಾ ಸಿಟ್ಟಿನ ಭಾರ ಹಾಕುವುದರಿಂದ ಸಿಟ್ಟು ತಾನಾಗೆ ಶಮನಗೊಳ್ಳುತ್ತದೆ ಎಂದು ತಮ್ಮಷ್ಟಕ್ಕೆ ತಾವೇ ದೇಹವನ್ನು ದಂಡಿಸಿಕೊಳ್ಳುತ್ತಿದ್ದರು. " ಯಾವುದೋ ಒಂದು ಸನ್ನಿವೇಶದಲ್ಲಿ ತಂದೆಯವರಿಗೆ ಕೋಪ ಬಂದಿತು. ಮುಖ ಕೆಂಪಗಾಯಿತು. ಯಾರ ಕೂಡ ಮಾತನಾಡದೆಯೇ ಶರ್ಟ. ಕೋಟು. ರುಮಾಲು ಧರಿಸಿ ಹೊರಗೆ ನಡೆದೇ ಬಿಟ್ಟರು. ನನಗೆ ದಿಗಿಲಾಯಿತು. ಅವರ ಹಿಂದೆಯೇ ನಾನು ಧಾವಿಸಿದೆನು ಮುನ್ಸಿಪಲ್ ಹೈಸ್ಕೂಲಿನ ಬೈಲು ಜಾಗದಲ್ಲಿ ಸುಮ್ಮನೆ ೩ ಸುತ್ತು ಹಾಕಿದರು. ನಾನು ತಂದೆಯವರನ್ನು ಹೀಗೇಕೆ ಸುತ್ತು ಹಾಕಿದಿರಿ ಎಂದು ಕೇಳಿದಾಗ " ಸಿಟ್ಟು ಬಂದಾಗ ಮನುಷ್ಯ ಸಿಟ್ಟಿನ ಭರದಾಗ ಹುಚ್ಚನಂತಾಗಿ ಯಾವಹೊತ್ತು ಏನು ಮಾಡುವನೋ ತಿಳಿಯದು. ಇದಕ್ಕೆ ಉಪಾಯ ಏನಂದ್ರ ಸಿಟ್ಟು ಬಂದಾಗ ಕಡಿಮಿ ಮಾಡಬೇಕಾದ್ರ ಮೌನದಿಂದ ೧೦ ಹೆಜ್ಜೆ ಜೋರ ಜೋರಾಗಿ ನಡದರ ಸಿಟ್ಟು ತಾನಾಗೆ ಕಡಿಮಿ ಆಗಿ ಮನುಷ್ಯ ಮೊದ್ಲಿನಂಗ ಶಾಂತ ಆಗ್ತಾನ " [೬೭] ಎಂದು ಹೇಳಿ ಸ್ವತಃ ತಾವು ಆಚರಣೆಯಲ್ಲಿ ತರುವ ಅವರ ಗುಣವನ್ನು ಇಲ್ಲಿ ಗುರುತಿಸಬಹುದು.

---

೬೫. ಬಸವರಾಜ ಚಿಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

೬೬. ಬಸವರಾಜ ಚಿಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

೬೭. ಬಸವರಾಜ ಚಿಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

ಗೋಕಾಕ ವರದಿ ಜಾರಿಗಾಗಿ ಅನ್ನಸತ್ಯಾಗ್ರಹ :

ಚೆಟ್ಟಿಯವರು ಸಾಮಾಜಿಕ ಕಾರ್ಯಗಳಲ್ಲಿಯೂ ಸಹಿತ ತಮ್ಮನ್ನು ತೊಡಗಿಸಿಕೊಂಡಿದ್ದರು. ೧೯೮೨ ನೇ ಇಸ್ವಿ ಆಗ ಕರ್ನಾಟಕದಾದ್ಯಂತ ಗೋಕಾಕ ವರದಿ ಜಾರಿಗೆ ಬರುವಂತೆ ಎಲ್ಲೆಡೆ ಚಳುವಳಿ ನಡೆದಿತ್ತು. ಅಂತಹ ಸಂದರ್ಭದಲ್ಲಿ ೨೦ ನೇ ಏಪ್ರಿಲ್ ೧೯೮೨ ರಂದು ' ಗೋಕಾಕ ವರದಿ ಜಾರಿಗೆ ಬರಲೆಂದ ;ತಾಲೂಕು ಕಛೇರಿ ಮುಂದೆ ಅನ್ನಸತ್ಯಾಗ್ರಹ ಮಾಡಿ ಕುಳಿತರು. ನಾನು ಅವರ ಸಂಗಡ ಉಪವಾಸ ಕೂಡಬೇಕಾಯಿತು. ರಾತ್ರಿ ೧೦ ಘಂಟೆಯವರೆಗೆ ಕುಳಿತು ಮನೆಗೆ ಬಂದೆವು. ಗೋಕಾಕ ವರದಿ ಚಳುವಳಿ ತೋಂಟದಾರ್ಯ ಮಠದಿಂದ ಹೊರಟು ಕಛೇರಿಗೆ ಮುಕ್ತಾಯ ಆತು "[೬೮] ಹೀಗೆ ಅವರು ಕನ್ನಡ ಕಟ್ಟಾಭಿಮಾನಿಗಳಾಗಿದ್ದರಲ್ಲದೆ. ಮಾತೃ ಭಾಷೆಯ ಬಗ್ಗೆ ಅವರಲ್ಲಿರುವ ಅಭಿಮಾನ ಇಲ್ಲಿ ಎದ್ದು ಕಾಣುತ್ತದೆ.

ಕನ್ಯಾ-ವರ ಜೋಡಣೆಯಂಥ ಸಮಾಜ ಸೇವೆಯನ್ನು ಸಹಿತ ಇವರು ಮಾಡುತ್ತಿದ್ದರು. ಅಲ್ಲದೆ ಸಮಯ ಸಂದರ್ಭಕ್ಕೆ ತಕ್ಕಂತೆ ಯಾವ ರೀತಿ ಪಾರಾಗಬೇಕು ಎನ್ನುವದು ಅವರಿಗೆ ಗೊತ್ತಿತ್ತು. ಒಮ್ಮೆ " ಇವರು ಇಚಲಕರಂಜಿಗೆ ಕನ್ಯಾ ನೋಡಲು ಹೊರಟಿದ್ದರು. ಆಗ ಇವರು ಹೊರಟಂತಹ ಕಾರು ಟ್ರಕ್ಕಿಗೆ ಡಿಕ್ಕಿ ಹೊಡೆಯಿತಂತೆ. ಆಗ ಸಬ್ ಇನ್ಸಪೆಕ್ಟರ್ ಎಲ್ಲರಿಗೂ ಒಳಗ ಹಾಕಿದ್ರಂತ. ನಮ್ಮ ತಂದಿ ಬಹಳ ಚಾಣಾಕ್ಷರು. ತಮ್ಮ ಕಿಸೆಯಲ್ಲಿಯ ಪೆನ್ಸಿಲ್ ತೆಗೆದು ಒಂದು ಹಾಳಿಮೇಲೆ ಆ ಸಬ್ ಇನ್ಸಪೆಕ್ಟರ್‌ರ ಸ್ಕೇಚ್ ಮಾಡಿಕೊಟ್ಟರಂತ. ಆಗ ಅವರಿಗೆ ಬಹಳ ಸಂತೋಷ ಆತು. ಯಾರು ನೀವು ? ಅಂತ ಕೇಳಿದರು. ಮುರಿಗೆಪ್ಪ ಚೆಟ್ಟಿ ಆರ್ಟಿಸ್ಟ ಅಂತ ಗೊತ್ತಾದ ಕೂಡ್ಲೆ ಇವರ ಮೇಲಿನ ಕೇಸ ತೆಗೆದು ಇವರಿಗೆ ಚಹಾ ಕುಡಿಸಿ ಕಳಿಸಿದ್ರಂತ "[೬೯] ಈ ರೀತಿ ಕಲೆಯಿಂದ ಎಂಥವರ ಮನಸ್ಸನ್ನೂ ಗೆಲ್ಲಬಹುದಾದ ವ್ಯಕ್ತಿತ್ವ ಹೊಂದಿದ್ದರು..

ಬಡವರ ಬಗ್ಗೆಯೂ ಅತ್ಯಂತ ಕನಿಕರ. ದಯೆಯನ್ನು ಹೊಂದಿದವರಾಗಿದ್ದರು. ಪರೋಪಕಾರವನ್ನು ಮಾಡುತ್ತ ಬಂದಿದ್ದಾರೆ. ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ ಎಂಬಂತೆ ತಮ್ಮ ಕೈಲಾದ ಮಟ್ಟಿಗೆ ಸಹಾಯ ಮಾಡುತ್ತ ಬಂದವರು. ಒಂದು ಸಾರಿ ಕುರಬರ ಕಟ್ಟಿಗೆ ಒಡೆಯುವ ಶಿವಪ್ಪನ ಗುರ್ತಾಯಿತು. ಆತ ಇವರಿಗೆ ಮಲಗಿಕೊಳ್ಳಲಿಕ್ಕೆ ಅವರ ಮನೆಯಲ್ಲಿ ಸ್ವಲ್ಪ ಜಾಗ ಕೇಳಿದ. ಆಗ ಪ್ರತಿ ದಿನ ಇವರಿಗೂ ನೀರು ಕಾಯಿಸಲಿಕ್ಕೆ ಕಟ್ಟಿಗೆ ಬೇಕಾಗುತ್ತಿತ್ತು. " ನೀನು ನಮಗೆ ಕಟ್ಟಿಗೆ ತಂದು ಹಾಕಿ ರಾತ್ರಿ ನಮ್ಮ ಮನೆಯ ಹಿತ್ತಲಲ್ಲೇ ಅಡಿಗೆ ಊಟ ಮಾಡಿಕೊಂಡು ಮಲಗಿಕೊಂಡಿರು. ನೀನು ಕಟ್ಟಿಗೆ ತಂದುಕೊಟ್ಟಿದ್ದಕ್ಕೆ ಕಾಯಕದ ಕಾಣಿಕೆಯನ್ನು ತಪ್ಪದೆ ನಾನು ಕೊಡುತ್ತೇನೆ "[೭೦] ಎಂದು ಹೇಳಿದರು. ಚೆಟ್ಟಿಯವರು ಜಾಗ ಕೊಟ್ಟಿದ್ದಕ್ಕಾಗಿ ಎಂದೂ ಅವರು ಪುಕ್ಕಟೆ ಕಟ್ಟಿಗೆಯನ್ನು ಹಾಕಿಸಿಕೊಂಡವರಲ್ಲ. ಹೀಗೆ ೫-೬ ವರ್ಷ ಅಲ್ಲಿಯೇ ಇದ್ದ ಶಿವಪ್ಪ ಮುಂದೆ ತಮ್ಮ ಊರಿಗೆ ಹೋದ. ಆಡಂಬರವಿಲ್ಲದ ಜೀವನ ಇವರದಾಗಿತ್ತು. " ಒಮ್ಮೆ ಕಲಾ ಮಂದಿರಕ್ಕೆ ಹೋಗುವಾಗ ತೋಂಟದಾರ್ಯ ಮಠದ

---

೬೮. ಚೆಟ್ಟಿಯವರ ಡೈರಿಯಿಂದ ಪಡೆದುಕೊಂಡದ್ದು

೬೯. ಬಸವರಾಜ ಚೆಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

೭೦. ಬಸವರಾಜ ಚೆಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

ಹತ್ತಿರ ಒಬ್ಬ ಮುದುಕ ಮನುಷ್ಯ ಕುಳಿತಿರುತ್ತಿದ್ದ ಅವನ ಸಲುವಾಗಿ ರೊಟ್ಟಿಪಲ್ಲೆ ತೆಗೆದುಕೊಂಡು ಹೋಗಿ ಅವನಿಗೆ ಕೊಟ್ಟು ಹೋಗ್ತಾ ಇದ್ರು" [೨೧] ಹಾಗೆ ಕಷ್ಟದಲ್ಲಿರುವ ಯಾರನ್ನು ಕಂಡರೂ ನೋಡುವದಕ್ಕೆ ಅವರಿಗೆ ಆಗುತ್ತಿರಲಿಲ್ಲ. ತಮ್ಮ ಕೈಲಾದ ಸಹಾಯ ಮಾಡುತ್ತ ಬಂದವರು.

ಸ್ವಾವಲಂಬನೆಯ ಜೀವನ. ಮಿತವ್ಯಯ. ಶಿಸ್ತು ಹಾಗೂ ಸಮಯ ನಿಷ್ಠರು. ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುವ ಪ್ರವೃತ್ತಿ. "ನಮ್ಮ ತಂದೆಯವರು ತಮ್ಮ ಧೋತರ. ಅಂಗಿಗಳನ್ನು ಸ್ವತಃ ತಾವೇ ಸ್ವಚ್ಛವಾಗಿ ಒಗೆದುಕೊಳ್ಳುವರು. ಸುಮಾರು ೮೫ ನೇ ವಯಸ್ಸಿನ ವರೆಗೂ ತಾವೇ ತಮ್ಮ ಅರಿವೆಗಳನ್ನು ಒಗೆದುಕೊಳ್ಳುತ್ತಿದ್ದರು. ಸ್ವಚ್ಛ ನೀರು ಬರುವವರೆಗೂ ಹಿಂಡಿ ತೆಗೆಯುತ್ತಿದ್ದರು" [೨೨] ಆ ನೀರನ್ನು ಚೆಲ್ಲಲು ಕೊಡದೇ "ನೋಡಪ್ಪ ಮನೆಯಲ್ಲಿ ಭಾವಿ ಅದ ಅಂತಾ ಸಿಕ್ಕ ಸಿಕ್ಕಂಗ ನೀರು ಹಾಳ ಮಾಡಬಾರದು. ಅದೇ ನೀರನ್ನು ಗಿಡಗಳಿಗೆ ಹಾಕಿದರೆ ಅವು ಬೆಳೆಯುತ್ತವೆ. ದೇವರು ಜಗತ್ತಿನ್ಯಾಗ ಎಲ್ಲಾ ವಸ್ತುಗಳನ್ನು ನಮ್ಮ ಸಲುವಾಗಿಯೇ ಮಾಡ್ಯಾನಪಾ. ಆದರೆ ಅವುಗಳನ್ನು ಬಳಸುವಾಗ ಬಹಳ ಮಿತವ್ಯಯ ಮತ್ತು ಎಚ್ಚರಿಕೆಯಿಂದ ಉಪಯೋಗಿಸಬೇಕು" [೨೩] ಎಂದು ತಿಳಿಹೇಳುತ್ತಿದ್ದರು. ಅಂತೆಯೇ ಅವರು ಸಮಯ ನಿಷ್ಠರೂ ಕೂಡಾ. ಯಾರಿಗಾದರೂ ಭೇಟಿ ಆಗಲು ವೇಳೆಯನ್ನು ಕೊಟ್ಟಿದ್ದರೆ ಅದೇ ವೇಳೆಗೆ ಸರಿಯಾಗಿ ಅವರಿಗೆ ಹೋಗಿ ಭೇಟಿ ಆಗಿ ಬರುತ್ತಿದ್ದರು. "ಸಮಯಕ್ಕೆ ಯಾರು ಮಹತ್ವ ಕೊಡುವರೋ ಅವರನ್ನು ಆ ಸಮಯ ಜೀವನದಲ್ಲಿ ಮುಂದಕ್ಕ ತರುತ್ತದೆ" [೨೪] ಎಂದು ಹೇಳುತ್ತಿದ್ದರು. ಈಗ ಅವರಿಗೆ ೯೪ ವರ್ಷ ವಯಸ್ಸು. ಇಂದಿಗೂ ಸಹಿತ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಾರೆ. ಈ ಕಾಯಕ್ಕೆ ಯಾವತ್ತೂ ಕೆಲಸ ಇರಬೇಕೆಂಬುದೇ ಅವರ ಧ್ಯೇಯ. ಹಾಗೆಯೇ ಜೀವನದುದ್ದಕ್ಕೂ ದುಡಿದಿದ್ದಾರೆ.

ಚೆಟ್ಟಿಯವರ ಹವ್ಯಾಸಗಳು :

ಸಾಮಾನ್ಯವಾಗಿ ವ್ಯಕ್ತಿಗಳು ಯಾವುದಾದರೊಂದು ಹವ್ಯಾಸಕ್ಕೆ ಅಧೀನರಾಗುವುದನ್ನು ನೋಡುತ್ತೇವೆ. ಇದಕ್ಕೆ ಕಲಾವಿದರೂ ಹೊರತಾಗಿಲ್ಲ. ಈ ವಿಶಿಷ್ಟ ಜನರು ಸಂಗೀತಗಾರರಿರಬಹುದು. ಸಾಹಿತಿಗಳಿರಬಹುದು. ಚಿತ್ರಕಲಾವಿದರಿರಬಹುದು. ಇವರಿಗೆ ಯಾವದಾದರೊಂದು ಗುಣ ಅಂಟಿಕೊಂಡಿರುವದನ್ನು ನಾವೆಲ್ಲ ಗಮನಿಸುತ್ತೇವೆ. ಈ ಕಲಾವಿದರು ತಮ್ಮ ಮನಸ್ಸಿನ ದೌರ್ಬಲ್ಯದಿಂದ ಯಾವದಾದರೊಂದು ಚಟಕ್ಕೆ ಬಲಿಯಾಗಿರುತ್ತಾರೆ. ಆದರೆ ಚೆಟ್ಟಿಯವರು ಯಾವದೇ ದುರ್ಬಲತೆಯ ಗುಣಗಳಿಂದ ದುಶ್ಚಟಕ್ಕೆ ಬಲಿಯಾಗಿಲ್ಲ. "ಕೇವಲ ಎರಡು ಹೊತ್ತು ಲಿಂಗಪೂಜೆ. ಕೈಯಲ್ಲಿ ಕುಂಚ. ಸದಾ ಕಾಲ ಶಿವಯೋಗ ನಾಮಸ್ಮರಣೆ ಇಷ್ಟೆ. ಪ್ರತಿದಿನ ಬೆಳಿಗ್ಗೆ ಒಂದು ಕಪ್ಪ ಹಾಲು

---

೨೧. ಮಗಳು ಮಹಾದೇವಿ ಕಿತ್ತೂರ ಅವರ ಸಂದರ್ಶನ ೧೧-೧೧-೧೯೯೯

೨೨. ಬಸವರಾಜ ಚೆಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

೨೩. ಬಸವರಾಜ ಚೆಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

೨೪. ಬಸವರಾಜ ಚೆಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

ತೆಗೆದುಕೊಂಡರೆ ಸರಿಯಾಗಿ ೧೨-೩೦ ಘಂಟೆಗೆ ಸ್ವಲ್ಪ ಮಿತ ಆಹಾರ.. ಅವರಿಗೆ ಇಷ್ಟವಾದ ವಸ್ತುವೆಂದರೆ ಖಾರದ ಚುರುಮರಿ. ಸೆಂಗಾ. ಇವು ಮಗ್ಗುಲಲ್ಲಿದ್ದರೆ ರಾತ್ರಿ ಎಷ್ಟು ಹೊತ್ತಾದರೂ ಚಿತ್ರ ಬರೆಯುತ್ತ ಕುಳಿತು ಬಿಡುವರು "[೭೫] ಹೀಗೆ ಯಾವುದೇ ವಿಷಯಾಸಕ್ತರಾಗದೇ ಒಳ್ಳೇ ಸಾತ್ವಿಕ ಸಜ್ಜನಿಕೆಯ ವೃತ್ತಿಯಿಂದ ಒಬ್ಬ ಸ್ವಾಮಿಗಳಂತೆ ತಮ್ಮ ಜೀವನವನ್ನು ನಡೆಸುತ್ತ ಬಂದಿದ್ದಾರೆ. ಈಗಿನ ಕಾಲದಲ್ಲಿ ಇಂತಹ ವ್ಯಕ್ತಿತ್ವದ ಕಲಾವಿದರು ಸಿಗುವದು ಬಹಳ ಅಪರೂಪ.

ಚಿಟ್ಟಿ ಅವರ ಇನ್ನೊಂದು ಹವ್ಯಾಸವೆಂದರೆ ಸಂಗೀತ ಕೇಳುವುದು. ಮೊದಲೇ ಹೇಳಿದಂತೆ ತಾವೇ ಹಾರ್ಮೋನಿಯಂ ನುಡಿಸುತ್ತ ದೇವರ ಗೀತೆಗಳನ್ನು ಹಾಡುವುದು. ಮುಂಬೈನಲ್ಲಿ ಇರುವಾಗ ಸವಾಯಿ ಗಂಧರ್ವರ ನಾಟಕ ನೋಡ್ಲಿಕ್ಕೆ ಯಾವತ್ತೂ ಹೋಗ್ತಾ ಇದ್ರು. " ಇವರು ಗಾಯನ. ನಾಟಕ ಪ್ರಿಯರು ಹಾಗೂ ನಾನೂ ಕೂಡಾ ಬಾಲಗಂಧರ್ವನ ಎಲ್ಲ ನಾಟಕದ ಪದಗಳನ್ನು Imitation ಮಾಡುತ್ತಿದ್ದೆ. ನಾವಿಬ್ಬರೂ ಕೂಡಿಕೊಂಡು ಬಾಲಗಂಧರ್ವನ ಏಕಚಪ್ಯಾಲಾ. ಸ್ವಯಂವರ. ಮಾನಾಪಮಾನ ನಾಟಕಗಳಿಗೆ ಮುಂಬೈ ಕ್ಯಾಂಪಿನಲ್ಲಿದ್ದಾಗ ತಪ್ಪದೆ ಹೋಗುತ್ತಿದ್ದೆವು. ಇವರ ಪೆಟಂಟ ಹಾಗು ಗಂಧರ್ವ ನಾಟಕ ಕಂಪನಿಯಲ್ಲಿರುವ ಮಾಸ್ಟರ್ ಕೃಷ್ಣಾನ ಹಾಡುಗಳು"[೭೬] ಎಂದು ಹಾಲಭಾವಿಯವರು ತಮ್ಮ ಲೇಖನದಲ್ಲಿ ಹೇಳಿದ್ದಾರೆ. ಚಲನಚಿತ್ರಗಳನ್ನೂ ನೋಡ್ತಾ ಇದ್ರು. ಭಾಷೆ ಯಾವುದೇ ಆಗಿದ್ದರೂ ವಸ್ತು ಪೌರಾಣಿಕ. ಸಾಮಾಜಿಕ. ಶೈಕ್ಷಣಿಕ ಏನೇ ಆಗಿದ್ದರೂ ಅದರಲ್ಲಿ ಸ್ವಾರಸ್ಯವಿದ್ದರೆ ಮತ್ತೆ ಮತ್ತೆ ಹೋಗಿ ನೋಡಿದ್ದಾರೆ. ಸಾಮಾನ್ಯವಾಗಿ ಹಿಂದಿ ಚಿತ್ರಗಳ ಮೇಲೆ ಒಲವು ಹೆಚ್ಚು. ತಮ್ಮ ಮೆಚ್ಚುಗೆಯನ್ನು ಸೂರೆಗೊಂಡ ಚಿತ್ರಗಳ ಬಗ್ಗೆ ತಮ್ಮ ಡೈರಿಗಳಲ್ಲಿ ತಾವು ಎಷ್ಟು ಸಾರಿ ಆ ಚಿತ್ರವನ್ನು ವೀಕ್ಷಿಸಿದ್ದೇನೆ ಎನ್ನುವುದನ್ನು ಸಹಿತ ಉಲ್ಲೇಖಿಸಿದ್ದಾರೆ. ಅವರು ಉಲ್ಲೇಖಿಸಿದ ಚಿತ್ರಗಳು ಪಾರಸಿ. ಭಾಯಿ ಹೋತೋ ಐಸಾ. ವಾರಿಸಿ ಬೂಟ ಪಾಲಿಸ್. ಬೈಜುಬಾವ್ರಾ. ಇನ್ನೂ ಅನೇಕ. ಈ ಚಿತ್ರಗಳನ್ನು ೨-೩ ಬಾರಿ ನೋಡಿದ್ದಾರೆ.

ಅವರು ಯಾವತ್ತೂ ಬಣ್ಣದ ಬಟ್ಟೆಗಳನ್ನು ಧರಿಸಿದವರೇ ಅಲ್ಲ " ನೀವು ಬಣ್ಣದ ಬಟ್ಟೆ ಏಕೆ ಧರಿಸುವದಿಲ್ಲ ಎಂದಾಗ. ಬಿಳಿ ಅರಬಿ ಉಡೋದರಿಂದ ಮನಸ್ಸು ಸದಾ ಉಲ್ಲಸಿತವಾಗಿರುವದು. ಈ ಬಿಳಿ ಶರ್ಟ. ಬಿಳಿ ಧೋತರ. ಬಿಳಿ ಪಟಗಾ ಹಾಕಿಕೊಳ್ಳುವದರಿಂದ ನನ್ನ ಮನಸ್ಸು ಯಾವಾಗಲೂ ಸಮಾಧಾನ. ಶಾಂತಿ ಮತ್ತು ಆನಂದಮಯವಾಗಿ ಇರುತ್ತದೆ "[೭೭] ಎನ್ನುವ ಚಿಟ್ಟಿಯವರು ಕಲಾಮಯ ಜಗತ್ತಿನ ಬಣ್ಣಗಳ ಮೌಲ್ಯಗಳನ್ನು ತಮ್ಮ ನಿತ್ಯ ಜೀವನದಲ್ಲೂ ಅಳವಡಿಸಿಕೊಂಡಿರುವುದನ್ನು ಗಮನಿಸುತ್ತೇವೆ. ಯಾವತ್ತೂ ಅವರ ಜೇಬಿನಲ್ಲಿ ಒಂದು ಪೆನ್ಸಿಲ್ ಇರ್ತಾ ಇತ್ತು ಕೈಯಲ್ಲಿ ಒಂದು ಸ್ಕೆಚ್ ಬುಕ್ಕ " ಟ್ರೇನಿನಲ್ಲಿ ಹೋಗ್ಲಿ. ಅಡ್ಡಾಡ್ಲಿಕ್ಕೆ ಹೋಗ್ಲಿ ಎಲ್ಲಿ ಏನು ನೋಡಿದ್ರು ಸ್ಕೆಚ್

---

೭೫. ಬಸವರಾಜ ಚಿಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

೭೬. ಮಹಾಲಿಂಗ ಯಾಳಗಿ (ಸಂ.) : ಕಲಾತಪಸ್ವಿ ಎಂ. ಎ. ಚಿಟ್ಟಿಯವರ ಅಭಿನಂದನ ಗ್ರಂಥ. ಪುಟ ೩೫

೭೭. ಬಸವರಾಜ ಚಿಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

ಮಾಡ್ತಾ ಇದ್ರು. ಯಾರನ್ನಾದ್ರು ನೋಡಿ ಅವರ ಚಿತ್ರ ತೆಗೀಬೇಕು ಅನಿಸಿದ್ರ ಅವರನ್ನು ಮನಿಗೆ ಕರ್‍ಕೊಂಡುಬಂದು ಕೂಡ್ರಿಸಿ ಭಾವಚಿತ್ರ ಮಾಡೇ ಬಿಡ್ತಿದ್ರು" [೭೮] ಎಂದು ಅವರ ಮಗಳಾದ ಮಹಾದೇವಿ ಕಿತ್ತೂರ ಅವರು ಹೇಳುತ್ತಾರೆ.

ಚಿಟ್ಟಿಯವರಿಗೆ ದಿನಾಲೂ ವಾಯುವಿಹಾರಕ್ಕೆ ಹೋಗುವದೊಂದು ಅತಿ ಮುಖ್ಯ ಹವ್ಯಾಸ ಈಗ ಅವರಿಗೆ ೯೪ ವರ್ಷ ವಯಸ್ಸು ಈಗಲೂ ಮನೆಯ ಮುಂದೆ ಹಾಗೆ ಸ್ವಲ್ಪ ತಿರುಗಾಡಿ ಬರುತ್ತಾರೆ. ತಮ್ಮ ಶರೀರ ಇಷ್ಟು ಗಟ್ಟಿ ಇರ್‍ಲಿಕ್ಕೆ ಕಾರಣ ಈ ವಾಯು ವಿಹಾರ ಎಂದು ಅವರು ಹೇಳುತ್ತಾರೆ. ಅವರು ಅಥಣಿಯಲ್ಲಿ ಇದ್ದಾಗಲೂ ದಿನಾಲು ಸಾಯಂಕಾಲ ಅವರ ಚಿಕ್ಕಪ್ಪನ ಜೊತೆ ಅಥಣಿ ರಸ್ತೆಯಲ್ಲಿರುವ ಅಪ್ಪಗಳ ಗುಂಡ (ಪ್ರತಿನಿತ್ಯ ಅಥಣಿ ಶಿವಯೋಗಿಗಳು ಅಲ್ಲಿ ತಿರುಗಾಡಲಿಕ್ಕೆ ಬಂದು ಹೋಗುವ ಸ್ಥಳ) ಅಲ್ಲಿವರೆಗೂ ಬಂದು ವಾಪಸ್ಸು ಸೀದಾ ಗಚ್ಚಿನ ಮಠಕ್ಕೆ ಹೋಗುತ್ತಿದ್ದರು. ಸಂಜೆ ೬-೩೦ ರಿಂದ ೭ ಘಂಟೆಯವರೆಗೆ ನಮ್ಮ ತಂದೆ ಮತ್ತು ಕಾಕಾ ಬಸೆಟೆಪ್ಪನವರು ಕೈಯಲ್ಲಿ ಬಡಿಗಿ ಹಿಡದುಕೊಂಡು ಬರುತ್ತಿದ್ದ ಶಬ್ದದ ಸಂಜ್ಞೆಯನ್ನು ಗುರುತಿಸುತ್ತಿದ್ದ ಶಿವಯೋಗಿಗಳು. ಲಿಂಗ ಪೂಜೆ ಪ್ರಾರಂಭಿಸುವ ಮೊದಲು ತಮ್ಮ ಪೂಜಾ ಮನೆಯಲ್ಲಿಯ ಸಣ್ಣ ಬಾಗಿಲ ತೆಗೆದು ಇವರಿಬ್ಬರಿಗೂ ಆಶೀರ್ವದಿಸಿ ಮತ್ತೆ ಬಾಗಿಲು ಹಾಕಿಕೊಳ್ಳುತ್ತಿದ್ದರಂತೆ" [೭೯] ಹೀಗೆ ದಿನಾಲು ವಾಯುವಿಹಾರದೊಂದಿಗೆ ಶಿವಯೋಗಿಗಳ ಕೃಪಾಶೀರ್ವಾದವನ್ನು ಪಡೆದುಕೊಂಡು ಬರುತ್ತಿದ್ದರು. ಇಂದಿಗೂ ವಾಯುವಿಹಾರ ಅವರ ಜೀವನದ ಪ್ರತಿನಿತ್ಯದ ಕ್ರಮವಾಗಿದೆ.

ಚಿಟ್ಟಿಯವರಿಗೆ ಒಳ್ಳೆಯ ಗ್ರಂಥಗಳನ್ನು ಓದುವ ಹವ್ಯಾಸ ಅಲ್ಲದೆ ಯಾವುದೇ ಪುರಾಣಕ್ಕೆ ಸಂಬಂಧಪಟ್ಟ ಚಿತ್ರಗಳನ್ನು ರಚಿಸಬೇಕಾಗಲಿ ಅಥವಾ ಶರಣರ ಚಿತ್ರಗಳನ್ನೇ ರಚಿಸಬೇಕಾಗಲಿ ಆಗ ಆ ಪುರಾಣ. ಶರಣರ ಜೀವನ ಚರಿತ್ರೆಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ನಂತರ ಚಿತ್ರಗಳನ್ನು ರಚಿಸುತ್ತಿದ್ದರು. ಅವರ ಮನೆಗೆ ಹೋಗಿ ನೋಡಿದಾಗ ಅನೇಕ ಗ್ರಂಥಗಳ ಸಂಗ್ರಹ ಅಲ್ಲಿತ್ತು. ಆದರೆ ಈಗ ಅಲ್ಲಿಯಾರೂ ವಾಸಮಾಡದ್ದರಿಂದ ಅವುಗಳ ಪೋಷಣೆ ಇಲ್ಲದೆ ಅನೇಕ ಗ್ರಂಥಗಳು ಗೆದ್ದಲು ಹತ್ತಿ ಹಾಳಾಗಿ ಹೋಗಿರುವುದು ವಿಷಾದನೀಯ. ಮಕ್ಕಳಿಗೂ ಸಹಿತ ಆ ರೀತಿಯ ಹವ್ಯಾಸದ ಪ್ರೇರಣೆ ಮಾಡಿದ್ದರು. " ಒಂದು ದಿನಾನೂ ಸುಮ್ಮನೆ ಕೂಡಲು ಬಿಡುತ್ತಿರಲಿಲ್ಲ. ಜೀವನದಲ್ಲಿ ಕಲಿಯುವುದು ಬಹಳವಿದೆಯೆಂದ ಅವರಿಂದ ನನಗೆ ಸಂಗೀತ. ಚಿತ್ರಗಳ ರಚನೆಯ ಪ್ರೇರಣೆ ಆಯಿತು. ಅಷ್ಟೇ ಅಲ್ಲ ಸಾಹಿತ್ಯದಲ್ಲಿಯೂ ಆಸಕ್ತಿ ಮೂಡುವಹಾಗೆ ಮಾಡಿದರು. ತಾವೂ ಸ್ವತಃ ಆ ಪುಸ್ತಕಗಳನ್ನು ಅಭ್ಯಾಸ ಮಾಡುತ್ತಿದ್ದರು. ಉದಾ :- ಪ್ರಭುಲಿಂಗ ಲೀಲೆ. ಮೃತ್ಯುಂಜಯ ಸ್ವಾಮಿಗಳ ಚರಿತ್ರೆ. ಇನ್ನೂ ಅನೇಕ ಗ್ರಂಥಗಳ ಅಧ್ಯಯನ ಮಾಡುತ್ತಿದ್ದರು. " [೮೦] ಯಾವುದೇ ಕೆಲಸವಿರಲಿ ಇನ್ನೊಬ್ಬರಿಗೆ ಹೇಳುವ ಮೊದಲು ತಾವೇ ಮೊದಲು ಮಾಡಿ ತೋರಿಸುವ ಪ್ರವೃತ್ತಿ ಇವರದಾಗಿತ್ತು.

' ಮಾತು ಕಡಿಮೆ ಕೆಲಸ ಜಾಸ್ತಿ' ಚಿಟ್ಟಿಯವರು ಯಾವಾಗಲೂ ಹೇಳುವ ಮಾತುಗಳಿವು. " ಚಿಟ್ಟಿಯವರು ಮಾತುಗಾರರಲ್ಲ. ಚಿತ್ರಕಾರರು: ಈ ಮಾತನ್ನು ಅವರೇ ಅನೇಕ ಸಭೆ ಸಮಾರಂಭಗಳಲ್ಲಿ ಹೇಳುತ್ತಿದ್ದುದನ್ನು ನಾನು

---

೭೮. ಮಹಾದೇವಿ ಕಿತ್ತೂರ ಸಂದರ್ಶನ : ೧೦-೧೦-೧೯೯೮. ಗದಗ

೭೯. ಬಸವರಾಜ ಚಿಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

೮೦. ಬಸವರಾಜ ಚಿಟ್ಟಿಯವರ ಸಂದರ್ಶನ ೬-೮-೨೦೦೦. ವಿಜಾಪುರ

ಕೇಳಿದ್ದೇನೆ. ' ನನಗೆ ಭಾಷಣ ಮಾಡಲು ಬರುವದಿಲ್ಲ. ಭಾಷಣ ಮಾಡುವದಕ್ಕೆ ಬದಲಾಗಿ ಒಂದು ಚಿತ್ರಬಿಡಿಸಲು ಹೇಳಿದರೆ ಪ್ರೀತಿಯಿಂದ ಚಿತ್ರಿಸಬಲ್ಲೆ ಎನ್ನುವ ಚೆಟ್ಟಿಯವರು ತಮ್ಮ ಮನದ ಭಾವನೆಗಳನ್ನು ಚಿತ್ರಗಳ ಮೂಲಕ ಸಹೃದಯರಿಗೆ ಮುಟ್ಟಿಸುವ ಕೆಲಸ ಮಾಡಿದ್ದಾರೆ''.[೮೧] ಎಂಬುದು ಡಾ. ಎಸ್. ಸಿ. ಪಾಟೀಲ ಅವರ ಅಭಿಪ್ರಾಯವಾಗಿದೆ.

ಇಲ್ಲಿ ಚೆಟ್ಟಿಯವರ ಬಗ್ಗೆ ಅನೇಕ ವಿಷಯಗಳನ್ನು ಅವರ ಮಕ್ಕಳಿಂದ ಮತ್ತು ಇನ್ನಿತರ ಮಾಹಿತಿಗಳಿಂದ ಸಂಗ್ರಹಿಸಿ ಬರೆಯಲಾಗಿದೆ. ಕಾರಣ ೯೪ ವರ್ಷ ವಯಸ್ಸಿನ ಚೆಟ್ಟಿಯವರಿಗೆ ಈ ಮೊದಲಿನ ಘಟನೆಗಳು ಅಷ್ಟಾಗಿ ನೆನಪಿನಲ್ಲಿ ಉಳಿದಿಲ್ಲ.

ಕಲಾವಿದರಾಗಿ ಚೆಟ್ಟಿಯವರು :

" ಸೃಷ್ಟಿಯಲ್ಲಿರುವ ಕಹಿಯನ್ನು ನುಂಗಿ ಸಿಹಿಯನ್ನು ಮಾತ್ರ ನೀಡುವ ಮಹಾಯೋಗಿಗಳು ಕಲಾಕಾರರು''[೮೨] ಎನ್ನುವಂತೆ ಚೆಟ್ಟಿಯವರು ಸಹಿತ ತಮ್ಮ ಜೀವನದ ಎಡರು ತೊಡರುಗಳನ್ನು ಲೆಕ್ಕಿಸದೆ ನಿರಂತರ ಕಲಾ ಸೇವೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟವರು. " ಕಲೆಯು ಜೀವನ ವೃಕ್ಷವೆಂದು ವಿಲಿಯಂ ಬ್ಲೇಕ್ ಹೇಳುತ್ತಾನೆ. ಒಂದು ಸಮಗ್ರ ವೃಕ್ಷದಲ್ಲಿ ತುಂಬಿದ ಬದುಕಿನ ರೂಪರೇಷೆಗಳೆಲ್ಲವೂ ಇವೆ. ನಿಲುವು. ಸೌಷ್ಟವ. ಬಣ್ಣ ಎಲ್ಲವನ್ನು ಹೊಂದಿ ಅದು ಜೀವ ಚೈತನ್ಯ ಪಡೆದು ಕಂಗೊಳಿಸುತ್ತಿದೆ''.[೮೩] ಅಂತಹ ಚಿತ್ರಕಲೆಯನ್ನು ಕರಗತ ಮಾಡಿಕೊಂಡು ತಪಸ್ಸಿನಂತೆ ಸಾಧನೆ ಗೈದಿದ್ದಾರೆ. " ನಾನು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಸಂಚರಿಸಿದ್ದೇನೆ. ಧಾರವಾಡ. ಬೆಂಗಳೂರು. ಮುಂಬಯಿ. ಸೊಲ್ಲಾಪುರ. ಅಕ್ಕಲಕೋಟೆ. ದಿಲ್ಲಿ. ಗ್ವಾಲೇರ. ಇಂದೂರ ಮೊದಲಾದ ಪ್ರಮುಖ ನಗರಗಳಲ್ಲಿ ನನ್ನ ಚಿತ್ರಗಳಿವೆ. ಅಷ್ಟೇ ಏಕೆ ನಮ್ಮ ಕರ್ನಾಟಕದ ಪ್ರತಿಯೊಂದು ಮಠದಲ್ಲಿಯೂ ಒಂದಾದರೂ ಚಿತ್ರ ನೋಡಲಿಕ್ಕೆ ಸಿಕ್ಕೇ ಸಿಗುತ್ತದೆ. ಕಲೆ ಎಂಬುದು ಒಂದು ತಪಸ್ಸು ನನ್ನ ಬದುಕಿನಲ್ಲಿ''[೮೪] ಅದು ನಿಜವಾಗಿದೆ ಎನ್ನುತ್ತಾರೆ.

ಚೆಟ್ಟಿಯವರು ಚಿತ್ರಗಳನ್ನು ರಚಿಸಲು ಬಳಸಿದ ಮಾಧ್ಯಮಗಳು ಜಲವರ್ಣ ಮತ್ತು ತೈಲವರ್ಣ. ಅಲ್ಲದೆ ಪೆನ್ಸಿಲ್ ಮಾಧ್ಯಮ. ಅವರು ಭಾವಚಿತ್ರ. ಜೀವಮಾದರಿ ಚಿತ್ರ. ನಿಸರ್ಗಚಿತ್ರ. ಸಂಯೋಜನಾ ಚಿತ್ರಗಳನ್ನು ರಚಿಸಿದ್ದಾರೆ. ಸಾಮಾಜಿಕವಾಗಿ ಮಠ ಮಂದಿರಗಳಿಗಾಗಿ. ವಾಣಿಜ್ಯ ವೃತ್ತಿಗಾಗಿ ಗ್ರಂಥಗಳಿಗೆ ಅಲ್ಲದೆ ವೀರಶೈವ ಪುರಾಣಗಳಿಗೆ. ಪುರಾಣ ಪುರುಷರ ಘಟನಾವಳಿಗಳಿಗೆ ಸಂಬಂಧಿಸಿದ ಸಾವಿರಾರು ಚಿತ್ರಗಳನ್ನು ಚಿತ್ರಿಸಿದ್ದಾರೆ. ಕರ್ನಾಟಕದಲ್ಲಿ ಶರಣರನ್ನು ಕುರಿತು ಯಾರೂ ಚೆಟ್ಟಿಯವರಷ್ಟು ಚಿತ್ರಗಳನ್ನು ರಚಿಸಿಲ್ಲವೆಂದು ಹೇಳಬಹುದು. ಈ ಚಿತ್ರಗಳ ಬಗ್ಗೆ ಮುಂದಿನ ಅಧ್ಯಾಯಗಳಲ್ಲಿ ವಿವರವಾಗಿ ಚರ್ಚಿಸಲಾಗಿದೆ.

---

೮೧. ಮಹಾಲಿಂಗ ಯಾಳಗಿ (ಸಂ.) : ಕಲಾತಪಸ್ವಿ ಎಂ. ವಿ. ಚೆಟ್ಟಿಯವರ ಅಭಿನಂದನ ಗ್ರಂಥ. ಪುಟ ೧೦

೮೨. ಮಹಾಲಿಂಗ ಯಾಳಗಿ (ಸಂ.) : ಕಲಾತಪಸ್ವಿ ಎಂ. ವಿ. ಚೆಟ್ಟಿಯವರ ಅಭಿನಂದನ ಗ್ರಂಥ. ಪುಟ ೬೬

೮೩. ಎಸ್. ಸಿ. ಪಾಟೀಲ (ಸಂ) : ಚಿತ್ರಾಕ್ಷಿ. ಪುಟ ೩

೮೪. ಎಂ. ವಿ. ಚೆಟ್ಟಿ : ನೆನಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ೧೫೮

" ಇಂದು ಪ್ರತಿಯೊಂದರಲ್ಲಿ ಹೊಸ ಹೊಸ ರೀತಿಗಳು ಬರತೊಡಗಿವೆ. ಅವುಗಳನ್ನು ಮುಕ್ತಮನಸ್ಸಿನಿಂದ ಸ್ವಾಗತಿಸಬೇಕು. ಅಂದಾಗ ಲಲಿತ ಕಲೆಗಳು ಬೆಳೆಯಲು ಸಾಧ್ಯ ಎಂಬುದು ನನ್ನ ನಂಬಿಗೆ. " [೮೫] ಎಂದು ಹೇಳುವ ಚೆಟ್ಟಿಯವರು ನವ್ಯಕಲೆಯನ್ನೂ ಸಹಿತ ಅಷ್ಟೇ ಮುಕ್ತವಾಗಿ ಒಪ್ಪಿಕೊಳ್ಳುತ್ತಾರೆ.

ಚೆಟ್ಟಿಯವರು ನೈಜಕಲೆಯಲ್ಲಿ ನುರಿತವರು. ಕೆಲವರು ಇವರನ್ನು ರೆಂಬ್ರಾಟ್. ಬಾಟಿಶೆಲ್ಲಿ. ರವಿವರ್ಮ ಮೊದಲಾದ ವಿಶ್ವಮಾನ್ಯ ಕಲಾವಿದರಿಗೆ ಹೋಲಿಸಿದ್ದಾರೆ. " ಚೆಟ್ಟಿಯವರು ಹೇಗೆಯೇ ಗೆರೆ ಎಳೆದರೂ ಅವು ಸುಂದರ ಚಿತ್ರಗಳಾಗಿ ರೂಪತಳೆಯುತ್ತವೆ. ಇವರ ಕೃತಿಗಳು ಕಲಾ ವ್ಯಾಕರಣಕ್ಕೆ ಹತ್ತಿರವಿರುತ್ತಿದ್ದವು. ತಮ್ಮ ಆ ಪ್ರವೃತ್ತಿಯನ್ನು ನಿರ್ಭೀತಿಯಿಂದ ಮುಂದುವರಿಸಿದ್ದರಿಂದ ಅವರ ಕಲೆಯು ನಿಜವಾಗಿಯೂ ಆನಂದ ಕೊಡುವಲ್ಲಿ ಯಶಸ್ಸು ಕಂಡಿದೆ". [೮೬] ಎಂಬ ಅಭಿಪ್ರಾಯವೂ ಇದೆ.

ಚೆಟ್ಟಿಯವರ ಏಕವ್ಯಕ್ತಿ ಕಲಾ ಪ್ರದರ್ಶನಗಳು ಅತಿ ವಿರಳ. ಅವರೇ ಹೇಳುವಂತೆ " ಪ್ರಚಾರಕ್ಕಾಗಿ ನಾನೆಂದೂ ಹಂಬಲಿಸಿಲ್ಲ. ಪ್ರಸಿದ್ಧಿಯ ಹುಚ್ಚು-ಹವ್ಯಾಸ ನನ್ನಲ್ಲಿ ಇರದೇ ಇರುವುದರಿಂದ ನನ್ನ ಕಲೆಯ ಒಕ್ಕೆ ಪ್ರದರ್ಶನ ಅತ್ಯಂತ ಕಡಿಮೆ " [೮೭] ಆದರೂ ಇವರ ಚಿತ್ರಗಳನ್ನು ಗಮನಿಸಿದ ಪ್ರಸಿದ್ಧ ವ್ಯಕ್ತಿಗಳು ತಮ್ಮ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ.

ಒಂದೊಮ್ಮೆ ಗದುಗಿನ ವಿಜಯ ಕಲಾ ಮಂದಿರದಲ್ಲಿ ಸಾಮೂಹಿಕ ಚಿತ್ರಕಲಾ ಪ್ರದರ್ಶನವೇರ್ಪಟ್ಟಿತ್ತು ಅಂದು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರ್‍ಯಾಂಗ್ಲರ್ ಡಿ. ಸಿ. ಪಾವಟೆಯವರು " ನನ್ನ ಚಿತ್ರಗಳನ್ನು ಕಂಡು ಮಂತ್ರಮುಗ್ಧರಾಗಿ ವಿದೇಶಕ್ಕೆ ಹೋಗಿ ಬಂದವರಿಗಿಂತಲೂ ಇಲ್ಲಿಯೇ ಇರುವ ಶ್ರೀ ಮುರಿಗೆಪ್ಪನವರ ಚಿತ್ರಗಳು ಎಷ್ಟೋ ಪಾಲು ಮೇಲಾಗಿವೆ " [೮೮] ಎಂದು ಪ್ರಶಂಸಿದ್ದಾರೆ.

ಅಂತೆಯೇ ತೇಲಸಂಗ ಹಿರೇಮಠದ ಪಟ್ಟಾಧ್ಯಕ್ಷರು ಅದ್ದೂರಿಯಿಂದ ಅವರನ್ನು ಗೌರವಿಸಿ ಸನ್ಮಾನಮಾಡಿ " ಸಾವಿರಾರು ವರ್ಷಗಳ ಹಿಂದಿನ ವಿಭೂತಿ ಪುರುಷರನ್ನು ಅವರ ಪವಾಡಮಯ ಬದುಕನ್ನು ತಂದು ಮತ್ತೆ ಕಣ್ಣೆದುರಿಗೆ ನಿಲ್ಲಿಸಿದಂತಾಗುತ್ತವೆ ಶರಣ ಮುರಿಗೆಪ್ಪನವರ ಚಿತ್ರಗಳು " [೮೯] ಎಂದಿದ್ದಾರೆ.

೧೯೫೧ ರಲ್ಲಿ ಗದುಗಿಗೆ ಆಗಮಿಸಿದ್ದ ಕಾದಂಬರಿಕಾರ ಅ. ನ. ಕೃಷ್ಣರಾಯರು ಚೆಟ್ಟಿಯವರ ಮನೆಗೆ ಬಂದು ಚಿತ್ರಗಳನ್ನು ವೀಕ್ಷಿಸಿ ಸಂತಸಪಟ್ಟು "ಮುರಿಗೆಪ್ಪಣ್ಣ ನಿಜಕ್ಕೂ ನೀವು ನಮ್ಮ ' ರವಿವರ್ಮರು '. ಶಬ್ದಗಳಿಗೆ ನಿಲುಕದು

---

೮೫. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೫೮

೮೬. ಕಾವೆಂಶ್ರೀ : ಶ್ರೀ. ರಿಯಾಲಿಸ್ಟಿಕ್ ಕಲೆಯ ರಸಋಷಿ ಮೂಲ ಚೆಟ್ಟಿ : ನೂತನ ಮಾಸಪತ್ರಿಕೆ ಪುಟ ೩೨

೮೭. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೫೦

೮೮. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೬೮

೮೯. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೬೮

ನಿಮ್ಮ ಕಲೆಯ ಔನ್ನತ್ಯ ಎಂದು ಉದ್ಗಾರ ತೆಗೆದರು. ಅಷ್ಟೇ ಅಲ್ಲ ನನ್ನ ಆತಿಥ್ಯವನ್ನು ಸವಿದ ಅವರು ಬೆಂಗಳೂರಿಗೆ ಹೋದ ಮೇಲೆ ನಿಮ್ಮ ಕಲೆಯಷ್ಟೇ ಪರಿಣಾಮಕಾರಿ ನಿಮ್ಮ ನಡೆ, ನುಡಿ, ಉಪಚಾರ ಎಂದು ಪತ್ರ ಬರೆದರು ".[೯೦] ಹಾಗೆಯೆ ಸುಪ್ರಸಿದ್ದ ಪತ್ರಕರ್ತರೂ ಪ್ರಪಂಚ, ವಿಶ್ವವಾಣಿಗಳ ಸಂಪಾದಕರೂ ಆದ ಪಾಟೀಲ ಪುಟ್ಟಪ್ಪನವರು " ಕಲಾವಿದರಲ್ಲಿಯೇ ಕಲಾವಿದರೆನಿಸಿದ ಶ್ರೀ ಎಂ. ಎ. ಚೆಟ್ಟಿಯವರ ಕುಂಚಕ್ಕೆ ವಿಶ್ರಾಂತಿ ಎಂಬುದೇ ಇಲ್ಲ. ಅವರು ಗೀಚಿದ ಗೆರೆಗಳೆಲ್ಲ ಸುಂದರ ಚಿತ್ರಗಳಾಗಿರುತ್ತವೆ. ಈ ಕಲಾ ತಪಸ್ವಿಯ ಕೈಯಿಂದ ಸಾಧು ಸತ್ಪುರುಷರು ಮತ್ತೆ ಜೀವ ಪಡೆದು ಕಾಣಿಸಿಕೊಂಡಿದ್ದಾರೆ ".[೯೧] ಎನ್ನುತ್ತಾರೆ.

ಭಗವದ್ಗೀತೆಯ ಶ್ರೀಕೃಷ್ಣನ ಅವತಾರಗಳ ಚಿತ್ರಗಳನ್ನು ಕಂಡಾಗ, ಚೆಟ್ಟಿಯವರ ಕಲಾ ಸೃಷ್ಟಿಯನ್ನು ಕಣ್ಣುತೆರೆದು ನೋಡಿದರೆ, ಕಲಾವಿದ ಹುಟ್ಟುತ್ತಾನೆ, ಸಾಯುತ್ತಾನೆ. ಆದರೆ ಕಲೆಗೆ ಕೊನೆಯಿಲ್ಲ ಎಂಬುದು ದಿಟ. ಮಾಜಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಅವರು ಕೇಂದ್ರ ಸರ್ಕಾರದವರು ಭಗವದ್ಗೀತೆ ಪುಸ್ತಕ ಪ್ರಕಟ ಮಾಡಿದ ಸಂದರ್ಭದಲ್ಲಿ ಹೇಳಿದ ಮಾತುಗಳಿವು.

ಚೆಟ್ಟಿಯವರಂಥ ಕಲಾವಿದರನ್ನು ಗೌರವಿಸುವ ಪರಂಪರೆಯನ್ನು ಹಾಕಿಕೊಂಡು ಬಂದದ್ದು ಈ ದೇಶಕ್ಕೆ ಗೌರವ. ಅವರು ಕರ್ನಾಟಕದಲ್ಲಿ ಜನಿಸದೇ ಬೇರೆಡೆ ಜನಿಸಿದ್ದರೆ ಅಂತಾರಾಷ್ಟ್ರೀಯ ವ್ಯಕ್ತಿಯಾಗುತ್ತಿದ್ದರು. ಎಂದು ಡಾ. ಪಂಚಾಕ್ಷರಿ ಹಿರೇಮಠ ಅವರು ಪ್ರಜಾಮತ ಪತ್ರಿಕೆ ಲೇಖನವೊಂದರಲ್ಲಿ ಬರೆದಿದ್ದಾರೆ.

೧೯೫೫ ಜನೇವರಿ ೨೯-೩೦ ರಂದು ಬಸವ ಕಲ್ಯಾಣದಲ್ಲಿ ೧೬ ನೆಯ ಅಖಿಲ ಭಾರತ ವೀರಶೈವ ಮಹಾಸಭೆ ಸಮಾವೇಶಗೊಂಡಿತ್ತು. ಈ ಮಹಾಸಭೆಗೆ ಬಂಥನಾಳದ ಶ್ರೀ ಮ. ನಿ. ಪ್ರ. ಸಂಗನ ಬಸವ ಶಿವಯೋಗಿಗಳವರು ಅಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ಚೆಟ್ಟಿಯವರು ಚಿತ್ರಿಸಿದಂಥ ೮' x ೬' ಅಳತೆಯ ಶಿವಾನುಭವ ಮಂಟಪದ ತೈಲಚಿತ್ರ ಸಕಲರ ಮೆಚ್ಚುಗೆಗೆ ಪಾತ್ರವಾಯಿತು. " ಬಂಥನಾಳದ ಮಹಾಶಿವಯೋಗಿಗಳು ಆ ಚಿತ್ರವನ್ನು ಬಹುವಾಗಿ ಮೆಚ್ಚಿಕೊಂಡು ೧೨ನೆಯ ಶತಮಾನದಲ್ಲಿ ಇದೇ ಸ್ಥಳದಲ್ಲಿ ಜರುಗಿದ್ದ ಶಿವಾನುಭವ ಮಂಟಪವನ್ನು ಕಣ್ಣಾರೆ ಎಂಟು ಶತಮಾನಗಳ ನಂತರ ಕಾಣುವಂತೆ ಮಾಡಿದ ಸುಪ್ರಸಿದ್ಧ ಕಲಾವಿದ ಚೆಟ್ಟಿಯವರ ಕಲೆ ಅಮೋಘವಾದುದು. ಅವರ ಹಸ್ತದಲ್ಲಿ ಅದ್ಭುತ ಶಕ್ತಿ ಇದೆ. ಕುಂಚದಲ್ಲಿ ಚೈತನ್ಯವಡಗಿದೆ. ಶರಣರನ್ನು ಚಿತ್ರಿಸುವದು ಸಾಮಾನ್ಯವಲ್ಲ ' ನಾನೃಷಿಃ ಕುರುತೇ ಕಾವ್ಯಂ ' ಋಷಿಯಾಗದವನು ಕವಿಯಾಗಲಾರ ಎನ್ನುವಂತೆ ಶರಣನಾಗದವನು ಕಲಾವಿದನಾಗಲಾರ ಎಂಬ ಮಾತಿಗೆ ಈ ಕಲಾ ಸೃಷ್ಟಿಯೇ ಸಾಕ್ಷಿ ಎಂದು ಶ್ಲಾಘಿಸಿದರು ".[೯೨] ಅಲ್ಲದೇ ಬಿ. ಡಿ. ಜತ್ತಿ ಹಾಗೂ ಎಂ. ಪಿ. ಪಾಟೀಲರು ಆ ಚಿತ್ರವನ್ನು ನೋಡಿ " ನಿಜವಾಗಿಯೂ ಇದು ಪಾರ್ಲಿಮೆಂಟ ಆಫ್ ರಿಲಿಜನ್ಸ ಆಗಿದೆ ಎಂದು ಪ್ರಶಂಸಿಸಿದರು ".[೯೩] " ಬಿಬ್ಬನಲ್ಲಿ ಪ್ರತಿಭೆಯಿದೆ ಎಂಬುದನ್ನು ಕಂಡುಕೊಂಡ ಪ್ರಜ್ಞಾವಂತರು ಹಿರಿಯ

---

೯೦. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೪೮

೯೧. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೪೮

೯೨. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೪೬

೯೩. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೪೬

ಅನುಭವಿಕರು. ಇಂತಹ ಪ್ರತಿಭಾವಂತರನ್ನು ಎಲ್ಲಿಯೇ ಆದರೂ ಸಹಜವಾಗಿ ಗೌರವಿಸುತ್ತಾರೆ. ಕಲಿಯಬೇಕು. ಏನನ್ನಾದರೂ ಸಾಧಿಸಬೇಕೆನ್ನುವ ಬಯಕೆಯುಳ್ಳಂತವರಿಗೆ ಪ್ರತಿಷ್ಠೆ ಪುರಸ್ಕಾರಗಳು ತಾವಾಗಿಯೇ ಬರುತ್ತವೆ ಎಂಬುದಕ್ಕೆ ಮುರಿಗೆಪ್ಪನವರೇ ಸಾಕ್ಷಿ" [೯೪] ಅವರೆಂದೂ ಪುರಸ್ಕಾರಗಳನ್ನು ಬಯಸಿ ಚಿತ್ರರಚನೆ ಮಾಡಿದವರೇ ಅಲ್ಲ ಕಲೆಯ ಸೇವೆಯನ್ನು ಬಹುನಿಷ್ಠೆಯಿಂದ ನಿರಂತರವಾಗಿ ಮಾಡಿಕೊಂಡು ಬಂದವರು. ಪ್ರಶಸ್ತಿ ಪುರಸ್ಕಾರಗಳು ಅವರನ್ನೇ ಅರಸಿಕೊಂಡು ಬಂದವು.

ವಿದ್ಯಾರ್ಥಿ ದೆಸೆಯಲ್ಲಿಯೇ ೧೯೨೮ ರಲ್ಲಿ ಜೆ, ಜೆ. ಕಲಾ ಶಾಲೆಯ ಸುಂದರ ತೋಟದಲ್ಲಿದ್ದ ಗಿಡವೊಂದರ ಬೊಡ್ಡೆಯನ್ನು ಮನಮೋಹಕವಾಗಿ ಚಿತ್ರಿಸಿದ್ದನ್ನು ಮುಂಬೈ ಆರ್ಟ ಸೊಸೈಯಿಟಿ ಪ್ರದರ್ಶನಕ್ಕೆ ಕಳಿಸಲಾಗಿತ್ತು. ಆ ಚಿತ್ರಕಲಾ ಪ್ರದರ್ಶನದ ನಿರ್ಣಾಯಕರಲ್ಲಿ ಅದೇ ಕಲಾ ಶಾಲೆಯ ಪ್ರಾಚಾರ್ಯರಾದ ಸಲೋಮನ್ನರು ಒಬ್ಬರಾಗಿದ್ದರು. ಅವರು ಈ ಚಿತ್ರವನ್ನು ಮೆಚ್ಚಿ ಬಹುಮಾನ ಕೊಟ್ಟರಲ್ಲದೇ ಅದನ್ನು ಶಾಲೆಯ ಗ್ಯಾಲರಿಗಾಗಿ ಸಂಗ್ರಹಿಸಿದರು. ಅದರ ಪ್ರತಿಕೃತಿಯನ್ನು ಇಂಗ್ಲೆಂಡಿಗೆ ಕಳಿಸಿದರು. ಅದು ಅಲ್ಲಿಯೂ ಜನ ಮೆಚ್ಚುಗೆ ಗಳಿಸಿತು. " ಆ ಚಿತ್ರವನ್ನು ಮೆಚ್ಚಿಕೊಂಡ ಅವರ ಗುರುಗಳಾದ ಗ್ಲಾಡಸನ್ ಸಲೋಮನ್ ಅವರು ಚೆಟ್ಟಿ ಅವರಿಗೆ ತಮ್ಮ ಕೈಗುಂಡಿಯನ್ನು ಪ್ರೀತಿಯಿಂದ ಕೊಟ್ಟಿದ್ದರಂತೆ" [೯೫] ೧೯೩೦ ರಲ್ಲಿ ಡಿಪ್ಲೋಮಾ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾಗಿ ಬಂಗಾರ ಹಾಗೂ ರಜತ ಎರಡೂ ಪದಕಗಳನ್ನು ಪಡೆದುಕೊಂಡರಲ್ಲದೆ. ೧೯೩೧ ರಿಂದ ೧೯೩೩ ರ ವರೆಗೆ ಜೆ. ಜೆ. ಕಲಾ ಶಾಲೆಯಲ್ಲಿ ಮೂರು ವರ್ಷ ಫೆಲೋಶಿಪ್‌ನ್ನು ಪಡೆದರು. ೧೯೩೨ ರಲ್ಲಿ ಲಖನೌ ಚಿತ್ರಕಲಾ ಪ್ರದರ್ಶನಕ್ಕೆ ಕಳಿಸಿದ ಚಿತ್ರಕ್ಕೆ ಬಹುಮಾನ ದೊರೆಯಿತು. ೧೯೩೪ ರಲ್ಲಿ ಔಂಧ ಸಂಸ್ಥಾನದ ಮಹಾರಾಜರು ಏರ್ಪಡಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ಚೆಟ್ಟಿಯವರ ೪' x ೩' ಅಡಿ ಅಳತೆಯ ' ವಿಶ್ವರೂಪದರ್ಶನ ' ತೈಲ ಚಿತ್ರಕ್ಕೆ ಪ್ರಥಮ ಸ್ಥಾನ ಬಂತು. ೧೯೩೫ ರಲ್ಲಿ ಸೊಲ್ಲಾಪುರದಲ್ಲಿ ಏರ್ಪಡಿಸಿದ್ದ ಇವರ ಚಿತ್ರಕಲಾ ಪ್ರದರ್ಶನ ವೀಕ್ಷಿಸಲು ಬಂದಿದ್ದ ಅಕ್ಕಲಕೋಟೆಯ ಮಹಾರಾಜರು ಇವರ ಚಿತ್ರಕಲಾ ವೈಖರಿಯನ್ನು ಮೆಚ್ಚಿಕೊಂಡು ಚಿನ್ನದ ಪದಕ ನೀಡಿ ಗೌರವಿಸಿದರು. ೧೯೪೦ ರಲ್ಲಿ ಗ್ವಾಲೇರ ಚಿತ್ರಕಲಾ ಪ್ರದರ್ಶನದಲ್ಲಿ ಬಹುಮಾನ ದೊರೆತಿದೆ. ಫೆಲೋಶಿಪ್ ಪಡೆದಂಥ ಸಂದರ್ಭದಲ್ಲಿ ಉದಯ ಪುರಕ್ಕೆ ಪ್ರವಾಸ ಕೈಗೊಂಡು ಅಲ್ಲಿನ ಅರಮನೆಯ ಆವರಣದಲ್ಲಿದ್ದ ಜಲಮಂದಿರದ ನಿಸರ್ಗ ಚಿತ್ರ ಬಿಡಿಸಿಟ್ಟರು. ಇವರ ಕಲೆಯನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದ ಮಹಾರಾಜರು ಅದನ್ನು ಅರಮನೆಗಾಗಿ ಸಂಗ್ರಹಿಸಿ ಪುರಸ್ಕಾರ ನೀಡಿ ಗೌರವಿಸಿದರು.

೧೯೬೬ ರಲ್ಲಿ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ. ೧೯೮೮ ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ. ೧೯೯೬ ರಲ್ಲಿ ಎಂ. ಟಿ. ವ್ಹಿ. ಆಚಾರ್ಯ ಪ್ರಶಸ್ತಿ. ೧೯೯೬ ರಲ್ಲಿ ವೆಂಕಟಪ್ಪ ಪ್ರಶಸ್ತಿಗಳು ಚೆಟ್ಟಿಯವರ ಕಲೆಯನ್ನು ಅರಸಿಕೊಂಡು ಬಂದಿವೆ.

---

೯೪. ಅನ್ನದಾನಿ ಹಿರೇಮಠ : ಎಂ. ವಿ. ಚೆಟ್ಟಿ : ಪುಟ ೫

೯೫. ಶ್ರೀಮತಿ ಮಹಾದೇವಿ ಕಿತ್ತೂರ ಸಂದರ್ಶನ. ೧೦-೧೦-೧೯೯೮. ಗದಗ

ಸಂಘ ಸಂಸ್ಥೆಗಳಿಂದ ಸನ್ಮಾನ :

ಸಹೃದಯ. ಸರಳ ಸಜ್ಜನಿಕೆಯ. ನಿರಾಡಂಬರ ನಿರಹಂಕಾರದ ಇವರ ನಡತೆಗೆ ನಾಡಿನ ಜನರೇ ಹೆಚ್ಚು ಸನ್ಮಾನ ಪುರಸ್ಕಾರಗಳನ್ನು ನೀಡಿ ಗೌರವಿಸಿದ್ದಾರೆ. ನಾಡಿನ ಅನೇಕ ಮಠ-ಮಾನ್ಯಗಳು. ಸಂಘ ಸಂಸ್ಥೆಗಳು ಸನ್ಮಾನಿಸಿವೆ. " ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರುಗಳು. ಸಾವಳಗಿಯ ಜಗದ್ಗುರು ಶ್ರೀ ಶಿವಲಿಂಗೇಶ್ವರ ಸಿದ್ಧಸಂಸ್ಥಾನಮಠ. ಮುಂಡರಗಿಯ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ. ಜೇವರಗಿ ಷಣ್ಮುಖ ಶಿವಯೋಗಿಗಳ ಮಠ. ಗದುಗಿನ ಜಗದ್ಗುರು ತೋಂಟದಾರ್ಯ ಮಠ. ಅಥಣಿಯ ಗಚ್ಚಿನ ಮಠ. ತೇಲಸಂಗ ಹಿರೇಮಠದ ಪಟ್ಟಾಧ್ಯಕ್ಷರು. ಧಾರವಾಡದ ಮುರುಘಾಮಠ. ಸಾಂಗಲಿ ಕಲಾ ವಿಶ್ವವಿದ್ಯಾಲಯ. ಗೋಕಾಕ ಚಿತ್ರಕಲಾ ಸಂಘ. ನಲ್ವತ್ತವಾಡ. ಅಮೀನಗಡ. ನಿಡಸೋಸಿ ಮಠಗಳು. ಇನ್ನೂ ಹಲವಾರು ಸಂಘ. ಸಂಸ್ಥೆಗಳು ಹಾಗೂ ವೀರಶೈವ ಮಹಾಅಧಿವೇಶನವು ಸನ್ಮಾನಿಸಿವೆ. " ನನ್ನ ಅಲ್ಪಕಲೆಗೆ ಹೃದಯದುಂಬಿ ಹಾರೈಸಿ ಸತ್ಕರಿಸಿದ್ದಾರೆ. ನಾನು ಇನ್ನೂ ಬೆಳೆಯಬೇಕೆಂಬ ಸತ್ ಸಂಕಲ್ಪದ ಈ ಸನ್ಮಾನ ಸಮಾರಂಭಗಳು ನಾಡಿನಾದ್ಯಂತ ಜರುಗಿವೆ ".[೯೬]

ದಿಲ್ಲಿಯ ಆಲ್ ಇಂಡಿಯಾ ಸೊಸೈಟಿಯವರು ರಜತ ಪದಕವಿತ್ತು ದಿಲ್ಲಿಗೆ ಆಮಂತ್ರಿಸಿ ಗೌರವಿಸಿದ್ದಾರೆ. ಶ್ರೀ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯ ಮಹಾಸ್ವಾಮಿಗಳವರು ಬಾಹುಬಲಿ ಉದ್ಭವದ ಕಾರಣ ಐದಾರು ತೈಲ ಚಿತ್ರಗಳನ್ನು ಚಿತ್ರಿಸಲು ಹೇಳಿ ಅವುಗಳನ್ನು ಮೆಚ್ಚಿಕೊಂಡು ಗೌರವಿಸಿದ್ದಾರೆ. ೧೦' x ೮' ಸೈಜಿನಲ್ಲಿಯ ಕುದುರೆ ಮೇಲೆ ಕುಳಿತ ಚಾವುಂಡರಾಯನ ಬೃಹತ್ ಚಿತ್ರವಂತೂ ಅದ್ಭುತವಾದದ್ದು ಎಂದು ಅವರು ಪ್ರಶಂಸಿಸಿದ್ದಾರೆ.

ಚೆಟ್ಟಿಯವರ ಇತ್ತೀಚಿನ ಬದುಕು :

" ಚಿತ್ರಕಾರ ತನ್ನ ಚಿತ್ರಗಳಿಂದ ಅಮರನಾಗುತ್ತಾನೆ. ಚಿತ್ರಕಾರನ ಕಲ್ಪನಾಶಕ್ತಿಯು ಅಳಿದುದನ್ನು ಸಹ ಜೀವಂತ ಗೊಳಿಸುತ್ತದೆ. ಪ್ರಕೃತಿಯ ಆರಾಧಕನಾದ ಚಿತ್ರಕಾರ ತನ್ನ ಕಲೆಯಿಂದ ಸೌಂದರ್ಯವನ್ನು ತುಂಬುತ್ತಾನೆ. ಸೌಂದರ್ಯದ ಹಿನ್ನೆಲೆಯಲ್ಲಿ ಸತ್ಯ ಶಿವಗಳೂ ಅಡಕವಾಗುತ್ತವೆ. ಚಿತ್ರಕ್ಕೆ ಆಧಾರವಾದ ಯಾವುದೇ ವಸ್ತುವಿನಲ್ಲಿ ಕಲಾಕಾರನು ಬಣ್ಣಗಳ ಸಹಾಯದಿಂದ. ಬುದ್ಧಿಶಕ್ತಿಯ ಪ್ರತಿಭೆಯಿಂದ ಕಲೆಯನ್ನು ಸಜೀವವಾಗಿಸುತ್ತಾನೆ. ಸಾಕ್ಷಾತ್ ಗೊಳಿಸುತ್ತಾನೆ ".[೯೭] ಜೀವನಮುದ್ದಕ್ಕೂ ಚೆಟ್ಟಿಯವರು ತಮ್ಮ ಕುಂಚ ಬಣ್ಣಗಳಿಂದ ಅನೇಕ ವಿಷಯಗಳನ್ನೊಳಗೊಂಡ ಚಿತ್ರ ಕಲೆಯನ್ನು ಸಜೀವವಾಗಿಸಿ ಸಾಕ್ಷಾತ್ ಗೊಳಿಸಿದ್ದಾರೆ. ಆದರೆ ಈಗ ದೈಹಿಕವಾಗಿ ಮತ್ತು ಮಾನಸಿಕವಾಗಿ ಕುಂದಿದ ಬಣ್ಣದ ಬದುಕು ವಿಶ್ರಾಂತಿ ಪಡೆಯುತ್ತಿದೆ.

ಈಗ ಅವರಿಗೆ ೯೪ ವರ್ಷ. ಕಲೆಯನ್ನೇ ತಮ್ಮ ಜೀವನದ ಉಸಿರಾಗಿಸಿಕೊಂಡ ಅವರಿಗೆ ಅರಳು ಮರಳು. ಹೇಳಿದ ವಿಷಯಗಳನ್ನೇ ಅನೇಕ ಬಾರಿ ಹೇಳುವಂಥ ಸ್ಥಿತಿ. ಈಗ ಅವರ ಕುಂಚ ಮೌನವಾಗಿದೆ. ಆದರೂ

---

೯೬. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೫೦

೯೭. ಮಹಾಲಿಂಗ ಯಾಳಗಿ (ಸಂ.) : ಕಲಾತಪಸ್ವಿ ಎಂ. ವಿ. ಚೆಟ್ಟಿಯವರ ಅಭಿನಂದನ ಗ್ರಂಥ. ಪುಟ xiii

ಸ್ವಾವಲಂಬಿಗಳಾಗಿದ್ದಾರೆ. ಈಗಲೂ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಾರೆ. ದೇಹಕ್ಕೆ ಮುಪ್ಪು ಬಂದಿದ್ದರೂ ಅವರ ಮುಖದಲ್ಲಿಯ ತೇಜಸ್ಸು, ಸಾತ್ವಿಕ ಕಳೆ ಯಾವತ್ತು ರಾರಾಜಿಸುತ್ತಿದೆ. ೧೫-೧-೧೯೯೯ ರಂದು ಇವರ ಧರ್ಮಪತ್ನಿ ಸುಂದರಾಂಬಿಕೆಯವರು ಶಿವನ ಪಾದಸೇರಿದರು. ಅಂದಿನಿಂದ ಮಾನಸಿಕವಾಗಿ ಮತ್ತಷ್ಟು ಬಳಲಿದ ಚೆಟ್ಟಿಯವರು ಈಗ ತಮ್ಮ ದೊಡ್ಡ ಮಗನಾದ ಬಸವರಾಜ ಚೆಟ್ಟಿ. ಸೊಸೆ ಲಲಿತ ಹಾಗೂ ಮೊಮ್ಮಗ ಮೃತ್ಯುಂಜಯ ಇವರೊಂದಿಗೆ ವಿಜಾಪುರದಲ್ಲಿ ನೆಮ್ಮದಿಯ ಜೀವನ ನಡೆಸಿದ್ದಾರೆ.

ಜೀವನ ಪೂರ್ತಿ ದುಡಿದು ಜಂಗಮ ಸೇವೆ. ಅತಿಥಿಗಳ ಸೇವೆಯನ್ನು ಮಾಡಿದ ಚೆಟ್ಟಿಯವರು ಬಡವರ ಬಗ್ಗೆಯೂ ಅಷ್ಟೇ ದಯೆ. ಅನುಕಂಪ ಹೊಂದಿದವರಾಗಿದ್ದಾರೆ. ಇವರ ಈ ಸರಳತೆಯ ದುರುಪಯೋಗ ಪಡೆದುಕೊಂಡ ಜನರೂ ಇದ್ದಾರೆ. ಆ ಪರಿಸ್ಥಿತಿ ಅವರ ಕಲಾಕೃತಿಗಳಿಗೂ ತಗುಲಿದೆ. " ಗದುಗಿನ ನಿವಾಸದಲ್ಲಿರುವ ಅವರ ಕಲಾಕೃತಿ ಹಾಗೂ ಸಂಗ್ರಹಿಸಿಟ್ಟ ಮಹತ್ವಪೂರ್ಣ ಪುಸ್ತಕಗಳೆಲ್ಲ ಅಲ್ಲಲ್ಲಿ ಹಂಚಿಹೋಗಿವೆ. ಕೆಲವರು ಅವರ ಕಲಾಕೃತಿಗಳನ್ನು ವೀಕ್ಷಿಸಲು ಬಂದಂತೆ ಮಾಡಿ ಅವುಗಳನ್ನು ಹೊತ್ತುಕೊಂಡು ಹೋಗಿರುವ ಸಾಧ್ಯತೆಗಳಿವೆ ".[೯೮] ಗದುಗಿನ ಮನೆಯಲ್ಲಿ ಈಗ ಅವರು ವಾಸವಾಗದೆ ಇರುವುದರಿಂದ ಆ ಮನೆಯ ಕೆಲವು ಗೋಡೆಗಳು ಬಿದ್ದು ಹೋಗಿ ಧೂಳು ತುಂಬಿದೆ. ಅವರ ಚಿತ್ರಗಳೆಲ್ಲ ಅಸ್ತವ್ಯಸ್ತವಾಗಿವೆ. ಕೆಲವು ಕಲಾಕೃತಿಗಳಂತೂ ಕ್ರಿಮಿಕೀಟಗಳಿಂದ ಸಂಪೂರ್ಣ ನಾಶವಾಗಿವೆ. ಒಬ್ಬ ಹಿರಿಯ ಕಲಾವಿದನ ಅಭಿವ್ಯಕ್ತಿಯ ದುರಂತ ಇದಾಗಿದೆ. ಅಳಿದುಳಿದ ಚಿತ್ರಗಳಿಂದಲೇ ಗದುಗಿನ ತಮ್ಮ ನಿವಾಸದಲ್ಲಿ ಆರ್ಟಗ್ಯಾಲರಿ ಮಾಡಬೇಕು. ಅದರ ಸಂಪೂರ್ಣ ಜವಾಬ್ದಾರಿಯನ್ನು ಮಗನಾದ ಬಸವರಾಜನೇ ವಹಿಸಿಕೊಂಡು ನಡೆಸಬೇಕು. ಅದಕ್ಕೆ ಸಮಾಜದ. ಸಹೃದಯರ ಸಹಕಾರ ಬೇಕು ಎಂದು ಆಶಿಸುವ ಚೆಟ್ಟಿಯವರು ಕಲಾಕ್ಷೇತ್ರದಲ್ಲಿ ಇಂತಹ ಸಾಧನೆಯ ಮಾದರಿಯ ವ್ಯಕ್ತಿ ಆಗಬೇಕೆಂಬುದು ಅವರ ಕೊನೆಯ ಆಸೆಯಾಗಿದೆ.

---

೯೮. ಕಾವೆಂಶ್ರೀ : ನೂತನ ಮಾಸಪತ್ರಿಕೆ. ೧೯-೩-೨೦೦೦ ಪುಟ ೩೩



ಲಲಿತಕಲಾ ಅಕಾಡಮಿ ಪ್ರಶಸ್ತಿ ಕಮಲಾದೇವಿ ಚಟ್ಟೋಪಾಧ್ಯಾಯರೊಂದಿಗೆ,



ವೆಂಕಟಪ್ಪ ಪ್ರಶಸ್ತಿ



ಎಂ.ಟಿ.ವಿ. ಆಚಾರ್ಯ ಪ್ರಶಸ್ತಿ.



ಎಂ. ಪಿ. ಚೆಟ್ಟಿಯವರು ಪ್ರಶಸ್ತಿ ಪತ್ರಗಳೊಂದಿಗೆ

ಅಧ್ಯಾಯ ಮೂರು

ಮುಂಬೈ ಸರ್. ಜೆ. ಜೆ. ಸ್ಕೂಲ್ ಆಫ್ ಆರ್ಟ್‌ನ ಕಲಾ ವ್ಯಾಸಂಗ



" ಒಬ್ಬ ಕಲಾವಿದ ಗಟ್ಟಿನೆಲೆಯಲ್ಲಿ ವ್ಯವಹರಿಸಬೇಕಾದರೆ ಆತನಿಗೆ ಕಲೆಯ ವ್ಯಾಕರಣ ತಿಳಿದಿರುವುದೊಳ್ಳೆಯದು. ಶಿಕ್ಷಣ ಇರುವುದೊಳ್ಳೆಯದು. ಏಕೆಂದರೆ ಶಿಕ್ಷಣದಿಂದ ಆತ್ಮವಿಶ್ವಾಸ ಚಿಗುರುತ್ತದೆ. ಅಧ್ಯಯನದ ಕಾರಣ ಮನಸ್ಸಿಗೆ ಹೊಸ ಹೊಸ ಆಯಾಮಗಳು ಹೊಳೆಯಬಹುದು." [೧] ಹುಟ್ಟು ಕಲಾವಿದರಾದ ಚೆಟ್ಟಿಯವರಿಗೆ ಕಲೆಯ ವ್ಯಾಕರಣದ ಶಿಕ್ಷಣದ ಅವಶ್ಯಕತೆ ಇತ್ತು. ಚೆಟ್ಟಿಯವರ ಒಲವು ಕೂಡಾ ಹೆಚ್ಚಿನ ವ್ಯಾಸಂಗಕ್ಕಾಗಿ ಮುಂಬಯಿಯ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್ ಸಂಸ್ಥೆಯನ್ನು ಸೇರಿ ಕಲಾಭ್ಯಾಸ ಕೈಕೊಳ್ಳಬೇಕು. ಕಲಾರಾಧನೆ ಮಾಡಿ ಕಲಾದೇವಿಯ ಕೃಪೆಗೆ ಒಳಗಾಗಬೇಕೆಂಬುವಾಗಿತ್ತು. ಆದರೆ ಇವರನ್ನು ಚಿಕ್ಕಂದಿನಿಂದ ಬೆಳೆಸಿದ ನೈಷ್ಟಿಕ ಜೀವನದ ಚಿಕ್ಕಪ್ಪನವರು ಆಚಾರ ವಿಚಾರಗಳಿಗೆ ಧಕ್ಕೆ ಆದರೆ ಸಹಿಸುವವರಾಗಿದ್ದಿಲ್ಲ. ಹಾಗಾಗಿ ಇವರನ್ನು ಕಳಿಸಲು ಒಪ್ಪಲಿಲ್ಲ.

ಬೆಳಗಾಂವಿಯ ಶಹಪೂರದಲ್ಲಿ ವಾಸವಾಗಿದ್ದ ಚೆಟ್ಟಿಯವರ ಮನೆಯ ಪಕ್ಕದಲ್ಲಿ ಅವರ ಆಪ್ತರಾದ ಶ್ರೀ ವಿರೂಪಾಕ್ಷಪ್ಪಣ್ಣ ಚಿಕ್ಕಪ್ಪ ಬೆಂಬಳಗಿಯವರು ವಾಸವಾಗಿದ್ದರು. ಅವರ ಮನೆಗೆ ರಾಮದುರ್ಗದ ಶ್ರೀ ಚೆಂಬಣ್ಣ ಬೆಂಬಳಗಿಯವರೂ ಬಂದಿದ್ದರು. ಚೆಟ್ಟಿಯವರ ಮನದ ಅಳಲನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರು. " ನನ್ನ ಸ್ವಭಾವವನ್ನು ಬಲ್ಲ ಹಾಗೂ ನನ್ನಲ್ಲಿ ಹುದುಗಿದ್ದ ಕಲಾಭಿರುಚಿಯನ್ನು ಕಂಡುಕೊಂಡ ವಿರುಪಣ್ಣ ಚಿಕ್ಕಪ್ಪ ಹಾಗೂ ಚೆಂಬಣ್ಣನವರು ಸಂಜೆ ಮನೆಗೆ ಬಂದು. ನಮ್ಮ ಚಿಕ್ಕಪ್ಪ ಅವರನ್ನು ಮುಂಬಯಿಗೆ ನನ್ನನ್ನು ಕಳಿಸುವಂತೆ ಒಪ್ಪಿಸಿದರು.. " [೨] ಅದಕ್ಕಾಗಿ ಅವರ ಚಿಕ್ಕಪ್ಪನವರು ಒಡ್ಡಿದ ನಿಯಮಗಳು ಅನೇಕ. ಅವುಗಳನ್ನು ಪಾಲಿಸಿದರೆ ಅವರಿಗೆ ಮುಂಬಯಿಗೆ ಹೋಗಲು ಅವಕಾಶ.

" ನಳದ ನೀರು ಕುಡಿಯಬಾರದು. ಖಾನಾವಳಿಗೆ ಹೋಗಬಾರದು. ಸ್ವತಃ ಅಡಿಗೆ ಮಾಡಿಕೊಂಡೇ ಉಣ್ಣಬೇಕು. " [೩] ಎಂಬ ಹಲವಾರು ಕರಾರುಗಳಿಗೆ ಒಪ್ಪಿಕೊಂಡರು. " ಆಗ ಮುಂಬಯಿಯಲ್ಲಿ ಶ್ರೀ ನಿಜಲಿಂಗಪ್ಪಣ್ಣ ಹತ್ತರಕಿ ಅವರ ಅಡತಿ ಅಂಗಡಿ ಇತ್ತು. ಅವರು ನಮ್ಮ ಆಪ್ತರೆ. ಅವರ ಅಂಗಡಿಯಲ್ಲೆ ವಾಸ. ಅಲ್ಲಿಯೇ ಸ್ನಾನ. ಊಟ. ಅಡಿಗೆ

---

೧. ಕು. ಶಿ. ಹರಿದಾಸ ಭಟ್ಟ : " ಕಟ್ಟಂಗೇರಿ ಕೃಷ್ಣ ಹೆಬ್ಬಾರ ಕಲೆ ಮತ್ತು ಬದುಕು ". ಪುಟ ೩೧

೨. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೨

೩. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೨

ಮಾಡಿಕೊಂಡು ಕಲಾಭ್ಯಾಸವನ್ನು ಮುಂದುವರಿಸಬೇಕೆಂದು ಅಲ್ಲಿ ಅವರು ವ್ಯವಸ್ಥೆ ಮಾಡುವಂತೆ ಶ್ರೀ ವಿರೂಪಾಕ್ಷಪ್ಪ ಚಿಕ್ಕಪ್ಪ ಬೆಂಬಳಗಿಯವರಿಗೆ ಪತ್ರ ಬರೆದು ಕೊಟ್ಟರು. "[೪] ಅಂದಿನ ದಿನಗಳಲ್ಲಿ ಕರ್ನಾಟಕದ ಕೆಲವರು ಉದ್ದಿಮೆ ವ್ಯಾಪಾರಕ್ಕಾಗಿ ಮುಂಬಯಿಯಲ್ಲಿ ವಾಸ್ತವ್ಯ ಹೂಡುತ್ತಿದ್ದರು. ಅಂಥವರಲ್ಲಿ ನಮ್ಮ ನಿಜಲಿಂಗಪ್ಪಣ್ಣ ಪತ್ತರಕಿ. ಶ್ರೀ ಗಂಗಾಧರಪ್ಪ ಸಾಬೋಜಿಯವರಂಥ ಉದಾರಾಶ್ರಯಿಗಳು ಇದ್ದರು. ಇವರು ನಮ್ಮ ಕರ್ನಾಟಕದಿಂದ ಮುಂಬಯಿಗೆ ಕಲಿಯಲು ಹೋದ ವಿದ್ಯಾರ್ಥಿಗಳಿಗೆ ಬಹಳ ಸಹಾಯವನ್ನು ಮಾಡಿದ್ದಾರೆ.

" ಶಿಕ್ಷಣ ದಾರಿಯ ದೀಪವಾಗಬಹುದು; ಆದರೆ ದೀಪ ಚೆಲ್ಲುವ ಬೆಳಕಿನಲ್ಲಿ ನಡೆದು ಗುರಿ ಮುಟ್ಟಬೇಕಾದದ್ದು ಮಾತ್ರ ಪ್ರಯಾಣಿಕನ ಕೆಲಸ. ದೀಪವೇ ನಡೆಯಬಾರದು. ಎಂದಿದ್ದರೂ ದೀಪ ಬೇಕು; ಹೆದ್ದಾರಿಯಲ್ಲಿ ದಿಕ್ಕು ತೋರಿಸುವ ಕೈಗಂಬ ಇರುವಂತೆ. "[೫] ಅಂತೆಯೇ ಮುಂಬಯಿಯ ಸರ್. ಜೆ. ಜೆ. ಕಲಾ ಶಾಲೆಯ ಶಿಕ್ಷಣ ಚೆಟ್ಟಿಯವರ ಕಲಾ ಜೀವನದಲ್ಲಿ ಬೆಳಕು ಚೆಲ್ಲುವ ದೀಪವಾಯಿತು. ನೈಜ ಕಲೆಯ ರಸಋಷಿಯಾಗಲು ಮಾರ್ಗ ತೋರಿತು. " ೧೯೨೪ ರಲ್ಲಿ ಬೆಳಗಾವಿಯಿಂದ ಮುಂಬಯಿಗೆ ಪಯಣ ಬೆಳೆಸಿದೆ. ಆಗ ನಾನು ಹದಿನೇಳು ವರ್ಷದ ತರುಣ. ನನಗೆ ಮೊದಲಿನಿಂದಲೂ ಮರಾಠಿ ಬರುತ್ತಿದ್ದುದರಿಂದ ಮುಂಬಯಿಯಲ್ಲಿ ಭಾಷೆಯ ತೊಂದರೆ ಬರಲಿಲ್ಲ. ಶ್ರೀ ನಿಜಲಿಂಗಪ್ಪಣ್ಣ ರೇವಪ್ಪಣ್ಣ ಪತ್ತರಕಿ ಅವರ ಅಂಗಡಿ ಕಾಳಬಾದೇವಿ ರೋಡಿನಲ್ಲಿತ್ತು. ಅದೇ ನನ್ನ ವಾಸಸ್ಥಾನವಾಯಿತು. "[೬] ಈ ರೀತಿ ಚೆಟ್ಟಿಯವರು ಅಂಥ ಕಷ್ಟದ ಕಾಲದಲ್ಲಿಯೂ ಎಲ್ಲ ತೊಂದರೆಗಳನ್ನು ಎದುರಿಸಲು ಸಿದ್ಧರಾಗಿ ಮುಂಬಯಿಯಂತಹ ಮಹಾನಗರಕ್ಕೆ ಕಲಾ ಶಿಕ್ಷಣದ ದಾಹದಿಂದ ಸರ್ ಜೆ. ಜೆ. ಕಲಾ ಶಾಲೆಯನ್ನು ಸೇರಲು ಉತ್ಸುಕರಾಗಿ ಬಂದರು.

" ನಾನು ಮುಂಬಯಿ ತಲುಪಿದ ಮರುದಿನವೇ ಜೆ. ಜೆ. ಸ್ಕೂಲ್ ಆಫ್ ಆರ್ಟ್ ಸಂಸ್ಥೆ ಸೇರಿದೆ. ಪೇಂಟಿಂಗ್ ಮತ್ತು ಡ್ರಾಯಿಂಗ್ ಆರಿಸಿಕೊಂಡು ಕಲಿಯಲಿಚ್ಛಿಸಿದಾಗ. ಅಲ್ಲಿಯ ಮುಖ್ಯ ಗುರುಗಳಾಗಿದ್ದ ಶ್ರೀ ಕೆ. ಬಿ. ಚೂಡೇಕರ ಒಪ್ಪಿಕೊಂಡು ಸೇರಿಸಿಕೊಂಡರು. ಇದೇ ಸಂದರ್ಭದಲ್ಲಿ ಶಿರಸಂಗಿ ಲಿಂಗರಾಜ ಟ್ರಸ್ಟ್ ಫಂಡಿನಿಂದ ಸ್ಕಾಲರ್‌ಶಿಪ್ ಬೇರೆ ದೊರೆತು. ಹೆಚ್ಚಿಗೆ ಅನುಕೂಲವಾಯಿತು. "[೭]

ಆಗಿನ ಕಾಲದ ಪಠ್ಯಕ್ರಮ :

ಸರ್ ಜೆ. ಜೆ. ಕಲಾ ಶಾಲೆಯ ಪಠ್ಯ ಕ್ರಮದ ಬಗ್ಗೆ ತಿಳಿದುಕೊಳ್ಳುವ ಮೊದಲು ಆ ಶಾಲೆಯ ಪ್ರಾರಂಭದ ಬಗ್ಗೆ ಮೊದಲು ತಿಳಿದುಕೊಳ್ಳಬೇಕು. ಯಾಕೆಂದರೆ ಸ್ವಾತಂತ್ರ್ಯಕ್ಕಿಂತಲೂ ಮೊದಲು ಬ್ರಿಟೀಷರ ಆಳ್ವಿಕೆಯ ಕಾಲ ಮತ್ತು ಭಾರತೀಯ ಕಲಾಸಂಪ್ರದಾಯದ ಅಧಃಪತನದ ಸಂಕ್ರಮಣದ ಕಾಲದಲ್ಲಿ ಈ ಕಲಾ ಶಾಲೆ ಪ್ರಾರಂಭವಾಯಿತು. " ಲಂಡನ್ನಿನ ರಾಯಲ್ ಅಕಾಡೆಮಿ ಆಫ್ ಆರ್ಟ್ ಸಂಸ್ಥೆಯ ಮಾದರಿಯಲ್ಲಿ ಬ್ರಿಟೀಷರು ಸ್ಥಾಪನೆ ಮಾಡಿದ ಭಾರತದ

---

೪. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೧೨

೫. ಕು. ಶಿ. ಹರಿದಾಸ ಭಟ್ಟ : " ಕಟ್ಟಿಂಗೇರಿ ಕೃಷ್ಣ ಹೆಬ್ಬಾರ ಕಲೆ ಮತ್ತು ಬದುಕು ". ಪುಟ ೩೨

೬. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೩

೭. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೩

ಏಕೈಕ ಕಲಾ ಶಾಲೆ ಎಂದರೆ. ಮುಂಬಯಿಯ ಸರ್. ಜೆ. ಜೆ. ಸ್ಕೂಲ್ ಆಫ್ ಆರ್ಟ್ ಆ್ಯಂಡ್ ಕ್ರಾಫ್ಟ್ಸ್. ಕಲಾವಿದನಾಗುವ ಅಪೇಕ್ಷೆಯುಳ್ಳ ಪ್ರತಿಯೊಬ್ಬರಿಗೂ ಜೆ. ಜೆ. ಸ್ಕೂಲ್ ಮಹತ್ತರವಾದ ಆಕರ್ಷಣೆ. ಈ ಶಾಲೆಯ ಸ್ಥಾಪನೆಗೆ ಮೊದಲೇ ಭಾರತೀಯ ಕಲಾಸಂಪ್ರದಾಯ ಅಧೋಗತಿಯ ಹಂತ ತಲುಪಿತ್ತು. ಈಸ್ಟ್ ಇಂಡಿಯಾ ಕಂಪನಿ ಬರುವುದಕ್ಕೂ ಮೊದಲು ನಮ್ಮಲ್ಲಿ ರೂಢಿಯಲ್ಲಿದ್ದ – ಜೈನ. ರಜಪೂತ ಮತ್ತು ಮೊಗಲ್ ಕಲೆಯಲ್ಲಿ ತನ್ನ ಪರಮೋಚ್ಚ ಸಿದ್ಧಿಯನ್ನು ಪಡೆದಿದ್ದ ಭಾರತೀಯ ಕಲೆಯ ಪರಂಪರೆ ಕಡಿದು ಹೋಗಿತ್ತು. "[೮] ಎಂಬ ಅಭಿಪ್ರಾಯ ಸೂಕ್ತವಾಗಿದೆ.

೧೮೫೭ ಮಾರ್ಚ್ ೨ ರಂದು ಈ ಕಲಾ ಶಾಲೆ ಅಸ್ತಿತ್ವಕ್ಕೆ ಬಂದಿತು. ಇದಕ್ಕೆ ಮೂಲ ಕಾರಣ ಪುರುಷ " ಪಾರ್ಸಿ ಮನೆತನದಲ್ಲಿ ಹುಟ್ಟಿದ ವಿಶಾಲ ಹೃದಯಿಯಾದ ಜೀಜಾಭಾಯಿ ಜೆಮಶೇಡಜಿ. ಲಂಡನ್‌ದಲ್ಲಿ ಕ್ರಿ. ಶ. ೧೮೫೧ ರಲ್ಲಿ ಅಂತರ್‌ರಾಷ್ಟ್ರೀಯ ಚಿತ್ರಕಲಾ ಪ್ರದರ್ಶನ ನಡೆದಿತ್ತು, ಅದನ್ನು ನೋಡಲು ಹೋದಾಗ ಅವರ ಮನಸ್ಸಿನಲ್ಲಿಯೂ ಸಹ ಇಂತಹ ಕಲಾ ಶಾಲೆಯನ್ನು ನಮ್ಮ ಭಾರತದಲ್ಲೂ ಪ್ರಾರಂಭಿಸಬೇಕೆಂಬ ಇಚ್ಛೆ ಉಂಟಾಯಿತು. "[೯] ಎಂದು ಶ್ರೀ ಧುರಂಧರ ಅವರು ಹೇಳಿದ್ದಾರೆ. ಅಂತೆಯೇ ರೂಪಾ ಭೇಡ್ ಅವರ ಪ್ರಕಾರ : " ಇನ್ನೊಂದು ವಿಷಯವೇನರೆ ನೇಕಾರ ಮನೆತನದಲ್ಲಿ ಹುಟ್ಟಿದ ಜೀಜಾಬಾಯಿ ಜೆಮಶೇಡಜಿ ಅವರು ಹಡಗುಗಳಿಗೆ ನೆಲಹಾಸಿಗೆಗಳನ್ನು ತಯಾರಿಸಿ ಕೊಡುತ್ತಿದ್ದರಲ್ಲದೆ. ಹೊರದೇಶಗಳಿಗೂ ವ್ಯಾಪಾರಕ್ಕಾಗಿ ಹೋಗುತ್ತಿದ್ದರು. ಆಗ ಚೈನಾ ದೇಶದ ಕರಕುಶಲ ಕಲೆಯಿಂದ ಪ್ರಭಾವಿತರಾಗಿ ಅವರ ಮನಸ್ಸಿನಲ್ಲಿ ಹಾಗೆ ಅದು ರೂಪ ತಾಳುತ್ತ ಬಂದಿತು.. "[೧೦] ಅದರ ಪರಿಣಾಮವೆ ಸರ್ ಜೆ. ಜೆ. ಕಲಾ ಶಾಲೆಯ ಸ್ಥಾಪನೆ.

೧೮೫೩ ರಲ್ಲಿ ಮಿ. ಪೈಥಾನ ಎಂಬ ಕಲಾವಿದ ಲಂಡನ್ನಿನ ಕಲಾಪ್ರದರ್ಶನದಲ್ಲಿ ಜೆ. ಜೆ. ಅವರಿಗೆ ಭೇಟಿಯಾದ. ಆತನು ಅತ್ಯಂತ ಪ್ರಭಾವಶಾಲಿಯಾದ ಕಲಾವಿದನಾಗಿದ್ದ. ಅವನನ್ನೇ ಮೊದಲು ಭಾರತಕ್ಕೆ ಕರೆಸಿ ಕಲಾ ಶಾಲೆ ಪ್ರಾರಂಭಿಸಬೇಕೆಂದುಕೊಂಡು ಸರಕಾರಕ್ಕೆ ಮನವಿ ಸಲ್ಲಿಸಿದರು. ಅಲ್ಲದೆ ಉದಾರಿಗಳಾದ ಇವರು " ನೂರುಸಾವಿರ ರೂಪಾಯಿಗಳನ್ನು ದಾನವಾಗಿ ನೀಡಿದರು. ಆಗ ಮುಂಬಯಿ ಸರಕಾರ ಕಮಿಟಿಯನ್ನು ರಚಿಸಲು ನಿರ್ಧರಿಸಿತು. ಇಂತಹವೇ ಶಾಲೆಯನ್ನು ಈಗಾಗಲೇ ಡಾ. ಹಂಟರ್ ಮದ್ರಾಸಿನಲ್ಲಿ ಪ್ರಾರಂಭಿಸಿದ್ದರು. ಅವರ ಸಲಹೆಯ ಮೇರೆಗೆ ಕಮಿಟಿಯನ್ನು ರಚಿಸಲಾಯಿತು. "[೧೧] ಈ ರೀತಿ ಸರಕಾರದ ಆದೇಶದ ಮೇರೆಗೆ ಪ್ರಾರಂಭವಾದ ಸರ್ ಜೆಮಶೇಡಜಿ ಜೀಜಾಭಾಯಿ ಕಲಾ ಶಾಲೆಯಲ್ಲಿ ಮೊಟ್ಟಮೊದಲು ಎಲಿಮೆಂಟರಿ ಡ್ರಾಯಿಂಗ್ ಮತ್ತು ಡಿಜೈನ್‌ನಿಂದ ವರ್ಗ ಪ್ರಾರಂಭಿಸಿದರು. ಆಗ ಮಿ. ಜೇವನ್ಸ್ ಪೈಥಾನ ಅದರ ಮೇಲ್ವಿಚಾರಕರಾಗಿದ್ದರು. ಮೊದಲು ಕೇವಲ ೨೫ ವಿದ್ಯಾರ್ಥಿಗಳಿಂದ ವರ್ಗ ಪ್ರಾರಂಭ ಮಾಡಬೇಕೆಂದುಕೊಂಡಿದ್ದರು. ಆದರೆ ೪೯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದರು.

---

೮. ಕು. ಶಿ. ಹರಿದಾಸ ಭಟ್ಟ : " ಕಟ್ಟಿಂಗೇರಿ ಕೃಷ್ಣ ಹೆಬ್ಬಾರ ಕಲೆ ಮತ್ತು ಬದುಕು ". ಪುಟ ೩೨

೯. Sir J. J. School of Art, Bombay a hundred years of its career, ಪುಟ ೪

೧೦. Sir J. J. School of Art, Bombay a hundred years of its career, ಪುಟ ೫

೧೧. Sir J. J. School of Art, Bombay a hundred years of its career, ಪುಟ ೧೦

ೀಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕೆಂದರೆ ಬೇರೆ ಕಡೆಯಿಂದ ಬರುವ ವಿದ್ಯಾರ್ಥಿಗಳಿಗೆ ಇರಲು ವಸತಿಯ ತೊಂದರೆ ಇತ್ತು. "೧೨ ಇಂತಹ ಪರಿಸ್ಥಿತಿಯನ್ನು ಕಲಾ ಶಾಲೆ ಮೊದಲಿಗೆ ಎದುರಿಸಿತು.

ಈ ಹೊತ್ತಿಗಾಗಲೇ ಮದ್ರಾಸ್ ಮತ್ತು ಕಲ್ಕತ್ತಾ ಕಲಾ ಶಾಲೆಗಳು ಪಠ್ಯ ಕ್ರಮದ ಪಟ್ಟಿಯನ್ನು ತಯಾರಿಸಿದ್ದವು. ಇದರಿಂದ ಕಲ್ಕತ್ತಾ ಕಲಾ ಶಾಲೆಯ ಪ್ರಭಾವ ಮೊಟ್ಟಮೊದಲಿಗೆ ತಕ್ಕ ಮಟ್ಟಿಗೆ ಇದರ ಮೇಲಾಯಿತು. ಯಾಕೆಂದರೆ. " ಆ ಕಾಲಕ್ಕೆ ಕಲ್ಕತ್ತಾ ಇಡೀ ದೇಶದ ರಾಜಧಾನಿ. ಸಾಂಸ್ಕೃತಿಕ ಕೇಂದ್ರ. ರಾಜಕೀಯ ಆಂದೋಲನದ ನೆಲೆಮನೆ. ಐರೋಪ್ಯ ಸಂಸ್ಕೃತಿಯ ಪ್ರಭಾವ ಪ್ರಬಲವಾಗಿದ್ದುದೂ ಅಲ್ಲೆ. ಅಲ್ಲಿನ ಕಲಾ ಶಾಲೆ ೧೮೫೪ ರಷ್ಟು ಹಿಂದೆ ಖಾಸಗಿ ಶಾಲೆಯಾಗಿ ಆರಂಭವಾಯಿತು. ಇಂಡಸ್ಟ್ರಿಯಲ್ ಆರ್ಟ್ ಸೊಸೈಟಿ ಎಂಬ ಔದ್ಯಮಿಕ ಆಸಕ್ತಿಯುಳ್ಳ ಸಂಸ್ಥೆಯು ಒಡಮೂಡಿಸಿದ ಶಾಲೆ ಅದು. ಈ ಶಾಲೆಯಲ್ಲಿ ಶಿಕ್ಷಣ ವಿಷಯಗಳೆಲ್ಲ ಮೊದಲು ಕೈಗಾರಿಕೆಗೆ ಸಂಬಂಧಪಟ್ಟುವೇ ಆಗಿದ್ದವು. ಮುಖ್ಯವಾಗಿ ಮರದಲ್ಲಿ ಕೆತ್ತನೆ. ಲಿಥೋಗ್ರಫಿ ಇವುಗಳೊಂದಿಗೆ ಅಲಂಕರಣೆಯನ್ನೂ ಅಷ್ಟಿಷ್ಟು ಕೂಡಿಸಿದ್ದರು. ಶಾಲೆಗಳಲ್ಲಿ ಆರ್ಥಿಕ ದೃಷ್ಟಿಯಿಂದ ಕರಕುಶಲ ಕೈಗಾರಿಕೆಗಳನ್ನೇ ಕಲಿಸಬೇಕೆಂಬುದು ಆಗ ನಾಡಿನ ಒಡೆಯನಾಗಿದ್ದ ಲಾರ್ಡ್ ಕರ್ಜನ್ ಆಗ್ರಹವಾಗಿತ್ತು. "೧೩ ಇದರಿಂದಾಗಿ ಆಗ ಕಲ್ಕತ್ತಾದಲ್ಲಿ ಕಲಿಸತಕ್ಕಂತಹ ವಿಷಯಗಳು ಇವಾಗಿದ್ದವು. ಆಭರಣ ರೇಖಾಚಿತ್ರ (Ornamental Drawing), ಪ್ಲಾಸ್ಟರ್‌ನಿಂದ ಮೂರ್ತಿಗಳ ರಚನೆ (Modelling and Casting in plaster), ಕುಂಭ ಕಲೆ (Manufacture of Pottery), ಮರದ ಕೆತ್ತನೆ ಕೆಲಸ (Wood engraving), ಅಚ್ಚುತೆಗೆಯುವುದು (Lithography) ಹಾಗೂ ಛಾಯಾಚಿತ್ರ (Photography) "೧೪ ಈ ಎಲ್ಲ ವಿಷಯಗಳನ್ನೊಳಗೊಂಡ ಮದ್ರಾಸ್ ಹಾಗೂ ಕಲ್ಕತ್ತಾ ಕಲಾ ಶಾಲೆಯ ಪ್ರಭಾವವನ್ನು ನಾವು ಮುಂಬಯಿಯ ಜೆ. ಜೆ. ಕಲಾ ಶಾಲೆಯಲ್ಲಿಯ ವಿಷಯಗಳಲ್ಲಿ ಅತ್ಯಂತ ಸುಲಭವಾಗಿ ಗುರುತಿಸಬಹುದಾಗಿದೆ. ಆದ್ದರಿಂದ ಎಲ್ಲಾ ಚಿತ್ರ ಹಾಗೂ ಕರಕುಶಲ ಕಲೆಗಳಿಗೂ ಮೂಲಭೂತವಾದ ಶಾಖೆ ಇದಾದ್ದರಿಂದ ರೇಖಾಚಿತ್ರ ಹಾಗೂ ವರ್ಣಚಿತ್ರಗಳ (Department of Drawing and Painting) ವಿಭಾಗವನ್ನು ಪ್ರಾರಂಭಿಸಿದರು.

ಒಂದೇ ಚಿತ್ರಕಲಾ ವಿಭಾಗದಿಂದ ಪ್ರಾರಂಭವಾದ ಈ ಸಂಸ್ಥೆ ಮುಂದೆ ಬೇರೆ ಬೇರೆ ಉಪಶಾಖೆಗಳನ್ನು ಹೊಂದಿ ಬೆಳೆಯಿತು. ಅವುಗಳೆಂದರೆ. ಮಾಡಲಿಂಗ್ ವಿಭಾಗ. ವಾಸ್ತುಶಿಲ್ಪ. ಶಿಲ್ಪ ವಿಭಾಗ. ಟೀಚರ್ ಟ್ರೇನಿಂಗ್ ವಿಭಾಗ. ಆರ್ಟ್ ಆ್ಯಂಡ್ ಕ್ರಾಫ್ಟ್ಸ್ ಆಫ್ ಇಂಡಿಯಾ ಮತ್ತು ಲಾರ್ಡ್ ರೇ ವರ್ಕಶಾಪ್ ಅಲ್ಲದೆ ಅಪ್ಲೈಡ್ ಆರ್ಟ್ (ವಾಣಿಜ್ಯ ಕಲೆ) ವಿಭಾಗ.

ಮೊದಲಿಗೆ ಮೂರು ಗ್ರೇಡ್ ಪರೀಕ್ಷೆಗಳ ಕೋರ್ಸ್ ಇದಾಗಿತ್ತು. ಪ್ರವೇಶ ಪಡೆದ ತಕ್ಷಣ ಇವರಿಗಿರುವ ಪಾಠವೆಂದರೆ. " ಒಂದು ಘನಾಕೃತಿಯನ್ನು ಮುಂದೆ ಇರಿಸುತ್ತಿದ್ದರು. ಅದನ್ನು ಏನಿಲ್ಲ ಎಂದರೂ ೩೫ ಬಾರಿ

---

೧೨. Sir J. J. School of Art, Bombay a hundred years of its career, ಪುಟ ೨೭

೧೩. ಪ್ರೊ. ಸಾ. ಕೃ. ರಾಮಚಂದ್ರರಾವ್ : ಕಲಾ ತಪಸ್ವಿ ವೆಂಕಟಪ್ಪ. ಪುಟ ೧೭

೧೪. Sir J. J. School of Art, Bombay a hundred years of its career, ಪುಟ ೨೭

ರೇಖಾಚಿತ್ರಗಳನ್ನು ಚಿತ್ರಿಸಿ ಆನಂತರ ಅದನ್ನು ಸಂಪೂರ್ಣವಾಗಿ ನೆರಳು - ಬೆಳಕಿನ ಛಾಯೆಯಿಂದ ಚಿತ್ರಿಸಿದಾಗಲೇ ಮುಂದಿನ ವಸ್ತುವನ್ನು ಚಿತ್ರಿಸಲು ಅವಕಾಶ ದೊರೆಯುತ್ತಿತ್ತು. ಈ ರೀತಿ ಮೂರು ತ್ರೈಮಾಸಿಕ ಪರೀಕ್ಷೆಗೆ ಗುರಿಪಡಿಸುತ್ತಿದ್ದರು. ನಾಲ್ಕನೆಯದರಲ್ಲೂ ಪಾಸಾಗದಿದ್ದರೆ ಆ ವಿದ್ಯಾರ್ಥಿ ಚಿತ್ರಕಲೆ ಕಲಿಯಲು ಅರ್ಹನಲ್ಲ ಎಂದು ಹೊರಹಾಕುತ್ತಿದ್ದರು. " ೧೫ " ಸರಿಯಾಗಿ ಪ್ರಮಾಣಬದ್ಧವಾದ ನಿಖರವಾದ ರೇಖಾಚಿತ್ರ ರಚಿಸಲು ಸರಳ ಹಾಗೂ ಸುಂದರವಾಗಿ ರಚಿಸಲು ಬರುವಂತೆ ನಿಸರ್ಗದ ಎಲ್ಲ ರೀತಿಯ ಜಾಮಿತಿಕ ಆಕೃತಿಗಳ ಮೂಲಕ ಕೆಲವು ಸಾರಿ ತ್ರಿಕೋನ. ವರ್ತುಳ. ಚೌಕ ಹೀಗೆ ಅಭ್ಯಾಸ ಮಾಡಿಸುತ್ತಿದ್ದರು. ಅಲ್ಲದೆ ನಿಸರ್ಗದ ಹೊಸ ವಾತಾವರಣಕ್ಕೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ನಿಖರವಾದ ರೇಖೆಗಳನ್ನು ಅರ್ಥೈಸಿಕೊಳ್ಳಲು ಬರುವಂತೆ ಅಭ್ಯಾಸ ನೀಡುತ್ತಿದ್ದರು. ಪ್ರಾರಂಭಿಕ ದೃಗ್ದರ್ಶನ ಈ ಎಲ್ಲಾ ವಿಷಯಗಳನ್ನ ಅರ್ಥೈಸಿಕೊಳ್ಳಲು ಸಹಾಯ ಮಾಡುತ್ತದೆ. ಇದರಿಂದ ಕಣ್ಣಿನ ಮೂಲಕ ವಸ್ತುಗಳ ದೂರ ಸಮೀಪಗಳ ಕಲ್ಪನೆ ಚೆನ್ನಾಗಿ ಅರ್ಥೈಸಿಕೊಳ್ಳಲು ಸಾಧ್ಯ. " ೧೬ ಈ ರೀತಿಯ ಅಭ್ಯಾಸ ಚೆಟ್ಟಿಯವರು ಕಲಿಯುವ ಸಂದರ್ಭದಲ್ಲಿಯೂ ಇತ್ತು. ಯಾಕೆಂದರೆ. ಈ ರೀತಿ ಅಭ್ಯಾಸ ಕ್ರಮದಲ್ಲಿ ಕಲಿತಂತಹ ಧುರಂಧರ. ಚೂಡೇಕರ ಮತ್ತು ತಾಸ್ಕರ್ ಇವರ ಗುರುಗಳಾಗಿದ್ದರು. " ಅಲ್ಲಿ ಗುರುಗಳು ಬಹಳ ಶಿಸ್ತು ಹಾಗೂ ಕಠಿಣ ಸ್ವಭಾವದವರಾಗಿದ್ದರಂತೆ. ಮೊದಲನೇ ವರ್ಷಕ್ಕೆ ಮೊದಲು ಒಂದು ಕಬ್ಬಿಣದ ಗುಂಡು ಎದುರಿಗೆ ಇಟ್ಟು ಚಿತ್ರಿಸಲಿಕ್ಕೆ ಹೇಳುತ್ತಿದ್ದರಂತೆ. ಅದೊಂದೇ ಚಿತ್ರ ೬ ತಿಂಗಳುಗಳ ವರೆಗೂ ಮಾಡಿಸುತ್ತಿದ್ದರಂತೆ.[೧೭] ಕಾರಣ ಪೂರ್ತಿ ಮನನವಾಗಬೇಕೆಂಬುದೇ ಇದರ ತಾತ್ಪರ್ಯವಾಗಿತ್ತು. "

ಎರಡನೇ ವರ್ಷಕ್ಕೆ ಸರಳಗೈ ಚಿತ್ರ (Freehand). ಜಾಮಿತಿಕ ಚಿತ್ರ (Geometry). ಮೂರ್ತಿ ಚಿತ್ರ (Modelling), ಮತ್ತು ದೃಗ್‌ದರ್ಶನ (Perspective). " ಇವುಗಳ ಪೂರ್ವಸಿದ್ಧತೆಯ ಚಿತ್ರವನ್ನು (Speciman) ಮೊದಲು ಮಾಡಿತೋರಿಸಬೇಕು. ಅವು ಮಾನ್ಯತೆ ಪಡೆದರೆ ಮಾತ್ರ ಅವುಗಳನ್ನು ಪೂರ್ತಿ ಅಳತೆ (Impirial) ಯಲ್ಲಿ ಚಿತ್ರಿಸುವುದು. ಅದರಲ್ಲಿ ಯಾವುದಾದರೂ ಒಂದು ಮಾನ್ಯತೆ ಪಡೆಯದಿದ್ದರೆ ಅವರು ಮರುವರ್ಷ ಮತ್ತೆ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಈ ಪದ್ಧತಿ ಥರ್ಡ್ ಗ್ರೇಡ್ ಪರೀಕ್ಷೆಗೂ ಇತ್ತು. " ೧೮

" ಮೂರನೇ ಪರೀಕ್ಷೆಯಲ್ಲಿ ಛಾಯಾಚಿತ್ರ (Shading) ಇದ್ದಿಲು ಕಡ್ಡಿಯಿಂದ ಚಿತ್ರ ರಚಿಸಿ ಪುಡಿಬಣ್ಣಗಳಿಂದ ಛಾಯಾಪ್ರಕಾಶವನ್ನು ವ್ಯಕ್ತಗೊಳಿಸುವುದು (Foliage) ಮಣ್ಣಿನ ಶಿಲ್ಪ ಇರಿಸಿ ಮಸಿಕಡ್ಡಿಯಲ್ಲಿ ಹೊರರೇಖೆ ಹಾಕಿ ಪುಡಿ ಬಣ್ಣಗಳನ್ನು ಹಚ್ಚಿ. ಶಿಲ್ಪದ ಉಬ್ಬು - ತಗ್ಗುಗಳನ್ನು ಗುರುತಿಸುವುದು. ಛಾಯಾ ಚಿತ್ರದಂತೆ ನೆರಳು - ಬೆಳಕುಗಳನ್ನು ತೋರಿಸುವ ಮಾದರಿ (Outline from cast) ಮತ್ತು (ಅರ್ಥೋಗ್ರಾಫಿಕ್ ಪ್ರೊಜೆಕ್ಷನ್) " ೧೯ ಇಷ್ಟು ವಿಷಯಗಳು

---

೧೫. ರಾವಬಹದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಏಕಚಾಳಿಸ ವರ್ಷ " : ಮರಾಠಿ ಪುಸ್ತಕ. ಪುಟ ೩ ಮತ್ತು ೪

೧೬. Sir J. J. School of Art, Bombay a hundred years of its career, ಪುಟ ೭೩

೧೭. ಬಸವರಾಜ ಚೆಟ್ಟಿ : ಸಂದರ್ಶನ : ೬ - ೮ - ೨೦೦೦. ವಿಜಾಪುರ

೧೮. ರಾವಬಹದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಏಕಚಾಳಿಸ ವರ್ಷ " : ಮರಾಠಿ ಪುಸ್ತಕ. ಪುಟ ೪

೧೯. ರಾವಬಹದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಏಕಚಾಳಿಸ ವರ್ಷ " : ಮರಾಠಿ ಪುಸ್ತಕ. ಪುಟ೪

ಇರುತ್ತಿದ್ದವು. . ಯಾರು ಈ ಮೂರು ಗ್ರೇಡ್ ಪರೀಕ್ಷೆಗಳನ್ನು ಪಾಸಾಗುವರೋ ಅವರು ಎಂಥಾ ಚಿತ್ರವನ್ನೂ ಬಿಡಿಸಬಲ್ಲಷ್ಟು ಸಾಮರ್ಥ್ಯವನ್ನು ಹೊಂದಿರುತ್ತಿದ್ದರಲ್ಲದೇ ಅವರು ಜೆ. ಜೆ. ಕಲಾ ಶಾಲೆಯ ಬೇರೆ ಬೇರೆ ವಿಭಾಗಗಳಿಗೆ ಕಲಿಸಲು ಯೋಗ್ಯ ಎಂದು ತಿಳಿಯುತ್ತಿದ್ದರು.

ಚಿತ್ರಕಲೆ ಅಭ್ಯಾಸದ ರೇಖಾಚಿತ್ರದೊಂದಿಗೆ (Draugthtsman) ವಿಶೇಷ ಅಭ್ಯಾಸವನ್ನು ಸೇರಿಸಿದರಲ್ಲದೆ ಅಲ್ಲಿ ಇನ್ನೂ ಕಲಿಯುತ್ತಿದ್ದ ಶ್ರೀ ಧುರಂಧರ ಅವರಿಗೆ ಒಂದು ವರ್ಷದ ವರೆಗೆ ಮಾಡೆಲಿಂಗ್ ವಿಭಾಗದಲ್ಲಿ ಕೆಲಸ ಮಾಡಲು ಹೇಳಿದರಲ್ಲದೆ ಭಾವಚಿತ್ರ, ದೃಗ್‌ದರ್ಶನ ಚಿತ್ರ ಇವುಗಳನ್ನು ಸಹ ಕಲಿಸಬೇಕಾಗುತ್ತಿತ್ತು. " ಇದರಿಂದ ಅಲ್ಲಿಯ ವಿದ್ಯಾರ್ಥಿಗಳು ಎಲ್ಲಾ ವಿಷಯಗಳಲ್ಲಿಯೂ ಜ್ಞಾನವನ್ನು ಪಡೆಯಲು ಅವಕಾಶ ಸಿಕ್ಕಹಾಗೆ ಆಗುತ್ತಿತ್ತು. ಇದರಿಂದ ಆಗಸ್ಕರ. ತಿರಂದಾದೆ ಮಾಡೆಲಿಂಗ್‌ನಲ್ಲಿ ಅಭ್ಯಾಸ ಮಾಡಿದರೂ ಸಹಿತ ತೈಲವರ್ಣ ಚಿತ್ರ ರಚಿಸುವಲ್ಲಿಯೂ ಅಗ್ರಮಾನ್ಯರಾದರು. ಅತ್ಯಂತ ಹೆಸರುವಾಸಿಯಾದ ಶಿಲ್ಪಕಾರ ಶ್ರೀ ಆರ್. ಬಿ. ಗಣಪತರಾವ್ ಮತ್ತು ಅವರ ಮಗ ಶ್ಯಾಮರಾವ್ ಮೂಲತಃ ಚಿತ್ರಕಲಾ ವಿಭಾಗದ ವಿದ್ಯಾರ್ಥಿಗಳಾಗಿದ್ದರು. "[೨೦] ಹೀಗಾಗಿ ಮೊದಲು ಪ್ರಾರಂಭಿಸಿದ ಕೋರ್ಸ್‌ಗಳಿಂದ ವಿದ್ಯಾರ್ಥಿಗಳು ಬಹುಮುಖ ಪ್ರತಿಭಾವಂತರಾಗಿ ಬೆಳೆಯುತ್ತಿದ್ದರು. ಅಲಂಕಾರ ಚಿತ್ರಗಳನ್ನು ಔದ್ಯೋಗಿಕ ದೃಷ್ಟಿಯಿಂದ ಚಿತ್ರಸುತ್ತಿದ್ದರಿಂದ ' ಮಿ. ಟೇರಿ ಹಾಗೂ ಮಿ. ಗ್ರಿಫಿತ್ಸ್‌ರವರ ಕಾಲದಿಂದಲೂ ಚಿತ್ರಕಲಾ ಮತ್ತು ಮಾಡೆಲಿಂಗ್‌ದ ವಿದ್ಯಾರ್ಥಿಗಳಿಗೆ ಮನುಷ್ಯ ಹಾಗೂ ಪ್ರಾಣಿಗಳ ಪ್ರಮಾಣಬದ್ಧವಾದ ಚಿತ್ರರಚಿಸಲು ಹೇಳಿಕೊಡುತ್ತಿದ್ದರು. " ಇದರಿಂದ ಅಲಂಕಾರಿಕ ಚಿತ್ರ ರಚಿಸಲು ಬಹಳ ಸಹಾಯವಾಗುತ್ತಿತ್ತು. "[೨೧] ಆಗ ಲೈಫ್ ಮಾಡೆಲ್ ಅಂದರೆ ಜೀವಂತ ಮನುಷ್ಯರನ್ನು ಎದುರಿಗೆ ಕೂಡಿಸಿ ಎಲ್ಲ ಕೋನಗಳಿಂದಲು ಚಿತ್ರ ರಚಿಸಲು ಹೇಳುತ್ತಿದ್ದರು. ಅಲ್ಲದೆ ಟೈಮ್‌ಡ್ರಾಯಿಂಗ್ ಇಷ್ಟೇ ವೇಳೆಯಲ್ಲಿ ಚಿತ್ರ ರಚಿಸಬೇಕೆಂಬ ಅಭ್ಯಾಸವೂ ಇತ್ತು. ಈಗಲೂ ಇದೆ.

" ಶ್ರೀ ಸಿಸಿಲಿ ಬರ್ನಸ್ (Cecil Burnus) ಅವರು (೧೮೯೭ ರಿಂದ ೧೯೧೮) ಅಧಿಕಾರಕ್ಕೆ ಬಂದನಂತರ ಮೊದಲಿದ್ದ ಪಠ್ಯ ಕ್ರಮದಲ್ಲಿ ಬದಲಾವಣೆ ಮಾಡಿದರು. ಮೂರು ಗ್ರೇಡ್ ಪರೀಕ್ಷೆಗೆ ಬದಲಾಗಿ ಎಲಿಮೆಂಟರಿ ಹಾಗೂ ಇಂಟರ್‌ಮಿಡಿಯಟ್ ಪರೀಕ್ಷೆ ಜಾರಿಗೆ ಬಂದುದಲ್ಲದೆ ವಾಸ್ತುಶಿಲ್ಪ ಹಾಗೂ ತಾಂತ್ರಿಕ ವರ್ಗಕ್ಕೆ ಸಂಬಂಧಿಸಿದ ಕೆಲವು ವಿಷಯಗಳನ್ನು ಚಿತ್ರಕಲಾ ವಿಭಾಗದಿಂದ ಬೇರ್ಪಡಿಸಲ್ಪಟ್ಟವು. ದೃಗ್‌ದರ್ಶಕ. ಸರಳಗೈ ಚಿತ್ರ. ಜಾಮಿತಿಕ ಚಿತ್ರ ಇವೆಲ್ಲ ಸ್ವಲ್ಪ ಬದಲಾವಣೆ ಆದವು. ಅರ್ಥೋಗ್ರಾಫಿಕ್ ಪ್ರೊಜೆಕ್ಷನ್ ಹಾಗೂ ಪರಸ್ಪೆಕ್ಟಿವ್ ಎರಡು ವಿಷಯಗಳ ಬದಲಾಗಿ ನಿಸರ್ಗದ ಎಲೆಯ ಚಿತ್ರ (Nature Drawing), ಕಾಲ್ಪನಿಕ ಚಿತ್ರ (Memory Drawing). ಬಣ್ಣದ ನಕ್ಷೆ (Colour design). ವಿಷಯಗಳನ್ನು ಸೇರಿಸಲಾಯಿತು. "[೨೨] ಇದರಿಂದ ಥರ್ಡ್‌ಗ್ರೇಡ್ ಪರೀಕ್ಷೆಯ ಮಹತ್ವ ಕಡಿಮೆ ಆಯಿತು. ಟೊಂಗೆಯ ಚಿತ್ರ ಮಾತ್ರ ತೆಗೆಯುವ ರೂಢಿಯಿಂದ ವಿದ್ಯಾರ್ಥಿಗಳಿಗೆ ಸರಿಯಾಗಿ ರೇಖಾಚಿತ್ರ ಮತ್ತು ನೆರಳು - ಬೆಳಕು

---

೨೦. Sir J. J. School of Art, Bombay a hundred years of its career, ಪುಟ ೭೫

೨೧. Sir J. J. School of Art, Bombay a hundred years of its career, ಪುಟ ೭೫

೨೨. Sir J. J. School of Art, Bombay a hundred years of its career, ಪುಟ ೮೭

ಮತ್ತು ವರ್ಣದಲ್ಲಿ ಮಾಡಲು ಆಗಲಿಲ್ಲ. ಮತ್ತು ಪೂರ್ತಿ ತಿಳಿವಳಿಕೆಯೂ ಸಿಗಲಿಲ್ಲ." [೨೩] ಆದರೆ ಮುಂದೆ ಈ ವಿಷಯಗಳು ಮತ್ತೆ ಪಠ್ಯ ಕ್ರಮದಲ್ಲಿ ಸೇರಿರುವುದನ್ನು ನೋಡುತ್ತೇವೆ.

"೧೯೧೫ ರಲ್ಲಿ ಇನ್ಸ್‌ಪೆಕ್ಟರ್ ಆಫ್ ಡ್ರಾಯಿಂಗ್ ಮತ್ತು ಕ್ರಾಫ್ಟ್‌ವರ್ಕ್ ಎಂಬ ಪರೀಕ್ಷೆ ಜಾರಿಗೆ ತಂದರು. ಈ ಚಿತ್ರಕಲೆಯ ಅಡ್ವಾನ್ಸ್ ಕೋರ್ಸ್ ಎಲಿಮೆಂಟರಿ ಹಾಗೂ ಇಂಟರ್‌ಮಿಡಿಯೆಟ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆಯೇ ಇತ್ತು. ಮೊದಲಿಗೆ ಸ್ಥಿರ ವಸ್ತುಚಿತ್ರಣ (Still life) ಎಲೆಯ ಟೊಂಗೆ ಚಿತ್ರ (Plant Drawing) ಎಲೆಗಳಿಂದ ನಕ್ಷೆ ತಯಾರಿಸುವುದು (Design from Plants). ಮೂರ್ತಿಯ ಚಿತ್ರ (Figure from castsand design with figure) ಹಾಗೂ ನೆಲಗಳಿಗೆ ಸಂಬಂಧಿಸಿದಂತೆ ನಕ್ಷೆಗಳು. (A decorative floral design) ನಂತರದಲ್ಲಿ ನಿಸರ್ಗ ಚಿತ್ರಗಳು ಪಠ್ಯ ಕ್ರಮದಲ್ಲಿರವೆ ವರ್ಣಗಳ ಅಭ್ಯಾಸಕ್ಕೋಸ್ಕರವಾಗಿ ಹೇಳಿಕೊಡುತ್ತಿದ್ದರು. ಅನಾಟಮಿ ಹಾಗೂ ಎಲಿಮೆಂಟರಿ ಪರ್‌ಸ್ಪೆಕ್ಟಿವ್ ಸ್ವಲ್ಪ ಸ್ವಲ್ಪ ಕಲಿಸುತ್ತಿದ್ದರು. ಸಂಯೋಜನಾ (Composition) ಹಾಗೂ ಭಿತ್ತಿಚಿತ್ರ (Murals) ಗಳನ್ನು ಅಭ್ಯಾಸ ಮಾಡಿಸುತ್ತಿದ್ದರು." [೨೪] ಎಂಬ ಅಂಶ ಕಂಡು ಬರುತ್ತದೆ.

೧೯೧೬ ರಲ್ಲಿ ಆರ್ಟ್ ಮಾಸ್ಟರ ಪರೀಕ್ಷೆ ಪ್ರಾರಂಭವಾಯಿತು. ಆಗ ಯಾರು ಶಿಕ್ಷಕರಾಗಿದ್ದರೋ ಅವರು ಪುನಃ ಈ ಪರೀಕ್ಷೆಗೆ ಕುಳಿತು ಪಾಸಾಗಬೇಕಾಯಿತು. "ಈ ಪರೀಕ್ಷೆಯಲ್ಲಿ ಅಂಕ ಕೊಡುವ ರೀತಿಯೇ ಬೇರೆ ಆಗಿತ್ತು. ಗ್ರೇಡ್‌ಗಳನ್ನು ಕೊಡುತ್ತಿದ್ದರು. A — excellent, B — Good, F — Fair, D — Pass, E — Fail, F — Indifferent. ಇವು ಪರೀಕ್ಷೆಯಲ್ಲಿ ಕೊಡುವ ಗ್ರೇಡ್‌ಗಳು." [೨೫] ಈ ರೀತಿ ಬಹಳ ಕಠಿಣ ತರಹದ ಅಭ್ಯಾಸ ಕ್ರಮವಾಗಿತ್ತು.

ಜೆ. ಜೆ. ಕಾಲೇಜಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿ ಮೆಟ್ರಿಕ್ ಪಾಸಾಗಿರಬೇಕು. ಹೈಸ್ಕೂಲ್‌ನಲ್ಲಿ ಇಂಟರ್ ಮಿಡಿಯಟ್ ಪರೀಕ್ಷೆ ಪಾಸಾಗಿರಬೇಕು ಹಾಗೂ ಇಂಗ್ಲೀಷ ಮಾತನಾಡಲು ಬರಬೇಕು. ಈ ಎಲ್ಲ ಕರಾರುಗಳು ೧೯೧೮ ಬರ್ನಿಸ್ ನಿವೃತ್ತಿ ಹೊಂದುವ ತನಕ ಇದ್ದವು. ಇಷ್ಟೆಲ್ಲಾ ಇದ್ದರೂ ಈ ಚಿತ್ರಕಲಾ ವಿದ್ಯಾರ್ಥಿಗಳಿಗೆ ಸ್ವಯಂ ಜೀವನ ನಡೆಸಲು ಅಷ್ಟೇನೂ ಸಹಾಯಕವಾಗಲಿಲ್ಲ. ಯಾಕೆಂದರೆ ಚಿತ್ರ ತೆಗೆಸಿ ಪುಸ್ತಕದಲ್ಲಿ ಹಾಕಿಸುವವರು ತೀರಾ ವಿರಳ. ಸಿನೆಮಾ ಪೋಸ್ಟರ್ಸ್ ಅಥವಾ ಪರದೆ ಮಾಡಬೇಕೆಂದರೆ. ಅವರು ತಮ್ಮವರೆ ಆದ ಇತರ ಕಲಾಕಾರರಿಂದ ಮಾಡಿಸುತ್ತಿದ್ದರು. ಈಗಲೂ ಸಹಿತ ಕಲಾ ವಿದ್ಯಾರ್ಥಿಗಳು ಕಲಿತು ಬಂದನಂತರ ಇದೇ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಈ ಸಮಸ್ಯೆ ಇಂದು ನಿನ್ನೆಯದಲ್ಲ. ಕಾಲಾಂತರದಿಂದ ಕರಿ ನೆರಳಂತೆ ಹಿಂಬಾಲಿಸುತ್ತ ಬಂದಿದೆ. "ಇದರಿಂದಾಗಿ ಎಂತಹ ದೊಡ್ಡ ಕಲಾಕಾರರು ಆರ್ಥಿಕ ವ್ಯವಸ್ಥೆಗಾಗಿ ತಮ್ಮದೇ ಆದ ಖಾಸಗಿ ಪಾಠಶಾಲೆ

---

೨೩. ರಾವಬಹದ್ದೂರ ಎಂ. ವ್ಹಿ. ಧುರಂಧರ : "ಕಲಾಮಂದಿರಾಂತಿಲ ಏಕಚಾಲಿಸ ವರ್ಷ" : ಮರಾಠಿ ಪುಸ್ತಕ. ಪುಟ ೨೯

೨೪. Sir J. J. School of Art, Bombay a hundred years of its career, ಪುಟ ೮೮

೨೫. ರಾವಬಹದ್ದೂರ ಎಂ. ವ್ಹಿ. ಧುರಂಧರ : "ಕಲಾಮಂದಿರಾಂತಿಲ ಏಕಚಾಲಿಸ ವರ್ಷ" : ಮರಾಠಿ ಪುಸ್ತಕ. ಪುಟ ೬೦

ಪ್ರಾರಂಭಿಸಿದರು. ಅವರೆಂದರೆ ಮಿ. ಮಲದಕರ. ಮಿ. ಹಳದನಕರ. ಮಿ. ದಾಲವಿ. ಮಿ. ರವಿಶಂಕರ ರಾವಲ ಮುಂತಾದವರು. ಈ ಎಲ್ಲಾ ಕಲಾ ಶಾಲೆಗಳ ಉಗಮ ಜೆ. ಜೆ. ಶಾಲೆಯ ಮೇಲೆ ಸ್ವಲ್ಪ ಮಟ್ಟಿಗೆ ಬೆಳವಣಿಗೆಯ ಕುರಿತಕ್ಕೆ ಕಾರಣವಾದವು." [೨೫] ಎಂದು ಹೇಳಬಹುದು.

ಪಠ್ಯ ಕ್ರಮದ ಈ ಹಿನ್ನೆಲೆಯನ್ನು ಬರೆಯಲು ಕಾರಣ ಜೆ. ಜೆ. ಕಲಾ ಶಾಲೆ ಬ್ರಿಟೀಷರು ಸ್ಥಾಪಿಸಿದರು. ಮುಂಬಯಿಯ ಪಾರ್ಸಿಗಳು ಶಾಲೆಗೆ ವಿಪುಲವಾಗಿ ದಾನ ಕೊಟ್ಟದ್ದು ಈಗಾಗಲೇ ತಿಳಿದ ವಿಷಯ. ಇಷ್ಟಿದ್ದರೂ ರಾಯಲ್ ಅಕಾಡೆಮಿಯ ಸ್ನಾತಕನೇ ಇಲ್ಲಿನ ಡೈರೆಕ್ಟರ್ ಆಗಬೇಕೆಂದು ಕಡ್ಡಾಯವಾಗಿತ್ತು. ಇದರಿಂದಾಗಿ ಅಲ್ಲಿ ಕಲಿತು ಬಂದಂತಹ ವ್ಯಕ್ತಿಗಳ ಅಭ್ಯಾಸ ಕ್ರಮದಲ್ಲಿ ಅಷ್ಟೇನೂ ಬದಲಾವಣೆಗಳು ಕಾಣದ್ದರಿಂದ ವ್ಯಕ್ತಿಗತವಾಗಿ ಅಲ್ಪ ಸ್ವಲ್ಪ ಬದಲಾವಣೆ ಆಗಿರುವುದನ್ನು ಮಾತ್ರ ನಾವು ಇಲ್ಲಿ ನೋಡುತ್ತೇವೆ. ಚೆಟ್ಟಿಯವರೂ ಇದಕ್ಕೆ ಹೊರತಾಗಿಲ್ಲ.

ಬರ್ನಿಸ್ ಅವರ ಆಡಳಿತದ ಮಧ್ಯಂತರದಲ್ಲಿ ಆರ್. ಡಬ್ಲ್ಯು. ರೋಬೋಥೋಮ್ ಅವರು ಸ್ವಲ್ಪ ಕಾಲ ಡೈರೆಕ್ಟರ್ ಆಗಿ ಕೆಲಸ ಮಾಡಿದರು ಅದು ೧೯೦೭ ರಲ್ಲಿ. "ಇವರೂ ರಾಯಲ್ ಸ್ಕೂಲ್ ಆಫ್ ಆರ್ಟ್‌ನಿಂದ ಶಿಕ್ಷಣ ಪಡೆದಿದ್ದರಿಂದ ಆ ಪದ್ಧತಿಯಲ್ಲೇ ನಾಲ್ಕು ವರ್ಷದ ಪಠ್ಯ ಕ್ರಮ ಮಾಡಿದರು" [೨೬] ಇದೇ ಪಠ್ಯ ಕ್ರಮ ಮುಂದುವರಿಯಿತು. ಇದನ್ನೇ ಡಿಪ್ಲೋಮಾ ಕೋರ್ಸ್ ಎಂದು ಮಾಡಿ. ಇದು ಬ್ಯಾಚುಲರ್ಸ್ ಡಿಗ್ರಿ ಎಂದು ೧೯೩೩ ರಲ್ಲಿ ವಿಶ್ವವಿದ್ಯಾಲಯದಿಂದ ಪರಿಗಣಿಸಲ್ಪಟ್ಟಿತು.

ನಂತರ ಕ್ಯಾಪ್ಟನ್ ಗ್ಲ್ಯಾಡ್‌ಸನ್ ಸಲೋಮನ್‌ರು ೧೯೧೯ ರಲ್ಲಿ ಬಂದರು. ಇವರು ಸಹಿತ ರಾಯಲ್ ಅಕಾಡೆಮಿಯ ವಿದ್ಯಾರ್ಥಿಯಾಗಿದ್ದರು. ಆಗ ಮೊದಲ ವಿಶ್ವ ಮಹಾಯುದ್ಧದ ನಂತರದ ದಿನಗಳು ಫ್ರೆಂಚ್ ಮೂವ್‌ಮೆಂಟ್ ಮುಂತಾದವುಗಳ ಪ್ರಭಾವ ಕಲೆಯ ಮೇಲೆ ಆಗಿತ್ತು. ಆಗ ಕಲೆಯ ಕ್ಷೇತ್ರದಲ್ಲಿ 'ನವಯುಗ' (Modern) ಪ್ರಾರಂಭವಾಗಿತ್ತು. "ಆದರೆ ಸಲೋಮನ್‌ರು ರಾಯಲ್ ಅಕಾಡೆಮಿಯ ವಿದ್ಯಾರ್ಥಿಯಾಗಿದ್ದರಿಂದ ಕ್ಲಾಸಿಕಲ್ (ಪಾರಂಪರಿಕ) ಅಭ್ಯಾಸಕ್ಕೆ ಬಹಳ ಮಹತ್ವ ನೀಡಿದ್ದರು." [೨೭] ಇವರ ಆಡಳಿತದಲ್ಲೇ ಎಂ. ವಿ. ಚೆಟ್ಟಿಯವರು ವಿದ್ಯಾರ್ಥಿಯಾಗಿ ಆ ಕಲಾ ಶಾಲೆಯನ್ನು ಪ್ರವೇಶಿಸಿದ್ದರಿಂದ ಅದೇ ಅಭ್ಯಾಸ ಕ್ರಮ ಕರಗತವಾಯಿತಲ್ಲದೆ ಅದೇ ರೀತಿಯ ಕಲಾ ವಾತಾವರಣ ಅವರ ಮೇಲೆ ಪ್ರಭಾವ ಬೀರಿದ್ದರಿಂದ ಅವರು ಪಾರಂಪರಿಕ ಕಲಾವಿದರಾಗಿ ಬೆಳೆದರು. ಇವರ ಸಮಕಾಲೀನ ಎಲ್ಲಾ ಕಲಾವಿದರು ಅದೇ ಜಾಡಿನಲ್ಲಿ ಬೆಳೆದರು. ಅವರೆಂದರೆ. ದಂಡಾವತಿಮಠ. ಮಿಣಜಗಿ. ಹಾಲಭಾವಿ. ಕಮತೋಳ್ಳಿ. ಕಾರಡಗಿ. ಬಡಿಗೇರ. ವೈ. ಸುಬ್ರಹ್ಮಣ್ಯರಾಜು. ಎನ್. ಹನುಮಯ್ಯ ಮುಂತಾದವರು ಬೆಳೆದು ಬಂದರು.

---

೨೫. Sir J. J. School of Art, Bombay a hundred years of its career : ಪುಟ ೮೯

೨೬. ರಾವಬಹದ್ದೂರ ಎಂ. ವ್ಹಿ. ಧುರಂಧರ : "ಕಲಾಮಂದಿರಾಂತಿಲ ಏಕಚಾಲಿಸ ವರ್ಷ" : ಮರಾಠಿ ಪುಸ್ತಕದ. ಪುಟ ೩೭

೨೭. Sir J. J. School of Art, Bombay a hundred years of its career. ಪುಟ ೯೦

" ಗ್ಲ್ಯಾಡ್‌ಸನ ಸಲೋಮನ್‌ರು ಬಂದನಂತರ ನಾಲ್ಕನೇ ವರ್ಷದ ತರಗತಿಗಳಿಗೆ ನಗ್ನ (Nude) ಆಕೃತಿಗಳನ್ನು ಚಿತ್ರಿಸುವ ಪದ್ಧತಿ (Drawing from undraped figure) ಪಠ್ಯ ಕ್ರಮದಲ್ಲಿ ಸೇರಿಸಿದರು. " [೨೯] ಇದರಿಂದ ವಿದ್ಯಾರ್ಥಿಗಳು ಇನ್ನೂ ಚೆನ್ನಾಗಿ ಮನುಷ್ಯಾಕೃತಿಗಳನ್ನು ಚಿತ್ರಿಸುವಲ್ಲಿ ಪರಿಣಿತರಾದರು. ಇದರಿಂದ ಮನುಷ್ಯಾಕೃತಿಗಳನ್ನೊಳಗೊಂಡ ಸಂಯೋಜನ ಚಿತ್ರಗಳನ್ನೂ ಸಹ (Figure composition) ಚೆನ್ನಾಗಿ ಚಿತ್ರಿಸತೊಡಗಿದರು". " ಮ್ಯೂರಲ್ ಚಿತ್ರದ ಅಭ್ಯಾಸದ ಸಲುವಾಗಿ ಅಜಂತಾಕ್ಕೆ ವಿದ್ಯಾರ್ಥಿಗಳು ಮೊದಲು ಹೋಗುತ್ತಿದ್ದರು. ಈ ಮೊದಲು ಮ್ಯೂರಲ್ (ಭಿತ್ತಿಚಿತ್ರ) ಕಲಿಸುವ ಅವಧಿ ಇರಲಿಲ್ಲ. ಕ್ಯಾಪ್ಟನ್ ಸಲೋಮನ್‌ರಿಗೆ ಇದೇ ರೀತಿಯ ಚಿತ್ರಕಲೆಯಲ್ಲಿ ಪ್ರಶಸ್ತಿ ಸಿಕ್ಕ ಕಾರಣ ಜೆ. ಜೆ. ಶಾಲೆಗೆ ಬಂದ ಕೂಡಲೇ ಈ ಭಿತ್ತಿಚಿತ್ರ ರಚಿಸುವ ಒಂದು ಅವಧಿಯನ್ನು ಸೇರಿಸಿದರು. " [೩೦] ಎಂದು ಧುರಂಧರ ಅವರು ಉಲ್ಲೇಖಿಸಿದ್ದಾರೆ.

ಈ ಮೊದಲು ತೆಗೆದುಹಾಕಿದ್ದ ಸರಳಗೈ (Freehand) ಚಿತ್ರ ಈಗ ಮತ್ತೆ ಪಠ್ಯ ಕ್ರಮದಲ್ಲಿ ಸೇರಿಸಲಾಯಿತು. " ಏಕೆಂದರೆ ಅದರಿಂದ ವಿದ್ಯಾರ್ಥಿಗಳ ಕೈ ಮತ್ತು ಕಣ್ಣುಗಳು ಬಹಳಷ್ಟು ಚುರುಕಾಗುತ್ತವೆ ಎಂದು ಶಿಕ್ಷಕರಿಗೆ ಮಾತ್ರ ಗೊತ್ತಿತ್ತು. " [೩೧]

೧೯೩೬ ರಲ್ಲಿ ಪಿ. ಜೇರಾರ್ಡ್ ಅವರು ಡೈರೆಕ್ಟರ್ ಆದರು. ಇವರು ಏನಾದರೂ ಹೊಸತನ್ನು ಸೃಷ್ಟಿಸುವ ಪ್ರಗತಿಯತ್ತ ಗಮನ ಹರಿಸಿದವರು ಮತ್ತು ಆಸಕ್ತಿ ತೋರಿಸಿದರು. ಅಲ್ಲದೆ ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ತಯಾರಿಸಿದರು. ಇವರ ಆಡಳಿತದಲ್ಲಿ ಹೆಬ್ಬಾರ, ಚವಾಡಾ ಮುಂತಾದವರು ವಿದ್ಯಾರ್ಥಿಗಳಾಗಿದ್ದರು. ಇದರಿಂದ ಅವರ ಪ್ರಭಾವದಿಂದ ಹೆಬ್ಬಾರ್ ಅವರು ನವ್ಯಕಲೆಯತ್ತ ಸಾಗಲು ಸಾಧ್ಯವಾಯಿತು. ಅಂದರೆ ಅಧ್ಯಾಪಕರ ಪ್ರಭಾವವು ಅಷ್ಟೇ ಬಲವುಳ್ಳದ್ದಾಗಿತ್ತು. ಇದರಿಂದ ವಿದ್ಯಾರ್ಥಿಗಳಿಗೆ ಬದಲಾವಣೆ ಹೊಂದಲು ಸಾಧ್ಯವಾಗುತ್ತಿತ್ತು. ಚೆಟ್ಟಿಯವರ ಕಾಲಕ್ಕೆ ಆ ರೀತಿ ಯಾವ ನವ್ಯತೆಯ ಪ್ರಭಾವವು ಆಗಿರದ್ದರಿಂದ ಅವರು ರೋಮ್ಯಾಂಟಿಕ್ ಕಲೆಯ ಹಾದಿಯಲ್ಲಿ ಬೆಳೆದು ಬಂದರು.

" ಇನ್ನೊಂದು ಕಲಾ ಚಟುವಟಿಕೆ ಎಂದರೆ ೧೯೩೩ ರಲ್ಲಿ. ಅಹಿವಾಸಿಯವರು ' ಭಾರತೀಯ ನಕ್ಷೆ ' (Indian design) ಎಂಬ ಹೊಸ ಅವಧಿ ಪ್ರಾರಂಭಿಸಿದರು. " [೩೨] ಯಾಕೆಂದರೆ ಅಹಿವಾಸಿ ರಜಪೂತ ಶೈಲಿಯ ಚಿತ್ರಗಳಂತೆ ರಚಿಸುವಲ್ಲಿ ಪರಿಣಿತಿಯನ್ನು ಹೊಂದಿದ್ದರು. ಇವರು ನೈಜ ಶೈಲಿಯ ಉತ್ತಮ ವಿದ್ಯಾರ್ಥಿಗಳಾಗಿದ್ದರು. ಈ ಶೈಲಿಯ ಪ್ರಭಾವವು ಅನೇಕ ವಿದ್ಯಾರ್ಥಿಗಳ ಮೇಲೆ ಬೀರಿದ್ದನ್ನು ನೋಡುತ್ತೇವೆ.

ಜೆರಾರ್ಡ್ ಅವರು ನವ್ಯತೆಯ ಪರಿಚಯವನ್ನು ಮಾಡಿಕೊಡಲು " ತಮ್ಮ ಕೃತಿಗಳದೇ ಒಂದು ಪ್ರದರ್ಶನವನ್ನು ಮಾಡಿದರು. ಇದರಿಂದ ವಿದ್ಯಾರ್ಥಿಗಳು ಹೊಸ ಪ್ರಯೋಗದತ್ತ ಗಮನ ಸೆಳೆಯಲು ಸಾಧ್ಯವಾಯಿತು. " [೩೩] ನಂತರ

---

೨೯. Sir J. J. School of Art, Bombay a hundred years of its career, ಪುಟ ೯೧

೩೦. ರಾವಬಹದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಏಕಚಾಲಿಸ ವರ್ಷ " : ಮರಾಠಿ ಪುಸ್ತಕ. ಪುಟ ೧೦೨

೩೧. Sir J. J. School of Art, Bombay a hundred years of its career, ಪುಟ ೯೨

೩೨. Sir J. J. School of Art, Bombay a hundred years of its career, ಪುಟ ೧೦೪

೩೩. Sir J. J. School of Art, Bombay a hundred years of its career, ಪುಟ ೧೦೮

" ನವ್ಯ ಕಲೆಯ ಅಭ್ಯಾಸ ಪ್ರಾರಂಭವಾದ ತಕ್ಷಣ ಚಿತ್ರಕಲಾಭ್ಯಾಸದಲ್ಲಿ ಬೇರೆ ಬೇರೆ ವಿಷಯಗಳನ್ನು ಪ್ರಧಾನ ವಿಷಯವಾಗಿ ಸ್ವೀಕರಿಸುವ ಪದ್ಧತಿ ಜಾರಿಗೆ ಬಂದಿತು. ಉದಾ : ಗ್ರಾಫಿಕ್. ಛಾಯಾಚಿತ್ರ ಮುಂತಾದವು. ಇದರಿಂದ ವಿದ್ಯಾರ್ಥಿಗಳು ನಿಸರ್ಗದ ಮೂಲ ತತ್ವದಿಂದ ವಂಚಿತರಾದರು. " [೩೪] ಮುಂದೆ ೩೧ ಜನೇವರಿ ೧೯೪೭ ರಲ್ಲಿ ಜೆರಾರ್ಡ್ ನಿವೃತ್ತಿ ಹೊಂದಿದರು. ಆಗ ಭಾರತೀಯರೇ ಆದ ಶ್ರೀ ಅದುರಕರ ಆ ಹುದ್ದೆಗೆ ನೇಮಕಗೊಂಡರು. ತದನಂತರ ಬೇರೆ ಬೇರೆ ವಿಷಯಗಳು. ಕಲಾ ಇತಿಹಾಸ. ಸೌಂದರ್ಯಶಾಸ್ತ್ರ ಮುಂತಾದವು ಸೇರ್ಪಡೆಗೊಂಡವು. ಮುಂದಿನ ೪೦ - ೫೦ ವರ್ಷಗಳ ವರೆಗೆ ಪಠ್ಯ ಕ್ರಮದಲ್ಲಿ ಯಾವುದೇ ಬದಲಾವಣೆ ಆಗದಿರುವುದು ತಿಳಿದು ಬರುತ್ತದೆ. " ನಾನು ೧೯೬೨ ರಲ್ಲಿ ಮುಂಬಯಿಗೆ ಜೆ. ಜೆ. ಶಾಲೆಗೆ ಕಲಿಯಲು ಹೋದಾಗ ಒಂದೆರಡು ವಿಷಯಗಳನ್ನು ಬಿಟ್ಟರೆ ಉಳಿದೆಲ್ಲ ಪಠ್ಯ ಕ್ರಮ ಬ್ರಿಟೀಷರು ಯಾವ ರೀತಿ ಮಾಡಿದ್ದರೋ ಅದನ್ನೇ ಮುಂದುವರಿಸಿಕೊಂಡು ಬಂದರು. ರೇಖಾಚಿತ್ರಗಳ ಅಭ್ಯಾಸ. ಅನಾಟಮಿ. ಹೊರಗಡೆ ಹೋಗಿ ಚಿತ್ರಗಳನ್ನು ರಚಿಸುವುದು (Outdoor sketches) ಎಲ್ಲಾ ಇರುತ್ತಿದ್ದವು. ಸ್ಥಿರರೂಪ ಚಿತ್ರಣ. ಮೂರ್ತಿಶಿಲ್ಪ ಚಿತ್ರಣ. ಲೈಫ್ ಮುಂತಾದವೆಲ್ಲ ಇದ್ದು. ಆಗಲೂ ಸಹಿತ ಮನುಷ್ಯಾಕೃತಿಗಳಿಗೆ (Figure) ಬಹಳ ಪ್ರಾಮುಖ್ಯತೆ ಕೂಡಾ ಇದ್ದು ಇದಕ್ಕಾಗಿ ಸ್ವತಃ ಸತ್ತ ಮನುಷ್ಯರ ದೇಹಗಳನ್ನು ಕತ್ತರಿಸಿ ಪ್ರತಿಯೊಂದು ಮಾಂಸಖಂಡಗಳ ಆಕಾರಗಳನ್ನು ಮನನ ಮಾಡಿಕೊಳ್ಳಬೇಕಾಗುತ್ತಿತ್ತು. ಇದಕ್ಕಾಗಿ ವಾರಕ್ಕೆ ಒಂದು ಅವಧಿ ಜೆ. ಜೆ. ಆಸ್ಪತ್ರೆಗೆ ಹೋಗಬೇಕಾಗುತ್ತಿತ್ತು. " [೩೫] ಎಂಬುದಾಗಿ ಅಲ್ಲಿಯ ಐದು ವರ್ಷಗಳ ಪಠ್ಯಕ್ರಮವನ್ನು ಕುರಿತು ಶ್ರೀ ಜೆ. ಎಸ್. ಖಂಡೇರಾವ ಅವರ ತಿಳಿಸುತ್ತಾರೆ.

ನಿಸರ್ಗ ಚಿತ್ರ ಇಲ್ಲಿಯೂ ಕೂಡ ಹಿನ್ನೆಲೆಯ ವಿಷಯವಾಗಿ ಕಲಿಸುತ್ತಿದ್ದರು. " ಬಣ್ಣಗಳ ದೃಷ್ಟಿಯಿಂದ. ದೃಗ್‌ದರ್ಶನದ ದೃಷ್ಟಿಯಿಂದ ದೂರ. ಸಮೀಪ ಅರ್ಥೈಸಿಕೊಳ್ಳಲು. ನಿಸರ್ಗದ ಸಮೀಪಕ್ಕೆ ಹೋಗಿ ಬಣ್ಣಗಳ. ನೆರಳು - ಬೆಳಕಿನ ರೀತಿಗಳನ್ನು ತಿಳಿದುಕೊಳ್ಳುವ ಸಲುವಾಗಿ ಈ ನಿಸರ್ಗ ಚಿತ್ರರಚನೆ ಇರುತ್ತಿತ್ತು. ಇದು ಕಲಾಕಾರನ ಬೆಳವಣಿಗೆಗೆ ಅವಶ್ಯವೂ ಆಗಿತ್ತು. ಇದರ ಅಂಕಗಳನ್ನು ವರ್ಗಪಾಠಗಳಂತೆ ಪರಿಗಣಿಸಿ ಕೊಡುತ್ತಿದ್ದರು. " [೩೬] ಈ ಎಲ್ಲಾ ಹಿನ್ನೆಲೆಯಲ್ಲಿ ಸರ್. ಜೆ. ಜೆ. ಕಲಾ ಶಾಲೆಯ ಪಠ್ಯ ಕ್ರಮ ಯಾವ ರೀತಿಯಲ್ಲಿ ಹಂತ ಹಂತವಾಗಿ ಸ್ವಲ್ಪ ಪ್ರಮಾಣದಲ್ಲಿ ಬದಲಾವಣೆ ಹೊಂದಿ. ಉಳಿದೆಲ್ಲ ವಿಷಯಗಳನ್ನು ಈಗಲೂ ಹಾಗೇ ಮುಂದುವರಿಸಿಕೊಂಡು ಬಂದಿರುವುದನ್ನೂ ಗಮನಿಸುತ್ತೇವೆ. ೧೯೫೪ ರಲ್ಲಿ ಚಿಟ್ಟಿಯವರು ಸರ್. ಜೆ. ಜೆ. ಕಲಾ ಶಾಲೆಯನ್ನು ಪ್ರವೇಶಿಸಿದಾಗ ಅವರಿಗಿದ್ದ ಪಠ್ಯ ಕ್ರಮ ಈ ರೀತಿಯವಾಗಿತ್ತು. ಮೊದಲ ವರ್ಷ ಇದ್ದಿಲು ಕಡ್ಡಿಯಿಂದ ಚಿತ್ರ ರಚಿಸುವುದು. ಮೂರ್ತಿ ಶಿಲ್ಪ (Life from cast) ಇರಿಸಿ ಮಸಿ ಕಡ್ಡಿಯಲ್ಲಿ ಹೊರರೇಖೆ ಹಾಕಿ. ಪುಡಿ ಬಣ್ಣಗಳಿಂದ ತುಂಬುವುದು. ಶಿಲ್ಪದ ಉಬ್ಬು - ತಗ್ಗುಗಳನ್ನು ಗುರುತಿಸುವುದು. ಛಾಯಾಚಿತ್ರದಂತೆ ನೆರಳು - ಬೆಳಕನ್ನು ತೋರಿಸುವ ಮಾದರಿಯದು. ಎರಡನೇ ವರ್ಷದಲ್ಲಿ

---

೩೪. Sir J. J. School of Art, Bombay a hundred years of its career, ಪುಟ ೧೧೦

೩೫. ಶ್ರೀ ಜೆ. ಎಸ್. ಖಂಡೇರಾವ್ ಅವರ ಸಂದರ್ಶನ : ದಿನಾಂಕ ೪ - ೧೧ - ೧೯೯೯. ಗುಲ್ಬರ್ಗ

೩೬. ಶ್ರೀ ಜೆ. ಎಸ್. ಖಂಡೇರಾವ್ ಅವರ ಸಂದರ್ಶನ : ದಿನಾಂಕ ೪ - ೧೧ - ೧೯೯೯. ಗುಲ್ಬರ್ಗ



ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್, ಮುಂಬೈ, ಸಂಶೋಧಕರು ಕ್ಷೇತ್ರಕಾರ್ಯ ಕೈಕೊಂಡಾಗ



ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್‌ನ ಡ್ರಾಯಿಂಗ ಆ್ಯಂಡ ಪೆಂಟಿಂಗ್ ವಿಭಾಗ

ದೃಗ್‌ದರ್ಶನ. ಮೂರನೆಯ ವರ್ಷದಲ್ಲಿ ಬಣ್ಣಗಳ ಬಳಕೆ. ಭಾವಚಿತ್ರ. ಸ್ಥಿರವಸ್ತು (Still life) ಚಿತ್ರಣ ಇತ್ಯಾದಿ ಅಭ್ಯಾಸ ಮಾಡಬೇಕಿತ್ತು. ನಾಲ್ಕನೇ ವರ್ಷದಲ್ಲಿ ' ನ್ಯೂಡ್ (ನಗ್ನ) ಸ್ಟಡಿ " ಇರುತ್ತಿತ್ತು. ದೇಹ ರಚನಾಶಾಸ್ತ್ರವನ್ನು ಅಭ್ಯಸಿಸಲು ಸಂಯೋಜನಾ ಚಿತ್ರದಲ್ಲಿ ವ್ಯಕ್ತಿಚಿತ್ರಗಳನ್ನು ರಚಿಸಲು ನಗ್ನ ಆಕೃತಿಗಳ ಅಭ್ಯಾಸ ಅಗತ್ಯವಿತ್ತು. ಕೊನೆಯ ಅಂದರೆ ಐದನೇ ವರ್ಷ ಸಂಯೋಜನೆ ಚಿತ್ರ ಮಾತ್ರ ಇರುತ್ತಿತ್ತು. ಅಂಗರೆ ನಾಲ್ಕು ವರ್ಷ ಕಲಿತಂಥ ಜಾಣ್ಮೆಯನ್ನು ಅವರು ಇಲ್ಲಿ ಪ್ರದರ್ಶಿಸಬೇಕಾಗುತ್ತಿತ್ತು. ಅದಕ್ಕೆ ಇದೊಂದೇ ಅಭ್ಯಾಸ ಇರುತ್ತಿತ್ತು. ಇಲ್ಲಿ ವಿದ್ಯಾರ್ಥಿಯ ಜಾಣ್ಮೆ (Skill) ಪರೀಕ್ಷಿಸಲಾಗುತ್ತಿತ್ತು.

ಅಧ್ಯಾಪಕ ವರ್ಗ :

ಸರ್. ಜೆ. ಜೆ. ಕಲಾ ಶಾಲೆಯಲ್ಲಿಯ ಅಧ್ಯಾಪಕ ವರ್ಗ ಬ್ರಿಟಿಷ್ ಡೈರೆಕ್ಟರ್‌ರ ಕೆಳಗೆ ಪಳಗಿದಂಥವರು ಆದ್ದರಿಂದ ಅದೇ ಶಿಸ್ತು. ಠೀವಿ. ಕಾರ್ಯನಿಷ್ಠೆ. ಎಲ್ಲಾ ಕಾರ್ಯಗಳು ನಿಯಮಬದ್ಧವಾಗಿ ನಡೆಯಬೇಕು ಮತ್ತು ಅಹಿತಕರ ವಾತಾವರಣವನ್ನು ಎಂದೂ ಸಹಿಸುವಂಥವರಲ್ಲ. " ಸರ್. ಜೆ. ಜೆ. ಸ್ಕೂಲ್ ಆಫ್ ಆರ್ಟ್‌ನ ನಿಯಮಕ್ಕನುಗುಣವಾಗಿ ಮನಸ್ಸುಗೊಟ್ಟು ಕಲಿಯುತ್ತಿದ್ದೆವು. ನಮಗೆ ಕಲಿಸತಕ್ಕ ಗುರುವರ್ಯರು ಸಹ ಅಂಥವರೇ. ದಪ್ಪಮೀಸೆಯ ಅವರ ಗಂಭೀರ ಮುಖಮುದ್ರೆಯನ್ನು ನೆನೆಸಿದರೆ ಸಾಕು; ಭಯ ಭಕ್ತಿಯಿಂದ ಮಸ್ತಕವು ತಾನೇ ತಾನಾಗಿ ಬಾಗುತ್ತಿತ್ತು. "[೩೭] ಅಂದಿನ ಆ ಗುರುಗಳ ಪೋಷಾಕು ಸಹಿತ ಅಷ್ಟೇ ಠೀವಿಯಿಂದ ಇರುತ್ತಿತ್ತು. " ಶ್ರೀ ಧುರಂಧರರ ಥ್ರೀ-ಪೀಸ್ ಸೂಟು. ಕನ್ನಡಕ. ಕನ್ನಡಕದ ರೇಶಿಮೆದಾರ "[೩೮] " ಶ್ರೀ ತಾಸ್ಕರವರ ತಲೆಯ ಮೇಲೆ ಜರತಾರಿಯ ಸುಂದರ ಕೆಂಪು ಪಗಡಿ. ನೀಳವಾದ ಕಪ್ಪುಕೋಟು ಉತ್ತರೀಯ ಮತ್ತು ಧೋತರ ".[೩೯] ಆಗ ಬ್ರಿಟೀಷ ವ್ಯಕ್ತಿ ಕ್ಯಾಪ್ಟನ್ ಗ್ಲ್ಯಾಡ್‌ಸನ್ ಸಲೋಮನ್‌ರವರು ಪ್ರಿನ್ಸಿಪಾಲರಾಗಿದ್ದರು. ಅವರು ಕೂಡಾ ಯುರೋಪಿಯನ್ ರೀತಿಯ ಶಿಸ್ತಿನ ಪೋಷಾಕು ಧರಿಸುತ್ತಿದ್ದರು. ಪೋಷಾಕಿನ ಜೊತೆ ಅವರ ವ್ಯಕ್ತಿತ್ವ ಕೂಡಾ ಅಷ್ಟೇ ಶಿಸ್ತಿನದಾಗಿತ್ತು. ಅದು ಸಹಿತ ವಿದ್ಯಾರ್ಥಿಗಳ ಮೇಲೆ ಎಷ್ಟೊಂದು ಪ್ರಭಾವ ಬೀರಿತ್ತೆಂದರೆ ಅದಕ್ಕೆ ನಮ್ಮ ಚೆಟ್ಟಿಯವರೇ ಸಾಕ್ಷಿ. ಶಿಸ್ತಿನ ಪೋಷಾಕು ಮೇಲೆ ದಪ್ಪ ಮೀಸೆ ವಯಸ್ಸು ಮೀರಿದರೂ ಕಪ್ಪು ಕಾಣುವಂಥ ಮೀಸೆ. ಹೀಗೆ ಪ್ರತಿಯೊಂದು ದೆಸೆಯಲ್ಲಿ ಆಗಿನ ಅಧ್ಯಾಪಕರ ಪ್ರಭಾವ ಕಾಣುತ್ತೇವೆ.

" ಜೆ. ಜೆ. ಕಲಾ ಶಾಲೆಯ ಮೊದಲ ಶಿಕ್ಷಕ ವರ್ಗ ಈ ರೀತಿ ಇತ್ತು. ಶ್ರೀ ಕೃಷ್ಣರಾವ್ ಭಾಯಿ. ಶ್ರೀ ಗಣಪತರಾವ್ ಕೇದಾರಿ. ಶ್ರೀ ಸೊಕರ ಬಾಪೂಜಿ. ಶ್ರೀ ಮಂತ್ರಿ ಗೋವಸ್, ಹಾಗೂ ಶ್ರೀ ಪಾವಂಜೆ ಮುಂತಾದವರು. "[೪೦] ರಾವ್‌ಬಹದ್ದೂರ್ ದುರಂಧರ ಅವರು ತಮ್ಮ ಗುರುಗಳು ಕ್ಲಾಸಿನಲ್ಲಿ ಕಲಿಸುತ್ತಿದ್ದ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ.

---

೩೭. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೨೪

೩೮. ಮಾಧವ ಗಡಕರಿ : " ತಾಸಕರವರ ಚೀರಬಂದಿ ಮನೆ " : ಮರಾಠಿ ಲೋಕಪ್ರಭಾ ದಿವಾಳಿ. ಮಾಸಪತ್ರಿಕೆ : ೧೯೮೮. ಪುಟ ೭

೩೯. ಮಾಧವ ಗಡಕರಿ : " ತಾಸಕರವರ ಚೀರಬಂದಿ ಮನೆ " : ಮರಾಠಿ ಲೋಕಪ್ರಭಾ ದಿವಾಳಿ. ಮಾಸಪತ್ರಿಕೆ : ೧೯೮೮. ಪುಟ ೫

೪೦. Sir J. J. School of Art, Bombay a hundred years of its career, ಪುಟ ೮೧

ಈ ವಿಷಯಗಳನ್ನು ಇಲ್ಲಿ ಪ್ರಸ್ತುತಪಡಿಸಲು ಕಾರಣ ಅದೇ ಪರಂಪರೆ ಜೆ. ಜೆ. ಶಾಲೆಯಲ್ಲಿ ಮುಂದುವರಿದದ್ದನ್ನು ನೋಡುತ್ತೇವೆ. ಅದಕ್ಕೆ ಆ ಪರಂಪರೆಯ ವಿದ್ಯಾರ್ಥಿಗಳ ಅನಿಸಿಕೆಗಳನ್ನು ಇಲ್ಲಿ ಹೇಳುವುದು ಪ್ರಸ್ತುತ ಅಂತ ನನ್ನ ಅನಿಸಿಕೆ.

" ಶ್ರೀ ಗಣಪತರಾವ್ ಕೇದಾರಿ ಅವರು ಮೊಟ್ಟಮೊದಲ ಹೆಡ್‌ಮಾಸ್ತರ್ ಆಗಿದ್ದರು. ಅವರು ನೆರಳು - ಬೆಳಕನ್ನು ಚಿತ್ರಿಸುವಲ್ಲಿ ಬಹಳ ಪರಿಣತಿಯನ್ನು ಹೊಂದಿದ್ದರು. ಅಲ್ಲದೇ ಪುಡಿ ಬಣ್ಣ (Foliage) ದ ರೇಖಾಚಿತ್ರವನ್ನು ರಚಿಸುವಲ್ಲಿ ಸಾಧನೆ ಗೈದಿದ್ದರು. " ಅವರು ಎಲೆಯ ಹೊರರೇಖೆಯನ್ನು ಬಹಳ ಜಾಣ್ಮೆಯಿಂದ ಚಿತ್ರಿಸುತ್ತಿದ್ದರು. ಅಲ್ಲದೇ ಸಮೀಪ ದೂರಗಳನ್ನು ಅತ್ಯಂತ ತೆಳು ರೇಖೆಯಿಂದ ವರ್ಗಿಸಿ ತೋರಿಸುತ್ತಿದ್ದರು. ಅಲ್ಲದೆ ಅವರು ದೃಗ್‌ದರ್ಶನದಲ್ಲಿ ಬರುವ ಪ್ರತಿಯೊಂದು ರೇಖೆಯನ್ನು ಕರಿ ಹಲಗೆಯ ಮೇಲೆ ಚಿತ್ರಿಸಿ ವಿವರಿಸುತ್ತಿದ್ದರು. "[೪೧]
" ಶ್ರೀ ಮಂತ್ರಿ ಗುರುಗಳು ಚಿತ್ರವನ್ನು ಸರಿಪಡಿಸಲು ಬಂದಾಗ ಅತ್ಯಂತ ಕಠೋರವಾಗಿ ನಡೆದುಕೊಳ್ಳುತ್ತಿದ್ದರು. ಹಾಗೆ ಚಿತ್ರದಲ್ಲಿಯ ತಪ್ಪುಗಳನ್ನು ಎತ್ತಿ ತೋರಿಸುವಾಗ ವಿದ್ಯಾರ್ಥಿಗಳಿಗೆ ಈ ರೀತಿ ಹೇಳುತ್ತಿದ್ದರು. ' The drawing stinks ' ಅಂದರೆ ಇದು ಕೆಟ್ಟಿದೆ. ಇದರಿಂದ ಬಹಳ ದುರ್ವಾಸನೆ ಬರುತ್ತಿದೆ ಎಂದು. " ಇಲ್ಲದಿದ್ದರೆ ವ್ಯಂಗ್ಯವಾಗಿ ' ಬಹಳ ಚೆನ್ನಾಗಿದೆ ಕಸದ ಬುಟ್ಟಿಗೆ ಹಾಕಬಹುದು ಎಂದು ' ಹೇಳುತ್ತಿದ್ದರು. "[೪೨] ಹೀಗೆ ವಿದ್ಯಾರ್ಥಿಗಳು ಹೆದರಿ ಒಮ್ಮೆ ಮಾಡಿದ ತಪ್ಪನ್ನು ಮತ್ತೊಂದೂ ಮಾಡಿರಬಾರದು ಆ ರೀತಿ ತಿದ್ದಿ ಕಲಿಸುತ್ತಿದ್ದರು.

" ಪ್ರಿನ್ಸಿಪಾಲ್‌ರಾಗಿದ್ದ ಗ್ರಿಫಿತ್ಸ್‌ರವರೇ ಜಲವರ್ಣದ ಚಿತ್ರಗಳನ್ನು ಕಲಿಸುತ್ತಿದ್ದರು. ಒಬ್ಬ ವಿದ್ಯಾರ್ಥಿಗೆ ಅದನ್ನು ಸರಿಪಡಿಸುತ್ತ ಹೇಳಿಕೊಡುತ್ತಿದ್ದರೆ. ಉಳಿದ ವಿದ್ಯಾರ್ಥಿಗಳು ಸುತ್ತಲೂ ನಿಂತು ನೋಡುತ್ತಿದ್ದೆವು. ಚಿತ್ರ ಸರಿ ಇರದಿದ್ದರೆ. ಬಹಳ ಸಿಟ್ಟಿಗೇಳುತ್ತಿದ್ದರು. ಪ್ರತಿ ಶುಕ್ರವಾರ ಮುಂಜಾನೆ ೧೦ - ೩೦ ರ ವರೆಗೆ ವೇಳೆ ಹಚ್ಚಿ ಚಿತ್ರ ರಚಿಸುವುದು (Time drawing) ಮಾಡಿಸುತ್ತಿದ್ದರು. ૩ - ೪ ಕಾಲ್ಪನಿಕ ಚಿತ್ರಗಳನ್ನು ಮಾಡಿಸುತ್ತಿದ್ದರು. ಸೋಮವಾರ ಈ ಚಿತ್ರಗಳ ಗುಣದೋಷಗಳನ್ನು ಬೋರ್ಡ್ ಮೇಲೆ ಹಚ್ಚಿ ಹೇಳುತ್ತಿದ್ದರು. "[೪೩] ಹೀಗೆ ಎಲ್ಲವೂ ನಿಯಮಬದ್ಧ ಅಭ್ಯಾಸಕ್ರಮವಾಗಿತ್ತು.

ಚೆಟ್ಟಿಯವರು ಕಲಿಯುವಂಥ ಪ್ರಸಂಗದಲ್ಲಿ ಒಮ್ಮೆ ಅವರ ಗುರುಗಳು ಕೋಪಗೊಂಡದ್ದನ್ನು ತಿಳಿಯುತ್ತೇವೆ. " ನಾನು ಎರಡನೇ ವರ್ಷದಲ್ಲಿ ಕಾಲಿರಿಸಿದಾಗ ಒಂದು ಘಟನೆ ಜರುಗಿತು. ನಾನು ಲೈಫ್ ಚಿತ್ರ (Life painting) ಮಾಡುತ್ತಿದ್ದೆ. ಶ್ರೀ ಕೆ. ಬಿ. ಚೂಡೇಕರ್ ಎನ್ನುವವರು ಆಗ ಆ ವಿಷಯವನ್ನು ಕಲಿಸುತ್ತಿದ್ದರು. ನಾನು ಮಾಡುತ್ತಿದ್ದ ಚಿತ್ರವನ್ನು ನೋಡಿ ತಿದ್ದಲು ಬಣ್ಣ ಕೇಳಿದರು. ಆ ಬಣ್ಣ ನನ್ನ ಹತ್ತಿರ ಇರಲಿಲ್ಲ. ಒಮ್ಮಿಂದೊಮ್ಮೆ ಅವರು ಸಿಟ್ಟಿಗೆದ್ದು ನನ್ನ ಕಪಾಳಕ್ಕೆ ಜೋರಾಗಿ ಹೊಡೆದರು. " ಆ ಬಣ್ಣ ತೆಗೆದುಕೊಳ್ಳಲು ನನ್ನ ಹತ್ತಿರ ಹಣ ಇಲ್ಲವೆಂಬುದನ್ನು ನನ್ನ ಗೆಳೆಯರಿಂದ ಅರಿತುಕೊಂಡು ನನ್ನನ್ನು ಕರೆದು ಸಮಾಧಾನಪಡಿಸಿದ್ದುದು ನಂತರದ ವಿಷಯ. ಮಿಸ್ಟರ್ ಚೆಟ್ಟಿ ' ರಾಗ್

೪೧. Sir J. J. School of Art, Bombay a hundred years of its career, ಪುಟ ೮೧
೪೨. Sir J. J. School of Art, Bombay a hundred years of its career, ಪುಟ ೮೧
೪೩. ರಾವಬಹದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಏಕಚಾಲಿಸ ವರ್ಷ " : ಮರಾಠಿ ಪುಸ್ತಕ. ಪುಟ ೧೮

ಮನುನಕಾ ಮೀ ರಾಗಾನಿ ಮಾರಲೊ. ತುಮ್ಹಿ ರಾಗ್ ಮನುನಕಾ ' ಅಂತ ಮರಾಠಿಯಲ್ಲಿ ಹೇಳಿ ಸಮಾಧಾನ ಪಡಿಸಿದರು. " [೬೪] ಅಂದರೆ ಅಂದಿನ ಗುರುಗಳು ಚಿತ್ರಕಲೆ ಕಲಿಸುವುದರಲ್ಲಿ ಎಷ್ಟು ದಕ್ಷರಿದ್ದರೋ ಅಷ್ಟೇ ಕರುಣಾಮಯಿಗಳೂ ಆಗಿದ್ದರೆಂಬುದು ಈ ಪ್ರಸಂಗದಿಂದ ತಿಳಿದುಬರುತ್ತದೆ.

ರೇಖಾಚಿತ್ರಗಳ ಅಭ್ಯಾಸ ದಿನಾಲೂ ವಿದ್ಯಾರ್ಥಿಗಳು ಹೊರಗಡೆ ಹೋಗಿ ರೇಖಾಚಿತ್ರ (Sketch) ಗಳನ್ನು ಮಾಡಿಕೊಂಡು ಬರಲೇಬೇಕು. ಇದೊಂದು ಒಳ್ಳೆಯ ಹವ್ಯಾಸವಾಗಿತ್ತು. ಇದರಿಂದ ವಿದ್ಯಾರ್ಥಿಗಳು ಮನುಷ್ಯ ಚಿತ್ರಗಳಾಗಲೀ. ಪ್ರಾಣಿ ಚಿತ್ರಗಳನ್ನಾಗಲೀ ಅತ್ಯಂತ ಸರಳವಾಗಿ ಚಿತ್ರಿಸುತ್ತಿದ್ದರು. ಶಿಕ್ಷಕರು ತಿರುಗಾಡಲು ಹೋದಾಗ ಅಲ್ಲಿ ಯಾರಾದರೂ ವಿದ್ಯಾರ್ಥಿಗಳು ರೇಖಾಚಿತ್ರ ಮಾಡುತ್ತಿದ್ದರೆ ಅವರಿಗೆ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ಅಷ್ಟೊಂದು ತಾಳ್ಮೆ ಮತ್ತು ಶಿಕ್ಷಣದ ಪ್ರೇಮ. " ಒಮ್ಮೆ ನಾವೆಲ್ಲ ರೇಖಾಚಿತ್ರ ಬಿಡಿಸುತ್ತಾ ಕುಳಿತಿದ್ದಾಗ ಅಲ್ಲಿಗೆ ವಾಯುವಿಹಾರಕ್ಕೆ ಬರುತ್ತಿದ್ದ ಪ್ರಿನ್ಸಿಪಲ್ ಗ್ರಿಫಿತ್ಸ್ ಹಿಂದಿನಿಂದ ಬಂದು ಶಹಭಾಷ್ ನೀಡಿ ಸ್ಕೆಚ್ ಪುಸ್ತಕ ತೆಗೆದುಕೊಂಡು ಇವೇ ರೀತಿ ಚಿತ್ರ ರಚಿಸಬೇಕೆಂದು ಹೇಳಿದರಲ್ಲದೇ ಚಿತ್ರದಲ್ಲಿಯ ತಪ್ಪನ್ನು ತಿದ್ದಿ ಉಪದೇಶ ಮಾಡಿ ಮುಂದಕ್ಕೆ ನಡೆದರು. " [೬೫] ಚೆಟ್ಟಿಯವರು ಚಿತ್ರಕಲೆಯಲ್ಲಿ ಉತ್ಕೃಷ್ಟ ಸ್ಥಾನ ಗಳಿಸಿರುವ ಹಿನ್ನಲೆಯಲ್ಲಿ ಎರಡು. ಮೂರು ಪೆಟ್ಟಿಗೆಗಳನ್ನು ತುಂಬಿದ ಸ್ಕೆಚ್ ಪುಸ್ತಕಗಳೇ ಸಾಕ್ಷಿ. " ರೇಖಾಚಿತ್ರಗಳಿಗೆ ಬಹಳ ಮಹತ್ವ ಕೊಡುತ್ತಿದ್ದರು. ಹೊರ ವಲಯ (Outdoor) ಗಳಿಗೆ ಹೋಗಿ ರೇಖಾಚಿತ್ರ ಬಿಡಿಸಲು ಹೇಳುತ್ತಿದ್ದರಲ್ಲದೆ. ತಾವು ಸಹಿತ ನಮ್ಮ ಜೊತೆ ಚಿತ್ರ ರಚಿಸಿ ತೋರಿಸುತ್ತಿದ್ದರು. ಅಲ್ಲದೆ ಪ್ರತಿದಿನ ಇಷ್ಟು ರೇಖಾಚಿತ್ರಗಳನ್ನು ರಚಿಸಿಕೊಂಡು ತರಬೇಕು. ಇಲ್ಲದಿದ್ದರೆ ವರ್ಗದ ಹಾಜರಿಯನ್ನು ಕೊಡುತ್ತಿರಲಿಲ್ಲ. " [೬೬] ಇಂತಹ ಶಿಸ್ತಿನ ಶಿಕ್ಷಣ ನೀಡುವಂಥ ಶಿಕ್ಷಕರು ಸರ್. ಜೆ. ಜೆ. ಕಲಾ ಶಾಲೆಯಲ್ಲಿದ್ದರು.

ಒಂದು ದಿನ ಶಾಲೆಗೆ ವಿನಾಕಾರಣ ರಜೆ ಹಾಕುವಹಾಗಿಲ್ಲ. ಧುರಂಧರ ಅವರು ' ಹೀಗೆ ಒಂದು ಸಾರಿ ಮದುವೆಯ ಸಲುವಾಗಿ ರಜೆ ಹಾಕುವ ಪ್ರಸಂಗ ಬಂತು. ಮರುದಿನ ಪ್ರಿನ್ಸಿಪಾಲ್ ಸಿಟ್ಟು ಮಾಡಿ ಯಾಕೆ ಬರಲಿಲ್ಲ ಎಂದು ಕೇಳಿ ಶಿಕ್ಷೆ ಎಂದು ಎರಡು ರೂಪಾಯಿ ತೆಗೆದುಕೊಂಡು ನನ್ನ ಹೆಸರು ನೋಟೀಸ್ ಬೋರ್ಡ್ ಮೇಲೆ ಹಚ್ಚಿರಿ ಎಂದು ಹೇಳಿದರು. " [೬೭] ಈ ರೀತಿ ಶಿಕ್ಷೆಯನ್ನು ಕೊಡುತ್ತಿದ್ದರು. ಅಷ್ಟೇ ಉದಾರಿಗಳೂ ಆಗಿದ್ದರೆನ್ನುವುದಕ್ಕೆ ಇನ್ನೊಂದು ಪ್ರಸಂಗ. " ಗ್ರೀನ್‌ವುಡ್ ಪ್ರಿನ್ಸಿಪಲ್ ಬಹಳ ಕಠಿಣ ಸ್ವಭಾವದವರಾಗಿದ್ದರು. ಆದರೆ ವಿದ್ಯಾರ್ಥಿಗಳನ್ನು ಅಷ್ಟೇ ಪ್ರೀತಿಸುತ್ತಿದ್ದರು. ಅದಕ್ಕೆ ವಿದ್ಯಾರ್ಥಿಗಳು ಅವರನ್ನು ಬಹಳ ಪ್ರೀತಿಸುತ್ತಿದ್ದರು. ಅವರು ವಿದ್ಯಾರ್ಥಿಗಳ ಸಂಕಟದಲ್ಲಿ ಭಾಗಿ ಆಗುತ್ತಿದ್ದರು. ಒಬ್ಬ ವಿದ್ಯಾರ್ಥಿಗೆ ದಂಡ ಸಹಿತ ಪರೀಕ್ಷಾ ಶುಲ್ಕ ಕಟ್ಟಬೇಕೆಂದು ಆಫೀಸ್‌ನಲ್ಲಿ ಹೇಳಿದಾಗ.

---

೬೪. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೪

೬೫. ರಾವಬಹದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಪಕಚಾಲಿಸ ವರ್ಷ " : ಮರಾಠಿ ಪುಸ್ತಕ. ಪುಟ ೧೩

೬೬. ಜೆ. ಎಸ್. ಖಂಡೇರಾವ್ ಅವರ ಸಂದರ್ಶನ : ೪ - ೧೧ - ೧೯೯೯. ಗುಲ್ಬರ್ಗ

೬೭. ರಾವಬಹದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಪಕಚಾಲಿಸ ವರ್ಷ " : ಮರಾಠಿ ಪುಸ್ತಕ. ಪುಟ ೧೭

ಮೊದಲೇ ಆ ವಿದ್ಯಾರ್ಥಿಗೆ ಪರೀಕ್ಷಾ ಶುಲ್ಕ ಕಟ್ಟಲು ಹಣ ಇರಲಿಲ್ಲ ಇನ್ನು ದಂಡ ಸಹಿತ ಹೇಗೆ ಕೊಡುವದೆಂದಾಗ ಗ್ರೀನ್‌ವುಡ್ ತಮ್ಮ ಕಡೆಯಿಂದ ೧೦ ರೂಪಾಯಿಗಳನ್ನು ಕೊಟ್ಟು ದಂಡ ಸಹಿತ ಪರೀಕ್ಷಾ ಶುಲ್ಕವನ್ನು ತುಂಬಲು ಹೇಳಿದರು. " [೪೮]

ಅಲ್ಲಿಯ ಅಧ್ಯಾಪಕ ವರ್ಗ ಅಷ್ಟೇ ಕಟ್ಟುನಿಟ್ಟಾಗಿ ಅಭ್ಯಾಸ ಕ್ರಮವನ್ನು ಜಾರಿಗೆ ತಂದಿದ್ದರು. " ವಿದ್ಯಾರ್ಥಿ ಮೊದಲಿನ ಪಾಠವನ್ನು ಮುಗಿಸಿದ ನಂತರವೇ ಮುಂದಿನ ಪಾಠ. ಮೊದಲಿಗೆ ಸರಳವಾದ ಜಾಮಿತಿ ಆಕೃತಿಯ ಸ್ಥಿರವಾದ ಚಿತ್ರ ಮತ್ತು ಅದರ ನೆರಳು - ಬೆಳಕು. ನಂತರ ಪುಡಿ ಬಣ್ಣದಿಂದ ಛಾಯೆಯನ್ನು ಮಾಡುವುದು. ಮೊದಲಿಗೆ ಪೆನ್ಸಿಲ್. ಚಾರ್‌ಕೋಲ್ ನಂತರ ಕ್ರೆಯಾನ್. ಜಲವರ್ಣ. ಕೊನೆಗೆ ತೈಲವರ್ಣದಲ್ಲಿ ಮಾಡುವುದು. ಹಲವಾರು ಬಣ್ಣಗಳಿಂದ ಚಿತ್ರಿಸುವ ಮೊದಲು ಈ ರೀತಿಯಲ್ಲಿ ಪರಿಣತಿಯನ್ನು ಪಡೆಯುವ ಹಾಗೆ ಮಾಡುತ್ತಿದ್ದರು.[೪೯] ಯಾಕೆಂದರೆ ವಿದ್ಯಾರ್ಥಿಗಳು ರೇಖಾಚಿತ್ರ ಹಾಗೂ ವಸ್ತುಗಳ ಪ್ರಮಾಣ ಬದ್ಧತೆ ಹಾಗೂ ಬಣ್ಣಗಳ ಮೌಲ್ಯ ಚೆನ್ನಾಗಿ ಗ್ರಹಿಸಿ ಕರಗತ ಮಾಡಿಕೊಳ್ಳಲೆಂಬ ಉದ್ದೇಶವಾಗಿತ್ತು.

೧೯೩೪ ರಲ್ಲಿ ಚಿಟ್ಟಿಯವರು ಜೆ. ಜೆ. ಕಲಾ ಶಾಲೆಗೆ ಪ್ರವೇಶ ಪಡೆದಾಗ " ಶ್ರೀ ಎಲ್. ಎನ್. ತಾಸ್ಕರ್ ಅವರು ಹೆಡ್‌ಮಾಸ್ತರರಿದ್ದರು. ಶ್ರೀ ಎಮ್. ವಿ. ದುರಂಧರ ವ್ಹಾಯಿಸ್ ಪ್ರಿನ್ಸಿಪಾಲರಿದ್ದರು. ಶ್ರೀ ಗ್ಲ್ಯಾಡಸನ್ ಸಾಲೋಮನ್ ಪ್ರಿನ್ಸಿಪಾಲರಾಗಿದ್ದರು. ಶ್ರೀ ಕೆ. ಬಿ. ಚೂಡೇಕರ. ಶ್ರೀ ಅಗಸಕರ. ಶ್ರೀ ತಿರಂದಾದ ಮುಂತಾದ ಅಧ್ಯಾಪಕ ವರ್ಗ ಇತ್ತು. ಮೊದಲನೆಯ ವರ್ಷ ಶ್ರೀ ತಳೇವಾಡಕರ ಹಾಗೂ ಎರಡನೆಯ ವರ್ಷ ಶ್ರೀ ಚೂಡೇಕರ ಇವರಿಂದ ಲೈಫ್ ಪೇಂಟಿಂಗ ಚೆನ್ನಾಗಿ ಮಾಡುವದನ್ನು ಕಲಿತುಕೊಂಡೆ. ಮೂರನೇ ವರ್ಷ ಅಗಸ್ಕರ. ಚೂಡೇಕರ ಇದ್ದರು. ನಾಲ್ಕನೇ ವರ್ಷ (ಅಡ್ವಾನ್ಸ ಕ್ಲಾಸ್) ತಾಸ್ಕರ್ ಅವರು ಇದ್ದರು. ಇವರಿಂದ ಸಂಯೋಜನಾ ಚಿತ್ರದ ಬಗ್ಗೆ (composition) ಬಹಳ ಚೆನ್ನಾಗಿ ಮಾಹಿತಿ ಸಿಕ್ಕಿತು. ಅಲ್ಲದೆ ಶ್ರೀ ಧುರಂಧರ ಹಾಗೂ ಗ್ಲ್ಯಾಡ್‌ಸನ್ ಸಲೋಮನ್ ಅವರಿಂದ ಐದನೇ ವರ್ಷದಲ್ಲಿ ಎಲ್ಲ ರೀತಿಯ ಚಿತ್ರಗಳನ್ನು ರಚಿಸಲು ತರಬೇತಿ ದೊರೆಯಿತು. ಮ್ಯೂರಲ್ (ಭಿತ್ತಿಚಿತ್ರ) ಅವಧಿಯನ್ನು ಸಲೋಮನ್‌ರೆ ತೆಗೆದುಕೊಳ್ಳುತ್ತಿದ್ದರು ".[೫೦] ಇಂತಹ ಒಳ್ಳೆಯ ಪರಿಣತಿಯನ್ನು ಪಡೆದ ಅಧ್ಯಾಪಕ ವರ್ಗದ ಮಾರ್ಗದರ್ಶನ ಚಿಟ್ಟಿಯವರಿಗೆ ಲಭಿಸಿತ್ತು.

" ಅನೇಕ ಸ್ತ್ರೀ - ಪುರುಷರ ಆಕೃತಿಗಳನ್ನೊಳಗೊಂಡ ಚಿತ್ರವೊಂದನ್ನು ಪ್ರಮಾಣ ಬದ್ಧವಾಗಿ ರಚಿಸಬೇಕೆಂದರೆ ಧುರಂಧರ. ತಾಸ್ಕರವರಿಗೆ ಮಾತ್ರ ಸಾಧ್ಯವಿತ್ತು. ಪ್ರತಿಶತ ೯೦ ರಷ್ಟು ಚಿತ್ರಕಾರರಿಗೆ ಈ ಕಲೆ ಸಾಧಿಸಿದ್ದಿಲ್ಲ " [೫೧] ಎಂದು ಮಾಧವ ಗಡಕರ ಅವರು ಒಂದು ಲೇಖನದಲ್ಲಿ ಹೇಳಿದ್ದಾರೆ. ಅಂತೇಯೇ ಅವರ ಮಾರ್ಗದರ್ಶನದಲ್ಲಿ ಪಳಗಿದ ವಿದ್ಯಾರ್ಥಿಗಳೆಲ್ಲ ಮುಂದೆ ಒಳ್ಳೆ ನೈಜ ಚಿತ್ರಕಾರರಾಗಿ ಪ್ರಸಿದ್ಧಿಯನ್ನು ಹೊಂದಿದ್ದಾರೆ.

---

೪೮. ರಾವಬಹದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಏಕಚಾಲಿಸ ವರ್ಷ " : ಮರಾಠಿ ಪುಸ್ತಕ. ಪುಟ ೨೧

೪೯. Sir J. J. School of Art, Bombay a hundred years of its career, ಪುಟ ೮೧

೫೦. ಎಂ. ವಿ. ಚಿಟ್ಟಿಯವರ ಅಪ್ರಕಟಿತ ಹಸ್ತಪ್ರತಿ

೫೧. ಮಾಧವ ಗಡಕರಿ : " ತಾಸಕರವರ ಚೀರಬಂದಿ ಮನೆ " : ಮರಾಠಿ ಲೋಕಪ್ರಭಾ ದಿವಾಳಿ. ಮಾಸಪತ್ರಿಕೆ : ೧೯೮೮. ಪುಟ ೧೦

ಯುರೋಪಿಯನ್ ಡೈರೆಕ್ಟರ್‌ಗಳು ತಾವು ಬರೆಯುವಂಥ ಗ್ರಂಥಗಳಿಗೆ ಶ್ರೀ ಧುರಂಧರ ಮುಂತಾದವರಿಂದ ಅನೇಕ ಚಿತ್ರಗಳನ್ನು ರಚಿಸಿಕೊಂಡಿದ್ದಾರೆ. " ೧೯೪೪ ಜೂನ್ ತಿಂಗಳಲ್ಲಿ ' ಬ್ರಾಂಜ ಪೊಟರಿ ' ಎಂಬ ವಿಷಯದ ಮೇಲೆ ಸರಕಾರದ ಆದೇಶದಂತೆ ಪುಸ್ತಕ ಬರೆದರು. ಅದರ ಸಲುವಾಗಿ ೧೦೦ ಚಿತ್ರ ನನ್ನ ಕಡೆಯಿಂದ ಚಿತ್ರಿಸಿಕೊಂಡರು. ಈ ಚಿತ್ರಗಳನ್ನು ಲಂಡನ್ ಪುಸ್ತಕದಲ್ಲಿ ಪಬ್ಲಿಷ್ ಮಾಡಿದರು ".[೫೭] ಅದರಂತೆ ಫೇರಿ ಟೇಲ್ಸ ಪುಸ್ತಕಗಳಿಗೂ ಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ. ಆ ಚಿತ್ರಗಳ ಪ್ರಶಂಸೆಯ ಪತ್ರ ಈ ರೀತಿ ಇದೆ.

26-2-1914

Judge's House

Satara

" Dear Mr. Dhurandar,

I have just received your bundle of drawings enclosed with my Deccan Fairy Tales. Allow me to say that your drawings are the most beautiful things that I have ever seen. I have shown them to my English Friends and they all agree with me. Indeed I cannot sufficiently praise your talent or congratulate you on your success.

In the mean time, however, I hope you will kindly accept the enclosed cheqe. It is no way an adequate return for the beautiful sketches sent by you. But I hope that you will understand that until the book succeeds, I shall be rather hampered. If it does succeed you shall have your share of the profits.

With all kind regards and renewed thanks.

Yours very sincere

C. A. Kincaid "[೫೮]

ಈ ರೀತಿ ಗ್ರಂಥಗಳಿಗೆ ಚಿತ್ರರಚಿಸುವ ಪ್ರಭಾವವೂ ಕೂಡ ವಿದ್ಯಾರ್ಥಿಗಳ ಮೇಲೆ ಆಗಿದೆ. ಅಂತೆಯೇ ಚೆಟ್ಟಿಯವರು ಕೂಡ ಅನೇಕ ಪುರಾಣಗ್ರಂಥಗಳಿಗಾಗಿ ಚಿತ್ರಗಳನ್ನು ರಚಿಸಿದ್ದಾರೆ. ರಾವ್‌ಬಹದ್ದೂರ ಧುರಂಧರ್ ಅವರು ಬಾಂಬೆ ಆರ್ಟ್ ಸೊಸೈಟಿಯ ಕಲಾ ಪ್ರದರ್ಶನದಲ್ಲಿ ಅನೇಕ ಸಾರಿ ಸುವರ್ಣ ಪದಕಗಳನ್ನು ಪಡೆದಿದ್ದಾರೆ. ಶ್ರೀ ಧುರಂಧರ ಅವರು ಜೆ. ಜೆ. ಶಾಲೆಯಲ್ಲೇ ಉತ್ತಮ ವಿದ್ಯಾರ್ಥಿಯಾಗಿ ಅಲ್ಲಿಯೇ ಶಿಕ್ಷಕರಾಗಿ. ಹೆಡ್‌ಮಾಸ್ತರರಾಗಿ. ಕೊನೆಗೆ ಗ್ಲ್ಯಾಡ್‌ಸ್ಟನ್ ಸಲೋಮನ್‌ರ ಶಿಫಾರಸಿನಂತೆ ವ್ಹಾಯಿಸ್ ಪ್ರಿನ್ಸಿಪಾಲರಾಗಿ ೪೧ ವರ್ಷಗಳ ಸುದೀರ್ಘ ಅನುಭವವನ್ನು ಪಡೆದಿದ್ದಾರೆ. ಅಂತಹ ಅನುಭವಸ್ಥ ಗುರುಗಳು ಚೆಟ್ಟಿಯವರಿಗೆ ದೊರೆತದ್ದು ಸೌಭಾಗ್ಯವೇ.

---

೫೭. ರಾವಬಹದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಏಕಚಾಲಿಸ ವರ್ಷ " : ಮರಾಠಿ ಪುಸ್ತಕ. ಪುಟ ೧೭

೫೮. ರಾವಬಹದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಏಕಚಾಲಿಸ ವರ್ಷ " : ಮರಾಠಿ ಪುಸ್ತಕ. ಪುಟ ೧೩೮

ದುರಧಂರ ಅವರು ವಿದ್ಯಾರ್ಥಿ ಆಗಿದ್ದಾಗಲೇ ತಂದೆ ತಾಯಿಗಳನ್ನು ಕಳೆದುಕೊಂಡು. ಅಣ್ಣಂದಿರಿಗೆ ಭಾರವಾಗದೆ ಸ್ವತಃ ದುಡಿಯಬೇಕೆಂಬ ಇಚ್ಚೆಯನ್ನು ಹೊಂದಿದ್ದರು. ಆಗ ೧೮೯೩ ರಲ್ಲಿ ವ್ಹಾಯಿಸ್ ಪ್ರಿನ್ಸಿಪಾಲ್‌ರಾಗಿದ್ದ ಗ್ರೀನ್‌ವುಡ್‌ರಿಗೆ ಯಾವುದಾದರು ಶಾಲೆಯಲ್ಲಿ ಕಲಾ ಶಿಕ್ಷಕನ ಕೆಲಸ ಕೊಡಿಸಿರಿ ಎಂದಾಗ ಗ್ರೀನ್‌ವುಡ್‌ರು ಒಂದು ಶಿಫಾರಸಿನ ಪತ್ರವನ್ನು ಅಲೆಗ್ಸ್ಯಾಂಡರ್ ಹೈಸ್ಕೂಲಿನ ಪ್ರಿನ್ಸಿಪಾಲರಿಗೆ ಈ ರೀತಿ ಬರೆದಿದ್ದರು.

Schol of Art

Bombay

June 22, 1893

" Mr. M. V. Dhurandhar is one of the most capable students we have had at the school. Besides his scool work he has made pictures chalk, water and oil colours which have been highly commended of the Bombay Art Society's Exhibition; and at the last exhibition for a good little picture in oil colours he received a prize. I know no student who seems more likely to make a good teacher.

(sd/-)

E. Greenwood

Vice Principal " [೫೪]

ಅಂದರೆ ವಿದ್ಯಾರ್ಥಿ ದೆಸೆಯಲ್ಲಿಯೇ ಶಿಕ್ಷಕರಾಗುವಂತಹ ಪ್ರತಿಭೆ ಅರ್ಹತೆಯನ್ನು ಹೊಂದಿದ್ದರು. ಅಷ್ಟೊಂದು ಸಾಮರ್ಥ್ಯ. ಕಲಾ ನೈಪುಣ್ಯತೆ ಆಗಿನ ಶಿಕ್ಷಕರಲ್ಲಿ ವಿದ್ಯಾರ್ಥಿ ದೆಸೆಯಲ್ಲಿ ಇತ್ತು. ಹೊಸದಾಗಿ ಬಂದ ಎಲ್ಲ ಯುರೋಪಿಯನ್ ಡೈರೆಕ್ಟರರು ದುರಂಧರ್ ಅವರನ್ನೇ ಸಲಹೆ ಕೇಳುತ್ತಿದ್ದರು. ಇವರ ಸಾಮರ್ಥ್ಯವನ್ನು ಮೆಚ್ಚಿಕೊಂಡ ಬರ್ನಸ್ ಅವರು ೧೯೦೮ ರಲ್ಲಿ ಅವರಿಗೆ ಡ್ರಾಯಿಂಗ್ ಇನ್ಸ್‌ಪೆಕ್ಟರ್ ಕೆಲಸ ಕೊಟ್ಟರು. ಆಗ ಇವರು ತಮಗೆ ಕೊಟ್ಟಂಥ ರಾಜ್ಯಗಳ ಎಲ್ಲಾ ಊರಿನ ಶಾಲೆಗಳ ತಪಾಸಣೆ ಮಾಡುತ್ತಿದ್ದರು. ಕರ್ನಾಟಕಕ್ಕೂ ಬಂದಿದ್ದರು. " ನನ್ನ ತಪಾಸಣೆಯ ಕೆಲಸ ಬಹಳವಾಗಿತ್ತು. ಬೆಳಗಾಂವ. ಧಾರವಾಡ. ಹುಬ್ಬಳ್ಳಿ. ಗದಗ. ಅಥಣಿ. ಬಾಗಲಕೋಟ. ವಿಜಾಪುರ. ಸೊಲ್ಲಾಪುರ. ಪಂಡರಪುರ ಶಾಲೆಗಳ ತಪಾಸಣೆ ಮಾಡಿ ನಂತರ ಗುಜರಾತಿನ ಬಡೋದಾ. ದಡಿಯಾದ. ಖೇಡಾಡಾಕೋರ. ಅಹಮದಾಬಾದ. ಜೊರಾಗಾಂವ. ರಾಣಾಪುರ ಮುಂತಾದ ಶಾಲೆಗಳಿಗೆ ಭೇಟಿ ನೀಡಿದೆ. ರತ್ನಾಗಿರಿ. ರಾಜಾಪುರ. ಮಾಳವಾ. ವೆಂಗೂರಿಗೆ ಹೋಗಿದ್ದೆ. ವೆಂಗೂರಿನಲ್ಲಿದ್ದಾಗ ಟೆಲಿಗ್ರಾಂ ಬಂದಿತು. ಅನ್ಯ ಕೆಲಸದ ನಿಮಿತ್ತ ಮತ್ತೆ ಮುಂಬಯಿಗೆ ತಿರುಗಿ ಹೋಗಬೇಕಾಯಿತು. " [೫೫] ಧುರಂಧರ ಅವರು ಅನ್ಯರಾಜ್ಯದಲ್ಲಿ ಚಿತ್ರಕಲಾ ವಿಷಯದ ಪರೀಕ್ಷೆಗಳನ್ನು ನಡೆಸತಕ್ಕಂತಹ ಶಾಲೆಯ ತಪಾಸಣೆಗಳಿಗೂ ಹೋಗುತ್ತಿದ್ದರು. ಕಲಿಯುವಾಗ ಇವರು ಭಾಸ್ಕರ ಅವರಿಗಿಂತ ಒಂದು ವರ್ಷ ಮುಂದಿನ ವರ್ಗದಲ್ಲಿದ್ದರು.

---

೫೪. ರಾವಬಹದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಏಕಚಾಲಿಸ ವರ್ಷ " : ಮರಾಠಿ ಪುಸ್ತಕ. ಪುಟ ೧೨

೫೫. ರಾವಬಹದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಏಕಚಾಲಿಸ ವರ್ಷ " : ಮರಾಠಿ ಪುಸ್ತಕ. ಪುಟ ೬೯

ತಾಸ್ಕರ ಅವರ ವ್ಯಕ್ತಿತ್ವ ಬಹು ಉನ್ನತ ಮಟ್ಟದ್ದಾಗಿತ್ತು. ಇವರು ಶ್ರೀ ಚೆಟ್ಟಿಯವರಿಗೆ ೪ ನೇ ವರ್ಷದಲ್ಲಿ ಸಂಯೋಜನಾ ಚಿತ್ರಗಳ (Composition) ಬಗ್ಗೆ ಹೇಳಿಕೊಡುತ್ತಿದ್ದರು. ಇವರ ವೇಷಭೂಷಣದ ಬಗ್ಗೆ ಈಗಾಗಲೇ ಹೇಳಲಾಗಿದೆ. ತಾಸ್ಕರ ಅವರ ಒಬ್ಬ ಶಿಷ್ಯರಾದ ಶ್ರೀ ಬಿ. ಡಿ. ಶೇರಗಾಂವಕರ ಈ ರೀತಿ ಹೋಳುತ್ತಾರೆ : " ತಾಸ್ಕರ್ ಅವರನ್ನು ನೋಡಿದಾಕ್ಷಣ ಕಂಡುಬರುವ ವ್ಯಕ್ತಿತ್ವ ಎಂದರೆ ಬಹಳ ಗಂಭೀರ ಹಾಗೂ ೫ ನೇ ವರ್ಷದಲ್ಲಿ ಅವರು ನಮಗೆ ಪಿಕ್ಟೋರಿಯಲ್ ಕಾಂಪೋಜಿಶನ್ ಕಲಿಸುತ್ತಿದ್ದರು. ಕಲಿಸುವಾಗ ವಿಶೇಷ ರೀತಿಯಲ್ಲಿ ಅದರ ಬಗ್ಗೆ ಪ್ರಶ್ನೋತ್ತರ ಕೇಳಿ ಚಿತ್ರ ರಚಿಸುವುದನ್ನು ಹೇಳಿಕೊಡುತ್ತಿದ್ದರು. ಆದರೆ ಹೊಸ ವಿದ್ಯಾರ್ಥಿಗಳಿಗೆ ಇವರ ಪ್ರಶ್ನೆಗಳಿಂದ ಹೆದರಿಕೆ ಬರುತ್ತಿತ್ತು. ಬರಬರುತ್ತ ಅವರ ಪರಿಚಯ ಆದ ಹಾಗೆ ಅವರ ಕಠಿಣತೆಯಲ್ಲಿ ಮೃದು ಸ್ವಭಾವವು ಕಂಡುಬಂದಿತು. ಅಷ್ಟೇ ವಿದ್ಯಾರ್ಥಿಗಳ ಮೇಲೆ ಪ್ರೀತಿ ತೋರುತ್ತಿದ್ದರು. " [೫೬] ಹೀಗೆ ತಾಸ್ಕರ ಅವರು ಶ್ರೀ ಧುರಂಧರ ಅವರಂತೆ ಪದ್ಧತಿಯ ಪ್ರಕಾರ ಅಭ್ಯಾಸ ಹೇಳಿಕೊಡುತ್ತಿದ್ದರು. ಶಿಸ್ತನ್ನು ಪಾಲಿಸುತ್ತಿದ್ದರು. ಯಾಕೆಂದರೆ ಅವರೂ ಸಹ ಹಾಗೆ ಅಭ್ಯಾಸ ಮಾಡಿದ್ದರು. ತಮ್ಮ ವಿದ್ಯಾರ್ಥಿಗಳಿಂದ ಅದನ್ನೇ ಬಯಸುತ್ತಿದ್ದರು.

" ಇವರ ಬಣ್ಣಗಳ ಲೇಪನ ಇಂಪ್ರೆಷನಿಸ್ಟರ್ ಪದ್ಧತಿಯಲ್ಲಿ ಮೂಡಿಬರುತ್ತಿತ್ತು. ಅಸಂಖ್ಯೆ ಮನುಷ್ಯಾಕೃತಿಗಳನ್ನು ಸೇರಿಸಿ ಚಿತ್ರರಚನೆ ಮಾಡುತ್ತಿದ್ದರು. ' ಬನಾರಸ್ ಸ್ನಾನ ಘಾಟ ' ಇಂತಹ ವಿಷಯಗಳನ್ನು ಚಿತ್ರಿಸುತ್ತಿದ್ದರು. ಈ ಚಿತ್ರಗಳು ಬಹಳ ಆಕರ್ಷಣೀಯವಾಗಿದ್ದವು. ಪ್ರಶಸ್ತಿಗಳನ್ನು ಗಳಿಸಿದ್ದವು. ತಾಸ್ಕರ್ ಅವರು ಶ್ರೇಷ್ಠ ಡ್ರಾಫ್ಟ್‌ಮನ್ ಇದ್ದರು. ಮನುಷ್ಯ (Figure) ಆಕೃತಿಗಳಲ್ಲಂತೂ ಅವರ ಪ್ರತಿಭೆಯನ್ನು ಹೇಳತೀರದು. " [೫೭] ಪ್ರತಿಭಾನ್ವಿತ ಗುರುಗಳ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡಿದ ಚೆಟ್ಟಿಯವರು ಇನ್ನಿತರ ಕಲಾವಿದರೆಲ್ಲರೂ ಅಷ್ಟೇ ಮನುಷ್ಯಾಕೃತಿಗಳನ್ನು ರಚಿಸುವಲ್ಲಿ ಪ್ರಭುತ್ವವನ್ನು ಪಡೆದಿದ್ದಾರೆ.

ತಾಸ್ಕರ್ ಅವರ ಆಕೃತಿಗಳ ದೂರ ಸಮೀಪಗಳನ್ನು ಪ್ರತಿಯೊಂದು ರೇಖೆಯಲ್ಲಿ ತೋರಿಸುತ್ತಿದ್ದರು. ರಸ್ತೆ ಆಗಲಿ. ಕಟ್ಟಡಗಳಾಗಲಿ. ಮನುಷ್ಯಾಕೃತಿಗಳಾಗಲಿ. ನದಿಯ ದಂಡೆಗಳಾಗಲಿ ರೇಖೆಯಲ್ಲಿಯೇ ಸಮೀಪ ದೂರಗಳನ್ನು ಸ್ಪಷ್ಟವಾಗಿ ಚಿತ್ರಿಸುತ್ತಿದ್ದರು. ಅವರು ಚಿತ್ರಿಸಿದ ಯಾವುದೇ ರೇಖೆ ಹುಸಿ ಹೋಗುತ್ತಿರಲಿಲ್ಲ. ಇಂತಹ ಚಿತ್ರಗಳ ಅಭ್ಯಾಸ ಮಾಡಲಿಕ್ಕೆ ದೃಗ್‌ದರ್ಶನ (Perspective) ಚೆನ್ನಾಗಿ ಅರಿತಿರ ಬೇಕಾಗುತ್ತದೆ. ಹಾಗೆ ಬಣ್ಣಗಳನ್ನು ಸಹಿತ ಸಮೀಪ ಮತ್ತು ದೂರ ಹೇಗೆ ಲೇಪಿಸಬೇಕೆಂಬುದಕ್ಕೆ ಒಂದು ಶಾಸ್ತ್ರವಿದೆ. ಅದಕ್ಕೆ ಚಿತ್ರಕಲಾ ಭಾಷೆಯಲ್ಲಿ Chairoscuro ' ಕ್ಯೂರಸ್‌ಕ್ಯೂರೊ ' ಎಂದು ಕರೆಯುತ್ತಾರೆ. ಅಂತಹ ಪದ್ಧತಿ ಅಳವಡಿಸಿಕೊಂಡು ಶಾಸ್ತ್ರಬದ್ಧ ಶಿಕ್ಷಣ ಪಡೆದಿದ್ದರಿಂದ ಅದೇ ಶೈಲಿಯಲ್ಲಿ ಶಾಸ್ತ್ರೋಕ್ತವಾಗಿ ಚಿತ್ರಿಸುತ್ತಿದ್ದರು. ಅವರ ಸಮಕಾಲೀನ ಚಿತ್ರಕಾರರಲ್ಲಿಯೂ ಈ ಪದ್ಧತಿಯನ್ನು

---

೫೬. ಬಾಬುರಾವ್ ಸಡವೆಲಕರ : ಲೇ. " ಜೆ. ಜೆ. ಸ್ಕೂಲ್ ಆಫ್ ಆರ್ಟ್‌ಚೆ ತಾಸ್ಕರ್ ಮಾಸ್ತರ " : ಮರಾಠಿ ಲೋಕಪ್ರಭಾ ದಿವಾಲಿ. ಮಾಸಪತ್ರಿಕೆ : ೧೯೮೮. ಪುಟ ೭೩

೫೭. ಬಾಬುರಾವ್ ಸಡವೆಲಕರ : ಲೇ. " ಜೆ. ಜೆ. ಸ್ಕೂಲ್ ಆಫ್ ಆರ್ಟ್‌ಚೆ ತಾಸ್ಕರ್ ಮಾಸ್ತರ " : ಮರಾಠಿ. ಪುಟ ೭೩ ಲೋಕಪ್ರಭಾ ದಿವಾಲಿ. ಮಾಸಪತ್ರಿಕೆ ೧೯೮೮

ಕಾಣುತ್ತೇವೆ. ಯಾಕೆಂದರೆ ಆಗಿನ ಕಾಲದ ಶಿಕ್ಷಣ ಪದ್ಧತಿ ಆ ರೀತಿ ಇತ್ತು." ೫೮ ಇದೇ ಶಿಕ್ಷಣ ಪದ್ಧತಿ ಇವರ ಶಿಷ್ಯಂದಿರಾವ ಶ್ರೀ ಚೆಟ್ಟಿಯವರ ಕಾಲದಲ್ಲಿಯೂ ಮುಂದುವರಿದು ಬಂದದ್ದನ್ನು ನಾವು ನೋಡುತ್ತೇವೆ. ಆ ಕಾಲದಲ್ಲಿ ಕಲೆಯ ವ್ಯಾಕರಣಕ್ಕೆ ಬಹಳ ಮಹತ್ವ ಕೊಡುತ್ತಿದ್ದರು. ವ್ಯಾಕರಣ ಬದ್ಧವಾದ ಕಲಾಕೃತಿ ಇರದಿದ್ದರೆ ಅದು ಪರಿಪೂರ್ಣವಲ್ಲ ಎಂದು ಭಾವಿಸುತ್ತಿದ್ದರು.

ಇವರು ಜಲವರ್ಣದಲ್ಲಿ ಸಿದ್ಧಹಸ್ತರಾಗಿದ್ದರು. ಚಿತ್ರಗಳನ್ನು ತಮ್ಮ ಅಂತರಂಗದ ಭಾವನೆಗಳೆಲ್ಲಾ ಸ್ಫುರಿಸುವಂತೆ ಚಿತ್ರಿಸುತ್ತಿದ್ದರು. ಜನರ ಗುಂಪನ್ನು ಚಿತ್ರಿಸಿದಾಗಲೂ ಪ್ರತಿಯೊಬ್ಬ ಮನುಷ್ಯಾಕೃತಿಯ ಚಲನವಲನವನ್ನು ಸೂಕ್ಷ್ಮವಾಗಿ ಸೆರೆಹಿಡಿದಿಡುತ್ತಿದ್ದರು. "ಇವರ ಚಿತ್ರದಲ್ಲಿ ನೆರಳು-ಬೆಳಕಿನ ಸುಂದರವಾದ ಸಂಯೋಜನೆ, ಅವಕಾಶದಲ್ಲಿ (Space) ದೂರ-ಸಮೀಪ, ವಿಷಯಕ್ಕೆ ತಕ್ಕಂತಹ ವರ್ಣಲೇಪನ ಇವು ಮೂರು ಅತ್ಯಂತ ಪ್ರಮುಖ ಅಂಶಗಳಾಗಿದ್ದವು." ೫೯ ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಚಿತ್ರಕಲಾ ಕ್ಷೇತ್ರದಲ್ಲಿ ಸಾಧನೆಗೈದ ತಾಸ್ಕರ ಅವರು ಒಬ್ಬ ಮಹಾನ್ ಕಲಾಗುರುವಾಗಿದ್ದರು, ಎಂಬುದುರಲ್ಲಿ ಸಂದೇಹವಿಲ್ಲ.

ಆಗಿನ ಕಾಲದ ವಿದ್ಯಾರ್ಥಿಗಳೆಲ್ಲ Fresco (Mural) ಭಿತ್ತಿಚಿತ್ರ ಮಾಡುವುದರಲ್ಲಿ ಅತ್ಯಂತ ಪ್ರಾವಿಣ್ಯತೆಯನ್ನು ಪಡೆದಿದ್ದರು. ಕಾರಣ ತಾಸ್ಕರ್ ಅವರು ಕಲಿಯುವ ಸಂದರ್ಭದಲ್ಲಿ ಜಾನ್. ಗ್ರಿಫಿತ್ಸ್ ಪ್ರಿನ್ಸಿಪಾಲರಿದ್ದರು. (೧೮೬೮ - ೧೮೯೫) ಅವರ ಸೇವಾವಧಿ ಬಹಳ ಮುಖ್ಯವಾದದ್ದು. "ಇವರು ಸತತ ೧೨ ವರ್ಷ (೧೮೭೨ - ೧೮೮೪) ವರೆಗೆ ಶ್ರಮ ವಹಿಸಿ ವಿದ್ಯಾರ್ಥಿಗಳಿಂದ ಅಜಂತಾದ ಗುಹೆಯಲ್ಲಿಯ ಭಿತ್ತಿಚಿತ್ರಗಳನ್ನು ನಕಲು ಮಾಡಿಸಿ, (Paintings in Buddist cave temple of Ajanta) ಎಂಬ ಗ್ರಂಥವನ್ನು ಪ್ರಕಟಿಸಿದರು." ೬೦ ಅಲ್ಲದೆ ವಿದ್ಯಾರ್ಥಿಗಳಿಗೆ ಮೊದಲೇ "ಭಿತ್ತಿಚಿತ್ರಗಳ ಬಗ್ಗೆ ಮತ್ತು ಅದಕ್ಕಾಗಿ ಭಿತ್ತಿಯನ್ನು ಯಾವ ರೀತಿ ತಯಾರಿಸಬೇಕೆಂಬುದನ್ನು ತಿಳಿಸಿಕೊಟ್ಟರು. ಅಲ್ಲದೆ ಆ ಭಿತ್ತಿ ಅನೇಕ ವರ್ಷಗಳ ಬಾಳಿಕೆಯನ್ನು ಹೇಗೆ ಪಡೆಯುತ್ತದೆ ಎಂಬುದರ ತಿಳಿವಳಿಕೆ ಹಾಗೂ ಯಾವ ರೀತಿ ಬಣ್ಣಗಳ ಬಳಕೆಯನ್ನು ಮಾಡಬೇಕೆಂಬುದನ್ನು ವರ್ಗಗಳಲ್ಲಿ ಹೇಳಿಕೊಡುತ್ತಿದ್ದರು." ೬೧ ಇದೇ ಪರಂಪರೆ ಮುಂದುವರಿದಿದ್ದರಿಂದ ಶ್ರೀ ಮಿಣಜಗಿಯವರು ಬಾದಾಮಿಯಲ್ಲಿ ಭಿತ್ತಿಚಿತ್ರ ನಕಲು ಮಾಡುವುದರಲ್ಲಿ. ಶ್ರೀ ಚೆಟ್ಟಿಯವರು ಶ್ರವಣಬೆಳಗೊಳದ ಭಿತ್ತಿಚಿತ್ರ ನಕಲು ಮಾಡುವುದರಲ್ಲಿ ತಮ್ಮ ಜಾಣ್ಮೆಯನ್ನು (Skill) ಮೆರೆದಿದ್ದನ್ನು ಇಲ್ಲಿ ಕಾಣುತ್ತೇವೆ.

---

೫೮. ಬಾಬುರಾವ್ ಸಡವೆಲಕರ : ಲೇ. " ಜೆ. ಜೆ. ಸ್ಕೂಲ್ ಆಫ್ ಆರ್ಟ್ ಚೆ ತಾಸ್ಕರ್ ಮಾಸ್ತರ " : ಮರಾಠಿ ಲೋಕಪ್ರಭಾ ದಿವಾಲಿ. ಮಾಸಪತ್ರಿಕೆ : ೧೯೮೮. ಪುಟ ೭೪

೫೯. ಬಾಬುರಾವ್ ಸಡವೆಲಕರ : ಲೇ. " ಜೆ. ಜೆ. ಸ್ಕೂಲ್ ಆಫ್ ಆರ್ಟ್ ಚೆ ತಾಸ್ಕರ್ ಮಾಸ್ತರ " : ಮರಾಠಿ ಲೋಕಪ್ರಭಾ ದಿವಾಲಿ. ಮಾಸಪತ್ರಿಕೆ : ೧೯೮೮. ಪುಟ ೯೮

೬೦. ಬಾಬುರಾವ್ ಸಡವೆಲಕರ : ಲೇ. " ಜೆ. ಜೆ. ಸ್ಕೂಲ್ ಆಫ್ ಆರ್ಟ್ ಚೆ ತಾಸ್ಕರ್ ಮಾಸ್ತರ " : ಮರಾಠಿ ಲೋಕಪ್ರಭಾ ದಿವಾಲಿ. ಮಾಸಪತ್ರಿಕೆ : ೧೯೮೮. ಪುಟ ೭೬

೬೧. Sir J. J. School of Art, Bombay a hundred years of its career, ಪುಟ ೭೫







ಶ್ರೀ ಎಂ.ವಿ ಧುರಂಧರ, ಕ್ಯಾಪ್ಟನ್ ಟಬ್ಲ್ಯೂ, ಈ ಗ್ಲ್ಯಾಡನ್ ಸೊಲೋಮನ್, ಶ್ರೀ ಕೆ.ಬಿ. ಚುಡೇಕರ್



ಎಂ. ಎ. ಚೆಟ್ಟಿಯವರ ಗುರುಗಳು

ಶ್ರೀ ಎಂ.ವಿ ಧುರಂಧರ,
ಶ್ರೀ ಎ. ಎಸ್. ತ್ರಿಂದಾಯ
ಶ್ರೀ ಇ.ಆರ್ ಫರ್ನ್
ಶ್ರೀ ಲ.ನಾ ತಾಸ್ಕರ.

ಎಂ. ಎ. ಚೆಟ್ಟಿಯವರ ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್ ಮುಂಬೈನ ಸಹಪಾಠಿಗಳೊಂದಿಗೆ ೧೯೩೦ (ಗುರುತಿಸಿದವರು -ಚೆಟ್ಟಿಯವರು)



ಕಲಾ ವಾತಾವರಣ :

ಸರ್. ಜೆ. ಜೆ. ಕಲಾ ಶಾಲೆಯಲ್ಲಿ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಯ ಹಿನ್ನೆಲೆಯಾಗಿ ಅನೇಕ ಚಟುವಟಿಕೆಗಳು ನಡೆಯುತ್ತಿದ್ದವು. ಶೈಕ್ಷಣಿಕ ಪ್ರವಾಸ ಶಾಲೆಯಲ್ಲಿ ಚಿತ್ರಗಳ ಪ್ರದರ್ಶನ. ಮುಂಬಯಿ ಆರ್ಟ್ ಸೊಸೈಟಿ. ಇನ್ನಿತರ ಸೊಸೈಟಿಗಳು ನಡೆಸುವ ಕಲಾಪ್ರದರ್ಶನದಲ್ಲಿ ಭಾಗವಹಿಸುವುದು. ಹೀಗೆ ಹಲವಾರು ಸ್ಫೂರ್ತಿ ನೀಡುವ ಕಲಾವಾತಾವರಣವನ್ನು ಅಲ್ಲಿ ಕಾಣುತ್ತೇವೆ. ಶಾಲೆಯ ವಾರ್ಷಿಕ ಪರೀಕ್ಷೆಗಳಲ್ಲಿ ಚೆನ್ನಾಗಿ ರಚಿಸಿದ ಚಿತ್ರಗಳಿಗೂ ಬಹುಮಾನಗಳನ್ನು ನೀಡಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿದ್ದರು. ಅಲ್ಲದೇ ನಮ್ಮ ದೇಶದಲ್ಲಷ್ಟೇ ಅಲ್ಲದೇ ಹೊರ ದೇಶಗಳಲ್ಲಿಯೂ ಕಲಾಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದರು.

ಶೈಕ್ಷಣಿಕ ಪ್ರವಾಸವೆಂದು ಅನೇಕ ಐತಿಹಾಸಿಕ ಸ್ಥಳಗಳಿಗೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗುತ್ತಿದ್ದರು. ಅದರಲ್ಲೂ ಅಜಂತಾ ಎಲ್ಲೋರಾ ಚಿತ್ರಗಳ ಅಭ್ಯಾಸ ಪ್ರವಾಸವಂತೂ ಎಲ್ಲ ವಿದ್ಯಾರ್ಥಿಗಳಿಗೂ ಮಾಡಿಸಿದ್ದಾರೆ. ಯಾಕೆಂದರೆ ಭಾರತದ ಅತ್ಯಂತ ಪುರಾತನ ಚಿತ್ರಗಳು ಇವಾಗಿವೆ. ಇವುಗಳನ್ನು ವಿದ್ಯಾರ್ಥಿಗಳು ನಕಲು ಮಾಡಿಕೊಂಡು ಬರುತ್ತಿದ್ದರು. ಜೆ. ಜೆ. ಕಲಾ ಶಾಲೆಯಲ್ಲಿ ಕಲಿತ ಅನೇಕ ವಿದ್ಯಾರ್ಥಿಗಳ ಮೇಲೆ ಈ ಅಜಂತಾ ಶೈಲಿಯ ಪ್ರಭಾವವನ್ನು ಕಾಣುತ್ತೇವೆ. " ಮಿ. ಪೆಸ್ಟನ್ ಬೊಮ್ಮನ್ಜ಼ ಮತ್ತು ಮಿಯಾ ಅಬಲಾಲ ರೆಹಮಾನ್ ಮುಂತಾದ ವಿದ್ಯಾರ್ಥಿಗಳು ನಂತರದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದು ಜಲವರ್ಣ ಹಾಗೂ ತೈಲವರ್ಣಗಳಲ್ಲಿ ಉತ್ಕೃಷ್ಟ ಸಾಧನೆಯನ್ನು ಸಾಧಿಸಿದರು. ಶಿಕ್ಷಕರು ಸಹಿತ ಅಷ್ಟೇ ಒಳ್ಳೆಯ ರೀತಿಯಿಂದ ವಿದ್ಯಾರ್ಥಿಗಳಿಗೆ ಅಭ್ಯಾಸ ಹೇಳಿಕೊಡುತ್ತಿದ್ದರು. ಇದರಿಂದಾಗಿ ಅಜಂತಾದ ಭಿತ್ತಿಚಿತ್ರಗಳನ್ನು ಯುರೋಪಿಯನ್ನರಿಗಿಂತ ಈ ವಿದ್ಯಾರ್ಥಿಗಳೇ ಅತ್ಯಂತ ಸುಂದರವಾಗಿ ನಕಲು ಮಾಡುತ್ತಿದ್ದರು. ಇದರಿಂದ ಅಲ್ಲಿಯ ವಿದ್ಯಾರ್ಥಿಗಳಿಗೆ ಕಲಾ ಶಿಕ್ಷಣಕ್ಕಾಗಿ ಯಾವ ರೀತಿಯಲ್ಲಿ ಪ್ರಾರಂಭಿಕ ಶಿಕ್ಷಕರು ಅಡಿಪಾಯ ಹಾಕಿದ್ದರೆಂದು ತಿಳಿಯುತ್ತದೆ.[೬೨] ಚೆಟ್ಟಿಯವರ ಚಿತ್ರಗಳಲ್ಲೂ ಸಹಿತ ಆಕೃತಿಗಳ ಉದ್ದನೆಯ ಮೂಗು ಕೈಬೆರಳುಗಳು ಅಜಂತಾ ಶೈಲಿಯ ಮಾದರಿಯನ್ನೇ ಹೋಲುತ್ತವೆ. "೧೯೨೬ ರಲ್ಲಿ ಶ್ರೀ ಹಾಲಭಾವಿ. ಮಿಣಜಗಿ. ಬಡಿಗೇರ. ಕಮಡೊಳ್ಳಿ. ಚೆಟ್ಟಿ. ಕಾರಡಗಿ. ದಂಡಾವತಿಮಠ ಇವರೆಲ್ಲರೂ ನಮ್ಮ ಸಪ್ತರಂಗದ ಗುಂಪು. ನಾವೆಲ್ಲರೂ ಆತ್ಮೀಯತೆಯಿಂದ ಇದ್ದೆವು. ಎಲ್ಲೆಡೆಯಲ್ಲೂ ಸ್ಕೆಚ್ ಮಾಡಲು ಹೋಗುತ್ತಿದ್ದೆವಲ್ಲದೆ ಅಜಂತಾ. ಎಲ್ಲೋರಾ. ಹಂಪೆ ಮುಂತಾದೆಡೆಗಳಲ್ಲಿ ಹೋಗಿ ಸ್ಕೆಚ್ ಮಾಡಿ ಬರುತ್ತಿದ್ದೆವು"[೬೩] ಎಂಬುದಾಗಿ ದಂಡಾವತಿಮಠ ಅವರು ಹೇಳುತ್ತಾರೆ.

ಶ್ರೀ ಧುರಂಧರ ಅವರು ಅಜಂತೆಗೆ ಹೋದಾಗಿನ ಒಂದು ಪ್ರಸಂಗ ಬಹಳ ಸೊಗಸಾಗಿ ಹೇಳಿದ್ದಾರೆ. ಅಂದರೆ ಆಗಿನ ಯುರೋಪಿಯನ್ ಡೈರೆಕ್ಟರ್‌ಗಳು ಎಷ್ಟೊಂದು ಕಟ್ಟುನಿಟ್ಟಾಗಿದ್ದರೆಂದರೆ "೧೮೭೫ ರಲ್ಲಿ ಗ್ರಿಫಿತ್ಸ್‌ರವರ ಆದೇಶದಂತೆ ಇಂಪೀರಿಯಲ್ ಸೈಜ್‌ನಲ್ಲಿ ಅಜಂತೆಯ ಗುಹೆ ಚಿತ್ರ ತೆಗೆದನು. ಆ ಚಿತ್ರಗಳು ಹೇಗೆ ತೆಗೆದೆವೆಂದರೆ.

---

೬೨. Sir J. J. School of Art, Bombay a hundred years of its career, ಪುಟ ೭೪

೬೩. ಡಾ. ಎಸ್.ಸಿ. ಪಾಟೀಲ (ಸಂ.). ಚಿತ್ರಾಕ್ಷಿ. ಪುಟ ೯

ಗುಹೆಯ ಗುಡ್ಡದ ಮೇಲೆ ಹತ್ತಿಹೋಗಿ, ಗುಹೆಯ ನಿಸರ್ಗಚಿತ್ರ ಮಾಡಲಾಯಿತು. ಅದು ಬಹಳ ಕಷ್ಟದ ಕೆಲಸವೂ ಆಗಿತ್ತು. ಜನೇವರಿಯಲ್ಲಿ ತುಂಬಾ ಛಳಿ ಆದರೂ ಬೂಟನ್ನು ಹೆಗಲ ಮೇಲೆ ಹಾಕಿಕೊಂಡು ಹತ್ತುವಾಗ ಮೈ ಎಲ್ಲ ಬೆವರು. ಅಲ್ಲದೇ ಅಲ್ಲಿ ಕಾಡುಪ್ರಾಣಿಗಳ ಹೆದರಿಕೆ ಬೇರೆ. ಒಂದು ದಿನ ೧೨ ಗಂಟೆಗೆ ಜೋರಾದ ಸಪ್ಪಳ ಕೇಳಿಸಿತು. ಎಲ್ಲರೂ ಹೆದರಿ ನಡುಗಲಾರಂಭಿಸಿದರು. ಆದರೂ ಚಿತ್ರ ತೆಗೆಯುವ ಕಾರ್ಯ ನಿಲ್ಲಿಸುವ ಹಾಗಿಲ್ಲ. ಗ್ರಿಫಿತ್ಸ್ ಅವರು ಎಲ್ಲ ವಿದ್ಯಾರ್ಥಿಗಳಿಗೆ ಕೆಲಸ ಕೊಟ್ಟು ಮುಂಬಯಿಗೆ ಅಂದೇ ಹೋಗಿದ್ದರು. ಸಂಪೂರ್ಣ ಚಿತ್ರಿಸದೆ ಯಾರು ತಿರುಗಿ ಹೋಗುವ ಹಾಗಿಲ್ಲ. ಅಂಥದ್ದರಲ್ಲಿ ನನ್ನ ಚಿತ್ರ ಒಂದು ಹುಲಿಗೆ ಹೆದರಿ ಅರ್ಧ ಆಗಿತ್ತು. ತಿರುಗಿ ಹೋದ ನಂತರ ಎಲ್ಲ ಚಿತ್ರಗಳನ್ನು ಪರೀಕ್ಷಿಸಿದ ಪ್ರಿನ್ಸಿಪಾಲರು. ಕೊನೆಯ ಚಿತ್ರ ಅರ್ಧ ಆಗಿರುವುದನ್ನು ಕುರಿತು ಪ್ರಶ್ನಿಸಿದಾಗ ನಡೆದ ವಿಷಯ ತಿಳಿಸಿದೆ. ಆಗ ಅವರು ಹುಲಿ ತಿಂದರೆ ಏನಾಗುತ್ತಿತ್ತು ಎಂದು ನಕ್ಕರು." [೬೪] ನಂತರ ತಾವೇ ಪೂರ್ತಿಗೊಳಿಸಿದರು. ಹೀಗೆ ಶ್ರೀ ಚೆಟ್ಟಿಯವರು ಉದಯಪುರ, ಚಿತ್ತೋಡ ಮುಂತಾದ ಸ್ಥಳಗಳಿಗೆ ಶೈಕ್ಷಣಿಕ ಪ್ರವಾಸ ಹೋಗಿ ಬಂದಿದ್ದಾರೆ. ಆಗಿನ ಶಿಕ್ಷಕರು ಎಲ್ಲಿಯೇ ಕಲಾಪ್ರದರ್ಶನ ನಡೆಯಲಿ ಅಥವಾ ಯಾವುದಾದರೂ ಭಿತ್ತಿಚಿತ್ರ ರಚಿಸಲು ಆದೇಶ ಬಂದರೆ ವಿದ್ಯಾರ್ಥಿಗಳನ್ನು ಸಹಿತ ತಮ್ಮ ಜೊತೆಗೆ ಸೇರಿಸಿಕೊಂಡು ಚಿತ್ರರಚನೆ ಮಾಡುತ್ತಿದ್ದರು. ಇದರಿಂದ ವಿದ್ಯಾರ್ಥಿಗಳಿಗೆ ಹೊಸ ಹೊಸ ರೀತಿಯಲ್ಲಿ ಚಿತ್ರ ರಚಿಸಲು ಸ್ಫೂರ್ತಿ ಸಿಗುತ್ತಿತ್ತು.

"೧೯೦೩ ರಲ್ಲಿ ದಿಲ್ಲಿ ದರಬಾರದಲ್ಲಿ ಅಖಿಲಭಾರತೀಯ ಔದ್ಯೋಗಿಕ ಪ್ರದರ್ಶನ ಮಾಡಿದ್ದರು. ಅದರಲ್ಲಿ ನಮ್ಮ ಶಾಲೆಯು ಭಾಗವಹಿಸಿತ್ತು. ಆ ಪ್ರದರ್ಶನದಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಮಾಡಿದ ಮೂರ್ತಿಗಳು. ಕಟ್ಟಿಗೆಯಲ್ಲಿಯ ಕೆತ್ತನೆಗಳು ಬೆಳ್ಳಿ ಹಾಗೂ ಹಿತ್ತಾಳೆಯಿಂದ ಕೂಡಿದ ಸಾಮಾನುಗಳು. ಅಲಂಕಾರಿಕ ಪರದೆ ಮತ್ತು ವರ್ಣಚಿತ್ರಗಳು ಎಲ್ಲಾ ಭಾರತೀಯ ಶೈಲಿಗಳನ್ನು ಒಳಗೊಂಡಂಥವು. ಕೆ. ಆರ್. ಕೀರ್ತಿಕರ್. ಆರ್. ಡಬ್ಲ್ಯೂ. ದೇವುಸ್ಕರ್. ನೇರಲೇಕರ್ ಮುಂತಾದ ವಿದ್ಯಾರ್ಥಿಗಳು ಈ ಕೆಲಸ ಮಾಡಿದ್ದರು. ಇವರು ಮಾಡಿದ ಎಲ್ಲಾ ವಸ್ತುಗಳು ಮಾರಾಟವಾದವು." [೬೫] ಅದೇ ರೀತಿ ಗ್ಲಾಡ್‌ಸನ್ ಸಲೋಮನ್ನರಿಗೆ ಕನ್ನಡ ಕಲಾವಿದರ ಗುಂಪಿನ ಮೇಲೆ ಬಹಳ ಪ್ರೀತಿ ಇತ್ತು. "ಕರ್ನಾಟಕದವರೇ ಶ್ರೇಷ್ಠ ದರ್ಜೆಯ ಕಲಾವಿದರೆನ್ನುತ್ತಿದ್ದರು. ಅಷ್ಟೇ ಅಲ್ಲದೆ. ದಿಲ್ಲಿಯ ರಾಷ್ಟ್ರಪತಿ ಭವನ (ಮೊದಲಿಗೆ ಇದಕ್ಕೆ ವೈಸ್‌ರಾಯ್ ಹೌಸ್ ಭವನ ಎಂದು ಕರೆಯುತ್ತಿದ್ದರು) ಗುಮ್ಮಟಗಳ ಮೇಲೆ ಚಿತ್ರಗಳನ್ನು ರಚಿಸಲು ಕನ್ನಡ ಕಲಾವಿದರನ್ನೇ ಆಯ್ಕೆ ಮಾಡಿ ಕರೆದೊಯ್ದರು." [೬೬] ಇದೇ ಭಿತ್ತಿಚಿತ್ರವನ್ನು ಯಾರ್‍ಯಾರು ಯಾವ ರೀತಿಯಲ್ಲಿ ಚಿತ್ರಿಸಿದರೆಂಬುದನ್ನು ಶ್ರೀ ಧುರಂಧರ ಅವರು ಈ ರೀತಿ ಬರೆದಿದ್ದಾರೆ. '೧೦ ಫೂಟಿನ ಒಂದು ಡೋಮ್ ಇತ್ತು. ಅದರ ಮೇಲೆ ಆರು ಚಿತ್ರ ರಚಿಸಿದರು. ಮೊದಲನೆಯದು ಅಜಂತಾ ಶೈಲಿ. ಎರಡನೆಯದು ಗುಪ್ತರ. ಮೂರನೆಯದು ಗಾಂಧಾರ. ನಾಲ್ಕನೆಯದು ಶಹಾಜಹಾನನ ಕಾಲ. ಐದನೆಯದು ರಜಪೂತ. ಮತ್ತು ಆರನೆಯದು

---

೬೪. ರಾವಬಹದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಏಕಚಾಲಿಸ ವರ್ಷ " : ಮರಾಠಿ ಪುಸ್ತಕ. ಪುಟ ೧೬

೬೫. ರಾವಬಹದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಏಕಚಾಲಿಸ ವರ್ಷ " : ಮರಾಠಿ ಪುಸ್ತಕ. ಪುಟ ೩೧

೬೬. ಡಾ. ಎಸ್.ಸಿ. ಪಾಟೀಲ (ಸಂ.). ಚಿತ್ರಾಕ್ಷಿ. ಪುಟ ೧೦

ಮಾಡರ್ನ ಇಂಡಿಯಾ. ಶೈಲಿಯನ್ನು ಪ್ರತಿಬಿಂಬಿಸುವಂತೆ ಅನುಕ್ರಮವಾಗಿ ಈ ಚಿತ್ರಗಳನ್ನು ರಚಿಸಿದರು. ಇವುಗಳನ್ನು ಶೆಣಾಯ್, ರಾಣೆ. ವೈದ್ಯ. ನಗರಕರ. ಬಡಿಗೇರ ಮತ್ತು ಭೋಸ್ಲೆ ಎಂಬ ಕಲಾವಿದರು ಚಿತ್ರಿಸಿದರು. ಅದೇ ರೀತಿ ಕಮಾನಿನ ಮೇಲೆ ಎಂಟು ಚಿತ್ರಗಳು ವಾಸ್ತುವಿನ್ಯಾಸ. ಸಂಗೀತ. ನೃತ್ಯ. ನಾಟಕ. ಕಾವ್ಯ ಮತ್ತು ಶಿಲ್ಪಕ್ಕೆ ಸಂಬಂಧಿಸಿದ್ದು ಇವನ್ನು ಕ್ರಮವಾಗಿ ಅಹಿವಾಸಿ. ಮಿಣಜಗಿ. ಧೂಪೇಶವರಕರ. ಶನಾಯ. ಕೊಲೆಕೊ, ಕಾಂಬಳಿ ಇವರು ಚಿತ್ರಿಸಿದರು. ಇವರ ಹೊರತಾಗಿ ನನ್ನಿಂದ ಪೂರ್ತಿ ಅಳತೆಯ ನಗ್ನ ಚಿತ್ರವನ್ನು ಪೆನ್ಸಿಲ್‌ನಿಂದ ಮಾಡಿಸಿ ಅದಕ್ಕೆ ಬಣ್ಣ ತುಂಬಿಸಿ ವಿದ್ಯಾರ್ಥಿಗಳ ವೀಕ್ಷಣೆಗೆ ಇಟ್ಟಿದ್ದರು. " [೬೭] ಹೀಗೆ ಶಿಕ್ಷಕರು ವಿದ್ಯಾರ್ಥಿಗಳು ಕೂಡಿಯೇ ಕೆಲಸ ಮಾಡುತ್ತಿದ್ದುದರಿಂದ ವಿದ್ಯಾರ್ಥಿಗಳಿಗೂ ಒಂದು ರೀತಿಯ ಸ್ಫೂರ್ತಿ ಸಿಗುತ್ತಿತ್ತು.

೧೯ ನೇ ಶತಮಾನದ ಕೊನೆಗೆ ಜರ್ಮನಿಯಿಂದ ಚಿತ್ರಕಲಾ ವಿದ್ಯಾಭ್ಯಾಸ ಮುಗಿಸಿ ಬಂದ ರಾಜಾ ರವಿವರ್ಮನು ಚಿತ್ರಿಸಿದ ಚಿತ್ರಗಳು ಮುಂಬಯಿಯ ಜೆ. ಜೆ. ಶಾಲೆಯ ವಿದ್ಯಾರ್ಥಿಗಳ ಮೇಲೆ ಅಷ್ಟೇ ಅಲ್ಲದೆ ಇಡೀ ಭಾರತದ ತುಂಬಾ ಕಲಾವಿದನಾಗಬೇಕೆಂಬ ಹಂಬಲವನ್ನು ಹೊಂದಿದಂಥ ಪ್ರತಿಯೊಬ್ಬರ ಮೇಲೆ ಪ್ರಭಾವ ಬೀರಿವೆ. ಈ ಪ್ರಭಾವದಿಂದ ಚಿಟ್ಟಿಯವರೇನು ಹೊರತಾಗಿಲ್ಲ. " ಜರ್ಮನಿಯಿಂದ ಲಿಥೋಗ್ರಾಫ್‌ನಲ್ಲಿ ಅಚ್ಚಾಗಿ ಬಂದ ಅನೇಕ ವರ್ಣಛಾಯೆಯನ್ನು ಹೊಂದಿದ ಬೇಕಾದ ಅಳತೆಯಲ್ಲಿ ಸಿಗುವ ಚಿತ್ರಗಳು ಪೇಟೆಗೆ ಮಾರಲು ಬಂದಾಗ ಜನರು ಇದರಿಂದ ಆಕರ್ಷಿತರಾದರು. ವಿದ್ಯಾರ್ಥಿಗಳೂ ಕೂಡಾ. ಆ ನೈಜ ಚಿತ್ರಣ ಅವುಗಳ ಸಂಯೋಜನೆ. ವರ್ಣ ಇವರ ಮೇಲೆ ಬಹಳ ಪ್ರಭಾವ ಬೀರಿತು. ರೊಮ್ಯಾಂಟಿಕ್ ಶೈಲಿಯನ್ನು ಹೊಂದಿದ ಈ ಚಿತ್ರಗಳಿಗೆ ವಾಣಿಜ್ಯೋದ್ಯಮಿ ನಗರಿಯಾದ ಮುಂಬಯಿ ಬಹಳಷ್ಟು ಮನ ಸೋತಿತು. " [೬೮] ಅದರತ್ತ ವಾಲಿತ್ತು.

ಆಗಿನ ದಿನಮಾನಗಳಲ್ಲಿ ಹೊರದೇಶದ ಕಲಾಕೃತಿಗಳ ಬಗ್ಗೆಯಾಗಲಿ ನಮ್ಮ ದೇಶದ ಇತರ ಪ್ರದೇಶಗಳ ಕಲಾಕೃತಿಗಳನ್ನಾಗಲಿ ಯಾವುದೇ ಕಲಾಕೃತಿಗಳ ಛಾಯಾಚಿತ್ರ ಹೊಂದಿದ ಪುಸ್ತಕಗಳಿರಲಿಲ್ಲ. ಹೀಗಾಗಿ ವಿದ್ಯಾರ್ಥಿಗಳಿಗೆ ಆ ಕ್ಷೇತ್ರ ಸೀಮಿತವಾಗಿತ್ತು. " ಬಹಳ ಎಂದರೆ ಮ್ಯಾಕ್‌ಮಿಲನ್ ಮತ್ತು ಲೊಂಗಮನ್-ಗ್ರೀನ್‌ರ ಪುಸ್ತಕಗಳಲ್ಲಿ ಮಾತ್ರ ಕೆಲವು ನೋಡಲು ಸಿಗುತ್ತಿದ್ದವು. ಇನ್ನು ಆಗ ಕಲಾ ಪ್ರದರ್ಶನಗಳು ಮುಂಬಯಿ ಆರ್ಟ್ ಸೊಸೈಟಿ ಹಾಗೂ ಇನ್ನಿತರ ಸೊಸೈಟಿಗಳ ಮೂಲಕ ನಡೆಯುತ್ತಿದ್ದವು. ಈ ಪ್ರದರ್ಶನಗಳಲ್ಲಿ ಹೆಚ್ಚಾಗಿ ನಿಸರ್ಗ ಚಿತ್ರ (Landscape) ಗಳು ಇರುತ್ತಿದ್ದವು. ಜಲ ಹಾಗೂ ತೈಲವರ್ಣಗಳಿಂದ ಮಾಡಿರುತ್ತಿದ್ದರು. ಇದರಿಂದ ಅಲ್ಲಿಯೇ ಇರುವ ಕಲಾವಿದರಿಗೆ ತಮ್ಮನ್ನು ಗುರುತಿಸಿಕೊಳ್ಳಲು ಇದೊಂದು ಒಳ್ಳೆಯ ಅವಕಾಶ ಸಿಕ್ಕಿತು. ಜನರಿಂದ ಮೆಚ್ಚುಗೆ ಬಹುಮಾನಗಳನ್ನೂ ಹಣವನ್ನೂ ಪಡೆಯತೊಡಗಿದರು. ಅದರಲ್ಲಿಯೂ ಅದೇ ತಾನೆ ಬೆಳೆಯುತ್ತಿರುವ ಕಲಾವಿದ್ಯಾರ್ಥಿಗಳಿಗೂ ಈ ಪ್ರದರ್ಶನಗಳು ಬಹಳ ಲಾಭ ತಂದುಕೊಟ್ಟವು. ಈ ಪ್ರದರ್ಶನಗಳು ಕಲಾ ಶಾಲೆಯ ಮಕ್ಕಳ ಮೇಲೂ ಬಹಳ ಪ್ರಭಾವ ಬೀರಿದವು. " [೬೯] ಎಂದು ಹೇಳಬಹುದು

---

೬೭. ರಾವಬಹಾದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಏಕಚಾಳಿಸ ವರ್ಷ " : ಮರಾಠಿ ಪುಸ್ತಕ. ಪುಟ ೧೦೩

೬೮. Sir J. J. School of Art, Bombay a hundred years of its career, ಪುಟ ೮೩

೬೯. Sir J. J. School of Art, Bombay a hundred years of its career, ಪುಟ ೮೩

" ೧೮೮೮ ರಲ್ಲಿ ಪ್ರಾರಂಭವಾದ ಮುಂಬಯಿ ಆರ್ಟ್ ಸೊಸೈಟಿಯು ಅಸಂಖ್ಯಾತ ಕಲಾವಿದರನ್ನು ಅವರ ಪ್ರದರ್ಶನದ ಮೂಲಕ ಮೊಟ್ಟಮೊದಲಿಗೆ ಬೆಳಕಿಗೆ ತಂದಿರುವ ಸಂಸ್ಥೆ. ರಾವ್ ಬಹದ್ದೂರ ಧುರಂಧರ ಅವರು ೧೮೯೫ ರಲ್ಲಿ ತಮ್ಮ ಕಲಾಕೃತಿಗೆ ಮೊದಲ ಚಿನ್ನದ ಪದಕ ಪಡೆದರು. ನಂತರ ೧೮೯೬ರಲ್ಲಿ ರಾವ್‌ಬಹದ್ದೂರ ಮಹಾತ್ರೆಯವರಿಗೆ ದೊರೆಯಿತು. "[೨೦] ಇದರಿಂದ ಹಳೆಯ ಪದ್ಧತಿಯ ಹಾದಿಯಲ್ಲೇ ಕಲಾಭ್ಯಾಸ ಮಾಡಿದ ಜೆ. ಜೆ. ಕಲಾ ಶಾಲೆಯ ವಿದ್ಯಾರ್ಥಿಗಳ ಸಾಧನೆಯನ್ನು ಈ ಪ್ರಶಸ್ತಿಗಳೆ ಅಲ್ಲಿಯ ಕಲಾಶಿಕ್ಷಣದ ಬಗ್ಗೆ ಸಾರಿ ಹೇಳುತ್ತವೆ. ಹೀಗಾಗಿ ಎಲ್ಲ ವಿದ್ಯಾರ್ಥಿಗಳಿಗೂ ಅಲ್ಲಿ ನಡೆಯುವ ಕಲಾಪ್ರದರ್ಶನದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿದಂತಾಯಿತು. ಇಂತಹ ಅವಕಾಶ ಚೆಟ್ಟಿಯವರಿಗೂ ಒದಗಿ ಬಂದಿತು. ವರ್ಗಗಳಿಲ್ಲದ ವೇಳೆಯಲ್ಲಿ ಬೇರೆ ಬೇರೆ ಚಿತ್ರಗಳನ್ನು ಚೆಟ್ಟಿಯವರು ರಚಿಸುತ್ತಿದ್ದರು. ಹೀಗೆ ಒಂದು ಸಾರಿ " ಸ್ಕೂಲ್ ಆಫ್ ಆರ್ಟ್‌ದ ತೋಟದಲ್ಲಿದ್ದ ಗಿಡದ ಬೊಡ್ಡೆಯ ಪೇಂಟಿಂಗ್ ಮಾಡಿದೆನು. ಶನಿವಾರ ಹಾಗೂ ರವಿವಾರ ಮತ್ತು ವೇಳೆ ಸಿಕ್ಕಾಗಲೆಲ್ಲ ಮೂರು ನಾಲ್ಕು ಘಂಟೆ ಕುಳಿತು ಪೇಂಟಿಂಗ್ ಮಾಡುತ್ತಿದ್ದೆ. ಆ ಚಿತ್ರವನ್ನು ಬಾಂಬೆ ಆರ್ಟ್ ಸೊಸೈಟಿ ಪ್ರದರ್ಶನಕ್ಕೆ ಕಳಿಸಿದೆ. ಆ ಕಾಲದಲ್ಲಿ ಕಲಾ ಪ್ರದರ್ಶನ ನೋಡಲು ದೊಡ್ಡ ದೊಡ್ಡ ಶ್ರೀಮಂತರು. ಸಂಸ್ಥಾನಿಕರು. ನವಾಬರು ಬರುತ್ತಿದ್ದರು. ಪ್ರದರ್ಶನ ಪ್ರಥಮ ದಿನವೇ ಎಲ್ಲರ ಮನ ಸೆಳೆದಿತ್ತು. ನಾನು ತೆಗೆದ ಗಿಡದ ಬೊಡ್ಡೆಯ ಚಿತ್ರವನ್ನು ನಮ್ಮ ಪ್ರಿನ್ಸಿಪಾಲರು ಗ್ಲಾಡ್‌ಸನ್ ಸಲೋಮನ್ ಯಾರಾದರೂ ಸಂಸ್ಥಾನಿಕರು ನೋಡಿದರೆ ಬಿಡುವುದಿಲ್ಲವೆಂದು ತಿಳಿದು ಪ್ರದರ್ಶನ ಪ್ರಾರಂಭವಾಗುವುದಕ್ಕಿಂತ ಮೊದಲೇ (Sold) ಮಾರಾಟವಾಗಿದೆ ಎಂದು ಕೆಂಪು ಲೆಬಲ್ ಹಚ್ಚಿಬಿಟ್ಟಿದ್ದರು. ಅದನ್ನು ಸಂಸ್ಥೆಯ ಮ್ಯೂಸಿಯಂಗಾಗಿ ಕೂಡಲೇ ಖರೀದಿಸಿದರು."[೨೧] ಅಂತಹದೆ ಇನ್ನೊಂದು ಚಿತ್ರವನ್ನು ಅವರಿಗೆ ರಚಿಸಲು ತಿಳಿಸಿ ಅದನ್ನು ಲಂಡನ್ನಿಗೆ ಕಳಿಸಿಕೊಟ್ಟರು. ಅಲ್ಲಿಯೂ ಅದು ಎಲ್ಲರ ಮೆಚ್ಚುಗೆಯನ್ನು ಗಳಿಸಿತು.

ಹೀಗೆ ಮೊದಲಿನಿಂದಲೂ ಕಲಾ ಚಟುವಟಿಕೆಗಳು ನಡೆಯುತ್ತಾ ಬಂದಿದ್ದವು. ಆದರೆ ಗ್ಲ್ಯಾಡ್‌ಸನ್ ಸಲೋಮನ್ನರು ಅಧಿಕಾರಕ್ಕೆ ಬಂದ ನಂತರ ಕಲಾವಾತಾವರಣದಲ್ಲಿ ಇನ್ನಷ್ಟು ಉತ್ತೇಜನಕಾರಿ ಗಾಳಿ ಬೀಸಿತು. ಇವರು ಬರೀ ಚಿತ್ರಕಲಾವಿದರಾಗಿರದೇ ಸಾಹಿತಿಗಳೂ (ಬರಹ) ಆಗಿದ್ದರು ಹಾಗೂ ಇಲ್ಲಿಯ ಅಧ್ಯಾಪಕರ. ವಿದ್ಯಾರ್ಥಿಗಳ ಕಲೆಯ ಸಾಧನೆಯನ್ನು ಮೆಚ್ಚಿಕೊಂಡು ಇನ್ನಷ್ಟು ಸುಧಾರಿಸಲು ಪ್ರಯತ್ನ ಮಾಡಿದರು. ಅಲ್ಲದೇ ಅಧ್ಯಾಪಕವರ್ಗ. ವಿದ್ಯಾರ್ಥಿಗಳಿಗೆ ಸಾಕಷ್ಟು ಸೌಲಭ್ಯ ಒದಗಿಸಿಕೊಟ್ಟು. ಹೊಸ ಹೊಸ ಕೃತಿಗಳಿಂದ ಕಲಾ ಪ್ರದರ್ಶನ ಮಾಡಲು ಉತ್ತೇಜನ ನೀಡಿದರು. " ಜೆ. ಜೆ. ಕಲಾ ಶಾಲೆಯ ಮಧ್ಯದ ಕೋಣೆ (Hall) ಯಲ್ಲಿ ದೊಡ್ಡದಾದ ಭಿತ್ತಿಚಿತ್ರ ಮಾಡಿಸಿದರು. ೩, ೩೧೨ ಚೌರಸ್ ಅಡಿಗಳ ಅಳತೆಯ ' The recrowning of Indian Art ' ಎಂಬ ವಿಷಯದಿಂದ ಕೂಡಿದೆ. ಅಲ್ಲದೆ ಅನೇಕ ಭಾಗಗಳು ಹೊಸ ಶೈಲಿಯ ಅಲಂಕಾರಿಕ ಚಿತ್ರಗಳಿಂದ ತುಂಬಿತು. ಇಲ್ಲಿಯೂ ಚಪ್ಪಟೆಯ ಬಣ್ಣ ಹಾಗೂ ರೇಖೆಗಳಿಂದ ಕೂಡಿದ ಹೊರಮೈ ಭಾರತೀಯ ಶೈಲಿಯಂತೆಯೇ ಇತ್ತು. ಸೊಲೋಮನ್‌ರು ಅಜಂತಾ. ಎಲ್ಲೋರಾ

---

೨೦. Sir J. J. School of Art, Bombay a hundred years of its career, ಪುಟ ೪೭

೨೧. ಎಂ. ವಿ. ಚೆಟ್ಟಿ : ನೆನಪಿನ ಕಿಟಕಿಯಿಂದ " ಕಲಾ ತಪಸ್ವಿ " ಅಭಿನಂದನ ಗ್ರಂಥ. ಪುಟ ೧೨೭

ಹಾಗೂ ಎಲಿಫೆಂಟಾ ಗುಹೆಗಳಿಗೆ ಭೇಟಿ ನೀಡಿ ಭಾರತೀಯ ಚಿತ್ರಕಲೆಯ ಪರಂಪರೆ ಭವ್ಯತೆಯ ಬಗ್ಗೆ ಕಿರುಹೊತ್ತಿಗೆ ಬರೆದಿದ್ದಾರೆ. ಅಲ್ಲದೆ ವಿದ್ಯಾರ್ಥಿಗಳಿಗೂ ಭಾರತೀಯ ಶೈಲಿಯನ್ನು ಅಳವಡಿಸಿಕೊಳ್ಳಲು ಉತ್ತೇಜನ ನೀಡುತ್ತಿದ್ದರು. "[೨೨] ಎಂದು ತಿಳಿದು ಬರುತ್ತದೆ.

ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಂದ ಅನೇಕ ಕಡೆಗಳಲ್ಲಿ ಚಿತ್ರಕಲಾ ಪ್ರದರ್ಶನ ನಡೆದವು. ಮುಂಬಯಿ. ಪೂನಾ. ದೆಹಲಿ ಮತ್ತು ಸಿಮ್ಲಾ ಇತರ ಅನೇಕ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಜರುಗಿದವು. ಅಲ್ಲದೇ ಅನೇಕ ಬಹುಮಾನಗಳನ್ನು ಪಡೆದವು. " ಸಲೋಮನ್‌ರು ಬ್ರಿಟೀಷ ಕೊಲೋನಿಯಲ್ಸ್‌ನಿಂದ ಕೆಲವು ಕಲಾಕೃತಿಗಳನ್ನು ಭಾರತಕ್ಕೆ ತರಿಸಿ ' ಪ್ರಿನ್ಸ್ ಆಫ್ ವೇಲ್ಸ್ ' ಮ್ಯೂಸಿಯಮ್‌ನಲ್ಲಿ ಪ್ರದರ್ಶನ ಮಾಡಿದರು. ಇವರಲ್ಲಿ ೫೦ ಕ್ಕೂ ಹೆಚ್ಚು ಕಲಾವಿದರ ಕೃತಿಗಳು ಪ್ರದರ್ಶಿಸಲ್ಪಟ್ಟಿದ್ದವು. ಹೀಗೆ ಭಾರತೀಯ ಕಲಾವಿದರ ಅದು ಜೆ. ಜೆ. ಕಲಾ ಶಾಲೆಯಲ್ಲಿ ಅಭ್ಯಾಸಿಸಿದ ಕಲಾಕಾರರ ಕೃತಿಗಳನ್ನು ಲಂಡನ್ನಿನಲ್ಲಿ ಪ್ರದರ್ಶಿಸಿದರು. ಈ ರೀತಿಯ ಕಲಾಪ್ರದರ್ಶನಗಳ ವಿನಿಮಯದಿಂದ ಇಲ್ಲಿನ ಕಲಾವಿದರು ಯುರೋಪ್ ದೇಶಗಳಿಗೆ ಹೋಗಲು ಅವಕಾಶ ಸಿಗುತ್ತದೆಂಬ ಆಶಾವಾದವನ್ನು ಹೊಂದಿದ್ದರು. "[೨೩] ಅದರಂತೆ ಅನೇಕರು ಹೋಗಿಯೂ ಬಂದರು. " ಭಾರತೀಯ ಚಿತ್ರಗಳು ಲಂಡನ್ನಿಗೆ ಕಳಿಸುವ ಮೊದಲು ಸಲೋಮನ್‌ರು ಚಿತ್ರ ಸಹಿತ ಒಂದು ಪುಸ್ತಕ ಹೊರತಂದರು ' The Bombay Revival of Indian Art '[೨೪]. ಭಾರತೀಯ ಚಿತ್ರಕಲೆ ಕಲಾವಿದರೆಂದರೆ ಸಲೋಮನ್‌ರಿಗೆ ತುಂಬಾ ಪ್ರೀತಿ ಮತ್ತು ಆದರ.

ಈ ಎಲ್ಲ ಚಟುವಟಿಕೆಗಳ ಜೊತೆಗೆ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನವನ್ನು ಆಚರಿಸುತ್ತ ಇದ್ದು. ಇದನ್ನು ಅತ್ಯಂತ ಅದ್ದೂರಿಯಾಗಿ ಆಚರಿಸುತ್ತ ಇದ್ದರು. ವಿದ್ಯಾರ್ಥಿಗಳ ಕಲಾಕೃತಿಗಳ ಪ್ರದರ್ಶನ. ಬಹುಮಾನ ವಿತರಣೆ. ಮನರಂಜನೆ ಎಲ್ಲವೂ ಏರ್ಪಡಿಸಲಾಗುತ್ತಿತ್ತು. ೧೯೧೭ ರಲ್ಲಿ ಆದ ಸ್ನೇಹ ಸಮ್ಮೇಲನದ ಬಗ್ಗೆ ಧುರಂಧರ ಅವರು ಈ ರೀತಿ ಹೇಳುತ್ತಾರೆ : " ಈ ವರ್ಷ ಸ್ನೇಹ ಸಮ್ಮೇಲನದ ಕೆಲಸ ನನ್ನ ಕೈಯಲ್ಲಿತ್ತು. ಮುಂಬಯಿಯ ಎಲ್ಲ ಕಲಾಕಾರರಿಗೆ. ಹಳೆಯ ವಿದ್ಯಾರ್ಥಿಗಳಿಗೆ ಎಲ್ಲರಿಗೂ ಆಮಂತ್ರಣ ಕಳಿಸಲಾಗಿತ್ತು. ಅಲ್ಲದೆ ಪೂನಾ. ನಾಸಿಕ್. ಸಾತಾರಾ. ಅಹ್ಮದಾಬಾದ ಎಲ್ಲಾ ಕಡೆಯಿಂದ ಚಿತ್ರಕಲಾ ಶಿಕ್ಷಕರು ಬಂದಿದ್ದರು"[೨೫] ಎಂದು ಆ ಸಂದರ್ಭದ ನೆನಪು ಮಾಡಿಕೊಟ್ಟಿದ್ದಾರೆ.

ಇಂದಿಗೂ ಸಹಿತ ಮುಂಬಯಿ ಆರ್ಟ್ ಸೊಸೈಟಿ ಕಲಾಕೃತಿಗಳ ಪ್ರದರ್ಶನಗಳನ್ನು ಮಾಡುತ್ತಲೇ ಇದೆ. ೧೯೮೮ ನೇ ಇಸ್ವಿಯಲ್ಲಿ ಮುಂಬಯಿ ಆರ್ಟ್ ಸೊಸೈಟಿಯೂ ಶತಾಬ್ದಿ ವರ್ಷ ಎಂದು ಆಚರಿಸಲ್ಪಟ್ಟಿತು. ಆ ವರ್ಷ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಅವರಲ್ಲಿ ಎಲ್ಲಕ್ಕಿಂತ ಮಹತ್ವದ್ದೆನ್ನಿಸಬಹುದಾದ ಪ್ರದರ್ಶನವೊಂದು

---

೨೨. Sir J. J. School of Art, Bombay a hundred years of its career : ಅನುವಾದ. ಪುಟ ೯೧ - ೯೨

೨೩. Sir J. J. School of Art, Bombay a hundred years of its career, ಪುಟ ೧೦೨

೨೪. Sir J. J. School of Art, Bombay a hundred years of its career, ಪುಟ ೯೩

೨೫. ರಾವಬಹದ್ದೂರ ಎಂ. ವ್ಹಿ ಧುರಂಧರ : " ಕಲಾಮಂದಿರಾಂತಿಲ ಏಕಚಾಲಿಸ ವರ್ಷ " : ಮರಾಠಿ ಪುಸ್ತಕ. ಪುಟ ೬೪

ಏರ್ಪಡಿಸಿತ್ತು. ಕಳೆದ ಒಂದು ನೂರು ವರ್ಷಗಳಲ್ಲಿನ ಭಾರತೀಯ ದೃಶ್ಯ ಕಲೆಯ ಇತಿಹಾಸವನ್ನೇ ಹಿಂತಿರುಗಿಸಿ ತೋರಿಸುವ ಕೆಲಸವನ್ನು ಮುಂಬಯಿ ಆರ್ಟ್ ಸೊಸೈಟಿಯು ಈ ಪ್ರದರ್ಶನದಲ್ಲಿ ಮಾಡಿತು.

ಆದರೆ ಈ ಪ್ರದರ್ಶನದಲ್ಲಿ ಅನೇಕ ಹೊರರಾಜ್ಯದ ಕಲಾಕಾರರನ್ನು ಮರೆತಿದ್ದಾರೆ. ಯಾಕೆಂದರೆ ಪ್ರದರ್ಶನಕಾರರಿಗೆ ಸರಿಯಾಗಿ ಸಿಗದೇ ಇರುವ ಮಾಹಿತಿ, ವಿಷಯದ ತಿಳಿವಳಿಕೆಯ ಕೊರತೆ ಇಲ್ಲಿ ಕಂಡುಬರುತ್ತದೆ. ಈ ಪ್ರದರ್ಶನದ ವಿಷಯ ಚೆಟ್ಟಿಯವರಿಗೆ ಅವರ ಗೆಳೆಯರಾದ ನೀಲಕಂಠ ಅವರು ಸೊಲ್ಲಾಪುರದಿಂದ ೨೪ - ೧ - ೧೯೪೯ ರಂದು ಬರೆದ ಪತ್ರ : " ಮುಂಬಯಿ ಆರ್ಟ್ ಸೊಸೈಟಿಯ ಶತಾಬ್ದಿಯನ್ನು ಮಾಡುವವರು ಇರುವರು. ತಮ್ಮ ಹೆಸರು. ಶ್ರೀ ದಂಡಾವತಿಮಠ, ಶ್ರೀ ಡಿ. ಜೆ. ಬಡಿಗೇರ; ಎಸ್. ಎಮ್. ಪಂಡಿತರ. ಹಾಲಭಾವಿ , ಎಸ್. ಪಿ. ಅಕ್ಕಿ ಅವರೆಲ್ಲರ ಹೆಸರುಗಳು ಅಥವಾ ಕರ್ನಾಟಕದಲ್ಲಿ ನೆಲೆಸಿರುವ ಇನ್ನೂ ಅನೇಕ ಚಿತ್ರಕಲಾವಿದರ ಹೆಸರುಗಳು ಲೋಕಪ್ರಭಾದಲ್ಲಿ ಮುದ್ದಾಮ ಬರೆದಿಲ್ಲ ವೆಂಬುದು ತಿಳಿದು ದುಃಖ ಮತ್ತು ವಿಷಾದವಾಯಿತು. ತಮ್ಮ ಸಂಗಡ ಕಲಿತ. ಆಚರೇಕರ. ಗುರ್ಜರ. ಹಳದಣಕರ ಇವರ ಹೆಸರುಗಳು ಇರುವವು. " ಎಂದು ಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ. " ಕಳೆದ ಒಂದನೂರು ವರ್ಷಗಳಲ್ಲಿ ಯಾವ ಯಾವ ಚಿತ್ರಕಾರರಿಗೆ ಪಾರಿತೋಷಕಗಳು ದೊರಕಿದವು ಎಂಬುದನ್ನು ಇಂದು ಹೇಳಲಿಕ್ಕೆ ಯಾರಿಗೂ ಶಕ್ಯವಿಲ್ಲ. ಇದೊಂದು ಅತೀ ಲಜ್ಜಾಸ್ಪದ ಸಂಗತಿಯಾಗಿದೆ. " [೬೬] ಎಂದು ಸತೀಶ ನಾಯಕ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ಆ ಪ್ರದರ್ಶನದಲ್ಲಿ ಬಾಗವಹಿಸುತ್ತಿರುವವರು ಎಂದು ತಮ್ಮ ಲೇಖನದಲ್ಲಿ ಸತೀಶ ನಾಯಕ ಅವರು ಕೆಲವರು ಕಲಾಕಾರರ ಹೆಸರುಗಳನ್ನು ಸೂಚಿಸಿದ್ದಾರೆ. " ಪೆಸ್ತೋಂಜಿ ಬೊಮನ್‌ಜಿ. ರಾವ್‌ಬಹಾದೂರ ಧುರಂಧರ. ಪಿಠಾವಾಲಾ. ಜೆ. ಪಿ. ಗಂಗೂಲಿ. ರಾಜಾರವಿವರ್ಮ. ಪಂ. ಸಾತವಳೇಕರ. ಜಿ. ಕೆ. ಮ್ಹಾತ್ರೆ. ಸೆಸಿಲ್ ಬರ್ನ್ಸ. ಮುಲ್ಲರ್. ಮಾಧವರಾವ್ ಜೋಶಿ. ಮಾಳಿ. ತ್ರಿಂದಾದ. ನಿಕೋಲಸ್ ರೋರಿಕ್. ಬೋಸ್ಲೇ ಮಾಸ್ತರ. ಶರದಾ ಉಕಿಲ. ಠಾಕೂರ ಸಿಂಗ್. ಹಳದಣಕರ ತಂದೆ-ಮಗ. ಅದಾಲಾಲ್ ರೆಹಮಾನ್. ಪಾನವಲಕರ. ನಗರಕರ. ಚುಡೇಕರ. ಸರದೇಸಾಯಿ. ತಾಸಕರ ಮಾಸ್ತರ. ಆಚರೇಕರ. ಗ್ಲಾಡ್‌ಸ್ಟನ್ ಸೋಲೋಮನ್. ಕರಮರಕರ. ಆಗಾಸಕರ. ತಾಲೀಮ. ಪರಾಂಡೆಕರ. ಗೋರೇಗಾಂವಕರ. ಸೋಲೇಗಾಂವಕರ. ಅಹಿವಾಸೀ. ಮಾರಿಯಾ ಆ್ಯಂಡರ್ಸನ್. ಮ್ಯಾಕ್‌ಮಿಲನ್. ರಸಿಕಲಾಲ ಪಾರೇಖ. ಚಿಮುಲಕರ. ಧೋಪೇಶ್ವರಕರ. ಅಮೃತಾ ಶೇರಗಿಲ್. ಬಾಂದಿವಡೇಕರ. ವ್ಹಿ. ಜಿ. ಕುಲಕರ್ಣಿ. ಮುರಘುಮದಾರ. ಲಾಂಗ್ ಹ್ಯಾಮರ್. ಗುರ್ಜರ. ಪಿ. ಟಿ. ರೆಡ್ಡಿ. ಬೇಂದ್ರೆ. ವಾಯ್. ಕೆ. ಶುಕ್ಲಾ. ಸೂರಘಾ. ಭಗತ್. ಜೋಗ್. ಬಾಬೂರಾವ್ ಪೇಂಟರ್. ಹೆಬ್ಬಾರ್. ಡಿ. ಜೆ. ಜೋಶಿ. ರಘಾ. ಪಳಶೀಕರ. ಹಜರನೀಸ. ಆರಾ. ಹುಸೇನ ಚಾವಡಾ. ಆಲಮೇಲಕರ. ಮೋಹನ ಸಾಮಂತ. ಲಕ್ಷ್ಮಣ ಪೈ. ವ್ಹಾವಿಯೇರ್ ವಾಲಾ. ವಾಯ್ ಬಾ. ಪಾನಸರೆ. ಗಾಡೇ. ಪೋಚಖಿನವಾಲಾ ಧೊಂಡ್. ರವೀಂದ್ರ ಮೇಸ್ತ್ರಿ. ಬಾಬೂರಾವ್ ಸಡವೇಲಕರ. ಸಾಬವಾಲಾ ಹರಕಿಶನ್‌ಲಾಲ್. ಶಾಂತಿದವೆ. ಬಿ. ಪ್ರಭಾ. ರಾಘವ್ ಕನೇರಿಯಾ. ಗಾಯತೊಂಡೆ. ಬಿ. ವಿಠ್ಠಲ್. ಆರವಡೇ ಸಂತೋಷ. ಹರೀಷ ರಾವುತ್. ಸೋನಾವಡೇಕರ್. ಕೋಲತೆ.

---

೬೬. ಸತೀಶ ನಾಯಕ : ಲೇ : ' ಭಾರತೀಯ ಚಿತ್ರಕಲಾಚಿ ಶತಾಬ್ದಿ ' ಮರಾಠಿ (ಲೋಕಪ್ರಭಾ). ಪುಟ ೩೫

ವಾಸುದೇವ ಕಾಮತ್ ಮತ್ತು ಜಯಂತಿ ರಾಬೋಡಿಯಾರವರಂಥ ಮುಂಬಯಿ ಆರ್ಟ್ ಗ್ಯಾಲರಿಯ ಪ್ರದರ್ಶನಗಳಲ್ಲಿ ಕಲಾವಿದರ ಕಲಾಕೃತಿಗಳು ಈ ಪ್ರದರ್ಶನದಲ್ಲಿ ಪ್ರದರ್ಶಿಸಲ್ಪಡಲಿವೆ. " ೭೭ ಎಂದು ಉಲ್ಲೇಖಿಸಿದ್ದಾರೆ.

ಈ ರೀತಿ ಜೆ. ಜೆ. ಕಲಾ ಶಾಲೆ ಪಠ್ಯ ಕ್ರಮದ ಅಭ್ಯಾಸದೊಂದಿಗೆ ಅದಕ್ಕೆ ಪೂರಕವಾಗುವಂತಹ ಕಲಾವಾತಾವರಣವನ್ನು ನಿರ್ಮಾಣ ಮಾಡಿತ್ತಲ್ಲದೆ ಅನೇಕ ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ಹೆಸರುವಾಸಿಯಾಗುವಂತಹ ಕಲಾ ಶಿಕ್ಷಣ ನೀಡಿತು. ಚೆಟ್ಟಿಯವರ ದೃಷ್ಟಿಯಲ್ಲಿ " ಮುಂಬಯಿ ಕಲೆಯ ಕಾಶಿ ಎನಿಸಿಕೊಂಡಿದೆ. ಅದರಲ್ಲೂ ಜೆ. ಜೆ. ಸ್ಕೂಲ್ ಆಫ್ ಆರ್ಟ್ ಸಂಸ್ಥೆ ಕಾಲವಿದರಿಗೆ ಕಾಶೀ ವಿಶ್ವೇಶ್ವರನ ಮಂದಿರವೇ ಆಗಿತ್ತು ಎಂದು ಅಭಿಪ್ರಾಯ ಪಟ್ಟಿದ್ದಾರೆ. " ೭೮

ಚೆಟ್ಟಿಯವರ ಅಧ್ಯಯನ ಕಾಲದಲ್ಲಿ ನಡೆದ ಮಹತ್ವದ ಘಟನೆಗಳು :

ಜೆ. ಜೆ. ಕಲಾ ಶಾಲೆಯಲ್ಲಿಯ ಅಧ್ಯಾಪಕರು ಎಷ್ಟು ಕಟ್ಟುನಿಟ್ಟು ಎಂಬುದನ್ನು ಈಗಾಗಲೇ ವಿವರಿಸಲಾಗಿದೆ. ಅಂತಹ ಗಂಭೀರ ಸ್ವಭಾವದ ಘನವಂತ ಶಿಕ್ಷಕರು ವಿದ್ಯಾರ್ಥಿಗಳ ಸಾಧನೆಯನ್ನು ಮೆಚ್ಚಿಕೊಂಡು ತಮ್ಮನ್ನು ಗುರ್ತಿಸಿದಾಗಲಂತೂ ವಿದ್ಯಾರ್ಥಿಗಳಿಗೆ ಹೇಳತೀರದ ಆನಂದ ಅಂತಹ ಸಂದರ್ಭ. " ಮೂರನೆಯ ವರ್ಷ ನಮ್ಮ ವರ್ಗಕ್ಕೆ ವ್ಹಾಯಿಸ್ ಪ್ರಿನ್ಸಿಪಾಲರಾಗಿದ್ದ ದುರಂಧರ್ ಹಾಗೂ ಅಡ್ವಾನ್ಸ್ ಕ್ಲಾಸ್‌ಗೆ ಕ್ಯಾಪ್ಟನ್ ಗ್ಲ್ಯಾಡ್‌ಸನ್ ಸಲೋಮನ್‌ರು ಬರುತ್ತಿದ್ದರು. ನಾವು ಚಿತ್ರಿಸುತ್ತಿದ್ದ ಚಿತ್ರವನ್ನು ನೋಡಿ. " ಅಸ ಕರಾ ಅಸ ಕರಾ " (ಮರಾಠಿಯಲ್ಲಿ) ಅಂತ ಹೇಳಿಕೊಡುತ್ತಿದ್ದರು. " ಡೋಲಿಕರ ಶೇಟಜಿ ಕಾಂಪಿಟೇಶನ್‌ಗೆ ನನ್ನನ್ನು ಆರಿಸಿದ್ದರು. ನಾನು ಆ ಸ್ಪರ್ಧೆಯಲ್ಲಿ ಭಾಗವಹಿಸಿ ಮಲಗಿದ ಚಿಗರಿಯ ಚಿತ್ರ ತೆಗೆದಿದ್ದೆ. ಅದಕ್ಕೆ ಒಂದು ಸಾವಿರ ರೂಪಾಯಿ ಬಹುಮಾನ ಸಿಕ್ಕಿತು. ಎಲ್ಲರೂ ನನ್ನ ಬೆನ್ನು ಚಪ್ಪರಿಸುವರೇ. ನನ್ನ ಗುರುಗಳು ನನ್ನ ಕೈ ಕುಲುಕಿದಾಗ ಹೇಳತೀರದಷ್ಟು ಆನಂದವಾಗಿತ್ತು. " ೭೯ ಎಂದಿದ್ದಾರೆ.

ಸಹಜವಾಗಿ ಎಲ್ಲರೂ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಅಸಂತೋಷ ಪಡುತ್ತಾರೆ ಆದರೆ ಚೆಟ್ಟಿಯವರು ಹಾಗಲ್ಲ. ಸಂತೋಷಪಟ್ಟರಂತೆ ಕಾರಣ ೮' - ೬' ಅಳತೆಯ ಕ್ಯಾನ್‌ವಾಸ್ ಮೇಲೆ ಚಿತ್ರ ರಚಿಸುವ ಅವಕಾಶ ತಮಗೆ ಮತ್ತೆ ಸಿಗುತ್ತದೆಂಬ ಖುಷಿ. " ೧೯೨೯ ರಲ್ಲಿ ನಾನು ಡಿಪ್ಲೋಮಾ ಪರೀಕ್ಷೆಗೆ ಹಾಜರ ಆದೆ. ಆಗ ೮' - ೬' ಫೂಟ ಕ್ಯಾನವಾಸಿನ ಮೇಲೆ ಸಂಯೋಜನಾ ಚಿತ್ರ ಚಿತ್ರಿಸಬೇಕಿತ್ತು. ಮೊದಲು ಸಣ್ಣ ಆಕಾರದಲ್ಲಿ ತೆಗೆದು ಅನಂತರ ಅದನ್ನೇ ದೊಡ್ಡದನ್ನಾಗಿ ರಚಿಸಬೇಕಾಗುತ್ತಿತ್ತು. ಆದರೆ ಆ ಸಲ ನಾನು ಪರೀಕ್ಷೆಯಲ್ಲಿ ಅನುತ್ತೀರ್ಣನಾದೆ. ನನಗೆ ನಪಾಸ್ ಆದದ್ದಕ್ಕೆ ಸಂತೋಷವಾಯಿತು. ಏಕೆಂದರೆ ಮತ್ತೆ ಪೇಂಟಿಗ್ ಮಾಡುವ ಅವಕಾಶ ಸಿಕ್ಕಿತಲ್ಲಾ ಎಂದು. ೧೯೩೦ ರಲ್ಲಿ ಪುನಃ ಡಿಪ್ಲೋಮಾ ಪರೀಕ್ಷೆಗೆ ಕುಳಿತಾಗ ಕೃಷ್ಣಾರ್ಜುನರ ಯುದ್ಧ ಚಿತ್ರ ಬಿಡಿಸಬೇಕಾಗಿತ್ತು. ನಾನು ಆ ಚಿತ್ರ

---

೭೭. ಸತೀಶ ನಾಯಕ್ : ಲೇ : ಭಾರತೀಯ ಚಿತ್ರಕಲಾಚಿ ಶತಾಬ್ದಿ ಮರಾಠಿ ಲೋಕಪ್ರಭಾ. ಪುಟ ೩೨

೭೮. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೩

೭೯. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೪

ತೈಲವರ್ಣದಲ್ಲಿ ಮಾಡಿದೆ. ಆ ಚಿತ್ರಕ್ಕೆ ಪ್ರಥಮ ನಂಬರಿನ ಜೊತೆಗೆ ಪುರಸ್ಕಾರ ರೂಪವಾಗಿ ಸುವರ್ಣ ಹಾಗೂ ರಜತ ಪದಕಗಳು ದೊರೆತವು." [೮೦] ೧೯೩೧ ರಿಂದ ೧೯೩೪ ರ ವರೆಗೆ ಫೆಲೋಶಿಪ್ ದೊರೆಯಿತು.

ಜೆ. ಜೆ. ಕಲಾ ಶಾಲೆಯಲ್ಲಿ ಯಾವತ್ತೂ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯ ನಿಮಿತ್ತ ಶೈಕ್ಷಣಿಕ ಪ್ರವಾಸಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಅಂತಹ ಪ್ರವಾಸದ ಮರೆಯಲಾಗದ ಒಂದು ಸವಿನೆನಪು. ಯಾಕೆಂದರೆ ಇಂಗ್ಲೀಷ್‌ನಲ್ಲಿರುವ ಗಾದೆಯಂತೆ " College life is a Golden life " ಆ ದಿನಗಳು ಮರಳಿ ಬರಲು ಸಾಧ್ಯವಿಲ್ಲ. " ೧೯೩೧ ರಲ್ಲಿ ನಮ್ಮ ಕಲಾ ಶಾಲೆಯ ವತಿಯಿಂದ ೧೫ ದಿನ ಉದಯಪುರಕ್ಕೆ ಶೈಕ್ಷಣಿಕ ಪ್ರವಾಸ ಏರ್ಪಡಿಸಿದ್ದರು. ನನ್ನ ಸಹಪಾಠಿಗಳಾದ ಧೂಪೇಶಕರ, ಶಿರಗಾಂವಕರ, ದಂಡಾವತಿಮಠ, ಗೋಕರ್ಣ, ಬೆಂಜಾಮಿನ್. ಕರಥೀಕರ್. ಮಿಸ್. ಹಂಡರಸನ್ ಹೀಗೆ ಒಟ್ಟು ಐವತ್ತು ವಿದ್ಯಾರ್ಥಿಗಳು ಜೊತೆಗೆ ನಮ್ಮ ಪ್ರಾಚಾರ್ಯರಾದ ಕ್ಯಾಪ್ಟನ್ ಡಬ್ಲೂ. ಇ. ಸಲೋಮನ್ ಅವರು ಬಂದಿದ್ದರು. ಮುಂಬಯಿಯಿಂದ ನಮಗಾಗಿ ಮೂರು ಸ್ಪೇಶಲ್ ಬೋಗಿಗಳನ್ನು ಹಚ್ಚಲಾಗಿತ್ತು. ಎಲ್ಲರೂ ಒಂದೇ ವಯಸ್ಸಿನವರು. ಡಬ್ಬಿಯಲ್ಲಿ ನಮ್ಮದೇ ರಾಜ್ಯ. ನಮ್ಮಲ್ಲಿ ಹಲವರು ತಾಸ್ಕರರಂತೆ ನಟಿಸಿ ತೋರಿಸಿದರೆ ಇನ್ನೂ ಕೆಲವರು ಪ್ರಿನ್ಸಿಪಾಲ್ ಸಲೋಮನ್‌ರಂತೆ ನಟಿಸಿ ತೋರಿಸಿದರು. ಮತ್ತೆ ಕೆಲವರು ಬಾಲಗಂಧರ್ವನ ನಕಲಿ ಮಾಡುತ್ತ ಅವನ ಹಾಡುಗಳನ್ನು ಹಾಡುತ್ತಿದ್ದರು. ಅಂಥ ದಿನಗಳು ಮರಳಿ ಬಂದಾವೆ ? ಸಾಧ್ಯವಿಲ್ಲ ಒಟ್ಟಿನಲ್ಲಿ ಅದೊಂದು ಮೋಜಿನ ಪ್ರವಾಸವಾಗಿತ್ತು. " [೮೧] ಇದೊಂದು ಅವರ ಮರೆಯಲಾಗದ ಅನುಭವವಾಗಿದೆ.

ಚೆಟ್ಟಿಯವರು ತಮ್ಮ ಚಿಕ್ಕಪ್ಪನವರ ಆಣತಿಯಂತೆ ಮುಂಬಯಿಗೆ ಬಂದ ನಂತರ ಹೊರಗಡೆ ಎಲ್ಲಿಯೂ ಊಟ ಮಾಡುತ್ತಿರಲಿಲ್ಲ. ತಾವೇ ಕೈಯಾರೆ ಅಡುಗೆ ಮಾಡಿಕೊಳ್ಳುತ್ತಿದ್ದರು. ಅಷ್ಟು ನಿಷ್ಠೆಯಿಂದ ನಡೆದುಕೊಂಡು ಬಂದವರು ಪ್ರವಾಸಕ್ಕೆ ಹೋದಾಗಲೂ ಸಹಿತ ತಮ್ಮ ಎಲ್ಲ ಅಡಿಗೆ ಸಾಮಾನು ಹಿಂದೆ ತೆಗೆದುಕೊಂಡು ಹೋಗಿದ್ದರು. " ಉದಯಪುರದ ಅರಮನೆಯ ಒಂದು ಭಾಗದಲ್ಲಿ ನಮಗೆ ವಸತಿ ವ್ಯವಸ್ಥೆ ಮಾಡಲಾಗಿತ್ತು. ನಮ್ಮ ವಸತಿ ಕೋಣೆಯ ಗೋಡೆಗೆ ಹಚ್ಚಿ ಒಂದು ದೊಡ್ಡ ಸರೋವರವಿದ್ದುದರಿಂದ ರಾತ್ರಿಯೆಲ್ಲ ಬಹಳ ಥಂಡಿ ಆಗುತ್ತಿತ್ತು. ನಮಗೆ ಮೊದಲೇ ಉಲ್ಲನ್ ರಗ್. ಸ್ವೆಟರ್. ಮಫ್ಲರ್ ತರಲು ಸೂಚಿಸಿದ್ದರು. ಆದರೆ ಆರ್ಥಿಕ ಮುಗ್ಗಟ್ಟಿನಿಂದಾಗಿ ಅವುಗಳನ್ನು ಕೊಳ್ಳುವುದು ಸಾಧ್ಯವಾಗಲಿಲ್ಲ. ಉಳಿದವರೆಲ್ಲ ಸ್ಥಿತಿವಂತರಿದ್ದರು. ರಾತ್ರಿಯೆಲ್ಲ ಥಂಡಿಯಿಂದ ನಿದ್ದೆ ಹತ್ತುತ್ತಿರಲಿಲ್ಲ. ಬೆಳಗಿನ ನಾಲ್ಕು ಘಂಟೆಯಾದೊಡನೆ ಎದ್ದು ಅಂಥಾ ಥಂಡಿಯಲ್ಲೇ ಕೆರೆಯಲ್ಲಿ ಮುಳುಗು ಹಾಕಿ ಅಲ್ಲಿಯೇ ಇದ್ದ ದೇವಾಲಯದಲ್ಲಿ ಪೂಜೆ ತೀರಿಸಿಕೊಂಡು ಬಂದು ಸ್ಟೋವ್ ಹತ್ತಿಸಿ ನನ್ನ ಅಡಿಗೆ ಮಾಡಿಕೊಳ್ಳುತ್ತಿದ್ದೆ. ಉಳಿದವರೆಲ್ಲ ಅಡುಗೆಗೆ ಆಳು ಮಾಡಿದ್ದರು. ನಮ್ಮ ಚಿಕ್ಕಪ್ಪ ಅವರು ಆದೇಶಿಸಿದ ಪ್ರಕಾರ ಆಗ ನಾನು ಮತ್ತೊಬ್ಬರು ಮಾಡಿದ ಪ್ರಸಾದವನ್ನು ಸೇವಿಸದೆ ಮಡಿಯಿಂದ ಮಾಡಿಕೊಂಡು ಸೇವಿಸುತ್ತಿದ್ದೆ. ನಾನು ನನ್ನೊಂದಿಗೆ ಸ್ಟೋವ್ ಒಯ್ದಿದ್ದೆ. ಶಿರಾ ಮಾಡುತ್ತಿದ್ದೆ. ಅನ್ನವನ್ನು ಬೇಯಿಸಿ ನಂತರ ಅದರಲ್ಲಿ ಬದನೆಕಾಯಿಯಲ್ಲಿ ಮಸಾಲಿ ಸಾಮಾನು ತುಂಬಿ ಆ

---

೮೦. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೫

೮೧. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೫

ಒಣಗಾಯಿಗಳನ್ನು ಬಿಸಿ ಅನ್ನದಲ್ಲಿ ಹುಗಿದುಬಿಡುತ್ತಿದ್ದೆ. ಬದನಿಕಾಯಿ ಪಲ್ಲೆ ಆಗುತ್ತಿತ್ತು. ನಾನು ಊಟ ಮಾಡಿಕೊಂಡು ಎಲ್ಲರಿಗೂ ಊಟಕ್ಕೆ ಬಡಿಸುವ ಕಾರ್ಯ ಕೈಗೊಳ್ಳುತ್ತಿದ್ದೆ. ನಾನು ಊಟಕ್ಕೆ ಕೂಡ್ರುವಾಗ ಅನೇಕರು ನನ್ನಲ್ಲಿಗೆ ಬಂದು "ಚೆಟ್ಟಿ ಶಿರಾ ದ್ಯಾ" ಎನ್ನುತ್ತಿದ್ದರು."[೮೨] ಉದಯಪುರ ಮಹಾರಾಜರ ಅರಮನೆಯ ಆವರಣದಲ್ಲಿದ್ದ 'ಜಲಮಂದಿರ'ದ ನಿಸರ್ಗಚಿತ್ರ ರಚಿಸಿದರು. ಅದನ್ನು ಮೆಚ್ಚಿಕೊಂಡ ಮಹಾರಾಜರು ತಮ್ಮ ಅರಮನೆಗೆ ಕೊಂಡುಕೊಂಡರು. ಅದೇ ರೀತಿ ಇನ್ನೂ ೫ - ೬ ಚಿತ್ರಗಳನ್ನು ರಚಿಸಿದ್ದರು. ಅದರಲ್ಲಿಯ ಒಂದು ಚಿತ್ರ ಕರ್ನಾಟಕ ಲಲಿತ ಕಲಾ ಅಕಾಡೆಮಿ ಸಂಗ್ರಹದಲ್ಲಿ ನೋಡಬಹುದು. ಜಲ ವರ್ಣದಲ್ಲಿ ಮಾಡಲ್ಪಟ್ಟಿದೆ.

ಅರಮನೆಯನ್ನು ನೋಡಲು ಹೋದಾಗ ನಡೆದಂತ ಹಾಸ್ಯಪ್ರಸಂಗವನ್ನು ಚೆಟ್ಟಿಯವರು ಈ ರೀತಿ ವರ್ಣಿಸಿದ್ದಾರೆ. "ನಮ್ಮ ಪ್ರಿನ್ಸಿಪಾಲ್ ಗ್ಲ್ಯಾಡ್‌ಸನ್, ಮಿಸ್ ಹಂಡರ್‌ಸನ್ ನಾವೆಲ್ಲ ಕೂಡಿಕೊಂಡು ಅರಮನೆ ನೋಡಲು ಹೋದೆವು. ಅಲ್ಲಿಯ ಅರಸಿ ಮಹಲ್ ನೋಡಲು ಹೋದಾಗ ಒಂದು ಮೋಜಿನ ಘಟನೆ ನಡೆಯಿತು. ಅರಸಿ ಮಹಲ ಎಂದರೆ ಕನ್ನಡಿಯ ಅರಮನೆ ಮೇಲೆ ಕೆಳಗೆ ಎಲ್ಲಿ ನೋಡಿದಲ್ಲಿ ಕನ್ನಡಿಗಳೇ ಮಿಸ್ ಹಂಡರ್‌ಸನ್ ಫ್ರಾಕ್ ತೊಟ್ಟಿದ್ದಳು. ಆ ಅರಮನೆಯನ್ನು ನೋಡಲು ಒಳಗೆ ಬಂದಾಗ ನೆಲದ ಕನ್ನಡಿಯಲ್ಲಿ ತನ್ನ ಪ್ರತಿಬಿಂಬ ಕಂಡವಳೇ ಓ - ಓ - ಓ ಅಂತಾ ಜಿಗಿದವಳೇ ಹೊರಗೆ ಹೋಗಿ ನಿಂತಳು. ನಮಗೆಲ್ಲ ನಗೆ ಉಕ್ಕಿತು."[೮೩]

ಈಗಿನ ಚಹಾದ ಅಂಗಡಿಗಳಂತೆ ಆಗಿನ ಕಾಲದ ಉದಯಪುರದ ಹಾಲಿನ ಅಂಗಡಿ ಅಲ್ಲಿಯ ರೀತಿಯ ಅನಿಸಿಕೆ. "ಆ ಕಾಲದಲ್ಲಿ ಉದಯಪುರದಲ್ಲಿ ಚಹಾದ ಅಂಗಡಿಗಳೇ ಇರಲಿಲ್ಲ. ಬರೀ ಹಾಲಿನ ಅಂಗಡಿಗಳೇ ಬಹಳ. ಎಲ್ಲಿ ನೋಡಿದಲ್ಲಿ ಬದಾಮ ಪಿಸ್ತಾ ಮಿಠಾಯಿ ಅಂಗಡಿಗಳೇ ಕಾಣುತ್ತಿದ್ದವು. ಆ ಮಿಠಾಯಿಗಳಿಗೆ ಮುತ್ತಿರುವ ನೊಣಗಳೆಲ್ಲ ಹಾಲಿನ ದೊಡ್ಡ ದೊಡ್ಡ ಕಡಾಯಿಗಳಲ್ಲಿ ಬಿದ್ದಿರುತ್ತಿದ್ದವು. ಹಾಲಿನ ಅಂಗಡಿಯವರು ಜಾಳಿಗೆ ಹಾಕಿ ಹಾಲು ಸೋಸಿ ಕೊಡುತ್ತಿದ್ದರು. ಆ ಜಾಳಿಗೆ ಬುಟ್ಟಿಯ ತುಂಬ ನೊಣಗಳೇ ತುಂಬಿರುತ್ತಿದ್ದವು. ಅಂಗಡಿಗಳಲ್ಲಿ ಈಗಿನಂತೆ ಕಪ್ಪುಬಸಿಗಳಿಗೆ ಬಳಕೆ ಇರಲಿಲ್ಲ. ಹಾಲು ಕುಡಿಯುವುದಕ್ಕೆಂದೇ ಮಣ್ಣಿನ ಮಡಿಕೆಗಳನ್ನು ಇಟ್ಟಿರುತ್ತಿದ್ದರು. ಹಾಲು ಕುಡಿದ ನಂತರ ಆ ಮಣ್ಣಿನ ಕುಡಿಕೆಗಳನ್ನು ಮಗ್ಗಲಲ್ಲಿ ಒಗೆಯುತ್ತಿದ್ದರು. ಹಾಗೆ ಕುಡಿದು ಬೀಸಾಡಿದ ಕುಡಿಕೆಗಳ ರಾಶಿಯೇ ಅಲ್ಲಿ ಕಂಡುಬರುತ್ತಿತ್ತು."[೮೪] ಇಂತಹ ವಿಚಿತ್ರ ಅನುಭವಗಳು ಅವರಿಗೆ ಆಗಿವೆ.

೧೯೩೦ ರಲ್ಲಿ ನಡೆದ ಅಸಹಕಾರ ಅಂದೋಲನ ದೇಶದ ತುಂಬೆಲ್ಲ ಭರದಿಂದ ಸಾಗಿದಂಥ ಸಮಯ. ಜೆ. ಜೆ. ಕಲಾ ಶಾಲೆಯ ಮೇಲೂ ಅದರ ಪರಿಣಾಮ ಬೀರಿತು. "ಜುಲೈದಿಂದ ಅಗಸ್ಟವರೆಗೆ ಅಸಹಾಕಾರ ಅಂದೋಲನ ಜೋರಾಗಿ ಇತ್ತು. ಪ್ರಭಾತಫೇರಿ ಮಾಡಿ ಎಲ್ಲರೂ ಚಳುವಳಿಯಲ್ಲಿ ಭಾಗವಹಿಸಿದ್ದರು. ಶಾಲೆ ಮತ್ತು ಕಾಲೇಜಿನಲ್ಲಿ ಹುಡುಗರು ಅಭ್ಯಾಸ ಬಿಟ್ಟು ಚಳುವಳಿಯಲ್ಲೇ ಭಾಗವಹಿಸಿದ್ದರು. ಆಗ ಎಲ್ಲಾ ಶಾಲೆ ಕಾಲೇಜುಗಳಿಗೆ ರಜೆ ನೀಡಿದ್ದರು.

---

೮೨. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೫-೧೨೬

೮೩. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೬

೮೪. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೬

ಚಳುವಳಿಗಾರರು ಬಂದು ಎಲ್ಲ ವಿದ್ಯಾರ್ಥಿಗಳನ್ನು ಚಳುವಳಿಗೆ ಕರೆದುಕೊಂಡು ಹೋದರು." [೨೫] ಇಂತಹ ಸ್ವಾತಂತ್ರ್ಯಾಂದೋಲನ ಚಳುವಳಿ ಬಹಳ ಜೋರಿನಿಂದ ಪ್ರಾರಂಭವಾಗಿತ್ತು. ಚೆಟ್ಟಿಯವರು ಇದರಲ್ಲಿ ಭಾಗವಹಿಸಿದ್ದರು.

"ದಿಲ್ಲಿಗಿಂತಲೂ ಮುಂಬಯಿಯಲ್ಲಿ ಅದರ ಪ್ರಭಾವ ಹೆಚ್ಚಾಗಿತ್ತು. ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ಆಗಾಗ ಪ್ರಭಾತ ಫೇರಿ ನಡೆಯುತ್ತಿತ್ತು. ಅದರಲ್ಲಿ ಜವಾಹರಲಾಲ ನೆಹರೂ. ವಲ್ಲಭಭಾಯಿ ಪಟೇಲ. ವಿಠ್ಠಲಭಾಯಿ ಪಟೇಲ. ಕಮಲಾ ನೆಹರು ಮುಂತಾದ ಮುಖಂಡರು ಇರುತ್ತಿದ್ದರು. ನಾನು ಎಷ್ಟೋ ಸಲ ಅಂಥ ಪ್ರಭಾತಫೇರಿಯಲ್ಲಿ ಭಾಗವಹಿಸುತ್ತಿದ್ದೆ. ರಾಷ್ಟ್ರಗೀತೆಯನ್ನೂ ಹಾಡುತ್ತಿದ್ದೆ. ಅವರೆಲ್ಲರೊಂದಿಗೆ ಹೋಗುತ್ತಿರುವಾಗ ಎದೆ ಉಬ್ಬಿ ಬರುತ್ತಿತ್ತು. ಮಹಾತ್ಮಾ ಗಾಂಧೀಜಿಯವರ ಪ್ರಾರ್ಥನಾ ಸಭೆಯಲ್ಲಿ ಕೂಡಾ ಅನೇಕ ಸಲ ಭಾಗವಹಿಸುವ ಭಾಗ್ಯ ನನ್ನದಾಗಿತ್ತು. ಒಂದು ಸಲ ಮಹಾತ್ಮಾ ಗಾಂಧೀಜಿಯವರ ಚಿತ್ರವನ್ನು ರಚಿಸಿದ್ದೆ ಅದನ್ನು ಮೆಚ್ಚಿಕೊಂಡ ಓರ್ವ ಸೇಡಜಿ ಕೊಡಬೇಕೆಂದು ಬಹಳ ಕೇಳಿಕೊಂಡ ಕೊಟ್ಟುಬಿಟ್ಟೆ. ಆದರೆ ಈಗ ಅದು ನೆನಪಾದಾಗಲೆಲ್ಲ ಯಾಕಾದರೂ ಅದನ್ನು ಕೊಟ್ಟೆನೋ ಎಂದು ಹಳಹಳಿ ಆಗುತ್ತದೆ." [೨೬] ಚಳುವಳಿಯ ಸಂದರ್ಭದಲ್ಲಿಯೂ ಚಿತ್ರ ರಚಿಸುವ ಹಂಬಲ ಕಾಣುತ್ತೇವೆ. ಕಲೆಯು ಕಲಾವಿದನು ತನ್ನ ಬದುಕಿನ ವಿವಿಧ ಘಟ್ಟಗಳಲ್ಲಿ ವಿಭಿನ್ನ ಸಂವೇದನೆಗಳಿಗೆ ಒಳಗಾಗಿ ವೈವಿಧ್ಯತೆಯನ್ನು ಸೃಷ್ಟಿಸುವಂತೆ ಮಾಡುವವು ಎನ್ನುವುದಕ್ಕೆ ಇದು ಸಾಕ್ಷಿ.

ಪ್ರಭಾತ ಫೇರಿ ನಡೆಯುವ ಸಂದರ್ಭದಲ್ಲಿ ಬ್ರಿಟೀಷರು ಎಂಥಾ ಹಿಂಸಾಕೃತ್ಯಗಳನ್ನು ಎಸಗುತ್ತಿದ್ದರು. ಆದರೂ ಗಾಂಧೀಜಿಯವರ ಶಕ್ತಿ ಅಗಾಧವಾದದ್ದು. ಅವರ ಯಾವ ಬೆದರಿಕೆಗೂ ಹೆದರದ ಶಾಂತಿಪ್ರಿಯ ಮಹಾತ್ಮ. "ಪ್ರಭಾತ ಫೇರಿ ಆರಭಾದ ಮೈದಾನಕ್ಕೆ ಹೋಗುವಾಗ್ಗೆ ಬ್ರಿಟೀಷ ಸಿಪಾಯಿಗಳು. ಕುದುರೆಯ ಮೇಲೆ ಕುಳಿತ ಸಾರ್ಜಂಟರು ಬೆತ್ತದಿಂದ ಹೊಡೆದು ಚದುರಿಸುತ್ತಿದ್ದರು. ಲಾಠಿಯಿಂದ ಚಚ್ಚುತ್ತಿದ್ದರು. ಎಷ್ಟೋಜನರ ತಲೆ ಒಡೆದು ಕೈ ಕಾಲು ಮುರಿದು ಹೋಗಿದ್ದನ್ನು ನಾನು ಕಂಡೆ. ನನಗೂ ಒಂದು ಸಲ ಬೆನ್ನ ಮೇಲೆ ಬೆತ್ತದ ಏಟು ಬಿತ್ತು. ಇಷ್ಟಾದರೂ ಜನ 'ಮಹಾತ್ಮ ಗಾಂಧೀಜಿ ಕೀ ಜೈ' ಎಂದು ಘೋಷಣೆ ಮಾಡುತ್ತಿದ್ದರು. ಅಲ್ಲದೇ ಅನೇಕ ಸಲ ಕೋಮು ಗಲಭೆಗಳು ಆದವು. ಹಿಂದೂ -ಮುಸಲ್ಮಾನರ ದಂಗೆ ಎದ್ದಾಗ ನಾನು ನಾಲ್ಕ ಐದು ಮೈಲುಗಳ ವರೆಗೆ ಓಡಿ ಬಂದದ್ದು ನೆನಪಿದೆ. ಮರುದಿನ ನನ್ನ ಕಾಲುಗಳೆಲ್ಲ ಬಾತು ಹೋಗಿದ್ದವು." [೨೭] ಆಗಿನ ಆ ಸಂದರ್ಭದಲ್ಲಿ ವಿದ್ಯಾರ್ಥಿಗಳು ಸಹಿತ ಎಷ್ಟೊಂದು ಸಕ್ರಿಯವಾಗಿ ದೇಶದ ಸ್ವಾತಂತ್ರ್ಯದ ಚಳುವಳಿಗಳಲ್ಲಿ ಭಾಗವಹಿಸುತ್ತಿದ್ದರು ಎಂಬುದು ತಿಳಿದುಬರುತ್ತದೆ. ಇಂತಹ ವಾತಾವರಣದಲ್ಲಿ ಚೆಟ್ಟಿಯವರು ಮುಂಬಯಿಯ ಜೆ. ಜೆ. ಕಲಾ ಶಾಲೆಯಲ್ಲಿ ಆಗಿನ ಕಾಲದ ಉತ್ತಮ ಪಠ್ಯ ಕ್ರಮ. ಅಧ್ಯಾಪಕ ವರ್ಗದ ಮಾರ್ಗದರ್ಶನ ಹಾಗೂ ಒಳ್ಳೆಯ ಸ್ನೇಹಿತರ ಬಳಗದೊಂದಿಗೆ ಐದು ವರ್ಷಗಳ ಡಿಪ್ಲೋಮಾ (Drawing and Painting) ಪದವಿಯನ್ನು ೧೯೩೦ ರಲ್ಲಿ ಪ್ರಥಮ ವರ್ಗದಲ್ಲಿ ಬೆಳ್ಳಿ ಹಾಗೂ ಚಿನ್ನದ ಪದಕದೊಂದಿಗೆ ಉತ್ತೀರ್ಣರಾದರು. ಹಾಗೂ ಮುಂದೆ ೧೯೩೧ ರಿಂದ ೧೯೩೪ ರ ವರೆಗೆ ಫೆಲೋ ಆಗಿ ಆಯ್ಕೆ ಆದರು.

---

೨೫. ರಾವಬಹದ್ದೂರ ಎಂ. ವ್ಹಿ. ಧುರಂಧರ : " ಕಲಾಮಂದಿರಾಂತಿಲ ಏಕಚಾಲಿಸ ವರ್ಷ " : ಮರಾಠಿ ಪುಸ್ತಕ. ಪುಟ ೧೯

೨೬. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೨೭

೨೭. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೨೮

ಏಳು ಮಂದಿ ಸ್ನೇಹಿತ ಬಳಗದ ಕಲಾಸಾಧನೆ :

ಮುಂಬಯಿಯಲ್ಲಿ ಚೆಟ್ಟಿಯವರು ಕಲಾಭ್ಯಾಸ ಮಾಡುವಾಗ ಅವರ ಸಹಪಾಠಿಗಳಾಗಿದ್ದ ಕಲಾವಿದ ದಂಡಾವತಿಮಠ ಅವರು ತಮ್ಮ ವಿದ್ಯಾರ್ಥಿ ಜೀವನದ ಮಧುರ ನೆನಹುಗಳನ್ನು ತಮ್ಮ ಲೇಖನವೊಂದರಲ್ಲಿ ಈ ರೀತಿ ವ್ಯಕ್ತಮಾಡಿದ್ದಾರೆ : " ಮುಂಬಯಿಯಲ್ಲಿ ಕರ್ನಾಟಕದವರೆ ಆದ ಶ್ರೀ ಗಂಗಾಧರಪ್ಪ ಸಾಬೋಜಿಯವರ ಉದಾರಾಶ್ರಯದಲ್ಲಿ. ಸಪ್ತವರ್ಣಗಳಂತಿದ್ದ ನಮ್ಮ ಕನ್ನಡ ಗುಂಪು ಪ್ರತಿದಿನ ಸಂಜೆ ಊಟವಾದ ನಂತರ ಸಾಬೋಜಿಯವರ ಅಟ್ಟದ ಮೇಲೆ ಕೂಡುತ್ತಿದ್ದೆವು. ನಿತ್ಯ ಕ್ಲಾಸಿನಲ್ಲಿ ನಡೆದ ಅಭ್ಯಾಸ ಸುಖದುಃಖ ಚರ್ಚಿಸಿ ವಿನೋದದಿಂದ ಕಾಲ ಕಳೆಯುತ್ತಿದ್ದೆವು. ಎಲ್ಲೇ ಇದ್ದರೂ ಸಹ ಸಂಜೆ ಊಟವಾದ ನಂತರ ನಮ್ಮ ಕಾರ್ಯಕ್ರಮದ ರಂಗಸ್ಥಳ ಶ್ರೀ ಸಾಬೋಜಿಯವರ ಅಟ್ಟ. ಆ ದಿನಗಳನ್ನು ನೆನೆಸಿದರೆ ಮನಸ್ಸಿಗೆ ಎಷ್ಟೊಂದು ಸಂತಸ. ಒಕ್ಕಟ್ಟು ಆತ್ಮೀಯತೆ ನೆನೆಸಿದರೆ. ನಾವು ಈಗ ಯಾವ ಯುಗದಲ್ಲಿದ್ದೇವೆಯೋ ಅಂತ ಅನ್ನಿಸುತ್ತದೆ. ನಮ್ಮ ಕನ್ನಡ ಕಲಾವಿದರ ಅಚ್ಚುಮೆಚ್ಚಿನ ಗುಂಪನ್ನು ನೋಡಿ ಬಹುಜನರು ಆಶ್ಚರ್ಯ ಪಟ್ಟರು. ಎಲ್ಲರೂ ಒಬ್ಬರಕ್ಕಿಂತ ಒಬ್ಬರು ಶ್ರೇಷ್ಠ ದರ್ಜೆಯ ಅಭ್ಯಾಸವನ್ನು ಮಾಡುತ್ತಾ ಹಾಡುತ್ತಾ ವಿನೋದದಿಂದಿದ್ದೆವು. "[೮೮] ಈ ಎಲ್ಲ ಸಪ್ತವರ್ಣದ ಅಂದರೆ. ಏಳು ಜನ ಕಲಾವಿದರು. ೧. ಶ್ರೀ ಡಿ. ಜಿ. ಬಡಿಗೇರ (೧೯೨೩). ೨. ಶ್ರೀ ಎಂ. ವ್ಹಿ ಮಿಣಜಗಿ (೧೯೨೩). ೩. ಶ್ರೀ ಡಿ. ವ್ಹಿ. ಹಾಲಭಾವಿ (೧೯೨೬) ೪. ಶ್ರೀ ಜಿ. ಎಸ್. ದಂಡಾವತಿಮಠ. ೫. ಶ್ರೀ ಸಿ. ವ್ಹಿ. ಕಾರಡಗಿ. ೬. ಶ್ರೀ ಅಮೀನಸಾಬ ಕಮಡೊಳ್ಳಿ (೧೯೧೮). ೭. ಶ್ರೀ ಎಂ. ಎ. ಚೆಟ್ಟಿ (೧೯೨೪). ಇವರೆಲ್ಲ ಹೆಚ್ಚೂಕಡಿಮೆ ಒಂದೋ ಎರಡೋ ವರ್ಷ ಹಿಂದೆ ಮುಂದೆ ಓದುತ್ತಿದ್ದವರು. ಈ ಗುಂಪನ್ನೇ ದಂಡಾವತಿಮಠರು (೧೯೨೩) ಸಪ್ತವರ್ಣದ ಕನ್ನಡ ಗುಂಪು ಎಂದು ಕರೆದಿದ್ದಾರೆ.

" ಆಗಿನ ಕಾಲದಲ್ಲಿ ಮುಂಬಯಿಗೆ ಹೋಗಿ ಅಭ್ಯಾಸ ಮಾಡುವುದೆಂದರೆ ಬಹಳ ತೊಂದರೆಯಾಗಿತ್ತು. ಅಂತೂ ಇಂತೂ ನಮ್ಮ ಗುಂಪು ಬಹಳ ಸಾಹಸದಿಂದ ಸತತ ಪರಿಶ್ರಮದಿಂದ ಶ್ರೇಷ್ಠ ದರ್ಜೆಯಲ್ಲಿ ತೇರ್ಗಡೆ ಹೊಂದಿದೆವು. "[೮೯] ಎಂದು ಹೇಳುವ ದಂಡಾವತಿಮಠರು ಯಾವ ರೀತಿ ಕಲಿಯುತ್ತಿದ್ದೇವೆಂಬುದನ್ನು ಹೇಳಿದ್ದಾರೆ. " ನಮ್ಮ ಕಾಲದ ವೈಶಿಷ್ಟ್ಯವೆಂದರೆ. ೧೧ - ೩೦ ರ ವರೆಗೆ ಅಭ್ಯಾಸ. ನಂತರ ಹೊರಗೆ ಒಂದು ನಿಮಿಷ ಸಹ ವ್ಯರ್ಥ ಕಳೆಯದೆ ಶಿಸ್ತಾಗಿ ಸರ್. ಜೆ. ಜೆ. ಸ್ಕೂಲಿನ ನಿಯಮಕ್ಕನುಗುಣವಾಗಿ ಮನಸ್ಸುಗೊಟ್ಟು ಕಲಿಯುತ್ತಿದ್ದೆವು. "[೯೦] ಅಲ್ಲದೆ " ಯುರೋಪಿಯನ್ ಡಾಯರೆಕ್ಟರ ಕ್ಯಾಪ್ಟನ್ ಗ್ಲ್ಯಾಡ್‌ಸನ್ ಸಾಲೋಮನ್ನರವರು ತುಂಬಾ ಶಿಸ್ತಿನವರು. ಉದಾರಿಗಳು ಮತ್ತು ಶ್ರೇಷ್ಠ ಕಲಾವಿದರು. ಅವರು ಪ್ರತಿದಿನ ಪ್ರತಿ ಕ್ಲಾಸಿಗೂ. ಕ್ಲಾಸು ಸುರು ಆಗುವ ಮುಂಚೆ ಮತ್ತು ಸಂಜೆ ದಿನಕ್ಕೆರಡಾವರ್ತಿ ಸಂದರ್ಶಿಸಿ ವಿದ್ಯಾರ್ಥಿಗಳ ಕೈಚಳಕವನ್ನು ನಿರೀಕ್ಷಿಸುತ್ತಿದ್ದರು. "[೯೧] ಎಂದು ಗುರುಗಳ ಬಗ್ಗೆ ಹೇಳಿದ್ದಾರೆ. ಚೆಟ್ಟಿಯವರ

---


೮೮. ಡಾ. ಎಸ್. ಸಿ. ಪಾಟೀಲ (ಸಂ.). ಚಿತ್ರಾಕ್ಷಿ. ಪುಟ ೯

೮೯. ಡಾ. ಎಸ್. ಸಿ. ಪಾಟೀಲ (ಸಂ.). ಚಿತ್ರಾಕ್ಷಿ. ಪುಟ ೯


೯೦. ಡಾ. ಎಸ್. ಸಿ. ಪಾಟೀಲ (ಸಂ.). ಚಿತ್ರಾಕ್ಷಿ. ಪುಟ ೧೦

೯೧. ಡಾ. ಎಸ್. ಸಿ. ಪಾಟೀಲ (ಸಂ.). ಚಿತ್ರಾಕ್ಷಿ. ಪುಟ ೧೦

ಚಿಟ್ಟಿಯವರ ಕಲಾವಿದ ಸ್ನೇಹಿತ ಬಳಗ




ಶ್ರೀ ಡಿ. ಜಿ. ಬಡಿಗೇರ




ಶ್ರೀ ಎಂ. ವ್ಹಿ ಮಿಣಜಗಿ




ಶ್ರೀ ಡಿ. ವ್ಹಿ. ಹಾಲಭಾವಿ



ಶ್ರೀ ಜಿ. ಎಸ್. ದಂಡಾವತಿಮಠ



ಶ್ರೀ ಪಿ. ವ್ಹಿ. ಕಾರಡಗಿ



ಶ್ರೀ ಅಮೀನಸಾಬ ಕಮದೊಳ್ಳಿ













ಸಮಕಾಲೀನರಾದ ಇವರು ಕರ್ನಾಟಕದಲ್ಲಿ ತಮ್ಮ ಕಲೆಯ ಕಾಯಕದಿಂದ ಪ್ರಸಿದ್ಧರಾಗಿದ್ದಾರೆ. ಇವರೆಲ್ಲ ಒಂದೇ ರೀತಿಯ ವ್ಯಾಕರಣ ಪದ್ಧತಿಯ ರೊಮ್ಯಾಂಟಿಕ್ ಶೈಲಿಯ ಪದ್ಧತಿಯಲ್ಲಿ ಕಲಿತಿದ್ದರೂ ನಂತರ ಬೇರೆ ಬೇರೆ ವಿಭಾಗಗಳಿಗೆ ಹೋಗಿ ತಮ್ಮವೇ ಆದ ಕಲಾಕೃತಿಗಳನ್ನು ರಚಿಸಿದ್ದಾರೆ. ಅದರಲ್ಲಿ ಬೇಕಾದಷ್ಟು ವ್ಯತ್ಯಾಸಗಳು ಇವೆ. ಮತ್ತು ತಮ್ಮತನವನ್ನು ಸೃಷ್ಟಿಸಿಕೊಂಡು ಒಳ್ಳೆ ಸೃಜನಶೀಲ ಕಲಾವಿದರಾಗಿ ಬೆಳೆದು ಬಂದರು. ಅಂತಹವರ ಕಲಾಸಾಧನೆಯ ಬಗ್ಗೆ ಇಲ್ಲಿ ವಿವರಿಸುವುದು ಪ್ರಸ್ತುತವಾಗಿದೆ.

" ಇಂದ್ರಿಯಗಳನ್ನು ಕೆರಳಿಸುವುದು ಪಾಶ್ಚಿಮಾತ್ಯ ಚಿತ್ರಕಲೆಯ ಉದ್ದೇಶವಾದರೆ. ಕೆರಳಿದ ಇಂದ್ರಿಯಗಳನ್ನು ಶಾಂತಗೊಳಿಸುವುದು ಭಾರತೀಯ ಚಿತ್ರಕಲೆಯ ಉದ್ದೇಶ " ಎಂದು ತ. ರಾ. ಸು. ಅವರು ಹೇಳಿದ ಮಾತು ಇಲ್ಲಿ ಸ್ಮರಣೀಯ. ಈ ಎಲ್ಲ ಕಲಾವಿದರು ಪಾಶ್ಚಾತ್ಯ ಶೈಲಿಯಲ್ಲಿ ಅಭ್ಯಾಸ ಮಾಡಿದರೂ ಭಾರತೀಯ ಪರಂಪರೆ ಎರಡನ್ನೂ ಮುಕ್ತವಾಗಿ ಸಮನ್ವಯ ದೃಷ್ಟಿಕೋನದಿಂದ ಅಭಿವ್ಯಕ್ತಪಡಿಸಿದ್ದಾರೆ.

ರವಿವರ್ಮನ ಕಲಾಪ್ರಭಾವದ ವಿಸ್ತಾರದಿಂದ ನೈಜಕಲಾ ಶೈಲಿಗೆ ಆಕರ್ಶಿಸಲ್ಪಟ್ಟ ಕಾಲದಿಂದ ಹೊರಬರಲು ಬಹಳ ಕಾಲ ಕಾಯಬೇಕಾಯಿತು. ಮೂಲತಃ ಭಾರತೀಯ ಕಲೆ ನೈಜ ಶೈಲಿಯದೆ. ಸ್ವಾತಂತ್ರ್ಯ ಪೂರ್ವದ ಈ ಎಲ್ಲಾ ಕಲಾವಿದರು ಧಾರ್ಮಿಕ ಹಾಗೂ ಪುರಾಣ ವಿಷಯಗಳ ಮೇಲೆಯೇ ಪ್ರೀತಿ ಹಾಗೂ ರವಿವರ್ಮನ ಪ್ರಭಾವ ಇತ್ಯಾದಿಯಾಗಿ ಇವರವೆಲ್ಲ ನೈಜ. ಮನೋವಿಲಾಸಿ ದೃಷ್ಟಿಯ ರಚನೆಗಳು. ಅಂದಿನ ಜನ. ಸಮಾಜದ ಅಭಿರುಚಿ ಕೂಡಾ ನೈಜಕಲೆಯ ಕುರಿತಂತೆ ಹೆಚ್ಚಾಗಿತ್ತು.

೧. ಡಿ. ಜಿ. ಬಡಿಗೇರ :

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನಲ್ಲಿ ಒಂದು ಸಣ್ಣ ಹಳ್ಳಿ ಮಿಶ್ರಿಕೋಟಿ. ೧೯೦೨ ರಲ್ಲಿ ಬಡಿಗತನದ ಕೆಲಸ ಮಾಡುತ್ತಿದ್ದ ಗೂಳಪ್ಪನವರಿಗೆ ಎರಡನೆಯ ಮಗನಾಗಿ ಜನಿಸಿದರು. ಬಡ ಕುಟುಂಬದಲ್ಲಿ ಜನಿಸಿದರೂ ದೇವಪ್ಪರಲ್ಲಿ ಈ ಕಲಾಪ್ರಜ್ಞೆ ಅನುವಂಶಿಕವಾಗಿ. ರಕ್ತಗತವಾಗಿ ಬಂದಿತ್ತು. ಗೂಳಪ್ಪ ಬಡಿಗೇರ ಅವರು ಊರಿಗೆಲ್ಲ ಭರ್ಜರಿ ತೇರು. ಪಲ್ಲಕ್ಕಿ. ಕುಸುರಿಗೆಲಸದ ಚೌಕಟ್ಟಿನ ಬಾಗಿಲುಗಳನ್ನು. ತಾಮ್ರ ಹಿತ್ತಾಳೆಯ ಕೆಲಸವನ್ನೂ ಮಾಡುವುದರಲ್ಲಿ ಸಿದ್ಧಹಸ್ತರು. ಬಾಲ್ಯದಲ್ಲಿಯೇ ತಂದೆಯ ಸಲಹೆಯಂತೆ ಹಳೆಯ ಮೈಸೂರಿನ ದೇವಾಲಯಕ್ಕಾಗಿ ಕಟ್ಟಿಗೆಯ ತೇರೊಂದಕ್ಕೆ ಬೇಕಾದ ಸಿಂಹಾಕೃತಿಗಳನ್ನು ದೇವಪ್ಪರೇ ರಚಿಸಿದರು. ಅವರಲ್ಲಡಗಿದ ಈ ಸುಪ್ತಚೇತನವನ್ನು ಗುರುತಿಸಿದ ಶಾಲೆಯ ಮುಖ್ಯಾಧ್ಯಾಪಕ ತೊರವಿಯವರು ಹಾಗೂ ಡ್ರಾಯಿಂಗ್ ಶಿಕ್ಷಕರಾದ ಮಸಿಯಾರರು ಪ್ರೋತ್ಸಾಹಿಸಿ ಈಗಾಗಲೇ ಎಂಟನೇ ತರಗತಿಯಲ್ಲೆ ಎಲಿಮೆಂಟರಿ ಹಾಗೂ ಇಂಟರಮಿಡಿಯೆಟ್ ಗ್ರೇಡ್ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದ್ದವರನ್ನು ೧೯೨೩ ರಲ್ಲಿ ಮುಂಬಯಿಯ ಸರ್. ಜೆ. ಜೆ. ಸ್ಕೂಲ್ ಆಫ್ ಆರ್ಟ್‌ಗೆ ಹೋಗಲು ಅನುಕೂಲ ಮಾಡಿಕೊಟ್ಟರು. ಮುಂಬಯಿಯಲ್ಲಿ ಸಾಹುಕಾರ ವ್ಯಾಪಾರಸ್ಥರು ಶಂಕರಪ್ಪ ಧಡ್ಡಿ ಎನ್ನುವವರು ಆಶ್ರಯ ನೀಡಿದರು.

ಪ್ರಿನ್ಸಿಪಾಲ್ ಗ್ಲ್ಯಾಡ್‌ಸನ್ ಸಲೋಮನ್ನ ಹಾಗೂ ಇನ್ನಿತರ ಉಚ್ಚ ಮಟ್ಟದ ಕಲಾಶಿಕ್ಷಕರಿಂದ ಮಾರ್ಗದರ್ಶನ ಪಡೆದ ದೇವಪ್ಪನವರು ಸತತ ಪರಿಶ್ರಮದಿಂದ " ೧೯೨೭ ರಲ್ಲಿ ಡ್ರಾಯಿಂಗ್ ಮತ್ತು ಪೇಂಟಿಂಗ್ ಡಿಪ್ಲೋಮಾ ಪದವಿಯನ್ನು ರ್‍ಯಾಂಕಿನಿಂದ ಪಾಸಾಗಿ ' ಡಾಲಿಕರ್ಸ್ ಸೇಠಜಿ ' ಪಾರಿತೋಷಕ ಹಾಗೂ ಸುವರ್ಣ ಪದಕವನ್ನು ಪಡೆದರು. ಈ ಮಧ್ಯದ ಅವಧಿಯಲ್ಲಿಯೇ ಮೇಯೋ ಪದಕ. ಡಿಪ್ಲೋಮಾ ಪದಕ ರಾಜ್ಯಪಾಲರ ವಿಶೇಷ ಪಾರಿತೋಷಕ ಮುಂತಾದವು ದೇವಪ್ಪನವರನ್ನು ಹುಡುಕಿಕೊಂಡು ಬಂದವು. ಆರು ವರ್ಷಗಳ ಕಾಲ ಅಲ್ಲಿ ಅಭ್ಯಾಸ ಮಾಡಿ ನಂತರ ೧೯೨೮ ರಲ್ಲಿ ಬಡಿಗೇರ ಆ ಸಂಸ್ಥೆಯ ' ಫೆಲೋ ' ಆಗಿ ಆಯ್ಕೆಯಾದರು. " [೯೨] ಅಲ್ಲದೆ ದಿಲ್ಲಿಯ ವೈಸ್‌ರಾಯ್ ಹೌಸ್ (ಈಗಿನ ರಾಷ್ಟ್ರಪತಿ ಭವನ) ದ ಗುಮ್ಮಟದ ಮೇಲೆ ಚಿತ್ರಿಸಲು ಸಲೋಮನ್‌ರು ದೇವಪ್ಪನವರಿಗೆ ವಹಿಸಿಕೊಟ್ಟರು. ಅವರ ಕಲಾ ಕೌಶಲ್ಯಕ್ಕೆ ದೇಶ ವಿದೇಶಗಳ ಕಲಾತಜ್ಞರು ಮೆಚ್ಚಿಗೆ ವ್ಯಕ್ತಪಡಿಸಿದರು.

ಬಡಿಗೇರ ಅವರಿಗೂ ಲಂಡನ್ನಿಗೆ ಹೋಗಿ ಉಚ್ಚ ಶಿಕ್ಷಣ ಪಡೆಯಬೇಕೆಂಬ ಆಸೆ " ನಾವು ಹೆಚ್ಚಾಗಿ ಬೆಳಗಿನ ಜಾವ ಇಲ್ಲವೆ ಬೆಳದಿಂಗಳ ಸಂಜೆ ಸಮುದ್ರದ ತೀರಕ್ಕೆ ತಿರುಗಾಡಲು ಹೋಗುತ್ತಿದ್ದೆವು. ಆಗ ಅನೇಕ ದೇಶ ವಿದೇಶದ ಕಲಾವಿದರ ಬಗ್ಗೆ ಕಲೆಯ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದೆವು. ಒಂದು ದಿನ ಹೀಗೆ ತಾವು ವಿದೇಶಕ್ಕೆ ಹೋಗಬೇಕೆಂಬ ಆಸೆಯನ್ನು ನನ್ನ ಮುಂದೆ ಹೇಳಿದರು. ಆಗ ಸಲೋಮನ್‌ರ ಸಲಹೆಯನ್ನು ಪಡೆಯಲು ತಿಳಿಸಿದೆ. ಅದರಂತೆ ಸಲೋಮನ್‌ರು ಒಪ್ಪಿಕೊಂಡು ಸಂತೋಷಪಟ್ಟರು. ಅದರಂತೆ ಇಂಗ್ಲೆಂಡಿನ ರಾಯಲ್ ಅಕಾಡೆಮಿ ಆಫ್ ಆರ್ಟ್‌ಗೆ ಕಳಿಸಿಕೊಡಲು ನಿರ್ಧರಿಸಿದರು. ಅದಕ್ಕೆ ಅವರ ತಂದೆಯಿಂದ ಅಲ್ಪಸ್ವಲ್ಪ ಹಾಗೂ ದೇಸಾಯಿ ಲಿಂಗರಾಜ ಟ್ರಸ್ಟ್‌ನಿಂದ ಹಣಕಾಸಿನ ಸಹಾಯ ದೊರೆಯಿತು. " [೯೩] ಅದರ ಸದುಪಯೋಗ ಪಡೆದುಕೊಂಡು ಎರಡು ವರ್ಷಗಳ ಕಾಲ ಲಂಡನ್ನಿನಲ್ಲಿ ಅಭ್ಯಾಸ ನಡೆಸಿ ' ಗ್ರಾಜ್ಯುಯೇಟ್ ಆಫ್ ರಾಯಲ್ ಅಕಾಡೆಮಿ ಆಫ್ ಆರ್ಟ್ ' (G. R. A. Landon) ಪದವಿಯನ್ನು ೧೯೩೧ ರಲ್ಲಿ ಪಡೆದುಕೊಂಡು ಬಂದರು.

" ಅಲ್ಲಿ ನೆಲೆಸಿದ ಎರಡು ವರ್ಷದ ಅವಧಿಯಲ್ಲಿ ತಮ್ಮ ಕಲಾಪ್ರತಿಭೆಯನ್ನು ಮೆರೆದರು. ಅಲ್ಲದೆ ಮುನ್ನೂರು ಚಿತ್ರಗಳ ಏಕವ್ಯಕ್ತಿ ಕಲಾಪ್ರದರ್ಶನವನ್ನು ಲಂಡನ್ನಿನ ಬ್ಲೂಮ್ಸ್‌ಬರಿ ಗ್ಯಾಲರಿಯಲ್ಲಿ ಏರ್ಪಡಿಸಿದ್ದರು. ಅದರ ಉದ್ಘಾಟನೆಗೆ ದುಂಡುಮೇಜಿನ ಪರಿಷತ್ತಿಗಾಗಿ ಲಂಡನ್ನಿಗೇ ಆಗಮಿಸಿದ್ದ ಮಹಾತ್ಮಾ ಗಾಂಧೀಜಿಯವರನ್ನು ಆಮಂತ್ರಿಸಿದ್ದರು. ಆದರೆ ಕಾರ್ಯ ಒತ್ತಡದಿಂದ ಬರಲಾಗದ್ದಕ್ಕೆ ವಿಷಾದಿಸಿ ಶುಭ ಸಂದೇಶವೊಂದನ್ನು ಮಾತ್ರ ಕಳಿಸಿದರು. ಆ ಉದ್ಘಾಟನೆಯನ್ನು ಅಂತರ್‌ರಾಷ್ಟ್ರೀಯ ಖ್ಯಾತ ಕವಿ ರುದಿಯಾರ್ಡ್ ಕಿಪ್ಲಿಂಗ್ ಮಾಡಿದರು. ಅಲ್ಲದೆ ಆ ಚಿತ್ರಗಳನ್ನು ನೋಡಿ. ' The meeting of the East and West showed a good combination ' ಎಂದು ಪ್ರಶಂಸೆಯನ್ನು ಮಾಡಿದರು. " [೯೪] ಇಂತಹ ಮೇಧಾವಿ ಕಲಾವಿದನು ಲಂಡನ್ನಿನಲ್ಲಿ ' ಇಂಡಿಯಾ ಹೌಸ್ ' ನಲ್ಲಿ ಏರ್ಪಡಿಸಿದ ಏಕವ್ಯಕ್ತಿ

---

೯೨. ಅನ್ನದಾನಿ ಹಿರೇಮಠ : ಡಿ. ಜಿ. ಬಡಿಗೇರ: ಪುಟ ೪

೯೩. ಡಿ. ವಿ. ಹಾಲಭಾವಿ : " My contemporary Artists "

೯೪. ಡಿ. ವಿ. ಹಾಲಭಾವಿ : " My contemporary Artists "

ಕಲಾ ಪ್ರದರ್ಶನದಲ್ಲಿ ಎಷ್ಟೋ ಕೃತಿಗಳು ಮಾರಲ್ಪಟ್ಟವು. " ಕ್ರಿಯೇಶನ್ ಆಫ ತಿಲೋತ್ತಮೆ " ಎಂಬ ಚಿತ್ರ ಅಲ್ಲಿಯ ಎಲ್ಲ ಹೆಸರಾಂತ ಕಲಾವಿದರ ಮನಸೆಳೆಯಿತಲ್ಲದೆ. ಇಂಗ್ಲೆಂಡಿನ ಮಹಾರಾಣಿ ಮೇರಿಯವರು ತಮಗಾಗಿ ಅದನ್ನು ಕೊಂಡುಕೊಂಡರು. ಅದು ಇಂದಿಗೂ ಬ್ರಿಟೀಷ್ ಅರಸೊತ್ತಿಗೆಯ ಕೇಂದ್ರವಾದ ಬಕಿಂಗ್ ಹ್ಯಾಮ್ ಅರಮನೆಯ ಗೋಡೆಯನ್ನು ಅಲಂಕರಿಸಿದೆ. "[೯೫] ಭಾರತಕ್ಕೆ ಬರುವುದಕ್ಕಿಂತ ಮೊದಲು ಫ್ರಾನ್ಸ್ ಮತ್ತು ಇಟಲಿಯಲ್ಲಿ ಕಲಾಪ್ರದರ್ಶನ ಮಾಡಿದರು.

ಲಂಡನ್ನನ್ನು ೧೯೩೧ ರಲ್ಲಿ ಬಿಟ್ಟು ಭಾರತಕ್ಕೆ ಮರಳಿದರು. ' ತಾಯ್ನಾಡಿಗೆ ಬಂದ ಕೆಲವೇ ದಿನಗಳಲ್ಲಿ ಅವರು ಕೈಕೊಂಡ ಮೊದಲ ಕಾರ್ಯ ಮುಂಬಯಿಯಲ್ಲಿ ಹೊಸ ಮಾದರಿಯ ಕಲಾ ಶಾಲೆ ' ನೂತನ ಕಲಾಮಂದಿರ ' ಸ್ಥಾಪಿಸಿದರು. ಕಲಾವಿದರ ಸಂಘಟನೆಯನ್ನು ಮಾಡಿ ಎರಡು ಕಲಾಪ್ರದರ್ಶನಗಳನ್ನು ಏರ್ಪಡಿಸಿದರು. ಒಂದು ಜೆ. ಜೆ. ಸ್ಕೂಲ್ ಆಫ್ ಆರ್ಟ್‌ದಲ್ಲಿ ಇನ್ನೊಂದು ಬೆಳಗಾಂವದಲ್ಲಿ. ಬಡಿಗೇರರ ಎಷ್ಟೋ ಕಲಾಕೃತಿಗಳನ್ನು ಸ್ಕೂಲ್ ಆಫ್ ಆರ್ಟ್‌ದ ಮ್ಯೂಜಿಯಂನ ನಿರ್ದೇಶಕರು ಕೊಂಡುಕೊಂಡರು. ಬೆಳಗಾಂವದ ಲಿಂಗರಾಜ ಕಾಲೇಜಿನ ಪ್ರಿನ್ಸಿಪಾಲ ಡಾ. ಎಸ್. ಸಿ. ನಂದೀಮಠರ ನೇತೃತ್ವದಲ್ಲಿ ' ಕರ್ನಾಟಕ ಆರ್ಟ್ ಸೊಸೈಟಿಯೊಂದನ್ನು ಸಂಘಟಿಸಿದರು. "[೯೬] ಅವರ ಮುಖಾಂತರ ಅನೇಕ ಕಲಾ ಚಟುವಟಿಕೆಗಳನ್ನು ಆರಂಭಿಸಿದರು. ೧೯೩೩ ರಲ್ಲಿ ಬಡಿಗೇರರು ಮುಂಬಯಿ (ಇಂದು ಪಾಕಿಸ್ತಾನದಲ್ಲಿರುವ ಸಿಂಧ್ ಪ್ರಾಂಥವನ್ನೂ ಸೇರಿ) ಪ್ರಾಂತಕ್ಕೇ ಡ್ರಾಯಿಂಗ್ ಮತ್ತು ಕ್ರಾಫ್ಟ್ ಇನ್ಸ್‌ಪೆಕ್ಟರ್ ಹುದ್ದೆಗೆ ನೇಮಕಗೊಂಡರು. ' ತಾವೇ ಸ್ಥಾಪಿಸಿದ ನೂತನ ಕಲಾಮಂದಿರ ' ನಿರ್ದೇಶಕತ್ವವನ್ನು ತ್ಯಜಿಸುವ ಸಮಯ ಬಂತು. ತಮ್ಮೊಡನೆ ಲಂಡನ್ನಿನಲ್ಲಿ ಕಲಿತ ವಿಶ್ವಾಸಿ ಸ್ನೇಹಿತರಾದ ಶ್ರೀ ವಿ. ಆರ್. ರಾವ್ ಅವರಿಗೆ ವಹಿಸಿಕೊಟ್ಟರು. "[೯೭] ಅವರ ಕೆಲವರ್ಷಗಳ ಸೇವೆಯ ನಂತರ ದಂಡಾವತಿಮಠರು ಆ ಕಲಾಮಂದಿರದ ಜವಾಬ್ದಾರಿಯನ್ನು ಹೊತ್ತು ಅನೇಕ ಕಲಾ ವಿದ್ಯಾರ್ಥಿಗಳನ್ನು ಬೆಳೆಸಿದರು.

ಸರಕಾರಿ ಕೆಲಸಕ್ಕೆ ನೇಮಕಗೊಂಡ ಬಡಿಗೇರ ಅವರು ತಮ್ಮ ಕಲಾಪ್ರತಿಭೆಯನ್ನು ಕಲಾಕೃತಿಗಳ ಮೂಲಕ ತೋರಲು ಸಾಧ್ಯವಾಗಲಿಲ್ಲ. ಆದರೆ ಕಲಾಕ್ಷೇತ್ರ ಬೆಳೆದು ಬೆಳಗುವಲ್ಲಿ ಸಫಲವಾಯಿತು. " ಅಂದಿನ ಗೌಣ ಚಿತ್ರಕಲಾ ಶಿಕ್ಷಣ ಪದ್ಧತಿಯನ್ನು ಕಂಡು ಬಹು ನೊಂದುಕೊಂಡ ಬಡಿಗೇರರು ಅದಕ್ಕೆ ಯೋಗ್ಯ ಸ್ಥಾನಮಾನವನ್ನು ನಿರ್ಮಿಸಲು ಯತ್ನಿಸಿದರು. ಎಳೆಯ ಕಲಾವಿದರನ್ನು ಬಾಲ್ಯದಲ್ಲಿಯೇ ಗುರುತಿಸಿ ಅವರಿಗೆ ಯೋಗ್ಯ ತರಬೇತಿಯನ್ನು ನೀಡುವಂತೆ ಸಲಹೆ ಮಾಡಿದರು. ೧೯೫೦ ರಲ್ಲಿ ಚಿತ್ರಕಲೆ ಮತ್ತು ಉಚ್ಚಕಲಾ ಪರೀಕ್ಷೆಗಳ ಕಾರ್ಯದರ್ಶಿಯಾಗಿ. ಪೇಪರ್ ಸೆಟರ್‌ರಾಗಿ ಕಲಾ ಶಿಕ್ಷಣ ಸಲಹಾ ಸಮಿತಿಯ ಸದಸ್ಯರಾಗಿ. ಕಲಾರಂಗದ ಉನ್ನತಿಗೆ ಅವರು ಮಾಡಿದ ಸೇವೆ ಶ್ಲಾಘನೀಯ. ಅಲ್ಲದೇ ಉನ್ನತ ಮಟ್ಟದ ಕಲಾಪ್ರದರ್ಶನಗಳನ್ನು ಏರ್ಪಡಿಸುವಂತೆ ವಿದ್ಯಾರ್ಥಿಗಳಲ್ಲಿ ಕಲಾಭಿರುಚಿ ಬೆಳೆಸುವಲ್ಲಿ ಅವರ ಪಾತ್ರ

---

೯೫. ಡಿ. ವಿ. ಹಾಲಭಾವಿ : " My contemporary Artists "

೯೬. ಡಿ. ವಿ. ಹಾಲಭಾವಿ : " My contemporary Artists "

೯೭. ಡಿ. ವಿ. ಹಾಲಭಾವಿ : " My contemporary Artists "

ಸಂಸ್ಮರಣೀಯವಾದುದು. "[೯೮] ಹೀಗೆ ತಮ್ಮ ಸೃಜನಶೀಲ ಕಲಾಕೃತಿಗಳ ನಿರ್ಮಾಣವನ್ನು ತ್ಯಾಗ ಮಾಡಿ ಕಲಾಕ್ಷೇತ್ರ ಬೆಳೆಯಲು ಅವಿರತವಾಗಿ ದುಡಿದರು. ಇವರ ಬಗ್ಗೆ ಚೆಟ್ಟಿಯವರಿಗೆ ಎಲ್ಲಿಲ್ಲದ ಅಭಿಮಾನ ಹಾಗೂ ಕೃತಜ್ಞತಾ ಭಾವನೆ. ' ಶ್ರೀ ಡಿ. ಜಿ. ಬಡಿಗೇರರವರು ನನಗೆ ಸಾಕಷ್ಟು ಸಹಾಯ ಮಾಡಿದ್ದಾರೆ. ಮುಂಬಯಿಯಲ್ಲಿದ್ದಾಗ ಅವರ ಮನೆಗೆ ಹೋಗುತ್ತಿದ್ದೆ, ಮುಂದೆ ನನ್ನ ಬದುಕಿನಲ್ಲೂ ಸಾಕಷ್ಟು ಅನುಕೂಲತೆಗಳನ್ನು ಮಾಡಿಕೊಟ್ಟವರಲ್ಲಿ ಅಗ್ರಗಣ್ಯರು. ಅವರ ಉಪಕಾರ ನನ್ನ ಮೇಲೆ ಸಾಕಷ್ಟಾಗಿದೆಯೆಂದು ಹೇಳಲು ಅಭಿಮಾನವೆನಿಸುತ್ತದೆ. "[೯೯] ಹೀಗೆ ಎಲ್ಲರೂ ಇವರ ಸಹೃದಯತೆಯನ್ನು ಪ್ರಶಂಸಿಸುವರೆ. ಅನೇಕ ಸಲ ಕಷ್ಟನಷ್ಟಗಳನ್ನು ಅನುಭವಿಸಿ ಕಲಾಕ್ಷೇತ್ರದ ಬೆಳವಣಿಗೆಗಾಗಿ ದುಡಿದು ಇತರರ ದುಃಖಗಳಿಗೆ ಸ್ಪಂದಿಸಿ ಸುಖವನ್ನು ನೀಡಿ ಕಲಾಮಯ ಬದುಕನ್ನು ಬದುಕಿ ಶ್ರೀ ದೇವಪ್ಪನವರು ಸಪ್ಟೆಂಬರ್ ೭. ೧೯೬೭ ರಂದು ಮಿದುಳಿನ ರಕ್ತಸ್ರಾವದಿಂದಾಗಿ ಈ ನಾಡಿನ ಜನತೆಯನ್ನು ಅಗಲಿ ಹೋದರು.

ಬಡಿಗೇರ ಅವರು ಡ್ರಾಯಿಂಗ್ ಮತ್ತು ಕ್ರಾಫ್ಟ್ ಇನ್ಸ್‌ಪೆಕ್ಟರ್ ಆಗುವವರೆಗಿನ ಸ್ವಲ್ಪೇ ಅವಧಿಯಲ್ಲಿ ಚಿತ್ರಗಳಲ್ಲಿ ಪ್ರಮುಖವಾದವುಗಳೆಂದರೆ, ' ದಿ ಟೆಂಪ್ಟೇಶನ್ ಆಫ್ ಬುದ್ಧ, ತಿಲೋತ್ತಮೆ. ಲಂಬಾಣಿ ಹುಡುಗಿ. ಸಾವಿತ್ರಿ ಮತ್ತು ಸತ್ಯವಾನ್. ನಳ-ದಮಯಂತಿ ಮತ್ತು ಮೂಕ. ತಾಜಮಹಲ್ ತಾಜಿನ ಹಿಂದಿನ ಭಾಗ, ತಾಜಕ್ಕೆ ದಾರಿ. ವಿಜಯನಗರ. ಅಜಂತಾ ಎಲ್ಲೋರಾ ಚಿತ್ರಗಳ ಪುನರ್‌ಪ್ರತಿಗಳು. ಬಾದಾಮಿ. ಪಟ್ಟದಕಲ್ಲಿನ ದೇವಸ್ಥಾನಗಳು. ಭಿಕ್ಷುಕ. ಪೂನಾದ ಖಂಡಾಲ ಹಾಗೂ ಇನ್ನೂ ಹಲವಾರು ನಿಸರ್ಗ ಚಿತ್ರಗಳಿವೆ. ಅಜಂತಾ ಶೈಲಿಯ ಚಿತ್ರಗಳು ತುಂಬಾ ಸುಂದರವಾದ ಕಲಾಕೃತಿಗಳಾಗಿವೆ. "[೧೦೦] ಅದರಲ್ಲಿ ' ಏಂಜಲ್ ' ಎಂಬುದು ಒಂದು. ಎಲ್ಲೋರಾದ ಪ್ರತಿಕೃತಿ ಇದನ್ನು ರಾಷ್ಟ್ರಪತಿ ಭವನದ ಗುಮ್ಮಟದ ಮೇಲೆ ಚಿತ್ರಿಸಲಾಗಿದೆ.

ಇವರು ತೈಲ. ಜಲ. ಸೀಸ. ಇಂಡಿಯನ್ ಇಂಕ್ ಮುಂತಾದವು ಮಾಧ್ಯಮಗಳಲ್ಲಿ ಚಿತ್ರ ರಚಿಸಿದ್ದಾರೆ. ಅಲ್ಲದೆ ರೇಖಾಚಿತ್ರಗಳನ್ನು ಚಿತ್ರಿಸಿದ್ದಾರೆ. "ಅಂತಹುಗಳಲ್ಲಿ ಭಾರತೀಯ ಹುಡುಗಿ. ಗಜಪಕ್ಷಿ. ಅಪ್ಸರಾ ಹಾಗೂ ಬಹಳಷ್ಟು ಭಾವಚಿತ್ರಗಳಿವೆ. "[೧೦೧]

ಶ್ರೀ ಚೆಟ್ಟಿಯವರು ಹಾಗೂ ಈ ಎಲ್ಲ ಸಮಕಾಲೀನ ಕಲಾವಿದರು ಆಯ್ದುಕೊಂಡ ಚಿತ್ರಣ ರೀತಿ. ತಂತ್ರಗಾರಿಕೆ ಹಾಗೂ ಒಳನೋಟ ಪ್ರಕೃತಿಯೇ ಬಹುವಾಗಿ ಆಧುನಿಕ-ಪೂರ್ವ ಗುಣಲಕ್ಷಣಗಳನ್ನು ಹೊಂದಿರುವಂತಹವು. ಆದ್ದರಿಂದ ಆಗಿನ ಕಾಲದ ಕಲೆಯ ಮೌಲ್ಯದ ಬಗ್ಗೆ ಎಚ್. ಎ. ಅನಿಲ ಕುಮಾರ ಅವರು ಈ ರೀತಿ ಹೇಳಿದ್ದಾರೆ : " ಇಂದು ನಾವು ಯಾವುದನ್ನು ನಮ್ಮ ' ಸ್ಥಳೀಯ ಕಲೆ ' ಎಂದು ಭಾವಿಸುತ್ತೇವೆಯೋ ಆ ಪ್ರಕಾರವು ಭಾವಚಿತ್ರಗಳು (ಮಧುಗಿರಾಮು) ನಿಸರ್ಗ ಚಿತ್ರಗಳು (ರುಮಾಲೆ ಚೆನ್ನಬಸವಯ್ಯ. ಕೆ. ವೆಂಕಟಪ್ಪ. ಎಸ್. ಹನುಮಯ್ಯ ಇತ್ಯಾದಿ) ಧಾರ್ಮಿಕ

---

೯೮. ಅನ್ನದಾನಿ ಹಿರೇಮಠ : ಡಿ. ಜಿ. ಬಡಿಗೇರ. ಪುಟ ೧೧

೯೯. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೪

೧೦೦. ಅನ್ನದಾನಿ ಹಿರೇಮಠ : ಡಿ. ಜಿ. ಬಡಿಗೇರ. ಪುಟ ೧೪

೧೦೧. ಅನ್ನದಾನಿ ಹಿರೇಮಠ : ಡಿ. ಜಿ. ಬಡಿಗೇರ. ಪುಟ ೧೫

ಸಂಯೋಜನೆಗಳು (ಎಂ. ಎ. ಚೆಟ್ಟಿ. ಎಸ್. ಎಸ್. ಕುಕ್ಕೆ ಇತ್ಯಾದಿ) ಮುಂತಾದವುಗಳನ್ನೊಳಗೊಂಡಿದೆ. ಆದರೆ ಅವರ ಕಾಲದಲ್ಲಿ ಇಂತಹ ಕೃತಿಗಳನ್ನೇ ' ನಿಜವಾದ ಕಲೆ ' ಎಂದು ಭಾವಿಸಲಾಗುತ್ತಿತ್ತು. ಜನಸಾಮಾನ್ಯರೂ ಹಾಗೆಯೇ ಭಾವಿಸುತ್ತಿದ್ದರು. ಜೊತೆಗೆ ಕಲಾಗುರುಗಳಾದ ದಂಡಾವತಿಮಠ. ಪಾವಂಜೆ. ಮಿಣಜಗಿ. ಡಿ. ವಿ. ಹಾಲಭಾವಿ. ಎಂ. ಎ. ಚೆಟ್ಟಿ. ಎಂ. ಟಿ. ವಿ. ಆಚಾರ್ಯ. ಟಿ. ಪಿ. ಅಕ್ಕಿ ಮುಂತಾದವರು ಇಂತಹ ಕಲಾಕೃತಿಗಳನ್ನೇ ' ಗಂಭೀರವಾದ ಕಲೆ ' ಎಂತಲೂ ಪರಿಗಣಿಸಿದ್ದರು. "[೧೦೨] ಈ ಹಿನ್ನೆಲೆಯಲ್ಲಿ ಈ ಕಲಾವಿದರುಗಳ ಚಿತ್ರಗಳ ಬಗ್ಗೆ ಈ ರೀತಿ ಹೇಳಬಹುದು.

ವೀರಭದ್ರಾವತಾರ : ಈ ಚಿತ್ರ ೮'' - ೭'' ಅಳತೆಯದಿದ್ದು ಜಲವರ್ಣ ಮಾಧ್ಯಮದಲ್ಲಿ ಚಿತ್ರಿಸಲಾಗಿದೆ. ಮೂಲತಃ ಚೆನ್ನಬಸವ ಪುರಾಣದಲ್ಲಿ ಬರುವ ಪ್ರಸಂಗವೊಂದರಿಂದ ಇದನ್ನು ಚಿತ್ರಿಸಲಾಗಿದೆ. ಶ್ರೀ ಬಡಿಗೇರರು ನಿವೃತ್ತಿ ಹೊಂದಿದ ನಂತರ ಧಾರವಾಡಕ್ಕೆ ಬಂದ ಮೇಲೆ ಇದರ ರಚನೆ ಆಯಿತೆಂದು ತಿಳಿದುಬಂದಿದೆ. ರಚನಾ ಶೈಲಿ. ತಂತ್ರ. ವರ್ಣ ಲೇಪನ ಎಲ್ಲಾ ಯುರೋಪಿಯನ್ನರ ಅಕಾಡೆಮಿಕ್ ಧಾಟಿಯಲ್ಲಿ ಮೂಡಿ ಬಂದರೂ ವಿಷಯ. ಆ ವಿಷಯದ ಒಳನೋಟ ಭಾವನೆಗಳು ಭಾರತೀಯವು. ವೀರಭದ್ರನ ಅವತಾರವನ್ನು ಇದು ಪ್ರತಿಬಿಂಬಿಸುತ್ತದೆ. ಶಿವನು ದಕ್ಷಬ್ರಹ್ಮನನ್ನು ಸಂಹರಿಸುವ ಸಲುವಾಗಿ ತನ್ನ ಹಣೆಯ ಬೆವರಿನಿಂದ ವೀರಭದ್ರನನ್ನು ಸೃಷ್ಟಿಸಿದನೆಂಬ ಪುರಾಣ ಕಥೆ. ಒಂದು ಕೈಯಲ್ಲಿ ಖಡ್ಗ. ಇನ್ನೊಂದು ಕೈಯಲ್ಲಿ ಬಿಲ್ಲನ್ನು ಹಿಡಿದಿದ್ದರೆ. ಇನ್ನೆರಡು ಕೈಗಳಲ್ಲಿ ತ್ರಿಶೂಲ ಹಾಗೂ ಗ್ರಂಥವೊಂದನ್ನು ಹಿಡಿದಿದ್ದಾನೆ. ಮುಖದಲ್ಲಿ ಭೀಕರ. ರೌದ್ರತೆ ಕಣ್ಣಿನಲ್ಲಿ ವ್ಯಕ್ತವಾಗಿದೆ. ತಿರುವಿದ ಮೀಸೆ ರೌದ್ರತೆಗೆ ಬಿದ್ದ ಕಿರೀಟ. ಸೊಂಟಕ್ಕೆ ರುಂಡಗಳ ಮಾಲೆ. ಕೊರಳಿಗೆ ರುದ್ರಾಕ್ಷಿ. ಲಿಂಗದ ಕಾಯಿ ಹಾಗೂ ಸುತ್ತುವರಿದ ನಾಗರಹಾವು ಮುಂತಾದವು ರೌದ್ರದ ಸಂಕೇತದಂತೆ ಚಿತ್ರಿತಗೊಂಡಿವೆ. ಹಿನ್ನೆಲೆಯಲ್ಲಿ ನಿಸರ್ಗ ಶಿವನ ಕೈಲಾಸ ತಿಳಿನೀಲಿ ಬಣ್ಣದ ಪರ್ವತಗಳ ಸಾಲು. ಹಸಿರು. ಕಂದು ಬಣ್ಣದ ನೆಲ. ಆ ನಿಸರ್ಗದಲ್ಲಿ ಸೃಷ್ಟಿಕರ್ತನಾದ ಶಿವನು ತನ್ನ ಬೆವರ ಹನಿಗಳನ್ನು ಸಿಂಪಡಿಸಿ ವೀರಭದ್ರನನ್ನು ಸೃಷ್ಟಿಸುವಲ್ಲಿ ಆತನ ಕೈಗಳ ತೀವ್ರ ಚಲನೆಯನ್ನು (Force) ಕಾಣುತ್ತೇವೆ. ಆ ರಭಸಕ್ಕೆ ಸೃಷ್ಟಿಯಾದ ಭಯಂಕರಾಕಾರ. ಶಿವನು ತನ್ನ ಕೊರಳ ಹಾವು. ಕೈಯಲ್ಲಿಯ ತ್ರಿಶೂಲ ವೀರಭದ್ರನಿಗೆ ಕೊಟ್ಟಿರುವದು ಇಲ್ಲಿ ಗಮನಾರ್ಹ. ಇಲ್ಲಿಯ ಸಂಯೋಜನೆಯಲ್ಲಿ ಮುಖ್ಯ ವಿಷಯ ವೀರಭದ್ರನಿಗೆ ಸಂಬಂಧಪಟ್ಟಿರುವುದರಿಂದ ಆಕೃತಿಯನ್ನು ಸ್ಪಷ್ಟವಾಗಿ ಚಿತ್ರಿಸಿ ಅದಕ್ಕೆ ಕಾರಣಕರ್ತನಾದ ಶಿವನನ್ನೂ ಹಿನ್ನೆಲೆಯಾಗಿ ಒಂದು ರೀತಿಯಲ್ಲಿ ಮಾಯಾರೂಪವಾಗಿ. ಶಿವನು ದಿವ್ಯಜ್ಞಾನಿ ಎನ್ನುವುದಕ್ಕೆ ಹಿನ್ನೆಲೆಯಾಗಿ ಸೂಕ್ಷ್ಮ ಪ್ರಭಾವಳಿಯನ್ನು ಚಿತ್ರಿಸಿರುವುದನ್ನು ಕಾಣುತ್ತೇವೆ. ಇದರಲ್ಲಿ ಬಡಿಗೇರರ ಕಲ್ಪನಾಸಾಮರ್ಥ್ಯ ಹಾಗೂ ಕಲಾ ಪ್ರತಿಭೆಯ ಪ್ರೌಢತೆ ಎದ್ದು ಕಾಣುತ್ತದೆ. ವಸ್ತುಗಳಿಗೆ ಬಳಸಿದ ವಿವಿಧ ಬಣ್ಣಗಳು ಹಳದಿ. ಅದಕ್ಕೆ ವಿರೋಧವಾದ ನೇರಳೆ ಬಣ್ಣಗಳ ಸಂಯೋಜನೆ. ನೆರಳು-ಬೆಳಕುಗಳ ಸಮತೋಲನ ಪ್ರತಿಯೊಂದು ಸಣ್ಣ ವಸ್ತುವಿಗೂ ಅಷ್ಟೇ ಪ್ರಾಮುಖ್ಯತೆ ನೀಡಿರುವುದನ್ನು ಈ ಚಿತ್ರದಲ್ಲಿ ಗಮನಿಸುತ್ತೇವೆ.

---

೧೦೨. ಎಚ್. ಎ. ಅನಿಲಕುಮಾರ : ಕರ್ನಾಟಕದ ವೃಷ್ಟಿಕೋನ. ಹಿನ್ನೋಟ - ೧ ಪುಟ ೭

೨. ಎಂ. ವಿ. ಮಿಣಜಗಿ :

ಸಪ್ತವರ್ಣಗಳ ಗುಂಪಿನಲ್ಲಿ ಇವರೇ ಹಿರಿಯರು. ಶ್ರೀ ಮಡಿವಾಳಪ್ಪ ಮಿಣಜಗಿ ಅವರು ವ್ಯಾಪಾರಸ್ಥ ಶ್ರೀಮಂತ ಮನೆಯಲ್ಲಿ ಶ್ರೀಯುತ ವೀರಪ್ಪ, ಶ್ರೀಮತಿ ಶರಣವ್ವ ದಂಪತಿಗಳ ಮಗನಾಗಿ ೧೯೦೧ ಜನೇವರಿ ೨೦ ರಂದು ವಿಜಾಪುರದಲ್ಲಿ ಜನಿಸಿದರು. ೧೧ - ೧೨ ವರ್ಷದ ವಿದ್ಯಾರ್ಥಿ ಜೀವನದಲ್ಲಿಯೇ ಸಂಗೀತ. ಚಿತ್ರ ಬಿಡಿಸುವುದು. ಕಾಗದದಿಂದ ಸುಂದರವಾಗಿ ದೋಣಿ ಮಾಡುವುದು. ಗಣಪತಿ, ಬಸವಣ್ಣನಂತಹ ಚಿತ್ರ ಬರೆಯುವುದು. ಹಲವಾರು ಕಲಾಚಟುವಟಿಕೆಗಳಿಂದ ಗುರುಗಳ ಮನ ಮೆಚ್ಚಿಸಿದವರು. ತಮ್ಮ ಪ್ರಾಥಮಿಕ ಮಾಧ್ಯಮಿಕ ಓದನ್ನು ವಿಜಾಪುರದಲ್ಲೇ ಮುಗಿಸಿದರು. ಓದಿದ್ದು ಮರಾಠಿ ಮಾಧ್ಯಮ. ತಂದೆಗೆ ಮಗನು ವಕೀಲನಾಗಬೇಕೆಂಬ ಆಸೆ. ಆದರೆ ಅವರ ಮನಸ್ಸಿಗೆ ವಿರೋಧವಾಗಿ ತಮ್ಮ ಗುರಿಯತ್ತ ಸಾಗಿದ ಮಿಣಜಗಿಯವರು ೧೯೨೧ ರಲ್ಲಿ ಉನ್ನತ ಕಲಾ ಶಿಕ್ಷಣಕ್ಕಾಗಿ ಮುಂಬಯಿಯ ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್‌ನ್ನು ಸೇರಿದರು.

'ಅಲ್ಲಿ ಪರಿಣಿತ ಅತ್ಯಂತ ಉತ್ಕೃಷ್ಟ ಕಲಾ ಶಿಕ್ಷಕರಾದ ದಿ. ಅಗಸಕರ. ತಿರಂದಾದೆ. ರಾವ್ ಬಹದ್ದೂರ ದುರಂಧರ ತಾಸ್ಕರ ಹಾಗೂ ಚೂಡೇಕರ ಮತ್ತಿತರರ ವಿದ್ಯಾರ್ಥಿಯಾಗಿ ಡ್ರಾಯಿಂಗ್ ಮತ್ತು ಪೇಂಟಿಂಗ್ ಕಲಿತರು.' [೧೦೩] "ಆಗ ಕಲಾ ಶಾಲೆಯಲ್ಲಿದ್ದ ಪ್ರಿನ್ಸಿಪಾಲ್ ಗ್ಲ್ಯಾಡ್‌ಸನ್ ಸಲೋಮನ್ನರು ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ತಾವು ಕ್ಯೂರೇಟರ್ ಆಗಿದ್ದ 'ಪ್ರಿನ್ಸ್ ಆಫ್ ವೇಲ್ಸ್' ಮ್ಯೂಸಿಯಂನಲ್ಲಿ ಭಾರತೀಯರ ಕಲಾಕೃತಿಗಳನ್ನು ಸಂಗ್ರಹಿಸಿ ಇಡುತ್ತಿದ್ದರು." [೧೦೪] ಈ ಚಿತ್ರಗಳನ್ನು ಅಲ್ಲಿಯ ವಿದ್ಯಾರ್ಥಿಗಳು ಅಭ್ಯಾಸ ಮಾಡಿ ತಮಗೆ ಬೇಕಾದ ಹಾಗೆ ತಮ್ಮ ಚಿತ್ರಗಳಲ್ಲಿ ಅದನ್ನು ಅಳವಡಿಸಿಕೊಳ್ಳುತ್ತಿದ್ದರು. ಅಂತೆಯೇ "ಮಿಣಜಗಿಯವರು ಸಹ ಹಳೆಯ ಕಲಾವಿದರ (Old Masters) ಚಿತ್ರಗಳು ಹಾಗೂ ರಾಗಮಾಲಾ ಚಿತ್ರಗಳನ್ನು ಅಭ್ಯಸಿಸಲು ಅನೇಕ ಸಾರಿ 'ಪ್ರಿನ್ಸ ಆಫ್ ವೇಲ್ಸ್' ಮ್ಯೂಜಿಯಂಗೆ ಭೇಟಿ ನೀಡುತ್ತಿದ್ದರು." [೧೦೫] ಅಂತೆಯೇ ಮಿಣಜಗಿಯವರ ಸೃಜನ ಶಕ್ತಿ ಗುರುತಿಸುವ ಉತ್ಕೃಷ್ಟ ಚಿತ್ರಗಳೆಂದರೆ ರಾಗಮಾಲಾ ಚಿತ್ರಗಳು.

ತಮ್ಮ ಸತತ ಪ್ರಯತ್ನದಿಂದ ಪರಿಶ್ರಮದಿಂದ ಅಭ್ಯಾಸ ಮಾಡಿ ಆರ್ಟ್‌ಮಾಸ್ಟರ್ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ. ೧೯೨೭ ರಲ್ಲಿ ಅದೇ ಸ್ಕೂಲಿನಿಂದ 'ಚಿತ್ರಕಲೆಯಲ್ಲಿ ಡಿಪ್ಲೋಮಾ' ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ಅವರ ಕಲಾಸಕ್ತಿ ಮತ್ತು ಪ್ರತಿಭೆ ಅವರನ್ನು ವಿದೇಶಕ್ಕೆ ಕರೆದೊಯ್ಯಿತು. ೧೯೩೦ ರಲ್ಲಿ ಅವರು ಉಚ್ಚ ಶಿಕ್ಷಣಕ್ಕಾಗಿ ಲಂಡನ್ನಿನ "ರಾಯಲ್ ಕಾಲೇಜ್ ಆಫ್ ಆರ್ಟ್ಸ್" ನಲ್ಲಿ ಪ್ರವೇಶ ಪಡೆದರು. "ಅಲ್ಲಿ ಬರೀ ಚಿತ್ರಕಲೆಯನ್ನಷ್ಟೇ ಕಲಿಯದೇ. ಫೋಟೋಲಿಥೋ ಕ್ರೊಮೋಲಿಥೋಗ್ರಾಫ್ ಅಭ್ಯಸಿಸಿ ಅದರಲ್ಲಿಯೂ ಪ್ರಶಸ್ತಿ ಪಡೆದು. ಪ್ರಖ್ಯಾತ ವಿಲಿಯಂ ರಾಥನ್‌ಸ್ಟೈನ್ ಅವರ ಶಿಷ್ಯರಾಗಿ ಮೆಚ್ಚುಗೆಯನ್ನು ಗಳಿಸಿದರು." [೧೦೬]

---

೧೦೩. ಡಿ. ವಿ. ಹಾಲಭಾವಿ : " My contemporary Artists "

೧೦೪. Sri J. J. School of Art a hundred years of ils carrer, ಪುಟ ೧೦೪

೧೦೫. ಡಿ. ವಿ. ಹಾಲಭಾವಿ : " My contemporary Artists "

೧೦೬. ಡಿ. ವಿ. ಹಾಲಭಾವಿ : " My contemporary Artists "

ತಾರುಣ್ಯದಲ್ಲಿಯೇ ಕಲಾ ಪ್ರೌಢಿಮೆಯ ಉನ್ನತ ನಿಲುವನ್ನು ಸಂಪಾದಿಸಿದ ಶ್ರೇಯಸ್ಸು ಈ ಕಲಾವಿದರದು. " ಲಂಡನ್ನಿನ ಇಂಡಿಯನ್ ಹೌಸ್. ಇಂಪೀರಿಯಲ್ ಆರ್ಟ್ ಗ್ಯಾಲರಿ ಮತ್ತು ಇನ್ನಿತರ ಅನೇಕ ಪ್ರಮುಖ ಸ್ಥಳಗಳಲ್ಲಿ ಇವರ ಚಿತ್ರಗಳು ಪ್ರದರ್ಶಿಸಲ್ಪಟ್ಟು ಅನೇಕ ಸಹೃದಯಿಗಳ ಮನಸ್ಸನ್ನು ಸೂರೆಗೊಂಡವಲ್ಲದೇ "[೧೦೭] ಅನೇಕ ಬಹುಮಾನ ಪ್ರಶಸ್ತಿಗಳನ್ನು ಪಡೆದವು.

ವಿದೇಶದಿಂದ ಮರಳಿ ಬಂದ ನಂತರ ಮುಂಬಯಿಯ ' ಮಲ್ಬರಿ ಹಿಲ್ ' ನಲ್ಲಿ ತಮ್ಮದೇ ಆದ ಒಂದು ಚಿತ್ರಗಳ ಸ್ಟುಡಿಯೋ ಪ್ರಾರಂಭಿಸಿದರು. ಹೊರದೇಶದಲ್ಲಿ ಅಭ್ಯಾಸ ಮಾಡಿದರೂ ನಮ್ಮ ದೇಶದ ಸಂಸ್ಕೃತಿ ಪರಂಪರೆಯು ಅವರನ್ನು ಆಕರ್ಷಿಸಿತು. ಆಗ ದೇಶೀಯ ಕಲೆಯ ಪ್ರಜ್ಞೆ ಬೆಳೆಯುತ್ತಿತ್ತು. ಆಗ ಅನೇಕ ಗಣ್ಯವ್ಯಕ್ತಿಗಳಾದ ದಿ. ಎಂ. ಎ. ಜಿನ್ನಾ. ಪಂಡಿತ ಎಮ್. ಎಮ್. ಮಾಲವೀಯ. ಡಾ. ವಿಶ್ವೇಶ್ವರಯ್ಯ ಹೀಗೆ ಇನ್ನೂ ಅನೇಕ ಭಾವಚಿತ್ರಗಳನ್ನು ಚಿತ್ರಿಸಿದರು.

೧೯೫೦ ರಲ್ಲಿ ಹುಬ್ಬಳ್ಳಿಯ ' ಫೈನ್ ಆರ್ಟ್ ಸೊಸೈಟಿ ' ಯ ಆಶ್ರಯದೊಂದಿಗೆ ಒಂದು ಕಲಾ ಶಾಲೆಯನ್ನು ಪ್ರಾರಂಭಿಸಿದರು. ಈಗ ಅದೇ ವಿಜಯ ಮಹಾಂತೇಶ ಕಲಾಮಂದಿರವಾಗಿ ವಿಜೃಂಭಿಸುತ್ತಿದೆ. " ಡಾ. ಮಿಣಜಗಿಯವರು ಅಂದು ಶಿಕ್ಷಕರಾಗಿ ಸಲ್ಲಿಸಿದ ಸೇವೆ ಹರಿದು ಅವರಿಂದ ಶಿಕ್ಷಣ ಪಡೆದು ಹೊರಬಂದ ಹಲವಾರು ಕಲಾವಿದರು ನಾಡಿನ ಶ್ರೇಷ್ಠ ಕಲಾವಿದರಾಗಿದ್ದಾರೆ. ೧೯೬೧ ರಲ್ಲಿ ಬೆಂಗಳೂರಿನಲ್ಲಿ " ಡ್ರಾಯಿಂಗ್ ಟೀಚರ್ಸ್ ಟ್ರೇನಿಂಗ್ ಇನ್‌ಸ್ಟಿಟ್ಯೂಟ್ " ಮಿಣಜಗಿಯವರ ಸಲಹೆಯಂತೆ ತೆರೆಯಲ್ಪಟ್ಟಿತು. ಅಂತೆಯೇ ೧೯೬೫ ರಲ್ಲಿ ದಾವಣಗೆರೆಯಲ್ಲಿ ಪ್ರಾರಂಭವಾದ ಚಿತ್ರಕಲಾ ಹಾಗೂ ಕೈಗಾರಿಕೆ ಕಲಾ ಶಾಲೆಯ ಸ್ಥಾಪನೆಯಲ್ಲಿಯೂ ಮಿಣಜಗಿಯವರ ಪಾತ್ರ ಪ್ರಮುಖವಾಯಿತು.

ಅವರ ಕಲಾಸೇವೆಯು ಚಿತ್ರ ರಚಿಸುವುದಕ್ಕಷ್ಟೆ ಮೀಸಲಾಗಿರದೆ ಅದಕ್ಕೆ ಸಂಬಂಧಪಟ್ಟ ಅನೇಕ ಸಂಘ ಸಂಸ್ಥೆಗಳ ಅಧ್ಯಕ್ಷ. ಉಪಾಧ್ಯಕ್ಷರಾಗಿ ನಿರ್ದೇಶಕರಾಗಿ. ಮಾರ್ಗದರ್ಶಕರಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ. ಕರ್ನಾಟಕ ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಉಪಾಧ್ಯಕ್ಷರಾಗಿ. ಕೇಂದ್ರ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ. ಮೈಸೂರು ಸರಕಾರದ ಕಲಾಶಿಕ್ಷಣದ ಸದಸ್ಯರಾಗಿ. ಮೈಸೂರು ದಸರಾ ಪ್ರದರ್ಶನ ಸಮಿತಿಯ ಸದಸ್ಯರಾಗಿ. ಕರ್ನಾಟಕ ರಾಜ್ಯದಲ್ಲಿ ಉಚ್ಚ ಕಲಾ ಶಿಕ್ಷಣದ ಪಠ್ಯ ತರಗತಿಯ ಸಲಹಾ ಅಧ್ಯಕ್ಷರಾಗಿ. ಪರೀಕ್ಷಾ ಮಂಡಳಿಯ ಛೇರ್‌ಮನ್‌ರಾಗಿ. ಕರ್ನಾಟಕದ ವಿಶ್ವವಿದ್ಯಾಲಯದ ಪದವೀಧರರ ಚಿತ್ರಕಲಾ ಅಭ್ಯಾಸದ ಸಮಿತಿಯ ಚೇರಮನ್ನರಾಗಿ ಇಂಡಿಯನ್ ನ್ಯಾಶನಲ್ ಕಮೀಟಿ ಆಫ್ ಇಂಟರ್ ನ್ಯಾಶನಲ್ ಅಸೋಸಿಯೇಷನ್ ಆಫ್ ಆರ್ಟ್. ಯುನೆಸ್ಕೋ ಇವುಗಳ ಸದಸ್ಯರಾಗಿ ರಾಜ್ಯದ ಹಾಗೂ ಕೇಂದ್ರದ ಹಲವಾರು ಸಂಘ ಸಂಸ್ಥೆಗಳ ಸದಸ್ಯರಾಗಿ ಸಲ್ಲಿಸಿದ ಕಲಾಸೇವೆ ಅಮೋಘವಾದದ್ದು.

" ೧೯೬೭ ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿ ನ್ಯೂದಿಲ್ಲಿ ವತಿಯಿಂದ ಜಪಾನದ ಟೋಕಿಯೋ ಪಟ್ಟಣದಲ್ಲಿ ನಡೆದ ಜಗತ್ತಿನ ಐದನೇ ಕಲಾ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ ಕೀರ್ತಿ ಮಿಣಜಗಿಯವರಿಗೆ

---

೧೦೭. ಡಿ. ವಿ. ಹಾಲಭಾವಿ : " My contemporary Artists "

ಸಲ್ಲುತ್ತದೆ. "[೧೦೮] ಅಲ್ಲದೇ ಇವರ ಚಿತ್ರಗಳನ್ನು ಎಲ್ಲರೂ ಮೆಚ್ಚಿಕೊಂಡು ಪ್ರಶಂಸಿಸಿದರು. ದಿಲ್ಲಿಯ ವೈಸ್‌ರಾಯ್ ಹೌಸ್‌ನ ಗುಮ್ಮಟದ ಮೇಲೆ ಇವರಿಗೂ ಚಿತ್ರ ರಚಿಸಲು ಅವಕಾಶ ಸಿಕ್ಕಿತ್ತು. ಇವರ ವಿಷಯ 'ವಾಸ್ತುಶಿಲ್ಪ' ವಾಗಿತ್ತು. ೧೯೫೫ - ೫೬ ರಲ್ಲಿ ಚಾಲುಕ್ಯ ಅರಸರ ಕಾಲದ ಆರನೆಯ ಶತಮಾನದಲ್ಲಿ ಗುಡ್ಡದ ಗುಹೆಯಲ್ಲಿ ರಚಿಸಿದ ಭಿತ್ತಿಚಿತ್ರಗಳನ್ನು (ಪ್ರೆಸ್ಕೋ) ಪ್ರತಿಚಿತ್ರ ರೂಪಿಸಿದರು. ಮುಂಬಯಿಯ ಜೆ. ಜೆ. ಕಲಾ ಶಾಲೆಯಲ್ಲಿ ಭಿತ್ತಿಚಿತ್ರಗಳ ವಿವಿಧ ವಿನ್ಯಾಸಗಳ ಅಧ್ಯಯನದಿಂದಾಗಿ ಅದು ಚೆನ್ನಾಗಿ ಇವರಿಗೆ ಕರಗತವಾಗಿತ್ತು.

ಮಿಣಜಗಿಯವರು ಭಾವಚಿತ್ರ, ನಿಸರ್ಗಚಿತ್ರ ಅನೇಕ ಸಾಮಾನ್ಯ ವಿಷಯಗಳನ್ನೊಳಗೊಂಡ ಸಂಯೋಜನಾ ಚಿತ್ರಗಳನ್ನು ಚಿತ್ರಿಸಿದ್ದಾರೆ. ಈ ಚಿತ್ರಗಳು ಸಂಪೂರ್ಣವಾಗಿ ಯುರೋಪಿಯನ್ ಶೈಲಿ ತಂತ್ರಗಳನ್ನು ಒಳಗೊಂಡಿವೆಯಾದರೂ ಅವರ ಪ್ರತಿಭೆಯನ್ನು ಸ್ಪಷ್ಟಪಡಿಸುತ್ತವೆ.

ಕನ್ನಡದ ಹಿರಿಯ ಸಾಹಿತಿ. ದಿ. ಅ. ನ. ಕೃಷ್ಣರಾಯರು ಹೇಳಿರುವಂತೆ ಮಿಣಜಗಿಯವರ ಚಿತ್ರಕಲೆ ಸಾಮರಸ್ಯ ಸಿದ್ಧಾಂತದ ಪ್ರತೀಕ. ಅವರ ಚಿತ್ರಗಳಲ್ಲಿ ವ್ಯಕ್ತಿಗಳಷ್ಟೇ ನಿಸರ್ಗವೂ ಚೇತನಗೊಂಡಿದೆ. ಅವುಗಳ ಒಂದೊಂದು ಚಲನವಲನವೂ ಯುಗಯುಗಗಳ ಅನುಭವವನ್ನು ಸಾರುತ್ತವೆ. "[೧೦೯] ಮಿಣಜಗಿಯವರು ಸಂಗೀತ ಪ್ರೀಯರಾಗಿದ್ದರಿಂದ ಸಂಗೀತದ ಜ್ಞಾನವನ್ನು ಪಡೆದುಕೊಂಡಂಥ ಇವರು ಆ ರಾಗಗಳ ಭಾವನೆಯನ್ನೂ ತಮ್ಮ ಚಿತ್ರಗಳಲ್ಲಿ ಸೆರೆಹಿಡಿದಿದ್ದಾರೆ. ಇವರ ರಾಗ ಮಾಲಾ ಚಿತ್ರಗಳು ರಜಪೂತ ಚಿತ್ರಗಳನ್ನು ಮತ್ತೆ ನೆನಪಿಸುತ್ತವೆ. ಮಾಲಕಂಸ. ತೋಡಿ. ಮೇಘಮಲ್ಹಾರ. ಭೂಪಾಲಿ ಪಟಮಂಜರಿ. ಸೌರಭ ಹೀಗೆ ೧೫ ರಾಗಗಳ ಮೇಲೆ ಚಿತ್ರಿಸಿರುವ ಚಿತ್ರಗಳು ಅಭೂತಪೂರ್ವ ಭಾರತೀಯ ಮತ್ತು ಪಾಶ್ಚಾತ್ಯ ಶೈಲಿಗಳನ್ನೊಳಗೊಂಡ ತಮ್ಮದೇ ಆದ ರೀತಿಯಲ್ಲಿ ಹಿಂದುಸ್ತಾನಿ ರಾಗ ರಾಗಿಣಿಯರ ಮೇಲೆ ಚಿತ್ರಗಳನ್ನು ಚಿತ್ರಿಸಿದ್ದಾರೆ. ಈ ಎಲ್ಲ ಚಿತ್ರಗಳು ರಜಪೂತ ಶೈಲಿಯ ಪ್ರಭಾವವನ್ನು ಹೊಂದಿವೆ. ಈ ರಾಗಮಾಲಾ ಚಿತ್ರಗಳಲ್ಲಿ "ಶಕ್ತಿಪೂರ್ಣವಾದ ರೇಖೆಯೇ ತಹಳದಿಯಾಗಿದೆ. "[೧೧೦] "ಇದರ ಮೂಲವು ಅಜಂತದ ಕಲೆಯಲ್ಲಿದೆಯೆಂಬುದು ನಿರ್ವಿವಾದದ ಸಂಗತಿ. ಅಜಂತದ ಚಿತ್ರಗಳಷ್ಟು ಇವು ದೊಡ್ಡವಲ್ಲ ನಿಜ. ಆದರೆ ಲೇಖನ ಪದ್ಧತಿ ಮುಖ್ಯವಾಗಿ ರೇಖಾಬಲ ಇವು ಅಜಂತದ ಪರಂಪರೆಯವು. ' ಇವೇ ಚಿತ್ರಗಳನ್ನು ವಿಶಾಲೀಕರಿಸಿದರೆ. ಅಜಂತದ ರೇಖೆಗಳ ಜೀವವೇ ಇವುಗಳಲ್ಲಿಯೂ ಕಾಣುವುದು "[೧೧೧] ಈ ರೀತಿಯ ಚಿತ್ರಗಳನ್ನು ಚಿತ್ರಿಸಲು ಇದೇ ರೀತಿಯ ತಂತ್ರವನ್ನು ಮಿಣಜಗಿಯವರು ಬಳಸಿದ್ದಾರೆ. ಇವರ ಚಿತ್ರಗಳಲ್ಲಿಯೂ ದಟ್ಟವಾದ ಹೊರ ರೇಖೆಯನ್ನು ಕಾಣಬಹುದು.

ಆಯಾ ರಾಗಗಳ ನಾಯಕ ನಾಯಕಿಯರನ್ನು ನಿರ್ಮಿಸಿ ವೇಷ. ಭೂಷಣಗಳನ್ನು ಅವುಗಳಿಗೆ ತಕ್ಕಂಥ ಹಿನ್ನೆಲೆ ಮುನ್ನೆಲೆ ನಿಸರ್ಗ ಸೌಂದರ್ಯವನ್ನು ರಜಪೂತ ಶೈಲಿಯಂತೆ ಚಿತ್ರಿಸಿದ್ದಾರೆ. ಸಂಯೋಜನೆಯ ರೀತಿಯೂ ಭಿನ್ನವಾಗಿದೆ.

---

೧೦೮. ಡಿ. ವಿ. ಹಾಲಭಾವಿ : " My contemporary Artists "

೧೦೯. ಗವೀಶ ಹಿರೇಮಠ : ಎಂ. ವಿ. ಮಿಣಜಗಿ. ಪುಟ ೧೦

೧೧೦. ಶಿವರಾಮ ಕಾರಂತ : ಭಾರತೀಯ ಚಿತ್ರಕಲೆ. ಪುಟ ೪

೧೧೧. ಶಿವರಾಮ ಕಾರಂತ : ಭಾರತೀಯ ಚಿತ್ರಕಲೆ. ಪುಟ ೩೩

ಯಾಕೆಂದರೆ, ತಮ್ಮ ಮನಸ್ಸಿನ ಮೇಲೆ ಯಾವ ರೀತಿ ಆ ರಾಗಗಳ ಪ್ರಭಾವವಾಗಿದೆಯೋ ಅದನ್ನೇ ಚಿತ್ರಿಸಿದ್ದಾರೆ. ಒಂದೇ ರಾಗ ಚಿತ್ರಗಾರರ ಮೇಲೆ ಒಂದೇ ರೀತಿಯ ಪ್ರಭಾವ ಬೀರಿದರೂ. ಅವರ ಕಲ್ಪನೆಗಳು ಮಾತ್ರ ಬೇರೆ ಬೇರೆ ಎಂಬುದು ಮಿಣಜಗಿಯವರ ಚಿತ್ರ ನೋಡಿದಾಗ ಸ್ಪಷ್ಟವಾಗುತ್ತದೆ.

ರಾಗ ಪಟಮಂಜರಿಯ ಒಂದು ಚಿತ್ರ : ನಲ್ಲನಿಗಾಗಿ ಕಾದು ಬೇಸತ್ತ ನಲ್ಲೆ ಹೊರಗೆ ಭಯಂಕರವಾದ ಮೋಡ ಆವರಿಸಿದೆ. ಮಳೆ ಬರುವ ಸೂಚನೆ. ನಲ್ಲೆ ಮನೆಬಿಟ್ಟು ನಲ್ಲನನ್ನರಸುತ್ತ ಹೊರಟುಬಿಟ್ಟಿದ್ದಾಳೆ. ಸಖಿ ಅವಳ ತೋಳು ಹಿಡಿದು ಹೋಗಬೇಡವೆಂದು ಒಳಗೆ ಎಳೆದುಕೊಳ್ಳುತ್ತಿದ್ದಾಳೆ. ನಲ್ಲೆಯ ಮನಸ್ಸಿನ ತಳಮಳ ಇಲ್ಲಿ ವ್ಯಕ್ತವಾಗುತ್ತದೆ. ರಜಪೂತ ಶೈಲಿಯ ವಸ್ತ್ರಾಲಂಕಾರ ಅಲ್ಲಲ್ಲಿ ಹಗುರಾದ ನೆರಳು-ಬೆಳಕಿನ ಛಾಯೆ ಇಲ್ಲಿ ಬಳಸಿರುವ ಬಣ್ಣಗಳು ಪ್ರಖರವಾಗಿದ್ದರೂ ಸಂದರ್ಭಕ್ಕೆ ತಕ್ಕಂತೆ ಭಾವನೆಯೊಂದಿಗೆ ಬಣ್ಣಗಳ ಪ್ರಖರತೆಯ ಕಡೆ ಅಷ್ಟೊಂದು ಲಕ್ಷ ಹರಿಯುವುದಿಲ್ಲ. ಪ್ರಿಯನ ದರ್ಶನಕ್ಕಾಗಿ ಪರಿತಪಿಸುವ ಬಯಕೆ ಇಲ್ಲಿ ಪ್ರಮುಖವಾಗಿದೆ. ಆಕೃತಿಗಳ ಹೊರರೇಖೆ ಜಲವರ್ಣದ ಪಾರದರ್ಶಿಕೆ ಅತ್ಯಂತ ಸುಂದರವಾಗಿ ಚಿತ್ರಿತವಾಗಿದೆ.

ರಜಪೂತ ಶೈಲಿಯ ಇದೇ ರಾಗದ ಚಿತ್ರವನ್ನು ಅವಲೋಕಿಸಿದಾಗ ಭಾವನೆ ಒಂದೇ ಆಗಿದ್ದರೂ ಚಿತ್ರದ ಸಂಯೋಜನೆ. ವರ್ಣಗಳ ಬಳಕೆ ಬೇರೆಯಾಗಿದೆ. ಇದನ್ನು ಸಾಮಾನ್ಯವಾಗಿ ರಾತ್ರಿಯ ಪ್ರಥಮ ಪ್ರಹರದಲ್ಲಿ ಹಾಡುವರು. ಹೀಗೆ ವಿವಿಧ ರಾಗಗಳ ಚಿತ್ರಗಳು ಸಂಗೀತ. ಸಾಹಿತ್ಯ ಮತ್ತು ಚಿತ್ರಗಳನ್ನೊಳಗೊಂಡು ಆ ರಾಗಗಳು ಸೂಚಿಸುವ ವಿರಹ. ವಾತ್ಸಲ್ಯ. ಪ್ರೇಮ ಸಂಭ್ರಮಗಳನ್ನು ಕಾಣುತ್ತೇವೆ. ಮಿಣಜಗಿ ಅವರು ಜಲವರ್ಣ ಹಾಗೂ ತೈಲವರ್ಣ ಈ ಎರಡು ಮಾಧ್ಯಮದಲ್ಲೂ ಸಿದ್ಧಹಸ್ತರು.

೩. ಡಿ. ವಿ. ಹಾಲಬಾವಿ :

ನ್ಯಾಯಾಧೀಶರಾದ ವೀರಭದ್ರಪ್ಪ ಹಾಗೂ ಚನಬಸವ್ವನ ಮಗನಾಗಿ ೧೯೦೭ ನವೆಂಬರ್ ೨೮ ರಂದು ಧಾರವಾಡದಲ್ಲಿ ಜನಿಸಿದರು. ಅವರ ಮನೆಯ ಸುತ್ತ ಮುತ್ತಲಿನ ವಾತಾವರಣ ಕಲಾಮಯವಾಗಿತ್ತು. ಅಂತೆಯೇ ಆ ಪರಿಸರದಲ್ಲಿ ಬೆಳೆದ ಬಾಲಕ ದಾನಪ್ಪನವರಿಗೆ ಕಲಾಸ್ಫೂರ್ತಿಯ ಕೇಂದ್ರವಾಗಿ ಪರಿಣಮಿಸಿತು.

" ಮುನಸಿಫ್‌ರಾಗಿದ್ದ ತಂದೆ ವೀರಭದ್ರಪ್ಪನವರ ಹವ್ಯಾಸ ಪ್ರವಾಸ. ಎಳೆಯ ದಾನಪ್ಪನವರ ಮೇಲೆ ಚಿತ್ರಕಲೆಯ ಮಮತೆಯನ್ನು ಹೆಚ್ಚಿಸಿತು. ಈ ರೀತಿ ಪ್ರವಾಸಕ್ಕೆ ಹೋದಾಗ ನಾಸಿಕದ ಬುದ್ಧಗವಿ. ಹೊಳಲ್ಕೆರೆಯ ಅರಮನೆ. ಓಂಕಾರೇಶ್ವರ ದೇವಸ್ಥಾನ. ನರ್ಮದಾ ನದಿಯ ತೀರದ ನಿಸರ್ಗ ಸೌಂದರ್ಯ ವೀಕ್ಷಿಸಿ ಚಿತ್ರಿಸುವುದು ಅವರ ಬಾಲ್ಯದ ಬಯಕೆಯಾಗಿತ್ತು. " ೧೧೨

ಇವರ ಪ್ರಾಥಮಿಕ ಶಿಕ್ಷಣ ಅಷ್ಟಕ್ಕಷ್ಟೆ ೧೯೧೭ ರಲ್ಲಿ ಪೂನಾದ ಖಾನ ದೇಶ ಜಳಗಾಂವದಿಂದ ಎಲಿಮೆಂಟರಿ ಡ್ರಾಯಿಂಗ್ ಗ್ರೇಡ್ ಪರೀಕ್ಷೆ ಪ್ರಥಮ ಶ್ರೇಣಿಯಲ್ಲಿ ಪಾಸಾದರು. ಇಂಟರ್‌ಮಿಡಿಯೆಟ್ ಡ್ರಾಯಿಂಗ್ ಗ್ರೇಡ್ ಪರೀಕ್ಷೆ

---

೧೧೨. ಡಿ. ವಿ. ಹಾಲಭಾವಿ : " My contemporary Artists "

ಬೆಳಗಾಂವದಿಂದ ಉಚ್ಚ ಶ್ರೇಣಿಯಲ್ಲಿ ಪಾಸಾದರು. ಇವರ ಕಲಾಪ್ರತಿಭೆಯನ್ನು ಕಂಡು ಚಿಕ್ಕೋಡಿಯ ಆರ್. ಸಿ. ಎ. ವಿ. ಸ್ಕೂಲಿನವರು ಇವರನ್ನು ಚಿತ್ರಕಲಾ ಶಿಕ್ಷಕರಾಗಿ ನೇಮಿಸಿಕೊಂಡರು. ಆದರೆ ಉನ್ನತ ಕಲಾವ್ಯಾಸಂಗದ ಬಯಕೆಯನ್ನು ಹೊಂದಿದ್ದ ಹಾಲಭಾವಿಯವರು ಜೂನ್ ೧೯೨೬ ರಲ್ಲಿ ಮುಂಬಯಿಯ ಸರ್. ಜೆ. ಜೆ. ಕಲಾ ಶಾಲೆಯಲ್ಲಿ ಪ್ರವೇಶ ಪಡೆದರು. ಒಂದನೇ ವರ್ಷದ ಚಿತ್ರಕಲಾಭ್ಯಾಸ ಮುಗಿಸಿದರು. ೧೯೨೭ - ೨೮ ರಲ್ಲಿ ಡ್ರಾಯಿಂಗ್ ಶಿಕ್ಷಕರ (ಡಿ. ಟಿ. ಸಿ.) ತರಬೇತಿ ಪಡೆದರು. ೧೯೨೮ ರಲ್ಲಿ ನಿಪ್ಪಾಣಿ ಮುನಿಸಿಪಲ್ ಹೈಸ್ಕೂಲಿನಲ್ಲಿ ಆರು ತಿಂಗಳ ಕಾಲ ಕಲಾಶಿಕ್ಷಕರಾಗಿ ಕೆಲಸ ಮಾಡಿದರು. ಆ ಸಂದರ್ಭದಲ್ಲಿ ತಾಯಿ ಹಾಗೂ ಮಡದಿಯನ್ನು ಕಳೆದುಕೊಂಡರು.

" ಮರಳಿ ಮತ್ತೆ ಜನೇವರಿ ೧೯೨೯ ರಂದು ಸರ್. ಜೆ. ಜೆ. ಕಲಾ ಶಾಲೆಗೆ ಬಂದೆನು. ಶ್ರೀ ಎಸ್. ತಿರಂದಾದ. ಶ್ರೀ ಎ. ಎ. ಭೋಸ್ಲೆ ಈ ಗುರುಗಳ ಮಾರ್ಗದರ್ಶನದಲ್ಲಿ ಎಲಿಮೆಂಟರಿ ಹಾಗೂ ಇಂಟರ್‌ಮಿಡಿಯಟ್ ಚಿತ್ರಕಲೆ ಪಾಸು ಮಾಡಿದೆನು. ೧೯೩೪ ರಲ್ಲಿ ಡ್ರಾಯಿಂಗ್ ಮತ್ತು ಪೇಂಟಿಂಗ್ ಡಿಪ್ಲೊಮಾ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಪಾಸಾದೆನು. ೧೯೩೬ ರಲ್ಲಿ ಕಲಾ ಶಿಕ್ಷಣದ ಆರ್ಟ್ ಮಾಸ್ಟರ್ (ಎ. ಎಮ್.) ಪದವಿ ಪರೀಕ್ಷೆಯನ್ನು ಪಾಸು ಮಾಡಿದೆನು " [೧೧೩] ಎಂದು ಉಲ್ಲೇಖಿಸಿದ್ದಾರೆ.

' ಹಾಲಭಾವಿ ತಮ್ಮ ಐವತ್ತನೆಯ ವರ್ಷಕ್ಕೆ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ತೇರ್ಗಡೆ ಹೊಂದಿ ಮುಂದೆ ಬಿ. ಎ. ವರೆಗೆ ಹೆಚ್ಚಿನ ಶಿಕ್ಷಣ ಪಡೆದುಕೊಂಡದ್ದು ಅವರ ಶಿಕ್ಷಣ ಪ್ರೇಮವನ್ನು ಎತ್ತಿ ತೋರಿಸುತ್ತದೆ. ಇವರಿಗೆ ಇಟಲಿ ಭಾಷೆಯ ಪರಿಚಯವೂವುಂಟು ' [೧೧೪] ಹೀಗೆ ಕಲಾ ಶಿಕ್ಷಣವನ್ನು ಮುಗಿಸಿಕೊಂಡು ಬಂದನಂತರ ಯಾವುದಾದರೊಂದು ಹೊಸದಾದ ಕ್ರಿಯಾಶೀಲವಾದ ಕಾರ್ಯ ಮಾಡಬೇಕೆಂದು ಮನಸ್ಸು ಮಾಡಿದರು. " ಕಲೆಯು ಮಾನವನನ್ನು ಕತ್ತಲೆಯಿಂದ ಬೆಳಕಿನ ಕಡೆಗೆ. ಅಜ್ಞಾನದಿಂದ ಸುಜ್ಞಾನದ ಕಡೆಗೆ ತರುವ ಸಾಧನವೆಂದು ತಿಳಿದು ಅದಕ್ಕಾಗಿ ಮಾನವನ ಬಾಳ ಬೆಳಕಿನ ಸಲುವಾಗಿ. ಕಲಾಸೇವೆಗಾಗಿ ಜೀವನವನ್ನು ಮುಡುಪಾಗಿರಿಸಿದರು.[೧೧೫] ಕರ್ನಾಟಕದಲ್ಲಿ ಕಲಾ ಶಾಲೆ ಇಲ್ಲದ್ದನ್ನು ಕಂಡು ಕಲೆಗಳ ತವರಾಗಿದ್ದ ಧಾರವಾಡದಲ್ಲಿ ೧೯೩೫ ರಲ್ಲಿ ಕಲಾ ಶಾಲೆಯನ್ನು ಪ್ರಾರಂಭಿಸಿದರು. ಅದರಲ್ಲಿ ಕಲಾ ಶಿಕ್ಷಣ ತರಬೇತಿ ನೀಡುತ್ತಿದ್ದರು. " ಚಿತ್ರಕಲೆ. ವಾಣಿಜ್ಯ ಕಲೆ. ಫೋಟೋಗ್ರಾಫಿ. ನೃತ್ಯ. ಸಂಗೀತ. ನಾಟಕ ಮತ್ತು ಕುಶಲ ಕಲೆ (Craft) ಪ್ರಾರಂಭಿಸಿದೆನು. " [೧೧೬] ನಂತರ ಡ್ರಾಯಿಂಗ್ ಟೀಚರ್ಸ್ ತರಬೇತಿ ವರ್ಗ ಪ್ರಾರಂಭಿಸಿದರು. ಹೀಗೆ ಸರ್ವತೋಮುಖವಾಗಿ ಬೆಳೆದ ಕಲಾ ದೇಗುಲ ಮುಂದೆ ೧೯೬೦ ರಲ್ಲಿ ಬೆಳ್ಳಿಹಬ್ಬ ಆಚರಿಸಿತು. ಮುಂದೆ ' ಆರ್ಟ್‌ಗಿಲ್ಡ್ ' ಮಾಸಪತ್ರಿಕೆಯ ಸಂಪಾದಕರಾದರು. " My Contemporary Artists " ಗ್ರಂಥವನ್ನು ಬರೆದು ೧೯೮೧ ರಲ್ಲಿ ಶ್ರೇಷ್ಠ ಕಲಾವಿದ ಆಚರೇಕರ ಅವರ ಅಮೃತಹಸ್ತದಿಂದ ಬಿಡುಗಡೆ ಮಾಡಿಸಿದರು. ಇದೇ ರೀತಿ ' ಸಿಲೋನದ ಸಂದರ್ಶನ ಮತ್ತು ಜಮ್ಮು ಕಾಶ್ಮೀರ ಸಂದರ್ಶನ ಗ್ರಂಥ ಪ್ರಕಟಿಸಿರುವರು.

---

೧೧೩. ಡಿ. ವಿ. ಹಾಲಭಾವಿ : " My contemporary Artists "

೧೧೪. ಎಸ್. ಕೆ. ಹೂಗಾರ : ಡಿ. ವಿ. ಹಾಲಭಾವಿ. ಪುಟ ೯

೧೧೫. ಎಸ್. ಕೆ. ಹೂಗಾರ : ಡಿ. ವಿ. ಹಾಲಭಾವಿ. ಪುಟ ೧೦

೧೧೬. ಡಿ. ವಿ. ಹಾಲಭಾವಿ : " My contemporary Artists "

' ಕಲಾ ದೇಗುಲದ ಆಧಾರಸ್ತಂಭವಾಗಿ ಪ್ರಾಚಾರ್ಯರಾಗಿ. ಕಲಾಯೋಗಿಗಳಾಗಿ ಕಾರ್ಯ ನಿರ್ವಹಿಸುತ್ತಿರುವ ಇವರಲ್ಲಿ ಗುರುತ್ವವನ್ನು ತುಂಬುವ ಗುಣಗಳಾದ ಸದಾಚಾರ. ಮೃದುಸ್ವಭಾವ. ಮತ್ಸರರಹಿತ ಸಹಜಪ್ರೀತಿ-ವಾತ್ಸಲ್ಯಗಳು ಸದಾ ತೆರೆದ ವಿಶಾಲವಾದ ಮನಸ್ಸು ಚಿಲುಮೆಯಂತೆ ಸದಾ ಪುಟಿಯುತ್ತಿತ್ತು. "[೧೧೭] ಇಂತಹ ವ್ಯಕ್ತಿತ್ವವನ್ನು ಹೊಂದಿದ ಹಾಲಭಾವಿಯವರಿಗೆ ತಂದೆಯಂತೆಯೆ ಸಾಂಪ್ರದಾಯಿಕ ಧಾರ್ಮಿಕ ನಿಷ್ಠೆ. ಪುರಾಣ ಕಾವ್ಯಗಳತ್ತ ಗಮನ ಹರಿಯಿತು.


ಇವರು ಅನೇಕ ಭಾವ ಚಿತ್ರ. ಸಂಯೋಜನಾ ಚಿತ್ರ. ನಿಸರ್ಗ ಚಿತ್ರಗಳನ್ನು ತೈಲ ಹಾಗೂ ಜಲವರ್ಣಗಳಲ್ಲಿ ಚಿತ್ರಿಸಿದ್ದಾರಲ್ಲದೇ ಚೆನ್ನಬಸವ ಪುರಾಣ. ಪ್ರಭುಲಿಂಗಲೀಲೆ. ಶಂಕರದಾಸಿಮಯ್ಯ. ಗೋರಖನಾಥ ಮತ್ತು ಬಸವೇಶ್ವರರ ವಾಕ್‌ಯುದ್ಧದ ಚಿತ್ರ ಮತ್ತು ಇತರ ಅನೇಕ ಕಾವ್ಯಗಳಿಗೆ ಕಲ್ಪನಾ ಚಿತ್ರ ಒದಗಿಸಿದ್ದಾರೆ. ಶ್ರೀ ಹಾಲಭಾವಿಯವರ ಸ್ನೇಹವನ್ನು ಕುರಿತು ಶ್ರೀ ಎಂ. ಎ. ಚೆಟ್ಟಿಯವರು ತಮ್ಮ ಒಂದು ಲೇಖನದಲ್ಲಿ ಈ ರೀತಿ ಹೇಳಿದ್ದಾರೆ : " ಶ್ರೀ ಹಾಲಭಾವಿಯವರು ನನಗೆ ಉತ್ತಮ ಮಿತ್ರರಾಗಿರುವರು. ಸಂಗೀತದಲ್ಲಿ ಪ್ರವೀಣರು. ನಾವು ಮುಂಬಯಿಯಲ್ಲಿ ಇದ್ದಾಗ್ಗೆ ಅವರು ನಾವು ಬಾಲಗಂಧರ್ವ ಸಂಗೀತ ನಾಟಕಕ್ಕೆ ಕೂಡಿ ಹೋಗುತ್ತಿದ್ದೆವು. ' ಸ್ವಯಂವರ '. ' ಏಕಚ ಪ್ಯಾಲಾ ' ನಾಟಕವನ್ನು ನೂರಾರು ಸಾರಿ ನೋಡಿದ್ದೇವೆ. ' ಮೇನಕಾ '. ' ವಿದ್ಯಾಹರಣ '. ' ಮಾನಾಪಮಾನ ' ವಗೈರೆ ನಾಟಕಕ್ಕೆ ಹೋಗಿ ಸಂಗೀತದಲ್ಲಿ ತಲ್ಲೀನರಾಗಿ ಬರುತ್ತಿದ್ದೆವು. ಯಾವಾಗಲೂ ಕೂಡೇ ಇರುತ್ತಿದ್ದೆವು. ಬಹಳ ರಸಿಕರು ಸ್ನೇಹಕ್ಕೆ ಒಳ್ಳೇ ಯೋಗ್ಯರಾಗಿದ್ದರು "[೧೧೮] ಇಂತಹ ಸ್ನೇಹವನ್ನು ಎಲ್ಲರೊಂದಿಗೂ ಹೊಂದಿದ್ದರು.

ಮುಂಬಯಿ. ಬೆಂಗಳೂರು. ಹೈದರಾಬಾದ್. ಧಾರವಾಡ. ಮೈಸೂರು. ಮದ್ರಾಸು ಮುಂತಾದ ಪಟ್ಟಣಗಳಲ್ಲಿ ನಡೆದ ಕಲಾವಿದರ ಹಾಗೂ ಕಲಾಶಿಕ್ಷಕರ ಸಮ್ಮೇಳನದಲ್ಲಿ ಭಾಗವಹಿಸಿ ಉಪನ್ಯಾಸ ನೀಡಿದ್ದಾರೆ. ಅನುಭಾವಿಗಳಾದ ಇವರು ಉಚ್ಚಕಲಾ ಪರೀಕ್ಷೆಗಳ ಮಾರ್ಗದರ್ಶಕರಾಗಿ ಮೇಲ್ವಿಚಾರಕರಾಗಿ. ಪರೀಕ್ಷಕರಾಗಿ. ಪ್ರಶ್ನೆಪತ್ರಿಕೆಗಳ ತಯಾರಕರಾಗಿ. ಮುಂಬಯಿ ಪ್ರಾಂತದಲ್ಲಿ. ಕರ್ನಾಟಕದಲ್ಲಿ ಬಹು ವರ್ಷಗಳ ವರೆಗೆ ಸೇವೆ ಸಲ್ಲಿಸಿದ್ದಾರೆ. ಅನೇಕ ಸಂಘ-ಸಂಸ್ಥೆಗಳು ಇವರ ಕಲಾ ಸೇವೆಯನ್ನು ಮನ್ನಿಸಿ ಪ್ರಶಸ್ತಿಗಳನ್ನು ನೀಡಿವೆ. ಅಲ್ಲದೇ ರಾಜ್ಯ ಪ್ರಶಸ್ತಿ ಹಾಗೂ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಲಭಿಸಿವೆ. ಇವರ ಗಮನಾರ್ಹ ಚಿತ್ರಗಳಲ್ಲಿ ಮುಂಚಮುರಿ ರಾಜರ ಚಿತ್ರ. ಮಹಾತ್ಮಾ ಗಾಂಧಿ. ತಾಯಿ-ಮಗು. ಲಮಾಣಿ ಸ್ತ್ರೀ. ಛತ್ರಪತಿ ಶಿವಾಜಿ. ಬಿ. ಡಿ. ಜತ್ತಿ. ಗೋಳಗುಮ್ಮಟ. ಕುಂಬಾರಗಿತ್ತಿ. ಕಾರವಾರ ಸ್ತ್ರೀ. ಸಮುದ್ರ. ನಿಸರ್ಗ ಚಿತ್ರ ಹೀಗೆ ಅನೇಕ ಶ್ರೇಷ್ಠ ಚಿತ್ರಗಳನ್ನು ರಚಿಸಿದ್ದಾರೆ. ನಮ್ಮ ದೇಶದ ಕಲಾ ಪರಂಪರೆಯನ್ನು ಪಾರಂಪರಿಕವಾಗಿ ಉಳಿಸಿಕೊಂಡು ಬಂದಿರುವರು. ಅನೇಕ ಏಕವ್ಯಕ್ತಿ ಕಲಾಪ್ರದರ್ಶನಗಳನ್ನು ಮಾಡಿದ್ದಾರೆ. ಇವರ ಅನೇಕ ಕಲಾಕೃತಿಗಳು ಇಂಗ್ಲಂಡ್. ಫ್ರಾನ್ಸ್. ಅಮೆರಿಕಾ. ಹಾಲಂಡ್. ಸ್ವೀಡನ್ ದೇಶಗಳ ವಸ್ತುಸಂಗ್ರಹಾಲಯಗಳಲ್ಲಿ ನೋಡಲು ದೊರೆಯುತ್ತವೆ.

---

೧೧೭. ಎಸ್. ಕೆ. ಹೂಗಾರ : ಡಿ. ವಿ. ಹಾಲಭಾವಿ : ಪುಟ ೧೨

೧೧೮. ಡಾ. ಎಸ್. ಸಿ. ಪಾಟೀಲ (ಸಂ.) : ಚಿತ್ರಾಕ್ಷಿ. ಪುಟ ೧೮



ಶ್ರೀ ಡಿ.ಜಿ. ಬಡಗೇರ ಅವರ ಕೃತಿ



ಶ್ರೀ ಎಂ.ವ್ಹಿ. ಮಿಣಜಗಿ ಅವರ ಕೃತಿ



ಶ್ರೀ ಡಿ.ವ್ಹಿ.ಹಾಲಭಾವಿ ಅವರ ಕೃತಿ

ಇವರ ಭಾವಚಿತ್ರಗಳು ಉತ್ಕೃಷ್ಟವಾಗಿವೆ. ಅವುಗಳ ವಿಶೇಷತೆಯಲ್ಲಿ ಜೆ. ಜೆ. ಕಲಾ ಶಾಲೆಯ ವರ್ಣಗಳ ಬಳಕೆಯನ್ನು ಕಾಣುತ್ತೇವೆ. ಅದರಲ್ಲಿ ತುಂಬಾ ಹಿತಮಿತವಾಗಿ ನುಣುಪಾಗಿ ಅಕಾಡೆಮಿಕ್ ಶೈಲಿಯಲ್ಲಿ ಲೇಪಿಸಿದ್ದು ಕಂಡುಬರುತ್ತದೆ. ತದನಂತರ ಅಂದರೆ ೧೯೬೫ ರ ನಂತರದ ಚಿತ್ರಗಳಲ್ಲಿ ಇವರ ವರ್ಣಲೇಪನ ಬೇರೆ ರೂಪವನ್ನು ಪಡೆದದ್ದು ಕಂಡುಬರುತ್ತದೆ. ಅದು ಇಂಪ್ರೇಸ್‌ನಿಷ್ಠರಂತೆ ಕುಂಚದ ಹೊಡೆತಗಳು ಕಾಣಿಸುತ್ತವೆ. ಈ ಬದಲಾವಣೆಯನ್ನು ಅವರ ಸ್ಥಿರರೂಪ ಚಿತ್ರಣ ಒಂದರಲ್ಲಿ ಚೆನ್ನಾಗಿ ಗುರುತಿಸಬಹುದು. ಈ ಸ್ಥಿರರೂಪ ಚಿತ್ರಣದಲ್ಲಿ ಹಿನ್ನಲೆಯಲ್ಲಿರುವ ಬಟ್ಟೆಯಲ್ಲಿಯ ನೆರಳು-ಬೆಳಕನ್ನು ಬೇರೆ ಬೇರೆ ಬಣ್ಣಗಳನ್ನು ಒಂದರ ಪಕ್ಕದಲ್ಲಿ ಒಂದು ಇರಿಸಿ ಇಂಪ್ರೆಶನಿಸ್ಟರ್ ತಂತ್ರದಂತೆ ತೋರಿಬರುತ್ತದೆ. " ಇಂಪ್ರೆಷನಿಸಂ ಚಿತ್ರಕಾರರಿಗೆ ತಾವು ದೃಶ್ಯದಲ್ಲಿ ಕಾಣುವ ಬಣ್ಣಗಳು ಮುಖ್ಯ ಅವನ್ನು ಕಂಡಷ್ಟೇ ನಿಜವಾಗಿ ಬರೆಯಬೇಕು ಮತ್ತು ದೃಶ್ಯದಲ್ಲಿ ಕಾಣುವ ಬಣ್ಣಗಳು ನೆರಳು-ಬೆಳಕುಗಳೆರಡರಲ್ಲೂ ಅಸಂಖ್ಯ ಕಡುಪು. ಎಳಸು ಛಾಯೆಗಳು ಕಾಣಿಸುತ್ತವೆಯೇ ಹೊರತು ಅವು ಕಪ್ಪು-ಬಿಳುಪಾಗಿ ಕಾಣಿಸುವುದಿಲ್ಲ. "[೧೨೯] ಈ ಅಂಶ ಅವರ ಈ ಚಿತ್ರದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಇತ್ತೀಚಿನ ಕೆಲವು ಭಾವ ಚಿತ್ರಗಳಲ್ಲಿ ವ್ಯಕ್ತಿಯ ಮುಖ ಮತ್ತು ಬಟ್ಟೆಗಳ ಕೆಲವು ಭಾಗಗಳಲ್ಲಿ ವಿವರಗಳನ್ನು ತೋರಿಸಿದ್ದು ಹಿನ್ನೆಲೆ ಅಷ್ಟೊಂದು ವಿವರ ಮಾಡದೇ ಚಪ್ಪಟೆ ಆಗಿರುವುದು ಕಂಡುಬರುತ್ತದೆ. ಕೆಲವು ನಿಸರ್ಗ ಚಿತ್ರಗಳಲ್ಲಿಯೂ ಕೂಡಾ ಇಂಪ್ರೆಶನಿಜಮ್ ಪ್ರಭಾವ ಕಂಡುಬರುತ್ತದೆ. ಈ ಕೃತಿಗಳು ಹೆಚ್ಚಾಗಿ ಜಲವರ್ಣದಲ್ಲಿವೆ. ಹೀಗೆ ಈ ಎಲ್ಲ ಗೆಳೆಯರು ಒಂದೇ ಕಲಾ ಶಾಲೆಯಲ್ಲಿ ಅಭ್ಯಾಸ ಮಾಡಿದರು. ಮುಂದೆ ತಮ್ಮದೇ ಆದ ಶೈಲಿಯಿಂದ ತಮ್ಮನ್ನು ಕಲಾಕ್ಷೇತ್ರದಲ್ಲಿ ಗುರ್ತಿಸಿಕೊಂಡಿದ್ದಾರೆ. " ಜನರ ಕಣ್ಣು-ಮನಗಳನ್ನು ತುಂಬುವ ಕಲೆಯನ್ನು ಕಲಾವಿದ ಕೊಡಬೇಕು; ಸಮಾಜದ ಸಹಕಾರದ ಔದಾರ್ಯದಿಂದ ಕಲಾವಿದ ಬದುಕಬೇಕು ಎಂದು ಅವರ ಬಲವಾದ ಬಯಕೆಯಾಗಿದೆ. "[೧೩೦] ಎಂದು ಎಸ್. ಕೆ. ಹೂಗಾರ ಅವರು ಉಲ್ಲೇಖಿಸಿದ್ದಾರೆ

೪. ಜಿ. ಎಸ್. ದಂಡಾವತಿಮಠ :

ಶರೀರಕ್ಕೆ ವಯಸ್ಸಾಗಿದ್ದರೂ ಅವರ ಕುಂಚಕ್ಕೆ ಮಾತ್ರ ವಿಶ್ರಾಂತಿ ಎಂಬುದಿರಲಿಲ್ಲ. ನಿವೃತ್ತಿಯ ನಂತರವೂ ರೇಖೆ ಮೂಡಿಸದೇ ಬಣ್ಣ ಲೇಪಿಸದೇ ಇರುತ್ತಿರಲಿಲ್ಲ. ಇದು ಅವರ ಗುರುಗಳು ಜೀವನದುದ್ದಕ್ಕೂ ಕಲಾದೀಕ್ಷೆಯನ್ನು ನಡೆಸಿಕೊಂಡು ಹೋಗಬೇಕೆಂದು ಕಲಾ ವ್ರತವನ್ನು ಅನುಗ್ರಹಿಸಿದ್ದರಂತೆ. ಅವರ ಗುರುಗಳ ಬಗ್ಗೆ ಈ ರೀತಿ ದಂಡಾವತಿಮಠರು ಹೇಳುತ್ತಾರೆ : " ನಮ್ಮ ಗುರುಗಳು ಪ್ರತಿದಿನವೂ ಒಂದಾದರೂ ಕಲಾಕೃತಿಯನ್ನು ರಚಿಸದೆ ಬಿಡುತ್ತಿರಲಿಲ್ಲ. ಕೃತಿ ರಚನೆ ಸಾಧ್ಯವಾಗದಿದ್ದರೆ ಕೊನೆಯ ಪಕ್ಷ ಒಂದು ರೇಖಾಚಿತ್ರವನ್ನಾದರೂ ಬರೆಯದೇ ಊಟ ಮಾಡುತ್ತಿರಲಿಲ್ಲ. ಅವರು ನನಗೂ ಅದನ್ನೇ ಬೋಧಿಸಿದರು. ಅವರ ಆದೇಶದಂತೆ ನಾನು ಈ ವ್ರತವನ್ನು ತಪ್ಪದೇ ನಡೆಸಿಕೊಂಡು ಬಂದಿದ್ದೇನೆ. "[೧೩೧] ಎಂದು ಗುರುಗಳ ಬಗ್ಗೆ ಅತ್ಯಂತ ಭಾವುಕರಾಗಿ ಹೇಳುತ್ತಾರೆ.

---

೧೨೯. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಕಲಾಕೋಶ. ಪುಟ ೩೭

೧೩೦. ಎಸ್. ಕೆ. ಹೂಗಾರ : ಡಿ. ವಿ. ಹಾಲಭಾವಿ. ಪುಟ ೨೮

೧೩೧. ಬಿ. ಕೆ. ಹಿರೇಮಠ : ಕಲಾಗುರು ದಂಡಾವತಿಮಠ. ಪುಟ ೨

ಈ ರೀತಿ ಜೀವನದುದ್ದಕ್ಕೂ ಕಲಾ ಸೇವೆಯನ್ನು ಮಾಡುತ್ತ ಬಂದಂಥ ದಂಡಾವತಿಮಠರ ಹೆಸರು ಗಂಗಾಧರಯ್ಯ. ಬೈಲಹೊಂಗಲದ ಸುಸಂಸ್ಕೃತ ಜಂಗಮ ಮನೆತನದ ದೈವಭಕ್ತಿ. ಧರ್ಮನಿಷ್ಠೆ ಸಾತ್ವಿಕ ಜೀವನ ನಡೆಸುತ್ತಿದ್ದ ಶಂಕರಯ್ಯ ಹಾಗೂ ಗಂಗಾಬಾಯಿಯವರ ಉದರದಲ್ಲಿ ೧೯೦೦ ನೇ ಇಸ್ವಿ ಅಗಸ್ಟ್ ತಿಂಗಳ ೨೧ ನೇ ದಿನಾಂಕದಂದು ಜನ್ಮ ತಾಳಿದರು. ಕಲೆ ಇವರಿಗೆ ರಕ್ತಗತವಾಗಿ ಬಂದುದು. ತಾಯಿ ಹಬ್ಬ ಹರಿದಿನಗಳಲ್ಲಿ ಗೌರಿ, ಗಣೇಶ, ಬಸವಣ್ಣ ಮುಂತಾದ ಮೂರ್ತಿಗಳನ್ನು ಆಸಕ್ತಿಯಿಂದ ಕೈಯಾರೆ ರಚಿಸುತ್ತಿದ್ದರು. ಬಾಲ್ಯದಲ್ಲಿಯೇ ಇವರೂ ಮೂರ್ತಿಗಳನ್ನು ರಚಿಸುತ್ತಿದ್ದರು. ಪ್ರಾಥಮಿಕ - ಮಾಧ್ಯಮಿಕ ಶಿಕ್ಷಣ ಮುಗಿಸಿದ ಇವರಿಗೆ ಅವರಲ್ಲಿರುವ ಸುಪ್ತ ಪ್ರತಿಭೆಗೆ ಕಲಾ ಶಿಕ್ಷಣ ಕೊಡಿಸುವ ಸಾಮರ್ಥ್ಯ ತಂದೆ - ತಾಯಿಗಳಲ್ಲಿರಲಿಲ್ಲ. ಅಂತೆಯೇ ಹಳ್ಳಿಹಳ್ಳಿಗಳನ್ನು ಸುತ್ತಿ ಮೈಲಿ ಚುಚ್ಚುವ ಸರಕಾರಿ ನೌಕರಿ ಪಡೆದರು.

ತಮ್ಮ ಕೆಲಸ ಮುಗಿಸಿದ ನಂತರ ಉಳಿದ ಸಮಯದಲ್ಲಿ ಅವರಲ್ಲಿದ್ದ ಕಲಾಪ್ರತಿಬೆ ಜಾಗೃತವಾಗುತ್ತಿತ್ತು. ಆಗ ಆನಂದಕ್ಕೋಸ್ಕರ ಚಿತ್ರ ಬರೆಯುವುದೊಂದೇ ಕೆಲಸ. ಆದರೆ ಅವುಗಳನ್ನು ನೋಡಿ ಮಾರ್ಗದರ್ಶನ ನೀಡುವವರು ಯಾರೂ ಇರಲಿಲ್ಲ. " ಒಂದು ದಿನ ಅವರಿಗೆ ಯಾರೋ ಅವರ ಚಿತ್ರಗಳನ್ನು ಶ್ರೀ ಎನ್. ಎಮ್. ನರ್ಲೆಕರ್. ಧಾರವಾಡದ ಸರಕಾರಿ ಶಾಲೆಯಲ್ಲಿ ಕಲಾ ಶಿಕ್ಷಕರಿಗೆ ತೋರಿಸಲು ಹೇಳಿದರು. ಅದರಂತೆ. ದಂಡಾವತಿಮಠರು ಧಾರವಾಡಕ್ಕೆ ಬಂದು ಹೆದರುತ್ತಲೇ ಚಿತ್ರಗಳನ್ನು ತೋರಿಸಿದರು. ಅವರು ಆ ಚಿತ್ರಗಳನ್ನು ನೋಡಿ ಆಶ್ಚರ್ಯ ಚಕಿತರಾಗಿ. ಯಾವುದಾದರೂ ಕಲಾ ಪರೀಕ್ಷೆಯನ್ನು ಪಾಸು ಮಾಡಿರುವೆಯಾ ? ಎಂದು ಕೇಳಿದರು. ಇಲ್ಲವೆಂದರು. ಕಣ್ಮುಂದೆ ಇರುವ ಚಿತ್ರಗಳ ನೈಪುಣ್ಯವನ್ನು ಕಂಡು ಸಂತೋಷಿಸಿ ಅವರಲ್ಲಿರುವ ಕಲಾಪ್ರತಿಭೆಯನ್ನು ಗುರ್ತಿಸಿ " ನಿಮ್ಮ ಕೆಲಸ ಚಿತ್ರಕಲೆಯದು. ಈ ಹುದ್ದೆಯನ್ನು ನೀವು ಕೂಡಲೇ ಬಿಡಬೇಕು. ಇಲ್ಲವಾದಲ್ಲಿ ನಿಮ್ಮನ್ನು ನೀವೇ ವಂಚಿಸಿದಂತೆ " [೧೨೨] ಎಂದಾಕ್ಷಣ ದಂಡಾವತಿಮಠರು ಅವರ ಸಲಹೆಯಂತೆ ಮುಂಬಯಿಗೆ ಅವರ ಮಾವನವರಾದ ಕುಲ್ಕರ್ಣಿಯವರ ಸಹಾಯದಿಂದ ಬಂದು ಸರ್. ಜೆ. ಜೆ. ಸ್ಕೂಲ್ ಆಫ್ ಆರ್ಟ್ ೧೯೨೩ ರಲ್ಲಿ ಸೇರಿದರು.

ಕಲಾ ಶಾಲೆಯ ಉತ್ತಮ ವಾತಾವರಣ ಮತ್ತು ಕಲೆಗಾಗಿಯೇ ತಮ್ಮನ್ನು ಅರ್ಪಿಸಿಕೊಂಡಂಥ. ದುರಂಧರ. ಚೂಡೇಕರ. ತಾಸ್ಕರರಂಥ ಶಿಕ್ಷಕರ ಆದರ್ಶಗಳು ದಂಡಾವತಿಮಠರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿ ಸುಪ್ತವಾಗಿದ್ದ ಕಲೆ ಬೆಳಕಿಗೆ ಬರಲು ಕಾರಣರಾದರು. ಅಲ್ಲಿಯೇ ರಬಕವಿಯ ಶ್ರೀ ಗಂಗಾಧರಪ್ಪ ಸಾಹೋಜಿ ಅವರ ಖೇಡಿಯಲ್ಲಿ ವಸತಿ ಆಶ್ರಯ ಪಡೆದರು ಮತ್ತು ಬಿಳೂರು ಮಹಾಸ್ವಾಮಿಗಳು ಅವರಿಗೆ ಈ ಸಂದರ್ಭದಲ್ಲಿ ನೆರವು ನೀಡಿದರು. " [೧೨೩] ಹೀಗೆ ದಂಡಾವತಿಮಠರು ಜೀವನದ ಎಡರು ತೊಡರುಗಳನ್ನು ದಾಟಿ ೧೯೩೧ ರಲ್ಲಿ ತಮ್ಮ ಚಿತ್ರಕಲಾ ಅಭ್ಯಾಸದಲ್ಲಿ ಡಿಪ್ಲೋಮಾ ಪದವಿಯನ್ನು ಗಳಿಸಿದರು.

---

೧೨೨. ಡಿ. ವಿ. ಹಾಲಭಾವಿ : " My contemporary Artists "

೧೨೩. ಡಿ. ವಿ. ಹಾಲಭಾವಿ : " My contemporary Artists "

ದಂಡಾವತಿಮಠರು ಹುಟ್ಟುಕಲಾವಿದರೆಂಬುದನ್ನು ಅವರು ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಗಳಿಸಿದ ಕೀರ್ತಿಯಿಂದಲೇ ಕಂಡುಕೊಳ್ಳಬಹುದು. ಉಚ್ಚ ಕಲಾ ಪರೀಕ್ಷೆಗಳಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಸ್ಮರಣಚಿತ್ರದಲ್ಲಿ ಪ್ರಾವಿಣ್ಯ ಪಾರಿತೋಷಕ ಪಡೆದರು. ೧೯೨೩ ಮತ್ತು ೧೯೨೯ ರಲ್ಲಿ ಇವರ ಜಲವರ್ಣದ ಚಿತ್ರವೊಂದಕ್ಕೆ ಮುಂಬಯಿ ಆರ್ಟ್ ಸೊಸೈಟಿಯವರು ಪ್ರಥಮ ಬಹುಮಾನವನ್ನು ಕೊಡಮಾಡಿದರು. ೧೯೩೮ ರಲ್ಲಿ ಕ್ರಮವಾಗಿ ಮದ್ರಾಸ್ ಮತ್ತು ಮುಂಬಯಿ ಆರ್ಟ್ ಸೊಸೈಟಿಯವರು ಇವರ ಬಳಪದ (Pastel) ವರ್ಣಚಿತ್ರವೊಂದಕ್ಕೆ ಪಾರಿತೋಷಕ ಕೊಟ್ಟು ಪುರಸ್ಕರಿಸಿದರು. ಇದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಏರ್ಪಡಿಸಿದ ಚಿತ್ರಕಲಾ ಪ್ರದರ್ಶನದಲ್ಲಿ ಸುವರ್ಣ ಪದಕವನ್ನೂ ಪಡೆದರು.

" ಜ್ಞಾನಕ್ಕಾಗಿ ಸದಾ ಹಂಬಲಿಸುವ ನಿರುತ್ಸಾಹವನ್ನು ಅರಿಯದ ಮನಸ್ಸು ಗುರುವಾದವನಿಗೆ ಅಗತ್ಯ. ಬಿಂಕ-ಅಹಂಕಾರಗಳು ಗುರು ಚೈತನ್ಯಕ್ಕೆ ಹೊರತಾದ ಗುಣಗಳು. ಸಚ್ಚಾರಿತ್ರ್ಯ ಆತ್ಮೀಯತೆ. ವಾತ್ಸಲ್ಯಗಳು ವ್ಯಕ್ತಿಯಲ್ಲಿ ' ಗುರುತ್ವ ' ವನ್ನು ತುಂಬುವ ಗುಣಗಳು "[೧೨೪] ಅಂತಹ ಒಬ್ಬ ಸದ್ಗುಣಗಳ ಕಲಾಗುರುವಾದವರು. ಈಗಾಗಲೇ ತಿಳಿಸಿದಂತೆ ಶ್ರೀ ಡಿ. ಜಿ. ಬಡಿಗೇರ ಅವರು ಸ್ಥಾಪಿಸಿದ ' ನೂತನ ಕಲಾಮಂದಿರ ' ವ್ಹಿ. ಆರ್. ರಾವ್ ಅವರು ನೋಡಿಕೊಳ್ಳುತ್ತಿದ್ದರು. ಆದರೆ ಅವರು ತಮ್ಮ ಕುಟುಂಬ ಸಮೇತವಾಗಿ ವಿದೇಶದಲ್ಲಿ ನೆಲೆಸುವ ವಿಚಾರ ಮಾಡಿದಾಗ ಆ ಜವಾಬ್ದಾರಿ ಕೆಲಸ ದಂಡಾವತಿಮಠರಿಗೆ ವಹಿಸಿ ಕೊಡಲಾಯಿತು. ಸ್ವತಂತ್ರ ಕಲಾವಿದರಾಗಿಯೋ ಅಥವಾ ಬೇರೆ ಸರಕಾರಿ ನೌಕರಿಯನ್ನು ಮಾಡಬಹುದಾಗಿತ್ತು. ಆದರೆ ಕಲಾಸೇವೆಯೇ ತಮ್ಮ ಧ್ಯೇಯವಾಗಿ ನಿಶ್ಚಯಿಸಿಕೊಂಡ ಅವರು ನೂತನ ಕಲಾಮಂದಿರದ ಪ್ರಿನ್ಸಿಪಾಲರಾದರು. ಶಿಕ್ಷಕರೂ ಆದರು. ಕಲಾಮಂದಿರದ ಆಧಾರಸ್ತಂಭವಾದರು. ಜೆ. ಜೆ. ಸ್ಕೂಲಿಗೆ ಸರಿಸಮಾನವಾಗಿ ನಿಲ್ಲುವಂಥ ಭದ್ರಬುನಾದಿಗೆ ಕಲಾ ಬೋಧೆಯನ್ನು ಮಾಡಿದರು.

ಮುಂಬಯಿಯಂತಹ ಪಟ್ಟಣದಲ್ಲಿ ಬಡತನವನ್ನು ಅಂಟಿಸಿಕೊಂಡು ಕಲಾ ಅಧ್ಯಯನ ಮಾಡಲು ಬಂದ ವಿದ್ಯಾರ್ಥಿಗಳಿಗೆ ತಮ್ಮಿಂದ ಸಾಧ್ಯವಾದ ಎಲ್ಲ ಅನುಕೂಲತೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಿ ಕೊಡುತ್ತಿದ್ದರೆ ವಿನಃ ಶುಲ್ಕಕ್ಕಾಗಿ ಅವರನ್ನೆಂದೂ ನೋಯಿಸಲಿಲ್ಲ. ಈ ವಿಚಾರದಲ್ಲಿ ಅವರ ಪ್ರತಿಯೊಬ್ಬ ಶಿಷ್ಯರೂ ಅವರಿಗೆ ಚಿರಋಣಿ.

" ವಿದ್ಯಾರ್ಥಿಗಳ ಅಭಿಲಾಷೆಯಂತೆ ಬೇರೆ ಬೇರೆ ಪ್ರಾಂತದ ವೇಷ-ಭೂಷಣಗಳನ್ನು ರೂಪದರ್ಶಿಗಳಿಗೆ ತೊಡಿಸಿ ಭಾವಚಿತ್ರಣಕ್ಕೆ ಆಸ್ಪದ ಮಾಡಿಕೊಡುತ್ತಿದ್ದರು. ಹಾಗೆಯೇ ವಿದ್ಯಾರ್ಥಿಗಳ ಬೇರೆ ಬೇರೆ ಗುಂಪುಗಳನ್ನು ಮಾಡಿ ನಿಸರ್ಗ ಚಿತ್ರಣಕ್ಕೂ. ರೇಖಾ ಚಿತ್ರಣಕ್ಕೂ ಸ್ವತಃ ತಾವೇ ಕರೆದುಕೊಂಡು ಹೋಗುತ್ತಿದ್ದರು. ಹೀಗೆ ಮುಂಜಾನೆಯಿಂದ ಸಂಜೆಯವರೆಗೂ ವಿದ್ಯಾರ್ಥಿ ಸಮೂಹದೊಡನಿದ್ದು ಶಿಕ್ಷಣವನ್ನು ನೀಡುತ್ತಿದ್ದರು. "[೧೨೫] ಇಂತಹ ಗುರುವರ್ಯರು ಗಳಿಸಿದ ಶಿಷ್ಯವೃಂದ ಅಪಾರ. ಅವರಲ್ಲಿ ಶ್ರೀ ಕೆ. ಕೆ. ಹೆಬ್ಬಾರ. ಶ್ರೀಯುತರುಗಳಾದ ಎ. ಎ ಅಲಮೇಲಕರ ಎಸ್. ಎಂ.

---

೧೨೪. ಜಿ. ಕೆ. ಹಿರೇಮಠ : ಕಲಾಗುರು ದಂಡಾವತಿಮಠ. ಪುಟ ೯

೧೨೫. ಜಿ. ಬಿ. ಜೋಶಿ. ಕೀರ್ತಿನಾಥ ಕುರ್ತಕೋಟಿ (ಸಂ) : ನಡೆದು ಬಂದ ದಾರಿ : ಪುಟ ೨೪೬೮

ಪಂಡಿತ. ರಘುಾ. ಲಕ್ಷ್ಮಣ ಪೈ. ಗಾಯತೊಂಡೆ. ಬರಾಸ್ಕಾರ್. ದಯಾನಂದ ಶೆಟ್ಟಿ. ಡಿಕೋಸ್ಟಾ ಸಾಬನ್ನವರ ಮುಂತಾದ ಕಲಾವಿದರು ರಾಷ್ಟ್ರೀಯ ಹಾಗೂ ಅಂತರ್ ರಾಷ್ಟ್ರೀಯ ಕಲಾವಿದರೆಂದು ಹೆಸರು ಗಳಿಸಿದ್ದಾರೆ.

ಕಲೆಗಾಗಿ ತಮ್ಮ ಜೀವನವನ್ನು ಮೀಸಲಾಗಿಟ್ಟ ಇವರಿಗೆ ಕರ್ನಾಟಕ ಲಲಿತ ಕಲಾ ಅಕಾಡೆಮಿಯು ೧೯೭೬ ರಲ್ಲಿ ರಾಜ್ಯಪ್ರಶಸ್ತಿ ನೀಡಿತು. ೧೯೨೩ ರಿಂದ ೧೯೪೦ ರ ವರೆಗೆ ಬೆಳಗಾವಿಯ ಕರ್ನಾಟಕ ಆರ್ಟ್ ಸೊಸೈಟಿಯ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದ. ದಂಡಾವತಿಮಠರು ಮುಂಬಯಿಯ ಕಲಾ ಶಿಕ್ಷಣ ಪರೀಕ್ಷೆಗಳಿಗೆ ಪರೀಕ್ಷಕರಾಗಿಯೂ. ಪರೀಕ್ಷಾಮಂಡಳಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. ಬರೋಡಾ ವಿಶ್ವವಿದ್ಯಾಲಯ. ಮುಂಬಯಿ ಕಲಾ ಶಾಲೆಗಳ ಫೇಡರೇಶನ್. ಕರ್ನಾಟಕ ವಿಶ್ವವಿದ್ಯಾಲಯ. ಕರ್ನಾಟಕದ ಉಚ್ಚಕಲಾ ಪರೀಕ್ಷೆಗಳ ಮಂಡಲಿ. ದಾವಣಗೆರೆ ಸ್ಕೂಲ್ ಆಫ್ ಆರ್ಟ್ ಸಂಸ್ಥೆಗಳ ಪರೀಕ್ಷಾ ಮಂಡಳಿ ಇವುಗಳ ಕ್ರಿಯಾಶೀಲ ಸದಸ್ಯರಾಗಿ " [೧೨೬] ಕೆಲಸ ನಿರ್ವಹಿಸಿದ್ದಾರೆ.

ದಂಡಾವತಿಮಠರು ಕಲಾವಿದರಾಗಿಯೂ ಕೂಡಾ ಪರಿಸ್ಥಿತಿಯ ಅನಾನುಕೂಲದಿಂದ ಅಷ್ಟೊಂದು ಕೃತಿಗಳನ್ನು ರಚಿಸಲಿಲ್ಲ. ನೈಜವಾಗಿ (Realistic) ಚಿತ್ರಗಳನ್ನು ಬರೆಯುವುದರಲ್ಲಿ. ಅದರಲ್ಲಿಯೂ ಭಾವಚಿತ್ರಗಳನ್ನು ರಚಿಸುವುದರಲ್ಲಿಯೇ ತಮ್ಮ ಕಲಾ ಪ್ರೌಢಿಮೆಯನ್ನು ತೋರಿಸಿದ್ದಾರೆ. ಅಂದಿನ ದಶಕಗಳ ಯುಗಧರ್ಮದಿಂದ ಇವರೇನೂ ಬೇರೆಯಾಗಿರಲಿಲ್ಲ. ಮುಂಬಯಿ ಜೆ. ಜೆ. ಕಲಾ ಶಾಲೆಯ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ವಿಷಯಗಳಿವು. ಇವರ ಕಲಾತಂತ್ರ ಶೈಲಿಯನ್ನು ಇವರು ರಚಿಸಿದ ಭಾವ ಚಿತ್ರಗಳ ಮೂಲಕವೇ ತಿಳಿಯಲು ಸಾಧ್ಯ. ಇವರ ಚಿತ್ರಗಳಲ್ಲಿ ದಟ್ಟವಾದ ಕುಂಚದ ಎಳೆತಗಳು. ನೇರ ಮತ್ತು ಪ್ರಜ್ವಲ ಬಣ್ಣಗಳ ಲೇಪನ. ಪುನರುಜ್ಜೀವನ ಕಾಲದ ಕಲಾವಿದರ ಕೃತಿಗಳಂತೆ ಕಾಣುತ್ತವೆ.

' ಕಾಶ್ಮೀರಿ ಭಿಕ್ಷುಕ ಎಂಬ ಭಾವ ಚಿತ್ರಚಿತ್ರದಲ್ಲಿ ನೆರಳು-ಬೆಳಕುಗಳನ್ನು ಅತ್ಯಂತ ಉತ್ಕೃಷ್ಟ ರೀತಿಯಲ್ಲಿ ತೋರಿಸಿದ್ದಾರೆ. ಹದಿಹರೆಯದ ಮುಖ. ಮುಖದ ಮೇಲೆ ನೀಳವಾಗಿ ಎದ್ದುಕಾಣುವ ಮೂಗು. ದೀನತೆ ತುಂಬಿದ ಕಣ್ಣುಗಳು. ನೋಡಿದಾಕ್ಷಣ ಕಾಶ್ಮೀರಿ ಎನಿಸುವ ಲಕ್ಷಣಗಳು. ಕುಡಿಮೀಸೆ. ನವುರಾದ ಗಡ್ಡ. ಚಿಂದಿ ಅರಿವೆ. ಕಲಾತ್ಮಕವಾಗಿ ಭಾವನೆಗಳನ್ನು ಸೆರೆ ಹಿಡಿಯುವಂತೆ ಲೇಪಿಸಿದ ವರ್ಣಗಳು. ಅಂಗಾಂಗಗಳ ಸೂಕ್ಷ್ಮತೆ. ಹಣೆಯ ಮೇಲಿನ ನೆರಿಗೆಯೂ ಸಹಿತ ಸ್ಪಷ್ಟವಾಗಿ ಕಾಣುತ್ತದೆ. ಆತನ ಮನೋಗತ ಭಾವನೆಗಳು ಸ್ಫುಟವಾಗಿ ಚಿತ್ರದಲ್ಲಿ ಗೋಚರಿಸುತ್ತವೆ. ವರ್ಣಗಳ ಲೇಪನವೆಲ್ಲ ಯುರೋಪಿಯನ್ನರ ಪ್ರಭಾವವೇ.

" ಕಟ್ಟುನಿಟ್ಟಿನ ಸಂಪ್ರದಾಯ ಪದ್ಧತಿಯಲ್ಲಿ ಅವರು ಕಲಾ ಶಿಕ್ಷಣವನ್ನು ಪಡೆದಿದ್ದರೂ ನವ್ಯಕಲೆಯ ಬಗ್ಗೆ ತಾತ್ಸಾರದ ಮಾತನ್ನಾಡಿದವರಲ್ಲ. ಮೂಲ ತತ್ವವನ್ನರಿಯದೇ ಅಡ್ಡಾದಿಡ್ಡಿಯಾಗಿ ಬೆಳೆಯುವ ನವ್ಯ ಕಲೆಯನ್ನು ಮಾತ್ರ ಅವರು ಒಪ್ಪಿದವರಲ್ಲ. ಭದ್ರವಾದ ತಳಹದಿಯ ಮೇಲೆ ಹೊಸ ಆವಿಷ್ಕಾರಗಳು. ನವೀನ ಪ್ರಯೋಗಗಳು

---

೧೨೬. ಡಿ. ವಿ. ಹಾಲಭಾವಿ : " My contemporary Artists "

ನಡೆಯಬೇಕು. ಅದೇ ಕಲೆಯ ನಿಜವಾದ ವಿಕಾಸ ಎಂಬುದೇ ಅವರ ನಂಬಿಕೆ." [೧೨೭] ಕರ್ನಾಟಕದವರಾದ ದಂಡಾವತಿಮಠರು ಮುಂಬಯಿಯಂಥ ಪ್ರದೇಶದಲ್ಲಿ ಅತ್ಯುತ್ತಮವಾದ ಕಲಾ ಶಾಲೆಯನ್ನು ನಿರ್ಮಿಸಿ ಕರ್ನಾಟಕ ಜನತೆಯ ಹೆಮ್ಮೆಗೆ ಪಾತ್ರರಾಗಿದ್ದಾರೆ. ಇವರು ೧೯೭೮ ನವ್ಹೆಂಬರ್ ೧೫ ರಂದು ಶಿವಾಧೀನರಾದರು. ಆದರೆ ಕಲಾಪ್ರಪಂಚದಲ್ಲಿ ಚಿರಸ್ಮರಣೀಯರಾಗಿ ಉಳಿದಿದ್ದಾರೆ.

೫. ಸಿ. ವ್ಹಿ. ಕಾರಡಗಿ :

ಇವರು ಬೈಲಹೊಂಗಲ ತಾಲೂಕಿನ ಗುರ್ಲಹೊಸೂರಿನ ಶ್ರೀಮಂತ ಮನೆತನದ ಶ್ರೀ ವೀರಬಸಪ್ಪ ಹಾಗೂ ಶ್ರೀಮತಿ ಶಿವಾಯವ್ವ ಅವರ ಮಗನಾಗಿ ಜನಿಸಿದರು. ಇವರು ಒಟ್ಟು ಐದು ಜನ ಗಂಡು ಮಕ್ಕಳು ಅದರಲ್ಲಿ ಕೊನೆಯವರೇ ಶ್ರೀ ಸಿ.. ವ್ಹಿ. ಕಾರಡಗಿಯವರು. ಒಳ್ಳೆಯ ಸಂಸ್ಕಾರ. ಸಂಸ್ಕೃತಿ ಬಾಲ್ಯದಿಂದಲೇ ದೊರೆಯಿತು. ಇದೇ ಅವರ ಶಿಸ್ತಿನ ಬದುಕಿಗೆ ಕಾರಣವಾಯಿತು.

ಇವರು ಬಾಲ್ಯ ಶಿಕ್ಷಣ ಬೆಳಗಾಂವನಲ್ಲಿ ಮುಗಿಸಿದರು. ಬಾಲ್ಯದಲ್ಲಿಯೇ ಕಲೆಯ ಬಗ್ಗೆ ಆಸಕ್ತಿಯುಳ್ಳವರಾಗಿದ್ದರು. ಮುಂದೆ ಚಿತ್ರಕಲಾ ಅಭ್ಯಾಸಕ್ಕಾಗಿ ಮುಂಬಯಿಯ ಸರ್ ಜೆ. ಜೆ. ಕಲಾ ಶಾಲೆಯನ್ನು ಸೇರಿದರು. " ಮೊದಲಿನಿಂದಲೂ ನಾವಿಬ್ಬರೂ ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ ಮುಂಬಯಿಯಲ್ಲಿ ಕಲಿತು ಡಿಪ್ಲೋಮ ಇನ್ ಪೇಂಟಿಂಗ ಪಾಸಾದೆವು " [೧೨೮] ಎಂದು ಡಿ. ವ್ಹಿ. ಹಾಲಭಾವಿಯವರು ಉಲ್ಲೇಖಿಸಿರುವಂತೆ ಕಾರಡಗಿಯವರು ಸಹಿತ ೧೯೨೬ ರಲ್ಲಿ ಮುಂಬಯಿಯ ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ ಪ್ರವೇಶವನ್ನು ಪಡೆದಿದ್ದಾರೆ. ಯುರೋಪಿಯನ್ ಹಾಗೂ ಆಗಿನ ಕಲಾಗುರುಗಳ ಪ್ರಭಾವ ಇವರ ಮೇಲೂ ಸಾಕಷ್ಟಾಗಿದೆ.

ಡಿಪ್ಲೋಮಾ ಮುಗಿಸಿದ ನಂತರ ಮುಂದೆ ಬೆಳಗಾವಿಯ ಸರದಾರ್ ಹೈಸ್ಕೂಲಿನಲ್ಲಿ ಡ್ರಾಯಿಂಗ ಶಿಕ್ಷಕರಾಗಿ ಕೆಲಸ ನಿರ್ವಹಿಸಿದರು. ಅಲ್ಲದೆ " ಬಿ. ಇಡ್. ಕಾಲೇಜಿಗೂ ವಾರಕ್ಕೆ ಒಂದು ಸಾರಿ ಡ್ರಾಯಿಂಗ ಕಲಿಸಲು ಹೋಗುತ್ತಿದ್ದರು. ಪಾಠ ಹೇಳಿಕೊಡುವುದರಲ್ಲಿ ಬಹಳ ಆಸಕ್ತಿಯನ್ನು ಹೊಂದಿದವರಾಗಿದ್ದರು " [೧೨೯] ಅಲ್ಲದೇ ಕರ್ನಾಟಕದಿಂದ ಮುಂಬಯಿಗೆ ಚಿತ್ರಕಲಾಭ್ಯಾಸಕ್ಕೆಂದು ಹೋಗುವವರಿಗೆಲ್ಲ ಬಹಳ ಸಹಾಯವನ್ನು ಮಾಡುತ್ತಿದ್ದರು. " ಕಾರಡಗಿ ಅವರು ಒಂದು ರೀತಿಯಲ್ಲಿ ನನಗೆ ಗುರುಗಳು ಹೌದು. ಜೆ. ಜೆ. ಸ್ಕೂಲ್ ಆಫ್ ಆರ್ಟ್ಸಗೆ ಪ್ರವೇಶ ಪಡೆಯಬೇಕೆಂದರೆ ಮೊದಲಿಗೆ ಕೆಲವು Specimen (ಕರಡು) ಚಿತ್ರಗಳನ್ನು ಚಿತ್ರಿಸಿ ಕಳಿಸಬೇಕಾಗುತ್ತಿತ್ತು. ನಂತರ ಇಂಟರವ್ಯುವ್‌ಗೆ ಕರಿಯುತ್ತಿದ್ದರು. ಅಂತಹ ಸಂದರ್ಭದಲ್ಲಿ ಕಾರಡಗಿಯವರು ಚಿತ್ರಗಳನ್ನು ಯಾವ ರೀತಿ ಚಿತ್ರಿಸಬೇಕು ಎಂಬುದನ್ನು ತಿಳಿಸಿಕೊಟ್ಟು ನನಗೆ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸನಲ್ಲಿ ಪ್ರವೇಶ ದೊರಕಿಸಿಕೊಡುವಲ್ಲಿ ಸಹಾಯ ಮಾಡಿದ್ದರು " [೧೩೦] ಎಂದು ವ್ಹಿ. ಸಿ. ಮಾಲಗತ್ತಿಯವರು ಇಂದಿಗೂ ನೆನೆಯುತ್ತಾರೆ.

---

೧೨೭. ಬಿ. ಕೆ. ಹಿರೇಮಠ : ಕಲಾಗುರು ದಂಡಾವತಿಮಠ. ಪುಟ ೧೫

೧೨೮. ಎಚ್. ಜಿ. ಮುಲ್ಲಾ (ಸಂ.) : ಸ್ಕೂಲ್ ಆಫ್ ಆರ್ಟ್ಸ. ಧಾರವಾಡ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ : ಪುಟ ೪೯

೧೨೯. ವ್ಹಿ. ಸಿ. ಮಾಲಗತ್ತಿ ಯವರೊಂದಿಗೆ ಸಂದರ್ಶನ. ದಿನಾಂಕ ೧೬-೧೨-೨೦೦೧. ಬೆಳಗಾವ

೧೩೦. ವ್ಹಿ. ಸಿ. ಮಾಲಗತ್ತಿ ಯವರೊಂದಿಗೆ ಸಂದರ್ಶನ. ದಿನಾಂಕ ೧೬-೧೨-೨೦೦೧. ಬೆಳಗಾವ

ರಾಜ್ಯ ಪುನರ್ಘಟನೆಯ ನಂತರ ಮೈಸೂರ ರಾಜ್ಯದಲ್ಲಿ ಕಲಾಶಿಕ್ಷಣವು ತೀರ ಅವನತಿಗಿಳಿದಿತ್ತು. ಆಗ ೧೯೬೧ ರ ಕಲಾ ಶಿಕ್ಷಣ ಮಂಡಳಿ ರಚನೆಯಾಯಿತು. ಕಲಾ ಶಿಕ್ಷಣದ ಪರೀಕ್ಷೆಗಳು ಇಲ್ಲಿಯೇ ನಡೆಯುವಂತಹ ವ್ಯವಸ್ಥೆಯಾಯಿತು. ಆ ಸಂದರ್ಭದಲ್ಲಿ ಕಾರಡಗಿಯವರು " ಆರ್ಟ ಎಜುಕೇಶನ್ ಇನ್ಸಪೆಕ್ಟರ್ ' ಆಗಿ ನೇಮಕಗೊಂಡರು. " ಅತ್ಯಂತ ಎತ್ತರದ ಕಟ್ಟುಮಸ್ತಾದ ನಿಲುವು ಯುರೋಪಿಯನ್‌ರಂತೆ ಯಾವಾಗಲೂ ಪ್ಯಾಂಟು ಕೋಟು ಧರಿಸುತ್ತಿದ್ದರು. ಶಾಲೆಯೊಳಗೆ ತಪಾಸಣೆಗೆ ಬಂದರೆ ಎಲ್ಲರೂ ಭಯಪಡುತ್ತಿದ್ದರು. ಆದರೆ ಅಷ್ಟೇ ಮೃದು. ಸರಳ. ನೇರ ಸ್ವಭಾವದ ವ್ಯಕ್ತಿತ್ವ ಅವರದಾಗಿತ್ತು".[೧೩೧] ಎಂದು ವ್ಹಿ. ಸಿ. ಮಾಲಗತ್ತಿಯವರ ಅಭಿಪ್ರಾಯವಾಗಿದೆ.

ಕಾರಡಗಿಯವರು ಸಮಕಾಲೀನರಂತೆ ನೈಜ ಶೈಲಿಯಲ್ಲೇ ಭಾವಚಿತ್ರ. ಸಂಯೋಜನಾ ಚಿತ್ರ ಹಾಗೂ ನಿಸರ್ಗ ಚಿತ್ರಗಳನ್ನು ತೈಲ ಹಾಗೂ ಜಲವರ್ಣಗಳಲ್ಲಿ ಚಿತ್ರಿಸಿದ್ದಾರೆ. ಹೆಚ್ಚಾಗಿ ಇವರು ಭಾವಚಿತ್ರಗಳನ್ನು ಚಿತ್ರಿಸಿಕೊಟ್ಟಿದ್ದಾರೆ. ಅಲ್ಲದೇ ಕಲಾ ಶಿಕ್ಷಣದ ಕಡೆ ಗಮನ ಹರಿಸಿದ್ದರಿಂದ ಇವರು ಚಿತ್ರಿಸಿದ ಚಿತ್ರಗಳು ಅತಿ ವಿರಳ. " ಒಳ್ಳೆ ಕಲಾವಿದರೂ ಹೌದು. ಹಾಗೂ ಚನ್ನಬಸವಪುರಾಣಕ್ಕೆ ಸಂಬಂಧಿಸಿದಂತೆ ಚಿತ್ರಗಳನ್ನು ಮಾಡಿಕೊಟ್ಟಿದ್ದಾರೆ. ಕೆಲವು ಪ್ರದರ್ಶನಗಳಲ್ಲಿ ಬಹುಮಾನಗಳನ್ನು ಸಹಿತ ಪಡೆದಿದ್ದಾರೆ ".[೧೩೨]

ವ್ಹಿ. ಸಿ. ಮಾಲಗತ್ತಿಯವರ ಹೇಳಿಕೆಯಂತೆ " ಕಾರಡಗಿಯವರು ವಿದ್ಯಾರ್ಥಿದೆಸೆಯಲ್ಲಿದ್ದಾಗಲೇ ಬಹಳ ಚಿತ್ರಗಳನ್ನು ರಚಿಸುತ್ತಿದ್ದರಲ್ಲದೇ ಅವುಗಳನ್ನು ಕಲಾ ಪ್ರದರ್ಶನಕ್ಕೂ ಕಳಿಸಿ ಕೊಡುತ್ತಿದ್ದರಂತೆ ಆದರೆ ಬೆಳಗಾಂವಿಗೆ ಬಂದ ಮೇಲೆ ಅವರು ಯಾವ ಕಲಾ ಪ್ರದರ್ಶನವನ್ನೂ ಮಾಡಲಿಲ್ಲ".[೧೩೩] ಹೀಗಾಗಿ ಅವರ ಚಿತ್ರಗಳು ಅವರ ಮನೆಯಲ್ಲಿಯೂ ನೋಡಲು ಸಿಗುವದಿಲ್ಲ.

ಕಾರಡಗಿಯವರು ಎಂ. ಕೆ. ಹುಬ್ಬಳ್ಳಿಯ ಶ್ರೀಮತಿ ಅನ್ನಪೂರ್ಣಾ ಎಂಬವರನ್ನು ಮದುವೆಯಾದರು ಆದರೆ ಅವರಿಗೆ ಮಕ್ಕಳಾಗಲಿಲ್ಲ. ಮೈಸೂರ ರಾಜ್ಯದ ಡ್ರಾಯಿಂಗ ಇನ್ನಪೆಕ್ಟರರಾಗಿ ನಿವೃತ್ತಿ ಹೊಂದುವದಕ್ಕಿಂತ ಮೊದಲೇ ಅನಾರೋಗ್ಯದ ಕಾರಣದಿಂದ ೧೬-೩-೧೯೬೬ ರಂದು ಬೆಂಗಳೂರಿನಲ್ಲಿ ತೀರಿಕೊಂಡರು.

ಸಾಮಾಜಿಕ ಹಾಗೂ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ಕೆಲವು ಚಿತ್ರಗಳನ್ನು ರಚಿಸಿದ್ದಾರೆ. ಇವರ ಸಂಯೋಜನಾ ಚಿತ್ರಗಳಲ್ಲಿಯ ಆಕೃತಿಗಳು ಅತ್ಯಂತ ಶಕ್ತಿಯುತವಾದವು. ಚಿತ್ರದಲ್ಲಿ ಪ್ರಮುಖವಾದ ಆಕೃತಿಗೆ ಪ್ರಕಾಶಮಾನವಾದ ವರ್ಣಗಳನ್ನು ಬಳಸುತ್ತಿದ್ದರು. ಉಳಿದ ಸುತ್ತಲೂ ಇರುವ ಆಕೃತಿಗಳಿಗೆ ಗೌಣವಾಗಿ ಅಷ್ಟೇ ಮಬ್ಬಾಗಿ ವರ್ಣಗಳನ್ನು ಬಳಸುತ್ತಿದ್ದರು. ಅಷ್ಟೇ ಲಯಬದ್ಧವಾದ ರೇಖೆಗಳು. ವರ್ಣಮೇಳ ಎಂಥವರ ಮನಸ್ಸನ್ನು ಸೂರೆಗೊಳ್ಳುತ್ತದೆ. ಭಾವ ಚಿತ್ರಗಳು ಅಷ್ಟೇ ಉತ್ಕೃಷ್ಟವಾಗಿವೆ. ಚರ್ಮದ ನೈಜತೆಯಲ್ಲಿ ಜೆ. ಜೆ. ಕಲಾಶಾಲೆಯ ವರ್ಣಗಳ ಬಳಕೆಯನ್ನು ಕಾಣುತ್ತೇವೆ. ವರ್ಣವನ್ನು ಹಿತಮಿತವಾಗಿ ಮಿಶ್ರಣಮಾಡಿ ನುಣುಪಾಗಿ ಲೇಪಿಸಿರುವುದನ್ನು ಕಾಣಬಹುದು.

---

೧೩೧. ವ್ಹಿ. ಸಿ. ಮಾಲಗತ್ತಿ ಯವರೊಂದಿಗೆ ಸಂದರ್ಶನ. ದಿನಾಂಕ ೧೬-೧೨-೨೦೦೧. ಬೆಳಗಾವ

೧೩೨. ಎಚ್. ಜಿ. ಮುಲ್ಲಾ (ಸಂ.) : ಸ್ಕೂಲ್ ಆಫ್ ಆರ್ಟ್ಸ. ಧಾರವಾಡ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ : ಪುಟ ೪೯

೧೩೩. ವ್ಹಿ. ಸಿ. ಮಾಲಗತ್ತಿ ಯವರೊಂದಿಗೆ ಸಂದರ್ಶನ. ದಿನಾಂಕ ೧೬-೧೨-೨೦೦೧. ಬೆಳಗಾವ

ಚೆನ್ನಬಸವ ಪುರಾಣಕ್ಕಾಗಿ ಚಿತ್ರಿಸಿಕೊಟ್ಟ ಚಿತ್ರ ಇದನ್ನು ೧೯೩೪ ರಲ್ಲಿ ಚಿತ್ರಿಸಿದ್ದಾರೆ. " ಅಂಧಕಾಸುರನ ಓಲಗ " [೧೩೪] ಶಿವನ ಕೃಪೆಯಿಂದ ಹಿರಣ್ಯಕಶಪುವಿಗೆ ದೊರೆತ ಅಂಧಕಾಸುರನು ಬೆಳೆದಂತೆ ದೇವತೆಗಳಿಗೆ ಉಪಟಳ ಜಾಸ್ತಿಯಾಯಿತು. ದೇವಲೋಕವನ್ನೇ ಗೆಲ್ಲಲು ಬಯಸಿ, ಎಲ್ಲ ರಾಕ್ಷಸರ ಓಲಗವನ್ನು ಕರೆದ. ಆಸಂದರ್ಭದಲ್ಲಿ ನಾರದ ಬಂದು ಶಿವನೇ ನಿನ್ನ ಸಂಹಾರಕ್ಕಾಗಿ ಬರುತ್ತಿರುವುದಾಗಿ ತಿಳಿಸಿದಾಗ ಅಂಧಕಾಸುರ ಕೋಪಗೊಂಡು ಯುದ್ಧ ಸಾರಿದನು. ಅಷ್ಟರಲ್ಲಿ ಅಲ್ಲಿಗೆ ಬಂದ ಪ್ರಹ್ಲಾದನು. ಶಿವನೇ ನಿನ್ನನ್ನು ಮಾಡಿರುವನು ಆತನ ವಿದುರು ಯುದ್ಧ ಸಲ್ಲದು ಎಂದು ಹೇಳಿದನು. ಈ ಸನ್ನಿವೇಶದ ದೃಶ್ಯವಿದು.

ಚಿತ್ರದಲ್ಲಿ ಅಂಧಕಾಸುರನ ಓಲಗ ನಡೆದಿದೆ. ಸಿಂಹಾಸನದ ಮೇಲೆ ಅಂಧಕಾಸುರ ಹಾಗೂ ನಾರದ ಆಸೀನರಾಗಿದ್ದಾರೆ. ಇಕ್ಕೆಲೆಗಳಲ್ಲಿ ರಾಕ್ಷಸರು ಶಸ್ತ್ರಸಮೇತವಾಗಿ ಕುಳಿತಿದ್ದಾರೆ. ಮಧ್ಯದಲ್ಲಿ ಪ್ರಹ್ಲಾದನು ರಾಕ್ಷಸನಿಗೆ ಯುದ್ಧ ಸಲ್ಲದು ಎಂದು ಕೈಮಾಡಿ ಹೇಳುತ್ತಿದ್ದಾನೆ. ಹಿನ್ನೆಲೆಯಲ್ಲಿ ಚಾಮರ ಬೀಸುತ್ತಿರುವ ಪರಿಚಾರಿಕೆಯರು ನಿಂತಿದ್ದಾರೆ. ಪ್ರಹ್ಲಾದನ ಮಾತಿಗೆ ಅಂಧಕಾಸುರನ ವ್ಯಂಗ್ಯದ ನಗೆಭಾವವಿದೆ. ಉಳಿದ ಸಭಿಕರ ಮುಖದಲ್ಲಿಯೂ ಅದೇ ತಿರಸ್ಕಾರದ ಭಾವನೆ ಇದ್ದು ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿದ್ದಾರೆ. ಆಕೃತಿಗಳು ಅವರ ಗುಣ. ಸ್ವಭಾವಗಳಿಗನುಗುಣವಾಗಿ ಚಿತ್ರಿಸಿದ್ದಾರೆ. ಕಾರಡಗಿಯವರು ಇಲ್ಲಿ ಪ್ರಮುಖ ಆಕೃತಿಗಳಾದ. ಪ್ರಹ್ಲಾದ. ನಾರದ ಹಾಗೂ ಅಂಧಕಾಸುರನಿಗೆ ಮಾತ್ರ ಪ್ರಕಾಶಮಾನವಾದ ವರ್ಣಗಳಿಂದ ಚಿತ್ರಿಸಿದ್ದಾರೆ. ಉಳಿದ ಜನರನ್ನು ಗೌಣವಾಗಿ ಮಸುಕಾಗಿ ಚಿತ್ರಿಸಿದ್ದಾರೆ. ಸಂಯೋಜನೆಯಲ್ಲಿ ನೋಡುಗನ ದೃಷ್ಟಿ ಪ್ರಮುಖ ವ್ಯಕ್ತಿಗಳ ಮೇಲೆ ನೆಟ್ಟು ನಂತರ ಸುತ್ತೆಲ್ಲ ಹರಿಯುತ್ತದೆ. ನೆಲಹಾಸು ಅದರ ಮೇಲಿನ ನಕ್ಷೆ ಎಲ್ಲವನ್ನು ವಿವರವಾಗಿ ಚಿತ್ರಿಸಿದ್ದಾರೆ. ಹಿತಮಿತವಾದ ಛಾಯಾಂಕಣ ವಿದೆ. ಪ್ರಖರ ಹಾಗೂ ಸೌಮ್ಯ ವರ್ಣಗಳ ಮೇಳಾಪವಿದೆ. ಇದೊಂದು ಉತ್ಕೃಷ್ಟ ಸಂಯೋಜನಾ ಚಿತ್ರವಾಗಿದೆ. ಈ ಚಿತ್ರವನ್ನು ಚನ್ನಬಸವ ಪುರಾಣದ ೫೧೫ ನೇ ಪುಟದಲ್ಲಿ ನೋಡಬಹುದು.

ಕಾರಡಗಿಯವರ ಬಗ್ಗೆ ಎಲ್ಲಿಯೂ ಲೇಖನಗಳು ಬರದೆ ಇರುವುದರಿಂದ ಹಾಗೂ ಅವರಿಗೆ ಮಕ್ಕಳು ಇಲ್ಲದೆ ಇರುವುದರಿಂದ ಅವರ ವಿವರವಾದ ಮಾಹಿತಿ ದೊರೆಯದ ಕಾರಣ. ಅವರ ನಿಕಟವರ್ತಿಗಳ ಸಂದರ್ಶನದ ಮೂಲಕ ಸಂಕ್ಷಿಪ್ತವಾಗಿ ಇಲ್ಲಿ ಅವರ ಬಗ್ಗೆ ಹೇಳಲು ಸಾಧ್ಯವಾಗಿದೆ.

೬ ಅಮೀನ ಸಾಹೇಬ ಕಮಡೋಳಿ :

ಕಲಾವಿದ ಅಮೀನ ಸಾಹೇಬ ಕಮಡೋಳಿ ಸುಮಾರು ೧೯೦೦ ರಲ್ಲಿ ಲಕ್ಷ್ಮೇಶ್ವರದ ಸುಸಂಸ್ಕೃತ ಮನೆತನದಲ್ಲಿ ಜನಿಸಿದ್ದರು. ವಿದ್ಯಾರ್ಜನೆಗಿಂತಲೂ ಚಿತ್ರಕಲೆಯಲ್ಲಿ ಆಸಕ್ತಿ ಹೆಚ್ಚಾಗಿತ್ತು. ಈ ಬಾಲಕನ ಕಲಾಭಿಲಾಷೆಯನ್ನು ಗುರ್ತಿಸಿದ ಹಿತೈಷಿಗಳು ಮುಂಬಯಿಯ ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್ ಸೇರಲು ಸಲಹೆ ಮಾಡಿದರು. ತಂದೆ-ತಾಯಿಯನ್ನು ಕಳೆದುಕೊಂಡಿದ್ದ ಕಮಡೋಳಿಗೆ ಅಣ್ಣ ಇಮಾಮಸಾಹೇಬನೇ ಆಶ್ರಯವಾಗಿ ಬಂದ. ಅವರು ಆ ಕೊರತೆಯನ್ನು ನೀಗಿಸಿದರು.

---

೧೩೪. ವೀರಭದ್ರಪ್ಪ ಹಾಲಭಾವಿ (ಸಂ.) ವಿರೂಪಕ್ಷ ಪಂಡಿತ ವಿರಚಿತ : ಚೆನ್ನಬಸವ ಪುರಾಣ. ಪುಟ ೫೧೫

೧೯೧೮ ರಲ್ಲಿ ಮುಂಬಯಿಗೆ ಪ್ರಯಾಣ ಬೆಳೆಸಿದರು. ಅಲ್ಲಿಯ ಕಲಾವಾತಾವರಣ ಇವರ ಪ್ರತಿಭೆಗೆ ಸ್ಫೂರ್ತಿದಾಯಕವಾಯಿತು. ೧೯೨೩ ರಲ್ಲಿ ಅವರು ' ಆರ್ಟ್‌ಮಾಸ್ಟರ್ ' ಪರೀಕ್ಷೆಯನ್ನು ಪ್ರಥಮ ವರ್ಗದಲ್ಲಿ ಪಾಸಾದರು. ತಮ್ಮ ವಿದ್ಯಾರ್ಥಿ ಜೀವನದುದ್ದಕ್ಕೂ ಪ್ರತಿಭಾ ಪುರಸ್ಕಾರದ ಶಿಷ್ಯ ವೇತನಗಳನ್ನು ಪಡೆದಿದ್ದರು. ಪ್ರತಿಯೊಂದು ಕಲಾಪ್ರದರ್ಶನದಲ್ಲಿ ಕಲಾಕೃತಿಗಳಿಗೆ ಪ್ರಶಸ್ತಿ. ಬಹುಮಾನ ಪಡೆಯುತ್ತಿದ್ದರು. ಹೀಗೆ ವಿದ್ಯಾರ್ಥಿಯಾಗಿ ಒಂದೆರಡು ವರ್ಷಗಳಲ್ಲಿ ಕಮಡೋಳಿ ಒಬ್ಬ ಪ್ರತಿಭಾವಂತ ಕಲಾವಿದರಾಗಿ ಹೆಸರಾದರು. ೧೯೨೦ ರಲ್ಲಿ ಅವರು ಅಡ್ವಾನ್ಸ್ ಪೇಂಟಿಂಗ್ ಅಭ್ಯಾಸ ಮಾಡುತ್ತಿರುವಾಗ ಭಿತ್ತಿಚಿತ್ರ ರಚನಾ ಅಭ್ಯಾಸವನ್ನು ಕೈಕೊಂಡಿದ್ದರು. ಅದರಲ್ಲಿ ಅಸಾಧಾರಣ ಪ್ರಾವಿಣ್ಯವನ್ನು ಸಾಧಿಸಿದರು. ಐದನೇ ವರ್ಷದ (ಈಗಾಗಲೇ ಹೇಳಿರುವಂತೆ ಆಗಿನ ೫ ನೇ ವರ್ಷದ ಕಲಾಭ್ಯಾಸ ಈಗಿನ ಡಿಪ್ಲೋಮಾಕ್ಕೆ ಸಮ. ಚಿತ್ರಕಲೆಯಲ್ಲಿ ಡಿಪ್ಲೋಮಾ ಪದವಿ ಕೊಡಲು ಆರಂಭಿಸಿದ್ದು. ೧೯೨೨ ರಿಂದ ಈಚೆಗೆ) ಕಲಾಭ್ಯಾಸವನ್ನು ಪೂರೈಸಿ. ಅಲ್ಲಿಯೇ ಕಲಾ ಶಿಕ್ಷಕರಾಗಿ, ಕೃತಿಗಳನ್ನು ರಚಿಸಿ ದೇಶಾದ್ಯಂತ ನಡೆಯುತ್ತಿದ್ದ ಪ್ರಮುಖ ಮತ್ತು ಪ್ರಖ್ಯಾತ ಕಲಾ ಪ್ರದರ್ಶನಗಳಿಗೆ ಕಳಿಸಿಕೊಡುತ್ತಿದ್ದರು. " ಭಾಗವಹಿಸಿದ ಸುಮಾರು ೧೧ ವರ್ಷಗಳ ಅವಧಿಯಲ್ಲಿ ಬಂಗಾರ. ೧೩ ಬೆಳ್ಳಿ ಪದಕ. ೨ ಕಂಚಿನ ಪದಕ ೧೪ ಹಣದ ಬಹುಮಾನ ೫೦ ರಿಂದ ೨೦೦ ರೂ. ಹಾಗೂ ೨೬ ಅತ್ಯಂತ ಪ್ರಮುಖ ಪ್ರಶಸ್ತಿಪತ್ರಗಳನ್ನು ಪಡೆದಿದ್ದಾರೆ. "[೧೩೫] ಇಂತಹ ಪ್ರಶಸ್ತಿಗಳನ್ನು ಸಿಮ್ಲಾ. ನೈನಿತಾಲ. ಮುಂಬಯಿ. ಮದ್ರಾಸ್. ಮೈಸೂರು ಮತ್ತು ಬೆಂಗಳೂರು ಪಟ್ಟಣಗಳ ಕಲಾ ಸಂಸ್ಥೆಗಳು ಕೊಡಮಾಡಿವೆ. ಇವರ ಚಿತ್ರಗಳು ಲಂಡನ್ನಿನಲ್ಲಿಯೂ ಪ್ರದರ್ಶಿತಗೊಂಡಿವೆ.

" ಯಾವುದೇ ಕಲಾವಿದ ತನ್ನ ಆಸಕ್ತಿಯ ಯಾವುದೋ ಒಂದು ವಿಷಯದಲ್ಲಿ ತನಗೆ ಇಷ್ಟವಾದ ಒಂದು ಮಾಧ್ಯಮದಲ್ಲಿ ಪ್ರೌಢಿಮೆ. ನೈಪುಣ್ಯಗಳನ್ನು ಪಡೆಯುವದು ಸಾಮಾನ್ಯ ಮತ್ತು ಸಾಧ್ಯ. ಆದರೆ ಕಮಡೋಳಿಯ ಅಯಸ್ಕಾಂತದಂತಹ ಪ್ರತಿಭೆ. ಸರ್ವಗ್ರಾಹಿಯಾದ ಆಸಕ್ತಿ. ಅದರೊಟ್ಟಿಗೆ ಸೃಜನಶೀಲತೆ. ಪ್ರಯೋಗಶೀಲತೆಗಳು ಹಾಸುಹೊಕ್ಕಾಗಿ ಬೆಳೆದುನಿಂತ ವ್ಯಕ್ತಿತ್ವ. ಅಂತೆಯೇ ಕಲೆಯ ಯಾವ ವಿಷಯವಾದರೂ ಸರಿ. ಯಾವ ಮಾಧ್ಯಮವಾದರೂ ಸರಿ. ಆತ್ಮವಿಶ್ವಾಸದಿಂದ ಚಿತ್ರಿಸಬಲ್ಲ ಕಲಾವಂತಿಕೆ ಅವರಿಗೆ ದೈವದತ್ತವಾಗಿತ್ತು "[೧೩೬] ಎಂಬ ಬಿ. ಕೆ. ಹಿರೇಮಠವರ ಹೇಳಿಕೆ. ಅವರ ಚಿತ್ರಗಳನ್ನು ನೋಡಿದಾಗ ಸತ್ಯವೆನಿಸುತ್ತದೆ. ಅಂತೆಯೇ ನಿಸರ್ಗ ಚಿತ್ರಗಳು. ಭಾವಚಿತ್ರಗಳು. ಸಂಯೋಜನೆಗಳು. ಮುಂತಾದ ಕಲಾ ವಿಷಯಗಳು ಅದರಂತೆ ತೈಲವರ್ಣ. ಜಲವರ್ಣ. ಮೇಣವರ್ಣ. ಹುಡಿವರ್ಣ. ಮಾಧ್ಯಮ ಯಾವುದೇ ಆಗಿರಲಿ ಕಮಡೋಳಿಯವರ ಕಲಾ ನೈಪುಣ್ಯದಿಂದ ಅಪೂರ್ವ ಕಲಾಕೃತಿಗಳು ನಿರ್ಮಾಣವಾಗುತ್ತಿದ್ದವು. ಆದರೆ ಕಮಡೋಳಿಯವರಿಗೆ ವಿದ್ಯಾರ್ಥಿ ದೆಸೆಯಿಂದಲೂ ಪ್ರಿಯವಾದ ವಿಷಯ ನಿಸರ್ಗ ಚಿತ್ರಣ.

ಮುಂಬಯಿಯ ಸುತ್ತಮುತ್ತಲಿನ ಎಲ್ಲ ನಿಸರ್ಗ ರಮಣೀಯತೆಯನ್ನು ತಮ್ಮ ಕಲಾಕೃತಿಗಳಲ್ಲಿ ಸೆರೆಹಿಡಿದಿದ್ದಾರೆ. ತಮ್ಮ ಚಿತ್ರಗಳ ಗುಣಾವಗುಣಗಳನ್ನು ಸ್ನೇಹಿತರೊಂದಿಗೆ ಚರ್ಚೆ ಮಾಡುತ್ತಿದ್ದರು. " ಇಂತಹ ಸಂದರ್ಭದಲ್ಲಿ ಅವರು

---

೧೩೫. ಡಿ. ವಿ. ಹಾಲಭಾವಿ : " My contemporary Artists "

೧೩೬. ಬಿ. ಕೆ. ಹಿರೇಮಠ : ಅಮೀನ ಸಾಹೇಬ ಕಮಡೋಳಿ. ಪುಟ ೨

ಹೇಳುತ್ತಿದ್ದ ಮಾತುಗಳು ಗಮನಾರ್ಹ. ನಿಸರ್ಗ ಚಿತ್ರರಚನೆ ಬರೀ ಗುಡ್ಡ. ಗಿಡ. ಮೋಡಗಳನ್ನು ಚಿತ್ರಿಸುವುದಲ್ಲ. ಬದಲಾಗಿ ಆಯಾ ಪ್ರದೇಶದ ಪರಿಸರದ ವೈಶಿಷ್ಟ್ಯಗಳನ್ನು ಚಿತ್ರದಲ್ಲಿ ತುಂಬಬೇಕಲ್ಲದೆ ಅದರಲ್ಲಿ ಗಾಳಿ ಸುಳಿದಾಡುವ ಅನುಭವವೂ ಆಗಬೇಕು. ಮಳೆ, ಬಿಸಿಲು, ಮೋಡ ಕವಿದ ವಾತಾವರಣ ಪ್ರತಿಯೊಂದರ ಅನುಭವವು ಚಿತ್ರದಿಂದ ನಮಗಾಗಬೇಕು. ಅಲ್ಲದೆ ನಾವು ಸಧ್ಯ ಇರುವ ವಾತಾವರಣವನ್ನು ಮರೆಯುವಂತೆ ಮಾಡಿ ಚಿತ್ರದಲ್ಲಿರುವ ವಾತಾವರಣದೊಡನೆ ಒಂದಾಗುವ ಅನುಭವವನ್ನು ಅವು ತಂದುಕೊಡಬೇಕು. "[೧೩೭] ಎನ್ನುತ್ತಿದ್ದರು. ಕಮಡೋಳಿ ಒಬ್ಬ ಶ್ರೇಷ್ಠ ದರ್ಜೆಯ ನಿಸರ್ಗಚಿತ್ರಗಾರ ರೆನಿಸಿದ್ದಾರೆ.

ಸುಂದರ ನಿಸರ್ಗ ದೃಶ್ಯಗಳಿಂದ ಆವೃತ್ತವಾದ ಹಿಮಾಲಯದ ಕೆಲವುಭಾಗ. ಕಾಶ್ಮೀರ. ಸಿಮ್ಲಾ. ನೈನಿತಾಲ. ಮಹಾಬಳೇಶ್ವರ. ಆಗ್ರಾ. ಮುಂಬಯಿ. ಗೋವಾ ಮತ್ತು ಕರ್ನಾಟಕದ ನಿಸರ್ಗ ಚಿತ್ರಗಳನ್ನು ಕಮಡೋಳಿ ರಚಿಸಿದ್ದುಂಟು. ದಿ. ಅನಕ್ಕ ಅವರು ಕಮಡೋಳಿಯ ನಿಸರ್ಗ ಚಿತ್ರಗಳನ್ನು ಮೆಚ್ಚಿ ಆ ಬಗ್ಗೆ ವಿವರಗಳನ್ನೊಳಗೊಂಡ ಲೇಖನವನ್ನೇ ಬರೆದಿದ್ದಾರೆ. ಅವರ ನಿಸರ್ಗ ಚಿತ್ರಗಳ ರಸವಿಮರ್ಶೆಯನ್ನು ಮಾಡುತ್ತ " ಇವರು ರಚಿಸಿರುವ ಹುಬ್ಬಳ್ಳಿಯ ದೃಶ್ಯಗಳು. ಗೋವಾದ ದೃಶ್ಯಗಳು. ಪ್ರಕೃತಿಯ ವಿವಿಧ ಚೆಲುವು. ಸೊಬಗುಗಳನ್ನು ಸಾರುತ್ತವೆ. ಗೋವಾದ ಕರಂಜ್ಯೋತಿ ಕೊನೆ. ಕಾವಲಿನ ನಿಲ್ದಾಣದ ಹಿಂದಿರುವ ಭವ್ಯ ನಿಸರ್ಗ ನೋಟ. ಕ್ಯಾಸರ್‌ಲಾಕಿನ ಹಾದಿಯಲ್ಲಿ ಗಾಢ ಗಂಭೀರತೆಗಳೆರಡೂ ಅತ್ಯಂತ ಮಾರ್ಮಿಕ. ಕರಂಜೋಲಿನ ನೋಟದಲ್ಲಿ ಚೇತೋಹಾರಿಯಾದ ಪ್ರಕೃತಿ ಸೂರ್ಯಕಾಂತಿಯೊಂದಿಗೆ ಚೆಲ್ಲಾಟವಾಡುವಂತಿದೆ. ಎಷ್ಟು ಸುಂದರ. ಆದರೆ ಎಂತಹ ಮೌನ. " ಹೀಗೆ ಸಹೃದಯರಿಂದ ಕಲಾವಿದರಿಂದ. ಕಲಾವಿಮರ್ಶಕರಿಂದ ಪ್ರಶಂಸಿಸಲ್ಪಟ್ಟ ಚಿತ್ರಗಳು ಭಾರತದಲ್ಲಿ ಹಲವಾರು ವೈಯಕ್ತಿಕ ಹಾಗೂ ಸಂಘ-ಸಂಸ್ಥೆಗಳಲ್ಲಿ ಸಂಗ್ರಹಿಸಲ್ಪಟ್ಟಿವೆ.

೧೯೨೪ ರಲ್ಲಿ ಲಂಡನ್‌ನಲ್ಲಿ ನಡೆದ ವೆಂಬ್ಲೆ ಎಂಪಾಯರ್ ಕಲಾಪ್ರದರ್ಶನದಲ್ಲಿ ಭಾರತೀಯ ಚಿತ್ರಕಲೆ ಪ್ರದರ್ಶಿಸುವ ಸಲುವಾಗಿ ಇವರು ' Venus ' ಶುಕ್ರಗ್ರಹ ದೇವತೆಯನ್ನು ಚಿತ್ರಿಸಿದ್ದರು. ಈ ಪ್ರದರ್ಶನದಲ್ಲಿ ಯಾವ ರೀತಿ ಭಾಗವಹಿಸಲಾಯಿತೆಂಬುದನ್ನು ರಾವ್‌ಬಹದ್ದೂರ ಧುರಂಧರ ಅವರು ಈ ರೀತಿ ಹೇಳಿದ್ದಾರೆ. " ವೆಂಬ್ಲೆ ಪ್ರದರ್ಶನದ ಸಲುವಾಗಿ ೨೦.೦೦೦ ರೂ. ಸರಕಾರದಿಂದ ಮಂಜೂರಾಗಿ ಬಂದಿತು. ಅದರಂತೆ ಭಾರತೀಯ ಚಿತ್ರಕಲೆಯನ್ನು ಪ್ರದರ್ಶಿಸುವ ಸಲುವಾಗಿ ಲಂಡನ್ನಿನಲ್ಲಿ ಭಾರತೀಯ ಕೋಣೆಯನ್ನು ಅತ್ಯಂತ ಸುಂದರವಾಗಿ ಅಲಂಕರಿಸಲಾಗಿತ್ತು. ಅದರ ಮೇಲೆ ಚಿತ್ರಗಳನ್ನು ತೂಗು ಬಿಡಲಾಗಿತ್ತು. ಆಪ್ಟೆ. ಜೋಶಿ. ಫರ್ನಾಂಡಿಸ್. ಕಮಡೊಳ್ಳಿ. ನಗರಕರ. ಸಮೀರಖಾನ ಇವರೆಲ್ಲ ಛತ್ತಿನ ಮೇಲೆ ನವಗ್ರಹ ದೇವತೆಗಳನ್ನು ಚಿತ್ರಿಸಿದ್ದರು. ಅಲಂಕಾರ ಪಟ್ಟಿಗಳನ್ನು ರಚಿಸಿದ್ದರು. "[೧೩೮] ಇಂದಿಗೂ ರಾಯಲ್ ಕಲಾ ಪ್ರದರ್ಶನದಲ್ಲಿ ಇಡಲಾಗಿದೆ. ಅದು ಎಲ್ಲರ ಮೆಚ್ಚುಗೆಯನ್ನು ಗಳಿಸಿತು.

---

೧೩೭. ಬಿ. ಕೆ. ಹಿರೇಮಠ : ಅಮೀನ ಸಾಹೇಬ ಕಮಡೋಳಿ. ಪುಟ ೩

೧೩೮. ರಾವಬಹದ್ದೂರ್ ಎಂ. ವ್ಹಿ. ಧುರಂಧರ : ಕಲಾಮಂದಿರಾಂತಿಲ ಏಕ ಚಾಳಿಸ್ ವರ್ಷ : ಮರಾಠಿ ಪುಸ್ತಕ. ಪುಟ ೮೦

ಕಮಡೋಳಿಯವರು ಅನಾರೋಗ್ಯದ ಕಾರಣವಾಗಿ ಮೀರಜನ ಆಸ್ಪತ್ರೆಗೆ ಸೇರಬೇಕಾಯಿತು. ಆಗ ಅವರ ಹತ್ತಿರ ದುಡ್ಡಿರಲಿಲ್ಲ. ಅವರೊಬ್ಬ ಕಲಾವಿದರೆಂದು ತಿಳಿದ ಕೂಡಲೇ ಡಾಕ್ಟರ್ ಮೊದಲುಗೊಂಡು ಅವರನ್ನು ತುಂಬಾ ಕಾಳಜಿ ವಹಿಸಿ ಗೌರವದಿಂದ ಕಂಡರು. ಅವರು ತಮ್ಮ ಜೊತೆ ಬಣ್ಣ ಕುಂಚ ಮೊದಲಾದ ಸಾಮಗ್ರಿ ತೆಗೆದುಕೊಂಡು ಹೋಗಿದ್ದರು. " ಅಲ್ಲಿ ವಿರಾಮವಾಗಿದ್ದಾಗಲೆಲ್ಲ ನಿಸರ್ಗಚಿತ್ರಗಳನ್ನೂ ಸಂಯೋಜನಾ ಚಿತ್ರಗಳನ್ನೂ ರಚಿಸಿದ್ದೆ. ಕೆಲವನ್ನು ಆಸ್ಪತ್ರೆಗೆ. ಡಾಕ್ಟರರಿಗೆ ಕಾಣಿಕೆಯಾಗಿ ಕೊಟ್ಟೆ. ಮತ್ತೆ ಕೆಲವನ್ನು ಅವರೇ ಆಸಕ್ತಿಯಿಂದ ಕೊಂಡುಕೊಂಡರು. ಅಂತೂ ಆಸ್ಪತ್ರೆಯಿಂದ ಆರಾಮಾಗಿ ಮುಂಬಯಿಗೆ ಹೊರಟು ನಿಂತಾಗ ನನ್ನ ಕೈಯಲ್ಲಿ ಸ್ವಲ್ಪ ಹಣ ಇತ್ತು. ಕೆಲವು ಕಲಾಕೃತಿಗಳು ಇದ್ದವು. " [೧೩೯] ಎಂದು ಹೇಳುತ್ತಿದ್ದರಂತೆ.

ಆದರೂ ಅವರಿಗೇಕೋ ಮುಂಬಯಿ ವಾತಾವರಣ ಅವರ ಆರೋಗ್ಯಕ್ಕೆ ಹಿತಕರವಾಗಲಿಲ್ಲ. ಆಗ ಡ್ರಾಯಿಂಗ್ ಇನ್ಸ್‌ಪೆಕ್ಟರ್ ಆಗಿದ್ದ ಮೇಸ್ತ್ರಿ ಅವರು ಇವರ ಕಲೆಯನ್ನು ಮೆಚ್ಚಿಕೊಂಡಿದ್ದರು. ಅವರ ಆರೋಗ್ಯ ದೃಷ್ಟಿಯಿಂದ ಹುಬ್ಬಳ್ಳಿಗೆ ವರ್ಗಾಯಿಸಿದರು. ಹುಬ್ಬಳ್ಳಿಯ ಆಂಗ್ಲೋ ಉರ್ದು ಶಾಲೆಯಲ್ಲಿ ಕಲಾಶಿಕ್ಷಕರಾಗಿ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಶಿಕ್ಷಕರಾದರು. ಮುಂದೆ ಸ್ವಲ್ಪ ದಿನ ಅವರ ಅಣ್ಣನವರು ತೆಗೆದ ಫೋಟೋ ಸ್ಟುಡಿಯೋದಲ್ಲಿ ಸ್ಥಿರ ಮತ್ತು ಚಲನ ಛಾಯಾಚಿತ್ರಗ್ರಹಣದಲ್ಲಿಯೂ ಆಸಕ್ತಿ ತೋರಿಸಿ. ಕಲಾತ್ಮಕ ಛಾಯಾ ಚಿತ್ರಗಳ ಅಭಿರುಚಿಯನ್ನು ಜನತೆಯಲ್ಲಿ ತರಲು ಪ್ರಯತ್ನಿಸಿದರು. ಧಾರವಾಡದ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಕಲಾ ಶಿಕ್ಷಕರಾಗಿದ್ದಾಗ ಕಾರ್ಡ್‌ಬೋರ್ಡ್ ಮಾಡಲಿಂಗ್‌ನ ವಿಶೇಷ ತರಬೇತಿ ವರ್ಗಗಳನ್ನು ನಡೆಸಿದರು.

೧೯೫೩ ರಲ್ಲಿ ತಮ್ಮ ಶಿಕ್ಷಕ ವೃತ್ತಿಯಿಂದ ನಿವೃತ್ತರಾದರು. ಆ ವರ್ಷವೇ ಸಪ್ಟೆಂಬರ್ ತಿಂಗಳು ಕಲಾವಿದ ಕಮಡೋಳಿ ನಮ್ಮನ್ನಗಲಿದರು. ನಾಡು ಕಲಾಕ್ಷೇತ್ರದ ಒಬ್ಬ ಪ್ರತಿಭಾ ಸಂಪನ್ನನನ್ನು ಕಳೆದುಕೊಂಡಿತು.

ಬಹುಮುಖ ಕಮಡೋಳಿಯವರ ಪ್ರತಿಭೆಯನ್ನು ಕಂಡು ಅವರ ಸಂಯೋಜನ ಚಿತ್ರಗಳ ಬಗ್ಗೆ ಶ್ರೀ ಬಿ. ಕೆ. ಹಿರೇಮಠ ಅವರು ಈ ರೀತಿ ಹೇಳಿದ್ದಾರೆ. " ಕಮಡೋಳಿಯ ಸಂಯೋಜನಾ ಚಿತ್ರಗಳಲ್ಲಿ ಕಲಾವಿದನ ಉನ್ನತವಾದ ಸಂಸ್ಕಾರಗಳನ್ನು. ಕವಿಹೃದಯವನ್ನು ಸಾಮಾಜಿಕತೆಯ ಅರಿವನ್ನು ಒಟ್ಟು ಜೀವನದ ಬಗೆಗೆ ಇರುವ ಕಳಕಳಿಯನ್ನು ಕಾಣಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಪಾಶ್ಚಾತ್ಯ ಕಲೆಯ ಗಾಢ ಪ್ರಭಾವದ ಮಧ್ಯದಲ್ಲಿಯೂ ಭಾರತೀಯ ಸಾಂಸ್ಕೃತಿಕ ಅಂಶಗಳನ್ನು. ಭಾರತೀಯತೆಯನ್ನು ಉಳಿಸಿಕೊಂಡು ಚಿತ್ರರಚನೆ ಮಾಡಿದುದು ಅವರ ಹಿರಿಮೆ. ಅವರ ಈ ವಿಶೇಷವನ್ನು ಎತ್ತಿ ಬರೆದ ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟನ ಮುಖ ಪತ್ರಿಕೆಯು ಕಮಡೋಳಿಯ ' ಚಳಿಗಾಲ ' ಎಂಬ ಕೃತಿಯನ್ನು ವಿಮರ್ಶಿಸುತ್ತ " Western in its treatments, but pure Indian in the inspiration of its subject, this panel corresponds more others best to the decorative traditions of than the modern frame. Kamadoli's strength lies in colour" [೧೪೦] ಎಂದಿರುವುದು ಕಮಡೋಳಿಯ ಕಲಾಕೃತಿಗಳ ಮಹತ್ವದ ಅಂಶವನ್ನು ಸೂಚಿಸುತ್ತದೆ.

---

೧೩೯. ಬಿ. ಕೆ. ಹಿರೇಮಠ : ಅಮೀನ ಸಾಹೇಬ ಕಮಡೋಳಿ. ಪುಟ ೨೦

೧೪೦. ಬಿ. ಕೆ. ಹಿರೇಮಠ : ಅಮೀನ ಸಾಹೇಬ ಕಮಡೋಳಿ. ಪುಟ ೯

ಅಲ್ಲದೆ ಇವರು ಸಹ (' ವಾಯಿಸ್‌ಲೀಗಲ್‌ಲಾಜ ') ಈಗಿನ ರಾಷ್ಟ್ರಪತಿಭವನದ ಗುಮ್ಮಟದ ಮೇಲೆ ತಮ್ಮ ಕಲೆಯಿಂದ ಅಲಂಕರಿಸಿದ ಶ್ರೇಯಸ್ಸನ್ನು ಪಡೆದಿದ್ದಾರೆ.

ಮಾರ್ಕಂಡೇಯ. ರಾವಣ-ಜಟಾಯು. ಶುಕ್ರ ಮುಂತಾದ ಚಿತ್ರಗಳು ಕಲಾವಿದನ ಪೌರಾಣಿಕ ಪ್ರಜ್ಞೆಯ ಸಮೃದ್ಧವಾದ ಸುಂದರ ಕಲ್ಪನಾಚಿತ್ರಗಳಾಗಿವೆ. ಮಂಗನಾಟವಾಡಿಸುವವ. ಡೊಂಬರು. ಹಳ್ಳಿಯ ಸಂತೆ. ನಿತ್ಯಕರ್ಮ ನೂಲಿನ ಮರಾಠಿಗ. ಮುಂತಾದ ಚಿತ್ರಗಳು ಜೀವನದ ವೈವಿಧ್ಯತೆಯ ನಗ್ನ ಸತ್ಯವನ್ನು ಮೂಡಿಸಿದ ಜೀವಂತ ಕಲಾಕೃತಿಗಳು..' Nothing sweeter than ' ತಾಯಿ ಮಗುವಿನ ವಾತ್ಸಲ್ಯವನ್ನು ನಿರೂಪಿಸಿದರೇ. Sketch in a garden, Taj at Agra, Southern Mecca Jumma Masjid ಮತ್ತು Sketch at Laxmeshwar, Bombay from Malabar Hill ಈ ಎಲ್ಲ ಚಿತ್ರಗಳು ಅತ್ಯುತ್ತಮ ಚಿತ್ರಗಳಾಗಿದ್ದು ಕಮಡೊಳಿಯವರ ಕಲಾಪ್ರತಿಭೆಯನ್ನು ಎತ್ತಿ ಹಿಡಿದು ಪ್ರಶಸ್ತಿಗಳನ್ನು ಗಳಿಸಿವೆ.

ಲಂಡನ್ನಿಗೆ ವೆಂಬ್ಲೆ ಪ್ರದರ್ಶನಕ್ಕೆ ಕಳಿಸಿದ ನೂಲುವ ಮರಾಠಿಗನ ಚಿತ್ರ. ಕಮಡೋಳಿಯ ಪ್ರತಿಭೆ ಹಾಗೂ ಕುಂಚದ ಕೌಶಲವನ್ನು ಇಲ್ಲಿ ಗುರುತಿಸಬಹುದು. ಕೈಯಲ್ಲಿ ತಕಲಿಯನ್ನು ಹಿಡಿದು ನೂಲುವ ಈ ವ್ಯಕ್ತಿ ಚಿತ್ರದ ಉದ್ದಕ್ಕೂ ಪ್ರಧಾನವಾಗಿ ನಿಂತ ಆಕೃತಿ. ನೂಲುವುದರಲ್ಲಿ ತನ್ಮಯನಾದಂತೆ ಮುಖಭಾವ. ಯುರೋಪಿಯನ್ ಕಲಾ ಶಿಕ್ಷಣದಂತೆ ದಷ್ಟಪುಷ್ಟವಾದ ದೇಹ ಉದ್ಯಮದ ಪ್ರತಿಮೂರ್ತಿಯಾಗಿ ನಿಂತಿರುವ ಆ ವ್ಯಕ್ತಿಯೇ ಕಲಾಕೃತಿಯ ಮುಖ್ಯ ಕೇಂದ್ರಬಿಂದು. ಬಣ್ಣಗಳ ಸಮತೋಲನದಿಂದ ನೋಡುವವನ ದೃಷ್ಟಿ ಆ ವ್ಯಕ್ತಿಯನ್ನು ದಾಟಿ. ಅವನು ಕೆಲಸ ಮಾಡುತ್ತಿರುವ ಅವನ ಕೈಯಿಂದ ಇಳಿಬಿದ್ದ ತಕಲಿಯಲ್ಲಿ ನೆಡುತ್ತದೆ. ಯಾಕೆಂದರೆ ಅದರ ಮೇಲೆ ಹೆಚ್ಚು ಬೆಳಕನ್ನು ಚೆಲ್ಲಲಾಗಿದೆ. ನಂತರ ಹಿನ್ನೆಲೆಯಲ್ಲಿರುವ ಚರಕಗಳಲ್ಲಿ ಸುಳಿದು ಇಡೀ ಚಿತ್ರದ ಸೌಂದರ್ಯವನ್ನು ಪ್ರದರ್ಶಿಸಿದೆ.

ಲಂಬಾಣಿ ಮುದುಕಿ ಕಮಡೋಳಿ ಚಿತ್ರಸಿದ ಇನ್ನೊಂದು ಭಾವಚಿತ್ರ. ಇದರ ವಿಮರ್ಶೆಯನ್ನು ಮಾಡುತ್ತ ಅ.ನ.ಕೃ. ಅವರು ಹೇಳಿದಮಾತು ಗಮನಾರ್ಹ. " ಕಮಡೋಳಿಯ ಕಲಾಪ್ರತಿಭೆಯನ್ನು ಸಾರುವ ಕೃತಿಗಳಲ್ಲಿ ಇದೊಂದು. ಜೀವನದ ಸಂಧ್ಯೆಯನ್ನು ಸಮೀಪಿಸಿದ ಲಂಬಾಣಿ ಮುದಕಿ ಸಂತೆಯಲ್ಲಿ ಕೋಳಿಗಳನ್ನು ಮಾರಲು ಕುಳಿತಿದ್ದಾಳೆ. ಆದರೆ ವ್ಯಾಪಾರದ ಕಡೆಗೆ ಲಕ್ಷ್ಯವಿಲ್ಲ. ಮನಸೆಲ್ಲೋ ಹರಿದಾಡುತ್ತಿದೆ. ಯಾವುದೋ ಹಳೆಯ ನೆನಪು. ಅವಳ ಕಣ್ಣುಗಳಲ್ಲಿ ಅಪಾರವೇದನೆ. ಚಿಂತನೆ. ನೆನುಹುಗಳು. ನುಲಿದ ತುಟಿ ಬಾಳಿನ ಕಹಿಯನ್ನು ಎತ್ತಿ ತೋರುತ್ತಿದೆ. ಬತ್ತಿದ ಮುಖ ಎಲವುಗಳನ್ನು ತೋರುವ ಕೊರಳು. ಒಣಗಿದ ಕೈಕಾಲುಗಳು ಕುಳಿತಿರುವ ಸಹಜ ಭಂಗಿ. ಹೊಸೆದ ಹಗ್ಗದಂತಿರುವ ತಲೆಗೂದಲು ಚಿತ್ರಕ್ಕೆ ಅಪೂರ್ವವಾದ ಜೀವನ ಸಾಮೀಪ್ಯವನ್ನು ತಂದುಕೊಟ್ಟಿದೆ. ಮನಸ್ಸಿನ ಕ್ಷೋಭೆ ಆಂದೋಲನಗಳನ್ನು ಸೂಕ್ಷ್ಮವಾಗಿಯೂ ಚಿತ್ತವಿದ್ರಾವಕವಾಗಿಯೂ ತೋರುವ ಕೃತಿಗಳಲ್ಲಿ ' ಲಂಬಾಣಿ ಮುದುಕಿ ' ಹಿರಿಯಸ್ಥಾನವನ್ನು ಪಡೆಯುತ್ತದೆ. ಇದು ತ್ರಿಕೋಣ ಕೃತಿಯ ಜಾತಿಗೆ ಸೇರಿದೆ. ನೋಟಕನ ದೃಷ್ಟಿ ಕೇಂದ್ರಿಕೃತವಾಗಿ ಚಿತ್ರದ ಮುಖದ ಮೇಲೆ ಬೀಳುವುದೇ ಈ ಶೈಲಿಯ ಉದ್ದೇಶ. ಕಮಡೋಳಿ ತಮ್ಮ ಉದ್ದೇಶವನ್ನು ಉತ್ಕೃಷ್ಟ ರೀತಿಯಲ್ಲಿ ಸಾಧಿಸಿದ್ದಾರೆ. ಅ.ನ.ಕೃ. ಅವರ ಈ ವಿಮರ್ಶೆಯು ಕಮಡೋಳಿಯ ಕಲೆಯ ಗುಣಾತಿಶಯಗಳನ್ನೆಲ್ಲ ಎತ್ತಿ ತೋರಿಸಿದೆ.

ಹೀಗೆ ಈ ಎಲ್ಲ ' ಸಪ್ತವರ್ಣ ' ವೆಂಬ ಹೆಸರು ಪಡೆದ ಗೆಳೆಯರು, ತಮ್ಮ ಈ ಕಲಾ ಸಾಧನೆಯಲ್ಲಿ ಉತ್ತುಂಗ ಮಟ್ಟವನ್ನು ಮುಟ್ಟಿದವರು. ಕಲಾಕ್ಷೇತ್ರದಲ್ಲಿ ವಿವಿಧ ರೀತಿಯ ಕೆಲಸ ಕಾರ್ಯಗಳನ್ನು ಮಾಡಿ ಕರ್ನಾಟಕದ ಹೆಸರನ್ನು ಅಂತರ್‌ರಾಷ್ಟ್ರೀಯ ಮಟ್ಟದ ವರೆಗೆ ಬೆಳೆಸಿದವರು. ಭಾರತದಲ್ಲಿ ಅಷ್ಟೇ ಅಲ್ಲ ಇಡೀ ಏಷ್ಯಾದಲ್ಲಿಯೇ ಹೆಸರುವಾಸಿಯಾಗಿದ್ದ ಸರ್ ಜೆ. ಜೆ. ಕಲಾ ಶಾಲೆಯಲ್ಲಿ ಅಭ್ಯಾಸ ಮಾಡಿ ಎಲ್ಲರೂ ಒಂದೇ ಬಳ್ಳಿಯ ಹೂಗಳಂತೆ ಇದ್ದರು. ತಮ್ಮದೇ ಆದ ಶೈಲಿ ಕಲಾತಂತ್ರ, ವಿನ್ಯಾಸದಿಂದ ತಮ್ಮತನವನ್ನು ಚಿತ್ರಕಲಾ ಕ್ಷೇತ್ರದಲ್ಲಿ ಉಳಿಸಿಕೊಂಡು ಬಂದಿದ್ದಾರೆ.

ಒಬ್ಬ ಕಲಾವಿದ ತನ್ನ ಬದುಕಿನಲ್ಲಿ ಅನೇಕ ಹಂತಗಳಲ್ಲಿ ಬೇರೆ ಬೇರೆ ಪ್ರಭಾವಗಳಿಗೆ ಒಳಗಾಗಿ ವೈವಿಧ್ಯಮಯವಾದ ಕಲಾಕೃತಿಗಳನ್ನು ಸೃಷ್ಟಿಮಾಡುವಂತೆ, ಕೆಲವೊಮ್ಮೆ ಎಲ್ಲ ಹಂತಗಳಲ್ಲೂ ಒಂದೇ ರೀತಿಯ ಪ್ರಭಾವಕ್ಕೆ ಒಳಗಾಗಿರಲೂಬಹುದು. ಈ ಸಮಾಜದಲ್ಲಿ ನಡೆಯುವ ಅನೇಕ ಘಟನೆಗಳು. ಪ್ರಕೃತಿಯಲ್ಲಿ ಕಂಡುಬರುವ ವಿಶಿಷ್ಟ ಸೌಂದರ್ಯ. ಇತ್ಯಾದಿ ಅಂಶಗಳು ಕಲಾವಿದನ ವೈಯಕ್ತಿಕ ರಸ-ರುಚಿಗಳನ್ನು ಪ್ರಭಾವಿಸುತ್ತವೆ. ಅವನು ಆ ಪ್ರಭಾವಕ್ಕೆ ಪ್ರತಿಕ್ರಿಯಿಸಿ ಅಭಿವ್ಯಕ್ತಿಸುವ ರೀತಿ ಭಿನ್ನಭಿನ್ನವಾಗಿರುತ್ತದೆ. ಹೀಗೆ ಕಲಾಕೃತಿಯು ಕಲಾವಿದನೊಬ್ಬನ ಯಾವುದೇ ಅನುಭವದ. ಅವನದೇ ಆದ ಅಂತರಂಗದ ಭಾವನಾತ್ಮಕ ಪ್ರಜ್ಞೆಯ ಅಭಿವ್ಯಕ್ತಿಯಾಗಿರುತ್ತದೆ. ಅಂತಹ ವಿಭಿನ್ನ ಭಾವನಾತ್ಮಕ ಪ್ರತಿಕ್ರಿಯೆಗಳನ್ನು ಈ ಸಮಕಾಲೀನ ಕಲಾವಿದರಲ್ಲಿ ಕಾಣುತ್ತೇವೆ.



ಶ್ರೀ ಜಿ.ಎಸ್ ದಂಡಾವತಿಮಠ ಅವರ ಕೃತಿ



ಶ್ರೀ.ಅಮೀನಸಾಹೇಬ ಕಮದೋಳಿಯವರ ಕೃತಿ



ಶ್ರೀ ಸಿ.ವ್ಹಿ. ಕಾರಡಗಿ ಅವರ ಕೃತಿ

ಅಧ್ಯಾಯ ನಾಲ್ಕು

ಚೆಟ್ಟಿಯವರ ವೃತ್ತಿಜೀವನ ಮತ್ತು ಕಲಾಬದುಕು



"ವ್ಯಕ್ತಿಯ ಮಹತ್ವವಿರುವುದು ಅವನು ಎಂದೋ ಒಮ್ಮೆ ಸಾಧಿಸುವ ಮಹತ್ಕಾರ್ಯದಲ್ಲಲ್ಲ; ನಿತ್ಯ ಜೀವನದ ಸಾಮಾನ್ಯ ಘಟನೆಗಳಲ್ಲಿಯೂ ಅದು ವ್ಯಕ್ತವಾಗುತ್ತದೆ"[೧] ಎನ್ನುವಂತೆ ಚಿಟ್ಟಿಯವರ ಬದುಕಿನಲ್ಲಿಯೂ ನಾವು ಈ ಮಾತನ್ನು ಗುರುತಿಸುತ್ತೇವೆ. ೧೯೩೧ ರಲ್ಲಿ ಮುಂಬೈಯಲ್ಲಿ ಡಿಪ್ಲೋಮಾ ಮುಗಿಸಿಕೊಂಡು ಮುಂದೆ ಸೊಲ್ಲಾಪುರಕ್ಕೆ ಬಂದು ನೆಲೆಸಿದರು. ಅಲ್ಲಿ ಅವರು ಸ್ವತಂತ್ರ ಚಿತ್ರಕಾರರಾಗಿ ಚಿತ್ರಗಳ ರಚನೆಗೆ ತೊಡಗಿದರು. ಅವರೇ ಹೇಳುವಂತೆ "ಶ್ರೀ ಮಲ್ಲಿಕಾರ್ಜುನಪ್ಪಣ್ಣಾ ಲಂಬಿ ಅವರು ಆಶ್ರಯಕೊಟ್ಟರು. ಅವರ ಮನೆಯಲ್ಲಿ ಪ್ರಸಾದ ತೀರಿಸಿಕೊಂಡು ಕಾಡಾದ ಅಣ್ಣಾ ಅವರ ಅಂಗಡಿಯ ಮೂರನೆಯ ಅಂತಸ್ಥಿನಲ್ಲಿ ಕೆಲಸ ಮಾಡುತ್ತಿದ್ದೆನು".[೨] ಹೀಗೆ ಚಿತ್ರಗಳ ರಚನೆಯಲ್ಲಿ ತೊಡಗಿದಾಗ ಇವರ ಮೇಲೆ ಅತ್ಯಂತ ಅಭಿಮಾನವನ್ನು ಇರಿಸಿಕೊಂಡಂಥ ವಾರದ ಬಾಬಾ ಸಾಹೇಬರು ಅಖಿಲ ಭಾರತ ಮಟ್ಟದಲ್ಲಿ ನಡೆಯುವಂಥ ಚಿತ್ರಕಲಾಸ್ಪರ್ಧೆಯಲ್ಲಿ ಭಾಗವಹಿಸಲು ಸೂಚಿಸಿದರು. ಆ ವಿಷಯ 'ವಿಶ್ವರೂಪದರ್ಶನ'ವಾಗಿತ್ತು. "ವಿಶ್ವರೂಪ ನನ್ನಂಥವನಿಂದ 'ದರ್ಶನಮಾಡಿಸಲು ಸಾಧ್ಯವಾದೀತೆ ಎಂದು ವಿಚಾರ ಮಾಡುತ್ತ ಭಗವದ್ಗೀತೆಯ ಹದಿನ ಒಲ್ಕನೆಯ ಅಧ್ಯಾಯದ ಆ ವಿಶ್ವರೂಪದರ್ಶನದ ಪ್ರಸಂಗವನ್ನೂ ಒಂದು ತಿಂಗಳವರೆಗೆ ಅಧ್ಯಯನ ಮಾಡಿದೆ"[೩] ಹೀಗೆ ಆ ಚಿತ್ರದ ವಿಷಯವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ೪' x ೩' ಅಡಿ ತೈಲ ವರ್ಣದಲ್ಲಿ ಚಿತ್ರಿಸಿ ಸ್ಪರ್ಧೆಗೆ ಕಳಿಸಿದರು. ಅದಕ್ಕೆ ಪ್ರಥಮ ಬಹುಮಾನ ದೊರೆಯಿತು. (ಈ ಚಿತ್ರದ ವಿವರವನ್ನು ಆರನೇ ಅಧ್ಯಾಯದಲ್ಲಿ ನೋಡಬಹುದು.)

ಇದೇ ಸಮಯದಲ್ಲಿ ಇವರು ಪುರಾಣದ ಘಟನೆಗಳಿಗೆ ಚಿತ್ರಗಳನ್ನು ರಚಿಸಿಕೊಟ್ಟರು. ಸೊನ್ನಲಾಪುರದ ಮಹಾ ಶರಣೆಯಾದ ರುದ್ರಮ್ಮನವರ ದರ್ಶನ ಇವರಿಗೆ ಆಯಿತು. 'ಶರಣೆ ರುದ್ರಮ್ಮ ತಾಯಿಯವರು ತಮ್ಮ ತಂದೆಯವರಾಗಿದ್ದ ನಾಲ್ವತ್ತವಾಡ ಶ್ರೀ ವೀರೇಶ ಶರಣರ ಪುರಾಣವನ್ನು ದ್ಯಾಂಪುರ ಶ್ರೀ ಚೆನ್ನವೀರ

---

೧. ಎಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ಪುಟ ೬೮೪

೨. ಎಂ. ವಿ. ಚಿಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೨೮

೩. ಎಂ. ವಿ. ಚಿಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೨೮

ಶಾಸ್ತ್ರಿಗಳವರಿಂದ ಬರೆಸಿದ್ದರು. ಆದರೆ ಆ ಪುರಾಣದಲ್ಲಿ ಬರುವ ಘಟನೆಗಳಿಗೆ ಆಧರಿಸಿ ಚಿತ್ರ ತೆಗೆಯಿಸಬೇಕೆಂಬ ಆಲೋಚನೆಯಲ್ಲಿದ್ದರು.[೪] ಅವರು ಆ ಸಮಯದಲ್ಲಿ ಆಗಮಿಸಿದ್ದ ಮಹಾಂತಸ್ವಾಮಿಗಳವರ ಜೊತೆ ಈ ವಿಷಯ ಚರ್ಚಿಸುವ ಸಂದರ್ಭದಲ್ಲಿ ಚೆಟ್ಟಿಯವರು ಅಲ್ಲಿಗೆ ಹೋದರು. ರುದ್ರಮ್ಮನವರ ದೃಷ್ಟಿ ಇವರ ಮೇಲೆ ಬಿತ್ತು ಕೂಡಲೇ "ಶರಣರು ತಮ್ಮ ಚಿತ್ರಗಳನ್ನು ತೆಗೆಯಿಸಿಕೊಳ್ಳಲು ಈ ಚೆಟ್ಟಿ ಮುರಿಗೆಪ್ಪನವರನ್ನೇ ಕಳಿಸಿದ್ದಾರೆ ಎಂದು ಭಾವನಾತ್ಮಕವಾಗಿ ಹೇಳಿದಾಗ ನಾನು ಕಕ್ಕಾಬಿಕ್ಕಿಯಾದೆ"[೫] ಎಂದು ತಮ್ಮ ಆತ್ಮಚರಿತ್ರೆಯಲ್ಲಿ ಬರೆಯುತ್ತಾರೆ.

ಹೀಗೆ ಶರಣರ ಬದುಕಿನ ಚಿತ್ರಗಳನ್ನು ಚಿತ್ರಿಸಲು ಪ್ರಾರಂಭಿಸಿದರು. ಈ ಕಾರ್ಯಕ್ಕೆ ಅವರು ಸಂತೋಷಗೊಂಡರು. ಅದೇ ಸಂಸ್ಕೃತಿಯಲ್ಲಿ ಬೆಳೆದು ಬಂದ ಚೆಟ್ಟಿಯವರಿಗೆ ಶರಣರ ಶಿವಮಯ ಬದುಕಿನ ಚಿತ್ರಗಳನ್ನು ರಚಿಸುವ ಸೌಭಾಗ್ಯ ದೊರೆತಿದ್ದುದು ಒಂದು ಯೋಗಾಯೋಗ. ಇದರಲ್ಲಿ ಅವರು ನಾಲ್ಕು ಚಿತ್ರಗಳನ್ನು ಚಿತ್ರಿಸಿದರು. ೧) ಶ್ರೀ ವೀರೇಶ ಶರಣರು ಭಿಕ್ಷಾಟನಕ್ಕೆ ಹೊರಟಿದ್ದು. ೨) ಶ್ರೀ ವಾರದ ಬಾಬಾ ಸಾಹೇಬರು ಮಾಡುತ್ತಿದ್ದ ಹೋಮಕುಂಡದಲ್ಲಿ ಧುಮಕಿದ್ದು. ೩) ಶ್ರೀ ಸಿದ್ಧರಾಮೇಶ್ವರ ದೇವಾಲಯದಲ್ಲಿರುವ ಗದ್ದುಗೆ. ೪) ಶರಣರ ಮನೆಯದೃಶ್ಯ ಇವೆಲ್ಲ ಕಪ್ಪುಬಿಳಿಪು ಹುಡಿ ಬಣ್ಣದಿಂದ ತಯಾರಿಸಿದ್ದು. "ನಾನು ಸೊನ್ನಲಾಪುರದಲ್ಲಿ ಪ್ರಥಮತಃ ರಚಿಸಿದ ಚಿತ್ರಗಳೆಂದರೆ ಶ್ರೀ ಶರಣರ ಜೀವನಕ್ಕೆ ಸಂಬಂಧಿಸಿದ ಈ ನಾಲ್ಕು ಚಿತ್ರಗಳೇ"[೬] ಎನ್ನುತ್ತಾರೆ ಚೆಟ್ಟಿಯವರು.

"ಕಲಾವಿದನು ಸಮಗ್ರ ಮಾನವತೆಯ ಸ್ಥಿರಾನುಭವಗಳನ್ನು ತನ್ನ ಜೀವಮಾನದಲ್ಲಿ ಅನುಭವಿಸಿ ಚಿತ್ರಿಸುತ್ತಾನೆ. ಈ ರೀತಿಯ ಕಲೆಯು ಸಮಸ್ತ ಕಾಲಕ್ಕೂ ಸಮಸ್ತ ದೇಶಕ್ಕೂ ಎಲ್ಲಾ ಜನರಿಗೂ ಅನ್ವಯಿಸುವಂತಿದ್ದು ವಿಶ್ವಮಾನ್ಯವಾಗಿರುತ್ತದೆ. ಈ ಕಲೆಯನ್ನೇ ಅಮರ ಕಲೆಯೆನ್ನುವುದು"[೭] ಇಂತಹ ಅಮರತ್ವವು ಚೆಟ್ಟಿಯವರ ಕಲೆಯಲ್ಲಿ ಇದೆ. ಇವರು ರಚಿಸಿದ ಶರಣರ ಚಿತ್ರಗಳನ್ನು ನೋಡಿದ ಸ್ವತಃ ಶರಣಮ್ಮನವರು. ಬಾಬಾಸಾಹೇಬರ ಮುಂದೆ "ಮುರಿಗೆಪ್ಪನವರ ಕುಂಚದಲ್ಲಿ ಎಂಥ ಅದ್ಭುತ ಶಕ್ತಿ ಐತಿ ಶರಣರೆಲ್ಲಾ ಮತ್ತs ಮರಕಳಿಸ್ಯಾರ ಅವs ಬರೇ ಚಿತ್ರಕಾರ ಅಲ್ಲ. ಕುಂಚಬ್ರಹ್ಮ"[೮] ಎಂದು ಹಾರೈಸಿ ಅವರನ್ನು ಆಶೀರ್ವದಿಸಿದ್ದುದು ತಿಳಿದುಬರುತ್ತದೆ.

ಸೊಲ್ಲಾಪುರದಲ್ಲಿ ಇವರು ಅನೇಕ ಭಾವ ಚಿತ್ರಗಳನ್ನು ರಚಿಸಿ ಕೊಟ್ಟರು. ಅದರ ಜೊತೆಗೆ ಸಂಯೋಜನ ಮತ್ತು ನಿಸರ್ಗ ಚಿತ್ರಗಳನ್ನು ರಚಿಸುತ್ತಿದ್ದರು. "ಅಲ್ಲಿ ಜರುಗಿದ ಅನೇಕ ಪ್ರದರ್ಶನಕ್ಕೆ ನನ್ನ ಪೇಂಟಿಂಗಗಳನ್ನು ಕಳಿಸಿದ್ದೆ ಆಗ ಅನೇಕ ಚಿತ್ರಗಳು ಮಾರಾಟವಾದುದಲ್ಲದೆ ಅಕ್ಕಲಕೋಟ ಮಹಾರಾಜರು ನನ್ನ ಚಿತ್ರಗಳನ್ನು

---

೪. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೩೦

೫. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೩೦

೬. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೩೦

೭. ಕೆ. ಜಿ. ರಾಮಕೃಷ್ಣರಾವ್ : ಸೌಂದರ್ಯ ಮತ್ತು ಕಲೆ. ಪುಟ ೧೪೦

೮. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೩೧

ಮೆಚ್ಚಿಕೊಂಡು ಸುವರ್ಣ ಪದಕವನ್ನಿತ್ತಿದ್ದರು".[೯] ಹೀಗೆ ಸೊಲ್ಲಾಪುರದ ವಾಸ್ತವ್ಯ ಇವರಿಗೆ ದುಡಿಯಲು ಸಾಕಷ್ಟು ಪ್ರೇರಣೆ ಕೊಟ್ಟಿತು. ಎಂಟುವರ್ಷ ಸೊಲ್ಲಾಪುರದಲ್ಲಿದ್ದು ಮುಂದೆ ಚಿಕ್ಕಪ್ಪ ಅವರ ಕರೆಯುಂತೆ ಗದುಗಿಗೆ ಬಂದರು. ಇಲ್ಲಿ ಅವರ ಕಲಾ ಪ್ರತಿಭೆಗೆ ಒಳ್ಳೆಯ ಪುರಸ್ಕಾರ ದೊರೆಯಿತು. ಭವ್ಯವಾದ ಐತಿಹಾಸಿಕ. ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆಯನ್ನು ಹೊಂದಿದ ಗದಗು ಚೆಟ್ಟಿಯವರಿಗೆ ಆಶ್ರಯನೀಡಿತು. ಅಲ್ಲಿಯೇ ಭದ್ರವಾಗಿ ನೆಲೆನಿಂತರು.

ಗದಗ ಕಲೆ-ಸಾಹಿತ್ಯ-ಸಂಸ್ಕೃತಿಗಳ ಬೀಡು. ಕಲ್ಯಾಣ ಚಾಲುಕ್ಯರು. ಬಾದಾಮಿ ಚಾಲುಕ್ಯರು. ರಾಷ್ಟ್ರಕೂಟರು. ಕಲಚೂರಿ ಅರಸರೂ. ಹೊಯ್ಸಳರು. ದೇವಗಿರಿ ಯಾದವರು ಹಾಗೂ ವಿಜಯನಗರದ ಅರಸರ ಆಧಿಪತ್ಯವನ್ನು ಹೊಂದಿ ಮೆರೆದಂಥ ಪ್ರದೇಶವಾಗಿದೆ. "೧೦ ನೇ ಶತಮಾನದಲ್ಲಿ ಗದಗ-ಬೆಟಗೇರಿ ಹಾಗೂ ಅದರ ಸುತ್ತ ಮುತ್ತಲೂ ದೊರೆತ ಅನೇಕ ಶಾಸನಗಳು ಗದಗ-ಬೆಟಗೇರಿಯು ದೊಡ್ಡ ಅಗ್ರಹಾರವಾಗಿತ್ತೆಂಬುದನ್ನು ಹೇಳುತ್ತವೆ"[೧೦] ಮಹಾಭಾರತದ ಸೃಷ್ಟಿಕರ್ತ ಮಹಾಕವಿ ಕುಮಾರವ್ಯಾಸನನ್ನು ಸಾರಸ್ವತ ಪ್ರಪಂಚಕ್ಕೆ ಇತ್ತ ವೀರನಾರಾಯಣನ ಪುಣ್ಯಭೂಮಿ. ಪ್ರಭುಲಿಂಗ ಲೀಲೆ ಎಂಬ ಆಧ್ಯಾತ್ಮರೂಪಕ ಮಹಾಕಾವ್ಯವನ್ನು ಕಾಣ್ಕೆಯಾಗಿ ಕೊಟ್ಟ ಕವಿ ಚಾಮರಸ ಗದುಗಿನ ಸಮೀಪವಿರುವ ನಾರಾಯಣಪುರದವನು. ಬಸವಾದಿ ಶರಣರ ಪರಂಪರೆಯನ್ನು ಮುಂದುವರಿಸಿಕೊಂಡು ಬಂದ ಜಗದ್ಗುರು ತೋಂಟದ ಶ್ರೀ ಸಿದ್ಧಲಿಂಗೇಶ್ವರರು ಪಾದವನ್ನಿಟ್ಟ ಪುಣ್ಯಸ್ಥಳ. ಕುರುಡಾಗಿ ಹುಟ್ಟಿ ಹುಟ್ಟಿ ಸಂಗೀತ ಸಾಧನೆಗದು. ಲಕ್ಷಾಂತರ ಕುರುಡರಿಗೆ ಮತ್ತು ಸಂಗೀತ ಅರಿಸಿಬಂದ ಅನೇಕರಿಗೆ ಬೆಳಕನ್ನು ನೀಡಿ. ಆಮೂಲಕ ಬದುಕನ್ನು ಕೊಟ್ಟ ಗಾನಯೋಗಿ ಶ್ರೀ ಪಂಚಾಕ್ಷರಿ ಗವಾಯಿಗಳ ಪುಣ್ಯಾಶ್ರಮದ ಪವಿತ್ರ ತಾಣ. ಅವರ ಶಿಷ್ಯರಾದ ಡಾ. ಪಂ. ಪುಟ್ಟರಾಜ ಗವಾಯಿಗಳವರ ಕರ್ಮಭೂಮಿ ಗದಗು.

ಅಲ್ಲದೇ ಕರ್ನಾಟಕ ಚಿತ್ರಕಲಾ ಕ್ಷೇತ್ರಕ್ಕೆ ಈ ಗದಗ ಜಿಲ್ಲೆ ತನ್ನ ಕಾಣಿಕೆಯನ್ನು ನೀಡಿದೆ. ಕ್ರಿ. ಶ. ೧೦೮೨ ರಲ್ಲಿ ಶಾಸನವೊಂದರ ಪ್ರಕಾರ ಗದಗ ತಾಲೂಕಿನ ಕುರ್ತಕೋಟಿ ಗ್ರಾಮದ ಬೊಮ್ಮನ ಮಗ ಅಯ್ಯಣ ಎಂಬಾತ ಮರ. ಇಟ್ಟಿಗೆ ಹಾಗೂ ಚಿತ್ರಕಲೆಗಳಲ್ಲಿ ಶಾಸ್ತ್ರೋಕ್ತವಾಗಿ ಕೃತಿ ರಚನೆಯನ್ನು ಮಾಡುತ್ತಿದ್ದ. ಕಮ್ಮಾರ ವಿದ್ಯೆಯಲ್ಲಿ ವಿಶ್ವಕರ್ಮನಿಗಿಂತಲೂ ಮಿಗಿಲು ಎಂದೆನಿಸಿದ್ದನೆಂದು ವರ್ಣಿಸುತ್ತದೆ. ಅಂತೆಯೇ ಗದಗ ಜಿಲ್ಲೆಯ ಹಲವಾರು ಪ್ರಾಚೀನ ಪ್ರಸಿದ್ಧ ಕವಿಗಳು ತಮ್ಮ ಕಾವ್ಯಗಳಲ್ಲಿ ಚಿತ್ರಕಲೆಯನ್ನು ಕುರಿತು ವಿವರಣೆನೀಡಿದ್ದಾರೆ. ಪಂಪನ ಆದಿಪುರಾಣದ ಕಥೆಯೊಂದರಲ್ಲಿ ಪತಿ-ಪತ್ನಿಯರು ತಮ್ಮ ಪೂರ್ವಜನ್ಮದ ಕಥೆಯನ್ನು ಹೇಳುವಾಗ ಅದರಲ್ಲಿ ಚಿತ್ರಪಟ ಹಾಗೂ ಅದರಲ್ಲಿದ್ದ ವಿಷಯ ವಸ್ತು ನಿರ್ವಹಣಾ ಕೌಶಲ್ಯ ಇತ್ಯಾದಿಗಳ ಬಗ್ಗೆ ವಿಸ್ತಾರವಾದ ಸಂಗತಿಗಳು ತಿಳಿದು ಬರುತ್ತದೆ. ಅಲ್ಲದೇ ಪಂಪ ತನ್ನೆರಡೂ ಕಾವ್ಯಗಳಲ್ಲಿ ಚಿತ್ರ. ಬಣ್ಣ ಇತ್ಯಾದಿಗಳ ಕುರಿತು

---

೯. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೩೩

೧೦. ಹ. ರಾ. ಕಿದಿಯೂರು : ನಮ್ಮ ಗದಗ-ಬೆಟಗೇರಿ. ಪುಟ ೩೯೩

ಹಲವಾರು ಉಪಮೆಗಳನ್ನು ವರ್ಣನೆಗಳನ್ನು ತಂದಿದ್ದಾನೆ. ಅಂತೆಯೇ ಕನಕದಾಸರು ಮೋಹನ ತರಂಗಿಣಿಯಲ್ಲಿ ಅರಮನೆ ಹಾಗೂ ಮನೆಗಳ ಭಿತ್ತಿಗಳಲ್ಲಿ. ಮೇಲೆ ಕಟ್ಟಿದ ಧ್ವಜಗಳಲ್ಲಿ ಬರೆದಿದ್ದ ಚಿತ್ರಗಳ ಬಗ್ಗೆ ವಿವರಿಸಿರುವರು. ಹೀಗೆ ಚಿತ್ರಕಲೆ ಹಿಂದಿನಿಂದಲೂ ಈ ಗದಗ ಜಿಲ್ಲೆಯಲ್ಲಿ ಬೆಳೆದು ಬಂದಿದೆ. ಇಂತಹ ಪರಿಸರಕ್ಕೆ ಬಂದು ನೆಲೆಸಿದ ಚೆಟ್ಟಿಯವರು " ಅಥಣಿ ನನಗೆ ಜನ್ಮ ಕೊಟ್ಟ ಊರಾಗಿದ್ದರೂ. ನನ್ನ ಬದುಕಿಗೊಂದು ನೆಲೆಯನ್ನು ಕೊಟ್ಟು ತನ್ನ ಗರ್ಭದಲ್ಲಿರಿಸಿಕೊಂಡು ಕಳೆದ ಐದು ದಶಕಗಳಿಂದ ಪೋಷಿಸುತ್ತ ಬಂದಿರುವ ಗದಗೇ ಈ ನನ್ನೂರು ಎಂದು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತದೆ. ಎನ್ನುತ್ತಾರೆ. ಇಂದು ಗದಗು ಬಹಳ ಬೆಳೆದಿದೆ. ಹಾಗೆಯೇ ಗದಗಿನ ಬೆಳವಣಿಗೆಯೊಂದಿಗೆ ನನ್ನ ಕಲಾಬದುಕು ಬೆಳವಣಿಗೆಯಾಗುತ್ತ ಬಂದಿರುವುದನ್ನು ಎಂದೂ ಮರೆಯಲಾರೆ "[೧೧] ಎನ್ನುತ್ತಾರೆ ಚೆಟ್ಟಿಯವರು.

೧೯೩೯ ರಲ್ಲಿ ಚೆಟ್ಟಿಯವರು ಗದುಗಿಗೆ ಬಂದು ನೆಲಸಿದನಂತರ ೧೯೪೦ ರಲ್ಲಿ ಅವರ ಚಿಕ್ಕಪ್ಪ ಮಾಮಲೇದಾರ ವೃತ್ತಿಯಿಂದ ನಿವೃತ್ತಿ ಹೊಂದಿದರು. ಗದುಗಿನಲ್ಲಿ ತಾವಿದ್ದ ಮನೆಯಲ್ಲಿಯೇ ಮುರಿಗೆಪ್ಪನವರನ್ನು ಉಳಿಸಿದರು. ಆಗ ಜೋಡು ಹನುಮಂತ ದೇವರ ಗುಡಿಯ ಎದುರಿನ ಮನೆಯಲ್ಲಿದ್ದರು. ತಾವು ಅಥಣಿಯಲ್ಲಿಯ ಆಸ್ತಿಸಂರಕ್ಷಣೆಗಾಗಿ ಹೋದರು. ಅಥಣಿಗೆ ಹೋಗುವ ಮುನ್ನ ಮುರಿಗೆಪ್ಪನವರಿಗೆ ಒಂದು ಮಾತನ್ನು ತಿಳಿಹೇಳಿದರು: " ಉದಯ ಆಗೋ ಸೂರ್ಯನ್ನ ಎಲ್ಲರೂ ಪೂಜೆ ಮಾಡ್ತಾರ ಮುಳುಗೋ ಸೂರ್ಯನ್ನ ಯಾರೂ ಪೂಜೆ ಮಾಡೋದಿಲ್ಲ. ಬದುಕಿನಲ್ಲಿ ನಾವು ನಮ್ಮ ಶೀಲ. ಸಚ್ಚಾರಿತ್ರ್ಯದಿಂದ ಪ್ರತಿಷ್ಠೆಯನ್ನುಗಳಿಸಿಕೊಂಡರೆ ಮಾತ್ರ ಎಲ್ಲರ ಬಾಯಲ್ಲಿ ಉಳಿಯುತ್ತೇವೆ ".[೧೨] ಅಂದರೆ ಸಮಾಜದಲ್ಲಿ ಒಳ್ಳೆಯ ಮನುಷ್ಯನಾಗಿ ಎಲ್ಲರಿಂದಲೂ ಮೆಚ್ಚುವಂತೆ ಬಾಳಬೇಕೆಂಬ ಅರ್ಥದಲ್ಲಿ ಹೇಳಿರಬೇಕು. ಮುಂದೆ ಸತತವಾಗಿ ನಿತ್ಯ ಚಿತ್ರಗಳನ್ನು ರಚಿಸಿದರು. ಈ ಕಲಾಕೃತಿಗಳ ರಚನೆಯ ಮೂಲಕ ಕೆಲವೇ ದಿನಗಳಲ್ಲಿ ಉತ್ತರ ಕರ್ನಾಟಕದ ತುಂಬಾ ಪ್ರತಿಷ್ಠೆಯನ್ನು ಗಳಿಸಿಕೊಂಡರು. " ಚೆಟ್ಟಿಯವರು ದಿನವೂ ಉದಯವಾಗುವ ಸೂರ್ಯನಂತೆ ಕಲಾರಂಗದಲ್ಲಿ ಉದಯಿಸಿ ಬೆಳಕಾಗಿದ್ದಾರೆ. ೧೯೪೪ ರಲ್ಲಿ ಗದುಗಿನಲ್ಲಿಯ ಶಹಪೂರ ಪೇಟೆಯಲ್ಲಿರುವ ತಾಡಪತ್ರಿ ಹನುಮಂತರಾಯರ ಮನೆಯನ್ನು ಬಾಡಿಗೆ ಹಿಡಿದು ಸ್ವಪ್ರಯತ್ನದಿಂದ ಮುಂದೆ ಅದನ್ನೇ ಖರೀದಿಸಿಕೊಂಡು ಖಾಯಂ ಆಗಿ ಗದುಗಿನ ನಿವಾಸಿಯಾಗುಳಿದರು ".[೧೩] ಈಗ ಅವರ ಸ್ವಂತದ್ದಾದ ಈ ಮನೆ ಹಾಳುಬಿದ್ದು ಬಿಕೋ ಎನ್ನುತ್ತಿದೆ.

ಮುಂಬೈನ ಜೆ. ಜೆ. ಕಲಾಶಾಲೆಯಲ್ಲಿ ಚಿತ್ರಕಲಾಭ್ಯಾಸವನ್ನು ಮುಗಿಸಿಕೊಂಡು ಬಂದ ಗದುಗಿನ ಶ್ರೀ ಟಿ. ಪಿ. ಅಕ್ಕಿಯವರು ಗದುಗಿನ ಕಲಾ ಚರಿತ್ರೆಯ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುವಂತೆ " ವಿಜಯ ಕಲಾ

---

೧೧. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೯೪

೧೨. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೩೪

೧೩. ಶ್ರೀ ಅನ್ನದಾನಿ ಹಿರೇಮಠ : ಎಂ. ವಿ. ಚೆಟ್ಟಿ. ಪುಟ ೭-೮

ಮಂದಿರವನ್ನು ೧೯೪೭ ರಲ್ಲಿ ಸ್ಥಾಪಿಸಿದರು. ಇಲ್ಲಿ ಮೂರ್ತಿಶಿಲ್ಪ. ಚಿತ್ರಕಲೆಯಲ್ಲಿ ಡಿಪ್ಲೊಮಾ. ಕಲಾಶಿಕ್ಷಣ ತರಬೇತಿಯ ಡಿ.ಟಿ.ಸಿ; ಡಿ.ಎಮ್ ವರ್ಗಗಳನ್ನು ಪ್ರಾರಂಭಿಸಿದ್ದರು. " ಇಂಥ ಒಂದು ಆದರ್ಶ ಕಲಾ ಸಂಸ್ಥೆಯಲ್ಲಿ ಸುಮಾರು ಮೂವತ್ತೆರಡು ವರ್ಷಗಳವರೆಗೆ ಕಲಾ ಶಿಕ್ಷಕನಾಗಿ, ಉಪ ಪ್ರಾಚಾರ್ಯನಾಗಿ ಸೇವೆ ಸಲ್ಲಿಸುವ ಸೌಭಾಗ್ಯ ನನಗೆ ಒದಗಿ ಬಂದಿತ್ತು. 'ಶ್ರೀ ಅಕ್ಕಿ ಮಾಸ್ತರರು ನನ್ನನ್ನು ಮುರಿಗೆಪ್ಪಣ್ಣಾ' ಎಂದೇ ಕೂಗುತ್ತಿದ್ದರು. ಆ ಕೂಗಿನಲ್ಲಿ ಭ್ರಾತೃವಾತ್ಸಲ್ಯ ಅಡಗಿದೆ "[೧೪] ಎನ್ನುವ ಚೆಟ್ಟಿಯವರು ಅಷ್ಟೇ ನಿಷ್ಠೆಯಿಂದ ದುಡಿದರು.

ಕಲಾಶಿಕ್ಷಕರಾಗಿ :

ಚೆಟ್ಟಿಯವರು ವಿಜಯ ಕಲಾಮಂದಿರದಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ ಮುಂಬೈಯಿಯ ಜೆ. ಜೆ. ಕಲಾಶಾಲೆಯ ಮಾದರಿಯನ್ನೇ ಅನುಸರಿಸಿದ್ದರು. ಅದೇ ಶಿಸ್ತಿನ ಪೋಷಾಕು. ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವಾಗಲೂ ಅದೇ ಶಿಸ್ತು ಚೆಟ್ಟಿಯವರಂತಹ ಕಲಾವಿದರಿಂದ ಶ್ರೀ ಟಿ. ಪಿ. ಅಕ್ಕಿಯವರ ಮಾರ್ಗದರ್ಶನಗಳಿಂದ ವಿಜಯ ಕಲಾ ಮಂದಿರ ಕರ್ನಾಟಕದಲ್ಲಿ ಒಳ್ಳೆಯ ಸಂಸ್ಥೆಯಾಗಿ ಬೆಳೆದುಬಂದಿದೆ ಎನ್ನುವಲ್ಲಿ ಎರಡು ಮಾತಿಲ್ಲ.

" ಮಾತು ಕಡಿಮೆ ಕೆಲಸ ಜಾಸ್ತಿ. ಚೆಟ್ಟಿಯವರು ಯಾವಾಗಲೂ ಹೇಳುವ ಮಾತುಗಳಿವು. "[೧೫]. "ಅವರು ಮೂಕರಾಗಿದ್ದು ಸಹಿತ ಲೋಕವನ್ನು ಮಾತನಾಡಿಸಿದವರು "[೧೬] ಅಂದರೆ ಅವರು ಹೆಚ್ಚು ಮಾತನಾಡುತ್ತಿರಲಿಲ್ಲ ತಮ್ಮ ಚಿತ್ರಗಳ ಮುಖಾಂತರ ಲೋಕವನ್ನು ಮಾತನಾಡಿಸಿದವರು.

ಚೆಟ್ಟಿಯವರು ನೈಜಕಲೆಯ ಅಭ್ಯಾಸವನ್ನು ಮಾಡಿ ಅದನ್ನೇ ಕರಗತ ಮಾಡಿಕೊಂಡಂತವರು ಆಗಿನ ಪಠ್ಯಕ್ರಮದಲ್ಲಿ ಶರೀರಶಾಸ್ತ್ರ (Anatomy) ಇದ್ದದ್ದರಿಂದ ಮನುಷ್ಯರ ಹಾಗೂ ಪ್ರಾಣಿಗಳ ದೇಹ ರಚನೆಯನ್ನು ಆ ಆಕೃತಿಗಳ ಉಬ್ಬು ತಗ್ಗುಗಳನ್ನು. ನೆರಳು. ಬೆಳಕುಗಳನ್ನು ಅತ್ಯಂತ ನೈಜವಾಗಿ ಚಿತ್ರಿಸುತ್ತಿದ್ದರು. ಆದರೆ ಈಗ ಆ ಒಂದು ಶಿಸ್ತಿನ ಅಭ್ಯಾಸ ಇಲ್ಲವಾದ್ದರಿಂದ ಮೂಲಭೂತವಾದ ಆಕೃತಿಗಳ ನೈಜತೆ ಕಳೆದುಕೊಂಡು ಬಿಟ್ಟಿದೆ. " ಚೆಟ್ಟಿಯವರ ಜೊತೆ ಇದ್ದಾಗ ಅನಾಟೊಮಿ ಅಭ್ಯಾಸ ಮಾಡಬೇಕೇನ್ರಿ ಅಂತ ಕೇಳಿದ್ರ ' ಏನೋಪಾ ಮಾರಾಯ ಅದಿಲ್ಲ ಹ್ಯಾಂಗ ಯ್ಯಾವ್ದರ ಚಿತ್ರ ಚಿತ್ರಸಲಿಕ್ಕೆ ಸಾಧ್ಯ ಅದ ಏನು ? ಎನ್ನುತ್ತಿದ್ದರು. ಮೂಲಭೂತವಾದ ಅಭ್ಯಾಸ ಇದಾಗಿರುವುದರಿಂದ ನೀವು ಮನುಷ್ಯರನ್ನು ಪ್ರಾಣಿಗಳ ನೈಜವಾಗಿ ಚಿತ್ರಿಸಲಿಕ್ಕೆ ಸಾಧ್ಯ "[೧೭] ಎಂದು ವಿದ್ಯಾರ್ಥಿಗಳಿಗೆ ಹೇಳ್ತಾ ಇದ್ರು. ಅಂದರೆ ನಾವು ಯಾವುದೇ ವಿಷಯವನ್ನು ವಿವರವಾಗಿ ಕಲಿತಾಗ ಅದನ್ನು ಸುಲಭವಾಗಿ ಸಂಕ್ಷಿಪ್ತ ಗೊಳಿಸಬಹುದು. ಆದರೆ ಈಗಿನ ಕಲಾ ವಿದ್ಯಾರ್ಥಿಗಳು ಇದಾವುದನ್ನು ಅರಿತುಕೊಳ್ಳುವ

---

೧೪. ಎಂ. ಎ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೪೫

೧೫. ಮಹಾಲಿಂಗ ಮಾಳಗಿ (ಸಂ) : ಕಲಾ ತಪಸ್ವಿ. ಎಂ. ಎ. ಚೆಟ್ಟಿಯವರ ಅಭಿನಂದನ ಗ್ರಂಥ. ಪುಟ ೯

೧೬. ಎಸ್. ಜಿ. ಮುಂಗರವಾಡಿ : ಸಂದರ್ಶನ ೨೨-೧೦-೨೦೦೦. ಗೋಕಾಕ

೧೭. ಎಸ್. ಜಿ. ಮುಂಗರವಾಡಿ : ಸಂದರ್ಶನ ೨೨-೧೦-೨೦೦೦. ಗೋಕಾಕ

ಗೋಜಿಗೆ ಹೋಗದೆ ಬೇಗನೆ ತಾವು ನವ್ಯ ಶೈಲಿಯಲ್ಲಿ ಚಿತ್ರಗಳನ್ನು ಬರೆದು ಹೆಸರು ಮಾಡಬೇಕೆನ್ನುವ ತವಕ ಹೊಂದಿದ್ದಾರೆ. ನಾವು ನವ್ಯಕಲೆಯತ್ತ ಸಾಗಬೇಕಾದರೆ ವ್ಯಾಕರಣ ಬದ್ಧವಾದ ಚಿತ್ರಕಲಾಭ್ಯಾಸದ ಅವಶ್ಯಕತೆ ಇದೆ. ನವ್ಯ ಕಲಾ ಶೈಲಿಯನ್ನು ಅಳವಡಿಸಿಕೊಂಡಂಥ ಎಲ್ಲ ಹಿರಿಯ ಕಲಾವಿದರೂ ಮೊದಲು ವ್ಯಾಕರಣ ಬದ್ಧವಾದ ಚಿತ್ರಕಲಾಭ್ಯಾಸವನ್ನು ಮಾಡಿದವರೆ ಉದಾ :- ಕೆ. ಕೆ. ಹೆಬ್ಬಾರ. ಆರ್. ಎಂ. ಹಡಪದ. ಜೆ. ಎಸ್. ಖಂಡೇರಾವ್ ವ್ಹಿ. ಬಿ. ಹಿರೇಗೌಡರ ಮುಂತಾದವರನ್ನು ಹೆಸರಿಸಬಹುದು.

ನಿಸರ್ಗ ಚಿತ್ರಗಳನ್ನು ಚಿತ್ರಿಸಲು ವಿದ್ಯಾರ್ಥಿಗಳನ್ನು ಸ್ವತಃ ತಾವೇ ಚಿತ್ರಿಸತಕ್ಕ ಸ್ಥಳಗಳಿಗೆ ಕರೆದುಕೊಂಡು ಹೋಗಿ ವಸ್ತುಗಳ ದೂರ ಸಮೀಪದ ದೃಗ್‌ದರ್ಶನದ ಬಗ್ಗೆ. ಬಣ್ಣಗಳ ಬದಲಾವಣೆಯನ್ನು ತಿಳಿಸಿ ಕೊಡುತ್ತಿದ್ದರು. "ನಮ್ಮನ್ನು ಕೆಲವು ಸ್ಥಳಗಳಿಗೆ ಕರೆಕೊಂಡು ಹೋಗಿ ಅಭ್ಯಾಸ ಮಾಡ್ಲಿಕ್ಕೆ ಹಚ್ಚತಾ ಇದ್ರು. ಅದು ಗುಡ್ಡ ಕಾಣಸ್ತದ ಏನಪ ಮತ್ತು ಗಿಡ ಕಾಣಸ್ತದ ಏನಪಾ ಅಂಥ ಅನೇಕ ಪ್ರಶ್ನೆಗಳನ್ನು ಕೇಳ್ತಾಇದ್ರು ಅವಕ್ಕೆ ಉತ್ತರವನ್ನು ಹೇಳ್ತಾಇದ್ರು."[೧೮] ಹೀಗೆ ಅವರ ಗುರುಗಳಾದ ತಾಸ್ಕರ್ ಅವರು ಅದೇ ರೀತಿ ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಕೇಳಿ ಅವರಿಗೆ ಯಾವ ರೀತಿ ವಿಷಯ ಮನವರಿಕೆ ಆಗಿದೆ ಅನ್ನುವದನ್ನು ತಿಳಿದುಕೊಳ್ಳುತ್ತಿದ್ದರು. ಅದೇ ಪದ್ಧತಿಯನ್ನು ನಾವಿಲ್ಲಿ ಕಾಣುತ್ತೇವೆ.

ವಿದ್ಯಾರ್ಥಿಗಳಿಗೆ ಎಂದೂ ಅವರು ನೇರವಾಗಿ ಬೈದವರಲ್ಲ ಮೃದು ಮಾತುಗಳಿಂದ ಅವರ ತಪ್ಪುಗಳನ್ನು ಅವರಿಗೆ ಮನವರಿಕೆ ಮಾಡಿಕೊಡುತ್ತಿದ್ದರು. ಅಲ್ಲದೆ "ತಾವು ಒಂದು ಪೇಪರ ತೆಗೆದುಕೊಂಡು ಒಂದು ಬೋರ್ಡಿಗೆ ಅಂಟಿಸಿ ಎಲ್ಲಾ ಹುಡುಗರಿಗೆ ಸುತ್ತಲೂ ನಿಲ್ಲಿಸಿಕೊಂಡು ಯಾವ ರೀತಿ ಚಿತ್ರ ರಚಿಸಬೇಕು ಅಂತ ಹೇಳ್ತಾಇದ್ರು. ಪ್ರತಿಯೊಂದು ಲೈಫ್ ಆಗಲಿ. ಭಾವಚಿತ್ರವಾಗಲಿ ಸಂಯೋಜನ ಚಿತ್ರವಾಗಲಿ ಪ್ರತಿಯೊಂದನ್ನು ಮಾಡಿ ತೋರಿಸುತ್ತ ಇದ್ದರು. ಬರಿ ಬಾಯಲ್ಲಿ ಹೇಳುತ್ತಿರಲಿಲ್ಲ. ಚಿತ್ರ ಮಾಡುವ ಸಂದರ್ಭದಲ್ಲಿ ಉಂಟಾಗುವ ತೊಂದರೆಗಳಿಗೆ ವಿವರಣೆ ಕೊಟ್ಟು ನೆರಳು ಬೆಳಕನ್ನು ಯಾವ ರೀತಿ ಮಾಡಬೇಕು ಎಂಬುದನ್ನು ಹೇಳುತ್ತಿದ್ದರು ಚಿತ್ರದಲ್ಲಿ ಪ್ರತ್ಯಕ್ಷವಾಗಿ ಅದರ ಲೋಪ ದೋಷಗಳನ್ನು ತಿದ್ದಿ ಸರಿಯಾದ ಮಾರ್ಗದರ್ಶನ ಮಾಡುತ್ತಿದ್ದರು. ಉತ್ತಮ ಕಲಾವಿದ ಯಾವ ರೀತಿ ಆಗಬೇಕು ಅನ್ನುವ ಮಾರ್ಗದರ್ಶನ ಸೂತ್ರಗಳನ್ನು ಪಾಠ ಪ್ರವಚನ ರೂಪದಲ್ಲಿ ನಮ್ಮ ವರ್ಗದಲ್ಲಿ ಹೇಳ್ತಾಇದ್ರು"[೧೯] ಹೀಗೆ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವಲ್ಲಿ ಎಂದೂ ಬೇಸರ ಮಾಡಿಕೊಂಡವರಲ್ಲ ಚಿಟ್ಟಿಯವರು.

"ಬಣ್ಣಗಳ ಬಗ್ಗೆ ಅವರಲ್ಲಿ ಆಳವಾದ ಜ್ಞಾನವಿತ್ತು. ಬಣ್ಣದ ಹಲಗೆ (ಪ್ಯಾಲೆಟ್) ಮೇಲೆ ಯಾವ ಬಣ್ಣದ ಹತ್ತಿರ ಯಾವ ಬಣ್ಣ ಇರಬೇಕು ಅನ್ನೋದು ಕರಗತವಾಗಿತ್ತು. ನೋಡಲಾರದೇ ಆ ಕೈ ಅದೇ ಬಣ್ಣದ ಮೇಲೆ ಹೋಗುತ್ತಿತ್ತು"[೨೦] ಅವರು ಬಣ್ಣಗಳನ್ನು ಮಿಶ್ರಣ ಮಾಡುವರೀತಿ ಬಣ್ಣದ ಪ್ಲೇಟನ್ನು ಸ್ವಚ್ಛವಾಗಿ

---

೧೮. ಎಸ್. ಜಿ. ಮುಂಗರವಾಡಿ : ಸಂದರ್ಶನ ೨೨-೧೦-೨೦೦೦ ತಾ. ಗೋಕಾಕ ಜಿ. ಬೆಳಗಾವ

೧೯. ಎಮ್. ಆರ್. ಬಾಳಿಕಾಯಿ : ಸಂದರ್ಶನ. ೨೮-೮-೧೯೯೯. ಧಾರವಾಡ

೨೦. ಎಸ್. ಜಿ. ಮುಂಗರವಾಡಿ : ಸಂದರ್ಶನ. ೨೨-೧೦-೨೦೦೦. ಧಾರವಾಡ

ಉಪಯೋಗಿಸುವ ವಿಧಿ ವಿಧಾನ. ಚಿತ್ರಕ್ಕೆ ಬಣ್ಣವನ್ನು ಲೇಪಿಸುವ ಅವರ ಕುಂಚ ಚಮತ್ಕಾರ ನನ್ನಂಥ ಅನೇಕ ವಿದ್ಯಾರ್ಥಿಗಳಿಗೆ ಹುರುಪು. ಸ್ಫೂರ್ತಿ. ಆತ್ಮವಿಶ್ವಾಸವನ್ನು ಉಂಟುಮಾಡಿವೆ. ಅವರ ಲಾಯಿಫ್ ಚಿತ್ರದ ಡೆಮೋನ್‌ಸ್ಟ್ರೇಷನ್ ನೋಡುವುದೇ ನಮಗೊಂದು ಹಬ್ಬವಾಗುತ್ತಿತ್ತು[೨೧] ಎಂದು ಡಾ. ಎಸ್. ಸಿ. ಪಾಟೀಲ ಅವರು ತಮ್ಮ ಗುರುಗಳ ಬಗ್ಗೆ ಬರೆದಿದ್ದಾರೆ.

ಚೆಟ್ಟಿಯವರ ಜೇಬಿನಲ್ಲಿ ಸದಾ ಒಂದು ಪೆನ್ಸಿಲ್ ಕೈಯಲ್ಲಿ ಒಂದು ಸ್ಕೆಚ್ ಬುಕ್ಕ ಯಾವಾಗಲೂ ಇರತಿತ್ತು. ತಮ್ಮ ಮನಸ್ಸೆಳೆದಂಥ ಯಾವುದೇ ಆಕೃತಿ ಇರಲಿ ನೋಡಿದ ತಕ್ಷಣ ಸ್ಕೆಚ್ ಮಾಡುವುದು. ಇದು ಅವರ ವಿದ್ಯಾರ್ಥಿ ದೆಸೆಯಿಂದಲೇ ರೂಢಿಗತವಾಗಿ ಬಂದದ್ದು. ಶಿಕ್ಷಕರಾಗಿದ್ದಾಗ ವಿದ್ಯಾರ್ಥಿಗಳ ಜೊತೆ ತಾವು ರೇಖಾ ಚಿತ್ರಗಳನ್ನು ಚಿತ್ರಿಸುತ್ತಿದ್ದರು. ಅಲ್ಲದೇ ವಿದ್ಯಾರ್ಥಿಗಳಿಗೆ ಈ ರೀತಿ ಹೇಳ್ತಾ ಇದ್ರು. " ನೀವು ಈ ರೀತಿ ಸುಮ್ನೆ ಚಿತ್ರ ತೆಗದ್ರ ಆಗೂದಿಲ್ಲ ಪ್ರತಿದಿವ್ಸ ೫೦ ರಿಂದ ೧೦೦ ಸ್ಕೆಚ್ ಮಾಡ್ಲೇ ಬೇಕು. ೨೦೦ ಪುಟದ ನೋಟಬುಕ್ ೨-೩ ದಿನಗಳಲ್ಲಿ ಮುಗೀಬೇಕು. ಅಂತ ಹೇಳಿ ಹಂಗ ತಾವು ಮಾಡ್ತಿದ್ರು ನಮ್ಮಿಂದನೂ ಮಾಡಸಿದ್ರು. ಬಸ್‌ಸ್ಟಾಂಡ್. ಪೇಟಿ. ಸಂತೆ. ರೇಲ್ವೆಸ್ಟೇಶನ್. ಥೇಟರ್ ಮುಂದೆ ಹೀಗೆ ಎಲ್ಲಾ ಕಡೆಗೆ ನಮ್ಮನ್ನು ಸ್ಕೆಚ್ ಮಾಡಲಿಕ್ಕೆ ಕರೆದುಕೊಂಡು ಹೋಗ್ತಿದ್ರು ತಾವೂ ಸ್ಕೆಚ್ ಮಾಡ್ತಿದ್ರು. ನಮಗೂ ಹ್ಯಾಂಗ ಮಾಡಬೇಕಂತ ಹೇಳ್ತಿದ್ರು. ಆಕೃತಿ ಸ್ಕೆಚ್ ಕ್ಷಣಮಾತ್ರದಲ್ಲಿ ತೆಗಿತಿದ್ರು ಅಷ್ಟು ತೀವ್ರವಾಗಿತ್ತು ಅವರ ಕೈಚಳಕ ಮತ್ತು ರೇಖೆಯಲ್ಲೂ ಅಷ್ಟೇ ನಿಖರತೆ ಇತ್ತು. ಅವರು ಎಂದೂ ರಬ್ಬರನ್ನು ಬಳಸಲೇ ಇಲ್ಲ "[೨೧] ಎನ್ನುತ್ತಾರೆ ಅವರ ವಿದ್ಯಾರ್ಥಿ ಮುಂಗರವಾಡಿಯವರು.

ವಿದ್ಯಾರ್ಥಿಗಳನ್ನು ಆಗಾಗ ತಮ್ಮ ಮನೆಗೂ ಕರೆದುಕೊಂಡು ಹೋಗಿ ತಮ್ಮ ಸ್ಟುಡಿಯೋದಲ್ಲಿ (ಮನೆಯಲ್ಲಿ) ರಚಿಸಿದ ಚಿತ್ರಗಳನ್ನು ತೋರಿಸಿ ವಿವರಿಸಿ ಹೇಳ್ತಾಇದ್ರು. " ಚಿತ್ರಗಳನ್ನು ಚಿತ್ರಿಸುವಾಗ ನಾವು ಪೂರ್ವದಲ್ಲಿ ಚಿತ್ರವಿಷಯವನ್ನು ಇಡಿಯಾಗಿ ಅಭ್ಯಾಸ ಮಾಡಬೇಕು. ಚಿತ್ರ ರಚಿಸುವುದು ದೊಡ್ಡದಲ್ಲ ಎಲ್ಲರೂ ತೇಗಿಬಹುದು. ಆದ್ರ ಅದಕ್ಕಿಂತ ಪೂರ್ವ ಅದರ ಚಿಂತನೆ ಬೇಕು. ಅದಿಲ್ಲದೆ ಮಾಡ್ಲಿಕ್ಕೆ ಹೋದ್ರ ಚಿತ್ರ ಆಗೋದಿಲ್ಲ. ನಿಜವಾದ ಕಲಾಭಾವನೆ ಬರಬೇಕಾದ್ರ ನಿಮ್ಮಲ್ಲಿರುವ ಭಾವದೊಂದಿಗೆ ಅದನ್ನು ಮೂಡಿಸಬೇಕು ಇಲ್ಲ ಅಂದ್ರ ಅದು ಚಿತ್ರ ಆಗುದಿಲ್ಲ "[೨೨] ಎಂಬ ಸತ್ಯತೆಯನ್ನು ಅಳವಡಿಸಿಕೊಂಡವರು ಚೆಟ್ಟಿಯವರು. ಅದಕ್ಕೆ " ಕಲೆ ಯಾವುದೇ ಉದ್ದೇಶದಿಂದ ಬಂದಿದ್ದರೂ ಅದು ಪ್ರಕೃತಿಯನ್ನು ಅನುಕರಿಸುತ್ತದೆ. ಹಾಗೆ ಅನುಕರಿಸುವಾಗ ಕಲಾವಿದನಿಗೆ ಬೇಕಿರುವಷ್ಟೇ ಉಳಿಸಿಕೊಳ್ಳುವ ಸ್ವಾತಂತ್ರ್ಯ ಕೊಡುತ್ತದೆ. ಮೂಲವಸ್ತುವಿನಲ್ಲಿ ಇರುವ ಪ್ರಧಾನ ಗುಣವಷ್ಟೇ ಹಾಗೆ ಉಳಿದುಕೊಳ್ಳುತ್ತದೆ. ಇದನ್ನೇ ಕಲಾವಿದ ಒಳಗಣ್ಣಿನಿಂದ ಪರಿಭಾವಿಸುತ್ತಾನೆ. ಇದನ್ನೇ ಸೃಷ್ಟಿ. ಬ್ರಹ್ಮ ಎಂದೆಲ್ಲಾ ಕರೆದಿರುವುದು. ಸಾಮಾನ್ಯನಲ್ಲಿ ಇಲ್ಲದ ಒಳಗಣ್ಣು ಕಲಾವಿದನಲ್ಲಿ ಜಾಗ್ರತವಾಗಿರುತ್ತದೆ "[೨೩]

---

೨೧. ಮಹಾಲಿಂಗ ಯಾಳಗಿ (ಸಂ) : ಕಲಾ ತಪಸ್ವಿ. ಎಂ. ವಿ. ಚೆಟ್ಟಿಯವರ ಅಭಿನಂದನ ಗ್ರಂಥ. ಪುಟ ೧೦

೨೨. ಎಸ್. ಜಿ. ಮುಂಗರವಾಡಿ : ಸಂದರ್ಶನ ೨೨-೧೦-೨೦೦೦. ಗೋಕಾಕ

೨೩. ಎಸ್. ಜಿ. ಮುಂಗರವಾಡಿ : ಸಂದರ್ಶನ ೨೨-೧೦-೨೦೦೦. ಗೋಕಾಕ

ಅಂದಾಗ ಆತ ಚಿತ್ರಿಸಿದ ಚಿತ್ರ ಕಲೆ ಆಗುತ್ತದೆ ಎನ್ನುವ ಅಂಶಗಳನ್ನೇ ಚೆಟ್ಟಿಯವರು ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರು.

ಸಂಯೋಜನ ಚಿತ್ರ ಹೇಳುವಂಥ ಸಂದರ್ಭದಲ್ಲಿಯೂ ಅವು ಈ ರೀತಿ ಹೇಳ್ತಾ ಇದ್ರು. " ಚಿತ್ರದಲ್ಲಿಯ ಎಲ್ಲಾ ವಸ್ತುಗಳು ಒಂದಕ್ಕೊಂದು ಸಂಬಂಧವನ್ನು ಹೊಂದಿರಬೇಕು. ಆ ಸಂಬಂಧವನ್ನು ಬಿಟ್ಟು ನಾವು ಚಿತ್ರಿಸಿದ್ರ ಅದು ಅಸಂಬದ್ಧವಾಗಿ ಕಾಣಿಸುತ್ತ ಅನ್ನುವಂಥದನ್ನು ಹೇಳ್ತಾ ಇದ್ರು".[೨೪] " ವ್ಯಕ್ತಿ ಚಿತ್ರ ಹಾಗೂ ಸಂಯೋಜನ ಚಿತ್ರಗಳನ್ನು ರಚಿಸುವಲ್ಲಿ ಅವರದು ಎತ್ತಿದ ಕೈ. ಅಂತೆಯೇ ಬಹುತೇಕ ಎಲ್ಲ ವಿದ್ಯಾರ್ಥಿಗಳು ಅವರ ಸುತ್ತಲೂ ನಿಂತು ಅವರು ರಚಿಸುವ ರೀತಿಯನ್ನು ವೀಕ್ಷಿಸಿ ತಾವು ಹಾಗೆಯೇ ರೂಪಿಸಬೇಕೆನ್ನುವ ಬಯಕೆಯೊಂದಿಗೆ ತಮ್ಮ ತಮ್ಮ ಸ್ಥಳಗಳನ್ನು ಆಕ್ರಮಿಸುತ್ತಿದ್ದರು ".[೨೫]

ಚೆಟ್ಟಿಯವರ ಕಾರ್ಯದಕ್ಷತೆ. ವಿದ್ಯಾರ್ಥಿಗಳ ಮೇಲಿನ ಪ್ರೀತಿ ಹಾಗೂ ಶ್ರೇಯೋಭಿವೃದ್ಧಿಯನ್ನು ಕಂಡಂಥ ಶ್ರೀ ಟಿ. ಪಿ. ಅಕ್ಕಿಯವರು ಹೀಗೆ ಹೇಳಿದ್ದಾರೆ. " ೧೯೪೭ ರಿಂದ ೭೨ ರ ವರೆಗೆ ಉಪಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತ ಕಲಾಮಂದಿರದ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಿದವರಾಗಿದ್ದಾರೆ. ತನ್ನ ವಿದ್ಯಾರ್ಥಿ ಮಕ್ಕಳಲ್ಲಿ ಕಲೆಯ ಬಗ್ಗೆ ಅಭಿರುಚಿ ಹೆಚ್ಚಿಸಿದ. ಕರ್ತವ್ಯ ಪ್ರಜ್ಞೆ ಬೆಳೆಸಿದ. ಪಾಠದೊಂದಿಗೆ ಶಿಸ್ತು. ಸಂಯಮ ಇತ್ಯಾದಿ ಪಠ್ಯೇತರ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸಿ ಅವರ ಸರ್ವಾಂಗೀಣ ಉನ್ನತಿಗಾಗಿ ಶ್ರಮಿಸಿದ ಶಿಸ್ತಿನ ಮನುಷ್ಯ."[೨೬] ಸತ್ ಚಾರಿತ್ರ್ಯಶೀಲ ಶಿಕ್ಷಕರಾಗಿ ಆದರ್ಶ ಕಲಾವಿದರಾಗಿ ವೃತ್ತಿಗೌರವವನ್ನು ಹೆಚ್ಚಿಸಿಕೊಂಡ ವ್ಯಕ್ತಿ ಚೆಟ್ಟಿಯವರು. ಪ್ರತಿಷ್ಠೆ ಗೌರವದ ಹುದ್ದೆಗಳಿಗೆ ಎಂದೂ ಆಶೆ ಮಾಡಿದವರಲ್ಲ. ಪಾಲಿಗೆ ಬಂದದ್ದು ಪಂಚಾಮೃತವೆಂದು ಸ್ವೀಕರಿಸಿದವರು. ಅವರ ಕೈಯಲ್ಲಿ ಕಲಿತ ಸಾವಿರಾರು ವಿದ್ಯಾರ್ಥಿಗಳು ಇಂದಿಗೂ ಚೆಟ್ಟಿಯವರೆಂದರೆ ಸಾಕು. ಅವರ ಬಗ್ಗೆ ಅಭಿಮಾನದ ಭಕ್ತಿಪೂರ್ವಕ ಗೌರವದ ಮಾತುಗಳನ್ನು ಆಡುತ್ತಾರೆ ".[೨೭] ಅಂತೆಯೇ ಅವರ ವಿದ್ಯಾರ್ಥಿಯಾಗಿದ್ದ ಶ್ರೀ ಎಮ್. ಆರ್. ಬಾಳಿಕಾಯಿ ಅವರ ಅನುಭವದ ಮಾತುಗಳು ಹೀಗಿವೆ. " ಮೇಲಿಂದ ಮೇಲೆ ತಮ್ಮ ಮನೆಗೆ ಕರೆದುಕೊಂಡು ಹೋಗಿ ಚಿತ್ರವೀಕ್ಷಣೆ ಹೇಗೆ ಮಾಡಬೇಕು ನೆರಳು ಬೆಳಕನ್ನು ಯಾವ ರೀತಿ ಮಾಡಬೇಕು. ಲೈಫ ಅಂದರೆ ಏನು ? ಪೊಟ್ರೇಟ್ ಅಂದರೆ ಏನು ? ಸಂಯೋಜನ ಚಿತ್ರ ಅಂದರೇನು ? ಎಂದು ಅತ್ಯಂತ ಸೂಕ್ಷ್ಮವಾಗಿ ಹೇಳಿ ಮಾರ್ಗದರ್ಶನ ಮಾಡ್ತಾ ಇದ್ರು. ಇಂಥ ಒಬ್ಬ ಕಲಾವಿದನ ಸ್ಫೂರ್ತಿಯಿಂದಲೇ ನಾವು ಇವತ್ತು ಕಲೆಯನ್ನು ಅಭ್ಯಾಸ ಮಾಡ್ಲಿಕ್ಕೆ. ಬೆಳಿಲಿಕ್ಕ ಸಾಧ್ಯವಾಗಿದೆ "[೨೮] ಎಂದು ಹೇಳುತ್ತಾರೆ.

---

೨೩. ಅ. ಲ. ನರಶಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ : ಪುಟ ೩೬

೨೪. ಎಸ್. ಜಿ. ಮುಂಗರವಾಡಿ : ಸಂದರ್ಶನ ೨೨-೧೦-೨೦೦೦. ಗೋಕಾಕ

೨೫. ಮಹಾಲಿಂಗ ಯಾಳಗಿ (ಸಂ) : ಕಲಾ ತಪಸ್ವಿ. ಎಂ. ಎ. ಚೆಟ್ಟಿಯವರ ಅಭಿನಂದನ ಗ್ರಂಥ. ಪುಟ ೨೬

೨೬. ಮಹಾಲಿಂಗ ಯಾಳಗಿ (ಸಂ) : ಕಲಾ ತಪಸ್ವಿ. ಎಂ. ಎ. ಚೆಟ್ಟಿಯವರ ಅಭಿನಂದನ ಗ್ರಂಥ. ಪುಟ ೮೨

೨೭. ಮಹಾಲಿಂಗ ಯಾಳಗಿ (ಸಂ) : ಕಲಾ ತಪಸ್ವಿ. ಎಂ. ಎ. ಚೆಟ್ಟಿಯವರ ಅಭಿನಂದನ ಗ್ರಂಥ. ಪುಟ ೧೦

೨೮. ಎಮ್. ಆರ್. ಬಾಳಿಕಾಯಿ : ಸಂದರ್ಶನ : ೨೮-೫-೧೯೯೯. ಧಾರವಾಡ

ಚೆಟ್ಟಿಯವರು ಇದೇ ಸಮಯದಲ್ಲಿ ಮುಂಬಯಿ ಹಾಗೂ ಪುಣೆ ರಾಜ್ಯದ ಡ್ರಾಯಿಂಗ ಮತ್ತು ಪೇಂಟಿಂಗ್ ಪರೀಕ್ಷೆಗಳಿಗೆ ಪರೀಕ್ಷಕರಾಗಿ ೯ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. " ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ. ಅದರ ಸಲಹಾ ಸಮಿತಿಗೂ ಅಕಾಡೆಮಿಯ ಸದಸ್ಯರಾಗಿ ಕಾರ್ಯ ಗೈದಿದ್ದಾರೆ ".[೨೯] ಪರೀಕ್ಷಕರಾಗಿ ಹೋದಾಗಿನ ಒಂದು ಘಟನೆಯನ್ನು ಹಾಲಭಾವಿಯವರು ಹೀಗೆ ಹೇಳಿದ್ದಾರೆ. " ನಾನು ಚೆಟ್ಟಿಯವರು ಮತ್ತು ಬೇರೆಯವರು ಹೀಗೆ ಎಂಟು ಮಂದಿ ಆಗಿನ ಸ್ಕೂಲ್ ಆಫ್ ಆರ್ಟದ ಕಲಾ ಪರೀಕ್ಷಕರಾಗಿದ್ದೆವು. ಅವರಲ್ಲಿ ಇಬ್ಬರು ಮಹಿಳೆಯರು. ಲೇಡಿ ಟೆಂಪಲ್ ಹಾಗೂ ಮಿಸೆಸ್ ಡಾಲಿಸ್. ಶ್ರೀ ಮುರಿಗೆಪ್ಪನವರು ಮೀಸೆಗೆ ಕಪ್ಪು ಹಚ್ಚಿಕೊಂಡು ಬರುವುದನ್ನು ನೋಡಿ ಮಿಸೆಸ್ ಡಾಲಿಸ್ ಅವರು " Oh my grandson has come " ಎಂದು ಚೇಷ್ಟೆ ಮಾಡುತ್ತಿದ್ದರು ".[೩೦] ಚೆಟ್ಟಿ ಅವರಿಗೆ ತಮ್ಮ ಮೀಸೆ ಮಾತ್ರ ಯಾವತ್ತು ಕಪ್ಪಾಗಿರಬೇಕು ಅಂತೆಯೇ ಅವರು ತಮ್ಮ ತಲೆ ಕೂದಲು ಬೆಳ್ಳಗಿದ್ದರೂ ಮೀಸೆಗೆ ಮಾತ್ರ ಕಪ್ಪುಬಣ್ಣ ಹಚ್ಚುತ್ತಿದ್ದರು. ಅದು ಅವರ ವೈಶಿಷ್ಟ್ಯ.

ವಿಜಯ ಕಲಾಮಂದಿರದಲ್ಲಿ ಶಿಕ್ಷಕರಾಗಿ ಕೆಲಸ ಮಾಡುವ ಸಂದರ್ಭದಲ್ಲೇ ಇತ್ತ ಮನೆ ಮಠಗಳಿಂದ ಚಿತ್ರ ರಚಿಸಲು ಇವರಿಗೆ ಕರೆ ಬರುತ್ತಿದ್ದವು. ಕಲಾಮಂದಿರಕ್ಕೆ ಹೋಗಿ ಬಂದ ನಂತರ ಮನೆಯಲ್ಲಿ ಯಾವತ್ತೂ ಚಿತ್ರ ರಚಿಸುತ್ತಿದ್ದರು. ಗದುಗಿನ ಅನೇಕ ಗಣ್ಯವಕ್ತಿಗಳ ಮನೆಯಲ್ಲಿ ಇವರು ರಚಿಸಿದ ಭಾವ ಚಿತ್ರಗಳು ಇವೆ. ಅಲ್ಲದೆ ಸುತ್ತ ಮುತ್ತ ಊರಿನಿಂದಲೂ ಇವರಿಗೆ ಚಿತ್ರ ರಚಿಸಲು ಕರೆಗಳು ಬರುತ್ತಿದ್ದವು. ೧೯೭೨-೭೩ ರಲ್ಲಿ ಶ್ರವಣ ಬೆಳಗೊಳದ ಜೈನ ಮಠದಲ್ಲಿರುವ ಭಿತ್ತಿಚಿತ್ರಗಳ ಪುನರ್ ಪ್ರತಿಗಳನ್ನು ರಚಿಸಲು ಕರ್ನಾಟಕ ಸರಕಾರ ಇವರನ್ನು ನೇಮಿಸಿತು. " ಸುಮಾರು ೫-೬ ತಿಂಗಳುಗಳವರೆಗೆ ಅಲ್ಲಿಯೇ ಇದ್ದುಕೊಂಡು ಭಿತ್ತಿಚಿತ್ರಗಳನ್ನು ಚಿತ್ರಿಸಿಕೊಟ್ಟೆ. ಅಂದು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಡಿ. ದೇವರಾಜ ಅರಸು ಅವರು ನೋಡಿ ಬಹಳ ಸಂತೋಷಪಟ್ಟರು "[೩೧] ಎಂದು ಅವರೇ ಹೇಳುತ್ತಾರೆ.

೧೯೫೫ ರಲ್ಲಿ ೮' x ೬' ಫೂಟು ಅಳತೆಯಲ್ಲಿ ಶಿವಾನುಭವ ಮಂಟಪದ ತೈಲ ಚಿತ್ರವನ್ನು ಚಿತ್ರಿಸಿಕೊಟ್ಟಿದ್ದಾರೆ. ಬಂಥನಾಳದ ಮಹಾಶಿವಯೋಗಿಗಳು ಆ ಚಿತ್ರವನ್ನು ಬಹುವಾಗಿ ಮೆಚ್ಚಿಕೊಂಡು " ೧೨ ನೇಯ ಶತಮಾನದಲ್ಲಿ ಇದೇ ಸ್ಥಳದಲ್ಲಿ ಜರುಗಿದ್ದ ಶಿವಾನುಭವ ಮಂಟಪವನ್ನು ಕಣ್ಣಾರೆ ಎಂಟು ಶತಮಾನಗಳ ನಂತರ ಕಾಣುವಂತೆ ಮಾಡಿದ ಸುಪ್ರಸಿದ್ಧ ಕಲಾವಿದ ಚೆಟ್ಟಿಯವರ ಕಲೆ ಅಮೋಘವಾದುದು "[೩೨] ಎಂದು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

---

೨೯. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೪೬

೩೦. ಮಹಾಲಿಂಗ ಹಾಳಗಿ (ಸಂ) : ಕಲಾ ತಪಸ್ವಿ. ಎಂ. ವಿ. ಚೆಟ್ಟಿಯವರ ಅಭಿನಂದನ ಗ್ರಂಥ. ಪುಟ ೮೩

೩೧. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೪೬

೩೨. ಎಂ. ವಿ. ಚೆಟ್ಟಿ : ನೆನೆಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ : ಪುಟ ೧೪೬

೧೯೬೩ರಲ್ಲಿ 'ವೀರರಾಣಿ ಕಿತ್ತೂರ ಚೆನ್ನಮ್ಮ' ಎಂಬ ತೈಲಚಿತ್ರವನ್ನು ರಚಿಸಿದ್ದರು. ಮಹಿಳಾದಿನಾಚರಣೆಯಲ್ಲಿ ಬೆಂಗಳೂರ ಭವನದಲ್ಲಿ ಅದನ್ನು ಉದ್ಘಾಟಿಸಲಾಯಿತು. ಶ್ರೀಮತಿ ಪಂಚವ್ವತಾಯಿ ಸರದಾರ ಅವರು ತಮ್ಮ ಪತಿ ದಿವಂಗತ ಬ್ಯಾರಿಸ್ಟರ್ ಎಸ್. ಎಮ್. ಸರದಾರ ಅವರ ಸ್ಮರಣಾರ್ಥವಾಗಿ ಕಿತ್ತೂರಿನಲ್ಲಿರುವ ಸ್ಮಾರಕ ಭವನಕ್ಕೆ ಉಡುಗೊರೆಯಾಗಿ ಇದನ್ನು ನೀಡಿದ್ದಾರೆ. ಈ ಚಿತ್ರದ ಕ್ಯಾಲೆಂಡರನ್ನು ಸಹ ಮಾಡಿಸಲಾಗಿದೆ.

ಅವರು ರಚಿಸಿದ ಚಿತ್ರಗಳು ಅನೇಕ. ಇಲ್ಲಿ ಹೆಸರಿಸಲಾದ ಚಿತ್ರಗಳ ಬಗ್ಗೆ ಮುಂದಿನ ಕಲಾಕೃತಿಗಳು ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ರ್‍ಯಾಂಗುಲರ್ ಡಿ. ಸಿ. ಪಾವಟೆ ಅವರದ್ದು ೬'x೩' ಅಳತೆಯ ಚಿತ್ರ. ಮೈಸೂರು ಜಯಚಾಮರಾಜ ಒಡೆಯರ ಬಹದ್ದೂರವರ ಚಿತ್ರ. ಶ್ರೀ ರಂಗರಾವ ದಿವಾಕರ. ಶ್ರೀ ಬಾಳಾಸಾಹೇಬ ಖೇರ. ಲೋಕೂರ ಜಡ್ಜ. ಶ್ರೀ ಜಾಗಿರದಾರ ಮೊದಲಾದವರ ಲೈಫ್ ಸೈಜ ಚಿತ್ರಗಳನ್ನು ಚಿತ್ರಿಸಿದ್ದಾರೆ. ಗದಗ ಜೆ. ಟಿ. ಕಾಲೇಜಿನಲ್ಲಿ ತೋಂಟದಾರ್ಯ ಜಗದ್ಗುರುಗಳವರ ೬'x೪' ಅಳತೆಯ ಚಿತ್ರ. ಗದಗ ನಗರೇಶ್ವರ ದೇವಸ್ಥಾನದಲ್ಲಿ ಕುಷ್ಟಗಿ ದಂಪತಿಗಳವರ ೬'x೪' ಅಳತೆಯ ಚಿತ್ರ. ಮುರಘಾಮಠದಲ್ಲಿ ೬'x೪' ಅಳತೆಯ ಮೂರು ಚಿತ್ರಗಳನ್ನು ರಚಿಸಿದ್ದಾರೆ. ಹಾವೇರಿ ಹಳ್ಳಿಕೇರಿ ಗುದ್ಲೆಪ್ಪ ಕಾಲೇಜಿಗೆ ಶ್ರೀ ಹಳ್ಳಿಕೇರಿ ಗುದ್ಲೆಪ್ಪನವರದೊಂದು ೬'x೪' ಚಿತ್ರ. ಅಥಣಿ ಶ್ರೀ ಮುರುಘೇಂದ್ರ ಕಾಲೇಜಿಗೆ ಮುರುಘೇಂದ್ರ ಶ್ರೀಗಳವರ ೬'x೪' ಅಳತೆಯ ಚಿತ್ರ ರಚಿಸಿಕೊಟ್ಟಿದ್ದಾರೆ. ಬೆಂಗಳೂರು ವಿಧಾನ ಸೌಧದಲ್ಲಿರುವ ವೀರರಾಣಿ ಕಿತ್ತೂರ ಚೆನ್ನಮ್ಮನವರ ಚಿತ್ರ ೪'x೩' ಅಳತೆಯದು. ಶ್ರೀಮತಿ ಇಂದಿರಾ ಗಾಂಧಿಯವರ ಚಿತ್ರ ೪'x೩' ಅಳತೆಯದಿದೆ. ಚಿತ್ರದುರ್ಗ ಶ್ರೀ ಮುರುಘರಾಜ ಮಹಾಸ್ವಾಮಿಗಳವರದು ೬'x೪' ಅಳತೆಯದಿದ್ದರೆ. ಮೈಸೂರು ಜಗದ್ಗುರು ಪೆಥಾಲಾಜಿಕಲ್ ಹಾಸ್ಪಿಟಲ್‌ನಲ್ಲಿ ಜಗದ್ಗುರುಗಳವರ ೬'x೪' ಅಳತೆಯ ಚಿತ್ರವಿದೆ. ಅನೇಕ ಸ್ಥಳಗಳಲ್ಲಿ ಲೈಫ್ ಸೈಜ ಚಿತ್ರಗಳನ್ನು ಚಿತ್ರಿಸಿಕೊಟ್ಟಿದ್ದಾರೆ. "ಮುಂಬೈಯಿಯ ಸಚಿತ್ರ ಭಗವದ್ ಗೀತಾ ಪುಸ್ತಕದಲ್ಲಿಯ ಚಿತ್ರಗಳು ಬಣ್ಣದಲ್ಲಿ ಮುದ್ರಣಗೊಂಡಿವೆ".[೩೩] ಅವರು ರಚಿಸಿಕೊಟ್ಟ ಸಾವಿರಾರು ಚಿತ್ರಗಳಲ್ಲಿ ಲಭ್ಯವಿರುವ ಚಿತ್ರಗಳ ಮಾಹಿತಿಯನ್ನು ಅನುಬಂಧದಲ್ಲಿ ಕೊಡಲಾಗಿದೆ.

ಮನೆ ಮಠಗಳಿಗೆ ಚಿತ್ರ ಚಿತ್ರಿಸುವುದರ ಜೊತೆಗೆ ಗ್ರಂಥಗಳಿಗೆ ವಿಶೇಷವಾಗಿ ಪುರಾಣಗಳಿಗೂ ಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ. ಚೆಳ್ಳಗುರ್ಕಿ ಎರ್ರಿತಾತನ ಪುರಾಣದಲ್ಲಿ ೧೫ ಚಿತ್ರಗಳು. ಅವರಾದಿ ಫಲಾರೇಶ್ವರ ಪುರಾಣದಲ್ಲಿ ೩೦ ೧೫ ಚಿತ್ರಗಳು ನಿಜಲಿಂಗೇಶ್ವರ ಪುರಾಣದಲ್ಲಿ ೩೫ ಚಿತ್ರಗಳು. ಸಾವಳಗಿ ಶಿವಲಿಂಗೇಶ್ವರ ಪುರಾಣದಲ್ಲಿ ಚಿತ್ರಗಳು. ಬಸವ ಪುರಾಣದಲ್ಲಿ ೧೮ ಚಿತ್ರಗಳು. ಚಿತ್ರದುರ್ಗ ಜಗದ್ಗುರು ಮುರುಘರಾಜೇಂದ್ರ ಪುರಾಣದಲ್ಲಿ ೪ ೧೦ ಚಿತ್ರಗಳು. ಚಾಮರಸನ ಪ್ರಭುಲಿಂಗಲೀಲೆ ಪುರಾಣದಲ್ಲಿ ೪ ಚಿತ್ರಗಳು. ಚನ್ನಬಸವ ಪುರಾಣದಲ್ಲಿ

---

೩೩. ಎಂ. ಪಿ. ಚಿಟ್ಟಿ : ಅಪ್ರಕಟಿತ ಹಸ್ತಪ್ರತಿ



ಎಂ. ಎ. ಚೆಟ್ಟಿಯವರು ಪ್ರಾತ್ಯಕ್ಷಿಕೆ. ಗೋಕಾಕ ಚಿತ್ರಕಲಾ ಪರಿಷತ್ತಿನಲ್ಲಿ

ಎಂ. ಎ. ಚೆಟ್ಟಿಯವರು ಚಿತ್ರ ರಚನೆಯಲ್ಲಿ






ವಿಜಯ ಕಲಾಮಂದಿರದಲ್ಲಿ ಚಿಟ್ಟಿಯವರು ಶ್ರೀ ಟಿ.ಪಿ.ಅಕ್ಕಿಯವರೊಂದಿಗೆ.

ಅಧ್ಯಾಯ ಐದು

ಚೆಟ್ಟಿಯವರ ರೇಖಾಚಿತ್ರಗಳು



ಆಕಾರಗಳನ್ನು ಸರಳಗೊಳಿಸುವುದೇ ರೇಖೆಯ ಮೂಲ ಗುಣವಿಶೇಷ. ಎಂದು ಎಲ್ಲ ಚಿತ್ರ ಕಲಾವಿದರೂ ಒಪ್ಪುತ್ತಾರೆ. ಅದೇ ಅದರ ಸತ್ವ ಹಾಗೂ ಸೌಂದರ್ಯ ಕೂಡ. ಅಂತೆಯೇ ಪಸ್ಸೇರಿಯವರು ರೇಖಾಚಿತ್ರವು ವರ್ಣಚಿತ್ರ ಕಲೆಯ ಪಿತಾಮಹ ಎಂದು ಹೇಳಿದ್ದಾರೆ. Drawing is the father of Painting - Passeri (1772 A. D. Rome)

ನಮ್ಮ ಭಾರತೀಯ ಚಿತ್ರಕಲೆ ಮೂಲತಃ ರೇಖಾ ಪ್ರಧಾನವಾದ ಶೈಲಿಯನ್ನು ಹೊಂದಿದೆ. "ಕಲಾವಿದನೊಬ್ಬನನ್ನು ನಿಜಕ್ಕೂ ಬಯಲು ಮಾಡುವುದು ರೇಖಾ ಚಿತ್ರಗಳೇ ಅದು ಅವನ ಸಹಿ ಇದ್ದಂತೆ ಎನ್ನುವ ಮಾತುಂಟು. ಕಲಾವಿದನೊಬ್ಬನನ್ನು ಅರ್ಥಮಾಡಿಕೊಳ್ಳಲು ಅವನ ರೇಖಾ ಚಿತ್ರಗಳನ್ನು ವಿಶ್ಲೇಷಿಸುವುದು ಬಹುಮುಖ್ಯ. ಅಂತೆಯೇ ಭಾರತೀಯ ಕಲೆಗಳಲ್ಲಿ ರೇಖೆಗಳೇ ಸಂವಹನಕ್ಕೆ ತಳಹದಿ"[೧] ಪುರಾತನ ಗ್ರಂಥಗಳಲ್ಲಿ ಚಿತ್ರದಲ್ಲಿ ಹಸ್ತಲೇಖ ರೇಖಾಪ್ರಧಾನ. ವರ್ತನ ಮುಂತಾದ ತಾಂತ್ರಿಕ ವಿಧಾನಗಳು ವರ್ಣಿತವಾಗಿವೆ. ಚಿತ್ರಕನ ರೇಖೆಯ ಸಿದ್ಧಿಯನ್ನು ಪ್ರಶಂಸಿಸಿದ ಸಂದರ್ಭಗಳಿವೆ. ದೃಢವಾಗಿ ಲಲಿತವಾಗಿ ರಚಿತವಾದ ರೇಖಾ ಚಿತ್ರಕ್ಕೆ ಬಹುಮಾನ್ಯತೆ[೨] ಇತ್ತು. ಈ ರೇಖೆಗಳಲ್ಲಿ ಲಯ. ಆನಂದ. ಅನುಕಂಪ ವಿಸ್ಮಯ ಮೊದಲಾದ ಭಾವಸಂಚಾರ. ಜೀವನೋಲ್ಲಾಸದ ಉನ್ಮಾದ ಹಾಗೆಯೇ ಭಯ. ಕಾತರ. ನೋವು ಇಂಥ ಎಲ್ಲ ಭಾವಗಳು ಸಹಜ ಎನಿಸುವ ಅಭಿವ್ಯಕ್ತಿಯನ್ನು ಕಾಣುತ್ತೇವೆ. "ಅದು ಕಲಾವಿದನ ಮಾನಸಿಕ ಉದ್ವೇಶವನ್ನು ಅದರ ತೀವ್ರತೆಯೊಂದಿಗೆ ಪರಿಶುದ್ಧ ಸ್ಥಿತಿಯಲ್ಲಿ ವ್ಯಕ್ತಪಡಿಸುವುದಷ್ಟೇ ಅಲ್ಲದೇ ಚಿತ್ರ ಸೃಷ್ಟಿಕಾಲದ ಅವನ ಮನಃಸ್ಥಿತಿಯನ್ನು. ಚಿತ್ರವೃತ್ತಿಯನ್ನು. ಭಾವನೆಗಳನ್ನೂ ಆ ಕ್ಷಣಕ್ಕೆ ನಮ್ಮ ಮುಂದೆ ತೆರೆದಿಡುತ್ತವೆ"[೩] ಎನ್ನುವುದು ಗಮನಾರ್ಹ.

---

೧. ಬಿ. ವಿ. ಕೆ. ಶಾಸ್ತ್ರಿ (ಸಂ.) : ರೇಖಾ ಚಿತ್ರ. ಪುಟ ೬೬

೨. ಬಿ. ವಿ. ಕೆ. ಶಾಸ್ತ್ರಿ (ಸಂ.) : ರೇಖಾ ಚಿತ್ರ. ಪುಟ vi

೩. ಬಿ. ವಿ. ಕೆ. ಶಾಸ್ತ್ರಿ (ಸಂ.) : ರೇಖಾ ಚಿತ್ರ. ಪುಟ ೧೧

" ರೇಖೆಗೆ ಸಂಗೀತದಂತೆ ಲಯಬದ್ಧತೆ ಇದೆ. ನೃತ್ಯದಂತೆ ಛಂದೋಬದ್ಧ ಚಲನೆ ಇದೆ. ಕಾವ್ಯದಂತೆ ಅಂತರ್ ಪ್ರೇರಣೆ ಇದೆ. ರೇಖೆಗಳ ಸಮ್ಮಿಳನದಲ್ಲಿ ಸಾಹಿತ್ಯದ ಸಾಂಗತ್ಯವಿದೆ "[೪] ಇಂತಹ ರೇಖೆಗಳ ಸಮ್ಮಿಳನದಿಂದ ಸ್ಪಷ್ಟವಾದ ಆಕೃತಿ ನಿಖರವೆನಿಸುವ ವಿವರಗಳು. ಕಲಾವಿದನ ಆಂತರಿಕ ಕಲಾ ಪ್ರಜ್ಞೆಯನ್ನು ಸಹಜವಾಗಿ ವೀಕ್ಷಕ ಗುರುತಿಸಬಹುದಾದಂತಹ ರೇಖಾ ವಿನ್ಯಾಸ ಚೆಟ್ಟಿಯವರದಾಗಿದೆ. ಸೌಂದರ್ಯ ಪ್ರಜ್ಞೆಯ ಹಿನ್ನೆಲೆಯಲ್ಲಿ ನಿಸರ್ಗ. ವ್ಯಕ್ತಿ. ಸಮಾಜ ಇವುಗಳ ಸಂಬಂಧಗಳ ಸೂಕ್ಷ್ಮತೆಯನ್ನು ಅವರ ಚಿತ್ರಗಳ ಭಾವ ಸಂಚಾರದ ಮೂಲಕ ಗುರುತಿಸುತ್ತೇವೆ.

ಚೆಟ್ಟಿಯವರ ಚಿತ್ರಗಳಲ್ಲಿಯ ರೇಖೆಗಳು ದೇಹ ರಚನೆಯ ನಿಯಮಗಳಿಗೆ ಯಥಾಸ್ಥಿತಿ ನಿರೂಪಣೆಯನ್ನು ಹೊಂದಿದ್ದು ಇನ್ನೂ ಕೆಲವು ಅಂಕನೆ (Sketch)ಗಳಲ್ಲಿ ನಿಯಮಕ್ಕೆ ಬದ್ಧವಾಗಿರುವುದನ್ನು ಗುರುತಿಸಬಹುದು. ಇನ್ನೂ ಕೆಲವು. ಕೆಲವೇ ರೇಖೆಗಳಿಂದ ರಚಿತವಾದ ರೇಖಾ ಚಿತ್ರಗಳು ಸೃಜನಶೀಲತೆಯನ್ನು ವ್ಯಕ್ತಪಡಿಸುತ್ತವೆ. ಇವರ ಇಂತಹ ರೇಖಾ ಚಿತ್ರಗಳನ್ನು ಪ್ರದರ್ಶಿಸಿದ್ದರೆ ಬಹುಶಃ ಇವರು ಹೆಬ್ಬಾರರಂತೆ ಪ್ರಸಿದ್ಧಿಯನ್ನು ಪಡೆಯಬಹುದಾಗಿತ್ತು. ಆದರೆ ಮೊದಲನೆಯದಾಗಿ ಅವರೇ ಹೇಳಿದಂತೆ ಪ್ರಚಾರಪ್ರಿಯರಲ್ಲ. ಮತ್ತು ಆಗಿನ ಕಾಲದಲ್ಲಿ ಈಗಿನಂತೆ ಈ ರೀತಿ ರೇಖಾ ಚಿತ್ರಗಳನ್ನು ಪ್ರತ್ಯೇಕ ಚಿತ್ರಗಳೆಂದು ಭಾವಿಸುತ್ತಿರಲಿಲ್ಲವೆಂಬುದನ್ನು ಗಮನಿಸಬೇಕು.

" ಬಿಂದು ಶೂನ್ಯದ ಸಂಕೇತ. ಆದರೆ ಬಿಂದು ರೇಖೆಯಾಗಿ ಸಾಗುವಾಗ ಅದು ಅನಂತತೆಗೂ ಸಂಕೇತವಾಗುತ್ತದೆ. ರೇಖೆಯ ಗತಿ ಕಲಾವಿದನ ಸೃಜಶಿಲತೆಯನ್ನನುಸರಿಸುವಾಗ ಅದರಲ್ಲಿ ವ್ಯಕ್ತವಾಗುವ ಭಾವಸಂಚಾರವೂ ಅನಂತವೆನಿಸುವುದಿದೆ. ಹೃದಯ ಸಂವಾದಿಯಾಗುವ ಅಂತಹ ರೇಖೆ. ವೀಕ್ಷಕನ ಹೃದಯವನ್ನು ತಟ್ಟುತ್ತದೆ ಹಾಗೂ ಎಚ್ಚರಿಸುತ್ತದೆ. ಆನಂದಾನುಭೂತಿಗೆ ಕಾರಣವಾಗುತ್ತದೆ ".[೫] ರೇಖಾಚಿತ್ರ ಅಭಿವ್ಯಕ್ತಿ ಮಾಧ್ಯಮದಲ್ಲಿ ಅತ್ಯಂತ ಪಾರದರ್ಶವಾದುದು. ಅಂತೆಯೇ ವಿಷ್ಣುಧರ್ಮೋತ್ತರ ಪುರಾಣದಲ್ಲಿ ' ರೇಖಾಂ ಪ್ರಶಂಸಾತ್ಯಾಚಾರ್ಯ ' ಎಂದು ರೇಖೆಗಳು ನುರಿತ ನಿಪುಣ ಕಲಾವಿದನೊಬ್ಬನ ಅತ್ಯುನ್ನತ ಸಾಧನೆ ಎನ್ನುವ ಪ್ರಶಂಸೆ ಇದೆ.

ಚೆಟ್ಟಿಯವರ ಸಮಕಾಲೀನ ಕಲೆಯಲ್ಲಿ ಆಗ ರೇಖಾ ಚಿತ್ರಗಳನ್ನು ಅಭ್ಯಾಸಕ್ಕೋಸ್ಕರ ಹಾಗೂ ಸಂಯೋಜನಾ ಚಿತ್ರದ ಪೂರ್ವ ಸಿದ್ಧತೆಗೋಸ್ಕರವಾಗಿಯೇ ರಚಿಸುವಂಥವುಗಳಾಗಿದ್ದವು. ಹಲವಾರು ವಸ್ತುಗಳನ್ನು. ಮನುಷ್ಯರ ವಿವಿಧ ಭಾವ ಭಂಗಿಗಳನ್ನು. ದೇಹದ ವಿವಿಧ ಅಂಗಗಳನ್ನು. ವಿವಿಧ ಆಕೃತಿಗಳ ನೆರಳು. ಬೆಳಕುಗಳನ್ನು ರೇಖಾ ಚಿತ್ರದಿಂದ ಚಿತ್ರಿಸಿಕೊಂಡು ಅವುಗಳನ್ನು ತಮ್ಮ ವಿಷಯಕ್ಕೆ ತಕ್ಕಂತೆ ಆಯ್ದು ಸಂಯೋಜನೆಗೆ ಅನುಗುಣವಾಗಿ

೪. ಶಂಕರ ಪಾಟೀಲ : ಚಿತ್ರಕಲಾ ಚಿಂತನೆ. ಪುಟ ೭೮

೫. ವ್ಯಾಸರಾಯಬಲ್ಲಾಳ : ಕಲಾವಿದ ಹೆಬ್ಬಾರರ ರೇಖಾಲಾವಣ್ಯ. ಪುಟ ೪೦

ಹೊಂದಿಸಿ ಪುನಃ ಚಿತ್ರರಚಿಸಿ. ವರ್ಣಚಿತ್ರಗಳಾಗಿ ಚಿತ್ರಿಸುವ ಪದ್ಧತಿ ಇತ್ತು. ಹಾಗೆಯೇ ಸಾವಿರಾರು ರೇಖಾ ಚಿತ್ರಗಳನ್ನು ಚೆಟ್ಟಿಯವರು ಚಿತ್ರಿಸಿದ್ದಾರೆ.

"ರೇಖೆ ಸಮತಲದ ಮೇಲೆ ಮೂರು ಆಯಾಮಗಳ ಸೂಚನೆ ಇಲ್ಲದೆಯೂ ರೂಪ ತಳೆಯಬಹುದು. ಲಯಬದ್ಧವಾಗಿ ಹರಿಯುವ ಮೂಲಕ ಅಥವಾ ಅಂಕುಡೊಂಕಾಗಿ. ವಕ್ರವಾಗಿ ತಡೆ ತಡೆದು. ನಿಂತೂ ಹೋಗಬಹುದು. ದಪ್ಪ. ತೆಳು. ನವಿರಾಗಬಹುದು. ಅಥವಾ ಬೆಳಕಿನ ನೆರಳಿನ ಸೂಚನೆಯನ್ನು ನೀಡುವಂತೆ ಕಾಣಿಸಿ ಮರೆಯಾಗಬಹುದು. ತುಂಡಾಗಬಹುದು. ಬಣ್ಣಗಳ ತೀಕ್ಷ್ಣತೆಗಳಿಗನುಗುಣವಾಗಿ ವರ್ತಿಸಬಹುದು. ಹೀಗಾಗಿ ರೇಖೆಗೆ ಅದರದೇ ಚೈತನ್ಯವಿದೆ. ವೈವಿಧ್ಯಮಯ ವರ್ತನೆ ಇದೆ. ಸ್ವತಂತ್ರ ವ್ಯಕ್ತಿತ್ವವಿದೆ"[೬] ಎನ್ನುವಲ್ಲಿ ಎರಡು ಮಾತಿಲ್ಲ.

ಇಂತಹ ಸ್ವತಂತ್ರ ವ್ಯಕ್ತಿತ್ವ ಹೊಂದಿದ ರೇಖೆಗಳನ್ನು ಚೆಟ್ಟಿಯವರು ತಮ್ಮ ಪ್ರತಿಭೆಗೆ ತಕ್ಕಂತೆ ರೂಪಕೊಟ್ಟಿದ್ದಾರೆ. ಈ ರೇಖಾ ಚಿತ್ರಗಳು ಪೆನ್ಸಿಲ್. ಇಂಕ್ ಹಾಗೂ ಚಾರ್ಕೋಲನಿಂದಿ ರಚಿಸಲ್ಪಟ್ಟಿವೆ. ಇವು ಕೆಲವು ಸಲ ತಿದ್ದಿ ಬದಲಾಗಿ ಪುನರ್ ಸೃಷ್ಟಿಗೊಂಡು ಅಪೂರ್ವಕಲಾಕೃತಿಗಳಾಗಿವೆ. ಈ ರೀತಿ ರಚಿಸಿದ ರೇಖಾ ಚಿತ್ರಗಳಲ್ಲಿ ಭಾವಚಿತ್ರ. ನಿಸರ್ಗ. ಸಂಯೋಜನಾ. ಪ್ರಾಣಿಚಿತ್ರಗಳು ಇವೆ. ಹೀಗೆ ವೈವಿಧ್ಯಮಯ. ವಿಷಯಗಳನ್ನೊಳಗೊಂಡ ರೇಖಾ ಚಿತ್ರಗಳನ್ನು ಇಲ್ಲಿ ನೋಡುತ್ತೇವೆ. ಅಲ್ಲದೆ ಅನೇಕ ದೈನಂದಿನ ರೂಢಿಗಾಗಿ ಸ್ಕೆಚ್ ರೇಖಾ ಚಿತ್ರಗಳನ್ನೂ ಅವರು ರಚಿಸುತ್ತಲೇ ಬಂದಿದ್ದಾರೆ. ಕಲಾವಿದನ ಕಲೆಯ ಅಭಿವ್ಯಕ್ತಿ ಕುರಿತ ತುಡಿತಕ್ಕೆ ಸಮಯ. ಪರಿಸರಗಳ ನಿರ್ಬಂಧವಿಲ್ಲ. ಯಾವಾಗಲೂ ಅವರ ಹತ್ತಿರ ಸ್ಕೆಚ್ ಬುಕ್ ಇದ್ದೇ ಇರುತ್ತದೆ. ಆ ಒಂದು ಕ್ಷಣ ಗಮನ ಸೆಳೆಯುವ ಯಾವುದೇ ವಸ್ತು ವಿಷಯವಿರಲಿ ಆಗ ಕಲಾವಿದನಲ್ಲಿಯ ಸೃಜನಶೀಲ ಪ್ರಜ್ಞೆ ಜಾಗ್ರುತವಾಗಿ ತನ್ನಷ್ಟಕ್ಕೆ ತಾನೆ ರೇಖೆಗಳ ಮುಖಾಂತರ ಅಭಿವ್ಯಕ್ತಿಗೊಳ್ಳುತ್ತದೆ. ಚೆಟ್ಟಿಯವರ ರೇಖಾಚಿತ್ರಗಳು ಈ ಎಲ್ಲ ಆಯಾಮಗಳನ್ನು ಪಡೆದುಕೊಂಡು ರಚನೆಯಾಗಿವೆ.

ಚೆಟ್ಟಿಯವರ ರೇಖಾಚಿತ್ರಗಳನ್ನು ವರ್ಗೀಕರಿಸಲಾಗಿದ್ದು ಅದನ್ನು ಮುಂದಿನ ಪುಟದಲ್ಲಿ ಆಲೇಖದ ರೂಪದಲ್ಲಿ ಕೊಡಲಾಗಿದೆ.

---

೬. ಬಿ. ವಿ. ಕೆ. ಶಾಸ್ತ್ರಿ (ಸಂ.) : ರೇಖಾ ಚಿತ್ರ. ಪುಟ ೧೧

ರೇಖಾ ಚಿತ್ರಗಳು

- ೧. ಪೆನ್ಸಿಲ್ ಮಾಧ್ಯಮದ ರೇಖಾ ಚಿತ್ರಗಳು
  - ೧) ಭಾವಚಿತ್ರಗಳು
    - i) ಶಿರಭಾವ ಚಿತ್ರಗಳು
    - ii) ರೂಪದರ್ಶಿಯ ಮೂರುನಾಲ್ಕಾಂಶ ಭಾಗದ ರೇಖಾ ಚಿತ್ರಗಳು
    - iii) ರೂಪದರ್ಶಿಯ ಸಂಪೂರ್ಣ ಪಾರ್ಶ್ವ (Side) ಮುಖದ ಭಾವಚಿತ್ರಗಳು
    - iv) ಜೀವಮಾದರಿ ಚಿತ್ರಗಳು (Life sketch)
  - ೨) ಸಂಯೋಜನಾ ಚಿತ್ರಗಳು
  - ೩) ನಿಸರ್ಗ ಚಿತ್ರಗಳು
  - ೪) ಸ್ಥಿರರೂಪ ಚಿತ್ರಗಳು
  - ೫) ಪ್ರಾಣಿ ಪಕ್ಷಿ ಚಿತ್ರಗಳು
  - ೬) ದೈನಂದಿನ ಅಭ್ಯಾಸದ ಅಂಕನೆ (ಸ್ಕೆಚ್) ರೇಖಾಚಿತ್ರಗಳು
  - ೭) ಶಿಲ್ಪಗಳ ರೇಖಾ ಚಿತ್ರಗಳು
- ೨. ಇಂಕ್ ಮಾಧ್ಯಮದ ರೇಖಾ ಚಿತ್ರಗಳು
  - ೧) ಜೀವಮಾದರಿ ಚಿತ್ರಗಳು
  - ೨) ಸಂಯೋಜನಾ ಚಿತ್ರಗಳು
  - ೩) ನಿಸರ್ಗ ಚಿತ್ರಗಳು
  - ೪) ದೈನಂದಿನ ಅಭ್ಯಾಸದ ಅಂಕನೆ (ಸ್ಕೆಚ್) ರೇಖಾ ಚಿತ್ರಗಳು
  - ೫) ಶಿಲ್ಪಗಳ ರೇಖಾ ಚಿತ್ರಗಳು
- ೩. ಚಾರ್ಕೋಲ್ ಮಾಧ್ಯಮದ ರೇಖಾಚಿತ್ರಗಳು
  - ಸಂಯೋಜನಾ ಚಿತ್ರಗಳು

೧. ಪೆನ್ಸಿಲ್ (ಸೀಸಕಡ್ಡಿ) ಮಾಧ್ಯಮದ ರೇಖಾಚಿತ್ರಗಳು :

" ಕಟ್ಟಿಗೆ ನಳಿಕೆಯಲ್ಲಿ ಸೇರಿಸಲ್ಪಟ್ಟ ಜೇಡಿಮಣ್ಣು ಮಿಶ್ರಿತ ಗ್ರಾಫಾಯಿಟ್ ಕಡ್ಡಿಗೆ ಸೀಸಕಡ್ಡಿ ಅಥವಾ ಪೆನ್ಸಿಲ್ ಎನ್ನುತ್ತಾರೆ "[೭] ಇಂತಹ ಪೆನ್ಸಿಲ್‌ಗಳು ಗಡಸು ಹಾಗೂ ಮೆದುವಾಗಿಯೂ ಇರುತ್ತವೆ. ಮೆದುವಾಗಿರುವ ಪೆನ್ಸಿಲ್‌ಗಳಿಂದ ರೇಖೆಗಳ ಚಲನೆ ಸರಾಗವಾಗಿ ಸಾಗುತ್ತದೆ. ಅಲ್ಲದೆ ನೆರಳಿನ ಛಾಯೆಯನ್ನು ಸುಲಭವಾಗಿ ತುಂಬಬಹುದು. ಇಂತಹ ಕಡ್ಡಿಗಳನ್ನು ಸ್ಕೆಚ್ ಮಾಡಲು ಉಪಯೋಗಿಸುತ್ತಾರೆ. ಇವರ ರೇಖಾಚಿತ್ರಗಳನ್ನು ನೋಡಿದ ಪಾಟೀಲ ಪುಟ್ಟಪ್ಪನವರು " ತಮ್ಮನ್ನು ಚಿತ್ರಕಲೆಗೆ ಮೀಸಲಿರಿಸಿಕೊಂಡಿರುವ ಚೆಟ್ಟಿಯವರು ಬೆಳಿಗ್ಗೆ ಸಂಜೆ ಸ್ಕೆಚ್ ಬುಕ್ ಹಿಡಿದು ಮನೆಯಿಂದ ಹೊರಗೆ ಹೊರಟರೆ ಹಿಂದಿರುಗಿ ಬರುವಾಗ ಅದರಲ್ಲಿ ಗೆರೆ ಎಳೆದುಕೊಂಡೇ ಬಂದಿರುತ್ತಾರೆ. ಅವರು ಬರೆದ ಗೆರೆಗಳೆಲ್ಲವೂ ಚಿತ್ರಗಳಾಗಿರುತ್ತವೆ. ಅವರ ಸ್ಕೆಚ್ ಬುಕ್‌ಗಳಲ್ಲಿಯೇ ಒಂದು ಅವರ್ಣನೀಯ ಕಲಾಸೃಷ್ಟಿ ಇದೆ. ತಾವು ಎಳೆಯುವ ಪ್ರತಿಯೊಂದು ರೇಖೆಯನ್ನು ಅವರು ಸ್ಫೂರ್ತಿತುಂಬಿಕೊಂಡೇ ಎಳೆದಿರುತ್ತಾರೆ "[೮] ಎನ್ನುವ ಮಾತುಗಳು ಅವರ ರೇಖಾಚಿತ್ರಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ ಸ್ಪಷ್ಟವಾಗಿ ಗೋಚರಿಸುತ್ತದೆ.

ಈ ಮಾಧ್ಯಮದ ಚಿತ್ರಗಳನ್ನು ಅಧ್ಯಯನದ ದೃಷ್ಟಿಯಿಂದ ಈ ರೀತಿ ವಿಂಗಡಿಸಲಾಗಿದೆ :

೧) ಭಾವಚಿತ್ರಗಳು
   - i) ಶಿರಭಾವಚಿತ್ರ
   - ii) ರೂಪದರ್ಶಿಗಳ ಮೂರನಾಲ್ಕು ಅಂಶ ಭಾಗದ ರೇಖಾ ಚಿತ್ರಗಳು
   - iii) ರೂಪದರ್ಶಿಗಳ ಸಂಪೂರ್ಣ ಪಾರ್ಶ್ವ (Side) ಮುಖದ ಚಿತ್ರಗಳು
   - iv) ಜೀವಮಾದರಿ ಚಿತ್ರಗಳು (Life Sketch)

೨) ಸಂಯೋಜನಾ ಚಿತ್ರಗಳು

೩) ನಿಸರ್ಗ ಚಿತ್ರಗಳು

೪) ಸ್ಥಿರ ರೂಪ ಚಿತ್ರಗಳು

೫) ಪ್ರಾಣಿ ಪಕ್ಷಿ ಚಿತ್ರಗಳು

೬) ದೈನಂದಿನ (ಅಭ್ಯಾಸದ) ಅಂಕನ (Sketch) ರೇಖಾ ಚಿತ್ರಗಳು

೭) ಶಿಲ್ಪಗಳ ರೇಖಾ ಚಿತ್ರಗಳು

೧) ಭಾವಚಿತ್ರಗಳು :

ಚೆಟ್ಟಿಯವರ ಕಾಲದಲ್ಲಿ ಭಾವಚಿತ್ರ ರಚನೆಯು ಕಲಾಕಾರನ ವೃತ್ತಿಯ ಗೌರವಯುತವಾದ ಪ್ರಮುಖ ಅಂಗವಾಗಿತ್ತು. ಅಲ್ಲದೆ ಛಾಯಾಗ್ರಹಣದ ಅನ್ವೇಷಣೆಗೆ ಮೊದಲು ಭಾವಚಿತ್ರರಚನೆಯೆಂಬುದು ಪ್ರತಿಯೊಬ್ಬ

---

೭. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಕಲಾಕೋಶ. ಪುಟ ೩೫೫

೮. ಮಹಾಲಿಂಗ ಮಾಳಗಿ (ಸಂ) : ಕಲಾ ತಪಸ್ವಿ. ಎಂ. ವಿ. ಚೆಟ್ಟಿಯವರ ಅಭಿನಂದನ ಗ್ರಂಥ. ಪುಟ ೫೦

ಕಲಾವಿದನೂ ಮಾಡಲು ಕಲಿಯಬೇಕಾಗಿದ್ದ ಕೆಲಸವಾಗಿತ್ತು. ಭಾವಚಿತ್ರಣ ಒಂದು ಕಷ್ಟಕರವಾದ ಕಲೆ ಇದು ಎಲ್ಲ ಚಿತ್ರಗಳಂತೆ ಅಲ್ಲ. ಇಲ್ಲಿ ಮುಂದೆ ಇರುವ ರೂಪದರ್ಶಿಯನ್ನು ಕಣ್ಣಿಗೆ ಕಂಡಂತೆ ನೆಳಲು-ಬೆಳಕು ಛಾಯೆ ಮೂಡಿಸಿ ಚಿತ್ರಿಸುವುದಲ್ಲ. ಮನುಷ್ಯರೂಪದ ಸಾಮಾನ್ಯಚಿತ್ರವಲ್ಲ. ಚಿತ್ರಿಸಿದಂಥ ಚಿತ್ರ ರೂಪದರ್ಶಿಯನ್ನು ಹೋಲದಿದ್ದರೆ ಅದು ಒಳ್ಳೆಯ ಭಾವಚಿತ್ರವಲ್ಲ. ಆದರೆ ಇಲ್ಲಿ ಕೇವಲ ರೂಪದರ್ಶಿಯ ಹೋಲಿಕೆಯಷ್ಟೆ ಮುಖ್ಯವಲ್ಲ. ರೂಪದರ್ಶಿಯ ಅಂತಃ ಸತ್ವವನ್ನೇ ಹಿಡಿದಿಡುವ. ವ್ಯಕ್ತಮಾಡುವ ಯತ್ನವಿರುತ್ತದೆ.

ಇಂತಹ ಅಕಾಡೆಮಿಕ್ ಶೈಲಿಯ ಭಾವಚಿತ್ರ ರಚನೆ ಕ್ರಮೇಣವಾಗಿ ಕಲಾಕ್ಷೇತ್ರದಿಂದ ಕಣ್ಮರೆಯಾಗುತ್ತಿರುವ ಸಂದರ್ಭದಲ್ಲಿ ಅದನ್ನು ಜೀವಂತವಾಗಿಟ್ಟು. ತನ್ನದೇ ಆದ ಮಹತ್ವವನ್ನು ಕಲಾರಂಗಕ್ಕೆ ನೀಡಿರುವ ಕೆಲವೇ ಕಲಾವಿದರಲ್ಲಿ ಚಿಟ್ಟಿಯವರು ಅತ್ಯಂತ ಪ್ರಮುಖರು. ಅಂತೆಯೇ ಚಿಟ್ಟಿಯವರು ಭಾವಚಿತ್ರ ರಚನೆಯ ಬಗ್ಗೆ ಹೀಗೆ ಹೇಳುತ್ತಾರೆ. " ಭಾವಚಿತ್ರಗಳಲ್ಲಿ ವೀಕ್ಷಕರನ್ನು ಸೆರೆ ಹಿಡಿಯುವಗುಟ್ಟೇನು ? ಎಂದು ಕೇಳಿದರೆ. ಉದ್ದ. ಅಗಲ ಅಳತೆಯ ಪ್ರಮಾಣ. ರೂಪ ರೇಖೆ. ಸಾಮರಸ್ಯದಿಂದ ಕೂಡಿ ರಚಿಸಿದರಷ್ಟೇ ಸಾಲದು. ಜೀವಕಳೆ ತುಂಬುವುದು ಮುಖ್ಯ ಇಂಥ ಜೀವಕಳೆ ತುಂಬುವ ಕಲೆಗಾರಿಕೆ ಬರಬೇಕು. ಅದು ಅನುಭವ ಜನ್ಯ. ಆದರೆ ಇಂತಹ ತಾಳ್ಮೆ. ಶ್ರದ್ಧೆ ಇಂದಿನ ತಲೆಮಾರಿನ ಕಲಾವಿದರಲ್ಲಿ ಕಡಿಮೆಯಾಗುತ್ತಿದೆ ಎಂದವರು ಕೊರಗುತ್ತಾರೆ"[೯] ಅಂದರೆ ಭಾವಚಿತ್ರದಲ್ಲಿ ತದ್ರೂಪತೆಗೆ ಬಹಳ ಮಹತ್ವವಿದೆ. ಈ ಪೆನ್ಸಿಲ್ ಮಾಧ್ಯಮದಲ್ಲಿ ಕೂಡ ಅಂತಹ ತದ್ರೂಪತೆ. ಅಂತಃಸತ್ವವನ್ನು ನೆಳಲು ಬೆಳಕಿನೊಂದಿಗೆ ಚಿಟ್ಟಿಯವರು ಚಿತ್ರಿಸಿದ್ದಾರೆ.

ಈ ಎಲ್ಲ ಭಾವಚಿತ್ರಗಳಲ್ಲಿ ಪುರುಷರವೇ ಹೆಚ್ಚಾಗಿದ್ದು ಅವರಲ್ಲಿ ಮೀಸೆ ಹೆಚ್ಚುದಪ್ಪ ಉದ್ದವಾಗಿ ಬಿಟ್ಟಂತ ರೂಪದರ್ಶಿಗಳನ್ನೇ ಆಯ್ಕೆಮಾಡಿಕೊಂಡಿದ್ದಾರೆ ಯಾಕೆಂದರೆ ಚಿಟ್ಟಿಯವರಿಗೆ ಮೀಸೆಯ ಮೇಲೆ ಬಲುಮೋಹ. ಅಂತೆಯೇ ತಾವುಕೂಡ ಅದೇರೀತಿಯಲ್ಲಿ ಮೀಸೆಯನ್ನು ಬಿಟ್ಟಿದ್ದಾರೆ. ಈ ರೀತಿ ರೂಪದರ್ಶಿಗಳನ್ನು ಆರಿಸುವುದರಲ್ಲಿ ಕಲಾವಿದರು ತಮ್ಮದೇ ಆದ ಅಭಿರುಚಿ ಮತ್ತು ಆಶಯವನ್ನು ಹೊಂದಿರುತ್ತಾರೆ. ಆದ್ದರಿಂದ ಅವು ಕೇವಲ ಭಾವಚಿತ್ರಗಳಾಗದೇ ಕಲಾಕೃತಿಗಳಾಗಿಯೂ ಕಾಣುತ್ತವೆ.

i) ಶಿರ ಭಾವಚಿತ್ರಗಳು :

ಚಿತ್ರ ೧ : ಎದುರಿಗೆ ನೇರವಾಗಿ ಮುಖ ಮಾಡಿದ ಭಾವಚಿತ್ರಗಳು : ವಯಸ್ಸಾದ ಒಬ್ಬ ಮುದುಕನ ಪೆನ್ಸಿಲ್ ಸ್ಕೆಚ್. ಇದನ್ನು ೧೯೬೫ ರಲ್ಲಿ ಚಿತ್ರಿಸಿದ್ದು. ಆಗಿನ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ತಲೆಗೆ ಪೇಟ ಸುತ್ತುವುದು ಸರ್ವೇ ಸಾಮಾನ್ಯ. ಮುಖದ ಮೇಲೆ ದಪ್ಪನಾದ ಮೀಸೆಯೊಂದಿಗೆ ಇಳಿಬಿದ್ದಿರುವ ಚರ್ಮದ ಮೆದುತನದ ಅನುಭವವಾಗುತ್ತದೆ. ಎದುರು ಮುಖವಾಗಿ ಕುಳಿತಾಗ ಅಲ್ಲಿನ ಹರಡಿರುವ ನೆರಳು ಬೆಳಕಿನ

---

೯. ಎಲ್. ಶಿವಲಿಂಗಪ್ಪ : ಕರ್ಮವೀರ ವಾರಪತ್ರಿಕೆ (ದಿ. ೧೩-೪-೧೯೯೭) : ಪುಟ ೩೪

ಛಾಯೆಯನ್ನು ಸಮನಾಗಿ ತೋರಿಸಿದ್ದಾರೆ. ಗುಳಿಬಿದ್ದ ಭಾಗದಲ್ಲಿ ನೆರಳಿನ ಆಳ ಹಾಗೂ ಉಬ್ಬಿದ ಭಾಗದಲ್ಲಿ ಬೆಳಕಿನ ಛಾಯೆಯನ್ನು ಅತ್ಯಂತ ತೂಕಬದ್ಧವಾಗಿ ರಚಿಸಿದ್ದಾರೆ. ಅಲ್ಲದೆ ಕಣ್ಣಿನಲ್ಲಿ ಜೀವಂತಿಕೆಯನ್ನು ನೀಡುವ ಬೆಳಕಿನ ಚುಕ್ಕೆಯನ್ನು ಕಾಣಬಹುದು. ಇದನ್ನು ಅವರ ಸ್ಕೆಚ್ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ. ಇದರ ಅಳತೆ ೧೬ x ೧೯ ಸೆಂ. ಮಿ. ಇದೆ.

ಚಿತ್ರ ೨ : ಈ ಭಾವಚಿತ್ರ ವಯಸ್ಸಾದ ಹೆಣ್ಣುಮಗಳದಾಗಿದ್ದು. ಈ ಚಿತ್ರವನ್ನು ೧೯೬೬ ರಲ್ಲಿ ರಚಿಸಿದ್ದಾರೆ. ಇದು ಸಹಿತ ಅವರ ಸ್ಕೆಚ್ ಪುಸ್ತಕದಿಂದ ಪಡೆದುಕೊಂಡದ್ದು. ಸ್ಕೆಚ್‌ಗಳೆಂದರೆ ಇಲ್ಲಿ ಅವು ಸಂಪೂರ್ಣ ಚಿತ್ರಗಳಿದ್ದಂತೆ. ಆ ಭಾವಚಿತ್ರದಲ್ಲಿಯ ಪ್ರತಿಯೊಂದು ಅಂಶವನ್ನು ಅಷ್ಟೇ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಮುಖದಲ್ಲಿ ಮಂದಹಾಸ ನಗೆ. ಹಣೆಯ ಮೇಲೆ ವಿಭೂತಿಯ ಜೊತೆಗೆ ಉಬ್ಬು. ತಗ್ಗುಗಳನ್ನು. ಆಳವಾಗಿ ಒಳಹೋಗಿರುವ ಕಣ್ಣುಗಳು. ಉತ್ತರ ಕರ್ನಾಟಕದ ಸೀರೆಯ ಗುಣ ಅತ್ಯಂತ ಸುಂದರವಾಗಿ ಚಿತ್ರಿಸಿದ್ದಾರೆ. ಕುಪ್ಪಸದ ಚೌಕಳಿ ನಕ್ಷೆಕೂಡಾ ಮೂಡಿಬಂದಿದೆ. ಇಲ್ಲಿಯೂ ಸಹಿತ ಜೀವಕಳೆ ತುಂಬಿದೆ. ನೆರಳು. ಬೆಳಕಿನ ಛಾಯೆಯನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಇದರ ಅಳತೆ ೧೬ x ೧೯ ಸೆಂ. ಮಿ.

ಚಿತ್ರ ೩ : ಪುರುಷನ ಭಾವಚಿತ್ರ ಇಲ್ಲಿಯೂ ರುಮಾಲನ್ನು ಸುತ್ತಿಕೊಂಡಿರುವುದೇ ಆಗಿದೆ. ಆದರೆ ನಡುವಯಸ್ಸು ಇನ್ನೂ ಮುಖದಲ್ಲಿ ಗತ್ತು. ಗಾಂಭೀರ್ಯ. ಎದ್ದು ಕಾಣುವಂತೆ ಚಿತ್ರಿಸಿದ್ದಾರೆ. ಪೇಟಾ (ರುಮಾಲ)ದಲ್ಲಿಯೂ ಸಣ್ಣ ಚೌಕಳಿ ಹಾಗೂ ಜರಿ ಅಂಚನ್ನು ಸಹಿತ ಆ ನಿಜದ ಅನುಭವವನ್ನು ಕೊಡುವಂಥ ರೀತಿಯಲ್ಲಿದೆ. ಇಲ್ಲಿಯೂ ಮೀಸೆಯನ್ನು ನೋಡಬಹುದು. ಒಟ್ಟರೆ ಈ ಭಾವಚಿತ್ರ ನೋಡಿದಾಗ ಆ ರೂಪದರ್ಶಿ ಕೊಂಚ ಸಿಡುಕಿನ ಮನುಷ್ಯನಂತೆ ಕಾಣುತ್ತಾನೆ. ಈ ಭಾವವನ್ನು ಹಿಡಿದಿಡುವುದರಲ್ಲಿ ಚಿಟ್ಟಿಯವರ ವಿಶಿಷ್ಟತೆ ಇದೆ. ಇದರ ಅಳತೆ ೧೬ x ೧೯ ಸೆಂ. ಮಿ. ಇದೆ.

ಚಿತ್ರ ೪ : ರುಮಾಲು ಸುತ್ತಿಕೊಂಡ ಮುದುಕನ ಚಿತ್ರ. ಇಲ್ಲಿ ಈತನ ಮೀಸೆ ಪೂರ್ತಿ ಬೆಳ್ಳಗಾಗಿರುವ ಕಲ್ಪನೆ ಬರುತ್ತದೆ. ಆ ರೀತಿ ಬರುವಹಾಗೆ ನೆರಳು ಬೆಳಕಿನ ಛಾಯೆಯನ್ನು ಚಿಟ್ಟಿಯವರು ಕೊಟ್ಟಿದ್ದಾರೆ. ಕಣ್ಣಲ್ಲಿ ವಯಸ್ಸಿನ ವ್ಯಸ್ತತೆ ತುಂಬಿದೆ. ನಿರ್ಲಿಪ್ತ ಮನೋಭಾವದಿಂದ ಕೂಡಿದ ಚಿತ್ರವಾಗಿದೆ. ಇದರ ಅಳತೆ ೧೬ x ೧೯ ಸೆಂ. ಮಿ. ಇರುತ್ತದೆ.

ಚಿತ್ರ ೫ : ಇದು ನಡುವಯಸ್ಸಿನ ಪುರುಷನ ಭಾವಚಿತ್ರವಾಗಿದೆ. ಮಧ್ಯಮ ವರ್ಗದ ರೂಪದರ್ಶಿಯಾಗಿರಬೇಕು. ಅಲ್ಲದೆ ಇಲ್ಲಿ ವಿಶೇಷ ಆತನ ಎರಡು ಕಿವಿಯಲ್ಲಿಯ ಓಲೆಗಳು. ಈ ಭಾವಚಿತ್ರದಿಂದ ಅಂದಿನ ಜನರು ಯಾವ ರೀತಿಯ ವೇಷಭೂಷಣಗಳನ್ನು ಮಾಡುತ್ತಿದ್ದರೆಂಬ ಕಲ್ಪನೆ ನಮಗೆ

ಬರುತ್ತದೆ. ಈಗ ಅದು ಮತ್ತೆ ಜಾರಿಯಲ್ಲಿದ್ದು ಒಂದೇ ಕಿವಿಯಲ್ಲಿ ಕೆಲವರು ಮಾತ್ರ ಧರಿಸುತ್ತಾರೆ. ಈತನ ಮೀಸೆ ಕಪ್ಪಗಿದ್ದು ವಯಸ್ಸಿನ ಮಿತಿಯನ್ನು ತಿಳಿಸುತ್ತದೆ. ಚಿಂತೆಯಿಂದ ಕೂಡಿದ ಕಣ್ಣುಗಳು ಇವ್ವರೂ ಆ ಭಾವನೆಯನ್ನು ಹೊರಸೂಸುವ ಜೀವಂತಿಕೆ ಅದರಲ್ಲಿದೆ. ಓಗೆ ಚಿಟ್ಟಿಯವರು ಎಲ್ಲಾ ಅಂಶಗಳನ್ನು ಓಡಿದಿಡುವುದರಲ್ಲಿ ಸಮರ್ಥರಾಗಿದ್ದಾರೆ. ಇದರ ಅಳತೆ ೧೬ x ೧೯ ಸೆಂ. ಮಿ. ಇವೆ

ಒಟ್ಟಾರೆ ಎದುರು ಮುಖವಾಗಿ ರೂಪದರ್ಶಿ ಕುಳಿತಾಗ ಆತನ ಮುಖದಲ್ಲಿಯ ಆಳ. ಉಬ್ಬುಗಳನ್ನು ನೆರಳು ಬೆಳಕಿನ ತೂಕಬದ್ಧ ಛಾಯೆಯನ್ನು ನಿರ್ಮಿಸುವುದರೊಂದಿಗೆ ಅವುಗಳಲ್ಲಿ ಜೀವಂತಿಕೆಯನ್ನು ತಂದಿದ್ದಾರೆ. ಅಲ್ಲದೆ ಇವರು ತಾದಾತ್ಮತೆ ತರುವುದರಲ್ಲೂ ಅತ್ಯಂತ ನಿಪುಣರು.

ii) ರೂಪದರ್ಶಿಯ ಮೂರನಾಲ್ಕಾಂಶ ಭಾಗದ ರೇಖಾಚಿತ್ರಗಳು :

ಇವಕ್ಕೆ profile ಎಂದು ಕರೆಯುವರು. ಇಲ್ಲಿಯೂ ಸಹಿತ ಎಲ್ಲ ಪುರುಷರ ಚಿತ್ರಗಳು ಜೊತೆಗೆ ದಪ್ಪನಾದ ಮೀಸೆ.

ಚಿತ್ರ ೬ : ಈ ಪ್ರೊಫಾಯಿಲ್ ಭಾವಚಿತ್ರದಲ್ಲಿ ಮುಖದ ೩/೪ ಅಂಶ ಭಾಗ ಒಂದು ಕಡೆಯಾದರೆ ೧/೪ ಅಂಶ ಭಾಗ ಇನ್ನೊಂದು ಮಗ್ಗುಲಿಗೆ ಇಂತಹ ಸಂದರ್ಭದಲ್ಲಿ ನೆರಳು ಬೆಳಕಿನ ಛಾಯೆಯನ್ನು ಅತ್ಯಂತ ಜಾಣ್ಮೆಯಿಂದ ಚಿತ್ರಿಸಬೇಕಾಗುತ್ತದೆ. ಈ ಭಾವಚಿತ್ರದಲ್ಲಿ ಮುಖಕ್ಕಿಂತಲೂ ಮೀಸೆ ಬಹಳ ಭಾರವಾಗಿದೆ ಎಂಬ ಅನುಭವ ಉಂಟಾಗುತ್ತದೆ. ಇದರ ಅಳತೆ ೧೬ x ೧೯ ಸೆಂ. ಮಿ. ಇದೆ. ಎಷ್ಟೇ ಚಿಕ್ಕ ಚಿತ್ರವಾದರೂ ಸೂಕ್ಷ್ಮತೆಗೆ ಬಹಳಮಹತ್ವ ಕೊಟ್ಟಿರುವುದು ಕಂಡುಬರುತ್ತದೆ. ಮೂಗಿನ ನೇರ ಅದರ ಮೇಲೆ ಹೈಲೈಟ ನೀಡಿದ್ದಾರೆ. ಇದು ಮೂಗಿನ ಮೂರು ಮೈವಳಿಕೆಯ ಅನುಭವ ನೀಡುತ್ತದೆ. ಹಣೆಯ ಆಕಾರದಲ್ಲಿ ಎಲುಬಿನ ಉಬ್ಬುವಿಕೆ ಮೀಸೆಯಲ್ಲಿಯ ನೆರಳು ಬೆಳಕಿನ ಛಾಯೆಯಿಂದ ಅದರ ಘನಾಕೃತಿಯ ಅರಿವು ನೀಡುತ್ತದೆ. ಕಿವಿಯಲ್ಲಿಯ ನರಗಳನ್ನು ಸಹಿತ ಅಷ್ಟೇ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಇಲ್ಲಿ ಟೊಪ್ಪಿಗೆ ಇರುವುದೊಂದು ವಿಶೇಷ.

ಚಿತ್ರ ೭ : ಇಲ್ಲಿಯ ವ್ಯಕ್ತಿ ತಲೆಗೆ ವಸ್ತ್ರವನ್ನು ಸುತ್ತಿಕೊಂಡಿದ್ದಾನೆ. ಏನೋ ಚಿಂತೆಯನ್ನು ಮಾಡುತ್ತಿರುವಂತಹ ಕಣ್ಣಿನಲ್ಲಿ ಭಾವನೆ ಅದಕ್ಕೆ ತಕ್ಕಹಾಗೆ ಹುಬ್ಬು ಕೂಡಾ ಗಂಟಿಕ್ಕಿರುವುದು ಸ್ಪಷ್ಟವಾಗಿ ಮೂಡಿಬಂದಿದೆ. ಈತನ ಮೀಸೆಯೇ ಕಲಾತ್ಮಕವಾಗಿ ಇವೆ. ಅತ್ಯಂತ ನೇರವಾಗಿ ಮುಖದಿಂದ ಹೊರಚಾಚಿವೆ. ಆ ಮೀಸೆಯ ಎಳೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ನೆರಳು ಬೆಳಕಿನ ಛಾಯೆ ವಸ್ತ್ರದ ಮಡಿಕೆ ಅದರ ಮೃದುತ್ವದ ಅನುಭವ ಚಿತ್ರನೋಡುಗನಿಗೆ ಆಗುತ್ತದೆ. ಈ ಚಿತ್ರ ೧೯೬೫ ರಲ್ಲಿ ಚಿತ್ರಿಸಿದ್ದು ಅದರ ಅಳತೆ ೧೬ x ೧೯ ಸೆಂ. ಮಿ. ಇದೆ.

ಚಿತ್ರ ೮ : ಈ ಚಿತ್ರದ ವ್ಯಕ್ತಿ ಸ್ವಲ್ಪ ಬಲಗಡೆಗೆ ತಿರುಗಿದಂತಿವೆ. ತಲೆಯ ಮೇಲೆ ರುಮಾಲು. ಅಲ್ಲಿ ನೆರಳು ಬೆಳಕಿಂದ ಅದರ ತಿರುಚುವಿಕೆಯನ್ನು ಅತ್ಯಂತ ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಕಿವಿಯಲ್ಲಿ ಓಲೆ. ತುಟಿಯ ಮೇಲೆ

ಬಾಗಿರುವ ನೇರ ಮೀಸೆ ಓಲೆಯಲ್ಲಿಯೂ ನೆರಳು ಬೆಳಕಿನ ಸೂಕ್ಷ್ಮತೆಯನ್ನು ಕಾಣುತ್ತೇವೆ. ಕಣ್ಣಿನಲ್ಲಿ ಜೀವಕಳೆ ವ್ಯಕ್ತಿಯ ಗಾಂಭೀರ್ಯ ಮುಖದಲ್ಲಿ ಎದ್ದು ಕಾಣುತ್ತದೆ. ಇದನ್ನು ೧೯೬೭ ರಲ್ಲಿ ಚಿತ್ರಿಸಿದ್ದು ಅಳತೆ ೧೬ x ೧೯ ಸೆಂ. ಮಿ. ಇದೆ.

ಚಿತ್ರ ೯ : ಈ ಚಿತ್ರ ಎಮ್. ಎಲ್. ಶ್ರೀಕಂಠಯ್ಯ ಎಂಬುವರ ಭಾವಚಿತ್ರ. ಇವರು ಧರಿಸಿದ ಜರದಂಚಿನ ಮೈಸೂರು ಪೇಟ. ಕುತ್ತಿಗೆವರೆಗಿನ ಕೋಟು. ಅಲ್ಲದೆ ಕನ್ನಡಕದ ಪಾದರರ್ಶಿಕೆ. ನೆರಳು ಬೆಳಕಿನ ಛಾಯೆಯಿಂದ ಸ್ಪಷ್ಟವಾಗಿ ಗೋಚರವಾಗುತ್ತದೆ. ಇಲ್ಲಿ ಮೀಸೆ ಇರದಿರುವುದು ವಿಶೇಷ. ಇಂತಹ ಬಾವಚಿತ್ರದಲ್ಲೂ ಸಹಿತ ಪ್ರಮಾಣಬದ್ಧತೆಯ ಅವರ ನಿಪುಣತೆ ಎದ್ದು ಕಾಣುತ್ತದೆ. ಇಲ್ಲಿ ಮಾಂಸಖಂಡಗಳ ಉಬ್ಬುತಗ್ಗಿನ ಸರಿಯಾದ ಜ್ಞಾನದ ಅರಿವು ಕಲಾವಿದನಿಗೆ ಅತ್ಯಂತ ಉಚ್ಚಮಟ್ಟಿದಲ್ಲಿ ಸಾಕಾರವಾಗಿತ್ತೆಂಬ ಕುರುಹುಗಳು ನೋಡುಗನಿಗೆ ಕಂಡು ಬರುತ್ತವೆ. ಚರ್ಮದ ಮೆದುತನದ ಅನುಭವವು ಆಗುತ್ತದೆ. ಈ ಎಲ್ಲ ಅಂಶಗಳು ಭಾವಚಿತ್ರದಲ್ಲಿ ಮೂಡಿಬಂದಾಗಲೇ ಅದು ತದ್ರೂಪತೆ ಹೊಂದಲು ಸಾಧ್ಯ. ಇದರ ಅಳತೆ ೧೬ x ೧೯ ಸೆಂ. ಮಿ. ೧೯೬೬ ರಲ್ಲಿ ರಚಿಸಲಾಗಿದೆ.

ಚಿತ್ರ ೧೦ : ಈ ಚಿತ್ರ ವಯಸ್ಸಾದ ಪುರುಷನ ಭಾವಚಿತ್ರವಾಗಿದೆ. ಇಲ್ಲಿಯ ಹಣೆಯ ಮೇಲಿನ ವಿಭೂತಿ ತಲೆಯ ಮೇಲಿನ ರುಮಾಲು ಕೊರಳಲ್ಲಿ ರುದ್ರಾಕ್ಷಿಮಾಲೆ ಕಣ್ಣಿನಲ್ಲಿಯ ಭಾವನೆ ಆತನ ಸಾತ್ವಿಕ ಕಳೆಯನ್ನು ಸೂಚಿಸುತ್ತವೆ. ಮುಖ ಹಾಗೂ ಕುತ್ತಿಗೆಯ ನೆರಿಗೆಗಳು ಚರ್ಮದ ಸುಕ್ಕುತನದ ಭಾವನೆಯನ್ನು ಸೂಸುತ್ತವೆ. ಕಿವಿಯ ಓಲೆಯ ಕಣ್ಣಿನ ಮೇಲಿನ ಹುಬ್ಬಿನ ಕೂದಲಿನ ಎಳೆ-ಎಳೆಯನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಕಿವಿಯ ಓಲೆಯ ಹೆಜ್ಜೆಯನ್ನು ಸಹಿತ ಚಿತ್ರಿಸಿದ್ದಾರೆ. ಭಾವಚಿತ್ರದಲ್ಲಿ ಚರ್ಮದ ಮೃದುತನ. ಗಡಸುತನವನ್ನು ಚಿತ್ರಿಸುವುದರಲ್ಲೇ ಕಲಾವಿದನ ಜಾಣ್ಮೆ ಇರುವುದು. ಇದನ್ನು ಬಣ್ಣದಲ್ಲಿ ಸುಲಭವಾಗಿ ಚಿತ್ರಿಸಿದಂತೆ ಪೆನ್ಸಿಲ್‌ನಲ್ಲಿ ನೆರಳು ಬೆಳಕಿನ ಛಾಯೆಯೊಂದಿಗೆ ಅದನ್ನು ಸ್ಪಷ್ಟಪಡಿಸುವುದು ಅಷ್ಟೇ ಕಷ್ಟದ ಕೆಲಸವಾಗಿದೆ. ಆದರೆ ಅದನ್ನು ಚೆಟ್ಟಿಯವರು ಬಹುಚೆನ್ನಾಗಿ ಕರಗತ ಮಾಡಿಕೊಂಡಿದ್ದಾರೆಂಬುದಕ್ಕೆ ಅವರ ಈ ಚಿತ್ರಗಳೇ ಸಾಕ್ಷಿ. ಇದನ್ನು ೧೯೬೦ ರಲ್ಲಿ ಚಿತ್ರಿಸಿದ್ದು ಅಳತೆ ೧೬ x ೧೯ ಸೆಂ. ಮಿ. ಚೆಟ್ಟಿಯವರ ಸಂಗ್ರಹವಲ್ಲಿ ಈ ಕಲಾಕೃತಿ ಇದೆ.

ಚಿತ್ರ ೧೧ : ಇದು ವಯಸ್ಸಾದ ಪುರುಷನ ಭಾವಚಿತ್ರ. ಇಲ್ಲಿ ಮೀಸೆ. ಗಡ್ಡ ಎರಡೂ ಇರುವುದು ವಿಶೇಷ. ತಲೆಯ ಮೇಲೆ ರುಮಾಲಿಲ್ಲ. ಅರ್ಧಬೋಳಾದ ತಲೆಯನ್ನು ನೆರಳು ಬೆಳಕಿನ ಛಾಯೆಯಿಂದ ನುಣುಪುತನದ ಅನುಭವ ನೋಡುಗನಿಗಾಗುತ್ತದೆ. ಮೂಗಿನ ಮೇಲೆ ಪ್ರಮುಖ ಬೆಳಕು ನೀಡಿ ಮೂಗಿನ ನೇರವನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ತಿರುಚಿದ ಮೀಸೆ ಆತನ ಗಾಂಭೀರ್ಯ ಗಡಸುತನದ ಸಂಕೇತದಂತೆ ತೋರುತ್ತವೆ. ಸ್ವಲ್ಪವೇ ಮುಖ ಕಾಣುವ ಭಾಗದಲ್ಲಿ ಕಾಣಿಸುವ ಕೂದಲಿನ ಎಳೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಈ ಚಿತ್ರ ೧೯೬೭ ರಲ್ಲಿ ಚಿತ್ರಿಸಿದ್ದು ಅಳತೆ ೧೬ x ೧೯ ಸೆಂ. ಮಿ. ಇದೆ.

iii) ರೂಪದರ್ಶಿಯ ಸಂಪೂರ್ಣ ಪಾರ್ಶ್ವ(Side)ಮುಖದ ಭಾವಚಿತ್ರಗಳು :

ಚಿತ್ರ ೧೨ : ಈ ಭಾವಚಿತ್ರ ಎಸ್. ಪಿ. ಸೈಯದ ದಸ್ತಗೀರ ಅನ್ನುವವರದು. ಪಾರ್ಶ್ವ ಭಾವಚಿತ್ರವಾದ ಇವರಲ್ಲಿ ಆವ್ಯಕ್ತಿಯ ಎಲ್ಲಾ ಗುಣ ಲಕ್ಷಣಗಳು ಅತ್ಯಂತ ನೈಜವಾಗಿ ಚಿತ್ರಿತವಾಗಿವೆ. ಆತನು ಹಾಕಿದ ಟೋಪಿ ದಪ್ಪನೆಯ ಮೆತ್ತನೆಯ ವಸ್ತುವಿನಿಂದ ತಯಾರಿಸಿದ್ದು (ಮಕಮಲ್ ಉಣ್ಣೆ) ಎಂಬ ಭಾವನೆ ಉಂಟಾಗುತ್ತದೆ. ಅಂದರೆ ಅದರ ನೇಯ್ಗೆಯ ರಚನೆಯನ್ನು ಅತ್ಯಂತ ನೈಜವಾಗಿ ಚಿತ್ರಿಸಿದ್ದಾರೆ. ಪೆನ್ಸಿಲ್ ಚಿತ್ರದಲ್ಲಿ ಈ ರೀತಿ ನೈಜತೆಯನ್ನು ತರುವುದು ಬಹಳ ಕಷ್ಟ. ಮುಖದ ಮೇಲಿನ ನೆರಳು ಬೆಳಕಿನ ಛಾಯೆಯನ್ನು ಪರಿಪೂರ್ಣವಾಗಿ ತೋರಿಸಿದ್ದಾರೆ. ಮೂಗಿನ ಛಾಯೆ ಕೂಡಾ ಅಷ್ಟೇ ಸೂಕ್ಷ್ಮವಾಗಿ ಮೂಡಿಬಂದಿದೆ. ಅಲ್ಲದೆ ಬರಿ ಆತನ ವೇಷ ಭೂಷಣಗಳಿಂದ ಮಾತ್ರವಲ್ಲದೆ ಮುಖ ಲಕ್ಷಣದಿಂದಲೆ ಆತನ ಮತ ಧರ್ಮವನ್ನು ಗುರ್ತಿಸುವಷ್ಟು ತಾದ್ಯಾತ್ಮತೆ ಇದೆ. ಇದರ ಅಳತೆ ೧೬ x ೧೯ ಸೆಂ. ಮಿ. ಇದೆ.

ಚಿತ್ರ ೧೩ : ಈ ಚಿತ್ರವನ್ನು ೧೯೬೫ ರಲ್ಲಿ ಚಿತ್ರಿಸಿದ್ದು. ಇಲ್ಲಿ ಈ ವ್ಯಕ್ತಿ ಧರಿಸಿದ ಗಾಂಧಿ ಟೊಪ್ಪಿಗೆ ತನ್ನ ನೈಜತೆಯನ್ನು ಮೆರೆದಿದೆ. ಕಣ್ಣುಗಳು ಒಳಗೆ ಹೋದಹಾಗೆ ನೆರಳು ಬೆಳಕಿನ ಛಾಯೆ ಕಣ್ಣಿನಲ್ಲಿ ಜೀವಕಳೆ ತುಂಬಿ ಮುಖದಲ್ಲಿ ಸೌಮ್ಯಕಳೆ ಇದೆ. ಇದರ ಅಳತೆ ೧೬ x ೧೯ ಸೆಂ. ಮಿ. ಇದೆ.

ಚಿತ್ರ ೧೪ : ಈ ಚಿತ್ರವನ್ನು ೧೯೭೬ ರಲ್ಲಿ ರಚಿಸಿದ್ದು ಇದು ಯುವಕನ ಭಾವಚಿತ್ರವಾಗಿದ್ದು ಆತನ ಮೂಗಿನ ಮೇಲೆ ಇರುವ ಸಣ್ಣಗುಳ್ಳೆ (ನೆರೂಲಿ) ಸಹಿತ ನೆರಳು ಬೆಳಕಿನ ಛಾಯೆಯಿಂದ ಸ್ಪಷ್ಟವಾಗಿ ಮೂಡಿಬಂದಿದೆ. ಇದರಿಂದ ಚೆಟ್ಟಿಯವರು ಅಂತಹ ಅತಿಸೂಕ್ಷ್ಮವಾಗಿದ್ದ ಭಾಗವನ್ನು ಸಹಿತ ಅಷ್ಟೇ ತಾಳ್ಮೆಯಿಂದ ರಚಿಸಿ ಆತನ ಮುಖ ಲಕ್ಷಣಕ್ಕೆ ಸಹಜ ಕಳೆಯನ್ನು ತಂದಿದ್ದಾರೆ. ಇದರ ಅಳತೆ ೧೬ x ೧೯ ಸೆಂ. ಮಿ. ಇದೆ.

ಚಿತ್ರ ೧೫ : ಈ ಭಾವಚಿತ್ರ ೧೯೮೩ ರಲ್ಲಿ ರಚಿಸಿದ್ದು ನಡುವಯಸ್ಸಿನ ಪುರುಷನ ಭಾವಚಿತ್ರ ಇಲ್ಲಿ ಆತನು ಧರಿಸಿದ ಟೊಪ್ಪಿಗೆಯ ಬಿರುಸುತನದ. ಹಣೆಯ ಮೇಲಿನ ವಿಭೂತಿ ಗಲ್ಲದ ಮೇಲಿನ ಆಳವಾದ ಗುಳಿ ಕೂದಲಲ್ಲಿ ಬಿಳಿ. ಕರಿ ಕೂದಲಿನ ಅನುಭವ ಎಲ್ಲಾ ಅತ್ಯಂತ ನೈಜವಾಗಿ ಚಿತ್ರಿಸಿದ್ದಾರೆ. ಮುಖ ಹಸನ್ಮುಖತೆಯಿಂದ ಕೂಡಿದೆ. ಚಿತ್ರದ ಅಳತೆ ೧೬ x ೧೯ ಸೆಂ. ಮಿ. ಇದೆ.

ಒಟ್ಟಾರೆಯಾಗಿ ಇವರು ಚಿತ್ರಿಸಿದ ಭಾವಚಿತ್ರಗಳನ್ನು ನೋಡಿದಾಗ ಅಲ್ಲಿ ಆ ವ್ಯಕ್ತಿಯ ಪ್ರಾಮಾಣಿಕ ವ್ಯಕ್ತಿತ್ವದ ಪರಿಚಯ ನಮಗಾಗುತ್ತದೆ. ಶಂಕರ ಪಾಟೀಲ ಅವರು ಹೇಳುವಂತೆ "ವ್ಯಕ್ತಿ ಚಿತ್ರಣ ಮಾನವೀಯತೆಯ ದೃಷ್ಟಿಯಿಂದ ಒಬ್ಬವ್ಯಕ್ತಿಯ ಪ್ರಾಮಾಣಿಕ ವ್ಯಕ್ತಿತ್ವದ ಪರಿಚಯ ಕೊಡುವ ಪ್ರಯತ್ನವಾಗಿರುತ್ತದೆ. ಆಗಲೇ ಅದು ಒಂದು ಸಾಧಾರಣ ರುಜುವಾತಿನ ವ್ಯಕ್ತಿ ಚಿತ್ರವಾಗದೆ ಒಂದು ಕಲಾಕೃತಿಯಾಗಿ ಪರಿಣಮಿಸುತ್ತದೆ. ಅಲ್ಲಿ ಕೇವಲ ಪ್ರಜ್ಞಾಪೂರ್ವಕವಾಗಿ ವಿಧಿವತ್ತಾಗಿ ಬಣ್ಣ ಮತ್ತು ರೇಖೆಗಳ ಸಂಬಂಧದಿಂದ ಅವಕಾಶವನ್ನು ಕಲ್ಪಿಸಿ ಆಳವನ್ನು ತೋರಿಸಿ ವಿಸ್ತೀರ್ಣದ ಆಯಾಮವನ್ನು ಕೊಟ್ಟು



ಚಿತ್ರ ೧



ಚಿತ್ರ ೨







ಚಿತ್ರ ೩




ಚಿತ್ರ ೪








ಚಿತ್ರ ೫




ಚಿತ್ರ ೬







ಚಿತ್ರ ೭



ಚಿತ್ರ ೮








ಚಿತ್ರ ೯



ಚಿತ್ರ ೧೦








ಚಿತ್ರ ೧೧




ಚಿತ್ರ ೧೨







ಚಿತ್ರ ೧೩



ಚಿತ್ರ ೧೪



ಚಿತ್ರ ೧೫



ಕ್ರಮಬದ್ಧವಾಗಿ ರಚಿಸಿರುವ ಚಿತ್ರವಾಗಿರದೆ. ಅದೊಂದು ಕಲಾಕೃತಿ ಆಗಬೇಕಾಗುತ್ತದೆ. ಒಬ್ಬ ವ್ಯಕ್ತಿ ಮಾನವನ ಒಂದೊಂದು ಗುಣವಿಶೇಷಗಳನ್ನು ಪ್ರದರ್ಶಿಸುವ ಪ್ರಯತ್ನದಲ್ಲಿ ಒಂದೊಂದು ವ್ಯಕ್ತಿಚಿತ್ರ ಕಲಾಕೃತಿಯಾಗಿ ಪರಿಣಮಿಸುತ್ತದೆ".[೧೦] ಚಿಟ್ಟಿಯವರ ಒಂದೊಂದು ಭಾವಚಿತ್ರ ಪೆನ್ಸಿಲ್ ಮಾಧ್ಯಮವೇ ಇರಲಿ. ಬಣ್ಣಗಳ ಮಾಧ್ಯಮದಲ್ಲೇ ಇರಲಿ ಅವು ಕಲಾಕೃತಿಗಳಾಗಿ ಮೆರೆದಿವೆಯೆಂದರೆ ಅತಿಶಯೋಕ್ತಿ ಆಗಲಾರದು. ಅಷ್ಟೊಂದು ಆಳವಾದ ಜ್ಞಾನ ಅವರಲ್ಲಿ ಇದೆ. ಯಾಕೆಂದರೆ ಭಾವ ಚಿತ್ರಗಳಲ್ಲಿ ಒಂದು ಆಗಿನ ಕ್ಷಣಮಾತ್ರದ ಅಥವಾ ನಿಗದಿತ ಕಾಲದ ದಾಖಲೆಯಷ್ಟೇ ಇರದೇ ರೂಪದರ್ಶಿಯ ಅಂತಃಸತ್ವವನ್ನೇ ಹಿಡಿದಿಡುವ ಪ್ರಯತ್ನವಿರುತ್ತದೆ. ಅಂತಹ ಜಾಣ್ಮೆ. ಚಿಕಿತ್ಸಕ ಬುದ್ಧಿ ಕಲಾವಿದನಲ್ಲಿ ಇದ್ದಾಗ ಮಾತ್ರ ಅದು ಕಲಾಕೃತಿಯಾಗುತ್ತದೆ.

iv) ಜೀವಮಾದರಿ ಚಿತ್ರಗಳು (Life Sketch) :

"೧೫ ನೇ ಶತಮಾನದಲ್ಲಿ ಮುಖವನ್ನು ಮಾತ್ರ ಭಾವ ಚಿತ್ರವೆಂದು ಚಿತ್ರಿಸಿದರೆ. ೧೬ ನೇ ಶತಮಾನದಲ್ಲಿ ಇಡೀ ದೇಹವನ್ನು ಭಾವಚಿತ್ರವೆಂದು ಚಿತ್ರಿಸಿದರು".[೧೧] ಫೋಟೊಗ್ರಾಫಿ ಅನ್ವೇಷಣೆಯ ಮೊದಲು ಭಾವಚಿತ್ರದಂತೆ ಇಡೀ ದೇಹವನ್ನೇ ಚಿತ್ರಿಸುವುದು ರೂಢಿಯಲ್ಲಿತ್ತು. ಆಗಿನ ಅನೇಕ ಶ್ರೀಮಂತ ವರ್ಗದವರು. ರಾಜಮಹಾರಾಜರು. ರಾಣಿಯರು ಅಧಿಕಾರಿಗಳು ಹೀಗೆ ಅನೇಕ ಉನ್ನತವರ್ಗದವರು ಇಂತಹ ಚಿತ್ರಗಳನ್ನು ಬರೆಸಿಕೊಳ್ಳುತ್ತಿದ್ದರು. ಅಲ್ಲದೆ ಆಗಿನ ಕಲಾಶಾಲೆಗಳಲ್ಲಿ ಈ ರೀತಿ ಚಿತ್ರಗಳನ್ನು ರಚಿಸುವ ಪಠ್ಯಕ್ರಮವು ಇತ್ತು. ಈಗಲೂ ಸಹಿತ. ಆ ವಿಷಯ ಇನ್ನೂ ಕಲಾಶಾಲೆಗಳಲ್ಲಿ ಇರುವುದನ್ನು ನಾವು ನೋಡುತ್ತೇವೆ. ಆ ರೀತಿಯ ಅಭ್ಯಾಸ ಕ್ರಮದಿಂದ ಮನುಷ್ಯಾಕೃತಿಯ ಸಂಪೂರ್ಣ ರಚನೆಯ ಜ್ಞಾನ ಕಲಾವಿದನಿಗೆ ಆಗುತ್ತದೆಯಲ್ಲದೆ. ಚಿಟ್ಟಿಯವರ ಕಾಲದಲ್ಲಿ ನೈಜತೆಗೆ ಹೆಚ್ಚಿನ ಪ್ರಾಶಸ್ತ್ಯವಿದ್ದ ಕಾರಣ ಇಂತಹ ಚಿತ್ರಗಳ ರಚನೆಯನ್ನು ಅವರು ಸಾಕಷ್ಟು ಮಾಡಿದ್ದಾರೆ. ವರ್ಣ ಚಿತ್ರಗಳನ್ನು ಚಿತ್ರಿಸುವದರ ಜೊತೆಗೆ ಪೆನ್ಸಿಲ್ ಮಾಧ್ಯಮದಲ್ಲಿಯೂ ಚಿತ್ರಿಸಿದ್ದಾರೆ. ಇಲ್ಲಿಯೂ ಕೂಡ ಭಾವಚಿತ್ರದಷ್ಟೆ ಮಹತ್ವವನ್ನು ಕೊಟ್ಟು ರಚಿಸಬೇಕಾಗುತ್ತದೆಯಲ್ಲದೆ ಭಾವಚಿತ್ರದಲ್ಲಿ ಬರಿ ಮುಖಕ್ಕೆ ಮಾತ್ರ ಪ್ರಾಧಾನ್ಯತೆ ನೀಡಿದರೆ. ಇಲ್ಲಿ ಇಡೀ ದೇಹದ ಎಲ್ಲ ಭಾಗಗಳಿಗೂ ಅಷ್ಟೇ ಪ್ರಾಧಾನ್ಯತೆಯನ್ನು ನೀಡಬೇಕು. ಅಂದಾಗ ಮಾತ್ರ ಅದು ಜೀವಕಳೆ ತುಂಬಲು ಸಾಧ್ಯ. ಚಿಟ್ಟಿಯವರ ಇಂತಹ ಚಿತ್ರಗಳಲ್ಲಿ ಆ ಎಲ್ಲ ಅಂಶಗಳು ಸ್ಫುಟವಾಗಿ ಚಿತ್ರಿತಗೊಂಡು. ನೋಡುಗರಲ್ಲಿ ಭ್ರಮೆಯನ್ನುಂಟು ಮಾಡಿವೆ. ಅಷ್ಟೊಂದು ನೈಜತೆ ಅಲ್ಲಿ ಮೂಡಿಬಂದಿದೆ. ಪಾಶ್ಚಿಮಾತ್ಯ ರೀತಿಯ ಅಭ್ಯಾಸವಿದ್ದುದರಿಂದ ಇಲ್ಲಿ ಶರೀರ ಶಾಸ್ತ್ರದ (Anatomy) ಸೂಕ್ಷ್ಮಾತಿಸೂಕ್ಷ್ಮಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಅದರ ಮೇಲಿನ ಉಬ್ಬು ತಗ್ಗುಗಳ ನೆರಳು ಬೆಳಕಿನ ಸಂಯೋಜನೆಯ ಅಭ್ಯಾಸವಿದಾಗಿದೆಯಲ್ಲದೆ. ಭಾವಚಿತ್ರದ ಎಲ್ಲಾ ಅಂಶಗಳು ಇದಕ್ಕೂ ಅನ್ವಯವಾಗುತ್ತವೆ. ಚಿಟ್ಟಿಯವರು ಚಿತ್ರಿಸಿದ ಆಯಾ ವ್ಯಕ್ತಿಗಳ ಒಡಲಾಳದ ಇಂಗಿತವನ್ನು ಕಣ್ಣಲ್ಲಿ ಹೊರಸೂಸುವ ಭಾವನೆಯನ್ನು ಅರ್ಥೈಸಿ ರಚಿಸಿದಂತೆ ಇವೆ.

---

೧೦. ಶಂಕರ ಪಾಟೀಲ : ಚಿತ್ರಕಲಾಚಿಂತನ : ಪುಟ ೫೮

೧೧. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಕಲಾಕೋಶ. ಪುಟ ೨೩೬

ಚಿತ್ರ ೧೬ : ಈ ಚಿತ್ರದಲ್ಲಿ ಒಬ್ಬ ಹಿರಿಯ ವ್ಯಕ್ತಿ ಕುಳಿತ ಪಾರ್ಶ್ವ ಚಿತ್ರವಿದೆ. ಹಣೆಯಲ್ಲಿ ವಿಭೂತಿ ಕೊರಳಲ್ಲಿ ಲಿಂಗದ ಅರಿವೆ ಅದನ್ನು ಹಿಡಿದುಕೊಂಡು ಕುಳಿತಿದ್ದಾರೆ. ಸಾತ್ವಿಕ ಕಳೆಯನ್ನು ಹೊರಸೂಸುತ್ತಿದೆ. ಅಲ್ಲದೆ ಶರೀರದ ಎಲ್ಲ ಭಾಗದಲ್ಲಿಯ ಉಬ್ಬು ತಗ್ಗುಗಳ ನೆರಳು ಬೆಳಕನ್ನು ಸಮಂಜಸವಾಗಿ ಸಂಯೋಜಿಸಿದ್ದಾರೆ. ಪ್ರತಿಭಾಗದಲ್ಲೂ ಸೂಕ್ಷ್ಮತೆಯಿಂದ ಚಿತ್ರಿಸಿದ್ದಾರೆ. ಇದರ ಅಳತೆ ೧೬ x ೧೯ ಸೆಂ. ಮಿ. ಇದೆ. ಇದನ್ನು ೧೯೭೫ ರಲ್ಲಿ ರಚಿಸಿದ್ದಾರೆ. ಚೆಟ್ಟಿಯವರ ಸಂಗ್ರಹದಿಂದ ತೆಗೆದುಕೊಳ್ಳಲಾಗಿದೆ. ತಲೆಯಲ್ಲಿರುವ ಸ್ವಲ್ಪ ಕೂಲುಗಳನ್ನು ಸಹಿತ ಎಳೆ-ಎಳೆಯಾಗಿ ಚಿತ್ರಿಸಿದ್ದಾರೆ.

ಚಿತ್ರ ೧೭ : ಇದು ಒಬ್ಬ ಸಾಧುವಿನ ಜೀವಮಾದರಿ ಚಿತ್ರವಾಗಿದೆ. ಎದುರು ಮುಖಮಾಡಿ ಕುಳಿತಿರುವನು. ಈ ಚಿತ್ರದಲ್ಲಿ ಬರಿ ಮುಖಕ್ಕಷ್ಟೆ ಪ್ರಾಮುಖ್ಯತೆ ಕೊಡದೆ ಕೈ. ಕಾಲುಗಳಿಗೂ ಅಷ್ಟೇ ಪ್ರಾಮುಖ್ಯತೆಯನ್ನು ನೀಡಿ ಚಿತ್ರಿಸಿದ್ದಾರೆ. ಮುಖದ ಮೇಲಿನ ಗಡ್ಡ. ಮೀಸೆ. ತಲೆಯ ಮೇಲಿನ ಟೋಪಿ ನೈಜತೆಯಿಂದ ಚಿತ್ರಿತವಾಗಿದೆ. ಎದುರು ಮುಖವಾಗಿದ್ದರೂ ನೆರಳು ಬೆಳಕಿನ ಸಂಯೋಜನೆ ಸಮಪ್ರಮಾಣದಲ್ಲಿ ಚಿತ್ರಿಸಿದ್ದಾರೆ.


ಚಿತ್ರ ೧೮ : ಈ ಚಿತ್ರವು ಜಮಖಂಡಿ ಈಶ್ವರ ದೇವರಗುಡಿಯಲ್ಲಿ ಇರುತ್ತದೆ. ಭೀಮಾಶಂಕರ ಸಾಧುರದು ಮುಖದಲ್ಲಿ ಮೀಸೆಯ ಠೀವಿ. ತಲೆಯ ಮೇಲಿನ ಜಟಾ. ಗಡ್ಡ. ಕಣ್ಣಲ್ಲಿ ತೀಕ್ಷ್ಣತೆ. ಕೊರಳಲ್ಲಿರುದ್ರಾಕ್ಷಿ. ಸಹಜತೆಯನ್ನು ಬಿಂಬಿಸುವ ಇದೂ ಸಹಿತ ಕುಳಿತತಂಥ ಪೂರ್ಣ ಜೀವಮಾದರಿ ಚಿತ್ರವಾಗಿದೆ. ಇದು ಬಹುಶಃ ಇನ್ನೂ ಪೂರ್ತಿಗೊಂಡಂತೆ ಕಾಣುವದಿಲ್ಲ. ಯಾಕೆಂದರೆ ಈ ಚಿತ್ರದಲ್ಲಿ ಕೈಗಳನ್ನು ಅಸ್ಪಷ್ಟವಾಗಿ ರೇಖಿಸಿಲ್ಲ. ಹಾಕಿಕೊಂಡ ಬಟ್ಟೆಯ ಮಡಿಕೆಯ ನೆರಳು ಬೆಳಕನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಇದೊಂದು ಅಪೂರ್ಣ ಚಿತ್ರವಾಗಿದೆ ಎಂದು ಹೇಳಬಹುದು. ಈ ಚಿತ್ರದ ಅಳತೆ ೧೬ x ೧೯ ಸೆಂ. ಮಿ. ಇದೆ.

ಮಾನವ ದೇಹ ವಿನ್ಯಾಸ (Anatomy) ದ ಮೇಲೆ ಅಪೂರ್ವ ಹಿಡಿತವಿರುವ ಶ್ರೀ ಚೆಟ್ಟಿಯವರು ಮನುಷ್ಯರ ಹಲವಾರು ಭಾವಚಿತ್ರ ಜೀವಮಾದರಿ ಚಿತ್ರಗಳನ್ನು ರಚಿಸಿದ್ದಾರೆ.

೨) ಸಂಯೋಜನಾ ಚಿತ್ರಗಳು :


ಕಲಾವಿದನು ಚಿತ್ರಿಸುವ ವಸ್ತುವಿಗೆ ಸಂಬಂಧಪಟ್ಟಂತೆ ಮಾನವಾಕೃತಿಗಳನ್ನು. ಪ್ರಾಣಿಗಳನ್ನು. ಅಥವಾ ಬೇರೆ ಬೇರೆ ವಸ್ತುಗಳನ್ನು ಹೊಂದಿಸಿ ರಚಿಸುವ ಕಲಾತ್ಮಕ ಕೃತಿ ಸಂಯೋಜನೆ ಅಥವಾ ಕಂಪೋಜಿಷನ್ ಎಂದು ಕರೆಯುವರು. ಕಲಾವಿದನ ಬುದ್ಧಿಮತ್ತೆಯು ಈ ಚಿತ್ರಸಂಯೋಜನೆಯಿಂದಲೇ ಹೊರಹೊಮ್ಮುವುದು. ಕಲಾವಿದನ ರಚನಾತ್ಮಕ. ಕ್ರಿಯಾತ್ಮಕ. ಅಭಿವ್ಯಕ್ತಿ ಕೌಶಲಗಳು ಚಿತ್ರಸಂಯೋಜನೆಯ ಮುಖಾಂತರವೇ ಬೆಳಕಿಗೆ ಬರುತ್ತವೆ.

ಇವರು ಮಾಡಿದ ಅನೇಕ ಸಂಯೋಜನಾ ಚಿತ್ರಗಳು. ತಾವು ಚಿತ್ರಿಸಬೇಕಾಗಿದ್ದಂತಹ ವರ್ಣಚಿತ್ರಗಳ ಪೂರ್ವಭಾವಿ ಚಿತ್ರಗಳೇ ಹೆಚ್ಚಾಗಿವೆ. ಆ ರೇಖಾಚಿತ್ರಗಳೇ ತಿದ್ದಿ ಹೊಸ ರೂಪ ಪಡೆದು ಒಳ್ಳೆಯ




ಚಿತ್ರ ೧೬





ಚಿತ್ರ ೧೭



ಚಿತ್ರ ೧೮





ಕಲಾಕೃತಿಗಳಾಗಿವೆ. ಇನ್ನು ಕೆಲವು ರೇಖಾಚಿತ್ರಸಂಯೋಜನೆಗಳು ಶರಣರ ಜೀವನ ಚಿತ್ರಕ್ಕಾಗಿ ರಚಿಸಿದ ವರ್ಣಚಿತ್ರಗಳ ಮೂಲ ಚಿತ್ರಗಳಾಗಿವೆ. ಇನ್ನೂ ಕೆಲವು ಅವರ ಭಾವನೆಯ ಕಾಲ್ಪನಿಕ ಚಿತ್ರಗಳಾಗಿವೆ. ಇಲ್ಲಿ ರಸವನ್ನು ಸೃಷ್ಟಿಸುವಂತಹ ಈ ರೇಖಾ ಚಿತ್ರಗಳು ಬೆಳಕು ಮತ್ತು ಛಾಯೆಗಷ್ಟೇ ಸಂಬಂಧಿಸಿದ್ದಾಗಿಲ್ಲ. ಅಂಗರಚನೆಯ ಸೂಕ್ಷ್ಮ ವಿವರ ಅವರ ನೆನಪಿನ ವೀಕ್ಷಿಸಿದ ವಿಷಯಕ್ಕೆ ಸಂಬಂಧಿಸಿದ ಪ್ರತಿಬಿಂಬಗಳಾಗಿವೆ.

ಚಿತ್ರ ೧೯ : ಇದು ಪುರಾಣಕಲ್ಪನೆಯ ಚಿತ್ರವಾಗಿದೆ. ಮೋಹಿನಿ ಭಸ್ಮಾಸುರನ ಕತೆಯ ಚಿತ್ರ. ವಿಷ್ಣುವು ಮೋಹಿನಿರೂಪವನ್ನು ತಾಳಿ ಭಸ್ಮಾಸುರನನ್ನು ಮೋಹಗೊಳಿಸಿ ಆತನನ್ನು ಸುಟ್ಟು ಸಂಹರಿಸಿದ ಕತೆ. ಇದು ವರ್ಣಚಿತ್ರದ ಮೂಲ ರೇಖಾಚಿತ್ರವಾಗಿದೆ. ಮೋಹಿನಿ ಭಸ್ಮಾಸುರರು ಲಯಬದ್ಧವಾಗಿ ನೃತ್ಯಮಾಡುತ್ತಿರುವ ದೃಶ್ಯ. ಮೋಹಿನಿ ನಾಟ್ಯದಲ್ಲಿ ಮಗ್ನವಾಗಿದ್ದರೆ, ಭಸ್ಮಾಸುರನ ದೃಷ್ಟಿ ಮೋಹಿನಿಯನ್ನು ಆವರಿಸಿದೆ. ರೇಖೆಗಳಲ್ಲಿ ಲಯಬದ್ಧತೆ, ಮಾದಕತೆ, ಅಂಗರಚನೆಯ ಸೂಕ್ಷ್ಮ ವಿವರ ಜೀವತ್ವ ತುಂಬಿ ಇಲ್ಲಿ ಶೃಂಗಾರ ರಸಾನುಭವದ ಉನ್ಮಾದದ ಬೆಳಕಿನಲ್ಲಿ ರೇಖೆಗಳು ಭಾವಸೂಚಕವಾದ ತಮ್ಮದೇ ವಿನ್ಯಾಸವನ್ನು ರೂಪಿಸಿಕೊಂಡು ನರ್ತಿಸುವಂತಿವೆ. ಹಿನ್ನೆಲೆಯಲ್ಲಿ ಮರದ ಬೊಡ್ಡೆ. ಅದು ಸಹಿತ ಅಷ್ಟೇ ಲಯಬದ್ಧವಾಗಿ ಚಿತ್ರಿತವಾಗಿದೆ. ಇನ್ನೇನನ್ನೋ ಚಿತ್ರಿಸಬೇಕೆಂಬ ಚೆಟ್ಟಿಯವರ ವಿಚಾರದ ಹಿನ್ನೆಲೆಯಲ್ಲಿ ಸೃಷ್ಟಿಯಾದ ಇನ್ನೊಂದು ಮನುಷ್ಯಾಕೃತಿ. ಆದರೆ ಆ ಆಕೃತಿಯನ್ನು ಮುಂದೆ ವರ್ಣ ಚಿತ್ರದಲ್ಲಿ ಕೈಬಿಟ್ಟಿದ್ದಾರೆ. ಒಟ್ಟಾರೆ ಆ ವಿಷಯ ಕುರಿತು ಅವರ ಮನಸ್ಸಿನಲ್ಲುಂಟಾದ ಕಲ್ಪನೆಯ ಭಾವಾಭಿವ್ಯಕ್ತಿ ಇದಾಗಿದೆ. ಮೂಲ ಚಿತ್ರಇದಾಗಿದ್ದರೂ ಸಹಿತ ಪ್ರತಿಯೊಂದು ಅಂಶವನ್ನು ಇಲ್ಲಿ ವಿವರವಾಗಿ ಚಿತ್ರಿಸಿರುವುದನ್ನು ನೋಡುತ್ತೇವೆ. ಇದನ್ನು ೧೯೮೫ ರಲ್ಲಿ ಚಿತ್ರಿಸಿದ್ದಾರೆ. ಇದರ ಅಳತೆ ೧೬ x ೧೯ ಸೆಂ. ಮೀ. ಇದೆ. (ಅಧ್ಯಾಯ ಏಳರ ೩೦ ನೇ ಚಿತ್ರವನ್ನು ನೋಡಿರಿ)

ಚಿತ್ರ ೨೦ : ಇದು ಜಾತ್ರೆಯಲ್ಲಿ ತೇರಿನ ಮುಂದೆ ಕುಣಿಯುವವರ ಸಂಯೋಜನೆಯ ಚಿತ್ರವಾಗಿದೆ. ಇಲ್ಲಿ ನಾಲ್ಕೈದು ಪುರುಷರಿದ್ದು ಅದರಲ್ಲಿ ಇಬ್ಬರು ತಮಟೆ ಮದ್ದಲೆ ಬಾರಿಸುತ್ತಿದ್ದಾರೆ ಇಬ್ಬರು ನಂದಿಕೋಲನ್ನು ಹಿಡಿದುಕೊಂಡು ಕುಣಿಯುತ್ತಿದ್ದಾರೆ. ಉತ್ತರ ಕರ್ನಾಟಕದ ಕೆಲವು ಜಾತ್ರೆಗಳಲ್ಲಿ ನಂದಿಕೋಲು ಕುಣಿತ ಅತ್ಯಂತ ಪ್ರಸಿದ್ಧವಾದದ್ದು.

ಈ ರೇಖಾ ಚಿತ್ರದಲ್ಲಿ ನಮ್ಮ ನಾಡಿನ ಜಾನಪದ ಜೀವನದ ಸೌಂದರ್ಯ. ಹಾವಭಾವಗಳ ಸೊಬಗಿನ ಸೆಲೆ ಇದರಲ್ಲಿದೆ. ನಂದಿಕೋಲಿಗೆ ಮೇಲೆ ಕಟ್ಟಿರುವ ಹಿತ್ತಾಳೆಯ ಪಾಳೆಗಳು ಕುಣಿಯುವಾಗ ಘಲ್ ಘಲ್ ಎಂದು ಶಬ್ದಮಾಡುತ್ತವೆ. ಅಂತಹ ಶಬ್ದದ ಧ್ವನಿ ಈ ಚಿತ್ರ ಗಮನಿಸುವಾಗ ನಮಗೆ ಭಾಸವಾಗುತ್ತದೆ. ಅಂದರೆ ಆ ಗತಿಯಲ್ಲಿ ಆ ನೃತ್ಯಗಾರರು ಕುಣಿಯುವ ರೀತಿ ಅವರ ಹೆಜ್ಜೆಗಳ ತಾಳ. ಲಯಬದ್ಧತೆ. ಇದರಲ್ಲಿ ಸ್ಪಷ್ಟವಾಗಿ ಅಭಿವ್ಯಕ್ತಗೊಂಡಿದೆ. ಆ ಸನ್ನಿವೇಶದ ನಿಜ ಅನುಭವದ ಆನಂದ ಇದು ನೀಡುತ್ತದೆ. ವ್ಯಕ್ತಿಗಳ ಸಂಯೋಜನೆ.

ರೇಖೆಗಳ ಚಲನೆ ಇವೆಲ್ಲವುಗಳಲ್ಲಿ ವ್ಯಕ್ತವಾಗಿರುವ ಜೀವಂತಿಕೆ ವೀಕ್ಷಕನಿಗೂ. ಕಲಾವಿದನಿಗೂ ರಸಾನುಭೂತಿಯ ಆತ್ಮೀಯ ಸಂಭಂದ ನಿರ್ಮಿಸುವಷ್ಟು ಪರಿಣಾಮಕಾರಿಯಾಗಿವೆ. ಇದು ಅವರ ಸ್ಕೆಚ್‌ಗಳಲ್ಲಿಂದ ಸಂಗ್ರಹಿಸಿದ್ದು. ಇದರ ಅಳತೆ ೧೬ x ೧೯ ಸೆಂ. ಮಿ. ಇದೆ.

ಪುರಾಣ ಚಿತ್ರಗಳಿಗಾಗಿ ಬರೆದ ಕೆಲವು ವರ್ಣ ಚಿತ್ರಗಳ ಮೂಲ ರೇಖಾ ಚಿತ್ರಗಳು ಲಭ್ಯವಾಗಿವೆ. ಅವರು ಆ ಪುರಾಣ ವಿಷಯವನ್ನು ಸಂಪೂರ್ಣವಾಗಿ ಅಧ್ಯಯನಮಾಡಿ ಸನ್ನಿವೇಶ. ಹಾಗೂ ಪವಾಡಗಳಿಗೆ ತಕ್ಕಂತಹ ಚಿತ್ರಗಳನ್ನು ಮೊದಲಿಗೆ ಪೆನ್ಸಿಲ್ ಅಥವಾ ಇಂಕನಿಂದ ರೇಖಿಸಿಕೊಂಡು ನಂತರ ಕೆಲವು ಬದಲಾವಣೆಗಳನ್ನು ಮಾಡಿ ವರ್ಣ ಚಿತ್ರಗಳಾಗಿ ಚಿತ್ರಿಸಿದ್ದಾರೆ.

ಚಿತ್ರ ೨೧ : ಚೆಳ್ಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಪುರಾಣದ ಚಿತ್ರದ ಮೂಲ ರೇಖಾ ಚಿತ್ರ ಇದಾಗಿದೆ. ಇಲ್ಲಿ ಶ್ರೀ ಎರ್ರಿಸ್ವಾಮಿಗಳು ಓರ್ವ ಭಕ್ತನಿಗೆ ಹಾವನ್ನು ಆಶೀರ್ವದಿಸಿ ಹಾವು ಬಂಗಾರವಾಗಿ ತೋರಿಸಿದ ಪವಾಡದ ಚಿತ್ರ ಇದಾಗಿದೆ. ದಾರಿಯಲ್ಲಿ ಹೋಗುತ್ತಿದ್ದ ಲಕ್ಷ್ಮಮ್ಮ ಎನ್ನುವವಳ ತಾತನನ್ನು ಸ್ವಾಮಿಗಳು ಕರೆದು ಹಾವಿನ ಹುತ್ತದೆಡೆ ಕರೆದುಕೊಂಡು ಹೋಗಿ ಆತನಿಗೆ ಕಣ್ಣುಮುಚ್ಚಿಕೊಳ್ಳಲು ತಿಳಿಸಿ ಆತನು ಹಿಡಿದಿದ್ದ ಕಂಬಳಿಗೆ ಹಾವುಗಳನ್ನು ಹಾಕಿ ಕಟ್ಟಿ ಮನೆಗೆ ಹೋಗಿ ಪೂಜೆ ಮಾಡಿ ನೋಡೆನ್ನಲು. ಹಾಗೆಯೇ ತೆರೆದಾಗ ಕಂಡದ್ದು ಕಂಬಳಿತುಂಬಾ ಬಂಗಾರದ ಗಟ್ಟಿಗಳು. ಅದೇ ಸನ್ನಿವೇಶದ ಚಿತ್ರ. ಈ ಕಲ್ಪನೆಗೆ ಮುಂದೆ ಅವರು ವರ್ಣಸಂಯೋಜನೆ ಮಾಡಿದ್ದಾರೆ. ಹಾಗೂ ಕೆಲವು ಮಾರ್ಪಾಟುಗಳು ಆಗಿದ್ದರೂ ಮೂಲ ರೇಖಾ ಚಿತ್ರನೋಡಿದಾಕ್ಷಣ ವರ್ಣಚಿತ್ರ ಕಣ್ಣ ಮುಂದೆ ನಿಲ್ಲುತ್ತದೆ. ಅಂದರೆ ಮೂಲ ರೇಖಾ ಚಿತ್ರವೂ ಸಹಿತ ಅಷ್ಟೇ ಪೂರ್ಣ ಚಿತ್ರವಾಗಿರುತ್ತಿದ್ದವೆಂಬುದಕ್ಕೆ ಇವರ ರೇಖಾ ಚಿತ್ರಗಳೇ ಸಾಕ್ಷಿ. ಸ್ವಾಮಿಗಳು ಕೈಯಲ್ಲಿ ಹಾವನ್ನು ಹಿಡಿದು ಹಾಕುತ್ತಿರುವುದು ಭಕ್ತನು ಅಷ್ಟೇ ನಂಬಿಕೆ. ಭಕ್ತಿಯಿಂದ ಕಣ್ಮುಚ್ಚಿ ಅದನ್ನು ಸ್ವೀಕರಿಸುತ್ತಿದ್ದಾನೆ. ಹಿನ್ನೆಲೆ ಕಾಡನ್ನು ಆವರಿಸಿದೆ. ಅವರ ಉಡುಗೆ. ಮುಖ ಭಾವ ಅವರ ವ್ಯಕ್ತಿತ್ವವನ್ನು. ಗುಣವನ್ನು ಸೂಚಿಸುತ್ತವೆ. ಈ ಚಿತ್ರ ೧೯೬೩ ರಲ್ಲಿ ಚಿತ್ರಿಸಿದ್ದು ಅಳತೆ ೧೬ x ೧೯ ಸೆಂ. ಮಿ. ಇದೆ. (ಅಧ್ಯಾಯ ಏಳರ ೩ ನೇ ಚಿತ್ರವನ್ನು ನೋಡಿರಿ)

ಚಿತ್ರ ೨೨ : ೧೨ ನೇ ಶತಮಾನದ ಕಲ್ಯಾಣದ ಕ್ರಾಂತಿಕಾರಿ ಬಸವಣ್ಣ. ಶ್ರೀ ಬಸವೇಶ್ವರರನ್ನು ಕುರಿತು ಅನೇಕ ವರ್ಣಚಿತ್ರಗಳನ್ನು ಮಾಡಿದ್ದಾರೆ. ಅವರ ಜೀವನದ ಅನೇಕ ಮುಖಗಳನ್ನು ಪರಿಚಯಿಸುವ ಚಿತ್ರಗಳು ಇವಾಗಿವೆ. ಇವರ (ಚಿಟ್ಟಿ) ಎಲ್ಲಾ ಚಿತ್ರಗಳಲ್ಲಿಯೂ ಬಸವಣ್ಣನವರು ಇವರೇ ಎಂದು ಗುರುತಿಸುವಷ್ಟರ ಮಟ್ಟಿಗೆ ಅದೇ ಮುಖಲಕ್ಷಣವನ್ನು ಎಲ್ಲಾ ಚಿತ್ರಾಗಳಲ್ಲಿ ಅಭಿವ್ಯಕ್ತಿಸಿರುವುದು ಚಿಟ್ಟಿಯವರ ವೈಶಿಷ್ಟ್ಯವಾಗಿದೆ. ಯಾರಾದರೂ ಇದನ್ನು ಗುರುತಿಸಬಹುದು. ಆ ವ್ಯಕ್ತಿಯ ಗುಣಲಕ್ಷಣಗಳನ್ನು ಅವರು ಅಷ್ಟೊಂದು ಆಳವಾಗಿ ಅಧ್ಯಯನ ಮಾಡಿದುದರ ಪ್ರಜ್ಞೆ ಎದ್ದು ಕಾಣಿಸುತ್ತದೆ. ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿ ಪದವಿಯನ್ನು ಪಡೆದುಕೊಂಡಾಗಿನ ಚಿತ್ರ ಇದಾಗಿದೆ. ಬಸವಣ್ಣನವರ ವೇಷಭೂಷಣ ಇದನ್ನು ಸೂಚಿಸುತ್ತದೆ. ಹಿನ್ನೆಲೆಯಲ್ಲಿ ಕೂಡಲ ಸಂಗಮನಾಥನ ಮಂಟಪ. ನೀರು. ನಿಸರ್ಗ ಎಲ್ಲ ಬಸವಣ್ಣನವರ ಸಾತ್ವಿಕತೆಯನ್ನು

ಸಾರುವಂತಿವೆ. ಇದೊಂದು ಉತ್ತಮ ರೇಖಾಚಿತ್ರವಾಗಿದೆ. ಇಲ್ಲಿ ನಿಸರ್ಗ ಚಿತ್ರದ ನಿಯಮಗಳಂತೆ ಚಿತ್ರ ಸಂಯೋಜನೆ ಮಾಡಲಾಗಿದೆ. ಇದನ್ನು ೧೯೭೮ ನೇ ಇಸ್ವಿಯಲ್ಲಿ ರಚಿಸಲಾಗಿದೆ. ಅಳತೆ ೧೬ x ೧೯ ಸೆಂ. ಮಿ. ಇದೆ.


ಚಿತ್ರ ೨೩ : ಸಿದ್ಧಲಿಂಗೇಶ್ವರನಿಗೆ ತುಂಬಿಹರಿಯುತ್ತಿರುವ ನದಿಯು ದಾರಿಕೊಟ್ಟುದುದು. ಈ ಚಿತ್ರ ಶ್ರೀ ಸಿದ್ಧೇಶ್ವರ ಮಹಾಪುರಾಣದಲ್ಲಿ ಬರುವ ಪವಾಡದ ದೃಶ್ಯ. ೧೫ ನೇ ಶತಮಾನದ ಅಲ್ಲಪ್ರಭುದೇವರೆನಿಸಿದ ತೋಂಟದ ಶ್ರೀ ಸಿದ್ಧಲಿಂಗೇಶ್ವರ. ಮಂಗಲ ನದಿಯು ತುಂಬಿಹರಿಯುತ್ತಿತ್ತು ಭಕ್ತರೆಲ್ಲರೂ ನದಿಯನ್ನು ದಾಟುವದೆಂತು ಎಂಬ ಗಾಬರಿ ವ್ಯಕ್ತಪಡಿಸಿದಾಗ ಸಿದ್ಧಲಿಂಗಯತಿಗಳು ನಸುನಗುತ್ತ ನದಿಯ ದಂಡೆಯಹತ್ತಿರ ನಿಲ್ಲಲು ನದಿಯು ತಾನೇ ಮಾರ್ಗವನ್ನು ಪ್ರೀತಿಯಿಂದ ಮಾಡಿಕೊಟ್ಟಿತು. ಮಹಾಗಣಂಗಳೆಲ್ಲ ಆಶ್ಚರ್ಯಚಕಿತರಾದರು. ಈ ದೃಶ್ಯವನ್ನು ವರ್ಣಚಿತ್ರವಾಗಿಯೂ ರಚಿಸಿದ್ದಾರೆ. ಮೂಲ ರೇಖಾ ಚಿತ್ರದಲ್ಲಿ ಅದರ ಕಲ್ಪನೆಯನ್ನು ನೋಡುತ್ತೇವೆ. ವರ್ಣಚಿತ್ರದಲ್ಲಿ ಅದರ ಭಾವ. ವೈಭವವನ್ನು ನೋಡುತ್ತೇವೆ. ಸಿದ್ಧಲಿಂಗಯತಿಗಳು ಮುಂದೆ ನಡೆದು ಹೋಗುತ್ತಿದ್ದಾರೆ. ಹಿಂದೆಲ್ಲ ಅವರ ಅನುಯಾಯಿಗಳು ಆಶ್ಚರ್ಯ ವ್ಯಕ್ತಪಡಿಸುತ್ತ ಅವರನ್ನು ಹಿಂಬಾಲಿಸಿರುವುದನ್ನು ಇಲ್ಲಿ ನೋಡಬಹುದು. ನೀರು ಚಿಮ್ಮಿ ಹಾದಿಮಾಡಿರುವದು. ಇದನ್ನು ೧೯೭೫ ರಲ್ಲಿ ಚಿತ್ರಿಸಿದ್ದಾರೆ. ಆದರೆ ವರ್ಣಚಿತ್ರ ೧೯೮೧ ರಲ್ಲಿ ಚಿತ್ರಿತವಾಗಿದೆ. ಅಳತೆ ೧೬ x ೧೯ ಸೆಂ. ಮಿ. ಇದೆ. (ಅಧ್ಯಾಯ ಏಳರಲ್ಲಿಯ ೩೩ ನೇ ಚಿತ್ರವನ್ನು ನೋಡಿರಿ)

ಚಿತ್ರ ೨೪ : ಬುದ್ಧನು ಜನರಿಗೆ ಉಪದೇಶ ಮಾಡುತ್ತಿರುವ ಒಂದು ಕಾಲ್ಪನಿಕ ಚಿತ್ರ. ಬುದ್ಧನ ಹಿಂದೆ ಆತನ ಅನುಯಾಯಿಗಳು. ಮುಂದೆ ಬುದ್ಧನ ಉಪದೇಶವನ್ನು ಆಲಿಸಲು ಬಂದ ಜನಸಮೂಹವಿದೆ. ಇಲ್ಲಿ ಸಂಯೋಜನೆಯ ದೃಷ್ಟಿಯಿಂದ ಪ್ರಧಾನ ಆಕೃತಿಯನ್ನು ಅದರ ನಿಯಮದಂತೆ ನಮ್ಮ ದೃಷ್ಟಿಹಲವಾರು ಕಡೆಯಿಂದ ಹರಿದು ಕೊನೆಗೆ ಬುದ್ಧನ ಕಡೆಗೆ ಕೇಂದ್ರೀಕರಿಸುವಂತೆ ರಚಿಸಿದ್ದಾರೆ. ಇಂತಹ ಸಂಯೋಜನೆಗಳನ್ನು ಅಜಂತಾ ಚಿತ್ರಗಳಲ್ಲೂ ಕಾಣತ್ತೇವೆ. ಇಂತಹ ಸಂಯೋಜನೆಗೆ "ಮಂಡಲಾಕಾರದ ರಚನೆಯೆಂದು ವಿದ್ವಾಂಸರು ತಿಳಿಸುತ್ತಾರೆ".[೧೨] ಇಲ್ಲಿ ಜನಸಮೂಹ ಅತ್ಯಂತ ಭಕ್ತಿ ಮತ್ತು ತಲ್ಲೀನರಾಗಿ ಬುದ್ಧನ ಉಪದೇಶವನ್ನು ಆಲಿಸುತ್ತಿದ್ದಾರೆ. ಮಂಟಪದ ಮೇಲೆ ಸೂಕ್ಷ್ಮವಾಗಿ ನವಿಲುಗಳನ್ನು ಅಷ್ಟೇ ವಿವರವಾಗಿ ಚಿತ್ರಿಸಿದ್ದಾರೆ. ಇದು ೧೯೭೫ ರಲ್ಲಿ ಚಿತ್ರಿಸಿದ್ದು. ಇದರ ಅಳತೆ ೧೬ x ೧೯ ಸೆಂ. ಮಿ. ಇದೆ.

ಇಲ್ಲಿ ಇನ್ನೊಂದು ವಿಶೇಷವೇನೆಂದರೆ ಚೆಟ್ಟಿಯವರು ವೀರಶೈವ ಧರ್ಮಕ್ಕಷ್ಟೆ ಪ್ರಾಮುಖ್ಯತೆ ನೀಡದೇ ಎಲ್ಲಾ ಧರ್ಮಗಳನ್ನು ಅಷ್ಟೇ ಸಮನ್ವಯ ದೃಷ್ಟಿಯಿಂದ ಚಿತ್ರಿಸಿದ್ದಾರೆ. ಅಷ್ಟೇ ತನ್ಮಯತೆ. ಭಾವಾತ್ಮಕತೆಯಿಂದ ಕಲಾಕೃತಿಗಳ ರಚನೆ ಮಾಡಿರುವುದರಿಂದ ಅವರ ಪರಧರ್ಮ ಸಹಿಷ್ಣುತೆಯ ವ್ಯಕ್ತಿತ್ವವನ್ನು ಇಲ್ಲಿ ಕಾಣಬಹುದು.

---


೧೨. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಕಲಾಕೋಶ. ಪುಟ ೩೩೨



ಚಿತ್ರ ೨೦





ಚಿತ್ರ ೨೨




ಚಿತ್ರ ೨೪







ಚಿತ್ರ ೨೫



ಚಿತ್ರ ೨೫ : ಇಲ್ಲಿ ನಾಲ್ಕು ಸಣ್ಣ ರೇಖಾ ಚಿತ್ರಗಳನ್ನು ಕಾಣುತ್ತೇವೆ. ಇದು ಕೂಡಾ ಸಾವಳಗಿ ಶಿವಲಿಂಗೇಶ್ವರ ಪುರಾಣಕ್ಕೆಂದೇ ಮೊದಲು ಚಿತ್ರಿಸಿದ ರೇಖಾ ಚಿತ್ರ ಇದರಲ್ಲಿ i, ii, iii, ಇವು ಒಂದೇ ಚಿತ್ರಕ್ಕೆ ಸಂಬಂಧಿಸಿದ ರೇಖಾ ಚಿತ್ರಗಳಾಗಿವೆ. "ನೀರಿನ ಮೇಲೆ ಕುಳಿತು ನಮಾಜ ಮಾಡುತಲಿದ್ದ ದೇಹಲಿಯ ಆಲಂಗೀರ್ ಬಾದಶಹನಿಗೆ ಶ್ರೀ ಶಿವಲಿಂಗೇಶ್ವರರು ಅಂತರಿಕ್ಷದಲ್ಲಿ ದರ್ಶನ ದಯಪಾಲಿಸಿದ ದೃಶ್ಯ. ಕೊನೆಯದು iv ಬಾಲವೇಡವಲ್ಲಿ ಬಾದಶಹಾನು ಒಂದೇ ದಿನದಲ್ಲಿ ಮಠವನ್ನು ನಿರ್ಮಿಸಿ ಶಿವಲಿಂಗೇಶ್ವರರಿಗೆ ಸಮರ್ಪಿಸುತ್ತಿರುವಾಗ ಮಹಾಮಹಿಮರು ದ್ವಿಮುಖದಲ್ಲಿ ದರ್ಶನವೀಯುತ್ತಿರುವ ದೃಶ್ಯ"[೧೩] ಶಿವಲಿಂಗೇಶ್ವರರ ಪವಾಡಗಳನ್ನು ಇಲ್ಲಿ ಚಿತ್ರಿಸಿದ್ದಾರೆ. ಆ ವಿಷಯವನ್ನು ಬಾದಶಹ ಹೆಂಡತಿಗೆ ತಿಳಿಸುವ ವಿಷಯ ಕೊನೆಗೆ ಇಬ್ಬರೂ ಆ ಶರಣನಿಗೆ ಮೊರೆಹೋಗಿ ಆಶೀರ್ವಾದ ಪಡೆಯುತ್ತಾರೆ. ಹೀಗೆ ಈ ಸನ್ನಿವೇಶದ ಪೂರ್ತಿವಿವರ ಈ ಚಿತ್ರದಲ್ಲಿ ಇದೆ. ಕೊನೆಯ ಚಿತ್ರ ಅತ್ಯಂತ ಸಂಕ್ಷಿಪ್ತವಾಗಿ ಆ ಕಲ್ಪನೆಗೆ ಆಧಾರವೇಬಂತೆ ರಚಿಸಿದ್ದಾರೆ. ಇದರ ಅಳತೆ ೧೬ x ೧೯ ಸೆಂ. ಮಿ. ಇದೆ.

ಚಿಟ್ಟಿಯವರ ಈ ಎಲ್ಲಾ ಸಂಯೋಜನೆಯ ಚಿತ್ರಗಳನ್ನು ಗಮನಿಸಿದಾಗ ಇದರಲ್ಲಿ ತಮ್ಮದೇ ಆದ ಶೈಲಿ. ವೈಶಿಷ್ಟ್ಯವನ್ನು ಬೆಳೆಸಿಕೊಂಡು ಬಂದದ್ದು ಕಂಡುಬರುತ್ತದೆ. ಎಲ್ಲಾ ಮನುಷ್ಯ ಕೃತಿಗಳು ನೈಜಕ್ಕಿಂತಲೂ ಸ್ವಲ್ಪ ಉದ್ದವಾಗಿ ಚಿತ್ರಿಸಿದ್ದಾರೆ. ಎಲ್ಲಾ ಚಿತ್ರಗಳು ಸಂಯೋಜನಾನಿಯಮಗಳಿಗೆ ಬದ್ಧವಾಗಿವೆ. ಕೆಲವು ಭಾವನೆಯನ್ನು ಕೆರಳಿಸುವವಾದರೆ. ಇನ್ನೂ ಕೆಲವು ಕಥಾನಿರೂಪಣೆಯ ಉತ್ಕೃಷ್ಟತೆಯನ್ನು ತಲುಪಿವೆ. ಹೀಗೆ ಅವರು ಅನೇಕ ಸಂಯೋಜನಾ ಚಿತ್ರಗಳನ್ನು ಕಾಲ್ಪನಿಕವಾಗಿ ಮತ್ತು ಪುರಾಣ ಕಥೆಗಳಿಗೆ ಸಂಬಂಧಿಸಿದಂತೆ ಅನೇಕ ರೇಖಾಚಿತ್ರಗಳನ್ನು ರಚಿಸಿದ್ದಾರೆ. ಹೀಗೆ ಕಥೆಯಲ್ಲಿ ಕಾವ್ಯದಲ್ಲಿಮೂಡುವ ಪ್ರತಿಮೆಗಳಂತೆ ತಮ್ಮ ರೇಖಾ ವಿನ್ಯಾಸದಲ್ಲಿ ಹಾಗೂ ವರ್ಣಚಿತ್ರಗಳಲ್ಲೂ ಚಿತ್ರಿಸಿದ್ದಾರೆ. ಕಥನ ಕಲೆಗೆ ಹೊಂದಿಸುವ ಒಂದು ವಿಶಿಷ್ಟತೆ ಚಿಟ್ಟಿಯವರಲ್ಲಿತ್ತು ಆ ಚಿತ್ರಗಳನ್ನು ನೋಡುವಂಥ ಸಂದರ್ಭದಲ್ಲಿ ನಮ್ಮನ್ನು ಅದೇ ಕಾಲಕ್ಕೆ ಕರೆದುಕೊಂಡು ಹೋಗುವ ಶಕ್ತಿ ಈ ಚಿತ್ರಗಳಲ್ಲಿವೆ. ಆ ಕಾಲದ ಉಡುಗೆ ತೊಡುಗೆ ಜನಜೀವನ ಎಲ್ಲವೂ ಯಥಾವತ್ತಾಗಿ ಮೂಡಿಬಂದಿದೆ. ಆಯಾ ಕಾಲವನ್ನು ನಮ್ಮ ಕಣ್ಣಿಗೆ ಕಟ್ಟಿಕೊಡುತ್ತವೆ.

೩. ನಿಸರ್ಗ ಚಿತ್ರಗಳು (Landscape) :

ಇವುಗಳಿಗೆ ಭೂದೃಶ್ಯಗಳು ಎಂತಲೂ ಕರೆಯುತ್ತಾರೆ. " ಇಂದು ನಾವು Landscape ಎಂದು ಕರೆಯುವ ಭೂದೃಶ್ಯಗಳು ರೋಮನ್ನರ ಕಾಲದಿಂದಲೂ ಕಾಣಿಸಿಕೊಂಡಿವೆ. ಮಧ್ಯಕಾಲೀನ ಯುಗದಲ್ಲೂ ಮುಂದುವರಿದ ಈ ಚಿತ್ರ ಕಲಾ ಪ್ರಕಾರವು ಕಾಲದ ಪರೀಕ್ಷೆಯಲ್ಲಿ ಕೆಲವನ್ನಷ್ಟೇ ಉಳಿಸಿಕೊಂಡಿದೆ. ಆದರೆ ಭೂದೃಶ್ಯ ಚಿತ್ರಣ

---

೧೩. ಶ್ರೀ ಮ. ಪ್ರ. ಸಿದ್ಧರಾಮಸ್ವಾಮಿಗಳು ಸಾವಳಗಿ (ಸಂ.) : ಸಾವಳಗಿ ಶ್ರೀ ಶಿವಲಿಂಗೇಶ್ವರ ಪುರಾಣ : ಪುಟ iii

ತನ್ನದೇ ಆದ ಪೂರ್ಣ. ಸ್ವತಂತ್ರ ಅಸ್ತಿತ್ವವನ್ನು ಕಂಡುಕೊಂಡಿವೆ"[೧೪] ಮೊದ ಮೊದಲು ಮಾನವಾಕಾರದ ಹಿನ್ನೆಲೆಗೆ ಮತ್ತು ಭಾವಚಿತ್ರಗಳ ಹಿನ್ನೆಲೆಗೆ ಇಂತಹ ಸುಂದರವಾದ ಭೂದೃಶ್ಯಗಳು ಸಂಯೋಜಿಸಲ್ಪಟ್ಟಿದ್ದವು. ನಮ್ಮ ಮಿನಿಯೇಚರ್ ಕಿರುರೂಪ ಚಿತ್ರಗಳಲ್ಲಿ ಭೂದೃಶ್ಯಗಳು ಸುಂದರವಾಗಿ. ವೈವಿಧ್ಯಮಯವಾಗಿ ಚಿತ್ರಿಸಿರುವುದನ್ನು ನಾವು ನೋಡುತ್ತೇವೆ.

೧೮ ನೇ ಶತಮಾನದ ಕೊನೆಗೆ ಹಾಗೂ ೧೯ ನೇ ಶತಮಾನದ ಉದ್ದಕ್ಕೂ ಈ ಪ್ರಕಾರ ಸ್ವತಂತ್ರವಾಗಿ ರಚಿಸಲ್ಪಟ್ಟಿತು. ಇಂಗ್ಲೆಂಡಿನ ಕಾನ್ಸಟೆಬಲ್. ಟರ್ನರ್. ಜರ್ಮನಿಯ ಫೆಡ್ರಿಕ್ ಮತ್ತು ಇಂಪ್ರೆಶನಿಸ್ಟ ಕಲಾವಿದರು ಈ ನಿಸರ್ಗ ಚಿತ್ರಗಳನ್ನು ಬಹಳಷ್ಟು ದುಡಿಸಿಕೊಂಡರು. ಈ ವಿಷಯವನ್ನು ಕಲಾಶಾಲೆಗಳಲ್ಲಿ ದೂರ-ಸಮೀಪ ಹಿನ್ನೆಲೆ. ಮುನ್ನೆಲೆ ಹಾಗೂ ಬಣ್ಣಗಳ ವೈವಿಧ್ಯತೆಯನ್ನು ಅರಿತುಕೊಳ್ಳುವ ಸಲುವಾಗಿ ಹೇಳಿಕೊಡುತ್ತಿದ್ದರು. ಅಂತಹ ಭೂದೃಶ್ಯಗಳನ್ನು ಚೆಟ್ಟಿಯವರು ಪೆನ್ಸಿಲ್. ಜಲವರ್ಣ. ಹಾಗೂ ತೈಲವರ್ಣ ಅಲ್ಲದೇ ಇಂಕಮಾಧ್ಯಮದಲ್ಲೂ ರಚಿಸಿದ್ದಾರೆ. ಒಂದಿಲ್ಲಾ ಒಂದು ರೀತಿಯಲ್ಲಿ ಈ ನಿಸರ್ಗವನ್ನು ದುಡಿಸಿಕೊಂಡು ಚಿತ್ರಿಸಿದ ಪಾಶ್ಚಾತ್ಯ ಕಲಾವಿದರ ಪ್ರಭಾವ ಇವರ ಚಿತ್ರಗಳಲ್ಲೂ ಕಾಣುತ್ತೇವೆ.

ಚಿತ್ರ ೨೬ : ಇದೊಂದು ಪ್ರಕೃತಿ ಚಿತ್ರ. ಈ ಚಿತ್ರದಲ್ಲಿ ಭೂಮಿ ಆಕಾಶದ ಕೂಡುವಿಕೆಯ ಗೆರೆಯನ್ನು ಮಧ್ಯದಲ್ಲಿ ಮಾಡಲಾಗಿದೆ. ಅಲ್ಲಿ ಅತ್ಯಂತ ದೂರದಲ್ಲಿ ಕಾಣುವ ಮರಗಳನ್ನು ಯಥಾದರ್ಶನಕ್ಕೆ ಅನುಗುಣವಾಗಿ ಸಣ್ಣದಾಗಿ ರಚಿಸಿದ್ದಾರೆ. ಮುನ್ನೆಲೆಯಲ್ಲಿ ಕಾಣುವ ಮರಗಳು ದೊಡ್ಡದಾಗಿ ನೆರಳು ಬೆಳಕಿನಿಂದ ಕೂಡಿವೆ. ಅಲ್ಲಲ್ಲಿ ಜನರು ನಡೆದು ಹೋಗಿರುವುದನ್ನು ತೋರಿಸಿದ್ದಾರೆ. ಬೇಲಿಯನ್ನು ಕೂಡಾ ಅಷ್ಟೇ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಒಣಗಿದ ಗಿಡದ ಕಲ್ಪನೆ ಬರುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಇದನ್ನು ೧೯೬೪ ರಲ್ಲಿ ಚಿತ್ರಿಸಿದ್ದು ಇದರ ಅಳತೆ ೧೬ x ೧೯ ಸೆಂ. ಮಿ. ಇದೆ. ಪೆನ್ಸಿಲ್ ಚಿತ್ರವಾದರೂ ಪೂರ್ತಿ ವಿವರಣೆಯಿಂದ ಕೂಡಿದೆ. ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೨೭ : ಇದು ಒಂದು ದೇವಾಲಯದ ಚಿತ್ರವಾಗಿದೆ. ಇಲ್ಲಿ ಪ್ರಕೃತಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದ್ದು ಕಂಡು ಬರುತ್ತದೆ. ದೇವಾಲಯಕ್ಕೆ ಬರಹೋಗುವವರನ್ನು ಸಂಕ್ಷಿಪ್ತವಾಗಿ ರಚಿಸಿದ್ದರೂ ಚಲನೆಯಿಂದ ಕೂಡಿದೆ. ಸುತ್ತಲೂ ಗಿಡಗಳು. ಗಿಡಕ್ಕೆ ಕಟ್ಟಿದ ಗಂಟೆ ಎಲ್ಲವನ್ನು ಸೂಕ್ಷ್ಮವಾಗಿ ರಚಿಸಿ ಅವಶ್ಯವಿದ್ದಲ್ಲಿ ಮಾತ್ರ ನೆರಳು ಬೆಳಕನ್ನು ತೋರಿಸಿದ್ದಾರೆ. ಇದನ್ನು ೧೯೬೫ ರಲ್ಲಿ ಚಿತ್ರಿಸಿದ್ದಾರೆ. ಇದರ ಅಳತೆ ೧೬ x ೧೯ ಸೆಂ. ಮಿ. ಇದೆ. ಪ್ರತಿಯೊಂದು ಗಿಡದ ಮೈವಳಿಕೆ (Texture) ಅಷ್ಟೇ ನೈಜವಾಗಿ ಮೂಡಿಬಂದಿದೆ.

ಚಿತ್ರ ೨೮ : ಇದೊಂದು ಭೂದೃಶ್ಯ. ಬಹುಶಃ ಬೆಟ್ಟದ ಒಂದು ಭಾಗದಲ್ಲಿ ಕುಳಿತು ಚಿತ್ರಿಸಿದಂತಿದೆ. ಈ ಚಿತ್ರದಲ್ಲಿ ಮೂರುನಾಲ್ಕಾಂಶ ಭಾಗವನ್ನು ಭೂಮಿಗಾಗಿ. ಉಳಿದ ಒಂದನಾಲ್ಕಾಂಶ ಭಾಗವನ್ನು ಆಗಸ ಚಿತ್ರಿಸಿದ್ದಾರೆ. ದೂರದಲ್ಲಿ ಚಿತ್ರಿಸಿರುವ ಬೆಟ್ಟಗಳ ಸಾಲು ಇದನ್ನು ಸೂಚಿಸುತ್ತದೆ. ಮಧ್ಯದಲ್ಲಿ ಕಾಣಿಸುವ

೧೪. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಕಲಾಕೋಶ : ಪುಟ ೨೪೯




ಚಿತ್ರ ೧೬



ಚಿತ್ರ ೧೭







ಚಿತ್ರ ೨೮



ಟೆಂಗಿನ ಮರಗಳು. ಸಮೀಪದಲ್ಲಿ ಕಾಣುವ ದೊಡ್ಡ ಬಂಡೆಗಳು ನೆರಳು ಬೆಳಕಿನಿಂದ ಅವುಗಳ ಘನಾಕಾರ ಸುಂದರವಾಗಿ ಮೂಡಿದೆ. ಆಕಾಶದಲ್ಲಿ ಮೋಡಗಳ ರಚನೆಯನ್ನು ಮಾಡಿದ್ದಾರೆ. ಬಣ್ಣಗಳಿಂದ ಮಾತ್ರವಲ್ಲದ ಪೆನ್ಸಿಲ್ ಮಾಧ್ಯಮದಲ್ಲೂ ಆ ಚಿತ್ರದ ಸಂಪೂರ್ಣ ಕಲ್ಪನೆ ನಮಗಾಗುವಂಥ ರೀತಿಯಲ್ಲಿ ಚೆಟ್ಟಿಯವರು ಸೃಷ್ಟಿಮಾಡಿದ್ದಾರೆ.

ಚೆಟ್ಟಿಯವರು ನಿಸರ್ಗ ಚಿತ್ರರಚಿಸುವುದರಲ್ಲೂ ಅತ್ಯಂತ ಉತ್ಕೃಷ್ಟ ಸ್ಥಿತಿಯನ್ನು ಮುಟ್ಟಿದವರು. ಇವರ ಪ್ರತಿಯೊಂದು ಸಂಯೋಜನಾ ಚಿತ್ರದ ಹಿನ್ನೆಲೆಯಲ್ಲಿ ಈ ನಿಸರ್ಗವನ್ನು ಸಾಕಷ್ಟು ದುಡಿಸಿಕೊಂಡಿದ್ದಾರೆ. ನಿಸರ್ಗದಲ್ಲಿರುವ ಪ್ರತಿ ವಸ್ತುವಿಗೂ ಅಷ್ಟೇ ಮಹತ್ವವನ್ನು ಕೊಟ್ಟಿದ್ದಾರೆ. ದೊಡ್ಡ ಮರದಿಂದ ಹಿಡಿದು ಚಿಕ್ಕ ಹುಲ್ಲುಕಡ್ಡಿಗೂ ಅಷ್ಟೇ ಪ್ರಾಮುಖ್ಯತೆ ನೀಡಿರುವುದು ಇವರ ವಿಶಿಷ್ಟತೆ.

೪. ಸ್ಥಿರರೂಪ ಚಿತ್ರಗಳು (Still life) :

ಈ ಚಿತ್ರಣವು ಸಂಯೋಜನೆಯನ್ನು ಅಭ್ಯಸಿಸಲು ಮತ್ತು ಬಣ್ಣದ ಪರಿಣಾಮವನ್ನು ಅರಿಯಲು. ಅಲ್ಲದೆ ವಿವಿಧ ವಸ್ತುಗಳ ಬೆಳಕು ಮತ್ತು ಛಾಯೆಯಲ್ಲಿ ಹೊಂದುವ ಬಣ್ಣದ ಬದಲಾವಣೆ ಹಾಗೂ ಸಾಮರಸ್ಯ ತಿಳಿಯಲು ಸಹಕಾರಿಯಾಗಿದೆ. ಇದರಲ್ಲಿ ಬರುವ ವಿವಿಧ ವಸ್ತುಗಳ ಆಕೃತಿಯನ್ನು ಪರಸ್ಪರ ಹೊಂದಿಕೆಯಿಂದ ತೋರಿಸಲು ವಿಶೇಷ ರೀತಿಯ ಜಾಣ್ಮೆ ಬೇಕು.

ಇಲ್ಲಿ ಕಲಾವಿದನು ಸಾಮಾನ್ಯ ಆಕೃತಿಯ ವಿವರವಾದ ನಿರೂಪಣೆಗೆ ವಿಶೇಷ ಪ್ರಾಧಾನ್ಯ ನೀಡುತ್ತಾನೆ. ಈ ಚಿತ್ರಣದಲ್ಲಿ ಯಾವುದೇ ಜಡವಸ್ತುಗಳು ವಿಷಯಗಳಾಗಬಹುದು. ಅಡುಗೆ ಮನೆಯ ವಸ್ತುಗಳಾಗಿರಬಹುದು. ಹೂ. ಹಣ್ಣು. ಸಂಗೀತ ವಾದ್ಯಗಳು. ಪಿಂಗಾಣಿ ವಸ್ತುಗಳು ಇನ್ನೂ ಇತರೆ. ಇಂತಹ ಚಿತ್ರಗಳ ರಚನೆಯ ಮೂಲ ಉದ್ದೇಶ ಹಲವಾರು ವಿಭಿನ್ನ ರೀತಿಯ ವಸ್ತುಗಳ ಮೈವಳಿಕೆ (Texture)ಯ ಅಭ್ಯಾಸವಾಗುತ್ತದೆ. ಹತ್ತಿ. ರೇಶ್ಮೆ ಬಟ್ಟೆಗಳ ವ್ಯತ್ಯಾಸ. ಮರ. ಗಾಜು ಅದರಲ್ಲಿ ಪ್ರತಿಫಲಿಸುವ ವಸ್ತುವಿನ ಮೇಲೆ ಬೆಳಕು ಅಥವಾ ಬೇರೆ ಬಣ್ಣಗಳು ಬಿದ್ದಾಗ ಆಯಾ ವಸ್ತುಗಳು ಕಾಣುವ ರೀತಿ. ವಸ್ತುವಿನ ಉಬ್ಬು ತಗ್ಗುಗಳಲ್ಲಿ ಬಟ್ಟೆಯ ಮಡಿಕೆಗಳಲ್ಲಿ ಬೆಳಕು ಹಾಗೂ ನೆರಳು ಪ್ರತಿಫಲಿಸುವ ವಿವರಣೆಯ ಅಭ್ಯಾಸವೇ ಇಲ್ಲಿ ಪ್ರಮುಖವಾದುದು. ಅದಷ್ಟು ನೈಜಶೈಲಿಯಲ್ಲಿ ರಚಿಸುತ್ತಾರೆ. ಈ ವಿಷಯವನ್ನು ಕಲಾಶಾಲೆಗಳಲ್ಲಿ ಪಠ್ಯಕ್ರಮದಲ್ಲಿ ಸೇರಿಸಲಾಗಿದೆ. ಇದರಿಂದ ಕಲಾವಿದನಿಗೆ ಪ್ರಾರಂಭದಲ್ಲಿ ವಸ್ತುಗಳ ಘನಾಕೃತಿಯ ನೆರಳು ಬೆಳಕಿನ ಸಂಪೂರ್ಣ ಜ್ಞಾನ ಪಡೆಯಲು ಸಹಾಯವಾಗುತ್ತದೆ. ಈ ಅಭ್ಯಾಸ ಮುಂದೆ ಸಂಯೋಜನಾ ಚಿತ್ರರಚಿಸುವಲ್ಲಿ ಸಹಕಾರಿಯಾಗಿದೆ. ಸಂಯೋಜನೆಯ ಮೊದಲ ಹಂತ ಇದಾಗಿದೆ.

ಚೆಟ್ಟಿಯವರು ವಿದ್ಯಾರ್ಥಿ ದೆಸೆಯಲ್ಲಿ ಮಾತ್ರ ಇಂತಹ ಚಿತ್ರಗಳನ್ನು ಹೆಚ್ಚಾಗಿ ಮಾಡಿದ್ದಾರೆ. ತದನಂತರ ಅವುಗಳ ಸಂಖ್ಯೆ ಕಡಿಮೆಯಾಗುತ್ತ ಹೋಗಿದೆ. ಅವರ ಒಲವು ಭಾವಚಿತ್ರ ಹಾಗೂ ಸಂಯೋಜನ ಚಿತ್ರ ರಚಿಸುವಲ್ಲಿ ವಿಶೇಷವಾಗಿ ಕೆಲಸ ಮಾಡಿದೆ.



ಚಿತ್ರ ೨೯

ಚಿತ್ರ ೨೯ : ಪೆನ್ಸಿಲ್ ಮಾಧ್ಯಮದ ಈ ಎರಡು ಸ್ಥಿರ ಚಿತ್ರಣ ನೈಜತೆಯ ಪರಾಕಾಷ್ಠೆ ಮುಟ್ಟಿವೆ. ಇಲ್ಲಿ ಬಳಸಿದ ಪ್ರತಿಯೊಂದು ವಸ್ತುವಿನ ಗುಣವನ್ನು ಗುರುತಿಸಬಹುದು ಲೋಹ. ಕಟ್ಟಿಗೆ. ಗಾಜು ಲೋಹದಲ್ಲಿ ವಿವಿಧತೆಯನ್ನು ಸಹಿತ ಗುರ್ತಿಸುವಷ್ಟು ನೈಜತೆ ಇದೆ. ಇದೇ ಕಲಾವಿದನ ನಿಜವಾದ ಜಾಣ್ಮೆಯಾಗಿದೆ.

ಈ ಚಿತ್ರದ ಮೊದಲ ಭಾಗದಲ್ಲಿ ಚಿತ್ರಿತವಾದ ಚಿತ್ರದಲ್ಲಿ ತಗಡಿನ ಸೀಮೆಡಬ್ಬಿ. ಕಬ್ಬಿಣದ ಲಾಂದ್ರ. ಕಾಜಿನ ಬಾಟ್ಲಿ. ಹಿತ್ತಾಳೆಯ ತಂಬಿಗೆ ಲಾಂದ್ರದ ಕೆಳಗಡೆ ಇಟ್ಟಂತ ಕಟ್ಟಿಗೆ (Plywood) ಪೆಟ್ಟಿಗೆ ಎಲ್ಲಾ ವಸ್ತುಗಳು ಇಂತಹದೇ ಪಾದಾರ್ಥದಿಂದ ತಾಯರಿಸಲ್ಪಟ್ಟಂತಹವು ಎಂಬುದನ್ನು ಸುಲಭವಾಗಿ ಗುರ್ತಿಸಬಹುದು. ಇಂತಹ ಚಿತ್ರ ಪೆನ್ಸಿಲಿನಿಂದ ರಚಿಸುವುದು ಬಹಳ ಕಷ್ಟ ಏಕೆಂದರೆ ಬಣ್ಣಗಳಿಲ್ಲದೆ ಆ ಮೂಲ ವಸ್ತುವಿನ ಗುಣವನ್ನು ತಿಳಿಸುವುದು ಅದು ಪೆನ್ಸಿಲ್‌ನಲ್ಲಿಯೇ ನೆರಳು ಬೆಳಕುಗಳ ಸೂಕ್ಷ್ಮ ವಿಭಜನೆಯಿಂದ ಚಿತ್ರಿಸುವುದೆಂದರೆ ತುಂಬಾ ಕಷ್ಟದ ಕೆಲಸ. ಅಂತಹ ಎಲ್ಲಾ ಸೂಕ್ಷ್ಮ ವಿವರಗಳನ್ನು ನಾವಿಲ್ಲಿ ಕಾಣಬಹುದು.

ಎರಡನೇ ಭಾಗದಲ್ಲಿರುವ ವಸ್ತುಗಳ ಗುಂಪಿನ ಚಿತ್ರವು ಅಷ್ಟೇ ನೈಜವಾಗಿದೆ. ಕಬ್ಬಿಣದ ಒಲೆ ಅದರಲ್ಲಿ ಚಾಚಿದ ಕಟ್ಟಿಗೆ ಅದರ ಮೇಲೆ ಇರಿಸಿದ ಬಾಳಿಗೆ ಮತ್ತು ರಂದ್ರಉಳ್ಳ ಜಾರಿಸೌಟು ಅದರ ಅಕ್ಕ ಪಕ್ಕ ಇರುವ ಹಿತ್ತಾಳೆ ಬುಟ್ಟಿ. ಸಣ್ಣ ತಪೇಲಿ. ಅದರ ಮೇಲೆ ಲೋಟ. ಒಳಗಿರುವ ಸೌಟು ಎಲ್ಲವೂ ತಮ್ಮ ಗುಣ ವೈಶಿಷ್ಟ್ಯದಿಂದ ಮೆರೆದಿವೆ. ಇದು ಒಂದು ಅಭ್ಯಾಸ ಪೂರ್ಣವಾದ ಚಿತ್ರವಾಗಿದೆ.

ಇಂತಹ ಪರಿಪೂರ್ಣ ಅಭ್ಯಾಸ ಕಲಾವಿದನಾಗುಗುವವನಿಗೆ ಅವಶ್ಯ. ಏಕೆಂದರೆ ಪ್ರತಿಯೊಂದು ವಸ್ತುವಿನ ಗುಣವನ್ನು ಸನಿಹದಿಂದ ಅರ್ಥೈಸಿಕೊಳ್ಳಲು ಸಾಧ್ಯ. ಅಲ್ಲದೆ ಮುಂದೆ ಸಂಯೋಜನೆ ಚಿತ್ರಗಳನ್ನು ರಚಿಸುವಾಗ ಯಾವರೀತಿ ಆಕೃತಿಗಳನ್ನು ಸಂಯೋಜಿಸಬೇಕು ಹಾಗೂ ನೆರಳು ಬೆಳಕನ್ನು ಯಾವ ರೀತಿ ನೀಡಬೇಕು ಎಂಬುದರ ಸೂಕ್ಷ್ಮ ಜ್ಞಾನ ಉಂಟಾಗುತ್ತದೆ.

ಚಿಟ್ಟಿಯವರು ಯಾವುದೇ ವಸ್ತು. ವಿಷಯ. ಪ್ರಾಣಿ ಏನನ್ನೇ ರಚಿಸಲಿ ಅದೊಂದು ಪರಿಪೂರ್ಣ ಕೃತಿಯಂತೆ ಕಾಣಬೇಕು. ಅಷ್ಟೊಂದು ತಾಳ್ಮೆಯಿಂದ ಸಂಪೂರ್ಣವಾಗಿ ರಚಿಸುತ್ತಿದ್ದರು. ಅದನ್ನು ಅವರ ಚಿತ್ರಗಳನ್ನು ನೋಡಿದಾಗ ಎಲ್ಲರ ಗಮನಕ್ಕೂ ಬರುವ ಅಂಶವಾಗಿದೆ.

೫) ಪ್ರಾಣಿ, ಪಕ್ಷಿಗಳ ಚಿತ್ರಗಳು :

ವನ್ಯಜೀವಿಗಳ ಅಭ್ಯಾಸವನ್ನು ಚಿಟ್ಟಿಯವರು ಅಷ್ಟೇ ಆಸಕ್ತಿವಹಿಸಿ ಚಿತ್ರಿಸಿದ್ದಾರೆ. ಕೆಲವುಸಲ ಮೃಗಾಲಯಗಳಿಗೂ ಹೋಗಿ ಅಲ್ಲಿ ಪ್ರಾಣಿ. ಪಕ್ಷಿಗಳ ವಿವಿಧ ಭಂಗಿಗಳನ್ನು ತಮ್ಮ ರೇಖೆಯಲ್ಲಿ ಸೆರೆಹಿಡಿದಿದ್ದಾರೆ. ಮನುಷ್ಯರ ಶಾರೀರಿಕ ರಚನೆಯಂತೆಯೇ ಈ ಎಲ್ಲ ಪ್ರಾಣಿಗಳ ಅಂಗರಚನೆಯ ಅಭ್ಯಾಸ ಆಳವಾಗಿ ಮಾಡಿರುವುದಕ್ಕೆ ಅವರ ಚಿತ್ರಗಳೇ ಸಾಕ್ಷಿ. ನಿಸರ್ಗದಲ್ಲಿ ಕಾಣಸಿಗುವ ಎಲ್ಲಾ ಪ್ರಾಣಿ. ಪಕ್ಷಿಗಳ ಚಿತ್ರಗಳನ್ನು ಚಿತ್ರಿಸಿದ್ದಾರೆ. ಅವರ ಸಂಯೋಜನಾ ಚಿತ್ರಗಳಲ್ಲಿ ಕೆಲವು ಪುರಾಣಗಳ ಚಿತ್ರಗಳಲ್ಲಿ ಜಿನ್ನೈಲಿಯಲ್ಲಿ ಈ ಎಲ್ಲ ಪ್ರಾಣಿ. ಪಕ್ಷಿಗಳ ಚಿತ್ರಗಳನ್ನು ಸಾಕಷ್ಟು ದುಡಿಸಿಕೊಂಡಿದ್ದಾರೆ.

ಚಿತ್ರ ೩೦ : ಪ್ರಾಣಿಗಳ ರೇಖಾಚಿತ್ರಗಳು

ಕುದುರೆಯ ಚಿತ್ರ : ಅದು ಬರಿ ಶಿರಭಾಗ ಮಾತ್ರವಾದರೂ ಅಂಗರಚನೆಯ ಸೂಕ್ಷ್ಮತೆ ಇದರಲ್ಲಿ ಕಾಣಬಹುದು. ನೆರಳು ಬೆಳಕಿನ ಸಂಯೋಜನೆಯಿಂದ ಜೀವ ತುಂಬಿಕೊಂಡಿದೆ. ಚರ್ಮದ ಬಿರುಸುತನ ಮತ್ತು ನುಣುಪುತನ ಚೆನ್ನಾಗಿ ಚಿತ್ರಿತವಾಗಿದೆ. ಇಂತಹ ಕುದುರೆ ಚಿತ್ರಗಳನ್ನು ಅನೇಕ ಭಂಗಿಗಳಲ್ಲಿ ಚಿತ್ರಿಸಿದ್ದಾರೆ.

ಎತ್ತಿನ ಚಿತ್ರ : ಎತ್ತುಗಳು ಸಹಿತ ನಾನಾ ಭಂಗಿಗಳಿಂದ ಚಿತ್ರಿಸಲ್ಪಟ್ಟಿವೆ. ಕುಳಿತ. ನಿಂತ. ಮಲಗಿದ ಅನೇಕ ರೀತಿಗಳಲ್ಲಿ ಚಿತ್ರಿಸಿದ್ದಾರೆ. ಚಿತ್ರಿಸಲು ಇನ್ನು ಉಳಿದಿಲ್ಲ ಅನ್ನುವವರೆಗೂ ಚಿತ್ರಿಸಿದ್ದಾರೆ. ನಿಜವಾಗಿಯೂ ಚೆಟ್ಟಿಯವರ ತಾಳ್ಮೆ ಅಗಾಧ.

ಮಂಗಗಳ ಚಿತ್ರ : ಮಂಗಗಳನ್ನು ಚಿತ್ರಿಸುವುದಂತೂ ತುಂಬಾ ಕಷ್ಟದ ಕೆಲಸ. ಏಕೆಂದರೆ ಅವು ಒಂದೇ ಸ್ಥಳದಲ್ಲಿ ಸ್ಥಿರವಾಗಿ ಕುಳಿತುಕೊಳ್ಳದ ಚಂಚಲ ಪ್ರಾಣಿಗಳು. ಚೆಟ್ಟಿಯವರು ಅದರ ಚಲನೆಯನ್ನು ತಮ್ಮ ಚಿತ್ರದಲ್ಲಿ ಕಲಾತ್ಮಕವಾಗಿ ಸೆರೆಹಿಡಿದಿದ್ದಾರೆ. ಆ ಚಲನೆ ಅವರ ರೇಖೆಗಳಲ್ಲಿನ ವಿಶೇಷವಾದ ಅಂಶವಾಗಿದೆ.

ನರಿಯ ವಿವಿಧ ಭಂಗಿಗಳ ಚಿತ್ರ : ನರಿಯ ಕಪಟತನ ಅದರ ಕಣ್ಣಿನಲ್ಲಿ ವ್ಯಕ್ತವಾಗುವ ರೀತಿಯಲ್ಲಿ ಚಿತ್ರಿಸಿದ್ದಾರೆ.

ಆಡು : ಆಡಿನ (ಕುರಿ) ಚಿತ್ರಗಳನ್ನು ಸಾಕಷ್ಟು ಮಾಡಿದ್ದಾರೆ. ಅದರ ಎಲ್ಲಾ ಭಂಗಿಯ ಚಿತ್ರ ಸೆರೆಹಿಡಿದಿದ್ದಾರೆ. ಅದರ ಸಾಧುತನ ಚಿತ್ರದಲ್ಲಿ ಮೂಡಿಬಂದಿದೆ.

ಕರಡಿ : ಅದರ ದಷ್ಟಪುಷ್ಟತೆ ಮತ್ತು ಮೈತುಂಬ ಕೂದಲಿರುವ ಅನುಭವ ನೋಡುವವರಿಗಾಗುತ್ತದೆ.

ಜಿಂಕೆ : ಜಿಂಕೆಗಳನ್ನಂತೂ ಸಾಕಷ್ಟು ಚಿತ್ರಿಸಿದ್ದಾರೆ. ಅವರ ಪುರಾಣ ಚಿತ್ರಗಳಲ್ಲಿ ಒಂದಿಲ್ಲೊಂದು ಜಿಂಕೆ ಇರಲೇಬೇಕು. ಅಂದರೆ ಶರಣರಿರುವ ಸ್ಥಳದಲ್ಲಿ ಸಾಧು ಪ್ರಾಣಿಗಳು ವಾಸಿಸಲು ಇಷ್ಟಪಡುವ ಅಂಶ ಇಲ್ಲಿ ವ್ಯಕ್ತವಾಗುತ್ತದೆ. ಎಲ್ಲಾ ಭಂಗಿಗಳನ್ನು ಚಿತ್ರಿಸಿದ್ದಾರೆ. ಅದರಂತೆ ಸಾರಂಗ (ಕಡವೆ) ಗಳನ್ನು ಚಿತ್ರಿಸಿದ್ದಾರೆ.

ಎಲ್ಲ ಪ್ರಾಣಿಗಳು ಮೂಲದಿಂದ ಹಿಡಿದು ಆನೆಯವರೆಗೆ ಆ ಪ್ರಾಣಿಗಳ ಅಂಗದ ವಿವಿಧ ಭಾಗಗಳನ್ನು ಪ್ರತ್ಯೇಕವಾಗಿ ಅಭ್ಯಾಸ ಮಾಡಿದ್ದಾರೆ. ಅಂತೆಯೇ ಅವುಗಳನ್ನು ನೈಜ ರೀತಿಯಲ್ಲಿ ಚಿತ್ರಿಸುವಲ್ಲಿ ಸಫಲರಾಗಿದ್ದಾರೆ.

ಚಿತ್ರ ೩೧ : ಪಕ್ಷಿಗಳ ಚಿತ್ರ

ಚೆಟ್ಟಿಯವರು ಚಿತ್ರಿಸದ ಪಕ್ಷಿಗಳೇ ಇಲ್ಲವೆನ್ನಬಹುದು. ಎಲ್ಲಾ ಪಕ್ಷಿಗಳ ವಿವಿಧ ಭಂಗಿಗಳ ಅಭ್ಯಾಸವನ್ನು ಮಾಡಿದ್ದಾರೆ. ಬಾತುಕೋಳಿ. ಹಂಸ. ಪಾರಿವಾಳ. ಕೊಕ್ಕರೆ. ನವಿಲು. ಕಾಗೆ. ಗುಬ್ಬಿ. ಗಿಳಿ. ಗೊರವಂಕ ಇತ್ಯಾದಿ.

ಬಾತುಕೋಳಿ : ಎದುರು ಮುಖ. ಮಗ್ಗಲುಮುಖ. ಮತ್ತು ಅದರ ಕುತ್ತಿಗೆಯ ಚಲನೆ. ಚುಂಚಿದ ಗಡಸುತನ ಎಲ್ಲ ನೈಜವಾಗಿ ಚಿತ್ರಿತವಾಗಿವೆ.








ಚಿತ್ರ ೩೦



ಚಿತ್ರ ೨೦



ಚಿತ್ರ ೩೦







ಚಿತ್ರ ೩೦



ಚಿತ್ರ ೩೧





ಚಿತ್ರ ೩೧

ಉಷ್ಟ್ರಪಕ್ಷಿ : ಉದ್ದನೆಯ ಕಾಲು, ಎತ್ತರದ ಆಕೃತಿ ಪಕ್ಷಿಗಳಲ್ಲಿ ದೊಡ್ಡದಾದ ಪಕ್ಷಿ ಕಾಲಿನ ಮೇಲೆ ಕುತ್ತಿಗೆಯ ಕೆಳಗಿನ ನೆರಳು ಬೆಳಕಿನ ಸಂಯೋಜನೆ ನೈಜತೆಗೆ ಪುಟವಿಟ್ಟಂತೆ ಚಿತ್ರಿತವಾಗಿದೆ.

ಕಾಗೆ, ಗುಬ್ಬಿಗಳ ಚಿತ್ರ : ಇವುಗಳನ್ನು ವಿವಿಧ ಭಂಗಿಗಳಲ್ಲಿ ಚಿತ್ರಿಸಿದ್ದಾರೆ. ಕೂಗುವುದು, ಕುತ್ತಿಗೆ ಹೊರಳಿಸಿನೋಡುವ ರೀತಿ ಮೇಲೆ ಹಾರುವ ಕೆಳಗೆ ಇಳಿಯುವ ಎಲ್ಲ ರೀತಿಯ ಪಕ್ಷಿಯ ಚಲನ ವಲನವನ್ನು ಚಿತ್ರದಲ್ಲಿ ಸೆರೆಹಿಡಿದಿದ್ದಾರೆ.

ಹಂಸಪಕ್ಷಿ : ಹಂಸ ಪಕ್ಷಿಯ ಅನೇಕ ಭಂಗಿಗಳನ್ನು ರೇಖೆಗಳ ಪರಿಳಿತಗಳಲ್ಲಿ ಸೆರೆಹಡಿದಿದ್ದಾರೆ. ಪೆನ್ಸಿಲ್ಲಿನ ಒಂದೇ ಒಂದು ರೇಖೆಯಿಂದ ಕೂಡಾ ಹಂಸ ಪಕ್ಷಿಯ ಆಕಾರ ಚಲನೆಯನ್ನು ಗುರ್ತಿಸಬಹುದು.

ನವಿಲುಗಳು : ನವಿಲಿನ ಅನೇಕ ರೀತಿಯ ಭಂಗಿಗಳ ಚಿತ್ರಣ ಪ್ರತಿಯೊಂದು ಭಾಗ ಇಲ್ಲಿ ಸ್ಪಷ್ಟವಾಗಿ ಬೇರೆ ಬೇರೆ ಚಿತ್ರಿಸಲಾಗಿದೆ. ಚೆಟ್ಟಿಯವರ ಕೈಚಲನೆಯ ತೀವ್ರತೆ ಇದರಲ್ಲಿ ವ್ಯಕ್ತವಾಗಿದೆ.

ಹೀಗೆ ಚೆಟ್ಟಿಯವರು ಪ್ರತಿಯೊಂದು ಪಕ್ಷಿಯ ಶರೀರ ರಚನೆಯ ಅಭ್ಯಾಸವನ್ನು ಮಾಡಿರುವುದು ಈ ಚಿತ್ರಗಳಿಂದ ತಿಳಿದು ಬರುತ್ತದೆ. ಅವರ ಚಿತ್ರದಲ್ಲಿ ನೈಜತೆಯಿಂದ ಮೂಡಿ ಬಂದಿರುವ ಯಾವುದೇ ಸಣ್ಣ ಪಕ್ಷಿ ಆಗಲಿ ಪ್ರಾಣಿ ಆಗಲಿ ಗಮನಿಸಿದಾಗ ನಮ್ಮನ್ನು ಅವು ಭ್ರಮಾಲೋಕಕ್ಕೆ ಕರೆದೊಯ್ಯುತ್ತವೆ. ಅಂತಹ ಒಂದು ಪ್ರಭಾವ ಅದರಲ್ಲಿ ಮೂಡಬೇಕಾದರೆ ಅದರ ಹಿಂದಿನ ಸಧನೆಯನ್ನು ಅವರ ಈ ರೇಖಾ ಚಿತ್ರಗಳೇ ಹೇಳುತ್ತವೆ. ಅಷ್ಟೊಂದು ಅವರು ಅಧ್ಯಯನ ಶೀಲರಾಗಿದ್ದರು.

೬. ದೈನಂದಿನ ಅಭ್ಯಾಸದ ಅಂಕನೆ ರೇಖಾಚಿತ್ರಗಳು :


ಯಾವ ಕಲಾವಿದನಿಗಾದರೂ ಆತನ ಸ್ಕೆಚ್ ಪುಸ್ತಕ ನಿತ್ಯಸಂಗಾತಿ. ಅದು ಹತ್ತಿರವಿರದೆ ಆತ ಹೊರಗೆ ಹೋಗುವಂತೆಯೇ ಇಲ್ಲ. ಚೆಟ್ಟಿಯವರೂ ಸಹಿತ ನಿತ್ಯ ಪುಸ್ತಕ ಪೆನ್ಸಿಲ್ ಜೊತೆಯಲ್ಲೇ ಇಟ್ಟುಕೊಂಡಿರುತ್ತಿದ್ದರು. ಅವರ ಈ ಎಲ್ಲಾ ಸ್ಕೆಚ್‌ಗಳು ಅವರು ರೇಖೆಗಳ ಮೇಲೆ ಸಾಧಿಸಿರುವ ಪ್ರಭುತ್ವವನ್ನೂ ಸಾರುವಂತಿವೆ. ಇವರ ಚಿತ್ರಗಳು ನಾವು ರೂಪಿಸಿಕೊಂಡಂಥ ಪ್ರತಿಬಿಂಬವನ್ನೇ ನಮ್ಮ ಕಣ್ಣೆದುರಿಗೆ ತರುತ್ತಾರೆ. ಆಕೃತಿಯ ಸ್ಪಷ್ಟವಾದ ವಿವರಗಳು, ನಿಖರ ಪರಿಮಾಣಗಳು ಪೂರ್ಣ ಕಲಾವಿದನ ಆಂತರಿಕ ಒತ್ತಡ ಸ್ಪಷ್ಟವಾಗಿ ನೋಡುಗನ ಮುಂದೆ ತಂದಿದ್ದಾರೆ. ರೇಖೆಗಳ ಪರಿಳಿತ, ಲಯಬದ್ಧತೆ ನೋಡುಗರ ಮನಸ್ಸನ್ನು ಆಕರ್ಷಿಸುತ್ತವೆ. ದಾರಿಯಲ್ಲಿ ಹೋಗುವಾಗ ಬರುವಾಗ ತಮ್ಮ ಕಣ್ಣಿಗೆ ಕಾಣುವ ತಮ್ಮ ಮನಸ್ಸನ್ನು ಆಕರ್ಷಿಸಿದ ಮಾನವ ಸ್ವಭಾವಗಳನ್ನು ನಿಸರ್ಗ ರಮ್ಯತೆ, ಪಕ್ಷಿ ಪ್ರಾಣಿಗಳನ್ನು ಸರಸರನೆ ಪುಸ್ತಕದಲ್ಲಿ ಇಳಿಸಿಬಿಡುವುದು. ಚೆಟ್ಟಿಯವರ ರೇಖೆಗಳಿಗೆ ಜೀವತ್ವವಿದೆ. ಲಯವಿದೆ. ಎದುರಿನ ವಸ್ತುವನ್ನು ತಕ್ಷಣ ಗ್ರಹಿಸಿ ಕೆಲವೇ ನಿಮಿಷಗಳಲ್ಲಿ ಅದನ್ನು ರಚಿಸುವ ಸಾಮರ್ಥ್ಯ ಹೊಂದಿದವರು.

ಚಿತ್ರ ೩೨ : ಹೆಚ್ಚಾಗಿ ಸ್ತ್ರೀಯರ ರೇಖಾ ಚಿತ್ರಗಳನ್ನೇ ರಚಿಸಿದ್ದಾರೆ. ಮಗುವಿನ ಕೆಲಸದಲ್ಲಿ ನಿರತಳಾದ ತಾಯಿ, ಮಾತನಾಡುತ್ತ ಕುಳಿತ ಹೆಂಗಸರು, ಅಲಂಕರಿಸಿಕೊಂಡು ಯಾರಿಗಾಗಿಯೋ ಕಾಯುತ್ತ ನಿಂತವರು.



ಚಿತ್ರ ೨೧





ಚಿತ್ರ ೩೨



ಚಿತ್ರ, ೩೨




ಚಿತ್ರ ೨೨



ಚಿತ್ರ ೨೨





ಸ್ಟೇಶನ್ನಿನಲ್ಲಿ ಟಿಕೇಟನ್ನು ಪಡೆಯುತ್ತಿರುವ ಹೆಣ್ಣುಮಕ್ಕಳು ಅವರು ನಿಂತ ಭಂಗಿ ಸೆರಗನ್ನು ಹೊತ್ತುಕೊಂಡು ಹೊರಟಿರುವ ಮಾರವಾಡಿ ಹೆಣ್ಣುಮಗಳು ಬುಟ್ಟಿಹೆಣೆಯುವ ಕೆಲಸದಲ್ಲಿ ತೊಡಗಿದ ಗಂಡ-ಹೆಂಡಿರು. ಜೊತೆಗೆ ಮಕ್ಕಳು, ಹೀಗೆ ಹಲವಾರು ವಿಷಯಗಳನ್ನು ತಮ್ಮ ರೇಖೆ ಮತ್ತು ಲಯದ ಬಂಧನಕ್ಕೆ ಒಲಿಸಿಕೊಂಡಿದ್ದಾರೆ. ಅವರ ಇಂತಹ ದೈನಂದಿನ ರೇಖಾಚಿತ್ರಗಳ ಪುಸ್ತಕಗಳ ರಾಶಿಯೇ ಇದೆ. ಆದರಲ್ಲಿ ಅನೇಕವು ಹಾಳಾಗಿಹೋಗಿವೆ.

ಚಿತ್ರ ೩೩ : ಇನ್ನೂ ಕೆಲವು ತೀವ್ರಗತಿಯ (Rapid Sketch) ರೇಖಾಚಿತ್ರಗಳನ್ನು ಮಾಡಿದ್ದಾರೆ. ಕುಳಿತು ಮಲಗಿದ ನಿಂತು ನೋಡುತ್ತಿರುವ. ಗಿಡದ ನೆರಳಲ್ಲಿ ಕ್ಷೌರಮಾಡುವ ದಾರಿಯಲ್ಲಿ ಹೊರಟ ನೀರೆಯರು. ಆಸ್ಪತ್ರೆಯಲ್ಲಿ ಮಲಗಿದ ರೋಗಿ ಹೀಗೆ ಅನೇಕ ತೀವ್ರಗತಿಯ ಸ್ಕೆಚ್‌ಗಳನ್ನು ಮಾಡಿದ್ದಾರೆ. ಇವುಗಳಲ್ಲಿ ಅವರ ರೇಖೆಯ ಓಟದ ಗತಿ ಸ್ಪಷ್ಟವಾಗಿ ಕಾಣಿಸುತ್ತದೆ. ಅಷ್ಟೊಂದು ಗೆರೆ ಎಳೆದರೂ ನಿಖರ ಪರಿಮಾಣಕ್ಕೆ ಎಲ್ಲಿಯೂ ಕುಂದಿಲ್ಲ. ಅಷ್ಟೊಂದು ಆಕೃತಿಗಳು ಸ್ಪಷ್ಟವಾಗಿ ಸ್ಫುಟವಾಗಿ ಇವೆ. ಹೀಗೆ ರೇಖೆಗಳಲ್ಲಿ ಪ್ರಭುತ್ವವನ್ನು ಸಾಧಿಸಿದವರು ಚೆಟ್ಟಿಯವರು. ಕಲಾಕೃತಿಗಳ ವೇಗರಚನಾ ವಿಧಾನ ಚೆಟ್ಟಿಯವರಿಗೆ ಜೆ. ಜೆ. ಕಲಾಶಾಲೆಯ ಕಲಾ ಶಿಕ್ಷಣದಿಂದ ಬಂದದ್ದು.

೭. ಶಿಲ್ಪಗಳ ರೇಖಾಚಿತ್ರಗಳು :

ಚೆಟ್ಟಿಯವರು ಶಿಲ್ಪಗಳ ರೇಖಾ ಚಿತ್ರಗಳನ್ನು ಮಾಡಿದ್ದಾರೆ. ಅವುಗಳನ್ನು ಮುಂದೆ ತಮ್ಮ ವರ್ಣಚಿತ್ರಗಳಿಗೂ ಬಳಸಿಕೊಂಡಿದ್ದಾರೆ. ಇಲ್ಲಿ ವಿವರಿಸಿರುವ ಶಿಲ್ಪದ ರೇಖಾಚಿತ್ರಗಳು ಬಾದಾಮಿಯ ಗುಹಾಚಿತ್ರಗಳು. ಈ ಚಿತ್ರಗಳನ್ನು ೧೯೫೦ ರಲ್ಲಿ ಚಿತ್ರಿಸಿದ್ದಾರೆ. ಇವುಗಳ ಅಳತೆ ೧೬ x ೧೯ ಸೆಂ. ಮಿ. ಇವೆ.

"ಚಾಲುಕ್ಯ ಶೈಲಿಯ ವಿನ್ಯಾಸಗಳು. ಆಕೃತಿಗಳು ತೆರಪೆಂದರೇನು. ರೂಪಿಕೆಗಳೆಂದರೇನು. ಆಕೃತಿಯನ್ನು ವಿರೂಪಗೊಳಿಸುವ ಬಗೆ. ದೇವ ದೇವತೆಗಳ ವಿವಿಧ ಭಂಗಿಗಳು. ಒಂದು ವೃತ್ತದಲ್ಲಿಯೇ ಬಾಗಿಸಿ ಬಳುಕಿಸಿ ಜೋಡಿ ಆಕೃತಿಗಳನ್ನು ರಚಿಸಿರುವ ಚಾಲುಕ್ಯ ಶಿಲ್ಪಗಳು ವಿಸ್ಮಯಕಾರಿ ವಿಧಾನ. ಕೂದಲು ವಿನ್ಯಾಸಗಳು ಇತ್ಯಾದಿ"[೧೫] ಇಂತಹ ಶಿಲ್ಪಗಳ ರೇಖಾ ಚಿತ್ರಗಳನ್ನು ಚೆಟ್ಟಿಯವರು ರಚಿಸಿದ್ದಾರೆ.

ಚಿತ್ರ ೩೪ : ನಟರಾಜ : ನೃತ್ಯಭಂಗಿಯಲ್ಲಿ ನಿಂತ ನಟರಾಜ ಮೂರ್ತಿಯ ರೇಖಾಚಿತ್ರ ಅದ್ಭುತ ಮೂರ್ತಿಗೆ ಹದಿನಾರು ಕೈಗಳು ಒಂದೊಂದೂ ನೃತ್ಯದ ಮುದ್ರೆಯನ್ನು ತೋರಿಸುತ್ತಿವೆ. ಶಿವನು ನೃತ್ಯದ ಭಂಗಿಯಲ್ಲಿ ನಿಂತಿದ್ದಾನೆ. ಮುಖದಲ್ಲಿ ಶಾಂತತೆಯ ಭಾವ. ಕೆಲವು ಕೈಗಳಲ್ಲಿ ಆಯುಧಗಳನ್ನು ಹಿಡಿದುಕೊಂಡು ನಿಂತಿದ್ದಾನೆ. ರೇಖೆಗಳು ಲಯಬದ್ಧವಾಗಿ ಶಿವನ ನೃತ್ಯದ ಚಲನೆಯನ್ನು ಸೂಚಿಸುತ್ತಿವೆ. ಇಲ್ಲಿಯಾವ ನೆರಳು ಬೆಳಕನ್ನು ಸೃಷ್ಟಿಸಿಲ್ಲ. ಇದನ್ನೇ ಮುಂದೆ ತಮ್ಮ ವರ್ಣ ಚಿತ್ರದಲ್ಲಿ ಬಳಸಿಕೊಂಡಿದ್ದಾರೆ. ಅಲ್ಲಿ ವರ್ಣ ಚಿತ್ರಕ್ಕೆ ತಕ್ಕ ಹಾಗೆ ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳಲಾಗಿದೆ.

---

೧೫. ಎಂ. ಎಚ್. ಕೃಷ್ಣಯ್ಯ : ಆರ್. ಎಮ್. ಹಡಪದ : ಪುಟ ೫




ಚಿತ್ರ ೩೪




ಚಿತ್ರ ೩೫



ಚಿತ್ರ ೩೬









ಚೆಟ್ಟಿಯವರು ತಮ್ಮ ಮನವನ್ನಾಕರ್ಷಿಸಿದ ಪ್ರತಿಯೊಂದು ವಸ್ತುವಿನ ರೇಖಾ ಚಿತ್ರಮಾಡಿದ್ದಾರೆ. ನಿಂತ ವಸ್ತುವೇ ಇರಲಿ ಚಲಿಸುವ ವಸ್ತುವೇ ಆಗಿರಲಿ ತಮ್ಮ ರೇಖೆಯಲ್ಲಿ ಸೆರೆ ಹಿಡಿದಿದ್ದಾರೆ. ಅಂತಹ ಒಂದು ರೇಖಾಚಿತ್ರ ಇಲ್ಲಿದೆ.

ಚಿತ್ರ ೩೫ : ಇದು ಒಂದು ಕಟ್ಟಿಗೆಯಿಂದ ತಯಾರಿಸಿದ ತೇರು. ಆ ತೇರಿನ ಪ್ರತಿಯೊಂದು ಭಾಗವನ್ನು ನಿಖರವಾಗಿ ಚಿತ್ರಿಸಿದ್ದಾರೆ. ತೇರಿನ ಮೇಲೆ ಮಾಡಿದ ಸುಳುವಿನ ವಿನ್ಯಾಸವನ್ನೂ ಕೂಡ ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ತೇರಿನ ಅಂಚಿಗೆ ಕಟ್ಟಿದ ಗಂಟೆ. ನೆರಳು ಬೆಳಕಿನ ಸೂಕ್ಷ್ಮ ಸಂಯೋಜನೆ ಆ ತೇರಿನ ಪ್ರತಿಯೊಂದು ಭಾಗ ಸ್ಫುಟವಾಗಿ ಕಾಣುವಂತೆ ತೋರುತ್ತಿದೆ. ಇದನ್ನು ೧೯೫೦ ರಲ್ಲಿ ರಚಿಸಿದ್ದಾರೆ. ಅಳತೆ ೧೬' x ೧೯' ಇದೆ.

ಚಿತ್ರ ೩೬ : ಚೆಟ್ಟಿಯವರು ಪ್ರತಿಯೊಂದು ವಸ್ತುವಿನ ಸೂಕ್ಷ್ಮ ಅಧ್ಯಯನವನ್ನು ಮಾಡಿರುವುದಕ್ಕೆ ಅವರ ಚಿತ್ರಗಳೇ ಸಾಕ್ಷಿ. ಈ ಚಿತ್ರದಲ್ಲಿ ಅನೇಕ ವಿವಿಧ ಎಲೆ. ಹೂಗಳ ರೇಖಾ ಚಿತ್ರಗಳನ್ನು ಮಾಡಿದ್ದಾರೆ. ಅದರಲ್ಲಿ ನೆರಳು ಬೆಳಕನ್ನು ಚಿತ್ರಿಸಿದ್ದಾರೆ. ಈ ರೀತಿ ಅನೇಕ ವಿವಿಧ ಮರಗಳ ಚಿತ್ರಗಳನ್ನು ಸಹಿತ ಚೆಟ್ಟಿಯವರು ಚಿತ್ರಿಸಿದ್ದಾರೆ. ಅವುಗಳ ಗುಣಲಕ್ಷಣಗಳನ್ನು ಅತ್ಯಂತ ಸೂಕ್ಷ್ಮವಾಗಿ. ವಿವರವಾಗಿ ಚಿತ್ರಿಸಿದ್ದಾರೆ.

ಇಂತಹ ಅನೇಕ ಹೂ. ಎಲೆ. ಗಿಡಗಳನ್ನು ಸ್ವತಃ ತಾವೇ ಬೆಳೆಸುತ್ತಿದ್ದರು. ಅವರ ಮನೆಯ ಮೇಲೆ ಅನೇಕ ಈ ರೀತಿಯ ಹೂ. ಗಿಡಗಳನ್ನು ಹೊಂದಿದ ಹೂದಾನಿಗಳನ್ನು ನೋಡಬಹುದಾಗಿತ್ತು. ಈಗೆಲ್ಲ ಅವು ಹಾಳಾಗಿ ಹೋಗಿವೆ.

೨. ಮಸಿ (ಇಂಕ್) ಮಾಧ್ಯಮದ ರೇಖಾ ಚಿತ್ರಗಳು :

ಹಿಂದೆ ಚಿತ್ರಗಳಿಗೆ ಪೂರ್ವಯೋಜಿತ. ಅಧ್ಯಯನಶೀಲ. ಸ್ಕೆಚ್‌ಗಳಂತಿದ್ದ ರೇಖಾಚಿತ್ರಗಳು ಈಗ ಅವೇ ಸಂಪೂರ್ಣ ಕೃತಿಗಳಾಗಿರುವುದು ಗಮನಾರ್ಹ ವಿಷಯ. "ಕ್ಲಾಸಿಕಲ್ ಕಾಲದ ಎಲ್ಲಾ ಕಲಾವಿದರೂ ತಾವು ಉತ್ತಮ ಕುಶಲಿಗಳಾಗಿರಬೇಕೆಂದೇ ಬಯಸುತ್ತಿದ್ದರು. ರೆಂಬ್ರಾಂಟ್. ಲಿಯೋನಾರ್ಡೋ-ಡ-ವಿಂಚ ಯವರುಗಳ ರೇಖಾಚಿತ್ರಗಳು ಪೂರ್ಣಗೊಳಿಸಿದ ಕೃತಿಗಳೇ ಆಗಿರುತ್ತಿದ್ದವು. ಮತ್ತೆ ಕೆಲವರು ತಮ್ಮ ಸ್ಕೆಚ್‌ಗಳನ್ನು ಭಿತ್ತಿಚಿತ್ರ ಅಥವಾ ವರ್ಣಚಿತ್ರಗಳಿಗೆ ಪೂರಕವಾಗುವಂತೆ ನೋಡಿಕೊಳ್ಳುತ್ತಿದ್ದರು. ಆದರೆ ಈ ಎರಡರಲ್ಲೂ ಆಯಾ ಕಲಾವಿದರ ಸಾಮರ್ಥ್ಯ ಬಹುಕಾಲದ ಅನುಭವ ಒಂದೇ ಮಟ್ಟದಲ್ಲಿರುತ್ತಿತ್ತು" ಎಂದು ಕೆ. ವಿ. ಸುಬ್ರಹ್ಮಣ್ಯಂ ಅವರ ಅಭಿಪ್ರಾಯವಾಗಿದೆ.[೧೬]

ಚೆಟ್ಟಿಯವರು ಸಹಿತ ಅನೇಕ ವರ್ಣಚಿತ್ರಗಳಿಗೆ ಬೇಕಾಗುವಂತಹ ಚಿತ್ರಗಳನ್ನು. ನಿಸರ್ಗಚಿತ್ರ. ಜೀವಮಾದರಿ ಚಿತ್ರ ದೇವಾಲಯದ ಶಿಲ್ಪಗಳನ್ನು. ದೈನಂದಿನ ಸ್ಕೆಚ್‌ಗಳನ್ನು ಇಂಕ್ ಮಾಧ್ಯಮದಲ್ಲೂ ರಚಿಸಿದ್ದಾರೆ. ಇಲ್ಲಿ ಇಂಕ್ ಅಂದರೆ ಶಾಹಿ (ಮಸಿ) ಇದನ್ನು ಲೆಕ್ಕಣಿಗೆಗೆ ತುಂಬಿ ಅದರಿಂದ ಚಿತ್ರವನ್ನು ರಚಿಸುವುದು. ನೆರಳು - ಬೆಳಕನ್ನು ಪೆನ್ಸಿಲ್‌ನಂತೆ ಹರಡಿ ತೋರಿಸಲು ಸಾಧ್ಯವಿಲ್ಲ. ಅದನ್ನೇ ರೇಖೆಗಳ ಮುಖಾಂತರ ಹತ್ತಿರಹತ್ತಿರ ರಚನೆ ಮಾಡಿ ನೆರಳಿನ ಅನುಭವವನ್ನು

---

೧೬. ಬಿ. ವಿ. ಕೆ. ಶಾಸ್ತ್ರಿ (ಸಂ.) : ರೇಖಾ ಚಿತ್ರ : ಪುಟ ೩೪

ನೀಡಬಹುದು. ಈ ರೇಖೆಗಳು ಪೆನ್ಸಿಲ್‌ನ ಹಾಗೆ ದಪ್ಪಗೆ, ತೆಳ್ಳಗೆ ಬರದೇ ಒಂದೇ ರೀತಿಯಲ್ಲಿ ಹರಿದು ಚಿತ್ರ ರಚನೆಯನ್ನು ಮಾಡುತ್ತವೆ. ಇದರಲ್ಲಿಯೂ ಚಿಟ್ಟಿಯವರ ಬಹುಕಾಲದ ಅನುಭವದ ಸಾಮರ್ಥ್ಯ ಅಗಾಧವಾಗಿದೆ. ಹೆಚ್ಚಾಗಿ ಕರಿ ಬಣ್ಣದ ಇಂಕ್‌ನಿಂದ ಚಿತ್ರ ರಚಿಸುತ್ತಾರೆ. ದೈನಂದಿನ ಕೆಲವು ಸ್ಕೆಚ್‌ಗಳನ್ನು ನೀಲಿ ಇಂಕ್ ನಿಂದಲೂ ಚಿತ್ರಿಸಿದ್ದಾರೆ. ಇನ್ನೂ ಕೆಲವೆಡೆ ಇಂಡಿಯನ್ ಇಂಕನ್ನು ಕುಂಚದಿಂದ ಬಳಸಿ ನೆರಳು ಬೆಳಕನ್ನು ಗಾಢವಾಗಿ ತೋರಿಸಿದ್ದಾರೆ. ಈ ಮಾಧ್ಯಮದಲ್ಲಿ ಮಾಧ್ಯಮ ಛಾಯೆ (ಮಿಡಲ್ ಟೋನ) ತೋರಿಸಲು ಕಷ್ಟವಾಗುತ್ತದೆ. ಆದರೂ ರೇಖೆಗಳನ್ನು ದೂರದೂರ ಎಳೆದು ಅದರ ಪ್ರಭಾವವನ್ನು ತಂದಿದ್ದಾರೆ.

ಈ ಮಾಧ್ಯಮದ ಚಿತ್ರಗಳನ್ನು ಅಧ್ಯಯನದ ದೃಷ್ಟಿಯಿಂದ ಈ ರೀತಿ ವಿಂಗಡಿಸಲಾಗಿದೆ :

೧) ಜೀವಮಾದರಿ (Life sketch) ಚಿತ್ರಗಳು

೨) ಸಂಯೋಜನಾ ಚಿತ್ರಗಳು

೩) ನಿಸರ್ಗ ಚಿತ್ರಗಳು

೪) ದೈನಂದಿನ ಅಭ್ಯಾಸದ ಅಂಕನೆ (sketch) ಚಿತ್ರಗಳು

೫) ಶಿಲ್ಪಗಳ ರೇಖಾ ಚಿತ್ರಗಳು

೧. ಜೀವಮಾದರಿ ಚಿತ್ರ :

ಚಿತ್ರ ೩೭ : ಇದನ್ನು ೧೯೭೮ ರಲ್ಲಿ ಚಿತ್ರಿಸಿದ್ದಾರೆ. ಇದೊಂದು ಲಂಬಾಣಿಯ ಕುಳಿತ ಜೀವಮಾದರಿಯ ಚಿತ್ರ. ಈ ಚಿತ್ರದಲ್ಲಿ ಆಕೆಯ ವೇಷಭೂಷಣದಿಂದ ಮಾತ್ರವಲ್ಲದೆ ಆಕೆಯ ಮುಖಲಕ್ಷಣದಿಂದ ಆಕೆ ಲಂಬಾಣಿ ಎಂದು ಗುರುತಿಸಬಹುದು. ಅಷ್ಟೊಂದು ಸೂಕ್ಷ್ಮವಾದ ಭಾವ ವ್ಯಕ್ತಪಡಿಸುವುದರಲ್ಲಿ ಚಿಟ್ಟಿಯವರ ಜಾಣ್ಮೆಯನ್ನು ಗುರುತಿಸಹುದು. ಕಡಿದಾದ ರೇಖೆಗಳಿದ್ದರೂ ಅದರಲ್ಲಿ ಭಾವಾಭಿವ್ಯಕ್ತಿಯ ಚಲನೆಯಿದೆ. ಇಲ್ಲಿ ನೆರಳು. ಮಧ್ಯ ಛಾಯೆ ಅಷ್ಟಾಗಿ ಇರದಿದ್ದರೂ ಘನಾಕೃತಿ (ತ್ರಿ ಡೈಮೆನ್‌ಶನ್)ಯ ಅನುಭವ ನಮಗಾಗುತ್ತದೆ.

೨. ಸಂಯೋಜನಾ ಚಿತ್ರಗಳು :

ಚಿಟ್ಟಿಯವರ ಇಂಕ ಮಾಧ್ಯಮದ ಸಂಯೋಜನಾ ಚಿತ್ರಗಳು ಹೆಚ್ಚಾಗಿ ಪುರಾಣ ಹಾಗೂ ಇನ್ನಿತರ ಶರಣರ ಜೀವನ ಕಥೆಗಳಿಗೆ ಸಂಬಂಧಿಸಿದ್ದಾಗಿವೆ. ಅವುಗಳಿಗಾಗಿಯೇ ಈ ಚಿತ್ರಗಳನ್ನು ರಚಿಸಿದ್ದಾರೆ. ಈ ಗ್ರಂಥಗಳಲ್ಲಿ ಬರುವ ಪವಾಡಗಳನ್ನು ಕುರಿತೇ ಹೆಚ್ಚು ರೇಖಾಚಿತ್ರ ಮಾಡಿದ್ದಾರೆ. ಇನ್ನು ಶರಣರ ಜೀವನದ ಗ್ರಂಥಗಳಲ್ಲಿ ಅವರ ಜೀವನದ ಒಂದು ಭಾಗ ಅಥವಾ ಸನ್ನಿವೇಶವನ್ನು ಕುರಿತು ಚಿತ್ರಿಸಿದ್ದಾರೆ. ಆದರೂ ಅಲ್ಲೊಂದು ಇಲ್ಲೊಂದು ಕಾಲ್ಪನಿಕ ಚಿತ್ರಗಳನ್ನು ರಚಿಸಿದ್ದಾರೆ.



ಚಿತ್ರ ೨೭

ಚಿತ್ರ ೩೮ : ಇದೊಂದು ಕಲ್ಪನೆಯ ಚಿತ್ರ. ಊರಗೌಡ ತನ್ನ ಆಳಿನೊಂದಿಗೆ ಪ್ರಯಾಣಿಸುತ್ತಿರುವ ದೃಶ್ಯ. ಗೌಡನು ಹಾಕಿಕೊಂಡ ಕೋಟು ಆತನ ಮೀಸೆಯ ಗತ್ತು ಅವನ ಠೀವಿ ಅಂತಸ್ತನ್ನು ವಿವರಿಸುವಂತಿವೆ. ಆಳು ಗಂಟುಮೂಟೆ ಹೊತ್ತುಕೊಂಡು ಕೈಯಲ್ಲಿ ತನ್ನ ಒಡೆಯನ ರಕ್ಷಣೆಗೆಂದು ಖಡ್ಗವನ್ನು ತೆಗೆದುಕೊಂಡು ಹೊರಟಿದ್ದಾನೆ. ಗೌಡನು ಆತನಿಗೆ ಏನೋ ಹೇಳುತ್ತಿದ್ದಾನೆ, ಅದನ್ನು ಆತ ಅತ್ಯಂತ ವಿವರವಾಗಿ ಆಲಿಸುತ್ತಿದ್ದಾನೆ. ಪ್ರತಿಯೊಂದು ವಸ್ತುವನ್ನು ಅತ್ಯಂತ ವಿವರವಾಗಿ ಚಿತ್ರಿಸಿದ್ದಾರೆ. ದೂರದಲ್ಲಿ ಕಾಣುವ ಮನೆ. ಒಟ್ಟಿನಲ್ಲಿ ಇಲ್ಲಿ ಆಯಾ ವ್ಯಕ್ತಿಗಳ ಒಡಲಾಳದ ಇಂಗಿತವನ್ನು, ಕಣ್ಣಲ್ಲಿ ಚಿಮ್ಮುವ ಭಾವವನ್ನು ಅಳೆದು ಅಭಿವ್ಯಕ್ತಿಸಿದಂತೆ ರಚಿತವಾಗಿವೆ.

ಚೆಟ್ಟಿಯವರು ಪೆನ್ಸಿಲ್‌ನಿಂದ ರಚಿಸಿದವುಗಳೇ ಆಗಲೀ ಅಥವಾ ಇಂಕ್ ಮಾಧ್ಯಮದಲ್ಲಿ ರಚಿಸಿದ. ರೇಖಾಚಿತ್ರಗಳೇ ಆಗಲಿ ಅವುಗಳನ್ನು ಕಲಾ ಅಧ್ಯಯನದ ' ಒಂದು ಶಿಸ್ತು ' ಎನ್ನುವ ದೃಷ್ಟಿಯಿಂದಲೇ ನೋಡಬೇಕು. " ರೇಖಾ ಚಿತ್ರಣ ಚಿತ್ರಕಲೆಯ ಬುನಾದಿ. ಅದರಲ್ಲಿನ ವಿಶೇಷ ಸಾಧನೆಯೇ ಕಲಾವಿದನ ಕಲಾಸಿದ್ಧಿಯನ್ನು ನಿರ್ಧರಿಸುತ್ತದೆ. "[೧೭] ಎನ್ನುವಂತೆ ಚೆಟ್ಟಿಯವರ ಒಂದೊಂದು ಸಂಯೋಜನಾ ಚಿತ್ರದಲ್ಲೂ ಮಾನವಾಕೃತಿಯ ರಚನೆಯ ಸ್ಥೂಲ - ಸೂಕ್ಷ್ಮಗಳು ಇದರಲ್ಲಿ ಅವರ ರೇಖಾ ಶುದ್ಧತೆ. ಘನಾಕೃತಿಗಳ ಪರಿಭಾವನೆ. ನೆರಳು - ಬೆಳಕಿನ ಸಂಯೋಜನೆ ಮುಂತಾದವುಗಳ ಸಂಬಂಧದಲ್ಲಿ ನಿಖರತೆಯ ಗುಣವನ್ನು ಲಕ್ಷಿಸಬೇಕಾಗುತ್ತದೆ. ಅಂತೆಯೇ ಇಲ್ಲಿ ಪುರಾಣಗ್ರಂಥದಲ್ಲಿ ಅವರ ಚಿತ್ರಗಳನ್ನೇ ನೇರವಾಗಿ ಬಳಸಿಕೊಂಡಿದ್ದಾರೆ. ಅಷ್ಟೊಂದು ಪರಿಪೂರ್ಣ ಕಲಾಕೃತಿಗಳ ಮೌಲ್ಯ ಅದರಲ್ಲಿ ಅಡಗಿವೆ.

ಶ್ರೀ ವಿರಕ್ತ ತೋಂಟದಾರ್ಯ ವಿರಚಿತ ಶ್ರೀ ಸಿದ್ಧೇಶ್ವರ ಮಹಾಪುರಾಣವು ಇದನ್ನು ೧೯೫೧ ರಲ್ಲಿ ಪ್ರಕಟಿಸಿದ್ದಾರೆ. ಆ ಸಂದರ್ಭದಲ್ಲಿ ಚೆಟ್ಟಿಯವರು ಈ ಪುರಾಣಕ್ಕಾಗಿ ೧೯ ಇಂಕ್ ಮಾಧ್ಯಮದ ರೇಖಾಚಿತ್ರಗಳನ್ನು ಸಂದರ್ಭಗಳಿಗೆ ಅನುಗುಣವಾಗಿ ಚಿತ್ರಿಸಿದ್ದಾರೆ. ಆ ಸಂದರ್ಭವನ್ನು ಎರಡು ಪುಟಗಳಷ್ಟು ಬರೆದು ವರ್ಣಿಸಿದ್ದನ್ನು ಇಲ್ಲಿ ಚೆಟ್ಟಿಯವರು ಒಂದೇ ಚಿತ್ರದಲ್ಲಿ ಆ ಎಲ್ಲಾ ವಿಷಯವನ್ನು ಸಮಗ್ರವಾಗಿ ಕ್ರೋಡೀಕರಿಸಿರುವುದನ್ನು ಕಾಣಬಹುದು. ಇಂತಹ ಚಿತ್ರಗಳನ್ನು ನೋಡಿದಾಗ ವೀಕ್ಷಕನು ಸಮಗ್ರವಾಗಿ ಒಂದೇ ಬಾರಿಗೆ ಅರ್ಥೈಸಿಕೊಳ್ಳಬಹುದು.

ಚಿತ್ರ ೩೯ : " ಮಹಾಬಳೇಶ್ವರನ ಅರ್ಚಕರ ಪ್ರಾರ್ಥನೆಯಂತೆ ಸಿದ್ಧಲಿಂಗೇಶನು ಲಿಂಗದ ಮಸ್ತಕವನ್ನೇರಿ ಬತ್ತಿಹೋದ ಗಂಗಾ ಪ್ರವಾಹವನ್ನು ಪುನಃ ಬರಮಾಡಿದುದು. "[೧೮] ಈ ಚಿತ್ರವು ಗ್ರಂಥದ ೫೫ ನೇ ಪುಟದಲ್ಲಿದೆ. ಮಹಾಬಳೇಶ್ವರನಲ್ಲಿ ಇದ್ದ ಗಂಗೆ ಬೇರೆ ಮತದವರ ಪ್ರವೇಶದಿಂದಾಗಿ ಅಪವಿತ್ರದಿಂದ ಬತ್ತಿಹೋಯಿತೆಂದು ವಿಪ್ರರೆಲ್ಲರೂ ಆ ಗಂಗೆಯನ್ನು ಪುನಃ ಬರಮಾಡಿಕೊಳ್ಳಲು ಯಜ್ಞಯಾಗಾದಿಗಳನ್ನು ಮಾಡಿದರು. ಆದರೂ ಗಂಗೆ ಬರಲಿಲ್ಲ. ಕೊನೆಗೆ ಅರ್ಚಕರು ಸಿದ್ಧಲಿಂಗೇಶನಿಗೆ ಪ್ರಾರ್ಥಿಸಲು, ಆತನು ಲಿಂಗದ ಮಸ್ತಕವನ್ನೇರಲು ಬತ್ತಿಹೋದ ಗಂಗೆ ಪುನಃ ಹರಿದುಬಂದು ಇಲ್ಲಿ ಆಡಂಬರದ ಪೂಜೆಗಿಂತ ಭಕ್ತಿ ಮುಖ್ಯ ಎನ್ನುವ ಸಂದೇಶವನ್ನು ನೀಡುತ್ತಾರೆ. ಈ ಆಶ್ಚರ್ಯವನ್ನು ಕಂಡ ವಿಪ್ರರೆಲ್ಲ ಕೈ ಮುಗಿದು ಬಾಗಿದರು.

---

೧೭. ಬಿ. ಕೆ. ಹಿರೇಮಠ : ಸೋಮಶೇಖರ ಸಾಲಿ : ಪುಟ ೧೦

೧೮. ಶ್ರೀ ಸಂಗನಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ಧೇಶ್ವರ ಮಹಾ ಪುರಾಣವು. ಪುಟ ೫೫



ಚಿತ್ರ ೩೮

ಚಿಟ್ಟಿಯವರು ಈ ಚಿತ್ರದಲ್ಲಿ ಎಲ್ಲ ಧರ್ಮದವರನ್ನು ಚಿತ್ರಿಸಿದ್ದಾರೆ. ಎಲ್ಲರೂ ಶಿವನ ಪೂಜೆಗೆ ಅರ್ಹರು ಎಂಬಂತೆ, ಅವರ ವೇಷಭೂಷಣಗಳಿಂದ ಗುರ್ತಿಸಲು ಸಾಧ್ಯ. ಪೂಜೆಗೆ ತಾವೇ ಅರ್ಹರೆಂಬ ವಿಪ್ರರ ಅಹಂಕಾರವಡಗಿ ಭಕ್ತಿಯ ಶಕ್ತಿಯ ಮುಂದೆ ತಲೆಬಾಗಿದಂತೆ ಆಶ್ಚರ್ಯವನ್ನು ಅವರ ಮುಖದಲ್ಲಿ ಮೂಡಿಸಿದ್ದಾರೆ. ಸಿದ್ಧಲಿಂಗ ಯತಿಗಳ ಮುಖದಲ್ಲಿ ಸೌಮ್ಯಭಾವನೆ, ನಿಂತ ಜನರಲ್ಲಿ ಉತ್ಸುಕತೆ, ಭಾವಪರವಶತೆಯನ್ನು ಕಾಣುತ್ತೇವೆ. ಹೆಣ್ಣುಮಕ್ಕಳ ಮೂಗುತಿಯಂಥ ಚಿಕ್ಕ ಆಭರಣ ಮೊದಲುಗೊಂಡು ಎಲ್ಲವನ್ನು ಸವಿಸ್ತಾರವಾಗಿ ಚಿತ್ರಿಸಿದ್ದಾರೆ. ಈ ಚಿತ್ರಗಳು ರಸಾನಂದವನ್ನು ನೀಡುತ್ತವೆ. ಭಕ್ತಿ, ಕರುಣ, ಆಶ್ಚರ್ಯ ಮುಂತಾದ ರಸಾನುಭವ ನೀಡುವ ಈ ರೇಖಾಚಿತ್ರಗಳು ಕಾವ್ಯಮಯವಾಗಿವೆ.

ಚಿತ್ರ ೪೦ : " ಸಿದ್ಧೇಶನಿಂದ ಕುಟಿಲಸಿದ್ಧನಾದ ಉತ್ತುಂಗ ಜೋಗಿಯ ಗರ್ವಭಂಗ. " [೧೯] ಈ ಚಿತ್ರ ಪುರಾಣಗ್ರಂಥದ ೭೧ ನೇ ಪುಟದಲ್ಲಿದೆ. ಇಲ್ಲಿ ಉತ್ತುಂಗ ಜೋಗಿಯು ತಾನು ಸಿದ್ಧಿಸಿಕೊಂಡಿದ್ದ ವಾಮಾಚಾರದಿಂದ ಏನೆಲ್ಲ ಮಾಡಬಲ್ಲೆ ಎಂಬ ಗರ್ವದಿಂದ ಸಿದ್ಧಲಿಂಗ ಯತಿಗಳ ಮೇಲೂ ಅದನ್ನು ಪ್ರಯೋಗ ಮಾಡಲು ಆ ಮಂತ್ರ - ಮಾಟ ತಿರುಗಿ ಆ ಜೋಗಿಯನ್ನೇ ಆವರಿಸಿಕೊಂಡವು. ಆಗ ಸಿದ್ಧಲಿಂಗ ಯತಿಗಳು ಉತ್ತುಂಗನನ್ನು ಅವುಗಳಿಂದ ಬಿಡಿಸಿ, ಆತನ ಗರ್ವಭಂಗ ಮಾಡಿ ತತ್ತ್ವೋಪದೇಶವನ್ನು ಮಾಡುವರು. ತನ್ನ ತಪ್ಪಿನ ಅರಿವಾದ ಉತ್ತುಂಗ ಜೋಗಿ ಸಂಪೂರ್ಣ ಸಿದ್ಧಲಿಂಗ ಯತಿಗಳಿಗೆ ಶರಣಾದನು.

ಈ ಚಿತ್ರದಲ್ಲಿ ಚಿಟ್ಟಿಯವರು ಉತ್ತುಂಗ ಜೋಗಿ ಯತಿಗಳ ಮೇಲೆ ವಾಮಾಚಾರ ಎಸಗುತ್ತಿರುವುದು ಹಾಗೂ ಅದು ತಿರುಗಿ ಅವರನ್ನೇ ಸುತ್ತಿಕೊಂಡ ದೃಶ್ಯ ಬಹಳ ಉತ್ತಮವಾಗಿದೆ. ಅಂದರೆ ಎರಡು ವಿಷಯಗಳನ್ನು ಒಂದೇ ಚಿತ್ರದಲ್ಲಿ ಹೇಳುವ ಪ್ರಯತ್ನ ಇಲ್ಲಿದೆ. ಉತ್ತುಂಗ ಜೋಗಿಯ ಕಣ್ಣುಗಳು ಹೋದವು ಕಾಲು ಕೀಳದಾದವು. ನಾಲಿಗೆ ಮಾತನಾಡದಂತೆ ಇರಲು ಗೊಂಬೆಯಂತೆ ನಿಂತಿದ್ದ ಅವರಿಗೆ ಮರುಜೀವ ನೀಡಿ ತತ್ತ್ವೋಪದೇಶ ಮಾಡಿದ ರೀತಿ ಮನೋಜ್ಞವಾಗಿದೆ. ಅವರೆಲ್ಲ ಕಣ್ಣು ಕಾಣದೆ ತಾವೆಸಗಿದ ದುಷ್ಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟು ಶೋಕ ವ್ಯಕ್ತಪಡಿಸಿದ್ದಾರೆ. ಇಲ್ಲಿ ಸಿದ್ಧಲಿಂಗಯತಿಗಳ ಮುಖದಲ್ಲಿ ಮಂದಹಾಸ, ಮಾಂತ್ರಿಕರ ಮುಖದಲ್ಲಿ ಪೈಶಾಚಿಕತೆಯ ಭಾವ. ಅಲ್ಲಿ ಚಿತ್ರಿಸಿದ ಆ ಮುಖಲಕ್ಷಣಗಳ ಕಲ್ಪನೆ ಬಹಳ ಸುಂದರವಾಗಿದೆ. ದೇವಾಲಯದ ಒಳಗೆ ಕೆತ್ತಿದ ಶಿಲ್ಪಗಳನ್ನು ಇಲ್ಲಿ ವೈಭವೀಕರಿಸಿದ್ದಾರೆ. ನೆರಳು - ಬೆಳಕಿನ ಛಾಯಾಂಕನ ರೇಖೆಗಳಿಂದ ಸ್ಪಷ್ಟವಾಗಿ ವಿಭಜಿಸಿದ್ದಾರೆ.

ಚಿತ್ರ ೪೧ : " ತೋಂಟದ ಸಿದ್ಧಲಿಂಗ ಯತೀಶನಿಂದ ಪಿಶಾಚಿರೂಪದಲ್ಲಿದ್ದ ಗಂಧರ್ವ ದಂಪತಿಗಳ ಶಾಪವಿಮೋಚನೆಯಾದುದು. " [೨೦] ಈ ಚಿತ್ರವು ಗ್ರಂಥದ ೧೫೩ ನೇ ಪುಟದಲ್ಲಿದೆ. ಅನುಪಮ ಮಹಾಜ್ಞಾನಿಯಾದ ಪೂರ್ಣಾನಂದ ಮುನಿಗಳ ಆಶ್ರಮದಲ್ಲಿ ಚಿತ್ರಸೇನ ಗಂಧರ್ವ ತನ್ನ ಮಡದಿಯೊಂದಿಗೆ ಬಂದು ರತಿಕ್ರೀಡೆಯಲ್ಲಿ

---

೧೯. ಶ್ರೀ ಸಂಗನಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ಧೇಶ್ವರ ಮಹಾ ಪುರಾಣವು, ಪುಟ ೭೧

೨೦. ಶ್ರೀ ಸಂಗನಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ಧೇಶ್ವರ ಮಹಾ ಪುರಾಣವು, ಪುಟ ೧೫೩

ತೊಡಗಿದಾಗ ಅಲ್ಲಿಗೆ ಬಂದ ಪೂರ್ಣಾನಂದ ಮುನಿಗಳು ವಿಷಯ ತಿಳಿದು ಋಷಿಗಳಾಶ್ರಮದಲ್ಲಿ ಈ ರೀತಿ ನಡೆದುಕೊಳ್ಳಬಹುದೆ ? ಎಂದು ಇಂತಹ ದೊಡ್ಡ ಪಾಪವನ್ನೆಸಗಿದ ಫಲವಾಗಿ ನೀನು ನಿನ್ನ ಮಡದಿ ಸಹಿತ ಭೂಮಿಯಲ್ಲಿ ಭೂತರಾಗಿರೆಂದು ಶಾಪಕೊಟ್ಟರು. ತೋಂಟದಾರ್ಯ ಯತಿಗಳ ಸೇವೆಗೈಯುವುದರಿಂದ ನಿಮ್ಮ ಶಾಪ ವಿಮೋಚನೆಯಾಗುತ್ತದೆನ್ನಲು ಅಂತೆಯೇ ಆ ಎರಡು ಪಿಶಾಚಿಗಳು ಸಿದ್ಧಲಿಂಗ ಯತಿಗಳ ಸೇವೆಗೈಯ್ಯಲು ಶಾಪ ವಿಮುಕ್ತರಾಗಿ ಕೈಲಾಸಕ್ಕೆ ಹೋದ ದೃಶ್ಯ.

ಚಿತ್ರದಲ್ಲಿ ಚಿಟ್ಟಿಯವರು ಪಿಶಾಚಿ ಹಾಗೂ ಗಂಧರ್ವ ರೂಪ ಎರಡನ್ನೂ ಅತ್ಯಂತ ಸೂಕ್ಷ್ಮ ಪ್ರಜ್ಞೆಯಿಂದ ಒಂದರಲ್ಲೇ ತೋರಿಸಿದ್ದಾರೆ. ಸಿದ್ಧಲಿಂಗ ಯತಿಗಳು ಆಶೀರ್ವದಿಸುತ್ತಿದ್ದಾರೆ. ಪಿಶಾಚಿಗಳು ಅವರಿಗೆ ಶರಣಾಗಿ ಅಂಗಲಾಗುವಂತೆ ತಲೆಬಾಗಿವೆ. ಅವುಗಳಲ್ಲಿಯೂ ಹೆಣ್ಣು, ಗಂಡು ಪಿಶಾಚಿಯ ಶರೀರ ರಚನೆಯನ್ನು ವೀಕ್ಷಕ ಥಟ್ಟನೆ ಗುರುತಿಸುವಂತೆ ಚಿತ್ರಿಸಿದ್ದಾರೆ. ಆ ಪಿಶಾಚಿಗಳ ದೇಹಕ್ಕೆ ಅಂಟಿಕೊಂಡು ಅದರಿಂದ ಶಾಪವಿಮೋಚನೆ ಹೊಂದಿ ಬೇರ್ಪಟ್ಟಂತೆ ಎದ್ದು ನಿಂತು ಕೈಮುಗಿಯುತ್ತಿರುವ ಗಂಧರ್ವ ದಂಪತಿಗಳ ಮುಖದಲ್ಲಿ ಕೃತಜ್ಞತೆಯ ಭಾವವಿದೆ. ಅಕ್ಕಪಕ್ಕದಲ್ಲಿ ಕುಳಿತಿದ್ದ ಶಿಷ್ಯಗಣವೃಂದದಲ್ಲಿ ಆಶ್ಚರ್ಯ ಹಾಗೂ ಧನ್ಯ ಭಾವನೆ ವ್ಯಕ್ತವಾಗಿದೆ. ಸುತ್ತಲೂ ಕಾಡಿನ ರಮಣೀಯತೆ. ಇಲ್ಲಿ ನೆಲದ ಮೈವಳಿಕೆಯನ್ನು ಚುಕ್ಕಿಗಳ ಮುಖಾಂತರ ಚಿತ್ರಿಸಿದ್ದಾರೆ. ಚಿತ್ರಸಂಯೋಜನೆಯಲ್ಲಿ ಮೊದಲಿಗೆ ದೃಷ್ಟಿ ಪಿಶಾಚಿಯ ಕಡೆಗೆ ಹೋದರು ನಂತರ ಎಲ್ಲ ಆಕೃತಿಗಳತ್ತ ಗಮನ ಹರಿಯುವಂತಿದೆ. ಪಿಶಾಚಿಗಳ ವಿಮೋಚನೆಯಾದ್ದರಿಂದ ಅವುಗಳನ್ನೇ ಕೇಂದ್ರಬಿಂದುವಾಗಿ ಇಟ್ಟುಕೊಂಡು ಚಿತ್ರ ರಚಿಸಿದ್ದಾರೆ.

ಚಿತ್ರ ೪೨ : " ಸಿದ್ಧೇಶನ ಪ್ರಸಾದವನ್ನು ಶಿಲೆಯ ಬಸವನು ಭುಂಜಿಸಿದುದು. "[೨೧] ಈ ಚಿತ್ರ ಗ್ರಂಥದ ೧೮೬ ನೇ ಪುಟದಲ್ಲಿದೆ. ಹೆಬ್ಬೂರಲ್ಲಿ ಸಿದ್ಧಲಿಂಗ ಯತಿಗಳು ತಂಗಿದ ಸಂದರ್ಭದಲ್ಲಿ ಆ ಊರಿನ ಹೆಣ್ಣುಮಗಳೊಬ್ಬಳು ದೊಡ್ಡ ತಟ್ಟೆಯಲ್ಲಿ ಬಾಳೆಹಣ್ಣುಗಳನ್ನು ತಂದು ಯತಿಗಳಿಗೆ ಸಮರ್ಪಿಸಿದಾಗ ಅವರು ಸ್ವಲ್ಪ ತೆಗೆದುಕೊಂಡು ಉಳಿದದ್ದನ್ನು ಅವರಲ್ಲೇ ಬಿಟ್ಟರು. ಆಗ ಆ ಹೆಣ್ಣುಮಗಳು ಆ ತಟ್ಟೆಯನ್ನು ಶಿಲೆಬಸವನ ಮುಂದೆ ಇಟ್ಟು ತಾನು ಲಿಂಗಪೂಜೆಯನ್ನು ಮಾಡಿಕೊಳ್ಳುವ ಸಂದರ್ಭದಲ್ಲಿ ಆ ಶಿಲೆಬಸವ ಸಿದ್ಧೇಶನ ಶೇಷಪ್ರಸಾದವನ್ನು ತನ್ನ ರಕ್ಷಣೆಗೋಸುಗ ಇಟ್ಟಿರುವಳೆಂದು ತಿಳಿದು ಸೇವಿಸುತ್ತಿರಲು ಆ ಹೆಣ್ಣುಮಗಳು ಹೆದರಿ ಆ ತಾಟನ್ನು ಎಳೆದುಕೊಂಡು ಬಿಟ್ಟಳು.

ಇಲ್ಲಿ ಚಿಟ್ಟಿಯವರು ಬಸವನ ಮೂರ್ತಿಯನ್ನು ಕಲ್ಲಿನದೇ ಎಂಬ ಭಾವನೆ ಉಂಟಾಗುವಂತೆ ಅದರ ಮೈವಳಿಕೆ (Texture) ಸೃಷ್ಟಿಸಿದ್ದಾರೆ.

ಉತ್ತರ ಕರ್ನಾಟಕದ ಸಂಸ್ಕೃತಿ ಇದರಲ್ಲಿ ಎದ್ದುಕಾಣುತ್ತದೆ. ದೇವಸ್ಥಾನದಲ್ಲಿ ಇರುವ ಎಲ್ಲರ ಹಣೆಯ ಮೇಲೆ ವಿಭೂತಿ. ಎಲ್ಲಾ ಹೆಣ್ಣುಮಕ್ಕಳು ತಲೆಯ ಮೇಲೆ ಸೆರಗನ್ನು ಹಾಕಿಕೊಂಡಿದ್ದು ಆಗಿನ ಕಾಲದ ಸಂಪ್ರದಾಯವನ್ನು ಎತ್ತಿ ತೋರಿಸುತ್ತದೆ. ಅಲ್ಲದೆ ಲಿಂಗಪೂಜೆ ಮಾಡಿಕೊಳ್ಳುತ್ತಿರುವ ಹೆಣ್ಣುಮಗಳು ಇಳಕಲ್ ಸೀರೆ ಹಾಗೂ ಕುಪ್ಪಸ

---

೨೧. ಶ್ರೀ ಸಂಗನಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ಧೇಶ್ವರ ಮಹಾ ಪುರಾಣವು. ಪುಟ ೧೮೬

ತೊಟ್ಟಿದ್ದು ಸ್ಪಷ್ಟವಾಗಿದೆ. ಶಿಲೆಬಸವ ಮುಂದಿಟ್ಟ ಪ್ರಸಾದವನ್ನು ಸ್ವೀಕರಿಸಿದಾಗ ಆಕೆ ಗಾಬರಿಯಿಂದ ಆ ತಟ್ಟೆಯನ್ನು ಎಳೆದುಕೊಳ್ಳಲು ಪ್ರಯತ್ನಿಸುತ್ತಿದ್ದಾಳೆ. ಆಕೆಯ ಕಣ್ಣಿನಲ್ಲಿ ಗಾಬರಿ ಆತಂಕ ಭಾವನೆ ಮೂಡಿದರೆ, ಉಳಿದವರೆಲ್ಲರೂ ಆಶ್ಚರ್ಯಚಕಿತರಾಗಿ ಈ ದೃಶ್ಯ ವೀಕ್ಷಿಸುತ್ತಿದ್ದಾರೆ. ಇಲ್ಲಿ ಶಿಲೆಬಸವನಿಗೂ ಸಿದ್ಧಲಿಂಗ ಯತಿಗಳ ಪ್ರಸಾದ ಸ್ವೀಕರಿಸುವ ಹಂಬಲವನ್ನು ವ್ಯಕ್ತಪಡಿಸುವ ಚಿತ್ರ ಇದಾಗಿದೆ. (ಅಧ್ಯಾಯ ಏಳರಲ್ಲಿಯ ೫ ನೇ ಚಿತ್ರವನ್ನು ನೋಡಿರಿ)

ಚಿತ್ರ ೪೩ : " ಒಬ್ಬ ಭಕ್ತಳು ಕೆರೆಯಲ್ಲಿ ಗಾಳಿಯ ಹೊಡೆತಕ್ಕೆ ದೂರ ತೇಲಿಹೋದ ಕೊಡವನ್ನು ಸಿದ್ಧೇಶನ ಆಣೆಯನ್ನಿಟ್ಟು ತನ್ನೆಡೆಗೆ ಬರಮಾಡಿದುದು. "[೨೨] ಅತ್ತೆ ಮಾವಂದಿರನ್ನು ಹೊಂದಿದ ಸೊಸೆಯೋರ್ವಳು ನೀರು ತರಲು ಕೆರೆಗೆ ಬರಲು ಕೊಡವನ್ನು ನೀರ ಮೇಲಿರಿಸಿ ತನ್ನ ಕೈಕಾಲನ್ನು ತೊಳೆದುಕೊಳ್ಳುತ್ತಿರಲು ಗಾಳಿಯ ರಭಸಕ್ಕೆ ಕೊಡ ದೂರ ತೇಲಿ ಹೋಯಿತು. ಇದರಿಂದ ದುಃಖಿತಳಾದ ಹೆಣ್ಣು ತನ್ನ ಅತ್ತೆ ಎಲ್ಲಿ ಬಯ್ಯುವಳೋ ಎಂಬ ಆತಂಕದಿಂದ ಕೊಡಕ್ಕೆ ನೀನಿತ್ತ ಬಾರದಿರೆ ಸಿದ್ಧೇಶ್ವರನ ಆಣೆ ಎನಲು ಕೊಡವು ತಿರುಗುತ್ತ ಆಕೆಯ ಹತ್ತಿರ ಬಂದಿತು. ಅಷ್ಟೊಂದು ಮುಗ್ಧ ಭಕ್ತಿ ಅವಳದು. (ಅಧ್ಯಾಯ ಏಳರಲ್ಲಿಯ ೪ ನೇ ಚಿತ್ರವನ್ನು ನೋಡಿರಿ)

ಇಲ್ಲಿ ಚಿಟ್ಟಿಯವರು ನೀರಿನಲ್ಲಿ ನಿಂತ ಹೆಣ್ಣುಮಗಳ ಭಂಗಿಯನ್ನು ಅತ್ಯಂತ ಲಾಲಿತ್ಯವಾಗಿ ಚಿತ್ರಿಸಿದ್ದಾರೆ. ಯೌವನದ ಅಂಗಸೌಷ್ಠವ ಕೈಮೇಲೆ ಹಚ್ಚೆಯನ್ನು ಚಿತ್ರಿಸಿದ್ದಾರೆ. ಒಂದು ಕೈ ಬೆರಳು ಕೊಡವನ್ನು ತೋರಿಸುತ್ತ ಇನ್ನೊಂದು ಕೈಬೆರಳು ಆ ಕೊಡಕ್ಕೆ ಸಿದ್ಧೇಶ್ವರನಾಣೆಯನ್ನು ನೀಡುವಂತೆ ಚಿತ್ರಿಸಿದ್ದಾರಲ್ಲದೆ ಆ ಕೊಡ ಅದಕ್ಕೆ ಹೆದರಿ ತಿರುಗುತ್ತ ಅವಳ ಹತ್ತಿರ ಬರುವ ರೀತಿ ಅದರ ಸುತ್ತಲು ಎದ್ದ ಸುರುಳಿಯಾಕಾರದ ನೀರಿನ ಅಲೆಗಳಲ್ಲಿ ರೇಖೆಯಿಂದ ಚಿತ್ರದ ಚಲನೆಯನ್ನು ಸೃಷ್ಟಿಸಿದ್ದಾರೆ. ಕೆರೆಯ ದಂಡೆ ಎಂದಾಕ್ಷಣ ಸಹಜವಾಗಿ ನೀರು ಕುಡಿಯಲು ಬಂದ ದನಗಳು ಆಕೆಯ ಜೊತೆ ನೀರು ತುಂಬಿಕೊಳ್ಳಲು ಬಂದ ಓರಗೆಯವರನ್ನು ಚಿತ್ರದ ಹಿನ್ನೆಲೆಯಾಗಿ ಚಿತ್ರಿಸಿದ ಕಲ್ಪನೆ ಆ ಸನ್ನಿವೇಶ ಕಣ್ಣಿಗೆ ಕಟ್ಟುವಂತಿದೆ. ಈ ಚಿತ್ರವನ್ನು ಗ್ರಂಥದ ೨೩೭ ನೇ ಪುಟದಲ್ಲಿ ನೋಡಬಹುದು.

ಚಿತ್ರ ೪೪ : " ಹೊಳಲಗುಂದದಲ್ಲಿ ಮಾಯಿದೇವಿಯು ದೇವತೆಗಳಿಂದ ಕೂಡಿಕೊಂಡು ಸಿದ್ಧಲಿಂಗ ಯೋಗೀಂದ್ರನ ಪಾದಪೂಜೆ ಮಾಡುತ್ತಿರುವುದು. "[೨೩] ಈ ಚಿತ್ರದಲ್ಲಿ ಲಕ್ಷ್ಮೀ, ಸರಸ್ವತಿ, ಆದಿಶಕ್ತಿ ಮೊದಲುಗೊಂಡು ಮಾಯಾದೇವಿ ಸಿದ್ಧಲಿಂಗ ಯತಿಗಳ ಪಾದಪೂಜೆ ಮಾಡುತ್ತಿದ್ದಾಳೆ. ಇಲ್ಲಿ ಚಿಟ್ಟಿಯವರು ದೇವತೆಗಳೆಂದಾಕ್ಷಣ ವೀಕ್ಷಕನಲ್ಲಿರುವ ಸಹಜವಾದ ಕಲ್ಪನೆಯನ್ನೇ ಅಲ್ಲಿ ಚಿತ್ರಿಸಿದ್ದಾರೆ. ವೀಣಾಪಾಣಿ ಸರಸ್ವತಿ, ಪದ್ಮಪಾಣಿ ಲಕ್ಷ್ಮೀ, ತ್ರಿಶೂಲಧಾರಿ ಆದಿಶಕ್ತಿಯರನ್ನೂ ಚಿತ್ರಿಸಿದ್ದಲ್ಲದೆ ಅವರ ವಾಹನಗಳಾದ ನವಿಲು ಗಜ ಹಾಗೂ ಸಿಂಹವನ್ನು ಚಿತ್ರಿಸಿದ್ದಾರೆ. ಅವು ಸಹಿತ ಆ ಪಾದಪೂಜೆಯಲ್ಲಿ ಪಾಲ್ಗೊಂಡಂತಿವೆ. ಮಾಯಾದೇವಿ ಆರತಿಯನ್ನು ಹಿಡಿದು ನಿಂತಿದ್ದಾಳೆ. ಪೂಜೆಯ

---

೨೨. ಶ್ರೀ ಸಂಗನಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ಧೇಶ್ವರ ಮಹಾ ಪುರಾಣವು, ಪುಟ ೨೩೭

೨೩. ಶ್ರೀ ಸಂಗನಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ಧೇಶ್ವರ ಮಹಾ ಪುರಾಣವು, ಪುಟ ೨೩೮

ಸಂದರ್ಭದಲ್ಲಿ ಜಾಗಟೆ. ಶಂಕನಾದ. ಕಂಸಾಳೆ. ಬಾರಿಸುವವರನ್ನು ಚಿತ್ರಿಸಿ ಪೂಜೆಯ ವೈಭವವನ್ನು ಸೆರೆಹಿಡಿದಿದ್ದಾರೆ. ದೇವತೆಗಳಿಂದ ಪೂಜಿಸಿಕೊಳ್ಳಲ್ಪಡುವಂಥ ಯತೀಶ್ವರರಾಗಿದ್ದರು. ಎಲ್ಲವೂ ನೈಜತೆಯಿಂದ ಕೂಡಿದ್ದು, ಆ ಭಾವ ಇಲ್ಲಿ ಮೂಡುತ್ತದೆ. ಈ ಚಿತ್ರವನ್ನು ಗ್ರಂಥದ ೨೬೮ ನೇ ಪುಟದಲ್ಲಿ ನೋಡಬಹುದು.

ಚಿತ್ರ ೪೫ : " ಶ್ರೀಗುರು ಸಿದ್ಧಲಿಂಗೇಶ ಶಿವಯೋಗಿಗಳನ್ನು ಸಿಡಿಲು ಪ್ರದಕ್ಷಿಣೆಗೈದು ಪೂಜೆ ಮಾಡಿಮದು. " [೨೪] ಈ ಚಿತ್ರ ಗ್ರಂಥದ ೨೮೧ ನೇ ಪುಟದಲ್ಲಿದೆ. ಒಂದು ದಿನ ಮಂಟಪದೊಳು ಶಿವತತ್ವಾನುಭವಗೋಷ್ಠಿಯನ್ನು ನಡೆಸುತ್ತಿರಲು ಧರೆಯನ್ನೆ ಇಬ್ಭಾಗ ಮಾಡುವಂತೆ ಛಡಿಛಡಿರೆಂಬ ಆರ್ಭಟದಿಂದ ಸಿಡಿಲೆರಗಿ ಶಿಷ್ಯರ ಮಧ್ಯದಿಂದ ಹರಿದುಬಂದು ಗುರುವರನನ್ನು ಪ್ರದಕ್ಷಿಣೆ ಹಾಕಿ ಹೋಯಿತು.

ಚೆಟ್ಟಿಯವರು ಇಲ್ಲಿ ಸಿಡಿಲು ಆಕಾಶದಿಂದ ಹೀಗೆ ಭೂಮಿಗೆ ಹರಿದು ಬಂದು ಗುರುವರ್ಯರನ್ನು ಸುತ್ತವರಿದಂತೆ ರೇಖೆಗಳ ಚಲನೆಯಿಂದ ತೋರಿಸಿ ಅದರ ಸುತ್ತಲೂ ಛಾಯಾಂಕಣವನ್ನು ಚಿತ್ರಿಸಿದ್ದಾರೆ. ಇದರಿಂದ ಸಿಡಿಲಿನ ಪ್ರಕಾಶದಂತೆ ಅದು ಮೂಡಿ ಬಂದಿದೆ. ಆ ಬೆಳಕನ್ನು ನೋಡಲಾಗದೆ ಕೆಲವು ಶಿಷ್ಯರು ತಮ್ಮ ಕಣ್ಣುಗಳನ್ನೇ ಮುಚ್ಚಿಕೊಂಡಿದ್ದಾರೆ. ಇನ್ನು ಕೆಲವರು ಆಶ್ಚರ್ಯ ಹಾಗೂ ಧನ್ಯಭಾವವನ್ನು ವ್ಯಕ್ತಪಡಿಸುತ್ತಿರುವಂತೆ ಚಿತ್ರಿಸಿ ಆ ಸಂದರ್ಭದ ಕಲ್ಪನೆಗೆ ಜೀವ ತುಂಬಿದ್ದಾರೆ. ಹಿನ್ನೆಲೆಯಲ್ಲಿ ಕಾಡು. ಆಕಾಶಗಳನ್ನು ತೋರಿಸಿದ್ದಾರೆ. ಯತಿಗಳ ಮುಖದಲ್ಲಿ ಮಂದಹಾಸ ಇಲ್ಲಿ ಯಾವ ಆಕೃತಿಯಲ್ಲೂ ನೆರಳು - ಬೆಳಕನ್ನು ತೋರಿಸಿಲ್ಲ. ಹಿನ್ನೆಲೆಯಲ್ಲಿ ಮಾತ್ರ ಆ ರೀತಿ ಚಿತ್ರಿಸಿದ್ದರಿಂದ ಆಕೃತಿಗಳ ಮೇಲೆ ಸ್ಪಷ್ಟವಾಗಿ ಆ ಸಿಡಿಲಿನ ಬೆಳಕೆ ಹರಿದಂತೆ ಚಿತ್ರಿಸಿದ್ದಾರೆ.

ಚಿತ್ರ ೪೬ : " ಸಿದ್ಧಲಿಂಗೇಶ್ವರನು ಮೂಗುತಿಯನ್ನು ಕದ್ದವಳ ಆಕಾಶದಲ್ಲಿ ಹಸ್ತಸ್ತಂಭನಗೊಳಿಸಿದರು. " [೨೫] ಈ ಚಿತ್ರ ಗ್ರಂಥದ ೨೮೫ ನೇ ಪುಟದಲ್ಲಿ ಇದೆ. ಒಂದು ಸಾರಿ ಎಲ್ಲ ಭಕ್ತ ಜನರು. ಪುರುಷ. ಮಹಿಳೆಯರು ಮೊದಲ್ಗೊಂಡು ಯತಿಗಳ ದರ್ಶನಕ್ಕೆ ಬಂದು ಅಲ್ಲಿಯೇ ದೇವಾಲಯದಲ್ಲಿ ಎಲ್ಲ ಹೆಣ್ಣುಮಕ್ಕಳು ಒಂದೆಡೆ ಮಲಗುತ್ತಿರುವಾಗ ಒಬ್ಬ ಯುವತಿ ಅತ್ಯಂತ ಪ್ರಕಾಶಮಾನವಾದ ಮೂಗುತಿ ಹಾಕಿಕೊಂಡಿದ್ದಳು. ಅವರ ಗುಂಪಿನಲ್ಲೇ ಇರುವ ಒಬ್ಬ ಹೆಂಗಸು ಅದಕ್ಕಾಸೆ ಪಟ್ಟು ಅವಳಿಗೆ ಗೊತ್ತಿಲ್ಲದಂತೆ ತೆಗೆದುಕೊಂಡಳು. ಬೆಳಗಾಗೆದ್ದು ತರುಣಿ ಎಲ್ಲರಿಗೂ ಕೇಳಲಾಗಿ ಯಾರೂ ಇಲ್ಲವೆಂದರು. ಕೊನೆಗೆ ಆಕೆ ಎಲ್ಲರನ್ನು ಯತಿಗಳ ಹತ್ತಿರ ಕರೆದುಕೊಂಡು ಹೋಗಿ ನಿಜವಾಗಿ ನೀವು ತೆಗೆದುಕೊಂಡಿರದಿದ್ದರೆ ಕೈ ಎತ್ತಿರಿ ಎನ್ನಲು ಕಳ್ಳಿಯನ್ನು ಮೊದಲುಗೊಂಡು ಎಲ್ಲರೂ ಎತ್ತಿದರು. ಹಾಗೇ ಕೆಳಗೆ ಬಿಟ್ಟರು. ಆದರೆ ಮೂಗುತಿ ಕದ್ದ ಹೆಣ್ಣುಮಗಳ ಕೈ ಹಾಗೆಯೇ ಆಕಾಶಕ್ಕೆ ಅಂಟಿಕೊಂಡಂತೆ ನಿಂತಿತು. ಆಗ ಆಕೆ ತನ್ನ ತಪ್ಪಿನ ಅರಿವಾಗಿ ತನ್ನ ತುರುಬಿನಲ್ಲಿ ಅಡಗಿಸಿಟ್ಟಿದ್ದ ಮೂಗುತಿಯನ್ನು ತೆಗೆದು ಕೊಟ್ಟಳು.

---

೨೪. ಶ್ರೀ ಸಂಗನಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ಧೇಶ್ವರ ಮಹಾ ಪುರಾಣವು. ಪುಟ ೨೮೧

೨೫. ಶ್ರೀ ಸಂಗನಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ಧೇಶ್ವರ ಮಹಾ ಪುರಾಣವು. ಪುಟ ೨೮೫

ಚೆಟ್ಟಿಯವರು ಸಂಯೋಜನೆಯ ದೃಷ್ಟಿಯಿಂದ ಇಲ್ಲಿ ಯತಿಗಳಿಗೆ ಹಾಗೂ ಕದ್ದ ಹೆಣ್ಣುಮಗಳಿಗೆ ಪ್ರಾಮುಖ್ಯತೆ ನೀಡಿರುವುದರಿಂದ ಆ ಎರಡು ಕೃತಿಗಳಿಗೆ ಯಾವುದೇ ಹೆಚ್ಚಿನ ನೆರಳು ತೋರಿಸದೆ. ಬರಿ ಬೆಳಕಿನಿಂದ ಚಿತ್ರಿಸಿದ್ದಾರೆ. ಅಲ್ಲದೆ ಆಕೆಯ ಕೈಯಲ್ಲಿದ್ದ ಮೂಗುತಿ ಹೊಳೆಯುತ್ತಿರುವಂತೆಯೂ. ಆಕೆಯ ಕೈ ಆಕಾಶದತ್ತ ನಿಂತಂತೆ ಚಿತ್ರಿಸಿದ್ದಾರೆ. ಅದನ್ನು ಹುಡುಕಿಸಿಕೊಡಬೇಕೆಂಬ ದೈನ್ಯಭಾವ ಯುವತಿಯಲ್ಲಿದ್ದರೆ ಕಳ್ಳತನ ಮಾಡಿದ ಹೆಣ್ಣುಮಗಳು ತಲೆಬಾಗಿ ತಪ್ಪಿತಸ್ಥಳಾಗಿ ನಿಂತಿದ್ದಾಳೆ. ಹಿನ್ನೆಲೆಯಲ್ಲಿ ನಿಂತ ಎಲ್ಲ ಆಕೃತಿಗಳ ಮುಖದಲ್ಲಿ ವಿಸ್ಮಯ ಭಾವವಿದೆ. ಹೆಣ್ಣುಮಕ್ಕಳು ತಮ್ಮ ಜೊತೆಗೆ ಕರೆದುಕೊಂಡು ಬಂದ ಸಣ್ಣ ಮಕ್ಕಳನ್ನು ಅಷ್ಟೇ ವಿವರಪೂರ್ಣವಾಗಿ ಚಿತ್ರಿಸಿದ್ದಾರೆ. ಮಗುವಿನ ಕುಲಾಯಿಯು ಅಷ್ಟೇ ನೈಜತೆಯಿಂದ ಕೂಡಿದೆ. ಚೆಟ್ಟಿಯವರು ಸಣ್ಣವಸ್ತುವಿಗೂ ಅಷ್ಟೇ ಪ್ರಾಮುಖ್ಯತೆಯನ್ನು ಕೊಡುತ್ತಿದ್ದರು. ಎನ್ನುವುದು ತಿಳಿದುಬರುತ್ತದೆ.

ಚಿತ್ರ ೪೭ : " ಹರದನಹಳ್ಳಿಯ ಗೋಸಲ ಚೆನ್ನಬಸವಸ್ವಾಮಿಗಳಿಂದ ಸಿದ್ಧಲಿಂಗೇಶ್ವರನ ದೀಕ್ಷಾ ಸಮಾರಂಭ " [೨೬]

ಈ ಚಿತ್ರದಲ್ಲಿ ಗೋಸಲ ಚೆನ್ನಬಸವೇಶ್ವರ ಸ್ವಾಮಿಗಳು ಸಿದ್ಧಲಿಂಗೇಶ್ವರನಿಗೆ ಜಂಗಮ ಸಂಸ್ಕಾರವನ್ನು ನೀಡಿ ಷಟ್‌ಸ್ಥಲೋಪದೇಶವನ್ನು ನೀಡುತ್ತಿದ್ದಾರೆ. ಸಿದ್ಧಲಿಂಗೇಶ್ವರರು ಕೈ ಮುಗಿದು ಭಕ್ತಿಯಿಂದ ಅದನ್ನು ಆಲಿಸುತ್ತಿದ್ದಾರೆ. ಸುತ್ತೆಲ್ಲ ನೆರೆದ ಜನರು ಪಠಣ ಮಾಡುತ್ತಿದ್ದಾರೆ. ಸುತ್ತೆಲ್ಲ ಬಾಳೆ ಕಂಬಗಳನ್ನು ಕಟ್ಟಿ ಸಮಾರಂಭದ ಸಂಭ್ರಮದಂತಿದೆ. ಮಧ್ಯದಲ್ಲಿ ಪೂಜಾ ಸಾಮಗ್ರಿಗಳನ್ನು ಅಣಿಮಾಡಿ ಇಟ್ಟಿರುವರು. ಅದರಲ್ಲಿ ನಕ್ಷತ್ರದ ಐದು ಮನೆಗಳಲ್ಲಿ ಆರು ಕಳಸಗಳನ್ನಿಟ್ಟು. ಸಾಂಕೇತಿಕವಾಗಿ ಷಟ್‌ಸ್ಥಲೋಪದೇಶದ ಮಹಿಮೆಯನ್ನು ತಿಳಿಸಿದ್ದಾರೆ. ರೇಖೆಗಳಿಂದಲೇ ನೆರಳು - ಬೆಳಕಿನ ಯೋಜನೆ ದೀಕ್ಷಾಸಮಾರಂಭದ ಮಹತ್ವವನ್ನು ಸಾರುವಂತಿದೆ. ಈ ಚಿತ್ರ ಗ್ರಂಥದ ೩೭ ನೇ ಪುಟದಲ್ಲಿ ನೋಡಬಹುದು.

ಚಿತ್ರ ೪೮ : " ಸಿದ್ಧಲಿಂಗೇಶನು ಗುರುವಿನ ಲಿಂಗಾರ್ಚನೆಯ ಸಮಯದಲ್ಲಿ ನೀರಿನಿಂದ ದೀಪವನ್ನು ಉರಿಸಿದುದು. " [೨೭]

ಒಂದು ದಿನ ಗುರುವಿನ ಲಿಂಗಪೂಜಾ ಸಮಯದಲ್ಲಿ ದೀಪಕ್ಕೆ ಎಣ್ಣೆ ಇರದಿರಲು. ಧೈರ್ಯಗುಂದದೆ ದೊಡ್ಡದಾದ ಸಮೆಗೆ ನೀರನ್ನೆರೆದಾಗ ದೀಪ ಪ್ರಕಾಶಮಾನವಾಗಿ ಬೆಳಗಿತು.

ಚಿತ್ರದಲ್ಲಿ ಸಿದ್ಧಲಿಂಗೇಶನ ಗುರುವು ಲಿಂಗಪೂಜೆಗೆ ಕುಳಿತಿದ್ದಾರೆ. ಎದುರುಗಡೆ ಬಾಲಕ ಸಿದ್ಧಲಿಂಗ ದೀಪಕ್ಕೆ ನೀರನ್ನೆರೆಯುತ್ತಿದ್ದಾನೆ. ದೀಪ ಪ್ರಕಾಶಮಾನವಾಗಿ ಬೆಳಗುತ್ತಿದೆಯಲ್ಲದೆ ಗುರುವಿನ ಕೈಯಲ್ಲಿಯ ಲಿಂಗದ ಸುತ್ತಲೂ ಬೆಳಕು ಬೆಳಗಿದೆ. ಗುರುವಿನ ಪೂಜೆಗೆ ಭಂಗ ಬರದಂತೆ ದೀಪ ಉರಿಸಿದ ತೃಪ್ತಿಭಾವ ಬಾಲಕನಲ್ಲಿದೆ. ಬಾಲಕನ ಮಹಿಮೆಯನ್ನು ಮೆಚ್ಚುವ ಭಾವ ಗುರುವಿನದಾಗಿದೆ. ಇಲ್ಲಿ ಬಾಲಕನು ಹೊರಳಿ ದೀಪಕ್ಕೆ ನೀರನ್ನೆರೆಯುವ ರೀತಿ. ಆ

---

೨೬. ಶ್ರೀ ಸಂಗನಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ದೇಶ್ವರ ಮಹಾ ಪುರಾಣವು. ಪುಟ ೩೭
(ಚಿತ್ರದ ಕೆಳಗೆ ಬರೆದ ಸಾಲುಗಳು ಲೇಖಕರೇ ಚೆಟ್ಟಿಯವರಿಗೆ ಕೊಟ್ಟಿರಬಹುದು ಇಲ್ಲವೆ ಅವರೆ ಈ ರೀತಿ ಮುದ್ರಿಸಿರಬೇಕು)

೨೭. ಶ್ರೀ ಸಂಗನಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ದೇಶ್ವರ ಮಹಾ ಪುರಾಣವು. ಪುಟ ೪೧

ಸಂಯೋಜನೆಯು ನೋಡುಗನ ದೃಷ್ಟಿಯನ್ನು ಒಮ್ಮೆಲೆ ಹಿಡಿದಿಡುವಂತಿದೆ. ಇದನ್ನು ಗ್ರಂಥದ ೬೧ ನೇ ಪುಟದಲ್ಲಿ ನೋಡಬಹುದು. (ಅಧ್ಯಾಯ ಏಳರಲ್ಲಿಯ ೬ ನೇ ಚಿತ್ರವನ್ನು ನೋಡಿರಿ)

ಚಿತ್ರ ೪೯ : " ತುರುಷ್ಕ ರಾಜನಿಗೆ ಸಿದ್ಧೇಶನು ಪ್ರಾಣದಾನ ಮಾಡಿದುದು. " [೨೮]

ಗೋದಾವರಿ ನದಿ ದಂಡೆಯ ಮೇಲೆ ಧ್ಯಾನಾಸಕ್ತರಾಗಿ ಕುಳಿತಾಗ ತುರುಷ್ಕರಾಜರಿಬ್ಬರು ತಮ್ಮೊಳಗೆ ಕಾದಾಡತೊಡಗಿದರು. ಆಗ ಒಬ್ಬ ಅರಸ ಯತಿಗಳನ್ನು ನೋಡಿ ಕಾದುವದನ್ನು ಬಿಟ್ಟು ಬಂದು ನಮಸ್ಕರಿಸುತ್ತಿರಲು ಇನ್ನೊಬ್ಬ ಬಂದು ಯತಿಯ ಮುಂದೆ ಕುಳಿತಿದ್ದ ಆತನ ರುಂಡವನ್ನು ಹಾರಿಸಿದನು. ತನ್ನೆದುರು ತನಗೆ ಶರಣು ಬಂದವನಿಗೆ ಈ ರೀತಿ ಆದದ್ದನ್ನು ಕಂಡ ಯತಿ ಆತನಿಗೆ ಮರುಜೀವ ನೀಡಿದನು. ಅದನ್ನು ಕಂಡ ಇನ್ನೊಬ್ಬನು ತನ್ನ ತಪ್ಪಿನ ಅರಿವಾಗಿ ಕ್ಷಮೆ ಬೇಡುತ್ತಿದ್ದಾನೆ.

ಚಿತ್ರದಲ್ಲಿ ಒಂದು ಕಡೆ ರಾಜ ಪಶ್ಚಾತ್ತಾಪದಿಂದ ಕೈ ಮುಗಿಯುತ್ತಿದ್ದಾನೆ. ಇನ್ನೊಬ್ಬ ರಾಜನ ರುಂಡ ಕತ್ತರಿಸಿ ರಕ್ತ ಸುರಿಯುತ್ತಿದೆ. ಯತಿಗಳ ಅಭಯ ವಚನ ಆಶೀರ್ವಾದದಿಂದ ಮತ್ತೆ ಜೀವ ಬಂದಿದೆ ಎಂಬ ಭಾವವಿದೆ. ಹಿನ್ನೆಲೆಯಲ್ಲಿ ಎರಡೂ ಕುದುರೆಗಳು ಕೆನೆಯುತ್ತಿವೆ. ಚಿತ್ರದಲ್ಲಿ ದೃಶ್ಯಾಂತರವಿದೆ. ದೂರದಲ್ಲಿ ಬೆಟ್ಟಗಳನ್ನು ಚಿತ್ರಿಸಿದ್ದಾರೆ. ಮುನ್ನೆಲೆಯಲ್ಲಿ ರಾಜನ ಕಿರೀಟ ಬಿದ್ದಿದೆ. ಖಡ್ಗಗಳು ಬಿದ್ದಿವೆ. ಒಂದು ಮಾತ್ರ ರಕ್ತಮಯವಾಗಿದೆ. ಇದನ್ನು ಗ್ರಂಥದ ೫೨ ನೇ ಪುಟದಲ್ಲಿ ನೋಡಬಹುದು.

ಚಿತ್ರ ೫೦ : " ಉಳವಿಯಲ್ಲಿ ಜನಾರ್ದನಜೀಯನೆಂಬ ವೈಷ್ಣವ ಪಂಡಿತನನ್ನು ವಾದದಲ್ಲಿ ಸೋಲಿಸಿ ಆತನು ಬಿಟ್ಟ ಪಿಶಾಚಿಯನ್ನು ಓಡಿಸಿದುದು. " [೨೯]

ಚಿತ್ರದಲ್ಲಿ ವೈಷ್ಣವ ಪಂಡಿತನು ವಾದದಲ್ಲಿ ಗೆಲ್ಲಲಾಗದೇ ತನ್ನಲ್ಲಿದ್ದ ಪಿಶಾಚಿಯನ್ನು ಯತಿಯ ಮೇಲೆ ಬಿಟ್ಟಿದ್ದಾನೆ. ಆದರೆ ಪಿಶಾಚಿಯು ಸಿದ್ಧಲಿಂಗ ಶಿವಸ್ವರೂಪನೆಂದು ತಿಳಿದಾಕ್ಷಣ ಆತನ ತೇಜಸ್ಸಿನ ಮುಂದೆ ನಿಲ್ಲಲಾರದೆ ದಿಕ್ಕೆಟ್ಟು ಓಡಿ ಹೋಗುತ್ತಿದೆ. ವೈಷ್ಣವ ಪಂಡಿತನ ಮುಖದಲ್ಲಿ ಆತಂಕವಿದ್ದರೆ ಯತಿಗಳ ಮುಖದಲ್ಲಿ ಮಂದಹಾಸವಿದೆ. ಆ ವೈಷ್ಣವನ ಹಿಂದೆ ಬಂದ ಇತರ ವಟುಗಳು ಈ ದೃಶ್ಯ ನೋಡಿ ಗಾಬರಿಯಾಗಿದ್ದಾರೆ. ಪಿಶಾಚಿಯ ಕಣ್ಣಲ್ಲಿಯೂ ಭಯವನ್ನು ಮೂಡಿಸಿರುವುದು ವಿಶೇಷ. ದೃಶ್ಯಾಂತರವಿದ್ದು ದೂರದಲ್ಲಿ ಊರನ್ನು ಚಿತ್ರಿಸಿದ್ದಾರೆ. ಇದನ್ನು ಗ್ರಂಥದ ೯೭ ನೇ ಪುಟದಲ್ಲಿ ನೋಡಬಹುದು.

ಚಿತ್ರ ೫೧ : " ಶ್ರೀ ತೋಂಟದ ಸಿದ್ಧಲಿಂಗ ಯತೀಶನು ಜಂಗಮ ಮೂರ್ತಿಗಳ ಅಪೇಕ್ಷೆಯಂತೆ ಅಕಾಲದಲ್ಲಿ ನೇರಿಳೆಯ ವೃಕ್ಷದಲ್ಲಿ ಫಲಗಳನ್ನುಂಟು ಮಾಡಿದುದು. " [೩೦]

---

೨೮. ಶ್ರೀ ಸಂಗನಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ಧೇಶ್ವರ ಮಹಾ ಪುರಾಣವು. ಪುಟ ೫೨

೨೯. ಶ್ರೀ ಸಂಗನಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ಧೇಶ್ವರ ಮಹಾ ಪುರಾಣವು. ಪುಟ ೯೭

೩೦. ಶ್ರೀ ಸಂಗನಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ಧೇಶ್ವರ ಮಹಾ ಪುರಾಣವು. ಪುಟ ೧೬೧

ಚಳಿಗಾಲದಲ್ಲೊಂದು ದಿನ ಸಿದ್ಧಲಿಂಗ ಯತಿಗಳು ಒಂದು ವನದ ನೇರಿಳೆಯ ಹಣ್ಣಿನ ಮರದ ಕೆಳಗೆ ಕುಳಿತಿರುವಾಗ ಅವರ ಜೊತೆಗೆ ಬಂದ ಚರಮೂರ್ತಿಗಳು (ಜಂಗಮರು) ಈ ಮರದಲ್ಲಿ ಹಣ್ಣಿದ್ದರೆ ಮೆಲ್ಲಬಹುದಿತ್ತು ಎಂದು ಆಸೆ ಪಟ್ಟಾಗ ಯತಿಗಳು ಗಿಡವೇರಿ, ಹಣ್ಣುಗಳು ಸಿಗುತ್ತವೆ ಎಂದಾಗ. ನಿಜವಾಗಿಯೂ ಅಲ್ಲಿ ಫಲಗಳಿದ್ದವು. "

ಚಿತ್ರದಲ್ಲಿ ಯತಿಗಳು ಮರದ ಕಡೆಗೆ ಕೈ ಮಾಡಿ ಫಲಗಳನ್ನು ತೋರಿಸುತ್ತಿರುವರು. ಜಂಗಮರೆಲ್ಲ ಫಲಗಳನ್ನು ನೋಡಿ ಆಶ್ಚರ್ಯಪಟ್ಟಿದ್ದಾರೆ. ಕೆಲವರು ಹಣ್ಣುಗಳನ್ನು ಹರಿಯುತ್ತಿದ್ದಾರೆ. ಇನ್ನೂ ಕೆಲವರು ಯತಿಗಳ ಮುಂದಿರಿಸಿ ಈ ಮಹಿಮೆಯನ್ನು ಕೊಂಡಾಡುತ್ತಾ ಕೈಮುಗಿಯುತ್ತಿರುವರು. ಜಂಗಮರ ಮುಖದಲ್ಲಿ ಆಶ್ಚರ್ಯ ಭಾವವಿದೆ. ಯತಿಗಳು ನಗುತ್ತಿರುವರು. ಈ ಚಿತ್ರವನ್ನು ಗ್ರಂಥದ ೧೬೧ ನೇ ಪುಟದಲ್ಲಿ ನೋಡಬಹುದು.

ಚಿತ್ರ ೫೨ : " ಸಿದ್ಧಲಿಂಗೇಶ್ವರನಿಗೆ ತುಂಬಿ ಹರಿಯುತ್ತಿರುವ ನದಿಯು ದಾರಿ ಕೊಟ್ಟುದುದು. " [೩೧]

ಈ ಚಿತ್ರದ ಬಗ್ಗೆ ಈಗಾಗಲೇ ಪೆನ್ಸಿಲ್ ಮಾಧ್ಯಮದ ರೇಖಾಚಿತ್ರದಲ್ಲಿ ವಿವರಿಸಲಾಗಿದೆ. ಇಲ್ಲಿ ಅಲ್ಲಿಗಿಂತಲೂ ಹೆಚ್ಚು ವಿವರವಾಗಿ ಚಿತ್ರಿಸಿದ್ದಾರೆ. ಯತಿಗಳು ಬರುವ ದಾರಿಯಲ್ಲಿ ನೀರೆಲ್ಲ ಸುರಿದು ತಳದಲ್ಲಿ ಹಾವು. ಮೀನು. ಕಪ್ಪೆಗಳು ಕಾಣುತ್ತಿವೆ. ನೀರು ಪಕ್ಕಕ್ಕೆ ರಭಸದಿಂದಲೇ ಸರಿದಂತೆ ರೇಖೆಗಳನ್ನೂ ಚಿತ್ರಿಸಿದ್ದಾರೆ. ಕೊನೆಗೆ ನೀರಿನ ಹನಿಗಳನ್ನು ತೋರಿಸಿದ್ದಾರೆ. ಈ ಸನ್ನಿವೇಶ ಅತ್ಯಂತ ನೈಜವಾಗಿ ಮೂಡಿ ಬಂದಿದೆ. ಯತಿಗಳ ಹಿಂದೆ ಜಂಗಮಸ್ತೋಮವೇ ಆಶ್ಚರ್ಯಪಡುತ್ತ ಬರುತ್ತಿದೆ. ಈ ಚಿತ್ರ ಗ್ರಂಥದ ೨೬೫ ನೇ ಪುಟದಲ್ಲಿ ನೋಡಬಹುದು. (ಅಧ್ಯಾಯ ಏಳರಲ್ಲಿಯ ೩೪ ನೇ ಚಿತ್ರವನ್ನು ನೋಡಿರಿ)

ಚಿತ್ರ ೫೩ : " ಸಿದ್ಧೇಶ್ವರನು ಬೋಳ ಬಸವೇಶ್ವರನಿಗೆ ಷಟಸ್ಥಲಾಚಾರ್ಯ ಪಟ್ಟಗಟ್ಟಿದುದು " [೩೨]

" ಬೋಳಬಸವೇಶ್ವರನು ಸಿಂಹಾಸನದ ಮೇಲೆ ಆಸೀನನಾಗಿದ್ದಾನೆ. ಪಕ್ಕದಲ್ಲಿ ಸಿದ್ಧೇಶ್ವರನು ಆತನಿಗೆ ಷಟ್‌ಸ್ಥಲಾಚಾರ್ಯ ಎಂದು ಪಟ್ಟಗಟ್ಟುತ್ತಿದ್ದಾನೆ. ಈ ಸಂದರ್ಭದಲ್ಲಿ ನೆರೆದ ಜನರೆಲ್ಲ ಭಕ್ತಿಯಿಂದ ಕೈಮುಗಿದು ನಿಂತಿದ್ದಾರೆ. ಇಬ್ಬರು ಚಾಮರವನ್ನು ಬೀಸುತ್ತಿದ್ದಾರೆ. ಮುಂದೆಲ್ಲ ಫಲಪುಷ್ಪಗಳಿಟ್ಟಿರುತ್ತಾರೆ. ಸುತ್ತೆಲ್ಲ ಸಮಾರಂಭದ ಉತ್ಸಾಹವಿದೆ. ನಿಂತವರೆಲ್ಲರ ಮುಖದಲ್ಲಿ ಉತ್ಸುಕತೆ ಇದೆ. ಇದನ್ನು ಗ್ರಂಥದ ೪೧೭ ನೇ ಪುಟದಲ್ಲಿ ನೋಡಬಹುದು.

ಚಿತ್ರ ೫೪ : ತ್ರ್ಯಂಬಕೇಶ್ವರ ಜಂಗಮ ಪ್ರಸಾದವೇ ಸಂತೃಪ್ತಿದಾಯಕವೆಂದು ಸಿದ್ಧಲಿಂಗೇಶನ ಸಮ್ಮುಖದಲ್ಲಿ ನೆರೆದ ಸಮುದಾಯಕ್ಕೆ ಹೇಳಿದುದರ ಪ್ರಸಂಗ.

ಜಂಗಮ ತಾನು ಸವಿನೋಡಿದ ಪ್ರಸಾದ ಲಿಂಗಕ್ಕರ್ಪಿಸಿದಾಗ ಅಲ್ಲಿರುವ ಜನರೆಲ್ಲ ಇದನ್ನು ಬಹಿಷ್ಕರಿಸಿದರು. ಆಗ ಸಿದ್ಧಲಿಂಗಯತಿಗಳು ಶಿವಲಿಂಗಕ್ಕೆ ನೇರವಾಗಿ ' ಜಂಗಮ ಸವಿನೋಡಿದ ಪ್ರಸಾದ ನಿನಗೆ ಸಲ್ಲುವುದೋ ಇಲ್ಲವೋ '

---

೩೧. ಶ್ರೀ ಸಂಗನಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ಧೇಶ್ವರ ಮಹಾ ಪುರಾಣವು. ಪುಟ ೨೬೫

೩೨. ಶ್ರೀ ಸಂಗನಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ಧೇಶ್ವರ ಮಹಾ ಪುರಾಣವು. ಪುಟ ೪೧೭



ಮಹಾಬಳೇಶ್ವರನ ಅರ್ಚಕರ ಪ್ರಾರ್ಥನೆಯಂತೆ ಸಿದ್ಧಲಿಂಗೇಶನು ಲಿಂಗದ ಮಸ್ತಕವನ್ನೇರಿ ಬತ್ತಿಹೋದ ಗಂಗಾ ಪ್ರವಾಹವನ್ನು ಪುನಃ ಬರಮಾಡಿದುದು

ಚಿತ್ರ ೩೯



ಸಿದ್ಧೇಶನಿಂದ ಕಟಿಬದ್ಧನಾದ ಅತ್ಯಾಗ ಯೋಗಿಯ ಗರ್ವಭಂಗ.

ಚಿತ್ರ ೪೦







ತೋಂಟದ ಸಿದ್ಧಲಿಂಗ ಯತೀಶನಿಂದ ಪಿಶಾಚರೂಪದಲ್ಲಿದ್ದ ಗಂಧರ್ವ ದಂಪತಿಗಳ ಶಾಪವಿಮೋಚನೆಯಾದುದು.


ಚಿತ್ರ ೪೧



ಮೋಕಳಗಿಂವದಲ್ಲಿ ವನಪಶುಪಕ್ಷಿಯು ದೇವತೆಗಳಿಂದ ಕೂಡಿಕೊಂಡು ಸಿದ್ಧಲಿಂಗ ಯೋಗೀಂದ್ರನ ಪಾದಪೂಜೆ ಮಾಡುತ್ತಿರುವುದು.

ಚಿತ್ರ ೪೨







ಶ್ರೀಗುರು ಸಿದ್ಧಲಿಂಗೇಶ ಶಿವಯೋಗಿಗಳನ್ನು ಸಿಡಿಲು ಪ್ರದಕ್ಷಿಣೆಗೈದು ಪೂಜೆ ಮಾಡಿದುದು.

ಚಿತ್ರ ೪೫



ಸಿದ್ಧಲಿಂಗೇಶ್ವರರು ಮೂಗುತಿಯನ್ನು ಕಪ್ಪವಳ ಆಕಾಶದಲ್ಲಿ ಹಸ್ತಸ್ತಂಭನಗೊಳಿಸಿದರು.

ಚಿತ್ರ ೪೬








ಪರದನ ಹಳ್ಳಿಯ ಗೋಸಲ ಚೆನ್ನಬಸವಸ್ವಾಮಿಗಳಿಂದ ಸಿದ್ಧಲಿಂಗೇಶ್ವರನ ದೀಕ್ಷಾ ಸಮಾರಂಭ

ಚಿತ್ರ ೪೭



ತುರುಷ್ಕ ರಾಜನಿಗೆ ಸಿದ್ಧೇಶನು ಪ್ರಾಣದಾನ ಮಾಡಿದುದು

ಚಿತ್ರ ೪೮



ಉಳವಿಯಲ್ಲಿ ಜನಾರ್ದನಜೋಯಿಸನೆಂಬ ವೈಷ್ಣವ ಪಂಡಿತನನ್ನು ವಾದದಲ್ಲಿ ಸೋಲಿಸಿ ಆತನು ಬಿಟ್ಟ ಪಿಶಾಚಿಯನ್ನು ಓಡಿಸಿದುದು.

ಚಿತ್ರ ೫೦



ಶ್ರೀ ತೋಂಟದ ಸಿದ್ಧಲಿಂಗ ಯತೀಶನು ಜಂಗಮ ಮೂರ್ತಿಗಳ ಅಪೇಕ್ಷೆಯಂತೆ ಅಕಾಲದಲ್ಲಿ ನೇರಳೆಯ ವೃಕ್ಷದಲ್ಲಿ ಫಲಗಳನ್ನು [illegible] ಮಾಡಿದುದು.

ಚಿತ್ರ ೫೦







ಸಿದ್ಧೇಶ್ವರನು ಬೋಳ ಬಸವೇಶ್ವರನಿಗೆ ಪಟಸ್ಥಲಾಚಾರ್ಯ ಪಟ್ಟಗಟ್ಟಿದುದು

ಚಿತ್ರ ೫೩



[illegible] ಮಹೇಶ್ವರ ಜಂಗಮ ಪ್ರಸಾದವೇ [illegible] ಲಿಂಗೇಶನ ಸಮ್ಮುಖದಲ್ಲಿ ನೆರೆದ ಸಮುದಾಯಕ್ಕೆ [illegible]

ಚಿತ್ರ ೫೪

ಹೇಳಿಂದಾಗ ಶಿವಲಿಂಗದಿಂದ ನಾದ ಹೊರಹೊಮ್ಮಿ ಜಂಗಮನ ಶೇಷಪ್ರಸಾದವೇ ನನಗೆ ತೃಪ್ತಿ ಎಂದು ಕೇಳಿಸಿದಾಗ ಜನರೆಲ್ಲ ಬೆರಗಾದರು.

ಚೆಟ್ಟಿಯವರು ಚಿತ್ರದಲ್ಲಿ, ಸಿದ್ಧಲಿಂಗಯತಿ ಶಿವಲಿಂಗಕ್ಕೆ ಆವೇಶದಿಂದ ಪ್ರಶ್ನೆಯನ್ನು ಕೇಳುತ್ತಿರುವ ಹಾಗೆ ಅದಕ್ಕೆ ಉತ್ತರವಾಗಿ ಲಿಂಗದ ಸುತ್ತಲೂ ಬೆಳಕು ಮಿಂಚಿ ನಾದ ಹೊರಹೊಮ್ಮಿದಂತೆ ಚಿತ್ರಿಸಿದ್ದಾರೆ. ಶಿವನು ಸ್ವತಃ ಮಾತನಾಡಿದ ರೀತಿಯನ್ನು ಕಂಡು ಅಲ್ಲಿರುವ ಜನಸ್ತೋಮ ಆಶ್ಚರ್ಯದ ಜೊತೆಗೆ ತಮ್ಮ ತಪ್ಪನ್ನು ಮನ್ನಿಸುವಂತೆ ಕೈಜೋಡಿಸಿ ಬೇಡಿಕೊಳ್ಳುತ್ತಿರುವಂಥ ಭಾವನೆಯನ್ನು ಕಾಣುತ್ತೇವೆ. ಚಿತ್ರದ ಬಲಭಾಗ ಪೂರ್ತಿ ಛಾಯೆಯಿಂದ ಕೂಡಿದರೆ ಎಡಭಾಗ ಅದಕ್ಕೆ ಸಮತೋಲವಾಗಿ ಆಕೃತಿಗಳು ಬೆಳಕಿನಿಂದ ಕೂಡಿವೆಯಲ್ಲದೆ, ಭಾವನಾ ಪ್ರಧಾನವಾಗಿ ಚಿತ್ರಿಸಲ್ಪಟ್ಟಿವೆ. ಈ ಚಿತ್ರವು ಗ್ರಂಥದ ೫೦-೫೧ ನೇ ಪುಟಗಳ ಮಧ್ಯದಲ್ಲಿ ಲಭ್ಯವಿದೆ.

ಚೆಟ್ಟಿಯವರು ಸಿದ್ಧಲಿಂಗ ಪುರಾಣ ಗ್ರಂಥಕ್ಕಾಗಿ ಚಿತ್ರಿಸಿದ ಈ ಎಲ್ಲ ರೇಖಾಚಿತ್ರಗಳು ೨೮ ಸೆಂ.ಮೀ. X ೩೬ ಸೆಂ.ಮೀ. ಅಳತೆಯನ್ನು ಹೊಂದಿವೆ. ಇಂಕ್ ಮಾಧ್ಯಮದಲ್ಲಿ ಚಿತ್ರಿಸಿದ ಈ ರೇಖಾಚಿತ್ರಗಳು ಸಂಪೂರ್ಣ ಕೃತಿಗಳೇ ಆಗಿವೆ. ಈ ಚಿತ್ರಗಳಲ್ಲಿ ಇನ್ನೊಂದು ವಿಶೇಷತೆ ಏನೆಂದರೆ. ಯತಿ ಸಿದ್ಧಲಿಂಗೇಶ್ವರರ ಮುಖಲಕ್ಷಣಗಳು ಎಲ್ಲಾ ಚಿತ್ರಗಳಲ್ಲಿಯೂ ಒಂದೇ ತೆರನಾಗಿ ಚಿತ್ರಿಸಿದ್ದಾರೆ. ಅದರಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲ. ಅವರ ಅನುಭವ ಹಾಗೂ ಸಾಧನೆಯನ್ನು ಇಲ್ಲಿ ಕಾಣುತ್ತೇವೆ. ಈ ಎಲ್ಲಾ ರೇಖಾಚಿತ್ರಗಳಲ್ಲಿ ಇನ್ನೊಂದು ವಿಶೇಷತೆಯೆಂದರೆ ಎಲ್ಲಾ ಆಕೃತಿಗಳ ಸುತ್ತಲೂ ಬಿಳಿ ಭಾಗವನ್ನು ಬಿಟ್ಟು ಆಕೃತಿಯ ರೇಖೆ ಸ್ಪಷ್ಟವಾಗಿ ಕಾಣುವ ಹಾಗೆ ಚಿತ್ರಿಸಿದ್ದಾರೆ. ಆ ಆಕೃತಿಗಳ ಹೊರಮೈಯನ್ನು ಛಾಯಾಂಕಣದಲ್ಲಿ ನೇರವಾಗಿ ಸೇರಿಸಿಕೊಂಡಿಲ್ಲವಾದರೂ ಚಿತ್ರದ ಸಂಯೋಜನೆಯಲ್ಲಿ ಆಕೃತಿಗಳು ಬೇರೆ ಕಾಣದೇ ಒಟ್ಟಾರೆ ಅನುಭವವನ್ನು ನೀಡುತ್ತವೆ.

ಚಿತ್ರ ೫೫ : ಹುಬ್ಬಳ್ಳಿ ಮೂರುಸಾವಿರಮಠದ ಕರ್ತೃ ಗುರುಸಿದ್ಧೇಶ್ವರರು ಹಾಗೂ ಅಲ್ಲಮಪ್ರಭುಗಳ ಮಿಲನದ ಚಿತ್ರ. ಹುಬ್ಬಳ್ಳಿಯ ಸಿದ್ಧೇಶ್ವರರು ಅಲ್ಲಮಪ್ರಭುಗಳ ಸರಿಸಮಾನರು. ಅವರನ್ನು ಕಾಣುವುದಕ್ಕಾಗಿಯೇ ಅಲ್ಲಮಪ್ರಭುಗಳು ಕಲ್ಯಾಣದಿಂದ ಬಂದಿದ್ದರು. ಜನರು ಸಿದ್ಧೇಶ್ವರರನ್ನು ಹುಚ್ಚರೆಂದು ಭಾವಿಸಿದ್ದರು. ಆ ಪ್ರಸಂಗದ ಚಿತ್ರ ಇದಾಗಿದೆ. ಜನರನ್ನು ಮುಂದಿಟ್ಟುಕೊಂಡು ಅಲ್ಲಮಪ್ರಭುಗಳು ಅಲ್ಲಿಗೆ ಬಂದಾಗ ಅಲ್ಲಿರುವ ಆಲದ ಮರದ ಕೆಳಗೆ ಆಕಳು ಮಲಗಿತ್ತು. ಅದರ ಪಕ್ಕದಲ್ಲೇ ಹೆಬ್ಬುಲಿಯೊಂದು ಶಾಂತವಾಗಿ ಕುಳಿತಿತ್ತು. ಇದರಿಂದ ಚೆಟ್ಟಿಯವರು ಇಲ್ಲಿ ಯೋಗಿಗಳು ತಮ್ಮ ಯೋಗಶಕ್ತಿಯಿಂದ ತಮ್ಮ ಪರಿಸರದಲ್ಲಿ ಕೇವಲ ಪ್ರೀತಿ - ಶಾಂತಿಗಳನ್ನೆ ತುಂಬಿರುತ್ತಾರಲ್ಲದೇ. ಅಂಥ ಪರಿಸರದಲ್ಲಿರುವ ಕ್ರೂರ ಪಶುಪಕ್ಷಿಗಳು ಹಿಂಸಾಗುಣವನ್ನು ತ್ಯಜಿಸಿ ಸ್ನೇಹಜೀವಿಗಳಾಗಿರುತ್ತವೆ ಎಂಬುದನ್ನು ಚಿತ್ರಿಸಿದ್ದಾರೆ. ನೋಡುಗರಿಗೆ ಬೆರಗನ್ನುಂಟುಮಾಡಿದ್ದಾರೆ.

ಅಲ್ಲಮಪ್ರಭುಗಳನ್ನು ಕಂಡ ಸಿದ್ಧೇಶ್ವರರು ಗವಿಯಲ್ಲಿ ತಪಸ್ಸಿನಲ್ಲಿದ್ದವರು ಎದ್ದು ಧಾವಿಸಿ ಬಂದು ಅಲ್ಲಮಪ್ರಭುಗಳನ್ನು ಆಲಂಗಿಸಿಕೊಂಡರು. ಬೆಳಕು ಬೆಳಕನ್ನು ಕೂಡಿದಂಥ ಸನ್ನಿವೇಶವನ್ನುಂಟು ಮಾಡಿದಂಥ



ಹುಬ್ಬಳ್ಳಿ ಮೂರುಸಾವಿರಮಠದ ಕರ್ತೃ ಗುರುಸಿದ್ಧೇಶ್ವರರು ಹಾಗೂ ಅಲ್ಲಮಪ್ರಭುಗಳ ಮಿಲನದ ಚಿತ್ರ.

ಚಿತ್ರ ೫೫

ಚೆಟ್ಟಿಯವರ ಕಲ್ಪನೆ ಅದ್ಭುತ. ಆ ಪರಿಸರದ ತುಂಬೆಲ್ಲ ಸ್ನೇಹದ ಸಂಕೇತವೆಂಬಂತೆ. ನವಿಲು, ಮೊಲಗಳು, ಹುಲಿ, ಆಕಳು ಸ್ನೇಹದಿಂದ ಇರುವಂತೆ ಚಿತ್ರಿಸಿದ್ದಾರೆ. ಆಲದ ಮರದ ಪಕ್ಕದಲ್ಲಿ ಕಲ್ಲಿನ ಗವಿಯಿದೆ. ಆ ಪರಿಸರವನ್ನು ಕಂಡು ಹುಲಿಗೆ ಗಾಬರಿಯಾಗಿ ದೂರ ಓಡಿಹೋಗುವಂತೆ ಹಿನ್ನೆಲೆಯನ್ನು ಚಿತ್ರಿಸಿದ್ದಾರೆ. ಇಬ್ಬರೂ ಮಹಾಮಹಿಮರ ಕಣ್ಣುಗಳಲ್ಲಿ ಸ್ನೇಹ, ಪ್ರೀತಿ, ಸಾತ್ವಿಕತೆಯ ಭಾವ ತುಂಬಿದೆ. ಈ ಚಿತ್ರದ ಅಳತೆ ೨೮ ಸೆಂ. ಮೀ. X ೩೬ ಸೆಂ. ಮೀ. ಚೆಟ್ಟಿಯವರ ಸಂಗ್ರಹದಲ್ಲಿದೆ. ಇದರಲ್ಲಿ ಚಿತ್ರಿಸಿದ ಕಾಲವನ್ನು ಸೂಚಿಸಿಲ್ಲ. ಇಲ್ಲಿ ಮೂಲ ವಿಷಯ ಅಲ್ಲಮಪ್ರಭುಗಳು ಹಾಗೂ ಸಿದ್ದೇಶ್ವರರ ಭೇಟಿ. ಚೆಟ್ಟಿಯವರು ಆ ವಿಷಯಕ್ಕೆ ಕೊಟ್ಟಷ್ಟು ಪ್ರಾಶಸ್ತ್ಯವನ್ನು ಅಲ್ಲಿಯ ಪರಿಸರಕ್ಕೂ ನೀಡಿರುವುದು ಆ ಚಿತ್ರದ ವಿಶೇಷತೆಯಾಗಿದೆ.

ಸರ್ವಸಮಾನತೆಯನ್ನಾಧರಿಸಿ, ಜಾತಿಭೇದಗಳನ್ನು ಅಳಿಸಿ ದಲಿತೋದ್ಧಾರಕ್ಕೆ ಶ್ರಮಿಸಿ, ಕಾಯಕದ ಮಹತಿಯನ್ನು ತೋರಿಸಿ, ಸಕಲ ಜೀವಾತ್ಮರಿಗೆ ಲೇಸನೆ ಬಯಸಿದ ೧೨ ನೇ ಶತಮಾನದ ಶಿವಶರಣರ ಜೀವನವನ್ನು ಆಧರಿಸಿದ ಗ್ರಂಥಗಳ ಮೇಲೆ ಹಾಗೂ ಒಳಪುಟಗಳಲ್ಲಿ ಆ ಶಿವಶರಣರ ಕಾಯಕ ಜೀವನ ಅವರು ನಡೆದು ಬಂದ ದಾರಿಯನ್ನು ಅರ್ಥೈಸಿಕೊಂಡು ಆ ಶಿವಶರಣರನ್ನು ರೇಖೆ, ಬಣ್ಣಗಳ ಮುಖಾಂತರ ಚೆಟ್ಟಿಯವರು ಇಲ್ಲಿ ಜೀವಂತಗೊಳಿಸಿದ್ದಾರೆ. ಆ ಚಿತ್ರಗಳನ್ನು ನೋಡಿದಾಕ್ಷಣ ಇವರು ಇಂತಹ ಶರಣರು ಎಂದು ಹೇಳಬಹುದು. ಅವರ ಆ ಆಂತರಿಕ ಆಧ್ಯಾತ್ಮಿಕ ಭಾವನೆಗಳನ್ನು ಅವರ ಮುಖಭಾವದಲ್ಲಿ ಮೂಡಿಸಿದ್ದಾರೆ. ಅಲ್ಲದೆ ಅವರ ಕಾಯಕ ನಿಷ್ಠೆಯನ್ನು ಆ ಚಿತ್ರಗಳು ವೈಭವೀಕರಿಸಿವೆ. ೧೨ ನೇ ಶತಮಾನದ ಶರಣರು ತಮ್ಮ ಕಾಯಕದಲ್ಲೆ ಶಿವನನ್ನು ಕಂಡವರು ತಮ್ಮ ಕಾಯಕದಿಂದಲೇ ತಮ್ಮನ್ನು ಗುರುತಿಸಿಕೊಂಡವರು. ಕಾಯಕ ಯಾವುದೇ ಆದರೂ ಅದರಿಂದ ಅವರಿಗೆ ದೊರೆತದ್ದು ಅನುಭಾವ ತೃಪ್ತಿ, ಶಿವನ ಸಾನಿಧ್ಯ. ಅಂತೆಯೇ ಬಸವಣ್ಣನವರು ' ಕಾಯಕವೇ ಕೈಲಾಸ ' ಎಂದು ಕಾಯಕದ ಮಹಿಮೆಯನ್ನು ಸಾರಿದ್ದಾರೆ. ಈ ಕಾಯಕದ ಮಹಿಮೆಯನ್ನು ಸಾರುವ ಶಿವಶರಣರ ೬೪ ಜನಪ್ರಿಯ ಮಾಲೆಯ ಕೃತಿಗಳನ್ನು ತರುವ ಯೋಜನೆಯೊಂದನ್ನು ಹುಬ್ಬಳ್ಳಿಯ ಮೂರುಸಾವಿರಮಠ ಹಾಕಿಕೊಂಡಿತು. ಅದಕ್ಕಾಗಿ ಈ ಶರಣರ ಚಿತ್ರಗಳನ್ನು ಚೆಟ್ಟಿಯವರಿಂದ ಬರೆಸಿದರು. ಅದರಲ್ಲಿ ೪೦ ಗ್ರಂಥಗಳು ಮಾತ್ರ ಪ್ರಕಟಿಸಲು ತೆಗೆದುಕೊಂಡಿದ್ದು ಅದರಲ್ಲಿ ೩೫ ಗ್ರಂಥಗಳನ್ನು ಮಾತ್ರ ಪ್ರಕಟಿಸಿದ್ದಾರೆ. ಆ ೩೫ ಗ್ರಂಥಗಳ ಮುಖಪುಟದ ರಚನೆ ಒಳಪುಟದ ರೇಖಾಚಿತ್ರಗಳನ್ನು ಶ್ರೀ ಚೆಟ್ಟಿಯವರು ರಚಿಸಿಕೊಟ್ಟಿದ್ದಾರೆ. ಇಲ್ಲಿ ಮೊದಲಿಗೆ ರೇಖಾಚಿತ್ರಗಳ ಬಗ್ಗೆ ಹೇಳಲಾಗಿದೆ. ವರ್ಣಚಿತ್ರಗಳ ಬಗ್ಗೆ ಮುಂದಿನ ಭಾಗವಾದ ವರ್ಣಚಿತ್ರಗಳ ಭಾಗದಲ್ಲಿ ವಿವರಿಸಲಾಗಿದೆ.

ಈ ಎಲ್ಲಾ ಚಿತ್ರಗಳನ್ನು ೧೯೮೨ ರಲ್ಲಿ ರಚಿಸಲಾಗಿದೆ. ಈ ಚಿತ್ರಗಳ ಅಳತೆ ೧೫ ಸೆಂ. ಮೀ. X ೨೦ ಸೆಂ. ಮೀ.

ಚಿತ್ರ ೫೬ : " ಚೆನ್ನಬಸವಣ್ಣ ಅಭ್ಯಾಸ ಮಾಡುತ್ತಿರುವ ಚಿತ್ರ " [೩೩]

ಬಸವಣ್ಣನ ಅಕ್ಕನ ಮಗನಾಗಿ ಜನಿಸಿದ ಚೆನ್ನಬಸವಣ್ಣ. ಅಗಾಧವಾದ ವ್ಯಕ್ತಿತ್ವವನ್ನು ಹೊಂದಿದಂಥವನು. ಈತನ ವ್ಯಕ್ತಿತ್ವವನ್ನು ಕಾರ್ಯನಿರ್ವಹಣೆಯಲ್ಲಿ, ಜ್ಞಾನನಿಷ್ಠೆಯಲ್ಲಿ, ಗುರು ಲಿಂಗ ಜಂಗಮ ದಾಸೋಹದಲ್ಲಿ ನೋಡಬಹುದು.

---

೩೩. ಯೋಗೀಶ ಯಡ್ರಾವಿ : ಶ್ರೀ ಚೆನ್ನಬಸವಣ್ಣನವರು : ಪುಟ ೨೪

ಅಂಥ ಮೇಧಾವಿ. ಕಲ್ಯಾಣದ ಕ್ರಾಂತಿಯ ಸಂದರ್ಭದಲ್ಲಿ ಎಲ್ಲ ಶರಣರನ್ನು ಉಳವಿಗೆ ಕರೆದುಕೊಂಡು ಹೋಗಿ ರಕ್ಷಣೆ ನೀಡಿದನು. ಅಲ್ಲಮಪ್ರಭುವಿನ ನಂತರ ಶೂನ್ಯಪೀಠವನ್ನು ಸಣ್ಣ ವಯಸ್ಸಿನಲ್ಲಿಯೇ ಅಲಂಕರಿಸಿದ ಶರಣ.

ಇಂತಹ ಶರಣನ ಈ ಎಲ್ಲಾ ಗುಣಗಳನ್ನು ಒಂದೇ ಬಾರಿಗೆ ಚೆಟ್ಟಿಯವರು ತಮ್ಮ ರೇಖಾಚಿತ್ರದಲ್ಲಿ ಸೆರೆಹಿಡಿದಿದ್ದಾರೆ. ಷಟ್‌ಸ್ಥಲಗಳಿಗೆ ಜೀವ ತುಂಬಿ ಭಕ್ತ, ಮಹೇಶ, ಪ್ರಾಣ, ಶರಣ ಹಾಗೂ ಐಕ್ಯ ಸ್ಥಲಗಳ ತಾತ್ವಿಕ ವಿಸ್ತಾರವನ್ನು ಬೆಳಗಿಸುವವನಾದ್ದರಿಂದ ಈ ಚಿತ್ರದಲ್ಲಿ ಆತನು ಆಳವಾದ ಅಧ್ಯಯನದಲ್ಲಿ ಮಗ್ನನಾಗಿರುವಂತೆ ಚಿತ್ರಿಸಿದ್ದಾರೆ. ಸುತ್ತೆಲ್ಲಾ ತಾಡೋಲೆಗಳ ಕಟ್ಟುಗಳನ್ನು ಇಟ್ಟುಕೊಂಡು ಅಧ್ಯಯನ ಮಾಡುತ್ತಿರುವ ಚೆನ್ನಬಸವಣ್ಣನ ಮುಖದಲ್ಲಿ ಯೌವನ ಹಾಗೂ ಜ್ಞಾನದ ತೇಜಸ್ಸು ಎರಡೂ ಕಳೆಯನ್ನು ತಂದಿವೆ. ಔಚಿತ್ಯಪೂರ್ಣವಾದ ಛಾಯಾಂಕಣವಿದೆ. ಇಲ್ಲಿ ಹೆಚ್ಚಿಗೆ ರೇಖೆಗಳಿಗೆ ಮಹತ್ವವನ್ನು ನೀಡಿದ್ದಾರೆ. ಈ ಚಿತ್ರವನ್ನು ಶ್ರೀ ಚೆನ್ನಬಸವಣ್ಣನವರು ಎಂಬ ಗ್ರಂಥದ ೨೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೫೭ : " ನಿತ್ಯ ಸತ್ಯ ಕಾಯಕ ನಿರತ ಡೋಹರ ಕಕ್ಕಯ್ಯ " [೩೪] ನ ರೇಖಾಚಿತ್ರ. ಗೋತ್ರವಿಲ್ಲದವನೆಂದು ತಿರಸ್ಕರಿಸಲ್ಪಟ್ಟ ಕೆಳ ಜಾತಿಯ (ಚಾಂಡಾಲ) ಡೋಹರ ಜಾತಿಯವನು. ಈತನ ಕಾಯಕ ಚರ್ಮ ಹದ ಮಾಡುವುದು. ಬಸವಣ್ಣನ ಯುಗವಾದ್ದರಿಂದ ಕೆಲಸ ಯಾವುದೇ ಇರಲಿ. ಮೇಲು ಕೀಳುಗಳ ಕಲ್ಪನೆಗೆ ಅವಕಾಶವಿಲ್ಲ. ಆದ್ದರಿಂತ ಈತನನ್ನು ಬಸವಾದಿ ಶಿವಶರಣರ ಗೋತ್ರಪುರುಷನಾದವ ಎಂದು ಹೇಳುವರು. ಮಾಳವ ದೇಶದಿಂದ ಕಲ್ಯಾಣಕ್ಕೆ ಬಂದು ಕನ್ನಡಿಗನಿಗಿಂತಲೂ ಮಿಗಿಲಾಗಿ ಅರ್ಥೈಸಿಕೊಂಡು ಕಲಿತು ಶುದ್ಧ ಕನ್ನಡದಲ್ಲಿ ವಚನಗಳನ್ನು ರಚಿಸಿ ಹಾಡಿದ್ದಾನೆ.

ಈ ರೇಖಾಚಿತ್ರದಲ್ಲಿ ಚೆಟ್ಟಿಯವರು ಆತನ ಪರಿಶುದ್ಧ ಕಾಯಕ. ಮುಗ್ಧ ಭಕ್ತಿ ಎರಡನ್ನೂ ಚಿತ್ರಿಸಿದ್ದಾರೆ. ಶಿವಭಕ್ತ ಎನ್ನುವುದಕ್ಕೆ ಆತ ಧರಿಸಿದ ವಿಭೂತಿ. ರುದ್ರಾಕ್ಷಿಗಳೇ ಸಾಕ್ಷಿ. ಬಡತನದ ಪರಿಸರದ ಮಧ್ಯೆಯೂ ಭಕ್ತಿಯ ಶ್ರೀಮಂತಿಕೆಯನ್ನು ಹೊಂದಿದ ತನ್ನದೇ ಆದ ನಿತ್ಯ ಸತ್ಯ ಕಾಯಕದಲ್ಲಿ ನಿರತನಾದ ಕಕ್ಕಯ್ಯ ಚರ್ಮ ಹದ ಮಾಡುವುದರಲ್ಲಿ ತೊಡಗಿದ್ದಾನೆ ಎನ್ನುವುದನ್ನು ನೈಜವಾಗಿ ಚಿತ್ರಿಸಿದ್ದಾರೆ. ಕಾರ್ಯದಲ್ಲಿಯ ಮಗ್ನತೆಯೇ ಚಿತ್ರ ರಸಭಾವವಾಗಿದೆ. ಈ ಚಿತ್ರ ಡೋಹರ ಕಕ್ಕಯ್ಯ ಎಂಬ ಗ್ರಂಥದ ೨೪ ನೇ ಪುಟದಲ್ಲಿದೆ.

ಚಿತ್ರ ೫೮ : " ಮೋಳಿಗೆಯ ಮಹಾದೇವಿಯಮ್ಮನು ಶಿವಗಣಂಗಳು ಆಗಮಿಸಲಿ ಎಂದು ರಂಗವಲ್ಲಿ ಹಾಕುತ್ತಿರುವ ದೃಶ್ಯ " [೩೫] ಈಕೆ ಶಿವಶರಣ ಮೋಳಿಗೆಯ ಮಾರಯ್ಯನ ಪತ್ನಿ. ಶಿವಭಕ್ತರ ಮನೆಗೆ ಕಟ್ಟಿಗೆ ಹೊರೆಯನ್ನು ಹೊತ್ತು ಹಾಕುವುದೇ ತನ್ನ ಸತ್ಯಶುದ್ಧ ಕಾಯಕವೆಂದು ನಂಬಿದಂಥವನ ಪತ್ನಿ. ಇವರೀರ್ವರು ರಾಜದಂಪತಿಗಳು. ಕಾಶ್ಮೀರದಿಂದ ಕಲ್ಯಾಣಕ್ಕೆ ಬಂದು ಮೋಳಿಗೆಯ (ಕಟ್ಟಿಗೆಯ) ಕಾಯಕ ಮಾಡಿ ಮೋಳಿಗೆಯ ಮಾರಯ್ಯ ಮಹಾದೇವಿಯಾದರು. ನಿಷ್ಕಾಮ ಭಕ್ತಿ. ನಿರಹಂಕಾರದ ವೃತ್ತಿ. ಪರಮೋಚ್ಚ ಜೀವನದ ಮಾರ್ಗದರ್ಶಿಗಳು.

---

೩೪. ಟಿ. ನೀಲಾಂಬಿಕೆ : ಡೋಹರ ಕಕ್ಕಯ್ಯ : ಪುಟ ೨೪

೩೫. ನಿಜಲಿಂಗಮ್ಮ ಕೊಪ್ಪಳ : ಮೋಳಿಗೆಯ ಮಹಾದೇವಿ : ಪುಟ ೨೪

ಈ ರೇಖಾಚಿತ್ರದಲ್ಲಿ ಮೋಳಿಗೆಯ ಮಾರಯ್ಯ ಕಟ್ಟಿಗೆಯನ್ನು ಕಡಿದು ಹೊತ್ತುಕೊಂಡು ಬರುತ್ತಿದ್ದಾನೆ. ನಿಷ್ಕಾಮ ಭಕ್ತಳಾದ ಮಹಾದೇವಿ ಅಷ್ಟೇ ಹಸನ್ಮುಖದಿಂದ ಶಿವಗಣಂಗಳ ಬರುವಿಗಾಗಿ ಸಂತೋಷದಿಂದ ರಂಗವಲ್ಲಿ ಹಾಕುತ್ತಿದ್ದಾಳೆ. ದಂಪತಿಗಳ ಮುಖದಲ್ಲಿ ತೃಪ್ತಿಯ ಭಾವನೆ ಹೊರಸೂಸುತ್ತಿರುವಂತೆ ಚಿತ್ರಿಸಿದ್ದಾರೆ. ರಾಜಾಡಂಬರ ತೊರೆದ ಇವರಿಗೆ ಶಿವ ರುದ್ರಾಕ್ಷಿಗಳೆ ಒಡವೆಯಾದವೆಂಬಂತೆ ಶರಣ ತತ್ವ ಬೋಧನೆಯನ್ನು ಮಾಡುವಂತೆ ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಗುಡಿಸಲು. ಮರ. ಆಕಳು ಎಲ್ಲಾ ನಿರಾಡಂಬರದ ಸಂಕೇತವಾಗಿವೆ. ಈ ಚಿತ್ರವನ್ನು ಮೋಳಿಗೆಯ ಮಹಾದೇವಿ ಎಂಬ ಗ್ರಂಥದ ೨೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೫೯ : ಹಾವಿನಾಳಪುರದ ಕಲ್ಲಯ್ಯ ಮಹಾಶಿವಭಕ್ತ. ತಂದೆ ಶಿವದೇವಾಲಯಕ್ಕೆ ಹೋಗುವುದನ್ನು ನಿಷೇಧಿಸಿದಾಗ. ' ಈ ಧರೆಗೆ ನನ್ನನ್ನು ತಂದ ತಂದೆ ನೀನು. ಅದಕ್ಕೆ ನಿನಗರ್ಪಿತ ಎಂದು ಕಠಾರಿಯಿಂದ ತನ್ನ ಹೊಟ್ಟೆಗೆ ತಿವಿದುಕೊಂಡನು. ಸಾಯುವ ಸ್ಥಿತಿಯಲ್ಲಿದ್ದ ಕಲ್ಲಯ್ಯನನ್ನು ಶಿವನು ಎಚ್ಚರಿಸಿ ಕರ್ಮಠರಾದ ವೇದ ಜಡರನ್ನು ನೀನು ಗೆಲ್ಲಬೇಕಾಗಿದೆ ಎಂದನು.

" ಈ ರೇಖಾಚಿತ್ರದಲ್ಲಿ ಕಲ್ಲಯ್ಯನ ಸಾಕುನಾಯಿ ಗಂಭೀರವಾದ ಯಜುರ್ವೇದವನ್ನು ಉಚ್ಚರಿಸುತ್ತಿರುವ "[೩೬] ದೃಶ್ಯ. ಕಲ್ಲಯ್ಯನ ಮಗಳು ನೀರು ತರುವ ಸಮಯದಲ್ಲಿ ಒಬ್ಬ ಬ್ರಾಹ್ಮಣ ಆಕೆಯನ್ನು ಅಕಸ್ಮಾತ್ ಮುಟ್ಟಿದ್ದರಿಂದ. ಮೈಲಿಗೆಯಾಯಿತೆಂದು ಆ ಕೊಡವನ್ನು ಅಲ್ಲಿಯೇ ಚೆಲ್ಲಿ ಬಿಟ್ಟಳು. ಅದನ್ನು ಕಂಡ ಸೋಮಯಾಜಿ ಸಿಟ್ಟಿಗೆದ್ದು ನಾಲ್ವರು ಬ್ರಾಹ್ಮಣರನ್ನು ಕರೆಸಿ ಕಲ್ಲಯ್ಯನಿಗೆ ಈ ವಿಷಯವಾಗಿ ಕೇಳಲಾಗಿ ತನ್ನ ಮಗಳು ಮಾಡಿದ್ದು ಸರಿ ನಮ್ಮ ಮನೆಯ ನಾಯಿ ಸಹಿತ ಕರ್ಮಠರನ್ನು ಮುಟ್ಟಲಾರದು ಎಂದಾಗ. ಅದಕ್ಕಿಂತ ಕಡೆಯಾದುವೇ ವೇದಗಳನ್ನು ತಡೆಯಿಲ್ಲದೆ ಓದುವವರು ನಮ್ಮನ್ನು ಬಿಟ್ಟರೆ ಇನ್ನಾರು ಇಲ್ಲ ಎಂದು ನಿನ್ನ ನಾಯಿಯಿಂದ ವೇದವನ್ನು ಓದಿಸಬಲ್ಲೆಯಾ ಎಂದು ಕೇಳಿದಾಗ. ತನ್ನ ನಾಯಿಯನ್ನು ಕರೆದು ಯಜುರ್ವೇದವನ್ನು ಓದಲು ಹೇಳಿದಾಗ. ತತ್‌ಕ್ಷಣ ನಾಯಿ ಗಂಭೀರವಾಗಿ ನುಡಿಯಲು ಆರಂಭಿಸಿದ ದೃಶ್ಯ ಇಲ್ಲಿದೆ. ಅಲ್ಲಿ ಕುಳಿತಿರುವ ವೇದಾಂತ ಪಂಡಿತರೆಲ್ಲ ಗಾಭರಿಯಾಗಿ ಬಾಯಿ ತೆರೆದು ದೃಶ್ಯವನ್ನು ವೀಕ್ಷಿಸುತ್ತಿದ್ದಾರೆ. ಕಲ್ಲಯ್ಯನ ಹೆಂಡತಿ. ಮಗಳು ಒಳಗಿನಿಂದಲೇ ಇಣುಕಿ ನೋಡುತ್ತಿದ್ದಾರೆ. ನಾಯಿಯ ಬಾಯಿಯಿಂದ ಧ್ವನಿ ಬರುತ್ತಿರುವಂತೆಯೇ ಚಿತ್ರಿಸಿದ್ದಾರೆ. ಇದನ್ನು ಹಾವಿನಾಳ ಕಲ್ಲಯ್ಯ ಎಂಬ ಗ್ರಂಥದ ೨೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೬೦ : " ಉರಿಲಿಂಗದೇವ ಶರಣನು ತನ್ನ ಶಿಷ್ಯರಿಂದ ಶಕ್ತಿಸಾಮರ್ಥ್ಯ ಪ್ರಕಟಿಸಿದ "[೩೭] ಚಿತ್ರ. ಇಲ್ಲಿ ಕಳ್ಳನಾದ ಪೆದ್ದನು ಮನಪರಿವರ್ತನೆ ಹೊಂದಿ ಲಿಂಗದೇವರಿಗೆ ಬೆಂಬಿಡದೆ ಕಾಡಿ ಲಿಂಗದೀಕ್ಷೆ ಕೇಳಿದಾಗ ಅವರು ಒಂದು ಕಲ್ಲನ್ನು ನೀಡಿದರು. ಆ ಕಲ್ಲನ್ನೇ ಶಿವನೆಂದು ಭಕ್ತಿಯಿಂದ ಪೂಜಿಸಲು ಶಿವರೂಪವಾಯಿತು. ಈತನ ಮಹಿಮೆ ಪ್ರದರ್ಶಿಸುವ ಕಾಲವೂ ಒದಗಿ ಬಂದಿತು. ಅದು ಕೆರೆಯಲ್ಲಿಯ ಕಲ್ಲನ್ನು ಕಿತ್ತುವುದು. ನಾಡ ದೊರೆಯ

೩೬. ಸಿಂಪಿ ಲಿಂಗಣ್ಣ : ಹಾವಿನಹಾಳ ಕಲ್ಲಯ್ಯ : ಪುಟ ೨೪

೩೭. ಎಂ. ಎಸ್. ಇಂಚಲ : ಉರಿಲಿಂಗದೇವ : ಪುಟ ೨೪

ಪ್ರಾರ್ಥನೆಯನ್ನು ಮನ್ನಿಸಿ ಉರಿಲಿಂಗದೇವ ಕರುಣಿಸಿದ ತನ್ನ ಶಿಷ್ಯನಿಗೆ ಆಜ್ಞೆ ನೀಡಿದಾಗ ಗುರುವನ್ನು ಲಿಂಗವನ್ನು ಆ ಪೆದ್ದ ಮನದಲ್ಲಿ ನೆನೆಯಲು ಆತನ ಕೊರಳಲ್ಲಿ ಲಿಂಗ ಗಗನಕ್ಕೆ ಹಾರಿ ಬಂಡೆಗಲ್ಲುಗಳನ್ನು ಅಪ್ಪಳಿಸಿತು. ತಕ್ಷಣ ಬಂಡೆಯೊಡೆದು ಪುಡಿಯಾಯಿತು. ನೀರು ಚಿಲ್ಲನೇ ಚಿಮ್ಮಿತು. ಗುರು ಶಿಷ್ಯರಿಬ್ಬರಿಗೂ ರಾಜಮರ್ಯಾದೆ ದೊರೆಯಿತು.

ಇಲ್ಲಿ ಚಿಟ್ಟಿಯವರು ಎರಡೂ ಪ್ರಸಂಗಗಳನ್ನು ಒಂದೇ ಚಿತ್ರದಲ್ಲಿ ತೋರಿಸಿದ್ದಾರೆ. ಮೊದಲದರಲ್ಲಿ ರಾಜನ ಪ್ರಾರ್ಥನೆ. ಎರಡನೆಯದರಲ್ಲಿ ಶಿಷ್ಯನ ಮುಗ್ಧ ಭಕ್ತಿಯ ಪ್ರದರ್ಶನ. ಅದಕ್ಕೆ ತಕ್ಕ ಹಾಗೆ ಓನ್ನೆಲೆ ನಿಸರ್ಗ ಬಂಡೆಯೊಡೆದು ಸಿಡಿದಂಥ ದೃಶ್ಯ. ನೀರು ಹರಿದು ಬರುವಂತೆ ಎಲ್ಲಾ ವಿವರಗಳು ಚಿತ್ರ ನೋಡಿದಾಕ್ಷಣ ಮನವರಿಕೆಯಾಗುವಂತೆ ಚಿತ್ರಿಸಿದ್ದಾರೆ. ಈ ಚಿತ್ರ ಉರಿಲಿಂಗದೇವ ಗ್ರಂಥದ ೨೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೬೧ : ಮಲುಹಣ ತನ್ನ ಪ್ರೇಯಸಿಯಾದ ಮಲುಹಣೆಯಲ್ಲಿ ಮೋಹದಿಂದಿರುವಾಗ. ಅವಳ ತಾಯಿ ಅವನಿಗೆ ಮಲುಹಣೆಯಿಂದ ದೂರವಿರಬೇಕೆಂದು ಹೇಳಿದಾಗ ಅವಳನ್ನು ಮರೆಯಲಾಗದೆ ಅವಳ ಧ್ಯಾನದಲ್ಲಿ ಮೈಮರೆತು ಕುಳಿತಾಗ ಅವನ ಮೇಲೆ ಮುಸುರೆ ನೀರು ಚೆಲ್ಲಿದರೂ ಅರಿವು ಇಲ್ಲದಂತೆ ಏಕಾಗ್ರತೆಯಿಂದ ತನ್ನನ್ನೆ ನೆನೆಯುತ್ತಿರುವ ಆತನಿಗೆ ಮಲುಹಣೆ ಬಂದು " ನನ್ನ ಮೇಲೆ ನಿನಗೆ ಅಷ್ಟೊಂದು ಪ್ರೀತಿಯಿದ್ದರೆ ಆ ಪ್ರೀತಿಯನ್ನೇ ನೀನು ನಿನ್ನ ಆರಾಧ್ಯದೈವವಾದ ವಿಜಯೇಶ್ವರನಿಗೆ ಅರ್ಪಿಸು " [೩೮] ಎಂದು ಹೇಳುವ ದೃಶ್ಯ. ಅದರಂತೆ ಜ್ಞಾನೋದಯವಾಗಿ ಆ ವಿಜಯೇಶ್ವರನಲ್ಲೆ ಮಲುಹಣೆಯನ್ನು ಕಂಡು ತನ್ನನ್ನು ಅರ್ಪಿಸಿಕೊಳ್ಳುವನು.

ಈ ಚಿತ್ರದಲ್ಲಿ ಚಿಟ್ಟಿಯವರು ಮಲುಹಣೆಯ ಧ್ಯಾನದಲ್ಲಿ ಕುಳಿತ ಮಲುಹಣನ ಮೇಲೆ ಮುಸುರೆಯೆಲ್ಲ ಚೆಲ್ಲಿದರೂ ಆತನ ಮುಖ ಧ್ಯಾನದಿಂದ ಕೂಡಿದಂತೆ ಅಷ್ಟೇ ಅಲ್ಲದೆ ಆತನು ಮನಸೋತ ಮಲುಹಣೆಯನ್ನು ಅಷ್ಟೇ ಸೌಂದರ್ಯವತಿಯಾಗಿ ಚಿತ್ರಿಸಿದ್ದಾರೆ. ಇದನ್ನು ಸಹಿಸದ ತಾಯಿಯ ಮುಖದಲ್ಲಿ ಕೋಪ. ಹೀಗೆ ಆ ಚಿತ್ರದಲ್ಲಿ ಬರುವ ಎಲ್ಲ ಪಾತ್ರಗಳ ಅತಂತ್ರಭಾವನೆ ಅವರ ಮುಖದಲ್ಲಿ ವ್ಯಕ್ತವಾಗುವಂತೆ ರಚಿಸಿ ಅಲ್ಲಿ ಕಾವ್ಯದ ರಸಾನಂದವನ್ನುಂಟು ಮಾಡುತ್ತಾರೆ. ರೇಖಾಚಿತ್ರವೇ ಆಗಿದ್ದರೂ ಇವು ಸಂಪೂರ್ಣ ಕಲಾಕೃತಿಗಳಂತಿವೆ. ಚಿತ್ರದಲ್ಲಿ ಚಲನೆ. ಲಯಬದ್ಧತೆ. ಸಂಯೋಜನೆ ಎಲ್ಲವೂ ತೂಕಬದ್ಧವಾಗಿ ರಚಿಸಲ್ಪಟ್ಟಿದೆ. ಈ ಚಿತ್ರವನ್ನು ಮಲುಹಣದೇವ ಎಂಬ ಗ್ರಂಥದ ೨೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೬೨ : ಮುಕ್ತಾಯಕ್ಕನಿಗೆ ಅಲ್ಲಮಪ್ರಭುವಿನ ಉಪದೇಶ ಚಿತ್ರ. ಅಜಗಣ್ಣನನ್ನೇ ಗುರುವಾಗಿ ಸ್ವೀಕರಿಸಿದ ಮುಕ್ತಾಯಕ್ಕ ಆತನ ಅಗಲಿಕೆಯಿಂದ ದುಃಖದಲ್ಲಿ ಮುಳುಗಿರುವಾಗ ಅಲ್ಲಮಪ್ರಭು ಅಲ್ಲಿಗೆ ಬಂದು ಆಕೆಗೆ ಸಮಾಧಾನ ಹೇಳಿ ಶಿವನನ್ನು ಒಲಿಸಿಕೊಳ್ಳುವ ರೀತಿ ಭಕ್ತಿ ಎಂದರೆ " ನೂಲನ್ನು ಒಡಿದು ಬಿಟ್ಟ ಏರಿದಂತೆ " [೩೯] ಎಂಬ ಸೂಕ್ಷ್ಮತೆಯ ಅರಿವನ್ನುಂಟು ಮಾಡುವ ದೃಶ್ಯವಿದೆ.

---

೩೮. ವ್ಹಿ. ಶಿವಾನಂದ : ಮಲುಹಣದೇವ : ಪುಟ ೨೪

೩೯. ಎಚ್. ಎಸ್. ಮುಕ್ತಾಯಕ್ಕ : ಮುಕ್ತಾಯಕ್ಕ : ಪುಟ ೨೪

ಈ ಚಿತ್ರದಲ್ಲಿ ಶೂನ್ಯ ದೃಷ್ಟಿಯಿಂದ ಮುಂದೇನು ಎಂಬ ಚಿಂತೆಯ ಮುಖಭಾವ ಹೊತ್ತ ಮುಕ್ತಾಯಕ್ಕ ಬಾಗಿಲಿಗೆ ಒರಗಿ ಕುಳಿತಿದ್ದಾಳೆ. ಅಲ್ಲಮಪ್ರಭು ಅಷ್ಟೇ ಸಮಾಧಾನದಿಂದ ಆಕೆಗೆ ಉಪದೇಶವನ್ನು ಮಾಡುತ್ತಿದ್ದಾನೆ. ಹಿನ್ನೆಲೆಯಲ್ಲಿ ಮನೆಗಳನ್ನು ಚಿತ್ರಿಸಿದ್ದಾರೆ. ಮುಕ್ತಾಯಕ್ಕನ ನೋವು ನೋಡುಗರ ಮೇಲೂ ಪರಿಣಾಮ ಬೀರುವಂತೆ ಚಿತ್ರಿಸಿದ್ದಾರೆ. ಭಾರತೀಯರ ಆದರ್ಶ ಮಹಿಳೆಯರಲ್ಲಿ ಈಕೆಗೂ ಉನ್ನತ ಸ್ಥಾನವಿದೆ. ಸೋದರ ಪ್ರೇಮ. ಭಕ್ತಿ. ಜ್ಞಾನ. ವೈರಾಗ್ಯ ಹಾಗೂ ಅಲ್ಲಮನೊಡನೆಯ ವಾದ ಬೆರಗುಗೊಳಿಸುವಂತಹದು. ಅಂತಹ ಮಹಾಜ್ಞಾನಿ. ಈ ಚಿತ್ರ ಮುಕ್ತಾಯಕ್ಕ ಎಂಬ ಗ್ರಂಥದ ೨೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೬೩ : ಕದಿರೆ ರೇವಯ್ಯನವರ ಪವಾಡದ ದೃಶ್ಯ.

ನೂಲುವ ರಾಟೆಗೆ ಬೇಕಾಗುವ ಕದಿರುಗಳನ್ನು ತಯಾರಿಸಿ ಜೀವನ ನಡೆಸುತ್ತಿದ್ದರು. ಶಿವನನ್ನು ಒಲಿಸಿಕೊಂಡ ಮಹಾತ್ಮರ ಕರಸ್ಪರ್ಶದಿಂದ ಮರಳಿ ಜೀವ ಬರುವ ದೃಶ್ಯ ಈ ರೇಖಾಚಿತ್ರದಲ್ಲಿದೆ. ರೇವಯ್ಯ ಒಂದು ದಿನ ಕಲ್ಯಾಣದಿಂದ ತಮ್ಮ ಗುರುಗಳ ದರ್ಶನಕ್ಕೆ ಹೊರಟಾಗ ದಾರಿಯಲ್ಲಿ ಶಿವಲಿಂಗಾರ್ಚನೆಗೆ ಅನುವು ಮಾಡಿಕೊಟ್ಟ ಸೋಮನಾಥ ಹಾಗೂ ಅಣ್ಣಲಾದೇವಿಯರ ಮಗ ಕಾಡಿನಲ್ಲಿ ಹಾವು ಕಡಿದು ಸತ್ತು ಹೋಗಿದ್ದ. ಇದನ್ನು ತಿಳಿದ ರೇವಯ್ಯ ಅವನ ಸಮಾಧಿ ಹತ್ತಿರ ಹೋಗಿ ಮೃತನಾದ ಬಾಲಕ ಮಲ್ಲಿನಾಥನ ತಲೆಯ ಮೇಲೆ ವರದ ಹಸ್ತವನ್ನಿಟ್ಟು ತಮ್ಮ ಗುರುವನ್ನು ನೆನೆಯಲು. ಆತನಿಗೆ ಪ್ರಾಣಸಂಚಾರವಾಯಿತು. ಆತ ಶಿವ ಶಿವ ಎಂದು ಎದ್ದು ಬಂದು. ರೇವಯ್ಯನವರಿಗೆ ನಮಸ್ಕರಿಸಿದ ಅಂದರೆ. " ದೇವನೊಲಿದರೆ ವಿಷವೂ ಕೂಡ ಅಮೃತವಾಗುವುದಕ್ಕೆ "[೪೦] ನಿದರ್ಶನ.

ಈ ಚಿತ್ರದಲ್ಲಿ ಎರಡು ದೃಶ್ಯಗಳನ್ನು ಚೆಟ್ಟಿಯವರು ಚಿತ್ರಿಸಿದ್ದಾರೆ. ಕಟ್ಟಿಗೆ ಕಡಿಯುತ್ತಿರುವ ಹುಡುಗ ಕೆಳಗೆ ಹೆಡೆಯೇ ಹಾವು. ಉಳಿದರ್ಧ ಭಾಗದಲ್ಲಿ ರೇವಯ್ಯನವರು ತಮ್ಮ ಹಸ್ತದಿಂದ ಆ ಹುಡುಗನನ್ನು ಬದುಕಿಸಿದುದು. ಆತ ಅವರಿಗೆ ನಮಸ್ಕರಿಸುತ್ತಿದ್ದಾನೆ. ಅಲ್ಲಿ ನೆರೆದ ಜನರ ಕಂಗಳಲ್ಲಿ ಅದೃಶ್ಯ ಆಶ್ಚರ್ಯವನ್ನುಂಟು ಮಾಡಿದೆ. ಅವರ ಕಂಗಳಲ್ಲಿ ಆಶ್ಚರ್ಯ ಹಾಗೂ ಸಂತೋಷ ಎರಡೂ ವ್ಯಕ್ತವಾಗಿದೆ. ಇಂತಹ ಭಾವನಾತ್ಮಕ ದೃಶ್ಯ ರಚಿಸುವಲ್ಲಿ ಚೆಟ್ಟಿಯವರ ಅಧ್ಯಯನದ ಆಳ ಅರ್ಥವಾಗುತ್ತದೆ. ಈ ಚಿತ್ರವನ್ನು ಕದಿರೆ ರೇವಯ್ಯ ಗ್ರಂಥದ ೨೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೬೪ : ಮಹಾಶಿವಶರಣೆ ನೆಲ್ಲುರ ನೆಂಬೆಕ್ಕ

" ನೆಂಬೆಕ್ಕನ ಶೀಲಭಂಗ ಮಾಡುವ ಕಾಲಕ್ಕೆ ಕಣ್ಣು ಕಳಕೊಂಡಿದ್ದು. "[೪೧] ಚಿತ್ರದಲ್ಲಿ ಧನಶೆಟ್ಟಿ ಎಂಬವನು ನೆಂಬೆಕ್ಕನ ಮಾನಭಂಗ ಮಾಡಲು ಜಂಗಮವೇಷ ಹಾಕಿಕೊಂಡು. ಆತಿಥ್ಯ ಸ್ವೀಕರಿಸಲು ಹೋಗಿ ಮಾನಭಂಗ ಮಾಡಲು ಪ್ರಯತ್ನಿಸಲು ನೆಂಬಕ್ಕ ಶಿವನನ್ನು ನೆನೆಯಲು ಆತನ ಸುತ್ತಲೂ ಉರಿ ಎದ್ದು. ಆತನ ಕಣ್ಣುಗಳು ಹೋದವು. ತನ್ನ ತಪ್ಪಿನ ಅರಿವಾಗಿ ಆಕೆಯ ಕಾಲಮೇಲೆ ಬಿದ್ದು ಕ್ಷಮೆ ಯಾಚಿಸಿದ ಪ್ರಸಂಗ. ಧನಶೆಟ್ಟಿ ನೆಂಬಕ್ಕನ ಸೀರೆಯ ಸೆರಗನ್ನು

---

೪೦. ಪುಟ್ಟರಾಜ ಗವಾಯಿಗಳು : ಕದಿರೆ ರೇವಯ್ಯ : ಪುಟ ೨೪

೪೧. ಚೆನ್ನವೀರಸ್ವಾಮಿ ಹಿರೇಮಠ : ಮಹಾಶಿವಶರಣೆ ನೆಲ್ಲೂರ ನೆಂಬಕ್ಕ : ಪುಟ ೨೯

ಹಿಡಿದಿದ್ದಾನೆ. ಅಪ್ಸರಲ್ಲಿಯೇ ಅವನ ಕಣ್ಣುಗಳು ಹೋಗಿವೆ ಎಂಬುದನ್ನು ಸರಳವಾದ ರೇಖೆಗಳಿಂದ ಅಭಿವ್ಯಕ್ತಿಸಿದ್ದಾರೆ. ಈ ಚಿತ್ರವನ್ನು ಪುಸ್ತಕದ ೨೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೬೫ : ಆಯ್ದಕ್ಕಿ ಮಾರಯ್ಯ

" ಲಕ್ಕಮ್ಮ - ಮಾರಯ್ಯನವರು ದಾಸೋಹದಲ್ಲಿ ನಿರತರಾದ " [೪೨] ಚಿತ್ರ. ಬಸವಣ್ಣನವರು ಅವರ ಕಾಯಕ ನಿಷ್ಠೆಗೆ ವಂದಿಸಿ ನಿಂತಿರುವರು ಈ ಚಿತ್ರವನ್ನು ಪುಸ್ತಕದ ೨೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೬೬ : ಸಕಲೇಶ ಮಾದರಸ

" ಚಿತ್ರದಲ್ಲಿ ಸಕಲೇಶ ಮಾದರಸರು ಶಿವಲಿಂಗ ದೀಕ್ಷೆಯನ್ನು ನೀಡುತ್ತಿರುವ ದೃಶ್ಯ. " [೪೩] ಅನೇಕ ಭಕ್ತಾದಿ ಅನುಯಾಯಿಗಳು ಅವರಿಂದ ಶಿವದೀಕ್ಷೆಯನ್ನು ಪಡೆಯುತ್ತಿದ್ದಾರೆ. ಗುಂಪು ಮಾನವಾಕೃತಿಗಳಿದ್ದರೆ. ಕೆಲವೇ ರೇಖೆಗಳಲ್ಲಿ ದೃಶ್ಯಾಂತರವನ್ನು ಚಿತ್ರಿಸಿದ್ದಾರೆ. ಈ ಚಿತ್ರ ಪುಸ್ತಕದ ೨೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೬೭ : ನಿಜಗುಣ ಶಿವಯೋಗಿಗಳು

ಇಲ್ಲಿ " ಶಂಭುಲಿಂಗನ ಬೆಟ್ಟ - ಮಲೆಯ ಮಾದೇಶ್ವರರ ನಿಸರ್ಗ ಚಿತ್ರ. " [೪೪] ಚಿತ್ರದಲ್ಲಿ ದೃಶ್ಯಾಂತರವಿದೆ.

ಚಿತ್ರ ೬೮ : ಶರಣ ಅಜಗಣ್ಣ

" ಮುಕ್ತಾಯಕ್ಕ ಗಂಡನ ಮನೆಗೆ ಹೋಗುವಾಗ್ಗೆ ದುಃಖಿಸುತ್ತಿರುವುದು. " [೪೫] ಕಾರಣ ಪ್ರೀತಿಯ ಅಣ್ಣನನ್ನು ಅಗಲಬೇಕಾದ ಪ್ರಸಂಗ ಬಂದುದೆಂದು. ಚಿತ್ರದಲ್ಲಿ ಬಂಡಿ ನಿಂತಿದೆ. ಸುತ್ತೆಲ್ಲ ಮನೆಯ ಜನರು ದುಃಖದಿಂದ ಅವಳನ್ನು ಬೀಳ್ಕೊಡುತ್ತಿದ್ದಾರೆ. ಅದರಲ್ಲಿ ಮುಕ್ತಾಯಕ್ಕನಿಗೆ ಮಾತ್ರ ಅತ್ಯಂತ ದುಃಖ ದುಗುಡ ತುಂಬಿಕೊಂಡಂತೆ ಚಿತ್ರಿಸಿದ್ದಾರೆ. ಈ ಚಿತ್ರ ಪುಸ್ತಕದ ೨೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೬೯ : ಶರಣ ಮೇದಾರ ಕೇತಯ್ಯ

ಮೇದಾರ ಕೇತಯ್ಯ ಶಿವಾನುಭವ ಮಂಟಪದಲ್ಲಿ ಅಲ್ಲಮಪ್ರಭುವಿನ ಎದುರಿಗೆ " ನಾದ ಬಿಂದು ಕಲಾತೀತ " [೪೬] ದ ಬಗ್ಗೆ ಹೇಳುವಚಿತ್ರ. ನಾದವೆಂದರೆ ಒಂದು ಬಗೆಯ ಅಲುಗಾಡುವಿಕೆ. ಈ ಅಲುಗಾಡುವಿಕೆಯಿಂದ ಬಿಂದು ಹುಟ್ಟುತ್ತದೆ. ನಾದವು ಈ ಬಿಂದುವಿಗೆ ಚೈತನ್ಯ ಕೊಡುತ್ತದೆ. ಇವೆರಡೂ ಕೂಡಿಕೊಂಡು ಪ್ರಕಟವಾದಾಗ ಅಲ್ಲಿ ಕಲೆ ಉತ್ಪನ್ನವಾಗುತ್ತದೆ. ಈ ಕಲೆಯ ಮೂಲಕ ವಸ್ತುವಿನ ಗುಣ. ರೂಪ ಮೊದಲಾದವು ತೋರುತ್ತವೆ ' ಈ ವಿಷಯವನ್ನು

---

೪೨. ಬಿ. ಎಸ್. ಸ್ವಾಮಿ : ಆಯ್ದಕ್ಕಿ ಮಾರಯ್ಯ : ಪುಟ ೨೪

೪೩. ಮಲ್ಲಿಕಾರ್ಜುನದೇವರು ತೇಲಸಂಗ : ಸಕಲೇಶಮಾದರಸ : ಪುಟ ೨೪

೪೪. ಈಶ್ವರಚಂದ್ರ ಚಿಂತಾಮಣಿ : ನಿಜಗುಣಶಿವಯೋಗಿ : ಪುಟ ೨೪

೪೫. ಎಂ. ಎಸ್. ವಾಲಿ : ಶರಣ ಅಜಗಣ್ಣ : ಪುಟ ೨೪

೪೬. ಎಂ. ಎಸ್. ಲಠ್ಠೆ : ಶರಣ ಮೇದಾರ ಕೇತಯ್ಯ : ಪುಟ ೨೪

ಕೇಳಿದ ಅಲ್ಲಿಯ ಶರಣರೆಲ್ಲ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಅಲ್ಲಮನು ಆತನ ಮಾತಿಗೆ ಮೆಚ್ಚಿಗೆ ವ್ಯಕ್ತಪಡಿಸುತ್ತಿರುವಂತೆ ಚಿತ್ರಿಸಿದ್ದಾರೆ. ಈ ಚಿತ್ರ ಪುಸ್ತಕದ ೧೯ ನೇ ಪುಟದಲ್ಲಿ ಇದೆ.

ಚಿತ್ರ ೨೦ : ಕಾರಿಕಾಲಮ್ಮೆ

" ತನ್ನ ಪತಿಗಾಗಿ ಒಂದೇ ಒಂದು ಹಣ್ಣು ಸಾಕು. ಮತ್ತೇನನ್ನೂ ಬೇಡ ಎಂದು ಶಿವನನ್ನು ಪ್ರಾರ್ಥಿಸುವ "[೪೭] ಇನ್ನೊಂದೆಡೆ ಗಂಡ ಊಟಕ್ಕೆ ಕುಳಿತಿದ್ದಾನೆ. ಗಂಡ ಕಳಿಸಿದ ಎರಡು ಹಣ್ಣಿನಲ್ಲಿ ಒಂದನ್ನು ಜಂಗಮನಿಗೆ ನೀಡಿದ್ದಳು. ಈಗ ಗಂಡ ಎರಡೂ ಹಣ್ಣನ್ನು ಕೇಳಲಾಗಿ ಹೆದರಿದ ಶರಣೆ ಶಿವನನ್ನು ಬೇಡಿ ಪಡೆದು ಗಂಡನಿಗೆ ನೀಡಿದಳು. ಎನ್ನುವ ಭಾವ ಆ ಚಿತ್ರದಲ್ಲಿ ಇದೆ. ಈ ಚಿತ್ರವನ್ನು ಪುಸ್ತಕದ ೨೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೨೧ : ಮರುಳ ಶಂಕರ ದೇವರು

ಶಂಕರ ದೇವರ ' ತಾನೆ ಲಿಂಗದ ಜ್ಯೋತಿಯ ನಿಲವಿನಂತೆ ' ಎಂಬುದನ್ನು ಪ್ರಭುದೇವರು ಎಲ್ಲರಿಗೂ ಮನವರಿಕೆ ಮಾಡಿಕೊಟ್ಟು ಆತನನ್ನು ಗುರುತಿಸಿದ ಬಗೆ ಚಿತ್ರದಲ್ಲಿದೆ. " ಪ್ರಸಾದದ ಹೊಂಡದ ಬಳಿ ಪ್ರಭುದೇವರು ಬಂದಾಗ ಮರುಳಶಂಕರ ದೇವರು ನಮಸ್ಕರಿಸುತ್ತಿರುವ "[೪೮] ದೃಶ್ಯ. ತಮ್ಮನ್ನೇ ಸಮರ್ಪಿಸಿಕೊಳ್ಳುವ ಭಕ್ತಿ ಶರಣರದೆಂಬುದು ವ್ಯಕ್ತವಾಗುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಕಾಯಕ ನಿಷ್ಠೆಯಿಂದ ತೃಪ್ತಿಯ ಭಾವವಿದೆ. ಈ ಚಿತ್ರ ಪುಸ್ತಕದ ೨೪ ನೇ ಪುಟದಲ್ಲಿ ಇದೆ.

ಚಿತ್ರ ೨೨ : ಹಂಪೆಯ ಹರಿಹರ

" ಹಂಪೆಯ ವಿರೂಪಾಕ್ಷದೇವಾಲಯದ ನಿಸರ್ಗ ಚಿತ್ರ "[೪೯] ಇದಾಗಿದೆ. ಎತ್ತರದ ಸ್ಥಳದಿಂದ ಚಿತ್ರವನ್ನು ಚಿತ್ರಿಸಿದಂತೆ ದೃಶ್ಯಾಂತರವಿದೆ. ಈ ಚಿತ್ರ ಪುಸ್ತಕದ ೨೪ ನೇ ಪುಟದಲ್ಲಿದೆ.

ಚಿತ್ರ ೨೩ : ಗುಡ್ಡಾಪುರದ ದಾನಮ್ಮ

ದಾನಮ್ಮ ದಂಪತಿಗಳು ಬಾಗೇವಾಡಿಯಿಂದ ಗುಡ್ಡಾಪುರಕ್ಕೆ ಹೊರಡಲು ಸಿದ್ಧರಾದರು. ದಾರಿಯಲ್ಲಿ ಮನಗೂಳಿ ಗ್ರಾಮದಲ್ಲಿ ಗೌಡತಿಗಿದ್ದ ಒಬ್ಬನೇ ಮಗ ತೀರಿಕೊಂಡಿದ್ದ. ಗೌರಮ್ಮ ದಾನಮ್ಮನನ್ನು ತಮ್ಮ ಮನೆಗೆ ಆಹ್ವಾನಿಸಲು ಆ ಮಗುವಿನ ಆಯುಷ್ಯ ಇನ್ನೂ ಇದೆ ಎಂದು ಅಂತಜ್ಞಾನದಿಂದ ತಿಳಿದು " ಮೃತದೇಹದ ಮೇಲೆ ಕೈ ಎಳೆದ ಕೊಡಲೇ ಮಗುವಿಗೆ ಪ್ರಾಣ ಸಂಚಾರವಾಯಿತು "[೫೦] ಚಿತ್ರದಲ್ಲಿ ದಾನಮ್ಮ ಮಗುವನ್ನು ತೊಡೆಯ ಮೇಲೆ ಎತ್ತಿಕೊಂಡು ಕುಳಿತಿದ್ದಾಳೆ. ಮನೆಯೊಡತಿ ಆ ದೃಶ್ಯ ಕಂಡು ಆಶ್ಚರ್ಯ ವ್ಯಕ್ತಪಡಿಸಿದ್ದಾಳೆ. ಈ ಚಿತ್ರ ಪುಸ್ತಕದ ೨೪ ನೇ ಪುಟದಲ್ಲಿ ನೋಡಬಹುದು.

---

೪೭. ಎಸ್. ವ್ಹಿ. ಶಹಪೂರಮಠ : ಕಾರಿಕಾಲಮ್ಮೆ : ಪುಟ ೨೪

೪೮. ಬಿ. ಸಿ. ಜವಳಿ : ಮರುಳ ಶಂಕರ ದೇವರು : ಪುಟ ೨೪

೪೯. ಬಸವರಾಜ ಮಲಶೆಟ್ಟಿ : ಹಂಪೆಯ ಹರಿಹರ : ಪುಟ ೨೪

೫೦. ಸಿಂಪಿ ಲಿಂಗಣ್ಣ : ಗುಡ್ಡಾಪುರದ ದಾನಮ್ಮ : ಪುಟ ೨೪

ಚಿತ್ರ ೭೪ : ಬಿಜ್ಜ ಮಹಾದೇವಿ

ಬಿಜ್ಜ ಮಹಾದೇವಿ ವಿಧವೆಯಾದ ತನಗೆ ಒಂದು ಮಗುವಿದ್ದರೆ ಹೇಗೋ ಕಾಲಕಳೆಯಬಹುದಿತ್ತು ಎಂದು ಶಿವನಲ್ಲಿ ಮೊರೆಯಿಟ್ಟಾಗ ಆಕೆಯ ಕನಸಿನಲ್ಲಿ ಬಂದ ಶಿವ 'ಕಾಡಿಗೆ ಕುಳ್ಳು ಆರಿಸುವ ನೆವಮಾಡಿ ಬಾ ನಾನಲ್ಲಿ ಕಂದನಾಗಿರುವೆ' ಎಂಬ ಮಾತು ಕೇಳಿ ಅದರಂತೆ ಕಾಡಿನಲ್ಲಿ ಹುಡುಕುತ್ತಾ ಹೋಗಿ " ಮಗುವನ್ನು ಕೂಗಿ ಕರೆದಾಗ ಗಿಡಗಳ ಮಧ್ಯದಿಂದ ಶಿವನೇ ಮಗುವಿನ ರೂಪ ತಾಳಿ ಓಡಿ ಬರುತ್ತಿರುವ ದೃಶ್ಯ" [೫೧]

ಮಹಾದೇವಿಯ ಮುಖದಲ್ಲಿ ಕಾತರವಿದೆ. ತಾಯಿಯನ್ನರಸುತ್ತ ಬಂದ ಕರುವಿನಂತೆ ಮಗು ಮಹಾದೇವಿಯತ್ತ ಧಾವಿಸಿ ಬರುತ್ತಿದೆ. ಹಿನ್ನೆಲೆಯಲ್ಲಿ ಕಾಡಿನ ದೃಶ್ಯಮರಬಳ್ಳಿಗಳಿಂದ ಆವರಿಸಿದೆ. ಈ ಚಿತ್ರ ಪುಸ್ತಕದ ೨೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೭೫ : ಶ್ರೀ ಸಿದ್ಧರಾಮ ಶಿವಯೋಗಿ

" ಒಡ್ಡರು ಎಸೆದ ಕಲ್ಲರಾಶಿಯ ಮೇಲೆ ನಿಂತ ಪ್ರಭುದೇವರು " [೫೨] ಒಡ್ಡರ ರಾಮ ಎಂದು ಸಿದ್ಧರಾಮನನ್ನು ಪ್ರಭು ಮೂದಲಿಸಿದಾಗ ಕೋಪಗೊಂಡ ಸಿದ್ಧರಾಮ ಅಲ್ಲಿಗೆ ಬಂದು ನೋಡಲಾಗಿ ಅಚ್ಚರಿಯಾಯಿತು. ಪ್ರಭುವಿನಲ್ಲಿ ಮಲ್ಲಿಕಾರ್ಜುನನ್ನು ಕಂಡು ಸಿದ್ಧರಾಮ ನಿಂತಲ್ಲಿಯೇ ಸಾಷ್ಟಾಂಗ ಹಾಕಿದ ದೃಶ್ಯ. ಈ ಕೆಲಸ ಬಿಡಿಸಿ ಶಿವಸಾಧನೆಗೆಂದು ಸಿದ್ಧರಾಮನನ್ನು ಮುಂದೆ ಕಲ್ಯಾಣಕ್ಕೆ ಕರೆದುಕೊಂಡು ಹೋದ. ಸುತ್ತಲೂ ನಿಂತ ಜನ ಈ ದೃಶ್ಯವನ್ನು ನೋಡಿ ತಲೆಬಾಗಿ ನಿಂತಿದ್ದಾರೆ. ಈ ಚಿತ್ರ ಪುಸ್ತಕದ ೨೪ ನೇ ಪುಟದಲ್ಲಿದೆ.

ಚಿತ್ರ ೭೬ : ನುಲಿಯ ಚಂದಯ್ಯ

" ನುಲಿಯ ಚಂದಯ್ಯನು ಹುಲ್ಲು ಕೊಯ್ದು ತರುತ್ತಿರುವ ದೃಶ್ಯ" [೫೩]

ಚಿತ್ರದಲ್ಲಿ ಚಂದಯ್ಯನು ಕಾಡಿನಿಂದ ಹಗ್ಗತಯಾರಿಸಲು ಹುಲ್ಲನ್ನು ಕೊಯ್ದುಕೊಂಡು ತರುತ್ತಿದ್ದಾನೆ. ತಲೆಯ ಮೇಲೆ ಹುಲ್ಲಿನ ಕಂತೆ. ಕೈಯಲ್ಲಿ ಕುಡುಗೋಲು ಬರಿಗಾಲಲ್ಲೆ ನಡೆದುಬರುತ್ತಿದ್ದಾನೆ. ಸುತ್ತೆಲ್ಲ ಗಿಡ ಮರಗಳಿಂದ ತುಂಬಿದ ವನದ ದೃಶ್ಯ. ಆತನ ಮುಖದಲ್ಲಿ ಕಾಯಕ ನಿಷ್ಠೆಯ ಭಾವ ಎದ್ದು ಕಾಣುತ್ತದೆ. ಈ ಚಿತ್ರವನ್ನು ಪುಸ್ತಕದ ೨೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೭೭ : ಮಡಿವಾಳ ಮಾಚಿದೇವ

" ಮಡಿವಾಳ ಮಾಚಯ್ಯ ಬಿಜ್ಜಳನ ಸೈನ್ಯ ಓಡಿಸಿದನು " [೫೪] ಚಿತ್ರದಲ್ಲಿ ಮಾಚಯ್ಯ ಖಡ್ಗವನ್ನು ಹಿಡಿದುಕೊಂಡು ವೀರಾವೇಶದಿಂದ ನಿಂತಿದ್ದಾನೆ. ಅವನ ಹಿಂದೆ ಕೆಲವರು ಶರಣರಿರುವರು. ಆತನ ವಿರುದ್ಧ ದಿಕ್ಕಿನಲ್ಲಿ ಬಿಜ್ಜಳನ ಸೈನ್ಯದಿಕ್ಕೆಟ್ಟು

---

೫೧. ಕು. ಸುವರ್ಣ ವಾಲಿಶೆಟ್ಟಿ : ಬಿಜ್ಜಮಹಾದೇವಿ. ಪುಟ ೨೪

೫೨. ಶ್ರೀಮತಿ ಶಾಂತಲಾ ಯೋಗೀಶ ಯಡ್ರಾಮಿ : ಶ್ರೀ ಸಿದ್ಧರಾಮ ಶಿವಯೋಗಿ : ಪುಟ ೨೪

೫೩. ಎಸ್. ಎಸ್. ಭೂಸರೆಡ್ಡಿ : ನುಲಿಯ ಚಂದಯ್ಯ. ಪುಟ ೨೪

೫೪. ದು. ನಿಂ. ಬೆಳಗಲಿ : ಮಡಿವಾಳ ಮಾಚಿದೇವ. ಪುಟ ೨೪



ಚೆನ್ನಬಸವಣ್ಣ ಅಭ್ಯಾಸ ಮಾಡುತ್ತಿರುವ ಚಿತ್ರ

ಚಿತ್ರ ೫೬



ನಿತ್ಯ ಸತ್ಯ ಕಾಯಕ ನಿರತ ಢೋಹರ ಕಕ್ಕಯ್ಯ

ಚಿತ್ರ ೫೭



ಮೋಳಿಗೆಯ ಮಹಾದೇವಿಯಮ್ಮನು ಶಿವಗಣಂಗಳು ಆಗಮಿಸಲಿ ಎಂದು ರಂಗವಲ್ಲಿ ಹಾಕುತ್ತಿರುವ ದೃಶ್ಯ

ಚಿತ್ರ ೫೮



ಕಲ್ಲಯ್ಯನ ಸಾಕುನಾಯಿ ಗಂಭೀರವಾದ ಯಜುರ್ವೇದವನ್ನು ಉಚ್ಚರಿಸುತ್ತಿರುವ ದೃಶ್ಯ

ಚಿತ್ರ ೫೯



ಉರಿಲಿಂಗದೇವ ಶರಣನು ತನ್ನ ಶಿಷ್ಯನಿಂದ ಶಕ್ತಿಸಾಮರ್ಥ್ಯ ಪ್ರಕಟಿಸಿದ

ಚಿತ್ರ ೬೦



ನನ್ನ ಮೇಲೆ ನಿನಗೆ ಅಷ್ಟೊಂದು ಪ್ರೀತಿಯಿದ್ದರೆ ಆ ಪ್ರೀತಿಯನ್ನೇ ನೀನು ನಿನ್ನ ಆರಾಧ್ಯದೈವವಾದ ವಿಜಯೇಶ್ವರನಿಗೆ ಅರ್ಪಿಸು

ಚಿತ್ರ ೬೧



ಮುಕ್ತಾಯಕ್ಕನಿಗೆ ಅಲ್ಲಮಪ್ರಭುವಿನ ಉಪದೇಶ

ಚಿತ್ರ ೬೨



ಕದಿರೆ ರೇಮಯ್ಯನವರ ಪವಾಡದ ದೃಶ್ಯ.

ಚಿತ್ರ ೬೩



ನೆಂಬೆಕ್ಕನ ಶೀಲಭಂಗ ಮಾಡುವ ಕಾಲಕ್ಕೆ ಕಣ್ಣು ಕಳಕೊಂಡಿದ್ದು.

ಚಿತ್ರ ೬೪



ಲಕ್ಕಮ್ಮ - ಮಾರಯ್ಯನವರು ದಾಸೋಹದಲ್ಲಿ ನಿರತರಾದ ಚಿತ್ರ.

ಚಿತ್ರ ೬೫







ಸಕಲೇಶ ಮಾದರಸರು ಶಿವಲಿಂಗ ದೀಕ್ಷೆಯನ್ನು ನೀಡುತ್ತಿರುವ ದೃಶ್ಯ.

ಚಿತ್ರ ೬೬



ಶಂಘುಲಿಂಗನ ಬೆಟ್ಟ - ಮಲೆಯ ಮಾದೇಶ್ವರರ ನಿಸರ್ಗ ಚಿತ್ರ.

ಚಿತ್ರ ೬೭



ಮುಕ್ತಾಯಕ್ಕ ಗಂಡನ ಮನೆಗೆ ಹೋಗುವಾಗ್ಗೆ ದುಃಖಿಸುತ್ತಿರುವುದು.

ಚಿತ್ರ ೭೮




ನಾದ ಬಿಂದು ಕಳಾ ತೀತದ ಬಗ್ಗೆ ಹೇಳುವ ಚಿತ್ರ

ಚಿತ್ರ ೭೯



ತನ್ನ ಪತಿಗಾಗಿ ಒಂದೇ ಒಂದು ಹಣ್ಣು ಸಾಕು. ಮತ್ತೇನನ್ನೂ ಬೇಡ ಎಂದು ಶಿವನನ್ನು ಪ್ರಾರ್ಥಿಸುವದು

ಚಿತ್ರ ೭೦



ಪ್ರಸಾದದ ಹೊಂಡದ ಬಳಿ ಪ್ರಭುದೇವರು ಬಂದಾಗ ಮರುಳಶಂಕರ ದೇವರು ನಮಸ್ಕರಿಸುತ್ತಿರುವ ದೃಶ್ಯ.

ಚಿತ್ರ ೭೧



ಹಂಪೆಯ ವಿರೂಪಾಕ್ಷದೇವಾಲಯದ ನಿಸರ್ಗ ಚಿತ್ರ

ಚಿತ್ರ ೭೨



ಮೃತದೇಹದ ಮೇಲೆ ಕೈ ಎಳೆದ ಕೂಡಲೇ ಮಗುವಿಗೆ ಪ್ರಾಣ ಸಂಚಾರವಾಯಿತು

ಚಿತ್ರ ೭೩







ಮಗುವನ್ನು ಕೂಗಿ ಕರೆದಾಗ ಗಿಡಗಳ ಮಧ್ಯದಿಂದ ಶಿವನೇ ಮಗುವಿನ ರೂಪ ತಾಳಿ ಓಡಿ ಬರುತ್ತಿರುವ ದೃಶ್ಯ

ಚಿತ್ರ ೭೪



ಪ್ರಭುವಿನಲ್ಲಿ ಮಲ್ಲಿಕಾರ್ಜುನನ್ನು ಕಂಡು ಸಿದ್ಧರಾಮ ನಿಂತಲ್ಲಿಯೇ ಸಾಷ್ಟಾಂಗ ಹಾಕಿದ ದೃಶ್ಯ.

ಚಿತ್ರ ೭೫







ನುಲಿಯ ಚಂದಯ್ಯನು ಹುಲ್ಲು ಕೊಯ್ದು ತರುತ್ತಿರುವ ದೃಶ್ಯ

ಚಿತ್ರ ೭೬



ಮಡಿವಾಳ ಮಾಚಯ್ಯ ಬಿಜ್ಜಳನ ಸೈನ್ಯ ಓಡಿಸಿದ ದೃಶ್ಯ

ಚಿತ್ರ ೭೭



ಚಿಕ್ಕಯ್ಯ ಬಸವಣ್ಣನವರ ಅಡಿಗಳಿಗೆ ಬಾಗಿದ ದೃಶ್ಯ

ಚಿತ್ರ ೭೮

ಓಡುತ್ತಿದೆ. ರಾಜನಾದ ತನ್ನ ಬಟ್ಟೆಗಳನ್ನು ಆತ ತನ್ನನ್ನು ಭವಿ ಎಂದು ತಿರಸ್ಕರಿಸಿ ಶರಣರ ಬಟ್ಟೆಯಷ್ಟನ್ನೇ ಮಡಿಮಾಡುವನೆಂದು ತಿಳಿದ ರಾಜ ಆತನನ್ನು ಓಡಿದು ಕೊಂಡು ಬರಲು ಸೈನ್ಯವನ್ನು ಕಳಿಸಿದ್ದರ ಪರಿಣಾಮ.

ಚಿತ್ರ ೭೮ : ಮೋಳಿಗೆಯ ಮಾರಯ್ಯ

ಚಿತ್ರವಲ್ಲಿ ಚಿಕ್ಕಯ್ಯ ಮಾಂವ್ಯಪುರದ ಅರಸನ ಕಡೆಯವ ಕಲ್ಯಾಣಕ್ಕೆ ಆ ರಾಜ್ಯದ ಜಂಗಮರೆಲ್ಲ ಹೋಗುತ್ತಿದ್ದಾರೆಂದು ಅರಿತಾಗ ಈತ ಬಂದು ರಾಜನ ನಿರೂಪವನ್ನು ಮುಟ್ಟಿಸಿದಾಗ ಬಸವಣ್ಣ ಆತನನ್ನು ಬರಮಾಡಿಕೊಂಡು ಜಂಗಮಸ್ವರೂಪಿಗಳೆಂದ ಅಲ್ಲದೆ ಜಂಗಮರನ್ನು ಓಡಿದಿಡಲೂ ನಾವಾರು ಎಂದಾಗ ತನ್ನ ತಪ್ಪಿನ ಅರಿವಾಗಿ ಚಿಕ್ಕಣ್ಣ ಬಸವಣ್ಣನಿಗೆ ಕ್ಷಮೆಕೇಳುತ್ತಾನೆ. " ತಂದೆ ತನ್ನನ್ನು ಕ್ಷಮಿಸು ಮರವೇರದ ಮರುಳ ನಿಮ್ಮ ಕರುಣೆಯ ತರಳ "[೫೫] ಇದೇ ದೃಶ್ಯದ ಚಿತ್ರವಿದೆ. ಚಿಕ್ಕಯ್ಯ ಬಸವಣ್ಣನವರ ಅಡಿಗಳಿಗೆ ಬಾಗಿದ್ದಾನೆ. ಬಸವಣ್ಣನವರು ಆತನನ್ನು ಓಡಿದು ಸಂತೈಸುತ್ತಿದ್ದಾರೆ. ಎಲ್ಲರೂ ಒಂದೇ ಎಂಬ ಭಾವ ಬಸವಣ್ಣನವರಲ್ಲಿದೆ. ಮನೆಯ ಬಾಗಿಲಲ್ಲಿ ನೀಲಾಂಬಿಕೆ ನಿಂತಿದ್ದಾಳೆ.

ಗಣವಾಸಿ ವೀರಣ್ಣ. ಕವಿ ಷಡಕ್ಷಣದೇವ. ಸರ್ಪಭೂಷಣ ಶಿವಯೋಗಿಗಳು. ಮಹಾಕವಿ ರಾಘವಾಂಕ. ಶಿವಶರಣ ಹರಳಯ್ಯ ಅಲ್ಲಮಪ್ರಭುದೇವರು. ಶರಣಬಸವೇಶ್ವರರು. ಮೂರುಸಾವಿರ ಮಠದ ಕರ್ತೃ ಗುರುಸಿದ್ಧೇಶ್ವರರು ಈ ಪುಸ್ತಕಗಳಲ್ಲಿ ರೇಖಾ ಚಿತ್ರಗಳು ಲಭ್ಯವಿರುವುದಿಲ್ಲ.

೩. ನಿಸರ್ಗ ಚಿತ್ರಗಳು :

ಚೆಟ್ಟಿಯವರು ಚಿತ್ರಿಸಿದ ಈ ನಿಸರ್ಗ ಚಿತ್ರಗಳಲ್ಲಿ ಛಾಯಾಂಕಣಕ್ಕಿಂತ ರೇಖೆಗೆ ಪ್ರಾಮುಖ್ಯತೆ ನೀಡಿದ್ದಾರೆ. ಬಂಡೆಗಳ ಗಾತ್ರದ ದೃಡತೆ. ಘನತೆ. ಆಕಾರಗಳ ರೇಖಾತ್ಮಕತೆ ಒಂದಕ್ಕೊಂದು ಒತ್ತಿನಿಲ್ಲುವ ಬಗೆಗಳು ದೃಶ್ಯದ ಬಿಡಿಭಾಗಕ್ಕಿಂತ ಒಟ್ಟು ಪರಿಣಾಮದ ಕಡೆ ಗಮನ ಇದೆ. ಅಲ್ಲದೆ ಎಲ್ಲಾ ವಸ್ತುವಿನ ಪೂರ್ಣವಿವರವಿದೆ.

ಚಿತ್ರ ೭೯ : ಈ ನಿಸರ್ಗ ಚಿತ್ರದಲ್ಲಿ ದೂರದಲ್ಲಿ ಕಾಣುವ ದೇವಾಲಯ ಅದಕ್ಕೂ ಹಿಂದೆ ಬೆಟ್ಟಗಳಸಾಲು. ಮಧ್ಯದಲ್ಲಿ ದೊಡ್ಡ ಬೆಟ್ಟ. ಅದಕ್ಕೆಮಾಡಿದ ಮೆಟ್ಟಿಲುಗಳು. ಬೆಟ್ಟದ ಬುಡದಲ್ಲಿ ಹಬ್ಬಿದ ಊರು. ಮನೆ. ತೆಂಗಿನ ಮರಗಳು. ಮಧ್ಯದಲ್ಲಿ ಹೊಂಡ. ಪಕ್ಕದಲ್ಲಿ ನೀರಿನ ದೊಡ್ಡ ತೊಟ್ಟಿ ಎಲ್ಲ ವಿವರವಾಗಿ ಚಿತ್ರಿಸಿದ್ದಾರೆ. ಬಂಡೆಗಳ್ಲಿನ ಸುತ್ತಲೂ ರಚಿಸಿದ ರೇಖೆಗಳು ಅವುಗಳ ಗಾತ್ರದ ಘನತೆಯನ್ನು ತೋರಿಸುತ್ತಿವೆ. ಛಾಯಾಂಕಣವಿಲ್ಲದೆ ಘನಾಕೃತಿಗಳು ಹಾಗೂ ದೂರ. ಸಮೀಪದ ಕಲ್ಪನೆ ನಿಸರ್ಗ ಚಿತ್ರನಿಯಮಕ್ಕನುಸಾರ ಮೂಡಿಬಂದಿದೆ. ಈ ಚಿತ್ರವನ್ನು ೧೯೭೮ ರಲ್ಲಿ ರಚಿಸಿದ್ದಾರೆ. ಇದರ ಅಳತೆ ೧೪ ಸೆಂ.ಮೀ. x ೧೯ ಸೆಂ.ಮೀ. ಇದೆ.

ಚಿತ್ರ ೮೦ : ಈ ನಿಸರ್ಗ ಚಿತ್ರದಲ್ಲಿ ಒಂದು ಹಳೆಯ ದೇವಾಲಯದ ರೇಖಾಚಿತ್ರವಿದೆ. ಆ ದೇವಾಲಯ ಅತ್ಯಂತ ಪುರಾತನವಾದುದೆನ್ನುವುದಕ್ಕೆ ದೇವಾಲಯದ ಛಾವಣಿಯ ಮೇಲೆ ಬೆಳೆದ ಹುಲ್ಲೇ ಸಾಕು. ಕೆಳಗಡೆ ಕೆಲವು ಕಲ್ಲುಗುಂಡುಗಳು

೫೫. ದೇವೇಂದ್ರ ಕುಮಾರ ಹಕಾರಿ : ಮೋಳಿಗೆಯ ಮಾರಯ್ಯ : ಪುಟ ೨೪

ಕಾಲನ ತುಳಿತಕ್ಕೆ ಸಿಕ್ಕು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ. ಆ ದೇವಾಲಯದ ಗೋಪುರವು ಇಲ್ಲ ಇದು ಹೊಯ್ಸಳರ ಶೈಲಿಗೆ ಸೇರಿದ ದೇವಾಲಯದಂತಿದೆ. ದೇವಾಲಯದಲ್ಲಿ ರೇಖೆಗಳಿಂದಲೇ ನೆರಳು ಬೆಳಕನ್ನು ಚಿತ್ರಿಸಿದ್ದಾರೆ. ಅಲ್ಲೇ ಸಮೀಪದಲ್ಲಿ ಬಂಡೆಗಳು ಬಿದ್ದಿವೆ ಅವುಗಳನ್ನು ರೇಖೆಯಿಂದ ಚಿತ್ರಿಸಿದ್ದಾರೆ.

ಇಲ್ಲಿ ಚೆಟ್ಟಿಯವರು ಆ ದೇವಾಲಯದ ಮೇಲೆ ಬೆಳೆದ ಹುಲ್ಲನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಈ ಎರಡೂ ಚಿತ್ರಗಳನ್ನು ಇಂಕ್ ಮಾಧ್ಯಮದಲ್ಲಿ ಚಿತ್ರಿಸಿದ್ದು. ಈ ಎರಡೂ ಚಿತ್ರಗಳ ಅಳತೆ ೧೫ ಸೆಂ.ಮೀ.x ೨೦ ಸೆಂ. ಮಿ. ಇದನ್ನು ಸಹ ೧೯೭೮ ನೇ ಇಸ್ವಿಯಲ್ಲಿ ರಚಿಸಿದ್ದಾರೆ.

ವೀರೇಶ್ವರ ಪುರಾಣದಲ್ಲಿಯ ರೇಖಾಚಿತ್ರಗಳು :

ಇಂಕ ಮಾಧ್ಯಮವನ್ನು ಹೊಂದಿವೆ. ಇವು ನಿಸರ್ಗ ಚಿತ್ರಗಳೆಂದೆ ಪರಿಗಣಿಸಲಾಗುತ್ತದೆ.

ಚಿತ್ರ ೮೧ : ಶಾಂತಾಶ್ರಮ (ಶ್ರೀ ವಿರೇಶ್ವರ ಮನೆ) [೫೬]

ಮನೆಯ ಹೊರನೋಟವನ್ನು ಇಲ್ಲಿ ಚಿತ್ರಿಸಿದ್ದಾರೆ. ಸಮೀಪದಲ್ಲೇ ಶ್ರೀ ಮಲ್ಲಿಕಾರ್ಜುನ ದೇವಾಲಯ. ಮನೆಯ ಮುಂದೆ ರಂಗೋಲಿ ಹಾಕುತ್ತಿರುವ ನಾರಿ ಆ ಅಂಗಳದಲ್ಲಿ ಮನೆಯ ನೆರಳನ್ನು ಬೆಳಕಿಗೆ ಅನುಗುಣವಾಗಿ ಚಿತ್ರಿಸಿದ್ದಾರೆ. ಮನೆಯ ಹಳೆಯ ದಪ್ಪನಾದ ಬಾಗಿಲು. ಮನೆಯ ಮುಂದೆ ಕಟ್ಟೆ. ಓಡಾಡುವ ಜನರು. ಮನೆಯ ಒಳಗಿನ ಪ್ರಾಕಾರದಲ್ಲಿರುವ ಮಾವಿನ ಗಿಡವನ್ನು. ದೇವಾಲಯದ ಮೇಲಿರುವ ನಕ್ಷೆಯ ಸೂಕ್ಷ್ಮತೆಯನ್ನೂ ಪರಿಪೂರ್ಣವಾಗಿ ಚಿತ್ರಿಸಿದ್ದಾರೆ. ಅವರ ರೇಖಾ ಚಿತ್ರದ ಕಲಾ ಪ್ರೌಢಿಮೆಗೆ ಈ ಚಿತ್ರಗಳೇ ಸಾಕ್ಷಿ. ಈ ಚಿತ್ರವು ಪುರಾಣದ ೧೬೩ ನೇ ಪುಟದಲ್ಲಿದೆ.

ಚಿತ್ರ ೮೨ : ಶರಣನ ಸಮಾಧಿ (ಗದ್ದುಗೆ) [೫೭]

ಸೊನ್ನಲಾಪುರದಲ್ಲಿರುವ ಶ್ರೀ ಶರಣನ ಗದ್ದುಗೆ ಸಮೀಪದಲ್ಲೇ ಶ್ರೀ ಸಿದ್ಧರಾಮೇಶ್ವರ ದೇವಾಲಯದ ದೂರ ಸಮೀಪಗಳ ದೃಶ್ಯಾಂತರವನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಈ ಚಿತ್ರಗಳನ್ನು ಮೊದ ಮೊದಲು ೧೯೬೩ ರಲ್ಲಿ ಚಿತ್ರಿಸಿದ್ದರಿಂದ ವಿವರ ಪೂರ್ಣವಾದ ಚಿತ್ರವಾಗಿದೆ. ಗಿಡಮರಗಳಲ್ಲಿ ಎಳೆ ಎಳೆಯನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಸಮೀಪದಲ್ಲಿ ಹೊಂಡ. ಅದರಲ್ಲಿ ಕಮಲದ ಹೂಗಳು ನಿಸರ್ಗ ಚಿತ್ರದ ರೇಖಾ ಚಿತ್ರಗಳಿಗೆ ಇದು ಮಾದರಿಯಾಗಿದೆ. ಚಿತ್ರದಲ್ಲಿ ಛಾಯಾಂಕಣವನ್ನು ರೇಖೆಗಳಿಂದಲೇ ಚಿತ್ರಿಸಿದ್ದಾರೆ. ಇಷ್ಟೊಂದು ಸೂಕ್ಷ್ಮತೆಯಿಂದ ಚಿತ್ರಿಸಿರುವುದರಿಂದಲೇ ಈ ಚಿತ್ರಗಳನ್ನು ರಚಿಸಲು ಚೆಟ್ಟಿಯವರೇ ಹೇಳುವಂತೆ ೭-೮ ತಿಂಗಳುಗಳನ್ನು ತೆಗೆದುಕೊಂಡಿರುವರಂತೆ ಈ ಚಿತ್ರ ಪುರಾಣದ ೨೫೧ ನೆ ಪುಟದಲ್ಲಿ ನೋಡಬಹುದು. (ಅಧ್ಯಾಯ ಏಳರಲ್ಲಿಯ ೭ ನೇ ಚಿತ್ರವನ್ನು ನೋಡಿರಿ)

---

೫೬. ಚನ್ನವೀರ : ವೀರೇಶ್ವರ ಪುರಾಣ : ಪುಟ ೧೬೩

೫೭. ಚನ್ನವೀರ : ವೀರೇಶ್ವರ ಪುರಾಣ : ಪುಟ ೨೫೧



ಚಿತ್ರ ೭೯



ಚಿತ್ರ ೮೦



ಶಾಂತಾಶ್ರಮ (ಶ್ರೀ ವಿರೇಶ್ವರ ಮನೆ)

ಚಿತ್ರ ೮೧



ಚಿತ್ರ ೮೨

ಚಿತ್ರ ೮೩ : ಇದು ಪ್ರಾಣಿ ಚಿತ್ರಗಳಲ್ಲಿ ಬರುವಂಥದ್ದು ಚೆಟ್ಟಿಯವರು ಹೆಚ್ಚಾಗಿ ಪ್ರಾಣಿಗಳ ರೇಖಾ ಚಿತ್ರಗಳನ್ನು ಪೆನ್ಸಿಲಿನಿಂದಲೇ ಚಿತ್ರಿಸಿದ್ದಾರೆ. ಅದರಲ್ಲಿ ಇಲ್ಲೊಂದು ಇಂಕಮಾಧ್ಯಮ ಅದು ಕುಂಚದಿಂದ ಚಿತ್ರಿಸಿದ್ದು ಓಡುತ್ತಿರುವ ಕುದುರೆಯ ಸ್ಕೆಚ್ ಅದರ ಓಟದ ಗತಿಯನ್ನು ಕುಂಚದ ಎಳೆತದಲ್ಲಿ ತೋರಿಸಿದ್ದಾರೆ. ತುಂಡು ರೇಖೆಗಳಾದರೂ ಕುದುರೆಯ ಅಂಗಸೌಷ್ಠವದೊಂದಿಗೆ ಅದರ ಚಲನೆಯನ್ನು ಚಿತ್ರಿಸಿದ್ದಾರೆ. ಕುಂಚದಿಂದ ರಚಿಸಿದ ರೇಖೆಗಳು ಅಷ್ಟೇ ಶಕ್ತಿಯುತ ಹಾಗೂ ಲಯದಿಂದ ಕೂಡವೆ. ಇದರ ಅಳತೆ ೧೬ಸೆಂ.ಮೀ. x ೧೯ಸೆಂ.ಮೀ.. ಚೆಟ್ಟಿಯವರ ಸಂಗ್ರಹದಿಂದ.


೪. ದೈನಂದಿನ ಅಭ್ಯಾಸದ ಅಂಕನೆ ರೇಖಾಚಿತ್ರಗಳು :

ಚಿತ್ರ ೮೪ : ಕೆಲವು ದೈನಂದಿನ ಚಿತ್ರಗಳನ್ನು ಇಂಕ್ ಮಾಧ್ಯಮ ಅಂದರೆ ಪೆನ್ನಿನಿಂದ ಚಿತ್ರಿಸಿದ್ದಾರೆ. ಇಲ್ಲಿ ಯಾವುದೆ ಛಾಯಾಂಕಣ ಇಲ್ಲ. ಇವು ಕೂಡ ಬಸ್ಟ್ಯಾಂಡ. ಸಂತೆ. ಮುಂತಾದ ಕಡೆಗಳಲ್ಲಿಯ ಸ್ಕೆಚ್‌ಗಳಾಗಿವೆ. ಇಲ್ಲಿಯೂ ಹೆಣ್ಣುಮಕ್ಕಳನ್ನು ಸಾಕಷ್ಟು ಚಿತ್ರಿಸಿದ್ದಾರೆ. ಬಸ್ಸಿಗಾಗಿ ಬುಟ್ಟಿ ಇಟ್ಟುಕೊಂಡು ಕಾಯುತ್ತಿರುವವರು. ಹರಟೆಯಲ್ಲಿ ಮಗ್ನರಾದವರು. ಹೀಗೆ ಅತ್ಯಂತ ಸರಳ ರೇಖೆಗಳಲ್ಲಿ ಚಿತ್ರಿಸಿದ್ದಾರೆ. ೧೯೪೫ - ೫೦ ರ ಸುಮಾರಿನಲ್ಲಿ ಚಿತ್ರಿಸಿದ ಇಂತಹ ಚಿತ್ರಗಳಲ್ಲಿ ವಿವರಣೆ ಹೆಚ್ಚಾಗಿ ಇರುತ್ತಿತ್ತು. ಆದರೆ ಈ ಚಿತ್ರಗಳು ೧೯೭೭ ರಲ್ಲಿ ರಚಿತವಾದವು. ಇಲ್ಲಿ ಅಷ್ಟೊಂದು ವಿವರಣೆ. ನಕ್ಷೆಗಳು ಇಲ್ಲದೆ. ಸರಳ ರೇಖೆಯಲ್ಲೇ ಪ್ರಮಾಣಬದ್ಧವಾದ ರೇಖಾಚಿತ್ರಗಳನ್ನು ಚಿತ್ರಿಸಿದ್ದಾರೆ.

ಚಿತ್ರ ೮೫ : ಸಾಮಾನ್ಯವಾಗಿ ಕಲಾವಿದರಲ್ಲಿ ಯಾವತ್ತೂ ಒಂದು ' ಸ್ಕೆಚ್‌ಬುಕ್ ' ಇದ್ದೇ ಇರುತ್ತದೆ. ಆಕಸ್ಮಾತ್ ಸ್ಕೆಚ್ ಬುಕ್ ಇರದಿದ್ದಾಗ ಬಸ್ಸಿನ ಟಿಕೇಟಿನ ಹಿಂಬದಿಯಂತಹ ಕಾಗದದ ತುಂಡಿದ್ದರೂ ಸರಿಯೇ ಹೀಸದ ತುಂಡು ಕಾಗದ. ಹಳೆಯ ಲಕೋಟೆಗಳು ಗಮನ ಸೆಳೆಯುವ. ವಸ್ತು. ಶಿಲ್ಪ. ಭಂಗಿ. ಭಾವ. ಸಮೂಹ. ಆಕೃತಿ ಸೃಜನಶೀಲ ಪ್ರಜ್ಞೆಯನ್ನು ಜಾಗ್ರತಗೊಳಿಸಿದಾಗ ತನ್ನ ಹತ್ತಿರ ಏನಿರುತ್ತದೋ ಅದರಲ್ಲಿಯೇ ಚಿತ್ರಿಸಿ ತೃಪ್ತಿಪಡುತ್ತಾನೆ. ಕಲಾವಿದನ ಕಲೆಯ ಅಭಿವ್ಯಕ್ತಿ ಕುರಿತು ತುಡಿತಕ್ಕೆ ಸಮಯ. ಪರಿಸರಕ್ಕೆ ನಿರ್ಬಂಧವಿಲ್ಲ ಅಂತೆಯೇ ಚೆಟ್ಟಿಯವರು ಬಸ್ ಟಿಕೇಟಿನ ಹಿಂಬದಿಯಲ್ಲಿ ಚಿತ್ರರಚಿಸಿದ್ದಾರೆ. ಕುಳಿತ ಹೆಣ್ಣುಮಗಳು ಹಾಗೂ ಗಂಡಸು ಚಿಕ್ಕವಾದರೂ ಸರಳ ರೇಖೆಗಳಿಂದ ಆಕೃತಿಯನ್ನು ಅತ್ಯಂತ ಪ್ರಮಾಣಬದ್ಧವಾಗಿ ರಚಿಸಿದ್ದಾರೆ. ಹೀಗೆ ನಿಜವಾದ ಕಲಾವಿದ ತನ್ನ ಕಲೆಯ ಅಭಿವ್ಯಕ್ತಿಯನ್ನು ಚಿಕ್ಕ ಇಂತಹ ಬಸ್ ಟಿಕೇಟ್‌ನಿಂದ ಹಿಡಿದು ದೊಡ್ಡ ದೊಡ್ಡ ಭಿತ್ತಿಚಿತ್ರಗಳವರೆಗೂ ಪ್ರಕಟಿಸುವ ಸಾಮರ್ಥ್ಯ ಹೊಂದಿರುತ್ತಾನೆ. ಈ ಮಾತಿಗೆ ಚೆಟ್ಟಿಯವರು ನಿದರ್ಶನ.

೫. ಶಿಲ್ಪಗಳ ರೇಖಾಚಿತ್ರಗಳು :


ಚಿತ್ರ ೮೬ : ಬಾದಾಮಿ. ಹಂಪಿ. ಐಹೊಳೆ. ಪಟ್ಟದಕಲ್ಲು ಮುಂತಾದ ಸ್ಥಳಗಳಿಗೆ ಹೋದಾಗ ತಮಗೆ ತುಂಬಾ ಮೆಚ್ಚುಗೆಯಾದ ಶಿಲ್ಪಸೌಂದರ್ಯವನ್ನು ನೋಡಿ ಅಲ್ಲಿಯೇ ನಿಂತೋ. ಕುಳಿತೋ ಮೂಡಿಸಿದ ರೇಖಾಚಿತ್ರಗಳಿವೆ. ಶಿಲ್ಪಗಳ ಕಲಾ ನಿಪುಣತೆಯನ್ನು ನಾವು ಗ್ರಹಿಸುವಂತೆಯೇ ಚೆಟ್ಟಿಯವರ ರೇಖೆಗಳಲ್ಲಿ ಕಾಣುವ ರೇಖಾ ವಿನ್ಯಾಸದ ಪ್ರೌಢಿಮೆಯನ್ನೂ ಗುರುತಿಸಬಹುದು.



ಚಿತ್ರ ೮೪



ಚಿತ್ರ ೮೪



ಚಿತ್ರ ೮೫



ಚಿತ್ರ ೮೬

ಈ ಚಿತ್ರದಲ್ಲಿ ಕಾಣುವ ಕೊಂಚ ಪಕ್ಕಕ್ಕೆ ವಾಲಿಕೊಂಡು ಲಯಬದ್ಧವಾಗಿ ನಿಂತಿರುವ ಹೆಣ್ಣುಮೂರ್ತಿ. ಈ ರೇಖಾ ಚಿತ್ರಣದಲ್ಲಿ ಕಂಡುಬರುವ ಮೃದು ಹಾಗೂ ಲಯಬದ್ಧವಾದ ರೇಖೆಗಳು ಚಾಲುಕ್ಯರ ಶಿಲ್ಪ ವೈಭವವನ್ನು ಕಣ್ಣಮುಂದೆ ತರುವಂತೆಯೇ ಚಿಟ್ಟಿಯವರ ರೇಖೆಗಳ ಮೇಲಿರುವ ಪ್ರಭುತ್ವ ಕಲಾ ರಸಿಕರ ಗಮನ ಸೆಳೆಯುವಂತಿವೆ.

೩. ಚಾರ್ಕೋಲ ಮಾಧ್ಯಮದ ರೇಖಾಚಿತ್ರಗಳು :

ಚಿತ್ರದ ಕರಡು (ಮೂಲ) ಪ್ರತಿಯನ್ನು ತಯಾರಿಸಲು ಇದ್ದಿಲು ಕಡ್ಡಿ ಅಥವಾ ಚಾರಕೋಲು (Charcoal) ಅತ್ಯುತ್ತಮ ಮಾಧ್ಯಮವಾಗಿದೆ. ಕೆಲವುಸಲ ಕಲಾಕೃತಿಗಳನ್ನು ಸಂಪೂರ್ಣವಾಗಿ ಇದ್ದಿಲು ಕಡ್ಡಿಯಿಂದಲೇ ಚಿತ್ರಿಸಲಾಗುತ್ತದೆ. ನೆರಳು ಬೆಳಕನ್ನು ಇದ್ದಿಲು ಕಡ್ಡಿಯಿಂದ ಪರಿಣಾಮಕಾರಿಯಾಗಿ ಚಿತ್ರಿಸಲು ಸಾಧ್ಯ ರಬ್ಬರಿನಿಂದ ಬೇಡವಾದ ರೇಖೆಗಳನ್ನು ಸುಲಭವಾಗಿ ಅಳಿಸಿಹಾಕಬಹುದು. ಈ ಮಾಧ್ಯಮದಲ್ಲಿ ಸ್ಥಿರರೂಪ ಚಿತ್ರಣ. ಸಂಯೋಜನಾಚಿತ್ರ ಹಾಗೆಯೆ ಜೀವಮಾದರಿ ಚಿತ್ರಗಳನ್ನು ಹೆಚ್ಚಾಗಿ ರಚಿಸುತ್ತಾರೆ. ಇದೊಂದು ಇದ್ದಿಲು ಕಡ್ಡಿಯಾದ್ದರಿಂದ ಅತ್ಯಂತ ಮೃದುವಾಗಿರುತ್ತದೆ. ಛಾಯಾಂಕಣ ರೂಪಿಸುವುದು ಬಹಳ ಸರಳ ಅಲ್ಲದೆ ಕಲಾವಿದನಿಗೆ ಬೇಗನೇ ಆ ಚಿತ್ರದ ರೂಪ ಕಲ್ಪನೆಯ ನಿರ್ಧಾರವನ್ನು ತಿಳಿಸುತ್ತದೆ.

ಈ ಮಾಧ್ಯಮದಲ್ಲಿ ಚಿಟ್ಟಿಯವರು **ಸಂಯೋಜನಾ ಚಿತ್ರ**ಗಳನ್ನು ರಚಿಸಿದ್ದಾರೆ. ಇನ್ನುಳಿದ ವಿಷಯಗಳನ್ನೂ ಚಿತ್ರಿಸಿದ್ದಾರೆ. ಆದರೆ ಅವು ಈಗ ಲಭ್ಯವಿಲ್ಲ. ಇಲ್ಲಿ ಸಂಯೋಜನಾ ಚಿತ್ರಗಳ ಬಗ್ಗೆ ಮಾತ್ರ ಚರ್ಚಿಸಲಾಗಿದೆ.

ಚಿತ್ರ ೮೭ : ಚಾವುಂಡರಾಯ ಕುದುರೆಯ ಮೇಲೆ ಕುಳಿತ ಚಿತ್ರ. ಅಳತೆ ೨೨" x ೩೦" (Imperial size) ಗಂಗರ ಕಾಲದಲ್ಲಿ ಮಂತ್ರಿಯಾಗಿದ್ದ ಬಾಹುಬಲಿ ಮೂರ್ತಿಯನ್ನು ಕೆತ್ತಿಸಿದ ಕೀರ್ತಿ ಈತನದು.

ಇದೊಂದು ಅಲಂಕಾರಿಕ ಚಿತ್ರ. ಪ್ರತಿಯೊಂದು ವಸ್ತುವನ್ನು ಸೂಕ್ಷ್ಮವಾಗಿ ವಿವರವಾಗಿ ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ದೂರದಲ್ಲಿ ಗುಡಿ. ಮಂಟಪಗಳನ್ನು ಅಷ್ಟೇ ತೆಳುವಾಗಿ ಚಿತ್ರಿಸಿ ದೂರದ ಕಲ್ಪನೆಯನ್ನು ರೂಪಿಸಿದ್ದಾರೆ. ಕುದುರೆಯ ಕಟ್ಟುಮಸ್ತಾದ ಅಂಗಸೌಷ್ಠವ. ಮಂತ್ರಿಯ ಗಾಂಭಿರ್ಯ. ಗತ್ತು ಎಲ್ಲವೂ ಭಾವಮಯವಾಗಿ ರೂಪಿತವಾಗಿದೆ. ಆಭರಣ ಮೊದಲುಮಾಡಿ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಪ್ರತಿಯೊಂದು ವಸ್ತುವಿಗೂ ತಕ್ಕಂತೆ ಛಾಯಾಂಕಣ ಚಿತ್ರಿಸಿದ್ದಾರೆ. ಇಂತಹುದೇ ಒಂದು ೧೦' x ೮' ಅಳತೆಯ ಕುದುರೆ ಮೇಲೆ ಕುಳಿತ ಚಾವುಂಡರಾಯನ ಬೃಹತ್ ಚಿತ್ರ ಶ್ರವಣಬೆಳಗೊಳದಲ್ಲಿದೆ. ಚಿಟ್ಟಿಯವರ ಒಂದು ವಿಶೇಷತೆ ಏನೆಂದರೆ ಒಂದೊಂದು ಕೃತಿಯಲ್ಲೂ ಅಪಾರವಾದ ಸೂಕ್ಷ್ಮ ವರ್ಣಗಳಿಂದ ವೀಕ್ಷಕರಿಗೆ ಯಾವುದೇ ಶ್ರಮವನ್ನು ಕೊಡದೆ ಸಾಮಾನ್ಯ ಜನರು ಸಹಿತ ರಂಜಿಸಲು ಬೇಕಾದ ಸಾಂಸ್ಕೃತಿಕ ಅಗತ್ಯವನ್ನು ಪೂರೈಸಿದ್ದಾರೆ.

ಚಿತ್ರ ೮೮ : ಈ ಚಿತ್ರ ಬಸವಣ್ಣನವರು ವಚನಗಳನ್ನು ರಚಿಸುತ್ತಿರುವ ಚಿತ್ರವಾಗಿದೆ. ೨೨" x ೩೦" ಬಸವಣ್ಣನವರು ತಸನ್ಮುಖರಾಗಿ ತಾಡೋಲೆಗಳ ಮೇಲೆ ವಚನಗಳ ರಚನೆಯಲ್ಲಿ ಮಗ್ನವಾದ ಭಾವ ಇಲ್ಲಿದೆ. ಅದಕ್ಕೆ ತಕ್ಕಂತೆ ಪರಿಸರ ಆಗಿನ ಕಾಲದಲ್ಲಿ ಎಣ್ಣೆಯ ದೀಪಗಳನ್ನೇ ಬಳಸುತ್ತಿದ್ದರು. ಮನೆಯ ಕಂಭ. ಕಿಟಕಿಯ ಜಾಲಂಧ್ರ ನಮ್ಮನ್ನು ೧೨ ನೇ

ಶತಮಾನಕ್ಕೆ ಕರೆದುಕೊಂಡು ಹೋಗುತ್ತವೆ. ಇಲ್ಲಿ ಕಲಾವಿದನಿಗೆ ಆ ಕಾಲದ ಬರವಣಿಗೆಯ ರೀತಿ. ಉಪಯೋಗಿಸುತ್ತಿದ್ದ ವಸ್ತುಗಳ ಸಂಪೂರ್ಣ ಅಧ್ಯಯನದ ಅವಶ್ಯಕತೆ ಇದೆ. ಚೆಟ್ಟಿಯವರು ಯಾವಾಗಲೂ ಇಂತಹ ಚಿತ್ರ ರಚನೆ ಮಾಡುವ ಮೊದಲು ಸಂಬಂಧಿಸಿದ ಗ್ರಂಥಗಳನ್ನು ಸಂಪೂರ್ಣವಾಗಿ ಅಭ್ಯಾಸಮಾಡುತ್ತಿದ್ದರು. ಅಂತೆಯೇ ಆ ನೈಜತೆ ಚಿತ್ರದಲ್ಲಿ ರೂಪಿಸಲೂ ಸಾಧ್ಯವಾಯಿತು. ನೆರಳು ಬೆಳಕಿನ ಕಲ್ಪನೆ ಕೆಲವು ಸಾರಿ ಬೆಳಕನ್ನು ನೇರವಾಗಿ ತೋರಿಸುವ ಸಂದರ್ಭದಲ್ಲಿ ಅಲ್ಲಿ ಬಿಳಿ ಜಲವರ್ಣವನ್ನು ಉಪಯೋಗಿಸಿದ್ದಾರೆ.

ಚಿತ್ರ ೮೯ : ಭಗವಾನ ಬುದ್ಧನ ಚರಿತ್ರೆಯನ್ನೊಳಗೊಂಡ ಚಿತ್ರಗಳು. ಈ ಚಿತ್ರದ ಕಾಲ ೧೯೫೭. ಚೆಟ್ಟಿಯವರ ಸಂಗ್ರಹದಿಂದ. ಮಧ್ಯರಾತ್ರಿಯಲ್ಲಿ ಸಂಸಾರತ್ಯಜಿಸಿ ಬಂದ ಸಿದ್ಧಾರ್ಥ ' ಜನನ ಮರಣಗಳಿಂದ ಪಾರಾಗುವ ಪರಮಾರ್ಥ ' ಸಿದ್ಧಿಗಾಗಿ ಬೋಧೀವೃಕ್ಷದ ಕೆಳಗೆ ತಪಸ್ಸಿಗೆ ಕುಳಿತು ಭಗವಾನ ಬುದ್ಧನಾದ. ಇಲ್ಲಿ ಸಮಾಜದ ಉದ್ಧಾರದ ಸಲುವಾಗಿ ತನ್ನ ತತ್ವಗಳ ಉಪದೇಶದ ಕಾರ್ಯ ಕೈಗೊಂಡ ಸಂದರ್ಭದಲ್ಲಿ ಅಂಗುಲಿಮಾಲ ಎನ್ನುವಂತಹ ಕಳ್ಳನಿಗೆ ಬುದ್ಧನಿಂದ ಜ್ಞಾನೋದಯವಾಗಿ ಬೌದ್ಧಧರ್ಮದ ಅನುಯಾಯಿಯಾದ ಸಂದರ್ಭ. ಬಿಳಿಯ ಶುಭ್ರಬಟ್ಟೆ ಧರಿಸಿದ ಬುದ್ಧನನ್ನು ನೆರಳು ಬೆಳಕಿನ ಸಂಯೋಜನೆಯಿಂದ ಆತನ ಮುಖ ತೇಜಸ್ಸಿನಿಂದ ಕೂಡಿದಂತೆ ಆತನ ಮನಸ್ಸಿನೊಳಗಿನ ಧರ್ಮ ತತ್ವದ ವಿಚಾರಗಳನ್ನು ಸ್ಪಷ್ಟವಾಗಿ ಚಿತ್ರಿಸಿ. ನಿರಾತಂಕ. ನಿರ್ಭಯ. ನಿರ್ಮಲವಾದ ಮನಸ್ಸನ್ನು ಆತ ಹೊಂದಿದ್ದಾನೆ ಎಂಬ ಭಾವನೆ ವೀಕ್ಷಕನಲ್ಲಿ ಈ ಚಿತ್ರ ಮೂಡಿಸುತ್ತದೆ. ಆತನ ಸುತ್ತಲೂ ಜ್ಞಾನದ ಪ್ರಭಾವಳಿ. ಕಳ್ಳನು ಹಿಡಿದ ಖಡ್ಗ ತುಂಡರಿಸಿ ಆತನ ಮುಖದಲ್ಲಿ ಆಶ್ಚರ್ಯ. ಗಾಬರಿ ಎರಡನ್ನೂ ಉಂಟುಮಾಡಿದೆ. ಹಿನ್ನೆಲೆಯಲ್ಲಿ ವನದ ರಮಣೀಯತೆ. ಮುನ್ನೆಲೆಯಲ್ಲಿ ಕ್ರೂರ ಪ್ರಾಣಿಯಾದ ಹುಲಿಯೂ ಸಹಿತ ತಲೆಬಾಗಿದಂತೆ ಸಂಕೇತ ಅತ್ಯಂತ ದೂರದಲ್ಲಿ ಬೆಟ್ಟಗಳ ಸಾಲೂ ದೂರ ಸಮೀಪಗಳ ಸಂಯೋಜನೆ ಈ ಎಲ್ಲದರ ಕಲ್ಪನೆಯಲ್ಲಿ ನೈಜರೂಪವನ್ನು ನೀಡಿದ ಚೆಟ್ಟಿಯವರ ಕಲ್ಪನಾ ಚಿತ್ರ ಕಲಾಪೂರ್ಣ ತಂತ್ರಗಳಿಂದ ಕೂಡಿದೆ.

ಚಿತ್ರ ೯೦ : ಇದು ಸಹಿತ ಬುದ್ಧನ ಚರಿತ್ರೆಗೆ ಸಂಬಂಧಿಸಿದ್ದು. ಇಲ್ಲಿ ಬುದ್ಧನು ಅಹಿಂಸಾ ತತ್ವ ಬೋಧನೆಯನ್ನು ಮಾಡುತ್ತಿರುವುದು. ಯಜ್ಞಯಾಗಾದಿಗಳನ್ನು ಖಂಡಿಸಿ ಪಶುಬಲಿ ಮಹಾಪಾಪ ಎಂದು ಜನರಿಗೆ ಉಪದೇಶವನ್ನು ಮಾಡುತ್ತಿದ್ದಾನೆ.

ಈ ಚಿತ್ರದಲ್ಲಿ ಆ ಎಲ್ಲಾ ವಿಷಯಗಳನ್ನು ಒಟ್ಟಾರೆಯಾಗಿ ಚಿತ್ರಿಸಿದ್ದಾರೆ. ಒಂದು ಕಡೆ ಯಜ್ಞಮಾಡುತ್ತಿರುವುದು ಇನ್ನೊಂದೆಡೆ ಪಶುಬಲಿ. ಮತ್ತೊಂದೆಡೆ ಬುದ್ಧನು ಅದನ್ನೆಲ್ಲ ತಡೆದು ಉಪದೇಶಿಸುತ್ತಿರುವುದು. ಇಲ್ಲಿ ಅನೇಕ ಜನರ ಆಕೃತಿಗಳ ಸಂಯೋಜನೆ ಇದ್ದರೂ ಚಿತ್ರ ನೋಡಿದಾಕ್ಷಣ ವೀಕ್ಷಕನ ದೃಷ್ಟಿ ಮೊದಲಿಗೆ ಕೇಂದ್ರಿಕೃತವಾಗುವುದು ಬುದ್ಧನ ಮೇಲೆ. ಆನಂತರ ಉಳಿದವಿವರಗಳ ಕಡೆಗೆ. ಬುದ್ಧನೇ ಇಲ್ಲಿ ಪ್ರಮುಖನಾಗಿರುವುದರಿಂದ ಈ ತರಹದ ವೃತ್ತಾಕಾರದ ಸಂಯೋಜನೆಯನ್ನು ಮಾಡಿದ್ದಾರೆ. ಚಿತ್ರಕ್ಕೆ ತಕ್ಕಂತೆ ನೆರಳು ಬೆಳಕಿನ ಸಂಯೋಜನೆ. ಈ ರೀತಿ ೨-೩ ಕಲ್ಪನೆಗಳನ್ನು ಒಂದರಲ್ಲೇ ಸೃಷ್ಟಿಸುವ ಜಾಣ್ಮೆ ಚೆಟ್ಟಿಯವರಲ್ಲಿದೆ. ಇಷ್ಟೆಲ್ಲ ವಿಷಯಗಳಿದ್ದರೂ ಈ ಕಲಾಕೃತಿ ವೀಕ್ಷಕನ ಕಣ್ಣಿಗೆ ಅವೆಲ್ಲ ಸೇರಿ ಒಂದೇ ಸಮಗ್ರವಾದ ಕಲ್ಪನೆ ನೀಡುತ್ತದೆ.

ಚಿತ್ರ ೯೧ : ಬುದ್ಧ ಹಾಗೂ ಸುಜಾತ : ಇದರ ಅಳತೆ ೨೦" x ೩೦" ಇದೆ. ಈ ಚಿತ್ರ ಚಾರ್ಕೋಲಿನಿಂದ ಚಿತ್ರಿಸಿದ್ದಾರೆ.

ಸುಜಾತ " ತನ್ನ ಇಚ್ಛೆಗೆ ಅನುಸಾರವಾಗಿ ಯೋಗ್ಯ ಪತಿಯು ದೊರೆತರೆ ಪ್ರತಿವರ್ಷವೂ ಒಂದು ಸಹಸ್ರ ದನಗಳ ಹಾಲಿನಿಂದ ಪೋಷಿತವಾದ ಒಂದು ನೂರು ದನಗಳ ಹಾಲಿನ ನೈವೇದ್ಯವನ್ನು ವನದೇವತೆಗೆ ಅರ್ಪಿಸುವೆನೆಂದು ಹರಕೆ ಹೊತ್ತಿದ್ದಳು " [೫೮] ಅಂತೆಯೇ ತನ್ನ ಬಯಕೆ ಈಡೇರಿದ್ದರಿಂದ ನೈವೇದ್ಯವನ್ನು ಸಮರ್ಪಿಸಲು ಬಂದ ದೃಶ್ಯ.

ಚಿತ್ರದಲ್ಲಿ ಬೋಧಿವೃಕ್ಷದ ಕೆಳಗೆ ಬುದ್ಧನು ಧ್ಯಾನಾಸಕ್ತನಾಗಿ ಕುಳಿತಿದ್ದಾನೆ. ಎದುರಿಗೆ ಸುಜಾತಾ ನೈವೇದ್ಯವನ್ನರ್ಪಿಸುತ್ತಿದ್ದಾಳೆ. ಪರಿಚಾರಿಕೆ ಪೂಜಾಸಾಮಗ್ರಿಗಳನ್ನು ಹಿಡಿದುಕೊಂಡು ನಿಂತಿದ್ದಾಳೆ. ಗಿಡವೇ ಮನುಷ್ಯರೂಪ ತಾಳಿದೆಯೇನೋ ಎಂಬ ಭಾವ ಸುಜಾತಾಳಲ್ಲಿದೆ. ಸಂತೃಪ್ತ ಭಾವನೆಯಿಂದ ಹಾಲಿನ ನೈವೇದ್ಯ ಹಿಡಿಯುತ್ತಿದ್ದಾಳೆ. ಬುದ್ಧನು ಹಸನ್ಮುಖಿನಾಗಿ ಕುಳಿತಿದ್ದಾನೆ. ಹಿನ್ನೆಲೆಯಲ್ಲಿ ಜ್ಞಾನದ ಪ್ರಭಾವಳಿ ಇದೆ. ಚಿತ್ರದಲ್ಲಿ ದೃಶ್ಯಾಂತರವಿದೆ.

ಚಿತ್ರ ೯೨ : ಈ ಚಾರ್ಕೋಲ ಚಿತ್ರದ ಅಳತೆ ೨೨" x ೩೦" (Imperial) ಇದೆ. ಕಂಚಿನ ಮೂರ್ತಿಯನ್ನು ಮಾಡುವ ಸಲುವಾಗಿ ಚಿತ್ರಿಸಿಕೊಟ್ಟಿದ್ದು. ಅದಕ್ಕಾಗಿ ಎರಡು ಮೂರು ಬೇರೆ ಬೇರೆ ಕೋನಗಳಿಂದ ಚಿತ್ರಿಸಿದ್ದಾರೆ. ಇದು ವೀರ ಕಿತ್ತೂರ ರಾಣಿ ಚೆನ್ನಮ್ಮನ ಚಿತ್ರವಾಗಿದೆ. ೧೮೨೪ ರಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದಂಥ ವೀರ ಮಹಿಳೆ. ಇಲ್ಲಿ ಮುಂಭಾಗ ಹಾಗೂ ಹಿಂಭಾಗ ಎರಡಕ್ಕೂ ಬೇರೆ ಬೇರೆ ಚಿತ್ರಿಸಿದ್ದಾರಾದರೂ ಚಿತ್ರದಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲ. ಆಕೆ ಕುಳಿತಂಥ ಠೀವಿ. ಕುದುರೆಯ ಅಂಗಸೌಷ್ಠವ ಆಕೆಯ ಮುಖದಲ್ಲಿಯ ವೀರ ಕಳೆ ವೀಕ್ಷಕನ ಮನಸ್ಸಿನಲ್ಲಿ ವೀರ ರಸಭಾವವನ್ನು ಹುಟ್ಟಿಸುತ್ತದೆ. ಪ್ರತಿಯೊಂದನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ನೋಡುಗರಿಗೆ ಕಂಚಿನ ಮೂರ್ತಿಯ ಪ್ರತಿಕೃತಿ ಎನ್ನುವಂಥ ಭಾವನೆ ಬರುತ್ತದೆ. ಅಂದರೆ ಯಾವ ಉದ್ದೇಶಕ್ಕಾಗಿ ಅದನ್ನು ಚಿತ್ರಿಸುತ್ತಿದ್ದಾರೋ ಅದರ ರೂಪ ರೇಷೆಗಳು ಇದರಲ್ಲಿ ಸ್ಪಷ್ಟವಾಗಿವೆ. ನೆರಳು ಬೆಳಕಿನ ಸಂಯೋಜನೆ ಆ ಕಂಚಿನ ಲೋಹದ ಅನುಭವ ನೀಡುತ್ತದೆ.

ಚಿತ್ರ ೯೩ : ಈ ಚಿತ್ರ ೨೨" x ೩೦" ಇದೆ. ಇದೊಂದು ಪುರಾಣ ಕಥೆಯ ಕಾಲ್ಪನಿಕ ಚಿತ್ರವಾಗಿದೆ. ಸರ್ವದಮನ ಕಾಡಿನಲ್ಲಿ ಸಿಂಹದೊಂದಿಗೆ ಆಡುವ ದೃಶ್ಯ. ತಾಯಿ ಶಕುಂತಲೆ ಆತನನ್ನು ಚಿಕ್ಕಂದಿನಲ್ಲಿಯೇ ಶೂರತನದಿಂದ ಬೆಳೆಸಿದರೀತಿ ಅಲ್ಲದೇ ತಾಯಿ ಮಗನನ್ನು ಪ್ರೀತಿಯಿಂದ ಫಲಹಾರ ಸ್ವೀಕರಿಸಲು ಕರೆಯುತ್ತಿರುವ ದೃಶ್ಯ. ತಾಯಿ ಮಗುವಿನ ವಾತ್ಸಲ್ಯ ಅತ್ಯಂತ ಮನೋಜ್ಞವಾಗಿ ಮೂಡಿಬಂದಿದೆ. ತನ್ನೆಲ್ಲ ಸರ್ವಸ್ವ ತನ್ನ ಮಗನೇ ಎಂದು ತಿಳಿದ ತಾಯಿ ಅತ್ಯಂತ ಪ್ರೀತಿಯಿಂದ ಮಗನನ್ನು ಕರೆಯುತ್ತಿದ್ದಾಳೆ. ಅಂತೆಯೇ ಮಗನು ತಾಯಿಯ ಮಮತೆಯ ಕರೆಗೆ ಓಗೊಟ್ಟು ಓಡಿಬರುತ್ತಿದ್ದಾನೆ. ಕಾನನದ ಸೌಂದರ್ಯ. ಸಾಸಿಹದಲ್ಲೇ ಜಿಗರೆ. ನವಿಲುಗಳನ್ನು ನೈಜತೆಯಿಂದ ಚಿತ್ರಿಸಿದ್ದಾರೆ. ನೆರಳು ಬೆಳಕಿನ ಕಲ್ಪನೆ ಚಿತ್ರಕ್ಕೆ ಚಾಲನೆಯನ್ನು ನೀಡಿದೆ.

ಶಿವಶರಣ ವೀರೇಶ್ವರ ಪುರಾಣದಲ್ಲಿಯ ಚಾರ್ಕೋಲ ಮಾಧ್ಯಮದ ಚಿತ್ರಗಳು. ವೀರಶೈವ ಶರಣರ ಶಿವಮಯ ಬದುಕಿನ ಚಿತ್ರಗಳು. ಚೆಟ್ಟಿಯವರು ತಮ್ಮ ಡಿಪ್ಲೋಮಾ ಪದವಿ ಮುಗಿದ ತಕ್ಷಣ ಸೊಲ್ಲಾಪುರಕ್ಕೆ ಬಂದು ಅಲ್ಲಿ

---

೫೮. ಕಾಶೀನಾಥ ಪೋತದಾರ : ಬುದ್ಧಚರಿತ : ಪುಟ ೪೭

ಚಿತ್ರಕಲಾ ವೃತ್ತಿಯನ್ನು ಪ್ರಾರಂಭಿಸಿದ್ದರು. ಇವರ ಅದ್ಭುತವಾದ ಕಲಾಕೌಶಲ್ಯ ಕಂಡ ಮಹಾಶರಣೆ ರುದ್ರಮ್ಮ ಇವರಿಗೆ ಈ ಚಿತ್ರಗಳನ್ನು ರಚಿಸಲು ಅಪ್ಪಣೆ ಮಾಡಿದರು.

ಚಿಟ್ಟಿಯವರೇ ಹೇಳುವಂತೆ ಶ್ರೀ ವೀರೇಶ್ವರ ಶರಣರ ಶಿವಮಯ ಬದುಕಿನ ಚಿತ್ರಗಳನ್ನು ರಚಿಸುವ ಸೌಭಾಗ್ಯ ನನಗೆ ಪ್ರಾಪ್ತವಾಯಿತು. (೧) ಶ್ರೀ ವೀರೇಶ್ವರ ಶರಣರು ಭಿಕ್ಷಾಟನಕ್ಕೆ ಹೊರಟಿದ್ದು. (೨) ಶ್ರೀ ವಾರದಾ ಬಾಬಾ ಸಾಹೇಬರು ಮಾಡುತ್ತಿದ್ದ ಹೋಮ ಕುಂಡದಲ್ಲಿ ಧುಮುಕಿದ್ದು. (೩) ಶ್ರೀ ಸಿದ್ಧರಾಮೇಶ್ವರ ದೇವಾಲಯದಲ್ಲಿರುವ ಶರಣರ ಗದ್ದುಗೆಯದು. (೪) ಶರಣರ ಮನೆಯ ದೃಶ್ಯ. (೩ ಮತ್ತು ೪ ನೇ ಚಿತ್ರಗಳು ರೇಖಾ ಚಿತ್ರಗಳಾಗಿವೆ) ಹೀಗೆ ಈ ನಾಲ್ಕು ಚಿತ್ರಗಳನ್ನು ತೆಗೆಯಬೇಕಾದರೆ ಸುಮಾರು ೭-೮ ತಿಂಗಳು ಹಿಡಿದವು. ನಾನು ಸೊನ್ನಾಲಾಪುರದಲ್ಲಿ ಪ್ರಥಮತಃ ರಚಿಸಿದ ಚಿತ್ರಗಳೆಂದರೆ ಶ್ರೀ ಶರಣರ ಜೀವನಕ್ಕೆ ಸಂಬಂಧಿಸಿದ ಮೇಲಿನ ನಾಲ್ಕು ಚಿತ್ರಗಳೇ "[೫೯] ಎಂದು ಚಿಟ್ಟಿಯವರೇ ಆ ಚಿತ್ರದ ವಿವರಣೆಯನ್ನು ನೀಡಿದ್ದಾರೆ

ಚಿತ್ರ ೯೪ : " ಶ್ರೀ ವೀರೇಶ್ವರ ಶರಣರು ಭಿಕ್ಷಾಟನೆ ಮಾಡುತ್ತ ಬಂದು ಒಂದು ಮನೆಯ ಮುಂದೆನಿಂತಿದ್ದಾರೆ. ಓರ್ವ ಹೆಣ್ಣು ಮಗಳು ತನ್ನ ಎರಡೂ ಬೊಗಸೆಯ ತುಂಬಾ ಹಿಟ್ಟು ತಂದು ಶರಣರಿಗೆ ನೀಡಬೇಕೆಂದಿರುವಾಗ ಅವಳ ಸಣ್ಣಮಗು ಬಂದು ತಾಯಿಯನ್ನು ತಪ್ಪಿಕೊಂಡು " ಅಜ್ಜಗ ನಾ ಹಿಟ್ಟ ನೀಡತೀನಿ ಎನ್ನುವ ಭಾವ "[೬೦] ಇದೆ.

ಈ ಚಿತ್ರ ಚಿಟ್ಟಿಯವರ ಅಭ್ಯಾಸ ಪೂರ್ಣವಾದ (Study type) ರಚನೆಯಾಗಿದೆ. ಇಲ್ಲಿ ಇನ್ನೂ ಅವರದೇ ಆದ ಶೈಲಿ. ತಂತ್ರಗಳನ್ನು ಅಳವಡಿಸದೆ. ಜೆ. ಜೆ. ಶಾಲೆಯ ಪದ್ಧತಿಯಂತೆ ನೈಜವಾಗಿ ಚಿತ್ರಿಸಿದ್ದಾರೆ. ಈ ಚಿತ್ರದಲ್ಲಿ ಹೆಣ್ಣುಮಕ್ಕಳ ಮುಖದಲ್ಲಿಯ ಭಕ್ತಿ. ಮಗುವಿನ ಮುಗ್ಧತೆ. ಶರಣರ ದೃಷ್ಟಿಯಲ್ಲಿ ಕಂಡು ಬರುವ ಸಾತ್ವಿಕತೆ. ಅಲ್ಲಿ ನೆರೆದ ಜನರೆಲ್ಲ ಧನ್ಯಭಾವದಿಂದ ನಮಸ್ಕರಿಸುತ್ತಿದ್ದಾರೆ. ಈ ಚಿತ್ರ ಭಕ್ತಿರಸದಿಂದ ಕೂಡಿದೆ. ಸಂಯೋಜನೆಯಲ್ಲಿ ಕೂಡಾ ಒನ್ನೆಲೆ ನಿಸರ್ಗ ಚಿತ್ರದಂತೆ ಚಿತ್ರಿಸಿದ್ದಾರೆ. ನೆರಳು ಬೆಳಕಿನ ಛಾಯಾಂಕನ. ಇಂತಹ ಮಾಧ್ಯಮದ ಚಿತ್ರಗಳಿಗೆ ಮಾದರಿಯಾಗಿದೆ. ಈ ಚಿತ್ರ ವೀರೇಶ್ವರ ಪುರಾಣದ ಎರಡನೇ ಪುಟದಲ್ಲಿ ಇದೆ. ಹಾಗೂ ಮೂಲ ಚಿತ್ರವನ್ನು ಗುಲಬರ್ಗದ ಗದ್ದುಗೆ ಮಠದಲ್ಲಿ ಈಗ ನೋಡಲು ಸಿಗುತ್ತದೆ. ಇದರ ಅಳತೆ ೨' x ೩'

ಚಿತ್ರ ೯೫ : ಶರಣರು ಅಗ್ನಿ ಪ್ರವೇಶಮಾಡುತ್ತಿರುವ ದೃಶ್ಯ. ಈ ಚಿತ್ರದಲ್ಲಿ " ಶ್ರೀ ವಾರದ ಅಪ್ಪಾಸಾಹೇಬರು. ಬಸಮ್ಮನವರು. ಗೌರಮ್ಮನವರೊಂದಿಗೆ ಹೋಮ ಮಾಡುತ್ತಿರುವ ದೃಶ್ಯ. ಅಗ್ನಿಕುಂಡ ಪ್ರಜ್ವಲಿಸುತ್ತಿದೆ. ಆಗ ಅಲ್ಲಿಗೆ ಭಿಕ್ಷೆಗೆಂದು ಬಂದ ಶ್ರೀ ವೀರೇಶ್ವರ ಶರಣರು ಒಮ್ಮೆಲೆ ಆ ಅಗ್ನಿಕುಂಡದಲ್ಲಿ ಹಾರಿದ್ದು. ತಕ್ಷಣ ಶ್ರೀ ಅಪ್ಪಾಸಾಹೇಬರು. ಬಸಮ್ಮನವರು ಶರಣರನ್ನು ಕೈ ಹಿಡಿದು ಎತ್ತಿದ್ದು. ಶರಣರಿಗೆ ಈರ್ವರು ನಮಿಸಿದ್ದು. ಶರಣರ ಮೈಯಾಗಲಿ ತೊಟ್ಟ ಅರಿವೆಗಳಾಗಲಿ ಸ್ವಲ್ಪವೂ ಸುಟ್ಟಿರಲಿಲ್ಲ. ಆದರೆ ಜೋಳಿಗೆಯಲ್ಲಿ ತಂಬಿಗೆಯೊಳಗಿದ್ದ ಜೋಳ ಸುಟ್ಟು ಕರಕಾಗಿದ್ದವು. ಶರಣರು ನಿಮಗೆ ಸಂತಾನ ಬೇಕೆ ತೆಗೆದುಕೊಳ್ಳಿ ಎಂದು ಕರಕ ಜೋಳದ ಆಶೀರ್ವಾದ ಮಾಡಿದ್ದು. ಹೋಮಮಾಡುವುದು

---

೫೯. ಎಂ. ಎ. ಚಿಟ್ಟಿ : ನೆನಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೩೦

೬೦. ಎಂ. ಎ. ಚಿಟ್ಟಿ : ನೆನಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೩೧



೮೮ ಬಸವಣ್ಣನವರು ವಚನಗಳನ್ನು ರಚಿಸುತ್ತಿರುವದು.



೮೭ ಚಾವುಂಡರಾಯ ಕುದುರೆಯ ಮೇಲೆ ಕುಳಿತದ್ದು.



೮೯ ಭಗವಾನ ಬುದ್ಧನ ಚಿತ್ರ




೯೦ ಬುದ್ಧನು ಅಹಿಂಸಾ ತತ್ವ ಬೋಧಿಸುತ್ತಿರುವದು




೬೧ ಬುದ್ಧ ಹಾಗೂ ಸುಜಾತ.



೯೨ ವೀರರಾಣಿ ಕಿತ್ತೂರ ಚೆನ್ನಮ್ಮ




೯೩ ಶಕುಂತಲೆ ಹಾಗೂ ಸರ್ವದಮನ



೯೪ ವೀರೇಶ ಶರಣರ ಭಿಕ್ಷಾಟನೆ

೯೫ ವೀರೇಶ ಶರಣರು ಅಗ್ನಿ ಪ್ರವೇಶ ಮಾಡುತ್ತಿರುವದು.





ಚಿತ್ರ ೯೬

ಶಾಸ್ತ್ರಗಳ ಲಾಭಕ್ಕಾಗಿ ಎಂಬುದನ್ನು ಶರಣರು ವಿವೇಚಿಸುವ [೬೧] ಚಿತ್ರ. ಚಿತ್ರದ ಎಡಗಡೆಗೆ ದಂಪತಿಗಳು ಶರಣರನ್ನು ಕೈಹಿಡಿದೆತ್ತಿರುವರು ಬಲಗಡೆ ಹೋಮ ನಡೆಸುತ್ತಿರುವ ವಿಪ್ರರು ಗಾಬರಿಯಿಂದ ದೃಶ್ಯ ವೀಕ್ಷಿಸುತ್ತಿದ್ದಾರೆ. ಅವರೆಲ್ಲ ಕಣ್ಣುಗಳಲ್ಲಿ ಭಯ ಹಾಗೂ ಆಶ್ಚರ್ಯ. ದಂಪತಿಗಳ ಮುಖದಲ್ಲಿ ಗಾಬರಿ ಶರಣರ ಶಾಂತ ಚಿತ್ತ ಮುಖಭಾವ ಅತ್ಯಂತ ನೈಜವಾಗಿ ಮೂಡಿಬಂದಿವೆ.

ಚೆಟ್ಟಿಯವರ ಚಿತ್ರಗಳು ಭಾವನಾಪ್ರಧಾನವಾದವು. ಚಿತ್ರದಲ್ಲಿ ಆಗಿನ ಕಾಲದ ಮನೆ ಅದರೊಳಗಿನ ಅಲಂಕಾರವನ್ನು ನೈಜವಾಗಿ ಚಿತ್ರಿಸಿದ್ದಾರೆ. ಈ ಚಿತ್ರವನ್ನು ಪುರಾಣದಲ್ಲಿ ೧೫೩ ನೇ ಪುಟದಲ್ಲಿ ನೋಡಬಹುದು ಅಲ್ಲದೆ ಮೂಲ ಚಿತ್ರ ಗುಲ್ಬರ್ಗಾದ ಗದ್ದುಗೆ ಮಠದಲ್ಲಿ ಇದೆ. ಅಳತೆ ೨' x ೩' ಇರುವುದು.

ಇತ್ತೀಚೆಗೆ ೭-೮-೨೦೦೦ ದಂದು ವಿಜಾಪುರದಲ್ಲಿ ಚೆಟ್ಟಿಯವರನ್ನು ಭೇಟಿ ಆದಾಗ. ಈಗಲೂ ನಿಮಗೆ ಚಿತ್ರರಚಿಸುವಲ್ಲಿ ಆಸಕ್ತಿ ಇದೆಯೇ ? ಎಂದು ಪ್ರಶ್ನಿಸಿದಾಗ ಆಗಿಂದಾಗ್ಗೆ ಒಂದು ಬಿಳಿ ಕಾಗದ ತರಿಸಿ. ಕರಿಬಣ್ಣದ ಸ್ಕೆಚ್ ಪೆನ್‌ನಿಂದ ದೇವರ ಗುಡಿಗೆ ಹೊರಟಿರುವ ಒಬ್ಬ ಹೆಣ್ಣುಮಗಳ ರೇಖಾಚಿತ್ರವನ್ನು ಕ್ಷಣಮಾತ್ರದಲ್ಲಿ ಚಿತ್ರಿಸಿದರು. ಅದೇ ರೇಖೆಗಳ ತೀವ್ರತೆ. ಲಯಬದ್ಧತೆ. ಭಾವನೆ ಮೂಡಿಸುವ ರೀತಿ. ಆ ಚಿತ್ರರಚಿಸುವಾಗ ಅವರ ಕೈ ಸ್ವಲ್ಪವೂ ನಡುಗದ ರೀತಿ ಆಶ್ಚರ್ಯವನ್ನುಂಟು ಮಾಡಿತು.

ಚಿತ್ರ ೯೬ : ಈ ಚಿತ್ರದಲ್ಲಿ ಅವರ ಪ್ರಾರಂಭದ ದೆಸೆಯಲ್ಲಿಯ ಚಿತ್ರಗಳ ನೆನಪನ್ನು ತಂದುಕೊಡುತ್ತದೆ. ಮರಾಠಿ ಶೈಲಿಯಲ್ಲಿ ಆ ಹೆಣ್ಣುಮಗಳು ಸೀರೆ ಉಟ್ಟುಕೊಂಡ ರೀತಿ. ಮೂಗಿನಲ್ಲಿಯ ನತ್ತು. ಹಣೆಯ ಮೇಲೆ ದೊಡ್ಡದಾದ ಕುಂಕುಮ ಪ್ರತಿಯೊಂದು ವಿವರಣೆ ಅವರು ಮುಂಬೈ ಹಾಗೂ ಸೊಲ್ಲಾಪುರದಲ್ಲಿ ಇದ್ದಾಗಿನ ಅಲ್ಲಿಯ ಜನರ ಉಡುಗೆ ತೊಡುಗೆಗಳ ಪ್ರಭಾವ ಅವರ ಸ್ಮೃತಿ ಪಟಲದಲ್ಲಿ ಇನ್ನೂ ಹಾಗೇ ಉಳಿದಿರುವುದನ್ನು ನಾವಿಲ್ಲಿ ಕಾಣಬಹುದು. ಅಲ್ಲದೆ ವೈಜ್ಞಾನಿಕವಾಗಿಯೂ ಸಹಿತ ಇದು ಸತ್ಯವಾಗಿದೆ. ಮನುಷ್ಯನಿಗೆ ವಯಸ್ಸು ಹೆಚ್ಚಾದಂತೆ ಅವರ ಚಿಕ್ಕ ವಯಸ್ಸಿನಲ್ಲಾದ ಘಟನೆಗಳೇ ಇರಲಿ. ಪರಿಸರದ ಪ್ರಭಾವವೇ ಇರಲಿ ಅದು ಹೆಚ್ಚು ಸ್ಮೃತಿಪಟಲದಲ್ಲಿ ಉಳಿಯುತ್ತವೆಯಂತೆ. ಅಂತೆಯೇ ಆ ರೀತಿಯ ಲಕ್ಷಣಗಳು ಈ ೯೪ ರ ಇಳಿವಯಸ್ಸಿನಲ್ಲಿ ರಚಿಸಿದ ಈ ಚಿತ್ರದಲ್ಲಿ ಕಾಣಬಹುದಾಗಿದೆ.

ಚೆಟ್ಟಿಯವರ ರೇಖಾ ಚಿತ್ರಗಳ ಅಧ್ಯಯನದಿಂದ ಕಂಡುಬರುವ ಅಂಶಗಳು :

* ಚೆಟ್ಟಿಯವರು ಪೆನ್ಸಿಲ್. ಇಂಕ ಹಾಗೂ ಚಾರ್ಕೋಲ್ ಮಾಧ್ಯಮದಲ್ಲಿ ರಚಿಸಿದ ಈ ಎಲ್ಲ ಚಿತ್ರಗಳು ವೈವಿಧ್ಯಮಯವಾದ ವಿಷಯಗಳನ್ನೊಳಗೊಂಡಿವೆ.
* ಕೆಲವು ಸಂಪೂರ್ಣ ರೇಖಾ ಚಿತ್ರಗಳಾಗಿವೆ. ಇನ್ನು ಕೆಲವು ದೈನಂದಿನ ಅಂಕನೆ ಚಿತ್ರಗಳಾಗಿವೆ.
* ಈ ಚಿತ್ರಗಳಲ್ಲಿಯ ಆಕೃತಿಗಳು ನೈಜತೆಯಿಂದ ಕೂಡಿದ್ದು ಭಾವಪ್ರಧಾನವಾಗಿವೆ.

---

೬೧. ಎಂ. ಎ. ಚೆಟ್ಟಿ : ನೆನಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೩೦

* ಚಿಟ್ಟಿಯವರು ತಮ್ಮ ಮನಸ್ಸಿನ ಭಾವನೆಗಳನ್ನು ಪರಿಶುದ್ಧವಾದ ಸ್ಥಿತಿಯಲ್ಲಿ ವ್ಯಕ್ತಪಡಿಸಿರುವುದನ್ನು ಇಲ್ಲಿ ಕಾಣುತ್ತೇವೆ.
* ಅವರ ರೇಖೆಗಳಲ್ಲಿ ನೋವು. ನಲಿವು. ಭಯ. ಕಾತರದಂತಹ ಎಲ್ಲ ಭಾವನೆಗಳ ಸಾಂಗತ್ಯವಿದೆ.
* ಕೆಲವು ಆಕೃತಿಗಳ ರೇಖೆಗಳು ಕಡಿದಾಗಿದ್ದರೂ ಲಯ. ಚಲನೆಯಿಂದ ಕೂಡಿವೆ.
* ಪೆನ್ಸಿಲ್ ಮಾಧ್ಯಮದ ರೇಖಾ ಚಿತ್ರಗಳಲ್ಲಿ ಕೂಡ ಛಾಯಾಂಕನೆಯನ್ನು ಮಾಡಿದ್ದಾರೆ.
* ಆಕೃತಿ ಸಂಯೋಜನೆಗಳ ರೇಖಾ ಚಿತ್ರಗಳನ್ನು ತಮ್ಮ ವರ್ಣಚಿತ್ರಗಳಿಗೆ ತಕ್ಕಂತೆ ದುಡಿಸಿಕೊಂಡಿದ್ದಾರೆ.
* ಪಕ್ಷಿ. ಪ್ರಾಣಿಗಳಲ್ಲಿಯೂ ಸಹಿತ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿ ಅವುಗಳ ಶರೀರ ರಚನೆಯ ಅಭ್ಯಾಸದ ಆಳ ಕಂಡುಬರುತ್ತದೆ. ಈ ಚಿತ್ರಗಳು ನಮ್ಮನ್ನು ಭ್ರಮಾಲೋಕಕ್ಕೆ ಕರೆದೊಯ್ಯುತ್ತವೆ.
* ಚಿಟ್ಟಿಯವರು ತಮ್ಮ ಮಾನಸಿಕ ಉದ್ವೇಶದ ತೀವ್ರತೆಯನ್ನು ರೇಖೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ.
* ಸೌಂದರ್ಯ ಪ್ರಜ್ಞೆಯ ಹಿನ್ನೆಲೆಯಲ್ಲಿ ನಿಸರ್ಗ. ವ್ಯಕ್ತಿ. ಸಮಾಜ ಇವುಗಳ ನಿಕಟ ಸಂಬಂಧಗಳ ಸೂಕ್ಷ್ಮತೆಯನ್ನು ಅವರು ಚಿತ್ರಗಳ ಭಾವ ಸಂಚರದ ಮೂಲಕ ಗುರುತಿಸುತ್ತೇವೆ.
* ರೇಖಾಚಿತ್ರಗಳ ಭಾವಚಿತ್ರಗಳಲ್ಲೂ ಚರ್ಮದ ಮೆದುತನ. ಗಡಸು. ಕಣ್ಣಿನಲ್ಲಿ ಜೀವಕಳೆ ಪ್ರಮಾಣ ಬದ್ಧತೆಯ ಅವರ ನಿಪುಣತೆ ಕಾಣುತ್ತೇವೆ. ಮಾಂಸಖಂಡಗಳ ಉಬ್ಬು ತಗ್ಗಿನ ಸರಿಯಾದ ಜ್ಞಾನದ ಅರಿವು ಚಿಟ್ಟಿಯವರು ಚಿತ್ರಿಸಿದ ಭಾವಚಿತ್ರಗಳಲ್ಲಿ ಅತ್ಯಂತ ಉಚ್ಚಮಟ್ಟದಲ್ಲಿ ಸಾಕಾರವಾಗಿತ್ತೆಂಬ ಕುರುಹುಗಳು ಕಂಡು ಬರುತ್ತವೆ.
* ಇವರ ರೇಖಾ ಚಿತ್ರಗಳಲ್ಲಿ ವೇಷ ಭೂಷಣಗಳಿಂದ ಮಾತ್ರವಲ್ಲದೇ ಮುಖ ಲಕ್ಷಣದಿಂದಲೇ ಆತನ ಮತ ಧರ್ಮಗಳನ್ನು ಗುರುತಿಸುವಷ್ಟು ತಾದತ್ಮ್ಯತೆ ಇದೆ.
* ರೇಖಾ ಚಿತ್ರಗಳ ಸಂಯೋಜನೆಗಳಲ್ಲಿ ತಮ್ಮದೇ ಆದ ಶೈಲಿ. ವೈಶಿಷ್ಟ್ಯವನ್ನು ಬೆಳೆಸಿಕೊಂಡು ಬಂದಿದ್ದಾರೆ. ಮನುಷ್ಯಾಕೃತಿಗಳನ್ನು ನೈಜತೆಗಿಂತಲೂ ಸ್ವಲ್ಪ ಉದ್ದವಾಗಿ ಚಿತ್ರಿಸಿದ್ದಾರೆ. ಎಲ್ಲಾ ಚಿತ್ರಗಳು ಸಂಯೋಜನಾ ನಿಯಮಗಳಿಗೆ ಬದ್ಧವಾಗಿವೆ.
* ಕೆಲವು ರೇಖಾ ಚಿತ್ರಗಳು ಭಾವನೆಗಳನ್ನು ಕೆರಳಿಸುವುದಾದರೆ. ಇನ್ನು ಕೆಲವು ಕಥಾನಿರೂಪಣೆಯ ಉತ್ಕೃಷ್ಟತೆಯನ್ನು ತಲುಪಿವೆ. ಕಥೆಯಲ್ಲಿ ಕಾವ್ಯದಲ್ಲಿ ಮೂಡುವ ಪ್ರತಿಮೆಗಳಂತೆ ತಮ್ಮ ರೇಖಾ ವಿನ್ಯಾಸವನ್ನು ನಿರೂಪಿಸದ್ದಾರೆ.
* ಆಕೃತಿಗಳ ವೇಷ ಭೂಷಣಗಳಲ್ಲಿ ಉತ್ತರ ಕರ್ನಾಟಕದ ಲಕ್ಷಣಗಳನ್ನು ಅತ್ಯಂತ ಸುಂದರವಾಗಿ ಚಿತ್ರಿಸಿದ್ದಾರಲ್ಲದೇ. ಆಯಾ ಕಾಲಕ್ಕೆ ಕರೆದುಕೊಂಡು ಹೋಗುವ ಶಕ್ತಿ ಇವರ ಚಿತ್ರಗಳಲ್ಲಿದೆ.
* ಇವರ ರೇಖಾ ಚಿತ್ರಗಳು ಸನ್ನಿವೇಶದ ನಿಜ ಅನುಭವದ ಆನಂದ ನೀಡುತ್ತವೆ. ವ್ಯಕ್ತಿಗಳ ಸಂಯೋಜನೆ. ರೇಖೆಗಳ ಚಲನೆ. ಅಲ್ಲಿ ವ್ಯಕ್ತವಾಗಿರುವ ಜೀವಂತಿಕೆ ವೀಕ್ಷಕನಿಗೂ. ಕಲಾವಿದನಿಗೂ ರಸಾನುಭೂತಿಯ ಆತ್ಮೀಯ ಸಂಬಂಧ ನಿರ್ಮಿಸುವಷ್ಟು ಪರಿಣಾಮಕಾರಿಯಾಗಿವೆ.

* ಕರಡು ಚಿತ್ರದಲ್ಲಿಯೂ ಸಹಿತ ಪ್ರತಿಯೊಂದು ಅಂಶವನ್ನು ವಿವರವಾಗಿ ಚಿತ್ರಿಸಿರುವುದನ್ನು ಕಾಣುತ್ತೇವೆ.
* ಚೆಟ್ಟಿಯವರ ರೇಖಾಚಿತ್ರಗಳನ್ನು ಗಮನಿಸಿದಾಗ ಅವರು ಎಲ್ಲಾ ಧರ್ಮಗಳ ಚಿತ್ರಗಳನ್ನು ಅಷ್ಟೆ ಸಮನ್ವಯ ದೃಷ್ಟಿಯಿಂದ ಚಿತ್ರಿಸಿದ್ದಾರೆ. ಅಷ್ಟೇ ಭಾವನಾತ್ಮಕತೆಯಿಂದ ಕೃತಿಗಳ ರಚನೆ ಮಾಡಿರುವುದು ಅವರ ಪರಧರ್ಮ ಸಹಿಷ್ಣುತೆಯ ವ್ಯಕ್ತಿತ್ವವನ್ನು ತೋರಿಸುತ್ತದೆ.
* ಛಾಯಾಂಕನವಿಲ್ಲದೇ ರಚಿಸಿದ ಚಿತ್ರಗಳಲ್ಲಿ ರೇಖೆಗಳು ನಿಸರ್ಗದಲ್ಲಿಯ ವಸ್ತುಗಳ ಗಾತ್ರದ ಘನತೆಯನ್ನು ತೋರಿಸುವ ಅವರ ಕಲ್ಪನೆ ಘನವಾದುದು.
* ದೈನಂದಿನ ಅಂಕನಗಳಲ್ಲೂ ಸಹಿತ ಸರಳ ರೇಖೆಗಳಿಂದ ಆಕೃತಿಗಳನ್ನು ಅತ್ಯಂತ ಪ್ರಮಾಣ ಬದ್ಧವಾಗಿ ರಚಿಸಿದ್ದು ಇಲ್ಲಿ ಅವರ ರೇಖೆಯ ಓಟದ ಗತಿ ಸ್ಪಷ್ಟವಾಗಿ ಕಾಣಿಸುತ್ತದೆ.
* ತೀವ್ರಗತಿಯ ದೈನಂದಿನ ರೇಖಾ ಚಿತ್ರಗಳಲ್ಲೂ ಸಾಕಷ್ಟು ರೇಖೆಗಳನ್ನು ಎಳೆದಿದ್ದರೂ ನಿಖರ ಆಕೃತಿಗಳಿಗೆ ಎಲ್ಲಿಯೂ ಕುಂದಿಲ್ಲ ಆಕೃತಿಗಳು ಸ್ಪಷ್ಟವಾಗಿ ಸ್ಫುಟವಾಗಿ ಇವೆ. ಹೀಗೆ ರೇಖೆಗಳಲ್ಲಿ ಪ್ರಭುತ್ವವನ್ನು ಸಾಧಿಸಿದ್ದಾರೆ.
* ಶಿಲ್ಪಗಳ ರೇಖಾಚಿತ್ರಗಳಲ್ಲೂ ಸಹಿತ ಕಲ್ಲಿನ ಕಠಿಣತೆಯನ್ನು ಮೆದುಗೊಳಿಸಿದ ರೀತಿ. ಲಯಬದ್ಧತೆ. ಚಲನೆ ಮನವನ್ನಾಕರ್ಷಿಸುತ್ತವೆ.

ಹೀಗೆ ಚೆಟ್ಟಿಯವರು ತಮ್ಮ ಮನಸ್ಸನ್ನಾಕರ್ಷಿಸಿದ ಪ್ರತಿಯೊಂದು ವಸ್ತುವಿನ ರೇಖಾ ಚಿತ್ರಮಾಡಿದ್ದಾರೆ. ನಿಂತ ವಸ್ತುವೇ ಇರಲಿ. ಚಲಿಸುವ ವಸ್ತುವೇ ಇರಲಿ. ಕಲ್ಪನೆಯಾಗಿರಲಿ. ಹಲವಾರು ವಿಷಯಗಳನ್ನೂ ತಮ್ಮ ರೇಖೆ ಮತ್ತು ಲಯದ ಬಂಧನಕ್ಕೆ ಒಲಿಸಿಕೊಂಡಿದ್ದುದನ್ನು ಅವರ ಈ ಎಲ್ಲಾ ರೇಖಾಚಿತ್ರಗಳ ಅಧ್ಯಯನದಿಂದ ತಿಳಿದುಬರುತ್ತದೆ.

ಅಧ್ಯಾಯ ಆರು

ಚೆಟ್ಟಿಯವರ ವರ್ಣಚಿತ್ರಗಳು



ಕಲಾವಿದನು ನಿರ್ಮಿಸಿದ ಕಲಾಕೃತಿಯ ಆಕಾರ. ವರ್ಣ. ಎತ್ತರ. ಅಗಲ. ಆಳ. ಬೇರೆ ಬೇರೆಯಾಗಿದ್ದರೂ ಎಲ್ಲದರಲ್ಲೂ ರೇಖೆ ಮತ್ತು ವರ್ಣಗಳೇ ಆಟವಾಡುತ್ತವೆ. ಆದರೂ " ಕಲಾಕೃತಿಯೊಂದು ತನ್ನ ಇನ್ನಿತರ ಅಂಶಗಳಿಗಿಂತಲೂ ವರ್ಣಸಂಯೋಜನೆಯ ತೀವ್ರತೆಯಿಂದ ನೋಡುಗನ ಪ್ರಜ್ಞೆಯನ್ನು ಕ್ಷಣಾರ್ಧದಲ್ಲಿ ಪ್ರಭಾವಿಸಬಲ್ಲದು. ನಮ್ಮ ಪಂಚೇಂದ್ರಿಯಗಳಲ್ಲಿ ಕಣ್ಣು ಅತ್ಯಂತ ಸಂವೇದನಾಶೀಲತೆಯನ್ನು ಹೊಂದಿದೆ. ಕಲಾವಿದನೊಬ್ಬ ತನ್ನ ಅಭಿವ್ಯಕ್ತಿಗೆ ಆರಿಸಿಕೊಳ್ಳುವ ಬಣ್ಣಗಳ ಛಾಯೆಗಳು. ಅವನು ನೋಡುವ ಕಣ್ಣಿನ ಅನುಭವ - ಅಭ್ಯಾಸ. ಮನಸ್ಸಿನ ಪಕ್ವತೆ ಭಾವನೆಗಳ ತೀವ್ರತೆಯನ್ನು ಅವಲಂಬಿಸಿರುತ್ತವೆ. "[೧] ಎಂಬ ಮಾತು ಚಿಟ್ಟಿಯವರಿಗೆ ತುಂಬಾ ಅನ್ವಯಿಸುತ್ತವೆ.

ವರ್ಣಗಳು ತಮ್ಮದೇ ಆದ ಸಾಂಕೇತಿಕ ಅರ್ಥವನ್ನು ಹೊಂದಿವೆ. ಒಂದೊಂದು ಬಣ್ಣವು ಒಂದೊಂದು ರೀತಿಯ ಭಾವೋದ್ವೇಗವನ್ನು ಮನಸ್ಸಿನಲ್ಲಿ ಮೂಡಿಸುತ್ತವೆ. ಅಂತೆಯೇ ಚಿತ್ರಗಳಲ್ಲಿ " ಬಣ್ಣ ಆಕಾರಗಳು ಆ ಸೃಷ್ಟಿಯ ಅತ್ಯುತ್ಕೃಷ್ಟವಾದ ಅಂಶಗಳು. ಬಣ್ಣಗಳ ವಿವಿಧ ಛಾಯಾಮಾಲೆ ಕಲಾವಿದನ ವಿವಿಧ ಭಾವೋದ್ರೇಕಗಳೊಂದಿಗೆ ಹೊಂದಿಕೊಳ್ಳಬಲ್ಲವು. ಕೆಂಪು ಆಕ್ರೋಶಕ್ಕೆ. ಹಳದಿ ಸಂತೋಷಕ್ಕೆ. ನೀಲಿ ಹಾತೊರೆಯುವಿಕೆಗೆ "[೨] ಹೀಗೆ ಕಲಾವಿದನು ತನ್ನ ಕಲಾಕೃತಿಯಲ್ಲಿ ವರ್ಣಸಂಯೋಜನೆಯನ್ನು ಆಳ. ಪ್ರಖರತೆ ಹಾಗೂ ನೆರಳು ಬೆಳಕುಗಳ ವಿನ್ಯಾಸಕ್ಕನುಸಾರವಾಗಿ ತನ್ನ ಭಾವನೆಗಳ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ದುಡಿಸಿಕೊಳ್ಳುತ್ತಾನೆ.

ವರ್ಣಚಿತ್ರಗಳನ್ನು ಅವುಗಳ ರಚನೆಗಳಿಗಾಗಿ ಬಳಸಿದ ವರ್ಣಮಾಧ್ಯಮದ ಮೇಲಿಂದ ಜಲವರ್ಣ. ತೈಲವರ್ಣ ಹಾಗೂ ಪೆಸ್ಟಲ್ ವರ್ಣಗಳೆಂದು ಮೂರು ವಿಧಗಳಲ್ಲಿ ವರ್ಗೀಕರಿಸಬಹುದು. ಅವುಗಳ ವಿಷಯದ ಮೇಲೆ ಅವುಗಳನ್ನು ಮತ್ತೆ ವರ್ಗೀಕರಿಸಬಹುದು. ಅದನ್ನು ಮುಂದಿನ ಪುಟದಲ್ಲಿ ಕೊಡಲಾಗಿದೆ.

---

೧. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಚಿತ್ರಕಲಾ ಪ್ರಪಂಚ. ಪುಟ ೫೬೧

೨. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಚಿತ್ರಕಲಾ ಪ್ರಪಂಚ. ಪುಟ ೫೬೨

ವರ್ಣಚಿತ್ರಗಳು

೧) ಜಲವರ್ಣ ಮಾಧ್ಯಮದ ವರ್ಣಚಿತ್ರಗಳು

I) ಭಾವ ಚಿತ್ರಗಳು

II) ಜೀವ ಮಾದರಿಯ ಚಿತ್ರಗಳು

III) ನಿಸರ್ಗ ಚಿತ್ರಗಳು

IV) ಸಯೋಜನಾ ಚಿತ್ರಗಳು

i) ಧಾರ್ಮಿಕ ವಿಷಯಗಳನ್ನು ಕುರಿತಾದ ಚಿತ್ರಗಳು

ii)ಸಾಮಾಜಿಕ ಕಾಲ್ಪನಿಕ ಚಿತ್ರಗಳು

iii) ಬೌದ್ಧ ಧರ್ಮದ ಚಿತ್ರಗಳು

iv) ಪುರಂದರದಾಸರ ಜೀವನ ಚರಿತ್ರೆಯಲ್ಲಿಯ ಘಟನೆಗಳ ಚಿತ್ರಗಳು

v) ಪುರಾಣ ವಸ್ತುಗಳ ಹಾಗೂ ಕೆಲವು ಮಠಗಳಲ್ಲಿಯ ಚಿತ್ರಗಳು

vi) ಹುಬ್ಬಳ್ಳಿಯ ಮೂರುಸಾವಿರ ಮಠ ಪ್ರಕಟಿಸಿದ ಶಿವಶರಣರ ಪುಸ್ತಕಗಳ ಮುಖಪುಟಗಳ ಚಿತ್ರಗಳು

vii) ಶ್ರವಣಬೆಳಗೊಳದ ಭಿತ್ತಿಚಿತ್ರಗಳ ಪ್ರತಿಕೃತಿಗಳು

V) ಪ್ರಾಣಿಯ ಚಿತ್ರ

೨) ತೈಲವರ್ಣ ಮಾಧ್ಯಮದ ವರ್ಣಚಿತ್ರಗಳು

೧) ಭಾವಚಿತ್ರ

i) ರೂಪದರ್ಶಿಗಳನ್ನು ಬಳಸಿದ ಭಾವಚಿತ್ರಗಳು

ii) ಛಾಯಾಚಿತ್ರಗಳನ್ನು ಆಧರಿಸಿ ಚಿತ್ರಿಸಿದ ಭಾವಚಿತ್ರಗಳು

೨) ಜೀವಮಾದರಿ ಚಿತ್ರಗಳು (Life painting)

I) ರೂಪದರ್ಶಿಗಳನ್ನು ಬಳಸಿಕೊಂಡು ಚಿತ್ರಿಸಿದ ಜೀವಮಾದರಿ ಚಿತ್ರಗಳು

i) ಕುಳಿತ ರೂಪದರ್ಶಿಗಳ ಚಿತ್ರಗಳು

ii) ಆಸನ ಅಥವಾ ಕಟ್ಟೆಯ ಮೇಲೆ ಕುಳಿತಂಥ ವಿವಿಧ ಭಂಗಿಯ ಚಿತ್ರಗಳು

iii) ನಿಂತುಕೊಂಡ ರೂಪದರ್ಶಿಗಳ ಚಿತ್ರಗಳು

II) ಛಾಯಾಚಿತ್ರಗಳನ್ನು ಆಧರಿಸಿ ರಚಿಸಿದ ಜೀವಮಾದರಿ ಚಿತ್ರಗಳು

i) ಕೆಳಗೆ ಕುಳಿತ ಚಿತ್ರಗಳು

ii) ಆಸನದ ಮೇಲೆ ಕುಳಿತ ಚಿತ್ರಗಳು

iii) ನಿಂತಿರುವ ಜೀವಮಾದರಿ ಚಿತ್ರಗಳು

೩) ನಿಸರ್ಗ ಚಿತ್ರಗಳು

೪) ಸಂಯೋಜನಾ ಚಿತ್ರಗಳು

i) ಧಾರ್ಮಿಕ ಚಿತ್ರಗಳು

ii) ಸಾಮಾಜಿಕ ಚಿತ್ರಗಳು

೫) ಸ್ಥಿರವಸ್ತು ಚಿತ್ರಣ

೬) ಪ್ರಾಣಿಯ ಚಿತ್ರ

೩) ಪೆಸ್ಟಲ್ ಮಾಧ್ಯಮದ ವರ್ಣಚಿತ್ರಗಳು

ಚೆಟ್ಟಿಯವರು ಬಣ್ಣಗಳನ್ನು ತಮ್ಮ ಚಿತ್ರಗಳಲ್ಲಿ ಕೆಲವೊಮ್ಮೆ ಸಾಂಕೇತಿಕವಾಗಿ ಇನ್ನು ಕೆಲವು ಸಾರಿ ಸಂಯೋಜನೆಗನುಗುಣವಾಗಿ ಬಳಸಿಕೊಂಡಿದ್ದಾರೆ. ಜಲವರ್ಣ. ತೈಲವರ್ಣ ಹಾಗೂ ಪೆಸ್ಟಲ್ ವರ್ಣಗಳಿಂದ ಕಲಾಕೃತಿಗಳ ರಚನೆ ಮಾಡಿದ್ದಾರೆ. ಬಹುಷಃ ಅವರ ಕಾಲಕ್ಕೆ ಇನ್ನೂ ಅಕ್ರಲಿಕ್ ಮಾಧ್ಯಮ ಅಷ್ಟೊಂದು ಪ್ರಚಲಿತದಲ್ಲಿಲ್ಲದೇ ಇರುವುದರಿಂದ ಇವರು ಆ ಮಾಧ್ಯಮದಲ್ಲಿ ಕಲಾಕೃತಿಗಳನ್ನು ರಚಿಸಲಿಲ್ಲವೆಂದು ಕಾಣುತ್ತದೆ. ಅಥವಾ ಆ ಮಾಧ್ಯಮದ ಬಗ್ಗೆ ಆಸಕ್ತಿ ಇರದೆಯೂ ಇರಬಹುದು.

ಒಂದು ಕಲಾಕೃತಿಯ ರಸಗ್ರಹಣ ಸಹೃದಯನಿಗೆ ತಲುಪಬೇಕಾದರೆ. " ಕಲಾಕೃತಿಯಲ್ಲಿ ರೇಖೆ. ವರ್ಣ ಮತ್ತು ಅವಕಾಶ (Space) ದ ಮೇಲೆ ಇರುತ್ತದೆ. ಚಿತ್ರಕಲೆಯಲ್ಲಿ ಆಯ್ಕೆಗೆ ಅವಕಾಶವಿರುವದಿಲ್ಲ. ಆದರೆ. ವರ್ಣಸಂಯೋಜನೆ. ರೇಖೆಗಳ ಲಯಾತ್ಮಕತೆ. ರಂಗುಗಳ ಘನತ್ವ ಮತ್ತು ತೆಳುತನ ಕುಂಚಗಳ ಹರಿದಾಟ ಮತ್ತು ಒತ್ತು ಇಂಥ ವಿವಿಧ ಕಾರಣಗಳಿಂದ ಒಂದು ಕೃತಿಯಲ್ಲಿ ಅದ್ಭುತ ಆಳ. ಆಕರ್ಷಕತೆ ಮತ್ತು ಅರ್ಥವಂತಿಕೆ ತರಲು ಸಾಧ್ಯವಾಗುತ್ತದೆ. ಹೀಗಾದಲ್ಲಿ ಕಲಾಕೃತಿ ಅತ್ಯಂತ ಪ್ರಮುಖತೆಯನ್ನು ಪಡೆದು. ಅದರಲ್ಲಿನ ಸಂವಹನ ಶಕ್ತಿ ಪ್ರಭಾವ ಶಾಲಿಯಾಗಿರುತ್ತದೆ: ಇಲ್ಲಿ ಚಿತ್ರಗ್ರಹಣ ಪ್ರಕ್ರಿಯೆ ಸರಳವಾಗುತ್ತದೆ.[೩] ಇಂತಹ ಸಂಯೋಜನೆಯ ಅಂಶಗಳನ್ನು ಚೆಟ್ಟಿಯವರ ಕಲಾಕೃತಿಯಲ್ಲಿ ಕಾಣುತ್ತೇವೆ.

೧. ಜಲವರ್ಣ ಮಾಧ್ಯಮದ ವರ್ಣಚಿತ್ರಗಳು :

ಜಲವರ್ಣ ಚಿತ್ರಗಳನ್ನು ಸಾಮಾನ್ಯವಾಗಿ ಕಾಗದಗಳ ಮೇಲೆ. ಕೆಲವು ವೇಳೆ ರೇಷ್ಮೆ ಬಟ್ಟೆ. ಹಸ್ತಿದಂತ ಇಲ್ಲವೇ ಎಲುಬುಗಳ ಮೇಲೆ ಚಿತ್ರಿಸುತ್ತಾರೆ. ಬಣ್ಣಗಳನ್ನು ನೀರಿನಲ್ಲಿ ಮಿಶ್ರ ಮಾಡಿ ಚಿತ್ರಗಳನ್ನು ಚಿತ್ರಿಸುವುದೇ ಜಲವರ್ಣ ವಿಧಾನ. "ಬಹುದಿನಗಳಿಂದಲೂ ರೇಖಾಚಿತ್ರಗಳಿಗೆ ಜಲವರ್ಣಗಳಿಂದ ಮುಕ್ತಾಯ ಸ್ಪರ್ಶಗಳನ್ನು ಕೊಡಲಾಗುತ್ತಿತ್ತೆಂಬುದನ್ನು"[೪] ಲಿಯೋನಾರ್ಡೊ ಡಾವಿನ್ಸಿ ಮತ್ತು ಡ್ಯೂರರ್ ಅವರ ಅಸಂಖ್ಯಾತ ರೇಖಾಚಿತ್ರಗಳಿಂದ ತಿಳಿಯಬಹುದಾಗಿದೆ. ಮೊದಲಿನಿಂದ ಈಗಿನವರೆಗೂ ಈ ಜಲವರ್ಣವನ್ನೆ ಅತ್ಯಂತ ಪರಿಣಾಮಕಾರಿಯಾಗಿ ಕಲಾವಿದರು ದುಡಿಸಿಕೊಂಡಿದ್ದಾರೆ. " ಚಿಕಣಿ ಚಿತ್ರಕಲಾ ಪ್ರಕಾರದಿಂದ ಬಳಕೆಯಲ್ಲಿದ್ದು ಉಸಿರು ಹಿಡಿದು ಬದುಕುವ ಹೋರಾಟ ನಡೆಸಿದ್ದ ಈ ಮಾಧ್ಯಮ ೧೬ ಮತ್ತು ೧೮ ನೆಯ ಶತಮಾನಗಳ ನಡುವೆ ತನ್ನದೇ ಆದ ವಿಶಿಷ್ಟತೆಯಿಂದ ಮರುಹುಟ್ಟನ್ನು ಪಡೆಯಿತು. ೧೯ ನೇ ಶತಮಾನದ ಆರಂಭದಲ್ಲಿ ಇಂಗ್ಲೆಂಡಿನ ಕಲಾವಿದರು ಮುಖ್ಯವಾಗಿ ಟರ್ನರ್‌ರಂಥ ಕಲಾವಿದರು ಇಂದು ನಾವು ತಿಳಿದಿರುವ ರೀತಿಯಲ್ಲಿ ಜಲವರ್ಣಗಳನ್ನು ಬಳಸಿಕೊಂಡರು. "[೫]

ಜಲವರ್ಣದಲ್ಲೇ ಇನ್ನೊಂದು ವಿಧಾನ ಒಪೇಕ್. ಇಲ್ಲಿ ಪಾರದರ್ಶಕತೆ ಇವುವದಿಲ್ಲ ಆದ್ದರಿಂದ ಇಲ್ಲಿ ಬಿಳಿಯ ಬಣ್ಣವನ್ನು ಇತರ ಬಣ್ಣಗಳೊಂದಿಗೆ ಮಿಶ್ರಮಾಡಲಾಗುತ್ತದೆ. " ಮಧ್ಯಕಾಲೀನ ಯುಗಾಂತ್ಯದಲ್ಲಿ ಮತ್ತು ೧೬ ನೆಯ

---

೩. ಚಂದ್ರಕಾಂತ ಕುಸನೂರ : ಅನುಭವ ಮತ್ತು ಅನುಭಾವ. ಪುಟ ೧೦ - ೪

೪. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಕಲಾಕೋಶ. ಪುಟ ೧೬೧

೫. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಚಿತ್ರಕಲಾ ಪ್ರಪಂಚ. ಪುಟ ೫೭೦

ಹಾಗೂ ೧೪ ನೆಯ ಶತಮಾನಗಳ ಗಾಥಿಕ್ ಸೃಷ್ಟಿಯಲ್ಲಿಯೇ ಅಲ್ಲದೆ ಪರ್ಷಿಯನ್ ಮತ್ತು ನಮ್ಮ ದೇಶದ ಚಿಕಣಿ ಚಿತ್ರಗಳಲ್ಲಿ ಇದನ್ನು ದುಡಿಸಿಕೊಳ್ಳಲಾಗಿದೆ.[೬] ಇಂದಿಗೂ ಇದು ಬಳಕೆಯಲ್ಲಿದೆ. ಹೀಗೆ ಈ ಎರಡು ಪ್ರಕಾರದ ಜಲವರ್ಣದ ಚಿತ್ರಗಳನ್ನು ಚೆಟ್ಟಿಯವರು ರಚಿಸಿದ್ದಾರೆ. ಇದು ಅತ್ಯಂತ ಉತ್ತಮವಾದ ಮಾಧ್ಯಮವಾಗಿದೆಯಲ್ಲದೇ ಅಷ್ಟೇ ಕಠಿಣವಾದ ಮಾಧ್ಯಮವಾಗಿದೆ. ಭಾರತದಲ್ಲಿ ಮೊದಲಿನಿಂದಲೂ ಜಲವರ್ಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ. ಗುಹಾಚಿತ್ರಗಳಿಂದ ಹಿಡಿದು. ಭಿತ್ತಿಚಿತ್ರಗಳು. ತಾಳೆಯೋಲೆ. ಕಾಗದಗಳ ಮೇಲಿನ ಚಿತ್ರಗಳು ಜಲವರ್ಣದಲ್ಲಿಯೇ ರಚಿತವಾಗಿವೆ. ಚಿತ್ರಕಲೆಯ ಶಾಸ್ತ್ರಗ್ರಂಥಗಳು ಜಲವರ್ಣದ ಪುಡಿಗಳನ್ನು ಮಾಡಿಕೊಳ್ಳುವ ಬಗ್ಗೆ ಅನೇಕ ವಿಧಾನಗಳನ್ನು ತಿಳಿಸುತ್ತವೆ."[೭] ಈಗೆಲ್ಲ ರಾಸಾಯನಿಕ ಪದಾರ್ಥಗಳನ್ನೇ ಬಳಸಿ ಈ ಬಣ್ಣಗಳನ್ನು ತಯಾರಿಸುವ ಅನೇಕ ಕಂಪನಿಗಳಿವೆ. ಅದೇ ಬಣ್ಣಗಳನ್ನು ಕಲಾವಿದ ನೇರವಾಗಿ ಬಳಸಬಹುದಾಗಿದೆ.

ಕಲಾಗುರುಗಳಾದ ದುರಂಧರ ಹಾಗೂ ತಾಸ್ಕರ್ ಅವರಿಂದ ಜಲವರ್ಣ ಚಿತ್ರರಚನೆಯ ತಂತ್ರವನ್ನು ಅರಿತ ಶ್ರೀ ಎಂ. ಎ. ಚೆಟ್ಟಿಯವರು ಈ ಮಾಧ್ಯಮದಲ್ಲಿ ಅದ್ಭುತ ಸಾಧನೆ ಮಾಡಿದ ಕಲಾವಿದರು. ಅಕಾಡೆಮಿಕ್ ಶೈಲಿಯನ್ನು ರೂಢಿಸಿಕೊಂಡು ಬಂದ ಚೆಟ್ಟಿಯವರು ಜಲವರ್ಣಗಳನ್ನು ಪ್ರಯೋಗಿಸಿ ಅಭಿವ್ಯಕ್ತಿಗೊಳಿಸಿದ ಚಿತ್ರಗಳು ಅನೇಕ. ಪಾರದರ್ಶಕ ಜಲವರ್ಣಗಳಲ್ಲಿ ಬಿಳುಪನ್ನು ಬಳಸುವುದಿಲ್ಲ. ವರ್ಣದ ಬಿಳುಪನ್ನು ಕುಂಚದಿಂದಲೇ ನಿಯಂತ್ರಿಸುವುದನ್ನು ಕರಗತ ಮಾಡಿಕೊಂಡಿದ್ದಾರೆ. ಜಲವರ್ಣದ ಚಿತ್ರಗಳನ್ನು ರಚಿಸುವದೆಂದರೆ ಕಲಾವಿದನಿಗೊಂದು ಸವಾಲು ಇದ್ದಂತೆ. ಆಗ ಒದ್ದೆ ತಂತ್ರ (wash) ದಲ್ಲಿಯೇ ಹೆಚ್ಚು ಜಲವರ್ಣ ಚಿತ್ರಗಳನ್ನು ರಚಿಸುತ್ತಿದ್ದರು. ಚೆಟ್ಟಿಯವರೂ ಕೂಡಾ ರಚಿಸಿದ್ದಾರೆ. "ಒದ್ದೆ ತಂತ್ರ ಕಲಾವಿದನಿಗೆ ಒಂದು ಸವಾಲಿನಂತೆ. ನೀರಿನಿಂದ ಒದ್ದೆ ಮಾಡಿದ ಕಾಗದದ ಮೇಲೆ ಬಣ್ಣ ಚೆಲ್ಲಿದಾಗ ಅವು ಎಲ್ಲೆಂದರಲ್ಲಿ ಓಡಾಡತೊಡಗುತ್ತವೆ. ಅವನ್ನು ತಹಬಂದಿಗೆ ತರುವ ಹಂತದಲ್ಲಿ ಕಲಾವಿದ ಸಾಕಷ್ಟು ಕಸರತ್ತು ಮಾಡಬೇಕಾಗುತ್ತದೆ. ಇದಕ್ಕೆ ಸಾಕಷ್ಟು ಪರಿಶ್ರಮ ಹಾಗೂ ತಾಲೀಮು ಬೇಕಾಗುತ್ತದೆ."[೮] ಅಂತಹ ಒಂದು ಸಾಧನೆ ಚೆಟ್ಟಿಯವರಲ್ಲಿತ್ತು. ಪುರಾಣ ಗ್ರಂಥಗಳಲ್ಲಿ ಚಿತ್ರಿತಗೊಂಡ ಶರಣರ ಜೀವನ ನಮ್ಮ ಕಣ್ಣ ಮುಂದೆ ಕಟ್ಟಿ ನಿಲ್ಲುವಂತೆ ರಚಿಸಿದ ಕಲಾಕೃತಿಗಳೆಲ್ಲ ಜಲವರ್ಣದಲ್ಲೇ ರಚಿಸಿದ್ದುವು. ಹೆಚ್ಚಾಗಿ ಕಲಾವಿದರು ಜಲವರ್ಣಗಳನ್ನು ನಿಸರ್ಗ ಚಿತ್ರ ರಚಿಸಲು ಬಳಸುತ್ತಾರೆ. ಆದರೆ ಚೆಟ್ಟಿಯವರು ಎಲ್ಲಾ ವಿಷಯಗಳನ್ನೂ ಅಂದರೆ ಭಾವಚಿತ್ರ. ಜೀವಮಾದರಿ ಚಿತ್ರ. ನಿಸರ್ಗಚಿತ್ರ ಹಾಗೂ ಸಂಯೋಜನಾ ಚಿತ್ರಗಳನ್ನು ಧಾರಾಳವಾಗಿ ರಚಿಸಿದ್ದಾರೆ. ಇದರಿಂದ ಜಲವರ್ಣಗಳ ಮೇಲಿನ ಅವರ ಹಿಡಿತ ಹಾಗೂ ಪ್ರೌಢಿಮೆಯ ಅರಿವಾಗುತ್ತದೆ.

I) ಭಾವಚಿತ್ರಗಳು :

ಚಿತ್ರ ೧ : ಇಮೊಂದು ಭಾವಸಾರ ಕ್ಷತ್ರಿಯ ಮನೆತನದ ಸ್ವಲ್ಪ ವಯಸ್ಸಾದ ಹೆಣ್ಣುಮಗಳ ಚಿತ್ರ. ಈ ಚಿತ್ರದಲ್ಲಿ ಆ ಧರ್ಮದವರ ಸಂಸ್ಕೃತಿಯ ಎಲ್ಲ ಚಿಹ್ನೆಗಳು ಎದ್ದು ಕಾಣುತ್ತವೆ. ಹಣೆಯ ಮೇಲೆ ಅಡ್ಡವಾಗಿ ಹಚ್ಚಿದ

---

೬. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಚಿತ್ರಕಲಾ ಪ್ರಪಂಚ. ಪುಟ ೫೭೦

೭. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಕಲಾಕೋಶ. ಪುಟ ೧೬೨

೮. ಕಾಸರವಳ್ಳಿ. ಕೆ. ಜಿ. ರಮೇಶ್ : ಜೆ. ಎಸ್. ಶೆಣೈ. ಪುಟ ೧೬

ಕುಂಕುಮ, ಮೂಗಿನಲ್ಲಿ ನತ್ತು. ಕೊರಳಲ್ಲಿಯ ಟೀಕೆಸರ. ಮುಖದಲ್ಲಿ ಸೂಕ್ಷ್ಮ ನೆರಳು - ಬೆಳಕಿನ ಸಂಯೋಜನೆಯನ್ನೂ ಜಲವರ್ಣದಲ್ಲಿ ಅತ್ಯಂತ ಸೂಕ್ಷ್ಮವಾಗಿ ತೋರಿಸಿದ್ದಾರೆ. ಚರ್ಮದ (skin) ಅನುಭವ ನೀಡುವ ರೀತಿಯಲ್ಲಿ ಬಣ್ಣವನ್ನು ತೆಳುವಾಗಿ ಲೇಪಿಸಿದ್ದಾರೆ. ಸೀರೆಯ ಮಡಿಕೆಯಲ್ಲಿಯ ಬಣ್ಣಗಳು ಮಾಸದಂತೆ ಹೊಸತನವನ್ನು ನೀಡುತ್ತಿವೆ. ಕಣ್ಣಿನಲ್ಲಿ ಜೀವ ತುಂಬಿಕೊಂಡಿದೆ. (ಅಧ್ಯಾಯ ಏಳರಲ್ಲಿಯ ೧೧ ನೇ ಚಿತ್ರವನ್ನು ನೋಡಿರಿ)

II) ಜೀವಮಾದರಿಯ ಚಿತ್ರಗಳು :

ಈ ಮಾಧ್ಯಮದ ಜೀವಮಾದರಿಯ ಚಿತ್ರಗಳನ್ನೆಲ್ಲ ರೂಪದರ್ಶಿಯನ್ನು ಬಳಸಿಕೊಂಡೆ ಚಿತ್ರಿಸಿದ್ದಾರೆ. ಇಲ್ಲಿ ರೂಪದರ್ಶಿಯ ಒಟ್ಟಾರೆ ವ್ಯಕ್ತಿತ್ವದ ಗುಣವನ್ನು ಕಾಣುತ್ತೇವೆ.

ಚಿತ್ರ ೨ : ಇದು ಒಬ್ಬ ಸಾಧುವಿನ ಚಿತ್ರವಾಗಿದ್ದು ಇಲ್ಲಿ ಆತನು ಧರಿಸಿದ ಕಾವಿ ಬಣ್ಣದ ಬಟ್ಟೆಯಲ್ಲಿ ಮೂಡಿದ ತಾಜಾತನ. ಮುಖದಲ್ಲಿ ಶಾಂತಕಳೆ ವಯಸ್ಸಿನ ನಿಖರತೆಯನ್ನು ಸೂಚಿಸುವ ಬಿಳಿ ಗಡ್ಡ ಮೀಸೆ ತಲೆಯ ಮೇಲಿನ ರುಮಾಲು ಹಿನ್ನೆಲೆಯ ಭಿತ್ತಿಯ ಆವರಣವು ಅತ್ಯಂತ ಸಹಜತೆಯಿಂದ ವಾಸ್ತವ ನೆಲೆಯಲ್ಲಿದ್ದು ಕೃತಿಗೆ ಮೆರುಗು ತಂದಿದೆ. ಚಿಟ್ಟಿಯವರ ಜಲವರ್ಣದ ಕಲಾ ಪ್ರೌಢಿಮೆಗೆ ಸಾಕ್ಷಿಯಾಗಿದೆ. ೨೨" X ೩೦" ರ ಅಳತೆಯಲ್ಲಿರುವ ಇದು ಚಿಟ್ಟಿಯವರ ಸಂಗ್ರಹದಲ್ಲಿದೆ.

ಚಿತ್ರ ೩ : ಮಣ್ಣಿನ ಕೊಡ ಹಿಡಿದುಕೊಂಡು ಕುಳಿತ ಲಂಬಾಣಿ ಮಹಿಳೆ. ಈ ಕೃತಿಯಲ್ಲಿ ಚಿಟ್ಟಿಯವರ ವರ್ಣಬಳಕೆಯ ನಿರ್ವಹಣೆ ಬೆರಗುಗೊಳಿಸುತ್ತದೆ. ಮುಖದಲ್ಲಿಯ ಮಂದಹಾಸ. ಆಭರಣಗಳ ನೈಜತೆ. ಬಟ್ಟೆಯಲ್ಲಿ. ತುಂಡು ಬಟ್ಟೆಗಳಿಂದ ಅಲಂಕರಿಸಿದ ನಕ್ಷೆ. ಕೈಯಲ್ಲಿಯ ದಂತದ ಬಳೆಗಳು. ಕಾಲಲ್ಲಿ ಬೆಳ್ಳಿ ಕಡಗ. ಹೊದ್ದುಕೊಂಡ ದಾವಣಿಗೆ ಹಚ್ಚಿದ ನಾಣ್ಯಗಳು. ಮಣ್ಣಿನ ಕೊಡದ ಅನುಭವ ನೀಡುವಲ್ಲಿ ವರ್ಣಲೇಪನ ಈ ಕೃತಿಯ ಮೌಲ್ಯವನ್ನು ವೃದ್ಧಿಗೊಳಿಸುತ್ತದೆ. ಅಳತೆ ೨೨" X ೩೦" ಚಿಟ್ಟಿಯವರ ಸಂಗ್ರಹದಲ್ಲಿದೆ.

ಚಿತ್ರ ೪ : ವಯಸ್ಸಾದ ಮುದುಕ ನೆಲದ ಮೇಲೆ ಕುಳಿತ ಚಿತ್ರ. ತಲೆಗೆ ಸುತ್ತಿಕೊಂಡ ರುಮಾಲು. ಹಾಕಿಕೊಂಡ ಬಿಳಿ ಅಂಗಿ ಹಾಗೂ ಧೋತರಗಳಿಗೆ ಬೇರೆ ಬೇರೆ ವರ್ಣಗಳಿಂದ ಛಾಯಾಂಕಣ ರಚಿಸಿದ್ದಾರೆ. ಇದೊಂದು ವಿಶೇಷ. ಮುಖದಲ್ಲಿ ನೆರಳು - ಬೆಳಕಿನ ವಿಂಗಡಣೆ ಕಣ್ಣಿನಲ್ಲಿ ಜೀವಂತಿಕೆ. ನೈಜವಾಗಿ ಮೂಡಿಬಂದಿದೆ. ಆತನು ಕುಳಿತಂತ ಭಂಗಿ ಆತನ ಠಿವಿಯನ್ನು ಪ್ರದರ್ಶಿಸುತ್ತಿದೆ. ಅಳತೆ ೨೨" X ೩೦" ಚಿಟ್ಟಿಯವರ ಸಂಗ್ರಹದಲ್ಲಿ ಕಾಯ್ದಿಡಲಾಗಿದೆ.

ಭಾವ ನಿಖರತೆಯೇ ಇವರ ವ್ಯಕ್ತಿಚಿತ್ರಗಳ ಹೆಗ್ಗುರುತು. ಆದ್ದರಿಂದಲೇ ಚಿತ್ರದಲ್ಲಿರುವ ವ್ಯಕ್ತಿಯ ಸ್ವಭಾವವನ್ನು ನಾವು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ. ವ್ಯಕ್ತಿಗಳಲ್ಲಿರುವ ಕೋಮಲ. ಕಠೋರ. ಗಂಭೀರತೆಯನ್ನು ಈ ಚಿತ್ರಗಳಲ್ಲಿ ಕಾಣಬಹುದು.(ಅಧ್ಯಾಯ ಏಳರಲ್ಲಿಯ ೧೨ ನೇ ಚಿತ್ರವನ್ನು ನೋಡಿರಿ)



१.



२.

III) ನಿಸರ್ಗ ಚಿತ್ರಗಳು :

ನಿಸರ್ಗ ಚಿತ್ರಗಳನ್ನು ಹಿಂದಿನಿಂದ ಇಂದಿನವರೆಗೂ ಒಂದೇ ರೀತಿಯಲ್ಲಿ ರಚಿಸುತ್ತಾ ಬಂದಿದ್ದಾರೆ. " ಭಾರತೀಯ ಭೂದೃಶ್ಯಕಲೆ ತನ್ನದೇ ಆದ ವೈಶಿಷ್ಟ್ಯ ಸೂಚಕ ಶೈಲಿಯನ್ನು ಇಂದಿಗೂ ಕಂಡುಕೊಂಡಿಲ್ಲ. ಇಂಪ್ರೇಷನಿಸ್ಟರ ತಂತ್ರಗಳಲ್ಲಿ ಚಿತ್ರಿಸುತ್ತಿರುವ ಈ ಕಲಾವಿದರು ಭಾರತೀಯ ಭೂದೃಶ್ಯಗಳನ್ನು ಯುರೋಪಿನ ಕಲಾವಿದರು ಪರಿಭಾವಿಸುವಂತೆಯೇ ಚಿತ್ರಿಸುತ್ತಿದ್ದಾರೆ. "[೯] ಎನ್ನುವ ಮಾತು ಸತ್ಯ. ಆದೇ ಪಾಶ್ಚಾತ್ಯ ಶೈಲಿಯ ಕಲಾಶಾಲೆಯಲ್ಲಿ ಚಿಟ್ಟಿಯವರು ಕಲಿತಿದ್ದರಿಂದ ಅವರ ನಿಸರ್ಗ ಚಿತ್ರದಲ್ಲಿ ಆ ಪ್ರಭಾವ ಕಂಡುಬರುತ್ತದೆ.

ಚಿಟ್ಟಿಯವರು ಸಂಯೋಜನಾ ಚಿತ್ರಗಳಲ್ಲಿ ಹಿನ್ನೆಲೆಯಾಗಿ ಈ ನಿಸರ್ಗವನ್ನು ಚೆನ್ನಾಗಿ ದುಡಿಸಿಕೊಂಡಿದ್ದಾರೆ. ಅಲ್ಲಿ ನಮ್ಮ ಭಾರತೀಯ ಶೈಲಿಯ ಕಿರುರೂಪ ಚಿತ್ರದ ಪ್ರಭಾವ ಕಂಡುಬರುತ್ತದೆ. ಗಿಡ. ಮರ. ಬಳ್ಳಿ. ಪಕ್ಷಿಗಳು ಎಲ್ಲವನ್ನೂ ವಿವರವಾಗಿ ಚಿತ್ರಿಸಿದ್ದಾರೆ. ಇವರು ಚಿತ್ರಿಸಿದ ನಿಸರ್ಗಚಿತ್ರದ ವಸ್ತುಗಳು ಹೆಚ್ಚಾಗಿ ಗಿಡಮರಗಳು. ಹಾಳು ಕೋಟೆ ಮಸೀದಿ. ಮಂಟಪ. ಹೊಂಡ. ದೇವಾಲಯದ ಒಳಭಾಗ. ಅರಮನೆಗಳನ್ನು ಒಳಗೊಂಡಿವೆ.

ಚಿತ್ರ ೫ : ಇದು ವಿಜಾಪೂರದ ಅಗಸೆ ಬಾಗಿಲು. ವಿಜಾಪೂರದ ಬಿಸಿಲಿನ ಪ್ರಖರತೆ ಅದಕ್ಕೆ ತಕ್ಕಂತೆ ನೆರಳು ನೈಜವಾಗಿ ಮೂಡಿಬಂದಿದೆ. ಮೇಲ್ಭಾಗದ ಕಟ್ಟಡ ಬಿದ್ದುಹೋಗಿದೆ. ಜನರು ಅದೇ ಬಾಗಿಲಿನಿಂದ ಅಡ್ಡಾಡುತ್ತಿದ್ದಾರೆ. ಚಿತ್ರದಲ್ಲಿ ದೂರ ಸಮೀಪಗಳ ರಚನೆಯಿಂದಾಗಿ ಒಂದು ಒಳ್ಳೆಯ ಆನಂದಾನುಭವ ನೀಡುವ ನಿಸರ್ಗ ಚಿತ್ರ ಇದಾಗಿದೆ.

ಚಿತ್ರ ೬ : ಇದು ಮುಂಬಯಿಯ ಒಂದು ದೃಶ್ಯ. ಇದನ್ನು ಬಹುಶಃ ಅವರು ವಿದ್ಯಾರ್ಥಿಯಾಗಿದ್ದಾಗ ಈ ಚಿತ್ರವನ್ನು ಚಿತ್ರಿಸಿದ್ದಾರೆ. ವಿ. ಟಿ. ಸ್ಟೇಶನ್‌ದ ಕಟ್ಟಡ. ಬಸ್ಸುಗಳ ಓಡಾಟದ ಜೊತೆಗೆ ಜನರ ಓಡಾಟದ ತೀವ್ರತೆಯನ್ನು ತೋರಿಸಿದ್ದಾರೆ. ಕಟ್ಟಡದ ಸೂಕ್ಷ್ಮತೆ ಆಕಾಶದಲ್ಲಿ ಬಣ್ಣ. ಛಾಯಾಮೌಲ್ಯ. ಬಣ್ಣಗಳ ವೈವಿಧ್ಯತೆ ಮತ್ತು ದೃಶ್ಯಾಂತರದ ಅನುಭವಗಳು ಅವರ ಅಭಿವ್ಯಕ್ತಿ ಸಾಮರ್ಥ್ಯದ ವಿಶಿಷ್ಟತೆಯನ್ನು ನಮಗೆ ಮನದಟ್ಟು ಮಾಡುತ್ತವೆ. ಅಳತೆ ೧೨" X ೧೫" ಚಿಟ್ಟಿಯವರ ಸಂಗ್ರಹದಿಂದ. (ಅಧ್ಯಾಯ ಏಳರಲ್ಲಿಯ ೧೪ ನೇ ಚಿತ್ರವನ್ನು ನೋಡಿರಿ)

ಚಿತ್ರ ೭ : ಈ ಚಿತ್ರ ಸೂರ್ಯೋದಯದ ಕಾಲದಲ್ಲಿ ಚಿತ್ರಿಸಿದ ಚಿತ್ರವಾಗಿದೆ. ಕಟ್ಟಡದ ಮೇಲೆ ನವುರಾದ ಸೂರ್ಯನ ರಶ್ಮಿಗಳು ನಿಧಾನವಾಗಿ ಹರಡುತ್ತಿರುವಂತೆ. ಮುಂಜಾವಿನ ಮಂಜು. ಅಲ್ಲೊಂದು ಇಲ್ಲೊಂದು ಓಡಾಡುತ್ತಿರುವ ಬಸ್ಸುಗಳು. ಅಲ್ಲಲ್ಲಿ ಜನ. ಇಲ್ಲಿ ನೀಲಿ ಬಣ್ಣದ ಛಾಯೆಯಿಂದ ವಾತಾವರಣದಲ್ಲಿ ಶಾಂತತೆಯ ಭಾವನೆ ಹಾಗೂ ಮಂಜಿನ ಅನುಭವವನ್ನು ನೀಡಿದ್ದಾರೆ. ಇದನ್ನು ಮುಂಬಯಿಯಲ್ಲಿ ರಚಿಸಿದ್ದಾರೆ. ಗಿಡಗಳನ್ನು ಛಾಯಾಮೌಲ್ಯದಿಂದ ಬೋಲ್ಡ್ ಆಗಿ ವಿವರಣೆ ಇಲ್ಲದೆ ರಚಿಸಿದ್ದಾರೆ. ಅಳತೆ ೧೨" X ೧೫" ಚಿಟ್ಟಿಯವರ ಸಂಗ್ರಹದಿಂದ.

ಚಿತ್ರ ೮ : ಈ ಚಿತ್ರ ಅವರು ವಿದ್ಯಾರ್ಥಿಯಾಗಿದ್ದಾಗಲೇ ಅವರ ಗುರುಗಳ ಜೊತೆಗೆ ೧೯೩೧ ರಲ್ಲಿ ಉದಯಪುರಕ್ಕೆ ಪ್ರವಾಸಕ್ಕೆ ಹೋದಾಗ ಚಿತ್ರಿಸಿದ್ದು. ಇದರ ಅಳತೆ ೧೨" X ೧೮" ಚಿಟ್ಟಿಯವರ ಉತ್ಕೃಷ್ಟ ಅಭಿವ್ಯಕ್ತಿಯನ್ನು ಈ ಚಿತ್ರದಲ್ಲಿ

---

೯. ಕೆ. ವಿ. ಸುಬ್ರಹ್ಮಣ್ಯ. ಎನ್. ಹನುಮಯ್ಯ. ಪುಟ ೪

ಕಾಣುತ್ತೇವೆ. ' ಜಲಮಂದಿರ ' ನೀರಿನಲ್ಲಿ ಮಂದಿರ ಹಾಗೂ ಆಕಾಶದ ಪ್ರತಿಬಿಂಬ ಆದರಂತೆ ಬಣ್ಣಗಳ ವೈವಿಧ್ಯತೆ, ಛಾಯಾ ಮೌಲ್ಯ ದೃಶ್ಯಂತರದ ಅನುಭವ ಸ್ಪಷ್ಟವಾಗಿ ಚಿತ್ರಿತವಾಗಿದೆ.

ಈ ಚಿತ್ರ ಅವರ ನಿಸರ್ಗ ಚಿತ್ರಗಳಲ್ಲೇ ಅತ್ಯುತ್ತಮ ಚಿತ್ರವಾಗಿದೆ. ಬಣ್ಣಗಳ ಪಾರದರ್ಶಿಕೆ ವಸ್ತುಗಳ ಗುಣಧರ್ಮಕ್ಕೆ ಮೆರಗು ತಂದಿದೆ. ಅವರೆ ಹೇಳುವಂತೆ, " ಉದಯಪುರ ಮಹಾರಾಜರ ಅರಮನೆಯ ಆವರಣದಲ್ಲಿದ್ದ ಜಲಮಂದಿರದ ನಿಸರ್ಗಚಿತ್ರ ಮಾಡಿದೆನು. ಅದನ್ನು ಕಂಡ ಉದಯಪುರದ ಮಹಾರಾಜರು ಬಹಳ ಮೆಚ್ಚಿಕೊಂಡು ತಮ್ಮ ಅರಮನೆಗೆ ಕೊಂಡುಕೊಂಡರು. ಅಲ್ಲಿಯೇ ೫ - ೬ ಅದೇ ಜಲಮಂದಿರ ಪೇಂಟಿಂಗ ಮಾಡಿದೆನು. "[೧೦] ಅವರಲ್ಲಿ ಇದು ಒಂದು. ಇದು ಕರ್ನಾಟಕ ಲಲಿತಕಲಾ ಅಕಾಡೆಮಿಯ ಸಂಗ್ರಹದಲ್ಲಿದ್ದು ಇವನ್ನು ಬೆಂಗಳೂರಿನ ಕನ್ನಡ ಭವನದ ಲಿಫ್ಟನಲ್ಲಿ ನೋಡಬಹುದು. ಚಿತ್ರ ಅಷ್ಟು ಹಳೆಯದಾದರೂ ಈಗ ತಾನೆ ರಚಿಸಿದಂತೆ ಇದೆ. (ಅಧ್ಯಾಯ ಏಳರಲ್ಲಿಯ ೧೩ ನೇ ಚಿತ್ರವನ್ನು ನೋಡಿರಿ)

ಚಿತ್ರ ೯ : ಈ ಚಿತ್ರ ಕಲಬುರ್ಗಿ ಮಸೀದೆ. ಅಳತೆ ೨೨" X ೩೦" ಬೆಂಗಳೂರಿನ ಕ. ಲ. ಕ. ಅ. ಸಂಗ್ರಹದಿಂದ. ಇದು ಸಹಿತ ಅಷ್ಟೇ ಉತ್ತಮವಾದ ಚಿತ್ರವಾಗಿದೆ. ಮಸೀದಿಯ ಒಳಭಾಗವನ್ನು ಚಿತ್ರಿಸಿದ್ದಾರೆ. ಈ ಚಿತ್ರದಲ್ಲಿ ನೆರಳು - ಬೆಳಕಿನ ಸಂಯೋಜನೆ ಅತ್ಯಂತ ನೈಜವಾಗಿ ನಿಖರತೆಯಿಂದ ಕೂಡಿದೆ. ಮಸೀದಿಗೆ ಬಂದಂತ ಭಕ್ತಾದಿಗಳ ಮೇಲೂ ಅಷ್ಟೇ ಸೂಕ್ಷ್ಮ ಛಾಯಾಂಕಣವಿದೆ. ಆ ಮಸೀದಿಯ ಗೋಡೆಯ ಮೈವಳಿಕೆಯೂ ನೈಜತೆಯಿಂದ ಮೂಡಿದೆ. ಸಮೀಪದಲ್ಲೇ ಮರ. ಸಂಯೋಜನೆಗೆ ತಕ್ಕಂತೆ ಮಸೀದಿಯ ಭಾಗವನ್ನೂ ಆಯ್ದುಕೊಂಡಿದ್ದಾರೆ. ಚೆಟ್ಟಿಯವರಲ್ಲಿದ್ದ ವಿಶೇಷ ಪ್ರಜ್ಞೆ ಇದಾಗಿದೆ. (ಅಧ್ಯಾಯ ಏಳರಲ್ಲಿಯ ೧೫ ನೇ ಚಿತ್ರವನ್ನು ನೋಡಿರಿ)

ಚಿತ್ರ ೧೦ : ಮರದ ಬೊಡ್ಡೆ ರಚಿಸುವಲ್ಲಿ ಚೆಟ್ಟಿಯವರಿಗೆ ಇರುವ ನೈಪುಣ್ಯತೆ ಅಗಾಧವಾದುದು. ಇಂತಹ ಒಂದು ಬೊಡ್ಡೆಯ ಚಿತ್ರಕ್ಕೆ ಅವರಿಗೆ ೧೯೩೧ ರಲ್ಲಿ ಮುಂಬಯಿ ಆರ್ಟ್ ಸೊಸೈಟಿಯಿಂದ ಪ್ರಶಸ್ತಿ ದೊರಕಿತ್ತು. ಆದರೆ ಆ ಚಿತ್ರ ಈಗ ಲಭ್ಯವಿಲ್ಲ. ಈ ಚಿತ್ರದಲ್ಲಿ ಕಟ್ಟೆಯ ಮೇಲೆ ವಿಶಾಲವಾಗಿ ಬೆಳೆದು ನಿಂತ ಆಲದ ಮರ ಅದರ ಪಕ್ಕದಲ್ಲಿಯೇ ದೇವಸ್ಥಾನ. ಇಲ್ಲಿ ಪ್ರತಿಯೊಂದನ್ನು ವಿವರವಾಗಿ ಚಿತ್ರಿಸಿದ್ದಾರೆ. ಗಿಡದ ಪ್ರತಿಯೊಂದು ಟೊಂಗೆಯ ನೆರಳು - ಬೆಳಕು. ನೆಲದ ಮೇಲೆ. ಕಟ್ಟೆಯ ಮೇಲೆ ಮರದ ನೆರಳು ಆ ನೆರಳಿನಲ್ಲಿ ವೈವಿಧ್ಯ ಬಣ್ಣಗಳನ್ನು ಬಳಸಿದ್ದಾರೆ. ಗಿಡದ ಮೈವಳಿಕೆ ನೈಜತೆಯ ಪರಾಕಾಷ್ಟ ಮುಟ್ಟಿದೆ. ಬಣ್ಣಗಳು ಇದೀಗ ಬಳಸಿ ಮಾಡಿದಂತೆ ಇವೆ. ಚೆಟ್ಟಿಯವರ ಸಂಗ್ರಹದಲ್ಲಿದೆ.

ಚಿತ್ರ ೧೧ : ಈ ಚಿತ್ರ ಒಂದು ಮಸೀದಿಯ ಚಿತ್ರವಾಗಿದೆ. ಇದರಲ್ಲಿ ಅಷ್ಟೊಂದು ವಿವರಣೆ ಇಲ್ಲದಿದ್ದರೂ ನೆರಳು - ಬೆಳಕು ತಿಳುವಾದ ಬಣ್ಣಗಳ ಲೇಪನ ದೂರ ಸಮೀಪಗಳ ಕಲ್ಪನೆ ಇದ್ದು. ಕುಂಚಗಳ ಎಳೆತ ನೇರವಾಗಿ ಇವೆ. ಗಿಡಗಳಲ್ಲೂ ಬೋಲ್ಡ ಆಗಿ ಬಣ್ಣಗಳ ಲೇಪನ ಮಾಡಿದ್ದಾರೆ. ಚೆಟ್ಟಿಯವರ ಸಂಗ್ರಹದಲ್ಲಿದೆ.

---

೧೦. ಎಂ. ವಿ. ಚೆಟ್ಟಿ : ನೆನಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೬

ಚಿತ್ರ ೧೨ : ಇದರಲ್ಲಿ ಎರಡು ನಿಸರ್ಗ ಚಿತ್ರಗಳಿವೆ.

i) ಮೊದಲನೆಯ ಚಿತ್ರದಲ್ಲಿ ಹಳೆಯ ಹೊಂಡದ ಚಿತ್ರಣವಿದೆ. ಬಹುಶಃ ಇದು ಬನಶಂಕರಿಯ ಹೊಂಡವಾಗಿದೆ. ಈ ಚಿತ್ರದಲ್ಲಿ ಬಂಡೆಗಳ ಮೈವಳಿಕೆ ಹಾಗೂ ನೀರು. ಅದರಲ್ಲಿ ಪ್ರತಿಫಲನ ನೈಜವಾಗಿ ಮೂಡಿದೆ. ಆ ಹೊಂಡದಿಂದ ನೀರು ತುಂಬುವಂಥ ಹೆಣ್ಣುಮಕ್ಕಳನ್ನು ಅಷ್ಟೇ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ii) ಎರಡನೆಯದು ಒಂದು ಹಾಳು ಮಂಟಪದ ಚಿತ್ರವಾಗಿದ್ದು. ಇಲ್ಲಿ ಬಂಡೆಗಳ ಮೇಲಿನ ನೆರಳು - ಬೆಳಕು ಬಂಡೆಗಳ ಬೇರೆ ಬೇರೆ ಗುಣಧರ್ಮವನ್ನು ಸೂಚಿಸುತ್ತಿವೆ. ಅಲ್ಲಿಯೇ ನಡೆದು ಹೋಗುವಂಥ ಪಾದಚಾರಿಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಈ ಚಿತ್ರ ಅತ್ಯಂತ ದೂರದಲ್ಲಿ ಕುಳಿತು ಚಿತ್ರಿಸಿದ್ದಾರೆ. ಅಂತೆಯೇ ಪಾದಚಾರಿಗಳು ಸೂಕ್ಷ್ಮವಾಗಿ ಚಿತ್ರಸಿಲ್ಪಟ್ಟಿದ್ದರೂ ಪರಿಪೂರ್ಣ ಕಲ್ಪನೆಗೆ ಬದ್ಧವಾಗಿದ್ದಾರೆ. ಒಣಗಿದ ಗಿಡ ಅಲ್ಲಲ್ಲಿ ಸಿಡಿದ ಬಂಡೆಗಳು ಗತವೈಭವದ ಸಾಕ್ಷಿಯಾಗಿವೆ. ತಿಳಿ ಆಕಾಶ ವರ್ಣಗಳ ವೈವಿಧ್ಯತೆಯಿಂದ ಕೂಡಿದೆ. ಚೆಟ್ಟಿಯವರ ಸಂಗ್ರಹದಿಂದ ಪಡೆಯಲಾಗಿದೆ. ಚೆಟ್ಟಿಯವರು ಎಷ್ಟೋ ಚಿತ್ರಗಳಿಗೆ ರಚಿಸಿದ ವರ್ಷಗಳನ್ನೇ ಸೂಚಿಸಿಲ್ಲ.

ಚಿತ್ರ ೧೩ : i) ಇಲ್ಲಿಯೂ ಎರಡು ಚಿತ್ರಗಳಿವೆ. ಮೊದಲನೇಯದರಲ್ಲಿ ಸರ್ಕಸ್‌ನ ಹೊರಭಾಗದ ದೃಶ್ಯವನ್ನು ಚಿತ್ರಿಸಿದ್ದಾರೆ. ಸರ್ಕಸ್ಸಿನ ಟೆಂಟ್ ಅಲ್ಲಲ್ಲಿ ಹರಿದು ಹೋಗಿದೆ. ದೂರದಲ್ಲಿ ಕಟ್ಟಿದ ಆನೆ. ಹುಲ್ಲು ಮೇಯುತ್ತಿರುವ ಕುದುರೆಗಳು ಗಿಡದ ನೆರಳಲ್ಲಿ ವಿಶ್ರಮಿಸುತ್ತಿರುವ ಒಂಟೆಗಳು. ಸಮೀಪದಲ್ಲೇ ಮಲಗಿದ ಆಕಳು. ಎಲ್ಲಾ ಅತ್ಯಂತ ನೈಜವಾಗಿ ಚಿತ್ರಿತವಾಗಿವೆ. ಈ ಚಿತ್ರಗಳಲ್ಲಿಯ ಪ್ರಾಣಿಗಳ ಆಕೃತಿಗಳನ್ನು ಗಮನಿಸಿದರೆ ಚೆಟ್ಟಿಯವರು ಪ್ರಾಣಿಗಳ ದೇಹ ರಚನೆಯನ್ನು ಅಷ್ಟೇ ಪ್ರಮಾಣಬದ್ಧವಾಗಿ ಆಳವಾಗಿ ಅಭ್ಯಸಿಸಿದ್ದು ಅರಿವಾಗುತ್ತದೆ. ಸಹಜ ರೀತಿಯಲ್ಲಿ ಚಿತ್ರಿಸಿದ್ದಾರೆ.

i) ಎರಡನೆಯ ಚಿತ್ರವು ಹೊಂಡದ ಚಿತ್ರವಾಗಿದ್ದು ಇಲ್ಲಿ ಎಲ್ಲವೂ ವಿವರವಾಗಿ ಚಿತ್ರಿಸಿದ್ದಾರೆ. ಹೊಂಡದ ಮಧ್ಯದಲ್ಲಿ ಮಂಟಪ ನೀರಿನಲ್ಲಿ ಮಂಟಪದ ನೆರಳು ದೂರದಲ್ಲಿಯ ಹಂಚಿನ ಮನೆಗಳು ಅದರ ಹಿಂದುಗಡೆ ಆಕಾಶ ಮುಟ್ಟುವ ತೆರದಿ ಬೆಳೆದ ತೆಂಗಿನ ಮರಗಳು. ಹೊಂಡದ ಪಕ್ಕದಲ್ಲಿ ಸೇತುವೆ. ಅದರ ಮೇಲೆ ಕಾಲುದಾರಿ ಮಲೆನಾಡಿನ ಅನುಭವವನ್ನು ಸಾರುವಂತಿದೆ. ದೃಶ್ಯಂತರದ ಸೂಕ್ಷ್ಮತೆಗೆ ಈ ಚಿತ್ರ ಮಾದರಿಯಾಗಿದೆ. ಹಿತಮಿತವಾದ ಛಾಯಾಂಕಣ. ಈ ಎರಡು ಚಿತ್ರ ಚೆಟ್ಟಿಯವರ ಸಂಗ್ರಹದಿಂದ ಸಂಗ್ರಹಿಸಿದ್ದು.

ಚಿತ್ರ ೧೪ : ಈ ಎರಡೂ ಚಿತ್ರಗಳು ನಾಟಕದ ಹಿನ್ನೆಲೆಯ ಪರದೆಯ ದೃಶ್ಯದಂತೆ ಚಿತ್ರಿತವಾಗಿವೆ.

i) ಮೊದಲ ಚಿತ್ರ ದೇವಾಲಯದ ಒಳಭಾಗದ ಚಿತ್ರ ಅಲ್ಲಿ ಕೆತ್ತಿದ ಶಿಲ್ಪಗಳನ್ನು ಚಿತ್ರಿಸಿದ್ದಾರೆ.

ii) ಎರಡನೆಯ ಚಿತ್ರದಲ್ಲಿ ಒಂದು ಮಂಟಪ ಅದರ ಮುಂದೆ ಹೊಂಡ. ಅದರಲ್ಲಿ ಆಕಾಶದ ಕಡುನೀಲಿ ಬಣ್ಣದ ಪ್ರತಿಬಿಂಬ. ಈ ಎರಡೂ ಚಿತ್ರಗಳಲ್ಲಿ ಪ್ರಖರ ಬಣ್ಣಗಳನ್ನು ಬಳಸಿ ವಿರೋಧ ಬಣ್ಣಗಳನ್ನು ನೆರಳು ಬೆಳಕುಗಳಲ್ಲಿ ಲೇಪಿಸಿದ್ದರಿಂದ ಕಣ್ಣಿಗೆ ಅತ್ಯಂತ ಉಗ್ರವಾಗಿ ಕಾಣುತ್ತವೆ. ಇಂತಹ ವರ್ಣಲೇಪನ ಹೆಚ್ಚಾಗಿ ನಾಟಕದ ಪರದೆಗಳಲ್ಲಿ



೫. ವಿಜಾಪುರದ ಅಗಸೆ ಬಾಗಿಲು



೭ ನಿಸರ್ಗ ಚಿತ್ರ



೧೦. ಮರದ ಬೊಡ್ಡೆ ಚಿತ್ರ



೧೧ [illegible] ಚಿತ್ರ



೧೩. ಸರ್ಕಸ್ಸಿನ ಹೊರಭಾಗದ ದೃಶ್ಯ. ಹೊಂಪದ ಚಿತ್ರ



೧೨. ಬನಶಂಕರಿ ಹೊಂಡ. ಬಾದಾಮಿ





೧೪. ದೇವಾಲಯದ ಒಳಭಾಗ. ಮಂಟಪ

ಕಾಣುತ್ತೇವೆ. ಈ ಹಿಂದೇ ಹೇಳಿದಂತೆ ಚೆಟ್ಟಿಯವರು ಅನೇಕ ನಾಟಕಗಳನ್ನು ನೋಡಿದ ಪರಿಣಾಮವಾಗಿ ಅದರ ಪ್ರಭಾವದಿಂದ ಈ ಚಿತ್ರಗಳಲ್ಲಿ ಅದರ ಪ್ರಯೋಗ ಮಾಡಿದಂತೆ ಇದೆ. ಇಂತಹ ಕೆಲವು ಪ್ರಯೋಗಗಳನ್ನು ಅವರ ಸಂಯೋಜನಾ ಚಿತ್ರದಲ್ಲೂ ಕಾಣುತ್ತೇವೆ. ಈ ಚಿತ್ರಗಳನ್ನು ಚೆಟ್ಟಿಯವರ ಸಂಗ್ರಹದಿಂದ ಸಂಗ್ರಹಿಸಲಾಗಿದೆ. ಚೆಟ್ಟಿಯವರ ಈ ಎಲ್ಲ ಜಲವರ್ಣದ ನಿಸರ್ಗ ಚಿತ್ರ ನೋಡಿದಾಗ ಉದಯಪುರದಲ್ಲಿ ರಚಿಸಿದ ಚಿತ್ರ ಅತ್ಯುನ್ನತವಾಗಿದೆ. ಈ ಚಿತ್ರ ಅಷ್ಟೊಂದು ಚೆನ್ನಾಗಿ ರಚಿಸಲು ಕಾರಣ ಸ್ಪರ್ಧಾತ್ಮಕತೆಯೂ ಇರಬಹುದು. ಯಾಕೆಂದರೆ ಆಗ ಅವರ ವರ್ಗದ. ಕಲಾಶಾಲೆಯ ಅನೇಕ ವಿದ್ಯಾರ್ಥಿಗಳು ಅಲ್ಲಿ ಚಿತ್ರ ರಚಿಸಿದ್ದರು.

ಚೆಟ್ಟಿಯವರ ಜಲವರ್ಣದ ಈ ನಿಸರ್ಗಚಿತ್ರಗಳನ್ನು ನೋಡಿದಾಗ ಆ ಮಾಧ್ಯಮದ ಮೇಲಿನ ಹಿಡಿತ. ಬಣ್ಣಗಳ ಸಂಯೋಜನೆಯ ಜ್ಞಾನ. ಅತಿ ಕ್ಷಿಪ್ರಗತಿಯ ಕುಂಚದ ಚಲನೆ. ವಸ್ತುವಿನ ಪೂರ್ಣ ವಿವರವನ್ನು ಗಮನಿಸಬಹುದು. ಸತ್ಯಕ್ಕೆ ಹತ್ತಿರವಾದ. ಕಣ್ಣಿಗೆ ಕಂಡದ್ದನ್ನು ಕಂಡತೆಯೇ ತಮ್ಮ ಚಿತ್ರಗಳಲ್ಲಿ ಸೆರೆ ಹಿಡಿಯುವ ಪ್ರಾಮಾಣಿಕ ಚಿತ್ರಕಲಾವಿದರು.

IV) ಸಂಯೋಜನಾ ಚಿತ್ರಗಳು (Compositions) :

" ಭಾರತದಲ್ಲಿ ಧರ್ಮ ಒಂದು ವಿಶಾಲ ವೃಕ್ಷದಂತಿದ್ದು ಉಳಿದೆಲ್ಲ ಸಾಮಾಜಿಕ ಕ್ರಿಯೆಗಳು ಅದರ ಮೇಲೆ ಬೆಳೆದಿರುವ ಪರೋಪಜೀವಿಗಳಾಗಿಯೇ ಉಸಿರಾಡುತ್ತಿದ್ದವು. ಜೀವ ಹಿಡಿದುಕೊಂಡಿದ್ದವು. ನಮ್ಮಲ್ಲಿ ಬಂದಿರುವ ಸಂಗೀತ ಸಾಹಿತ್ಯ. ನಾಟಕ. ನೃತ್ಯ. ಚಿತ್ರಕಲೆ. ಶಿಲ್ಪ. ವಾಸ್ತು ಎಲ್ಲವೂ ಧರ್ಮ ಸಾಧನೆಗೆ ಮತ್ತು ಅಭಿವ್ಯಕ್ತಿಗೆ ಪೋಷಕವಾಗಿಯೇ ಬಂದಂಥವುಗಳು. " [೧೧]

" ಭಾರತೀಯ ಕಲೆ ಸ್ವರ್ಗದತ್ತ ಸಾಗುವ ಸಾಧನೆ " ಎಂದು ಪ್ರೊ. ಇ. ಬಿ. ಹ್ಯಾವಲ್‌ರ ಮಾತು ಸತ್ಯ. ಯಾಕೆಂದರೆ ಭಾರತೀಯ ಕಲೆಗೆ ತನ್ನದೇ ಆದ ವೈಶಿಷ್ಟ್ಯವಿದೆ. ಚೆಲುವಿದೆ. ಚೈತನ್ಯವಿದೆ. ಉನ್ನತ ಬದುಕಿನ ಮಾರ್ಗಸೂಚಿ ಇದೆ. ಇಲ್ಲಿಯ ಎಲ್ಲಾ ಕಲೆಗಳ ಆಳಕ್ಕಿಳಿದು ನೋಡಿದಾಗ ನಮಗೆ ದಕ್ಕುವುದು ದೈವಿ ಸಮರ್ಪಣೆ ಹಾಗೂ ಜೀವನೋನ್ನತಿ. ಹೀಗಾಗಿ ಆಯಾ ಭೂಪ್ರದೇಶ ಪರಿಸರಕ್ಕನುಗುಣವಾಗಿ ಮೈದಾಳಿದ ಇಲ್ಲಿಯ ಎಲ್ಲಾ ಕಲೆಗಳಲ್ಲಿರುವ ಏಕಸೂತ್ರ ' ಸತ್ಯಂ-ಶಿವಂ ಸುಂದರಂ ' ಎಂಬ ದಾರ್ಶನಿಕತತ್ವ " [೧೨] ವಾಗಿದೆ.

ಚೆಟ್ಟಿಯವರು ಹೆಚ್ಚಾಗಿ ಸಂಯೋಜನಾ ಚಿತ್ರಗಳಿಗೆ ಧಾರ್ಮಿಕ ವಸ್ತು ವಿಷಯಗಳನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಇವಕ್ಕೆ ಕಾರಣ ಚೆಟ್ಟಿಯವರ ಕೃತಿಗಳನ್ನು ಅವರ ವ್ಯಕ್ತಿತ್ವದಿಂದ ಬೇರ್ಪಡಿಸುವುದು ಅಸಾಧ್ಯ. ಅವರು ಬೆಳೆದುಬಂದಂಥ ಪರಿಸರ. ಅವರ ಮನೆಯಲ್ಲಿಯ ವಾತಾವರಣ. ಶರಣ ಸಂಪ್ರದಾಯದ ನಡೆಯಂತೇ ಚಿತ್ರವಿಷಯಗಳನ್ನು ಕಂಡುಕೊಂಡಿರುವ ಅದನ್ನು ಆ ದೃಷ್ಟಿಕೋನಕ್ಕೆ ಸರಿಯಾಗಿ ಚಿತ್ರಿಸಿರುವ ರೀತಿಗಳ ನಡುವೆ ಅವಿನಾಭಾವ ಸಂಬಂಧವಿದೆ.

---

೧೧. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಚಿತ್ರಕಲಾ ಪ್ರಪಂಚ. ಪುಟ ೫೧೭

೧೨. ಡಿ. ಎನ್. ಅಕ್ಕಿ : ಎಂ. ಟಿ. ಭೋಸಲೆ. ಪುಟ ೩

ಹೀಗೆ ಕಲಾವಿದನ ವ್ಯಕ್ತಿತ್ವವನ್ನು ಆತನ ಚಿತ್ರಗಳಲ್ಲಿ ಕಾಣುತ್ತೇವೆ. ಚಿಟ್ಟಿಯವರು ಎಲ್ಲಾ ಧರ್ಮದ ಚಿತ್ರಗಳನ್ನು ಚಿತ್ರಿಸಿದ್ದಾರೆ ಅಲ್ಲದೇ ಅದರ ಜೊತೆಗೆ ಸಾಮಾಜಿಕ. ಐತಿಹಾಸಿಕ. ಜಾನಪದ ವಸ್ತುವಿಷಯಗಳ ಕುರಿತೂ ಚಿತ್ರ ರಚಿಸಿದ್ದಾರೆ.

ಇವರ ಚಿತ್ರಗಳಲ್ಲಿ ಆಕೃತಿಗಳು ಸ್ವಲ್ಪ ಉದ್ದವಾಗಿ ಇವೆ. ಅಲ್ಲದೆ ಮಾನವಾಕೃತಿಯ ಕಣ್ಣುಗಳು ಅಜಂತಾ ಮಾದರಿಯವಾಗಿವೆ. ಶಾಂತತೆಯ ಪ್ರತೀಕವಾಗಿವೆ. ಬಹುಶಃ ಇವರ ಚಿತ್ರಗಳ ವಿಷಯಗಳು ಅವೇ ಆಗಿದ್ದರಿಂದ. ಆ ಭಾವನೆ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಅದಕ್ಕಾಗಿ ವೈಶಿಷ್ಟ್ಯವೆನ್ನುವುದು ಇತರರಿಂದ ಸಂಪೂರ್ಣವಾಗಿ ಭಿನ್ನವಾಗಿರಲೇಬೇಕೆಂಬ ವಿಕೃತ ಸಿದ್ಧಾಂತಕ್ಕೆಡೆಕೊಡಬಾರದು. ಕರ್ನಾಟಕದ ಕಲೆಗಳು ಮತ್ತು ಅವುಗಳನ್ನು ರೂಪಿಸಿದ ಜೀವನ ದೃಷ್ಟಿಯೂ ಸಹ ಇದರಿಂದ ವಿಮುಕ್ತವಾಗಿದೆ. ಇತರ ಶೈಲಿಗಳಲ್ಲಿ ಕಾಣುವ ಒಳ್ಳೆಯ ಅಂಶಗಳನ್ನು ಅಳವಡಿಸಿಕೊಂಡು ಮತ್ತು ಅರಗಿಸಿಕೊಂಡು ಪರಿಪುಷ್ಟವಾಗಿ ಅವು ಬೆಳೆದಿವೆ "[೧೩] ಎನ್ನುವಂತೆ ಚಿಟ್ಟಿಯವರ ಚಿತ್ರಗಳಲ್ಲೂ ಈ ಪ್ರಭಾವವಿದ್ದರೂ ತಮ್ಮದೇ ಆದ ಶೈಲಿಯ ವಿಶಿಷ್ಟತೆಯನ್ನು ನಿರ್ಮಿಸಿಕೊಂಡಿದ್ದಾರೆ.

ಇವರ ಚಿತ್ರಗಳ ಮುಖಾಂತರ ನಮ್ಮ ಆ ಕಾಲದ ನಾಡಿನ ಸಂಸ್ಕೃತಿ. ಜನ ಜೀವನ ಕಾಣುತ್ತೇವೆ. " ಸಂಸ್ಕೃತಿಯಲ್ಲಿ ಭಾವನಾತ್ಮಕವಾದ ಅನುಭವ. ಆನಂದರೂಪಿಯಾಗಿ ಅಭಿವ್ಯಕ್ತಗೊಳ್ಳುತ್ತದೆ. ಇಲ್ಲಿರುವುದು ಆನಂದಾತ್ಮಕ: ನಾಗರಿಕತೆ ಪ್ರಯೋಜನಾತ್ಮಕ. ಮಾನವನ ಬಹುಮುಖವಾದ ಸ್ವಭಾವ ಮತ್ತು ಭಾವಗಳ ಸೂಕ್ಷ್ಮವಾದ ಮತ್ತು ಸುಂದರವಾದ ಚಿತ್ರವನ್ನು ಸಂಸ್ಕೃತಿಯ ಅಂಗಗಳಲ್ಲಿ ಕಾಣಬಹುದು. ಮಾನವನ ಅಂತರಂಗದ ಜೀವನದ ಜೀವಂತ ಚಿತ್ರಣವೆ ಸಂಸ್ಕೃತಿ. "[೧೪] ಆದ್ದರಿಂದ ಅಂತಹ ಸಂಸ್ಕೃತಿಯು ಯಾವ ರೀತಿ ಚಿಟ್ಟಿಯವರ ಚಿತ್ರಗಳಲ್ಲಿ ಹರಿದು ಬಂದಿದೆ ಎನ್ನುವುದನ್ನು ಇಲ್ಲಿ ನೋಡಬಹುದು. ಇಂತಹ " ಚಿತ್ರಕಲೆ ಒಂದು ನಾಡಿನ. ಒಂದು ಜನಾಂಗದ ಇತಿಹಾಸವನ್ನು ತಿಳಿಸುವ ಮಹತ್ವದ ಸಾಧನವಾಗಿದೆ. ಅದು ಪ್ರಾಚೀನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಜೊತೆಗೆ ಆನಂದವನ್ನು ನೀಡುತ್ತದೆ. ಒಂದು ಚಿತ್ರ ಇಲ್ಲವೇ ಶಿಲ್ಪಕೃತಿ ಸಾವಿರಾರು ವರ್ಷಗಳ ಇತಿಹಾಸವನ್ನು ನಮ್ಮ ಕಣ್ಣಮುಂದೆ ನಿಲ್ಲಿಸುವ ಶಕ್ತಿ ಪಡೆದಿವೆ. "[೧೫] ಎನ್ನುವುದಕ್ಕೆ ಚಿಟ್ಟಿಯವರ ಚಿತ್ರಗಳೇ ಸಾಕ್ಷಿ.

ಭಾರತೀಯ ಸಂವೇದನೆಗಳಿಗನುಗುಣವಾಗಿ. ವೈಯಕ್ತಿಕವಾದ ತಂತ್ರ. ಶೈಲಿ. ಕಲಾ ನೈಪುಣ್ಯತೆಗಳಿಂದ ನೈಜ ಕಲೆಯ ಮೂಲಭೂತ ಸತ್ವಗಳನ್ನು ರಕ್ತಗತ ಮಾಡಿಕೊಂಡು. ಭಾರತೀಯ ಕಾವ್ಯ. ನಾಡಿನ ಪುರಾಣ ಇತಿಹಾಸಗಳ ಸತ್ವಭರಿತ ಸನ್ನಿವೇಶಗಳ ಭಾಷಿಕ ರೂಪದಲ್ಲಿನ ಕಥೆಗೆ ಯಥಾವತ್ತಿನ ಚಿತ್ರರೂಪವನ್ನು ಕೊಟ್ಟಿದ್ದಾರೆ. ಭಾರತೀಯ ಪೌರಾಣಿಕ. ಕಾವ್ಯದೃಶ್ಯಗಳಿಗೆ ಪಶ್ಚಿಮದ ಅಕಡೆಮಿಕ್ ಸೂತ್ರಗಳನ್ನು ಅಳವಡಿಸಿದರೂ ತಮ್ಮದೇ ಆದ ದೇಶೀಯ ಸಂಸ್ಕೃತಿಯ ಆಧ್ಯಾತ್ಮಿಕ ನಿಲುವು. ಭಾವ ಲಾವಣ್ಯ. ಆಳವಾದ ಅನುಭವ. ವಿವರವಾದ ನಿರೂಪಣೆಗಳನ್ನು ಹೊಂದಿರುವ ವಿಶಿಷ್ಟ ಕಲಾಕೃತಿಗಳಾಗಿವೆ.

---

೧೩. ಎಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಾಂಸ್ಕೃತಿಕ ಸಮೀಕ್ಷೆ. ಪುಟ ೨೮೩

೧೪. ಎಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಾಂಸ್ಕೃತಿಕ ಸಮೀಕ್ಷೆ. ಪುಟ ೭

೧೫. ಟಿ. ಆರ್. ತಿಪ್ಪೇಸ್ವಾಮಿ : ವಿಶ್ವಕನ್ನಡ ಸಂಪುಟ - ೩. ಪುಟ ೬೨೧

i) ಧಾರ್ಮಿಕ ವಿಷಯಗಳನ್ನು ಕುರಿತ ಚಿತ್ರಗಳು :

ಚಿತ್ರ ೧೫ : ನೃತ್ಯ ಮಾಡುತ್ತಿರುವ ಶಿವ. ಅಳತೆ ೩೦" X ೨೨". ಶಿವನು ಇಲ್ಲಿ ಹಿಮಾಲಯದಲ್ಲಿರುವಂತೆ ಚಿತ್ರಿಸಲಾಗಿದೆ. ಅಂದರೆ ಅದು ನಮ್ಮ ಕೈಲಾಸದ ಕಲ್ಪನೆಯೇ ಆಗಿದೆ. ಈ ಚಿತ್ರವನ್ನು "೧೯೫೫ ರಲ್ಲಿ ಮುಂಬಯಿಯ ವಾರಪತ್ರಿಕೆಯಾದ 'ಧರ್ಮಯುಗ' ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ."[೧೬] ಚಿಟ್ಟಿಯವರ ಈ ಚಿತ್ರವು ಅತ್ಯದ್ಭುತವಾದದ್ದು. ಶಿವನು ನೃತ್ಯ ಮಾಡುತ್ತಿದ್ದಾನೆ. ಆತನ ಹಿಂದೆಯೇ ಆತನ ವಾಹನವಾದ ನಂದಿಯು ಸಹಿತ ಸ್ಫೂರ್ತಿಯಿಂದ ಎದ್ದು ನಿಂತಂತಿದೆ. ಹಿನ್ನೆಲೆಯಲ್ಲಿ ಹಿಮದಿಂದ ಆವೃತವಾದ ಬೆಟ್ಟಗಳಿವೆ. ೧೮ ಕೈಗಳ ಶಿವನ ಕಲ್ಪನೆ ಅದ್ಭುತ. ಇದನ್ನು ಬಹುಶಃ ಬಾದಾಮಿ ಚಾಲುಕ್ಯರ ಗುಹೆಯಲ್ಲಿಯ ಶಿಲ್ಪದ ಪ್ರೇರಣೆಯಿಂದ ರಚಿಸಿದಂತಿದೆ. ತುಟಿಗಳಲ್ಲಿ ಕಿರುನಗೆ, ಕಣ್ಣಿನಲ್ಲಿ ಶಾಂತತೆ. ಇದು ತಾಂಡವನೃತ್ಯವಾಗಿರದೆ. ಶಿವನು ಆನಂದದಿಂದ ನರ್ತಿಸುತ್ತಿರುವ ದೃಶ್ಯವಾಗಿದೆ. ಶಿವನ ಕೆಲವು ಕೈಗಳಲ್ಲಿ ವಸ್ತುಗಳಿದ್ದರೆ ಕೆಲವು ಕೈಗಳು ನೃತ್ಯದ ಹಸ್ತಮುದ್ರೆಯನ್ನು ಹೊಂದಿವೆ. ಅದರಲ್ಲಿ ಎರಡು ಕೈಗಳು ಕೊರಳಲ್ಲಿಯ ನಾಗೇಂದ್ರನನ್ನು ಉತ್ಸಾಹದಿಂದ ಎತ್ತಿ ಹಿಡಿದಿವೆ. ಅತ್ಯಲ್ಪ ಸೌಮ್ಯವರ್ಣಗಳ ಮಧ್ಯ ಹಿತಮಿತವಾದ ಪ್ರಖರ ವರ್ಣಗಳನ್ನು ಬಳಸಿ ತಮ್ಮ ಕೌಶಲ್ಯವನ್ನು ಮೆರೆದಿದ್ದಾರೆ. ಇಲ್ಲಿ ಬಳಸಿದ ಪ್ರಖರ ವರ್ಣಗಳು ಸಹಿತ (ಕೆಂಪು, ಹಳದಿ) ಸೌಮ್ಯಭಾವದೊಂದಿಗೆ ಚಿತ್ರಕ್ಕೆ ಆನಂದದ ಮೆರಗನ್ನು ತಂದಿವೆ. ಹೆಚ್ಚಾಗಿ ಚಿಟ್ಟಿಯವರು ಅತ್ಯಲ್ಪ ವರ್ಣಗಳನ್ನು ಬಳಸಿ ಚಿತ್ರಗಳನ್ನು ರಚಿಸುತ್ತಾರೆ. ಈ ಚಿತ್ರ ರೇಖಾಪ್ರಧಾನವೂ ಆಗಿದೆ. ಇದು ಭಾರತೀಯ ಕಲಾ ಶೈಲಿಗೆ ಪೋಷಕವಾಗುವಂತಹ ನೀಳರೇಖೆಗಳ ಆಕಾರ. ಯೋಜನೆಗಳಲ್ಲಿಯ ಲಯಬದ್ಧತೆ. ನೆರಳು - ಬೆಳಕಿನ ನವಿರಾದ ರಚನೆಯನ್ನು ಹೊಂದಿದೆ. ಅಷ್ಟೇ ಅಲಂಕಾರಿಕವಾಗಿಯೂ ಇದೆ.

ii) ಅದರಲ್ಲೇ ಎರಡನೆಯ ಚಿತ್ರ **ವೀಣಾಪಾಣಿ** ಸರಸ್ವತಿಯ ಕಲ್ಪನೆಯೂ ಅಷ್ಟೇ ರಮ್ಯವಾಗಿದೆ. ಸೌಮ್ಯಮುಖ ಕಳೆ. ನಾಲ್ಕು ಕೈಗಳನ್ನು ಹೊಂದಿದ ಸರಸ್ವತಿಯ ಎರಡು ಕೈಗಳು ವೀಣೆ ನುಡಿಸುತ್ತಿದ್ದರೆ. ಇನ್ನೆರಡು ಕೈಗಳಲ್ಲಿ ಒಂದು ಪುಸ್ತಕ ಹಿಡಿದರೆ ಇನ್ನೊಂದು ನವಿಲು ಗರಿಯನ್ನೇ ಲೇಖನಿ ಮಾಡಿ ಹಿಡಿದಿದೆ. ಪಕ್ಕದಲ್ಲಿಯೇ ಆಕೆಯ ವಾಹನ ನವಿಲು ಇದೆ. ಆಕಾಶದಲ್ಲಿ ಶಿವ. ಶಿವನ ಆಕೃತಿ ದೂರದಲ್ಲಿದ್ದರೂ ಕಲ್ಪನೆಯನ್ನು ಅತ್ಯಂತ ತಾಳ್ಮೆಯಿಂದ ರಚಿಸಿದ್ದಾರೆ. ಇಲ್ಲಿಯೂ ಅಲ್ಪ ವರ್ಣವನ್ನು ಲೇಪಿಸಿದ್ದಾರೆ. ಇದು ಸಹಿತ ಅದೇ ಕಾಲದಲ್ಲಿ ರಚಿಸಿದ್ದಾದ್ದರಿಂದ ಮೇಲೆ ವಿವರಿಸಿದ ಚಿತ್ರದ ಗುಣಧರ್ಮಗಳೆಲ್ಲ ಈ ಚಿತ್ರದಲ್ಲಿವೆ. ಶಾಂತ ವಾತಾವರಣ ತುಟಿಗಳ ಮೇಲೆ ಮಂದಹಾಸ. ಸರಸ್ವತಿ ಕುಳಿತಿರುವ ವಿಶೇಷ ಭಂಗಿ ನೋಡುಗರ ಮನ ಸೆಳೆಯುತ್ತದೆ. ಅಳತೆ ೩೦" X ೨೨" ಚಿಟ್ಟಿಯವರ ಸಂಗ್ರಹದಿಂದ. ಇದನ್ನು ೧೯೫೫ ರಲ್ಲೇ ಚಿತ್ರಿಸಿದ್ದಾರೆ.

ಚಿಟ್ಟಿಯವರು ತಮ್ಮ ಅನುಭವದೊಂದಿಗೆ ಪೂರಕ ವರ್ಣಗಳನ್ನು ಬಳಸಿ ಚಿತ್ರವತ್ತಾದ ನಿರೂಪಣೆಯಿಂದ ಪ್ರಾಚೀನ ಕಾವ್ಯಗಳಲ್ಲಿ ವರ್ಣಿತವಾದ ವಸ್ತು ವೈವಿಧ್ಯ ಹಾಗೂ ಅಲ್ಲಿಯ ವ್ಯಕ್ತಿಚಿತ್ರಗಳಿಗೆ ಪೂರಕವಾದ ವೇಷಭೂಷಣಗಳು. ಸುತ್ತಲ ರಮ್ಯಪ್ರಕೃತಿ. ರಸನಿಷ್ಠೆ. ಭಾವನೆ ಅವು ನಮ್ಮನ್ನು ಶತಮಾನಗಳ ಹಿಂದಿನ ಪರಿಸರಕ್ಕೆ ಕರೆದೊಯ್ಯುವಂತೆ ಚಿತ್ರಿಸಿದ್ದಾರೆ.

---

೧೬. ಚಿಟ್ಟಿಯವರು ಆ ಚಿತ್ರದ ಪ್ರತಿಮಾಡಿಸಿ ಅದರ ಕೆಳಗಡೆ ಈ ವಿಷಯವನ್ನು ನಮೂದಿಸಿದ್ದಾರೆ. ಆ ಪತ್ರಿಕೆ ಈಗ ಲಭ್ಯವಿಲ್ಲ.

ಚಿತ್ರ ೧೬ : ಈ ಚಿತ್ರ 'ಅಜ ವಿಲಾಪ' ರಾಮಾಯಣದ ಉಪಕಥೆಯ ಚಿತ್ರ. ಚಿತ್ರದಲ್ಲಿ ಅಜನು ಮಧ್ಯದಲ್ಲಿ ಕುಳಿತಿದ್ದಾನೆ. ಆತನ ಹೆಂಡತಿ ಆತನ ತೊಡೆಯ ಮೇಲೆ ಪ್ರಾಣ ಬಿಟ್ಟಿದ್ದಾಳೆ. ಅವಳ ಕೊರಳಲ್ಲಿ ಆಕಾಶ ಮಾರ್ಗವಾಗಿ ಬಂದ ಒಂದು ಹಾರ ಬಿದ್ದೊಡನೆ ಆಕೆಯ ಪ್ರಾಣ ಹೊರಟು ಹೋಗುವ ಪ್ರಸಂಗ. ಸುತ್ತೆಲ್ಲ ಸಖಿಯರು ದುಃಖಿತಪ್ತರಾಗಿದ್ದಾರೆ. ನವಿಲು, ಇತರ ಪಕ್ಷಿಗಳು, ಬಾತಕೋಳಿ, ಜಿಂಕೆ ಎಲ್ಲವೂ ಆ ದುಃಖದಲ್ಲಿ ಪಾಲ್ಗೊಂಡಂತಿದೆ.

ಈ ಚಿತ್ರದ ಸಂಯೋಜನೆ ಭಾರತೀಯ ರಜಪೂತ ಶೈಲಿಯ ಕಿರುರೂಪ (miniature) ಚಿತ್ರದ ಸಂಯೋಜನೆಯಂತಿದೆ. ಎಲ್ಲವನ್ನೂ ವಿವರವಾಗಿ ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಗಿಡ ಮರ ಪಕ್ಷಿಗಳಿಂದ ಕೂಡಿದ ವನಸೌಂದರ್ಯವಿದೆ. ಅದರ ಹಿಂದೆ ಆಕಾಶ ಅಲ್ಲಿ ನಾರದ ಮುನಿ ಆ ಮಾರ್ಗವಾಗಿ ಹೋಗುತ್ತಿರುವಂತಿದೆ. ಅಜನು ದುಃಖದಿಂದ ವಿಲಾಪ ಮಾಡುತ್ತಿದ್ದಾನೆ. ರೇಖಾ ಪ್ರಧಾನವಾದ ಈ ಚಿತ್ರದಲ್ಲಿ ಸಖಿಯರು ಹಣೆಗೆ ಕೈಯಿಟ್ಟು ರೋದಿಸುತ್ತಿದ್ದಾರೆ. ಸಮೀಪದಲ್ಲಿ ಸಿಂತಂಥ ಸೇವಕರು ತಲೆ ತಗ್ಗಿಸಿ ದುಃಖ ವ್ಯಕ್ತಪಡಿಸಿದ್ದಾರೆ. ಪ್ರಾಣಿ ಪಕ್ಷಿಗಳೆಲ್ಲ ಬೆರಗಾಗಿ ನೋಡುತ್ತಿರುವಂತೆ ಒಂದೆಡೆ ಸೇರಿಸುವುದರ ಮೂಲಕ ಕರುಣೆ ರಸಪ್ರಧಾನದ ಚಿತ್ರವಾಗಿ ಪರಿಣಾಮಕಾರಿಯಾಗುವಂತೆ ಚಿತ್ರಿಸಿದ್ದಾರೆ. ಇಲ್ಲಿ ಬಳಸಿದ ವರ್ಣಗಳ ತೆಳು ಲೇಪನ ಚಿತ್ರಕ್ಕೆ ಸಿರಿವಂತಿಕೆಯನ್ನು ತಂದಿದೆ. ಚಿತ್ರ ನೋಡಿದಾಕ್ಷಣ ಕಿರು ರೂಪದ ಕಲ್ಪನೆ ಥಟ್ಟನೆ ಮೂಡುವಂತಿದೆ. ಇದರಿಂದ ಚೆಟ್ಟಿಯವರ ಮೇಲೆ ಕಿರು ರೂಪ ಚಿತ್ರಗಳ ಪ್ರಭಾವವಾಗಿರುವುದು ಮನನವಾಗುತ್ತದೆ. ಈ ಚಿತ್ರದ ಅಳತೆ ೨೨" X ೩೦". ಇದು ಚೆಟ್ಟಿಯವರ ಸಂಗ್ರಹದಲ್ಲಿದೆ. (ಅಧ್ಯಾಯ ಏಳರಲ್ಲಿಯ ೩೮ ನೇ ಚಿತ್ರವನ್ನು ನೋಡಿರಿ)

ಚಿತ್ರ ೧೭ : ಇದು ಸಹಿತ ಮಹಾಕಾವ್ಯ ರಾಮಾಯಣದ ದೃಶ್ಯವಾಗಿದೆ. ಭರತನು ರಾಮನನ್ನು ವನವಾಸದಿಂದ ತಿರುಗಿ ಅಯೋಧ್ಯೆಗೆ ಕರೆದುಕೊಂಡು ಹೋಗಲು ಬಂದ ದೃಶ್ಯ. ರಾಜ್ಯದಲ್ಲಿ ಭರತನಿಲ್ಲದ ಸಂದರ್ಭದಲ್ಲಿ ಕೈಕೆಯಿಯು ಮಂಥರೆಯ ಮಾತನ್ನು ಕೇಳಿ ರಾಮನಿಗೆ ಪಟ್ಟಾಭಿಷೇಕ ಮಾಡಲು ಅವಕಾಶ ನೀಡದೇ ದಶರಥ ರಾಜನಿಗೆ ತನ್ನೆರಡು ವರಗಳನ್ನು ಕೇಳಿ, ರಾಮನು ೧೪ ವರ್ಷ ವನವಾಸಕ್ಕೆ ಹೋಗುವಂತೆ ಮಾಡುತ್ತಾಳೆ. ಅಜ್ಜನ ರಾಜ್ಯಕ್ಕೆ ಹೋಗಿದ್ದ ಭಾರತನು ವಿಷಯ ತಿಳಿದು ಬಹಳ ದಿಗ್ಮೂಢನಾಗುತ್ತಾನೆ. ತಂದೆಯ ಮರಣ, ಅಣ್ಣನ ವನವಾಸ ಆತನ ಮನಸ್ಸಿಗೆ ಘಾಸಿಯನ್ನುಂಟು ಮಾಡುತ್ತವೆ. ಭರತನಿಗೆ ಪಟ್ಟಾಭಿಷೇಕ ಮಾಡಬೇಕೆನ್ನುವಾಗ, ಅಣ್ಣನ ಮೇಲೆ ಪ್ರೀತಿಯನ್ನು ಇಟ್ಟಿದ್ದ ತ್ಯಾಗಮಯಿ ಭರತ ಅಣ್ಣನಿಲ್ಲದ ರಾಜ್ಯ ತನಗೆ ಬೇಡವೆಂದು ಅಣ್ಣನನ್ನು ಮರಳಿ ಅಯೋಧ್ಯೆಗೆ ಕರೆತರಲು ಅರಣ್ಯಕ್ಕೆ ಬರುತ್ತಾನೆ. ಆ ದೃಶ್ಯದ ಚಿತ್ರ ಇಲ್ಲಿದೆ.

ಇಲ್ಲಿ ಭರತನು ರಾಮನನ್ನು ಅಪ್ಪಿಕೊಂಡು ದುಃಖ ಪಡುತ್ತಿದ್ದಾನೆ. ಪಕ್ಕದಲ್ಲಿರುವ ಮಂತ್ರಿ ಸಾಮಂತ್ರನು ರಾಮನಿಗೆ ದೈನ್ಯದಿಂದ ವಂದಿಸುತ್ತಿದ್ದಾನೆ. ಬಲಗಡೆ ಲಕ್ಷ್ಮಣ, ಎಡಕ್ಕೆ ಸೀತೆ, ಭರತನು ಕೈಯಲ್ಲಿ ಕಿರೀಟವನ್ನು ಹಿಡಿದುಕೊಂಡಿದ್ದಾನೆ. ರಾಮನು ಆತನನ್ನು ಸಂತೈಸುತ್ತಾ ಕಿರೀಟವನ್ನು ಆತನಿಗೆ ಹಿಂದಿರುಗಿಸುತ್ತಿದ್ದಾನೆ. ಸೀತೆಯೂ ಸಹಿತ ಅವರ ದುಃಖದಲ್ಲಿ ಪಾಲ್ಗೊಂಡಿದ್ದಾಳೆ. ದುಃಖಮಯವಾದ ವಾತಾವರಣ ನಿರ್ಮಿಸುವಲ್ಲಿ ಚೆಟ್ಟಿಯವರು ಸೌಮ್ಯವರ್ಣಗಳನ್ನು ಬಳಸಿದ್ದಾರೆ. ರಾಮಲಕ್ಷ್ಮಣರ ನಾರಿನುಡುಗೆ ಭರತನ ರಾಜವೈಭವ ಎರಡನ್ನೂ ಸಂದರ್ಭಕ್ಕೆ

ತಕ್ಕಂತೆ ರಚಿಸಿದ್ದಾರೆ. ಕುದುರೆಗಳ ಅಂಗಸೌಷ್ಠವ. ಹಿನ್ನೆಲೆಯಲ್ಲಿ ಬಳಸಿದ ದಟ್ಟ ಹಸಿರು. ಕಾಡಿನ ಗಂಭೀರತೆಯನ್ನು ಸೂಚಿಸುವಂತಿದೆ. ಅಳತೆ ೩೦" X ೨೨". ಚೆಟ್ಟಿಯವರ ಸಂಗ್ರಹದಲ್ಲಿದೆ.

ಚಿತ್ರ ೧೮ : ೧೨ ನೇ ಶತಮಾನದ ಶರಣೆಯರಲ್ಲೇ ಅಗ್ರಸ್ಥಾನವನ್ನು ಪಡೆದ. ಕನ್ನಡದ ಮೊದಲ ಕವಯಿತ್ರಿ. ಶಿವನನ್ನೇ ತನ್ನ ಪತಿ ಎಂದು. ಶರಣಸತಿ ಲಿಂಗಪತಿ ಎಂಬ ಸಮರ್ಪಣಾ ಭಾವವನ್ನು ಹೊಂದಿದ ವೀರವಿರಾಗಿಣಿ ಮಹಾದೇವಿಯಕ್ಕ ಮಲ್ಲಿಕಾರ್ಜುನನನ್ನು ಕಾಣಹೊರಟ ಚಿತ್ರ. " ಅಳಿಸಂಕುಳವೆ.... ನೀವು ಕಾಣಿರೆ " ಎಂಬ ಅಕ್ಕನ ವಚನವನ್ನು ದೃಶ್ಯೀಕರಿಸಿದಂತಿದೆ. ಇದು ಸಹಿತ ಭಾರತೀಯ ಕಲಾಶೈಲಿಯನ್ನು ಅಳವಡಿಸಿದ್ದಾಗಿದೆ. ಚೆನ್ನಮಲ್ಲಿಕಾರ್ಜುನನನ್ನು ಕಾಣುವ ಹಂಬಲ ಹೊತ್ತು ದಿಗಂಬರೆಯಾಗಿ ಕಾನನದ ಮಧ್ಯ ಸಾಗುತ್ತಲಿರುವ ಅಕ್ಕ ಗಿಳಿ. ಕೋಗಿಲೆ. ನವಿಲು. ಹಂಸ. ದುಂಬಿ ಮುಂತಾದ ಪಶು-ಪಕ್ಷಿಗಳಿಗೆ ಚೆನ್ನಮಲ್ಲಿಕಾರ್ಜುನನ ಇರುವನ್ನು ಕಾತರಳಾಗಿ ನೀವು ಕಂಡಿರೇ ಎಂದು ಕೇಳುತ್ತಿರುವ ಅಕ್ಕ. ತನ್ನ ಕರಸ್ಥಳದಲ್ಲಿ ಕೊರಳಲ್ಲಿ ಕಟ್ಟಿದ ಲಿಂಗವನ್ನೆ ಹಿಡಿದು ಪ್ರಪಂಚದ ಪರಿವೆ ಇಲ್ಲದೆ ನಡೆದ ಚಿತ್ರಣವಿದೆ. ಚಿತ್ರದಲ್ಲಿ ಮಹಾದೇವಿಯಕ್ಕನ ಮನದ ಕುತೂಹಲವನ್ನೂ ಆಕೆಯ ಸುತ್ತಲೂ ನಿಂತ ಪ್ರಾಣಿ-ಪಕ್ಷಿಗಳು ಆಲಿಸುತ್ತಿರುವಂತಿದೆ. ಇಡೀ ಕಾನನದ ರಮ್ಯತೆಯ ಸೊಬಗನ್ನು ಇಲ್ಲಿ ಸೃಷ್ಟಿಸಿದ್ದಾರೆ. ಹಾರಾಡುವ ಪಕ್ಷಿಯಿಂದ ಹಿಡಿದು ನೆಲದ ಮೇಲಿನ ಹುಲ್ಲಿಗೂ ಸಹಿತ ಅಷ್ಟೇ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಇಂತಹ ಚಿತ್ರಗಳಲ್ಲಿ ನೀಲವರ್ಣವನ್ನು ಬಳಸಿ ಚಿತ್ರದಲ್ಲಿ ಸೌಮ್ಯತೆಯನ್ನು ತರುವುದು ಇವರ ವಿಶೇಷತೆಯಾಗಿದೆ. ಅಲ್ಲದೆ ನಿಸರ್ಗ ಚಿತ್ರರಚಿಸುವಲ್ಲಿನ ಜಾಣ್ಮೆ. ಪ್ರಾಣಿಗಳ ಅಂಗಸೌಷ್ಟವದ ನೈಜರೂಪದ ಆಳವಾದ ಅಧ್ಯಯನ ಎಲ್ಲವೂ ಪ್ರಂಶಸನೀಯವೆನಿಸುತ್ತದೆ. ಈ ರೀತಿ ಚಿತ್ರಗಳಲ್ಲಿ ಲಯ. ಭಾವ. ಅದರ ಸಂಗತಿಯ ಹಿಂದಿರುವ ಸತ್ಯದ ಅರಿವನ್ನು ಈ ಚಿತ್ರಗಳು ಮಾಡಿಕೊಡುತ್ತವೆ.

ಡಾ॥ ಜಿ. ಎಸ್. ಶಿವರುದ್ರಪ್ಪನವರು ಹೇಳುವಂತೆ : " ನಿಜವಾದ ಕಲೆಗಾರ ತನ್ನ ಪರಿಭಾವನೆಯಿಂದ ಕಾಣುವುದು ಈ ಎಲ್ಲ ಸತ್ಯಗಳ ಅಂತರಂಗದ ನಿತ್ಯ ಸತ್ಯವನ್ನು. ಅವನು ಕಾಣುವುದು ಕೇವಲ ಸಂಗತಿಸತ್ಯವನ್ನಲ್ಲ. ಸಂಗತಿಗಳ ಹಿಂದಿರುವ ನಿಯಮ ರೂಪವಾದ ಸೂತ್ರ ಸತ್ಯವನ್ನು " [೧೭] ಎನ್ನುವಂತೆ ಚೆಟ್ಟಿಯವರ ಕೃತಿಗಳು ಆ ಸಂಗತಿಗಳ ಹಿಂದಿರುವ ಸತ್ಯದ ಅರಿವನ್ನು ಸಹೃದಯನಿಗೆ ನೀಡುತ್ತವೆ.

ಚಿತ್ರ ೧೯ : " ಹರದನ ಹಳ್ಳಿಯ ಗೋಸಲ ಚೆನ್ನಬಸವ ಸ್ವಾಮಿಗಳಿಂದ ಸಿದ್ಧಲಿಂಗೇಶ್ವರನ ದೀಕ್ಷಾ ಸಮಾರಂಭ " [೧೮]

ಈ ಚಿತ್ರದ ಬಗ್ಗೆ ಈಗಾಗಲೇ ರೇಖಾಚಿತ್ರದಲ್ಲಿ ವಿವರಣೆಯನ್ನು ನೀಡಲಾಗಿದೆ. ಸಿದ್ಧಲಿಂಗ ಸ್ವಾಮಿಗಳಿಗೆ ಷಟ್‌ಸ್ಥಲ ಉಪದೇಶವನ್ನು ಮಾಡುತ್ತಿರುವ ಸಂದರ್ಭವಲ್ಲಿ ಸುತ್ತಲೂ ಕುಳಿತ ಶರಣರೆಲ್ಲ ಭಕ್ತಿಯಿಂದ ಅದನ್ನು

---

೧೭. ಜಿ. ಎಸ್. ಶಿವರುದ್ರಪ್ಪ : ಸೌಂದರ್ಯ ಸಮೀಕ್ಷೆ : ಪುಟ ೪೦೭

೧೮. ಶ್ರೀ ಸಂಗನ ಬಸವ ಚರಮೂರ್ತಿಗಳು (ಸಂ.) : ಶ್ರೀ ವಿರಕ್ತ ತೋಂಟದಾರ್ಯ : ಶ್ರೀ ಸಿದ್ಧೇಶ್ವರ ಮಹಾಪುರಾಣವು : ಪುಟ ೩೭ (ಈ ರೇಖಾಚಿತ್ರದ ವರ್ಣಚಿತ್ರವೇ ಇದಾಗಿದೆ)

ಆಲಿಸುತ್ತಿದ್ದಾರೆ. ಕೆಲವು ಹೆಂಗಳೆಯರು ಪೂಜಾಸಾಮಗ್ರಿಗಳನ್ನು ತರುತ್ತಿದ್ದಾರೆ. ಕಂಬಕ್ಕೆ ಕಟ್ಟಿದ ಬಾಳೆಕಂಬ. ಶುಭ ಸಮಾರಂಭದ ಸೂಚಕಗಳಾಗಿವೆ. ವರ್ತುಲಾಕಾರದ ಸಂಯೋಜನೆ. ತೆಳುವಾದ ವರ್ಣಲೇಪನ ಚಿತ್ರದ ಸಿರಿತನಕ್ಕೆ ಮೆರಗು ನೀಡಿದೆ. ಈ ಚಿತ್ರವನ್ನು ಗದುಗಿನ ಶ್ರೀ ತೋಂಟದಾರ್ಯ ಮಠದಲ್ಲಿ ಕಾಣಬಹುದು. ಇದರ ಅಳತೆ ೨' X ೨ ೧/೨' ಜಲವರ್ಣ ಚಿತ್ರಿಸಿದ ವರ್ಷ ೧೯೭೬.

ಚಿತ್ರ ೨೦ : ಬೇಡರ ಕಣ್ಣಪ್ಪನ ಮುಗ್ಧ ಭಕ್ತಿಯ ಚಿತ್ರ. ಈ ಚಿತ್ರವನ್ನು ನೇರವಾಗಿ ಕಂದು ಬಣ್ಣದ ರಟ್ಟಿನ ಮೇಲೆ (plywood) ಜಲವರ್ಣದಿಂದ ಚಿತ್ರಿಸಿದ್ದಾರೆ. ಬೇಡರ ಕಣ್ಣಪ್ಪನು ಶಿವನ ಕಣ್ಣಿನಲ್ಲಿ ನೀರು ಬರುತ್ತಿರುವುದನ್ನು ನೋಡಿ ತನ್ನ ಕಣ್ಣನ್ನೇ ಕಿತ್ತು ಶಿವನ ಮೂರ್ತಿಗೆ ಹಚ್ಚುತ್ತಾನೆ. ಆಗ ಇನ್ನೊಂದು ಕಣ್ಣಿನಲ್ಲಿ ನೀರು ಕಾಣಿಸಿದಾಗ ಒಂದು ಕಣ್ಣನ್ನು ಕಿತ್ತುಕೊಂಡ ಬೇಡ ಇನ್ನೊಂದು ಕಣ್ಣನ್ನು ಕಿತ್ತು ಹಚ್ಚಬೇಕೆಂದು ಅದರ ಮೂಲಸ್ಥಾನವನ್ನು ಗುರುತಿಸುವದಕ್ಕಾಗಿ ತನ್ನ ಕಾಲನ್ನೇ ಶಿವನ ಕಣ್ಣಿಗೆ ಇಡುತ್ತಾನೆ. ಇನ್ನೊಂದು ಕಣ್ಣನ್ನು ಕೀಳುವ ಸಂದರ್ಭದಲ್ಲಿ ಶಿವನು ಪ್ರತ್ಯಕ್ಷನಾಗಿದ್ದಾನೆ.

ಇಲ್ಲಿ ಚೆಟ್ಟಿಯವರು ಬೇಡನ ಮುಗ್ಧ ಭಕ್ತಿಯನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಬಾಣದಿಂದ ಕಣ್ಣನ್ನು ಕೀಳುತ್ತಿರುವ ಬೇಡನ ಮುಖ ಹಾಗೂ ಆತನ ಶರೀರವನ್ನು ಗಟ್ಟಿತನದಿಂದ ಕೂಡಿದೆ ಎಂಬುದಕ್ಕೆ ಸ್ನಾಯುಗಳನ್ನು ಎತ್ತಿ ತೋರಿಸಿದ್ದಾರೆ. ಅದೇ ಶಿವನ ರೂಪವನ್ನು ಅತ್ಯಂತ ಕೋಮಲತೆಯ ರೇಖೆಗಳಿಂದ ಚಿತ್ರಿಸಿದ್ದಾರೆ. ಆ ದೃಶ್ಯ ನೋಡಿದ ಪೂಜಾರಿ ಹೆದರಿ ಓಡುತ್ತಿದ್ದಾನೆ. ಆತನ ಮುಖದಲ್ಲಿ ಭಯವಿದೆ. ಬೇಡನ ಹಿಂದೆ ಬಂದ ಬೇಟೆ ನಾಯಿಗಳು ಅತ್ಯಂತ ಚುರುಕಾಗಿರುವಂತೆ ಚಿತ್ರಿಸಿದ್ದಾರೆ. ಶಿವನಿಗೆ ಅರ್ಪಿಸಲು ತಂದ ಪ್ರಾಣಿಗಳ ಹಸಿಮಾಂಸ ಚೆಲ್ಲಾಪಿಲ್ಲಿಯಾಗಿ ಹರಡಿದೆ. ಆತನ ಕಣ್ಣಿನಲ್ಲಿ ಸುರಿಯುತ್ತಿರುವ ರಕ್ತವನ್ನು ಅಷ್ಟೇ ನೈಜವಾಗಿ ಚಿತ್ರಿಸಿದ್ದಾರೆ.

ಇಲ್ಲಿ ಚೆಟ್ಟಿಯವರು ಕೆಲವೇ ಬಣ್ಣಗಳನ್ನು ಉಪಯೋಗಿಸಿದ್ದು. ಕೆಲವು ಕಡೆ ಬೇಡನ ಶರೀರದ. ಪೂಜಾರಿಯ ಶರೀರದ ಕೆಲವು ಭಾಗಗಳಿಗೆ ನೇರವಾಗಿ ರಟ್ಟನ್ನೇ (plywood) ಬಳಸಿಕೊಂಡಿದ್ದಾರೆ. ಶಿವನು ಪ್ರತ್ಯಕ್ಷನಾದಾಗ ಹರಡಿದ ಬೆಳಕು ಆ ದೇವಾಲಯದ ಕತ್ತಲನ್ನು ಓಡಿಸುವಂತಿದೆ. ಶಿವ ಹಾಗೂ ಶಿವನ ಮುಂದಿನ ಬಸವನ ಶಿಲೆಯ ಮೈವಳಿಕೆಯನ್ನು ನೈಜವಾಗಿ ಚಿತ್ರಿಸಿದ್ದಾರೆ. ಪಕ್ಕದಲ್ಲಿ ಗಣಪತಿಯ ವಿಗ್ರಹ. ಆ ಕೋಣೆಯ ಬೆಳಕು. ಆ ವಿಗ್ರಹದ ಮೇಲೆ ನಿಚ್ಚಳವಾಗಿ ಹರಡಿದೆ. ಚೆಟ್ಟಿಯವರ ಸಂಗ್ರಹದಲ್ಲಿ ಇದೆ.

ಚಿತ್ರ ೨೧ : ಶ್ರವಣಕುಮಾರನ ಚರಿತ್ರೆಯ ದೃಶ್ಯ. ಶ್ರವಣಕುಮಾರನು ತನ್ನ ಕಣ್ಣು ಕಾಣದ ವೃದ್ಧ ತಂದೆ - ತಾಯಿಗಳನ್ನು ಯಾತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗಮಧ್ಯದಲ್ಲಿ ಬಾಯಾರಿಕೆಯಾಗಿ ನೀರು ತರಲು ಹೋದಾಗ. ಬೇಟೆಯಾಡಲು ಬಂದ ದಶರಥನು ನೀರಿನ ಶಬ್ದವನ್ನು ಪ್ರಾಣಿಯದೇ ಎಂದು ತಪ್ಪಾಗಿ ಗ್ರಹಿಸಿ ಬಾಣ ಪ್ರಯೋಗಿಸುತ್ತಾನೆ. ಶ್ರವಣನಿಗೆ ಆ ಬಾಣ ತಗುಲಿ ಮರಣ ಹೊಂದುತ್ತಾನೆ.

ಈ ಚಿತ್ರದಲ್ಲಿ ಶ್ರವಣಕುಮಾರನ ಎದೆಗೆ ಬಾಣ ನಾಟಿದೆ. ಆ ಘಟನೆಯನ್ನು ನಿರೀಕ್ಷಿಸಲಾರದ ಆತನ ತಂದೆ - ತಾಯಿಗಳು ಗೋಳಿಡುತ್ತಿದ್ದಾರೆ. ತಾನು ಮಾಡಿದ ಪಾಪಕ್ಕಾಗಿ ದಶರಥನು ಪಶ್ಚಾತ್ತಾಪ ಪಟ್ಟು ಆ ನೀರನ್ನು ತಾನೇ ಆ ವೃದ್ಧ ದಂಪತಿಗಳಿಗೆ ನೀಡುತ್ತಿದ್ದಾನೆ. ಅತ್ಯಂತ ದುಃಖಮಯವಾದ ಸನ್ನಿವೇಶ. ಇಲ್ಲಿ ಚೆಟ್ಟಿಯವರು ಕಾನನದ

ಪ್ರತಿಯೊಂದು ವಸ್ತುವನ್ನು ವಿವರವಾಗಿ ಚಿತ್ರಿಸಿ. ನೀಲಿ ವರ್ಣವನ್ನು ಹೆಚ್ಚಾಗಿ ಬಳಸಿದ್ದರಿಂದ ಸೌಮ್ಯ ವಾತಾವರಣದೊಂದಿಗೆ ಇಡೀ ಕಾನನವೇ ಆ ದುಃಖದಲ್ಲಿ ಪಾಲ್ಗೊಂಡಂತಿದೆ. ಕಾವಡಿಯಲ್ಲಿ ಕುಳಿತ ವೃದ್ಧ ತಂದೆ - ತಾಯಿಗಳು ಮುಂದೆ ತಮಗಾರು ಗತಿ ಎಂಬಂತೆ ದುಃಖಿಪಡುತ್ತಿದ್ದಾರೆ. ದಶರಥನ ಮುಖದಲ್ಲಿ ದುಃಖ ಹಾಗೂ ಪಶ್ಚಾತ್ತಾಪ ಎರಡೂ ಭಾವನೆಗಳು ಅಭಿವ್ಯಕ್ತವಾಗಿವೆ. ಅಲ್ಲಿ ನೆರೆದ ಒಂದಿಬ್ಬರ ಮುಖದಲ್ಲಿ ಕರುಣೆಯ ಭಾವನೆ ಮೂಡಿದೆ. ಸೌಮ್ಯ ವರ್ಣಗಳೊಂದಿಗೆ ಈ ಎಲ್ಲಾ ಭಾವನೆಗಳನ್ನು ಒಟ್ಟಾರೆಯಾಗಿ ಅಭಿವ್ಯಕ್ತಿಸಿ ಆ ಚರಿತ್ರೆಯ ಕರುಣ ರಸವೇ ಅಲ್ಲಿ ಹರಿದಂತೆ ಕಾವ್ಯಮಯವಾಗಿ ಚಿತ್ರಿಸಿದ್ದಾರೆ.

ಚಿತ್ರ ೨೨ : ಶಿವನು ಶಂಖನಾದ ಮಾಡುತ್ತಿರುವ ಚಿತ್ರ. ಇದು ಅಜಂತಾ ಶೈಲಿಯಂತೆಯೇ ಚಿತ್ರಿಸಲಾಗಿದೆ. ರೇಖಾಪ್ರಧಾನವಾಗಿದ್ದು ಶಾಂತವಾದ ಅಜಂತಾ ಮಾದರಿಯ ಕಣ್ಣುಗಳು. ಶಿವನು ಇಲ್ಲಿ ನಾಗಾಭರಣನಾಗಿ ಕಾಣಿಸಿಕೊಂಡಿದ್ದಾನೆ. ಆತನ ಮೈಮೇಲಿನ ಎಲ್ಲ ಆಭರಣಗಳು ನಾಗದೇವತೆ. ಬಲಗೈಯಲ್ಲಿ ಶಂಖವನ್ನು ಹಿಡಿದು ನಾದ ಮಾಡುತ್ತಿದ್ದರೆ. ಎಡಗೈ ಆತನ ವಾಹನವಾದ ಬಸವನ ಮೇಲೆ ಇದೆ. ಇಲ್ಲಿ ಎರಡೇ ಬಣ್ಣಗಳನ್ನು ಬಳಸಿದ್ದರೂ ಚಿತ್ರದ ಭಾವನೆ ನೈಜವಾಗಿ ಹೊರ ಹೊಮ್ಮಿದೆ. ಭಾರತೀಯ ಶೈಲಿಯಂತೆಯೇ ಚಪ್ಪಟೆಯಾಗಿ ಬಣ್ಣಗಳನ್ನು ಬಳಸಿದ್ದಾರೆ. ಹಾವಿನ ಮೈವಳಿಕೆ ಮೆದುತನದ ಅನುಭವ ನೀಡುತ್ತದೆ. ಈ ಚಿತ್ರದ ಅಳತೆ ೩೦" X ೨೨" ಚಿಟ್ಟಿಯವರ ಸಂಗ್ರಹದಲ್ಲಿದೆ. (ಅಧ್ಯಾಯ ಏಳರಲ್ಲಿಯ ೧೦ ನೇ ಚಿತ್ರವನ್ನು ನೋಡಿರಿ)

ಚಿತ್ರ ೨೩ : ಭಸ್ಮಾಸುರ ಮೋಹಿನಿ ಚಿತ್ರ. ನಾರಾಯಣನು ಮೋಹಿನಿ ರೂಪ ಧರಿಸಿ. ಭಸ್ಮಾಸುರನನ್ನು ತನ್ನ ಮೋಹಪಾಶದಿಂದ ಬಂಧಿಸಿ ನೃತ್ಯ ಕಲಿಸುವ ನೆಪದಲ್ಲಿ ಆತನ ಬಲಗೈ ನೆತ್ತಿಯ ಮೇಲೆ ಬರುವಂತೆ ಮಾಡಿದಾಗ ಆತ ಸುಟ್ಟು ನಾಶವಾಗುತ್ತಾನೆ. ಈ ಸನ್ನಿವೇಶದ ಹಿನ್ನೆಲೆಯಲ್ಲಿ ಚಿತ್ರಿಸಿದ ಚಿತ್ರ. ಇದನ್ನು ಓಪೆಕ ಬಣ್ಣಗಳಾದ ಪೋಸ್ಟರ್ (poster) ಬಣ್ಣಗಳಿಂದ ಚಿತ್ರಿಸಿದ್ದಾರೆ. ಇದನ್ನು ೧೯೮೪ ರಲ್ಲಿ ರಚಿಸಿದ್ದಾರೆ. ಇಂತಹದೆ ಒಂದು ಚಿತ್ರವನ್ನು ತೈಲ ವರ್ಣದಲ್ಲೂ ರಚಿಸಿದ್ದಾರೆ. ಅದನ್ನು ಕುರಿತು ನಂತರ ಚರ್ಚಿಸಲಾಗಿದೆ.

ಪಶ್ಚಿಮ ಅಕಾಡೆಮಿಕ್ ಶೈಲಿಯದಾದರೂ ವಿಷಯ. ನಿರೂಪಣೆ. ಭಾವನೆ. ಚಿಟ್ಟಿಯವರವೆ. ದೇಶಿಯ ಅಲಂಕರಣೆ ಈ ಚಿತ್ರದಲ್ಲಿದೆ. ಭಸ್ಮಾಸುರನ ದೈತ್ಯ ಆಕಾರ. ಮೋಹಿನಿಯ ಮೋಹಕ ಭಂಗಿ. ಇಬ್ಬರೂ ನೃತ್ಯದಲ್ಲಿ ತಲ್ಲೀನರಾದಂತೆ ಇದೆ. ಭಸ್ಮಾಸುರನ ಮೋಹಕ ದೃಷ್ಟಿ ಮೋಹಿನಿಯ ಮೇಲೆ ಕೇಂದ್ರೀಕೃತವಾಗಿದೆ. ಇಲ್ಲಿ ಬಣ್ಣಗಳನ್ನು ಆಕೃತಿಗಳಿಗೆ ತಕ್ಕಂತೆ ಲೇಪನ ಮಾಡಿದ್ದಾರೆ. ಭಸ್ಮಾಸುರನು ರಾಕ್ಷಸನಾದ್ದರಿಂದ ಶ್ಯಾಮವರ್ಣವನ್ನು ಮೋಹಿನಿಗೆ. ಗೌರವರ್ಣವನ್ನು ನೀಡಿದ್ದಾರೆ. ಇಲ್ಲಿ ಬಣ್ಣಗಳ ಮುಖಾಂತರವು ಆ ವ್ಯಕ್ತಿಗಳ ಮನೋಧರ್ಮವನ್ನು ಚಿಟ್ಟಿಯವರು ವಿಷದಪಡಿಸಿದ್ದಾರೆ. ಹಿನ್ನೆಲೆಯಲ್ಲಿ ವನದ ಸೌಂದರ್ಯ. ಅಲ್ಲಿ ಬಳಸಿದ ಕಿತ್ತಳೆ ಬಣ್ಣದ ಜೊತೆ ನೀಲಿ ಬಣ್ಣ ಸೇರಿ ಆಹ್ಲಾದದ ವಾತಾವರಣವನ್ನು ನಿರ್ಮಾಣ ಮಾಡಿದೆ. ಮೋಹಿನಿ ಮತ್ತು ಭಸ್ಮಾಸುರನು ಧರಿಸಿದಂತ ಆಭರಣಗಳನ್ನು ಅವರಿಗೆ ತಕ್ಕಹಾಗೆ ಅತೀ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಅಳತೆ ೩೦" X ೨೨". ಚಿಟ್ಟಿಯವರ ಸಂಗ್ರಹವಲ್ಲಿದೆ. (ಅಧ್ಯಾಯ ಏಳರಲ್ಲಿಯ ೩೧ ನೇ ಚಿತ್ರವನ್ನು ನೋಡಿರಿ)

ii) ಸಾಮಾಜಿಕ ಕಾಲ್ಪನಿಕ ಚಿತ್ರಗಳು :

ಚೆಟ್ಟಿಯವರು ಐತಿಹಾಸಿಕ. ಧಾರ್ಮಿಕ ಚಿತ್ರಗಳನ್ನಷ್ಟೇ ಅಲ್ಲದೇ ಸಾಮಾಜಿಕ ವಿಷಯಗಳನ್ನೊಳಗೊಂಡ ಚಿತ್ರಗಳನ್ನು ರಚಿಸಿದ್ದಾರೆ.

ಚಿತ್ರ ೨೪ : ಈ ಚಿತ್ರ 'ಕಲಾರಾಧನೆಯ' ಕಲ್ಪನೆಯಂತೆ ಇದೆ. ಲಲಿತ ಕಲೆಗಳಾದ ಚಿತ್ರ. ಶಿಲ್ಪ. ಸಂಗೀತ ಮತ್ತು ಕಾವ್ಯ ರಚನೆಗಳಲ್ಲಿ ತಲ್ಲೀನರಾದ ಕಲಾವಿದರು ಅಪ್ರತ್ಯಕ್ಷವಾಗಿ ಕಲಾದೇವತೆಯ ಆರಾಧನೆಯಲ್ಲೇ ತೊಡಗಿರುತ್ತಾರೆ ಎನ್ನುವುದನ್ನು ಈ ಕಲಾಕೃತಿ ಪ್ರತಿಬಿಂಬಿಸುತ್ತದೆ. ಕಲಾದೇವತೆ ಬಂಡೆಯ ಮೇಲೆ ಆಸೀನವಾಗಿದ್ದಾಳೆ. ಋಷಿಮುನಿ ಆಕೆಗೆ ಮುಕುಟವನ್ನಿಟ್ಟು ಅಲಂಕರಿಸುತ್ತಿದ್ದಾನೆ. ಕಲಾದೇವತೆಗೆ ಸಲ್ಲಿಸುವ ಗೌರವದಂತೆ ಕಲಾರಾಧನೆ ಕಿರೀಟವಾಗಿದೆ. ಹಿನ್ನೆಲೆಯಲ್ಲಿ ಸೂರ್ಯೋದಯ ಮುನ್ನೆಲೆಯಲ್ಲಿ ಮೋಹಕವಾದ ಮಂಜು ಹರಡಿದ ಮುಂಜಾವನ್ನು ನೆನಪಿಸುವ ವಾತಾವರಣ ಚಿತ್ರಿತವಾಗಿದೆ. ಈ ಪ್ರಶಾಂತ ಪ್ರಸನ್ನ ವಾತಾವರಣದಲ್ಲಿ ಬೆರೆತು ಮೈ ಮರೆತ ಕಲಾವಿದರು ಪ್ರೇರಿತರಾಗಿ ಚಿತ್ರ-ಶಿಲ್ಪ. ನೃತ್ಯ. ಸಂಗೀತ ಮತ್ತು ಕಾವ್ಯ ಸೃಷ್ಟಿಯಲ್ಲಿ ಭಾವಪರವಶರಾಗಿದ್ದಾರೆ. ಕಲಾವಿದರ ಪ್ರತಿಭೆಯ ಸಮರ್ಪಣೆಗೆ. ಕಲಾದೇವತೆಗೆ ಕಾರುಣ್ಯದಿಂದ ಆಶೀರ್ವದಿಸಿ ಹರಸುತ್ತಿರುವಂಥ ಭಾವಪೂರ್ಣ ಕಲ್ಪನೆ ಇದಾಗಿದೆ.

ಇಲ್ಲಿ ಚೆಟ್ಟಿಯವರು ಸ್ತ್ರೀ ಆಕೃತಿಗಳನ್ನೇ ಚಿತ್ರಿಸಿದ್ದಾರೆ. ಇದೊಂದು ವಿಶೇಷ. ಅತ್ಯಂತ ಮೋಹಕ ಭಂಗಿಗಳಲ್ಲಿ ಅವರು ತಮ್ಮ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಈ ಭೂಮಿಯ ಮೇಲೆ ನಿರಂತರ ಸಾಗುವ ನಿತ್ಯೋತ್ಸವವಾಗಿ ನಡೆಯುತ್ತಿರುವ ಕಲಾರಾಧನೆಗಳ ಅಪೂರ್ವ ಅನುಭವವನ್ನುಂಟು ಮಾಡುತ್ತದೆ. ಸೂರ್ಯೋದಯದ ವರ್ಣಗಳು ಸಹಿತ ಇಲ್ಲಿ ಸೌಮ್ಯವಾಗಿ ಬಳಸಿಕೊಂಡಿದ್ದಾರೆ. ಅತ್ಯಲ್ಪ. ಕೆಲವೇ ಬಣ್ಣಗಳಲ್ಲಿ ಪೂರ್ತಿ ಕಲಾಕೃತಿಯ ಆಂತರಿಕ ಭಾವನೆಗಳನ್ನು ವ್ಯಕ್ತಪಡಿಸುವಲ್ಲಿ ಚೆಟ್ಟಿಯವರ ಕಲ್ಪನೆ ಅವರ್ಣನೀಯ.

ಚಿತ್ರ ೨೫ : ಇದು 'ಕೋಲೆ ಬಸವ'ನ ಚಿತ್ರವಾಗಿದೆ. ಉತ್ತರ ಕರ್ನಾಟಕದಲ್ಲಿ ಇಂತಹ ಅಲೆಮಾರಿ ಜನಾಂಗದವರನ್ನು ಹೆಚ್ಚಾಗಿ ಕಾಣುತ್ತೇವೆ. ಆತನು ಕೇಳುವ ಪ್ರಶ್ನೆಗಳಿಗೆ ಆ ಕವಲೆತ್ತು ಗೋಣು ಅಲ್ಲಾಡಿಸುತ್ತದೆ. ಮನೆ. ಮನೆಗೆ ಹೋಗಿ ಈ ರೀತಿ ಪ್ರದರ್ಶಿಸಿ ಉಪಜೀವನ ನಡೆಸುವ ಜನಾಂಗ. ಇಲ್ಲಿ ಬಸವನನ್ನು ಚೆನ್ನಾಗಿ ಅಲಂಕರಿಸಿ ಕೈಯಲ್ಲಿ ಬಾರಿಸುವ ಡೋಲಿನಂತಹ ವಾದ್ಯವನ್ನು ಹಿಡಿದುಕೊಂಡು ಬಾರಿಸುತ್ತಾ ಹೊರಟಿದ್ದಾನೆ. ಚೆಟ್ಟಿಯವರು ಈ ಚಿತ್ರದಲ್ಲಿ ಡೋಲು ಬಾರಿಸುವವನ ದೇಹವನ್ನು ಕೃಷವಾಗಿ ರಚಿಸುವುದರೊಂದಿಗೆ ಆತನ ಬಡತನದ ಅರಿವನ್ನು ಮೂಡಿಸಿದ್ದಾರೆ. ತಲೆಯ ಮೇಲೆ ಸುತ್ತಿದ ರುಮಾಲು ಹಾಗೂ ಉಟ್ಟ ಧೋತರ ಬಿಟ್ಟರೆ ಬೇರೆ ಬಟ್ಟೆಯನ್ನೂ ಧರಿಸಿಲ್ಲ. ಅವರದೇ ಆದ ಶೈಲಿಯಂತೆ ಉದ್ದನೆಯ ಆಕೃತಿ. ಅದಕ್ಕೆ ತಕ್ಕಂತೆ ತೆಳುವಾದ ವರ್ಣಲೇಪನ ಚಿತ್ರಕ್ಕೆ ಮೆರಗು ಕೊಟ್ಟಿದೆ. ಈ ಚಿತ್ರ ನಮ್ಮ ನಾಡಿನಲ್ಲಿ ನಶಿಸಿ ಹೋಗುತ್ತಿರುವ ಒಂದು ಜನಾಂಗದ ಪರಿಚಯವನ್ನು ಮಾಡಿಕೊಡುತ್ತದೆ. ಈಗ ಈ ರೀತಿ ಬರುವ ಜನ ಅತ್ಯಂತ ವಿರಳ. ಇಲ್ಲಿ ಬಸವ (ಎತ್ತು) ಆಗಲೇ ತಲೆ ಕೆಳಗೆ ಮಾಡಿಕೊಂಡು ಒಡೆಯನ ಪ್ರಶ್ನೆಗಳಿಗೆ ಉತ್ತರಿಸಲು ಸಿದ್ಧವಾಗಿರುವಂತಿದೆ. ಪಾರದರ್ಶಕ ವರ್ಣಗಳ ನವಿರಾದ ನೆರಳು - ಬೆಳಕು ಚಿತ್ರಕ್ಕೆ ಮೆರಗು ತಂದಿವೆ. ಹಿನ್ನೆಲೆಯಲ್ಲಿ ಮರವನ್ನು ಅಷ್ಟೇ ಸಂಕ್ಷಿಪ್ತವಾಗಿ ರಚಿಸಿದ್ದಾರೆ. (ಅಧ್ಯಾಯ ೪ರಲ್ಲಿಯ ೧೮ ನೇ ಚಿತ್ರವನ್ನು ನೋಡಿರಿ)

ಚಿತ್ರ ೨೬ : 'ಕೊರಿವಾಲಿ' ಚಿತ್ರ. ಶ್ರೀಮಂತ ವರ್ಗದವರ ಮನರಂಜನೆಗೋಸ್ಕರ ನೃತ್ಯ ಮಾಡುತ್ತಿರುವ ಮಹಿಳೆ. ಈ ರೀತಿಯ ನೃತ್ಯ ಈಗ ವಿರಳ. ಚಿತ್ರದ ಮಧ್ಯಭಾಗದಲ್ಲಿ ಮಹಿಳೆ ನೃತ್ಯ ಮಾಡುತ್ತಿದ್ದಾಳೆ. ಆಕೆಯೇ ಇಲ್ಲಿ ಕೇಂದ್ರಬಿಂದು. ಆಕೆಯ ನೃತ್ಯಕ್ಕೆ ಪಕ್ಕ ವಾದ್ಯವಾಗಿ ಒಬ್ಬನು ತಬಲ ನುಡಿಸುತ್ತಿದ್ದರೆ. ಇನ್ನೊಬ್ಬ ಸರೋದವನ್ನು ನುಡಿಸುತ್ತಿದ್ದಾನೆ. ಹಿನ್ನೆಲೆಯಲ್ಲಿ ಒಬ್ಬ ಶ್ರೀಮಂತ (ಆತನ ವೇಷಭೂಷಣಗಳಿಂದ ಅರ್ಥೈಸಬಹುದು) ನೃತ್ಯ ವೀಕ್ಷಿಸುತ್ತಿದ್ದಾನೆ. ಇನ್ನೊಬ್ಬ ಮಧ್ಯಸ್ತಿಕೆ ವಹಿಸುವಂತಹ ದಳ್ಳಾಳಿಯಂತೆ. ಕೋಣೆಯ ಬಾಗಿಲಿಗೆ ಆತುಕೊಂಡು ಆ ಕೋಠಿಯ ಒಡತಿ ನಿಂತಿದ್ದಾಳೆ.

ಆ ದೃಶ್ಯದ ಕಲ್ಪನೆಯನ್ನು ಚೆಟ್ಟಿಯವರು ಸುಲಲಿತವಾಗಿ ನಿರೂಪಿಸಿದ್ದಾರೆ. ನೃತ್ಯದ ಹೆಜ್ಜೆಯ ಜೊತೆಗೆ ವಾದ್ಯಗಳ ಧ್ವನಿಯು ಹೊರಹೊಮ್ಮುತ್ತಿರುವಂಥ ನೈಜ ಭಾವನೆ ಮೂಡುತ್ತದೆ. ಚಿತ್ರದಲ್ಲಿ ಅಂತಹ ಚಾಲನೆ ಇದೆ. ಜರತಾರಿ ವಸ್ತುಗಳೆಂದು ತೋರಿಸಲು ಇಲ್ಲಿ ಚೆಟ್ಟಿಯವರು ಅತಿ ಜಾಣ್ಮೆಯಿಂದ ನಿಂಬೆಯ ಹಳದಿ ವರ್ಣವನ್ನು ಉಪಯೋಗಿಸಿದ್ದಾರೆ. ಉಗ್ರವರ್ಣವಾದರೂ ನೋಡುಗನ ಕಣ್ಣಿಗೆ ಸೌಮ್ಯವಾಗಿಯೇ ಕಾಣುವ ರೀತಿಯಲ್ಲಿ ವರ್ಣಸಂಯೋಜನೆ ಮಾಡಿದ್ದಾರೆ. ಹಿನ್ನೆಲೆಯ ಕಡುಬಣ್ಣ ರಾತ್ರಿಯ ಕಲ್ಪನೆಯನ್ನು ನೀಡುತ್ತದೆ. ಜರಿಯ ಕಲ್ಪನೆಯನ್ನು ಕುಂಚದಿಂದ ಕೆಲವು ಎಳೆತಗಳಿಂದ ತೋರಿಸಿದ್ದಾರೆ. ಅಳತೆ ೧೬ ಸೆಂ.ಮೀ. X ೧೯ ಸೆಂ.ಮೀ. ಚೆಟ್ಟಿಯವರ ಸಂಗ್ರಹದಲ್ಲಿದೆ.

iii) ಬೌದ್ಧ ಧರ್ಮದ ಚಿತ್ರಗಳು :

ಬುದ್ಧನ ಚರಿತ್ರೆಯಲ್ಲಿ ಬರುವಂತಹ ಘಟನೆಗಳು. ಬುದ್ಧನ ಚರಿತ್ರೆಯನ್ನು ಕುರಿತು ೬ ಚಿತ್ರಗಳನ್ನು ರಚಿಸಿದ್ದಾರೆ. ಅದರಲ್ಲಿ ಮೂರು ಚಾರ್‌ಕೋಲ ಮಾಧ್ಯಮ ಚಿತ್ರಗಳು ಹಾಗೂ ಎರಡು ತೈಲ. ಒಂದು ಜಲವರ್ಣ ಚಿತ್ರ. ಈ ಚಿತ್ರಗಳನ್ನು ೧೯೬೧ ರಲ್ಲಿ ಚಿತ್ರಿಸಿದ್ದಾರೆ.

ಬೌದ್ಧ ಧರ್ಮದ ತತ್ವಗಳನ್ನು ಸಾರುವಂತ ಚಿತ್ರಗಳು ಅಜಂತೆಯಲ್ಲಿ ೭ ನೆಯ ಶತಮಾನದಲ್ಲೇ ಭಿತ್ತಿಚಿತ್ರಗಳ ರೂಪದಲ್ಲಿ ಅಭಿವ್ಯಕ್ತಗೊಂಡವು. ಧರ್ಮಪ್ರಸಾರಕರು ತಮ್ಮ ಸಂದೇಶ ಭಾವನೆಗಳನ್ನು ಪ್ರಚಾರ ಮಾಡಲು ಚಿತ್ರಕಲೆಯನ್ನೊಂದು ಪ್ರಮುಖ ಮಾಧ್ಯಮವನ್ನಾಗಿ ಮಾಡಿಕೊಂಡರು. "ಓದು ಬರೆಹಗಳೆಂದರೆ ಒಂದೊಂದೇ ಜನಾಂಗದ ಗುಪ್ತ ಧನವು. ಆದರೆ ಯಾವತ್ತೂ ಮಾನವನ ವರ್ಗಕ್ಕೆ ಮಾತಿನಿಂದ ತಿಳಿಸಲಾರದ ಸಂದೇಶವನ್ನು ಚಿತ್ರಗಳಿಂದ ತಿಳಿಸಲು ಬರುವುದಲ್ಲದೇ. ಇದಕ್ಕೆ ನಾಡು ನುಡಿಗಳ ಬಂಧನವಿಲ್ಲ."[೧೯] ಆದುದರಿಂದ ಆಗಿನ ಬೌದ್ಧ ಭಿಕ್ಷುಗಳು ಇಂತಹ ಚಿತ್ರ ರಚಿಸಿದರು. ಇಂತಹ ಬುದ್ಧನ ಅನೇಕ ಅಹಿಂಸಾ ತತ್ವವನ್ನು ಆಳವಾಗಿ ಅಧ್ಯಯನ ಮಾಡಿ ಚೆಟ್ಟಿಯವರು ತಮ್ಮದೇ ಆದ ಭವ್ಯ ಕಲ್ಪನೆಯೊಂದಿಗೆ ಚಿತ್ರ ರಚಿಸಿದ್ದಾರೆ. ಈ ಚಿತ್ರಗಳು ಯಾಂತ್ರಿಕವಾಗಿ ಜೀವನ ನಡೆಸುತ್ತಿದ್ದ ಮನುಷ್ಯನಿಗೆ ಜೀವನದ ನೆಲೆ ಬೆಲೆಯನ್ನು ತಿಳಿಸುವ ಜೀವನ ಮೌಲ್ಯಗಳ ಸಂದೇಶವಾಗಿವೆ. ೧೯೬೧ ರಲ್ಲಿ ರಚಿಸಿದ ಈ ಚಿತ್ರಗಳು ಅತ್ಯಂತ ಹೊಸತಾಗಿ ಈಗ ತಾನೆ ರಚಿಸಿದಂತಿವೆ. ಚಾರ್ಕೋಲ್ ಮಾಧ್ಯಮದ ಚಿತ್ರಗಳನ್ನು ಈ ವಿಭಾಗದಲ್ಲಿ ಚರ್ಚಿಸಲಾಗಿದೆ. ಜಲವರ್ಣ ಚಿತ್ರ ಇಲ್ಲಿ ಹಾಗೂ ತೈಲವರ್ಣದ ಚಿತ್ರಗಳನ್ನು ಮುಂದಿನ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

---


೧೯. ಶಿವರಾಮ ಕಾರಂತ : ಭಾರತೀಯ ಚಿತ್ರಕಲೆ. ಪುಟ ೨೧



೧೫. ಶಿವನ ನೃತ್ಯ, ವೀಣಾಪಾಣಿ ಸರಸ್ವತಿ



[illegible]



೧೮. ವೀರ ವಿರಾಗಿಣಿ ಅಕ್ಕಮಹಾದೇವಿ



೧೯. ಹರದನ ಹಳ್ಳಿಯ ಗೋಸಲ ಚೆನ್ನಬಸವ ಸ್ವಾಮಿಗಳಿಂದ ಸಿದ್ಧಲಿಂಗೇಶ್ವರ ದೀಕ್ಷಾ ಸಮಾರಂಭ



[illegible]



೨೧. ಶ್ರವಣ ಕುಮಾರ ವೃದ್ಧ ತಂದೆ-ತಾಯಿಗಳೊಂದಿಗೆ



೨೪. ಕಲಾರಾಧನೆ



೨೫. ಸಿದ್ಧಾರ್ಥನು ಬುದ್ಧ ಬಿಕ್ಷುಕನಾಗಿ ಬಂದ ದೃಶ್ಯ



೨೬. ಕೋಠಿವಾಲಿ

ಚಿತ್ರ ೨೭ : ಸಿದ್ಧಾರ್ಥನು ಬುದ್ಧನಾಗಿ, ಭಿಕ್ಷುಕನಾಗಿ ಬಂದ ದೃಶ್ಯ. ಆತನನ್ನು ಕಾಣಲು ಬಂದಂಥ ಯಶೋಧರೆ ಹಾಗೂ ಆತನ ಪುತ್ರ ರಾಹುಲರು ಕೈ ಮುಗಿದು ಕೃಪಾಭಿಕ್ಷೆಯನ್ನು ಕೋರುತ್ತಿರುವರು. ಹಿಂದೆ ಬಂದ ರಾಜಪರಿವಾರವಿದೆ. ಸಿದ್ಧಾರ್ಥನು ಜ್ಞಾನವನ್ನು ಪಡೆದುಕೊಂಡು ಬಂದಿದ್ದಾನೆ ಎನ್ನುವುದಕ್ಕೆ ಸಂಕೇತವಾಗಿ ಹಿನ್ನೆಲೆಯಲ್ಲಿ ಸಿದ್ಧಾರ್ಥನು ಧ್ಯಾನಾಸಕ್ತನಾಗಿರುವಂತೆ ಮಸುಕಾಗಿ ಚಿತ್ರಿಸಿದ್ದಾರೆ. ಚಿತ್ರಗತನಾರಿಯ ಲಾವಣ್ಯ, ಸೊಬಗು ಮನೋಹರವಾಗಿ ಮೂಡಿಬಂದಿದೆ. ಆದರೂ ನೋಡುವವರ ಕಣ್ಣುಗಳಿಗೆ ವಿಕೃತ ಭಾವನೆಯ ಬದಲು ಅಪಾರ ಭಕ್ತಿಯನ್ನು ಪ್ರೇರೇಪಿಸುವುದು. " ಆತ್ಮನನ್ನು ಉನ್ನತಿಯ ಹಾದಿಗೆ ಸೆಳೆಯುವ ಚಿತ್ರಗಳೆಂದರೆ ಇಂಥವುಗಳು "[೨೦] ಎನ್ನುವ ಡಾ॥ ಶಿವರಾಮ ಕಾರಂತರ ಮಾತಿನಲ್ಲಿ ಸತ್ಯವಿದೆ. ಚೆಟ್ಟಿಯವರ ವರ್ಣಗಳ ಮಧುರ ಸಮತುಲ್ಯತೆ ಚಿತ್ರದಲ್ಲಿ ಶಾಂತ ಹಾಗೂ ಭಕ್ತಿರಸವನ್ನು ಹರಿಸಿದೆ. ಅಳತೆ ೨೨" X ೩೦" ಚೆಟ್ಟಿಯವರ ಸಂಗ್ರಹದಿಂದ.

iv) ಪುರಂದರದಾಸರ ಜೀವನ ಚರಿತ್ರೆಯಲ್ಲಿಯ ಘಟನೆಗಳ ಚಿತ್ರಗಳು :

೧೫ ನೇ ಶತಮಾನದಲ್ಲಿ ಆಗಿಹೋದ ಮಹಾಸಂತ ಪುರಂದರದಾಸರು ಮೊದಲಿಗೆ ಮಹಾ ಜಿಪುಣರಾಗಿದ್ದು, ಹೆಂಡತಿ ಸರಸ್ವತಿಬಾಯಿಯ ಪ್ರಭಾವದಿಂದ ಹರಿಭಕ್ತರಾಗಿ ಬದಲಾವಣೆ ಹೊಂದಿದವರು. ಮೊದಲು ಭಗವಂತನ ಪರೀಕ್ಷೆಗೆ ಒಳಗಾಗಿ ಕೊನೆಗೆ ಅವನ ಕರುಣೆಗೆ ಪಾತ್ರರಾಗಿದ್ದಾರೆ.

ಚಿತ್ರ ೨೮ : " ಸರಸ್ವತಿ ಬಾಯಿ ತನ್ನ ನತ್ತನ್ನು ಬ್ರಾಹ್ಮಣನಿಗೆ ದಾನ ಮಾಡುವ ದೃಶ್ಯ " ಚಿತ್ರದಲ್ಲಿ ಬಡಬ್ರಾಹ್ಮಣನೊಬ್ಬ ತನ್ನ ಮಗನ ಮುಂಜಿವೆಗಾಗಿ ದಾನ ಕೇಳುತ್ತಿದ್ದಾನೆ. ಅಂತೆಯೇ ತನ್ನದೆಂಬ ವಸ್ತು ತವರವರು ಕೊಟ್ಟ ಮೂಗತಿಯೊಂದೇ ಎಂದು ತಿಳಿದ ಸರಸ್ವತಿಬಾಯಿ ಅದನ್ನು ಬಿಚ್ಚಿ ಬ್ರಾಹ್ಮಣನಿಗೆ ಕೊಡುತ್ತಿದ್ದಾಳೆ. ಹಿಂದೆ ಆತನ ಮಗನಿರುವನು. ಮನೆಯ ಒಳಗೆ ದಾಸಿಯೊಬ್ಬಳು ಇಣುಕಿ ನೋಡುತ್ತಿರುವಳು. ಪಕ್ಕದಲ್ಲಿ ಆಕಳು ನಿಂತಿದೆ.

ಬೇಡಲು ಬಂದ ಬ್ರಾಹ್ಮಣನನ್ನು ಅತ್ಯಂತ ಕೃಷ ಹಾಗೂ ದೀನನಂತೆ ಚಿತ್ರಿಸಿದ್ದಾರೆ. ಅಂತೆಯೇ ಮಗನು, ಸರಸ್ವತಿಬಾಯಿಯ ಮುಖದಲ್ಲಿ ದಾನ ಮಾಡುತ್ತಿರುವ ಸಂತೃಪ್ತಿಭಾವವಿದೆ. ದಾಸಿಯ ಮುಖದಲ್ಲಿ ಗಾಭರಿ ಇದೆ. ದೂರದಲ್ಲಿ ದನಗಳ ಹಟ್ಟಿ. ಶ್ರೀಮಂತ ವರ್ಗದ ಮನೆಯ ವಸ್ತು ಎಲ್ಲವನ್ನೂ ವಿವರವಾಗಿ ಚಿತ್ರಿಸಿದ್ದಾರೆ. ಸೌಮ್ಯ ವರ್ಣಗಳು, ಕೃತಿಯಲ್ಲಿ ಒಂದು ರೀತಿಯ ಕಾರ್ಯ ನಡೆಯುತ್ತಿರುವ ಚಲನೆ ಇದೆ. ಚಿತ್ರದ ಅಳತೆ ೧೭" X ೧೫" ಚೆಟ್ಟಿಯವರ ಸಂಗ್ರಹದಲ್ಲಿದೆ.

ಚಿತ್ರ ೨೯ : ಇಲ್ಲಿ ಎರಡು ಚಿತ್ರಗಳಿವೆ. ಮೊದಲ ಚಿತ್ರದಲ್ಲಿ ಪುರಂದರ ದಾಸರು ಹಂಪಿಗೆ ಹೋದಾಗ ಅವರ ಗುರುಗಳಾದ ವ್ಯಾಸರಾಯರು ಅವರ ಜೊತೆಗಿದ್ದಾರೆ. ಹಿನ್ನೆಲೆಯಲ್ಲಿ ವಿರೂಪಾಕ್ಷ ದೇವಾಲಯವಿದೆ. ಪಕ್ಕದಲ್ಲಿ ತುಂಗಭದ್ರಾ ನದಿ ಹರಿಯುತ್ತಿದೆ. ವ್ಯಾಸರಾಯರ ಕರುಣೆಯಿಂದ ನೀರಿನಲ್ಲಿ ಮುಳುಗಿದ ಹುಡುಗನೊಬ್ಬ ಎದ್ದು ಬರುತ್ತಿದ್ದಾನೆ. ಅದನ್ನು ಕಂಡ ಜನರೆಲ್ಲ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ವ್ಯಾಸರಾಯರ ಘನತೆ, ಪುರಂದರದಾಸರು

---

೨೦. ಶಿವರಾಮ ಕಾರಂತ : ಭಾರತೀಯ ಚಿತ್ರಕಲೆ, ಪುಟ ೨೭

ಗುರುವಿನ ಶಕ್ತಿಗೆ ಮಣಿದ ಭಾವನೆ ವ್ಯಕ್ತವಾಗಿದೆ. ಜನರ ವಿಸ್ಮಯ ಭಾವನೆಗಳು ಇಲ್ಲಿವೆ. ಚಿತ್ರದಲ್ಲಿ ದೃಶ್ಯಾಂತರವಿದೆ. ಉಗ್ರ ಹಾಗೂ ಸೌಮ್ಯ ವರ್ಣಗಳ ಮೇಳಾಪವಿದೆ. ೧೬" X ೧೫" ಚಿಟ್ಟಿಯವರ ಸಂಗ್ರಹದಲ್ಲಿದೆ.

ಚಿತ್ರ ೩೦ : ಇನ್ನೊಂದು ಚಿತ್ರದಲ್ಲಿ ದಾಸರು ವೇಶ್ಯೆಗೆ ಬಂಗಾರದ ಕಡಗವನ್ನು ಕೊಡುತ್ತಿರುವುದು. 'ಒಮ್ಮೆ ದಾಸರು ಅವಳ ಮನೆಗೆ ಬಂದಿದ್ದರು. ಅವಳಿಗೆ ಬೆಲೆಬಾಳುವ ಒಂದು ಕಡಗವನ್ನು ಕೊಟ್ಟಿದ್ದರಂತೆ ಅದು ವಿಠ್ಠಲ ದೇವರ ಕಡಗವಾಗಿತ್ತು. ಇನ್ನೊಂದು ದಿನ ಇನ್ನೊಂದು ಕಡಗ ಕೊಡುತ್ತೇನೆ ಎಂದು ಹೇಳಿ ತಂದು ಕೊಟ್ಟರಂತೆ'[೨೧] ಅದಕ್ಕೆ ಊರ ಜನರು ಪುರಂದರ ದಾಸರಿಗೆ ಶಿಕ್ಷೆ ಕೊಟ್ಟರು. ಇದು ವಿಠ್ಠಲನದೆ ಕೆಲಸ ಎಂದು ತಾವು ಮಾಡಿದ ಯಾವುದೋ ತಪ್ಪಿಗೆ ಈ ರೀತಿ ಶಿಕ್ಷೆ ಎಂದುಕೊಂಡರಂತೆ.

ಚಿತ್ರದಲ್ಲಿ ದಾಸರು ಬಂಗಾರದ ಕಡಗವನ್ನು ಕೊಡುತ್ತಿದ್ದಾರೆ. ಹಿಂದೆ ನೆರಳಿನಂತೆ ವಿಠ್ಠಲನೇ ಅವರಿಂದ ಕೊಡಿಸುತ್ತಿರುವಂತೆ ಚಿತ್ರಿಸಿದ್ದಾರೆ. ಅವನ ಪ್ರೇರಣೆ ಎಂದು ತಿಳಿಯುತ್ತದೆ. ಹಿನ್ನೆಲೆಯಲ್ಲಿ ಮನೆಯ ಭಿತ್ತಿ ಹಾಗೂ ಹೊರಬಾಗಿಲಿನ ಹಾದಿಯ ದೃಶ್ಯವಿದೆ. ಚಿತ್ರದ ಅಳತೆ ೧೬" X ೧೫" ಚಿಟ್ಟಿಯವರ ಸಂಗ್ರಹದಲ್ಲಿದೆ.

ಚಿತ್ರ ೩೧ : ಮೊದಲಿನ ಚಿತ್ರದಲ್ಲಿ ದಾಸರು ದೇಶಪರ್ಯಟನೆ ಮಾಡುತ್ತಿರುವ ದೃಶ್ಯ. ಚಿತ್ರದಲ್ಲಿ ದಾಸರು ಭಕ್ತಿಯ ಗೀತೆಗಳನ್ನು ರಚಿಸಿ. ಹಾಡುತ್ತಾ ಹೋಗುತ್ತಿದ್ದಾರೆ. ಒಂದು ವನ. ಹಳ್ಳಿಯ ದೃಶ್ಯ. ವನದ ಮಧ್ಯದಲ್ಲಿ ಗುಡಿಸಲಿವೆ. ಸುತ್ತೆಲ್ಲ ಗಿಡಮರಗಳು. ಅತ್ಯಂತ ಕಡಿಮೆ ಬಣ್ಣಗಳನ್ನು ಬಳಸಿ ಈ ಚಿತ್ರಗಳನ್ನು ಚಿತ್ರಿಸಿದ್ದಾರೆ. ಇದು ರಾತ್ರಿಯ ಸಮಯದ ಪರಿಣಾಮವನ್ನು ಹೊಂದಿದೆ. ಬಾನಲ್ಲಿ ಚಂದಿರನು. ಗಿಡ ಮರಗಳೆಲ್ಲ ಕಪ್ಪಾಗಿ ಕಾಣುತ್ತಿವೆ. ಆ ಬೆಳಕು ದಾಸರ ಮೇಲೆ ಬಿದ್ದು ಅವರು ಪ್ರಮುಖವಾಗಿ ಕಾಣುವಂತೆ ರಚಿಸಿದ್ದಾರೆ. ಅಳತೆ ೧೬" X ೧೫" ಚಿಟ್ಟಿಯವರ ಸಂಗ್ರಹದಿಂದ.

ಚಿತ್ರ ೩೨ : ಎರಡನೆ ಭಾಗದಲ್ಲಿರುವ ಚಿತ್ರದಲ್ಲಿ ದಾಸರು ಕನಸಿನಲ್ಲಿ ವಿಠ್ಠಲನನ್ನು. ವ್ಯಾಸರಾಯರನ್ನು ಕಂಡ ದೃಶ್ಯ.

" ಪಂಢರಾಪುರದಲ್ಲಿ ೨೨ ವರ್ಷಗಳ ಕಾಲ ಪುರಂದರದಾಸರು ನೆಲಸಿದ್ದರೆಂದು ತಿಳಿದು ಬರುವುದು. ಒಂದು ದಿನ ಕನಸಿನಲ್ಲಿ ರಾಜಗುರುಗಳಾದ ವ್ಯಾಸರಾಯರು ಹಂಪೆಯಲ್ಲಿ ಬಂದರೆಂಬುದು ಸಹ ಒಂದು ವಿಶೇಷ ಘಟನೆ "[೨೨] ಚಿತ್ರದಲ್ಲಿ ಪುರಂದರದಾಸರು ಮಲಗಿರುವರು. ಕನಸಿನ ಛಾಯೆ ಎಂಬಂತೆ ಅವರ ಕಣ್ಣಿನಿಂದ ನೇರವಾಗಿ ಹರಡಿದ ವರ್ಣದಲ್ಲಿ ವಿಠ್ಠಲನು ವ್ಯಾಸರಾಯರನ್ನು ಕೈ ಮಾಡಿ ತೋರಿಸುತ್ತಿದ್ದಾರೆ. ಚಿಟ್ಟಿಯವರು ಚಿತ್ರಿಸಿದ ಕನಸಿನ ಕಲ್ಪನೆ ಅದ್ಭುತವಾಗಿದೆ. ಅದೇ ವರ್ಣಗಳು. ಚಿತ್ರದ ಅಳತೆ ೧೬" X ೧೫". ಈ ಚಿತ್ರ ಚಿಟ್ಟಿಯವರ ಸಂಗ್ರಹದಲ್ಲಿದೆ.

---

೨೧. ಜಿ. ಬಿ. ಶಾಸ್ತ್ರಿ : ಪುರಂದರದಾಸರು ಜೀವನ ಚರಿತ್ರೆ. ಪುಟ ೧೬

೨೨. ಜಿ. ಬಿ. ಶಾಸ್ತ್ರಿ : ಪುರಂದರದಾಸರು ಜೀವನ ಚರಿತ್ರೆ. ಪುಟ ೧೬

೨೭. ಪುರಂದರ ದಾಸರು ಹಂಪೆಯಲ್ಲಿ ತಮ್ಮ ಗುರುಗಳೊಂದಿಗೆ





೨೮. ಸರಸ್ವತಿಬಾಯಿ ತನ್ನ ನತ್ತನ್ನು ಬ್ರಾಹ್ಮಣನಿಗೆ ದಾನಮಾಡುವ ದೃಶ್ಯ

[illegible] ಪುರಂದರ ದಾಸರು ವೇಶ್ಯೆಗೆ ಬಂಗಾರದ ಕಡಗ ಕೊಡುತ್ತಿರುವುದು



೩೩. ದಾಸರು ಮದವೇರಿದ ಆನೆಯಿಂದ ಬ್ರಾಹ್ಮಣನನ್ನು ರಕ್ಷಿಸುತ್ತಿರುವುದು





೩೪. ವ್ಯಾಸರಾಯರು ದಾಸರನ್ನು ಶಿಷ್ಯರನ್ನಾಗಿ ಸ್ವೀಕರಿಸಿದ್ದು

೩೧. ದಾಸರು ದೇಶಪರ್ಯಟನೆ ಮಾಡುತ್ತಿರುವ ದೃಶ್ಯ





೩೨. ದಾಸರು ಕನಸಿನಲ್ಲಿ ವಿಠಲ ಹಾಗೂ ವ್ಯಾಸರಾಯರನ್ನು ಕಂಡ ದೃಶ್ಯ

ಚಿತ್ರ ೩೩ : ಮೊದಲಿನ ಚಿತ್ರದಲ್ಲಿ ದಾಸರು ಮದವೇರಿದ ಆನೆಯಿಂದ ಬ್ರಾಹ್ಮಣನನ್ನು ರಕ್ಷಿಸುತ್ತಿರುವುದು. ಚಿತ್ರದಲ್ಲಿ ವನದ ದೃಶ್ಯವಿದೆ. ಒಂದು ಮದವೇರಿದ ಹಿರಿಯಾನೆ ಬ್ರಾಹ್ಮಣನನ್ನು ಎತ್ತೊಗೆಯುವಂತೆ ಬಂದಿದೆ. ದಾಸರು ಗಾಬರಿಯಿಂದ ಆತನನ್ನು ರಕ್ಷಿಸಲು ಮುಂದಾಗಿದ್ದಾರೆ. ಇಲ್ಲಿ ಕಪ್ಪು ಬಿಳುಪು ಎರಡೇ ವರ್ಣಗಳ ಲೇಪನವಿದೆ. ಕಾಗದವನ್ನು ಹಿನ್ನೆಲೆಯಾಗಿ ಅಲ್ಲಲ್ಲಿ ಬಳಸಿಕೊಂಡಿದ್ದಾರೆ. ಆನೆಯ ಚರ್ಮದ ಮೈವಳಿಕೆಯನ್ನು ನೈಜವಾಗಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಚಿತ್ರದ ಅಳತೆ ೧೭" X ೧೫". ಚೆಟ್ಟಿಯವರ ಸಂಗ್ರಹದಲ್ಲಿದೆ.

ಚಿತ್ರ ೩೪ : ಇನ್ನೊಂದು ಕೆಳಗಿನ ಚಿತ್ರದಲ್ಲಿ ವ್ಯಾಸರಾಯರು ದಾಸರನ್ನು ಶಿಷ್ಯರನ್ನಾಗಿ ಬರಮಾಡಿಕೊಂಡದ್ದು. ದಾಸರು ಕೈಮುಗಿದು " ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ " ಎನ್ನುವಂತೆ ಧಾವಿಸಿ ಗುರುವಿನೆಡೆಗೆ ಹೋಗುತ್ತಿದ್ದಾರೆ. ಅಷ್ಟೇ ಆತ್ಮೀಯವಾಗಿ ಪ್ರೀತಿಯಿಂದ ವ್ಯಾಸರಾಯರು ಅವರನ್ನು ಬರಮಾಡಿಕೊಳ್ಳುತ್ತಿದ್ದಾರೆ. ಈ ಚಿತ್ರದಲ್ಲಿ ಭಕ್ತಿ. ಪ್ರೀತಿ. ಸಮರ್ಪಣೆಯ ಭಾವನೆಯಿದೆ. ಹಿನ್ನೆಲೆಯಲ್ಲಿ ಶ್ರೀಕೃಷ್ಣನ ಮಂಟಪವಿದೆ. ಸಂಯೋಜನೆಯಲ್ಲಿ ಚಲನೆ ಇದೆ. ಅಳತೆ ೧೭" X ೧೫". ಚೆಟ್ಟಿಯವರ ಸಂಗ್ರಹದಲ್ಲಿದೆ.

ಭಾವನಾ ಪ್ರಧಾನವಾಗಿ ಈ ಎಲ್ಲ ಚಿತ್ರಗಳನ್ನು ಚಿತ್ರಿಸಿದ್ದಾರಲ್ಲದೆ ಪುರಂದರದಾಸರ ಮುಖವನ್ನು ಎಲ್ಲಾ ಚಿತ್ರಗಳಲ್ಲಿ ಒಂದೇ ರೀತಿಯಾಗಿ ಚಿತ್ರಿಸಿದ್ದಾರೆ. ನೋಡಿದಾಕ್ಷಣ ಇವರೆ ಪುರಂದರದಾಸರೆಂದು ಥಟ್ಟನೆ ಗುರುತಿಸಬಹುದು. ಬೇರೆ ಮಹಾತ್ಮರ ಚರಿತ್ರೆಯ ಚಿತ್ರಗಳಲ್ಲೂ ಈ ರೀತಿಯಲ್ಲಿಯೇ ಚಿತ್ರಿಸಿದ್ದಾರೆ. ಇದು ಚೆಟ್ಟಿಯವರ ವೈಶಿಷ್ಟ್ಯವಾಗಿದೆ.

v) ಪುರಾಣ ವಸ್ತುಗಳ ಹಾಗೂ ಕೆಲವು ಮಠಗಳಲ್ಲಿಯ ಚಿತ್ರಗಳು

ಪುರಾಣಗಳಿಗೆ ಸಂಬಂಧಿಸಿದ ಚಿತ್ರಗಳು :

ಚೆಟ್ಟಿಯವರು ಈ ಕೆಳಗೆ ವಿಶ್ಲೇಷಿಸುವ ಎಲ್ಲಾ ಪುರಾಣ ಚಿತ್ರಗಳನ್ನು ಜಲವರ್ಣದಲ್ಲೇ ರಚಿಸಿದ್ದಾರೆ. ೧೨ ನೇ ಹಾಗೂ ಅದರಿಂದೀಚಿನ ಶತಮಾನಗಳಲ್ಲಿ ಆಗಿಹೋದ ಕಾಯಕಯೋಗಿಗಳು. ಅನುಭಾವಿಗಳು. ಆತ್ಮಜ್ಞಾನಿಗಳು. ಶರಣರ ಜೀವನ ಚರಿತ್ರೆಯನ್ನು ನಿರೂಪಿಸುವ ಪುರಾಣಗಳಿಗೆ ಸಂದರ್ಭಕ್ಕನುಗುಣವಾಗಿ ತಮ್ಮದೇ ಆದ ಶೈಲಿ ತಂತ್ರಗಳಿಂದ ಸಹೃದಯನ ಕಣ್ಮುಂದೆ ಆ ಶರಣರನ್ನು ಮತ್ತೆ ಜೀವಂತಗೊಳಿಸಿ ನಿಲ್ಲಿಸಿದಂತೆ ಚಿತ್ರಿಸಿದ್ದಾರೆ. ಈ ಚಿತ್ರಗಳನ್ನು ರಚಿಸುವಾಗ ಆ ಎಲ್ಲ ಶರಣರು ನಡೆದು ಬಂದ ದಾರಿಯನ್ನು ಆಳವಾಗಿ ಅಧ್ಯಯನ ಮಾಡಿ ಸಂದರ್ಭೋಚಿತ ಚಿತ್ರಗಳನ್ನು ರಚಿಸಿದ್ದಾರೆ. ಈ ಪುರಾಣಗ್ರಂಥಗಳು ವೀರಶೈವ ಧರ್ಮವನ್ನು ಪಾಲಿಸಿ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದಂಥ ಶರಣರ ಚರಿತ್ರೆಯ ಗ್ರಂಥಗಳು. ಕಲಾವಿದರಾದ ಚೆಟ್ಟಿಯವರ ಜೀವನದ ಪ್ರತಿಬಿಂಬವನ್ನು ಈ ಚಿತ್ರಗಳಲ್ಲಿ ಕಾಣಬಹುದು. ಇವರು ರಚಿಸಿದ ಈ ಚಿತ್ರಗಳನ್ನು ಬಹಳಷ್ಟು ಜನರು ಮೆಚ್ಚಿಕೊಂಡಿದ್ದಾರೆ. ಅಂತೆಯೇ " ಕಲಾವಿದನ ಕಲಾಕೃತಿಗಳನ್ನು ಕುರಿತು ಕಲಾಭಿಮಾನಿಗಳು ಮೆಚ್ಚಿ ಬರೆಯುವುದು ಸಾಮಾನ್ಯ. ಆದರೆ ಒಬ್ಬ ಕಲಾವಿದ ಇನ್ನೊಬ್ಬ ಕಲಾವಿದನನ್ನು ಕಂಡು ಮೆಚ್ಚುವುದು ಅತೀ ವಿರಳ. " ವೀರನಾದೊಡೆ ವೈರಿಗಳೂ ಮೆಚ್ಚಬೇಕು. ವ್ರತಿಯಾದೊಡೆ ಅಂಗನೆಯರು

ಮೆಚ್ಚಬೇಕು." [೨೩] ಎಂಬಂತೆ ಅನೇಕ ಕಲಾವಿದರು ಮೆಚ್ಚಿಕೊಂಡಿದ್ದಾರೆ. ಚೆಟ್ಟಿಯವರನ್ನು ೧೫ ನೇ ಶತಮಾನದ ಇಟಲಿಯ ಕಲಾವಿದ ಬೊಟ್ಟಿಸೆಲ್ಲಿಗೆ ಹೋಲಿಸಿ ಹೇಳಿದ್ದಾರೆ : ಬೊಟ್ಟಿಸೆಲ್ಲಿ "ಸುಪ್ರಸಿದ್ಧ ಕಲಾವಿದನು ಕ್ರಿಸ್ತನ ಬಹಳಷ್ಟು ಪೇಂಟಿಂಗ ಮಾಡಿದ ಹಾಗೆಯೇ ಶ್ರೀ ಮುರಿಗೆಪ್ಪನವರು ವೀರಶೈವಧರ್ಮದ ಜಗದ್ಗುರುಗಳ ಮತ್ತು ಅನೇಕ ಶರಣರ ಚಿತ್ರಗಳ ಪೇಂಟಿಂಗಗಳನ್ನು ಮಾಡಿದ್ದಾರೆ." [೨೪]

ಸುಪ್ರಸಿದ್ಧ ಪತ್ರಕರ್ತರೂ. ಪ್ರಪಂಚ ವಿಶ್ವವಾಣಿಗಳ ಸಂಪಾದಕರಾದ ಪಾಟೀಲ ಪುಟ್ಟಪ್ಪನವರು "ಕಲಾವಿದರಲ್ಲಿಯೇ ಕಲಾವಿದರೆನಿಸಿದ ಶ್ರೀ ಎಂ. ಎ. ಚೆಟ್ಟಿಯವರ ಕುಂಚಕ್ಕೆ ವಿಶ್ರಾಂತಿ ಎಂಬುದೇ ಇಲ್ಲ. ಅವರು ಗೀಚಿದ ಗೆರೆಗಳೆಲ್ಲ ಸುಂದರ ಚಿತ್ರಗಳಾಗಿರುತ್ತವೆ. ಈ ಕಲಾತಪಸ್ವಿಯ ಕೈಯಿಂದ ಸಾಧು ಸತ್ಪುರುಷರು ಮತ್ತೆ ಜೀವ ಪಡೆದು ಕಾಣಿಸಿಕೊಂಡಿದ್ದಾರೆ." [೨೫] ಎಂದು ಬರೆದಿದ್ದಾರೆ. ಚೆಟ್ಟಿಯವರು ಅನೇಕ ಪುರಾಣಗಳಿಗೆ ಸಾಂದರ್ಭಿಕ ಚಿತ್ರಗಳನ್ನು ರಚಿಸಿ ಕೊಟ್ಟಿದ್ದಾರೆ. ಚೆಟ್ಟಿಯವರು ಚಿತ್ರ ರಚಿಸಿದ ಪುರಾಣಗ್ರಂಥಗಳು ಈ ಕೆಳಗಿನಂತಿವೆ.

i) ಸೊಲ್ಲಾಪುರ ನಾಲ್ವತ್ತವಾಡ ವಿರೇಶ್ವರ ಪುರಾಣ (ಈ ಚಿತ್ರಗಳು ೧೯೩೩ರಲ್ಲಿ ರಚಿಸಲ್ಪಟ್ಟಿವೆ. ಚಾರ್ಕೋಲ ಹಾಗೂ ರೇಖಾಚಿತ್ರಗಳಿಂದ ರಚಿಸಿದ್ದರಿಂದ ಆ ವಿಭಾಗದಲ್ಲಿ ವಿಶ್ಲೇಷಿಸಲಾಗಿದೆ.)

ii) ಶ್ರೀ ಚೆನ್ನಬಸವ ಪುರಾಣ – ೧೯೩೪

iii) ಚಾಮರಸನ ಪ್ರಭುಲಿಂಗಲೀಲೆ – ೧೯೩೮

iv) ಬಾಲಲೀಲಾ ಮಹಾಂತೇಶ್ವರ ಪುರಾಣ – ೧೯೪೭

v) ಶ್ರೀ ಸಿದ್ಧೇಶ್ವರ ಪುರಾಣ – ೧೯೫೧ (ಇದರಲ್ಲಿಯ ಚಿತ್ರಗಳು ರೇಖಾಚಿತ್ರಗಳಾಗಿದ್ದು. ಆ ವಿಭಾಗದಲ್ಲಿ ವಿಶ್ಲೇಷಿಸಲಾಗಿದೆ.)

vi) ಶ್ರೀ ಫಲಾಹಾರ ಶಿವಯೋಗೀಶ್ವರ ಪುರಾಣ – ೧೯೫೧

vii) ಶ್ರೀಮದಥಣಿ ಶಿವಯೋಗೀಶ್ವರ ಚಾರಿತ್ರ –೧೯೫೭

viii) ಚೆಳ್ಳಗುರ್ಕಿ ಎರಿಸ್ವಾಮಿಗಳವರ ಪುರಾಣ – ೧೯೬೩

ix) ನರಗುಂದ ಶ್ರೀ ಚೆನ್ನಬಸವ ಪುರಾಣ – ೧೯೬೩

x) ಬಸವೇಶ್ವರರ ಪುರಾಣ – ೧೯೬೩

xi) ಶ್ರೀ ಶಿವಲಿಂಗೇಶ್ವರ ಪುರಾಣ – ೧೯೬೭

---

೨೩. ಅನ್ನದಾನಿ ಹಿರೇಮಠ : ಎಂ. ಎ. ಚೆಟ್ಟಿ. ಪುಟ ೧೨

೨೪. ಮಹಾಲಿಂಗ ಯಾಳಗಿ (ಸಂ.) : ಕಲಾತಪಸ್ವಿ : ಎಂ. ಎ. ಚೆಟ್ಟಿಯವರ ಅಭಿನಂದನ ಗ್ರಂಥ. ಪುಟ ೩೭

೨೫. ಎಂ. ಎ. ಚೆಟ್ಟಿ : ನೆನಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೪೮

xii) ಚಿತ್ರದುರ್ಗ ಬೃಹನ್ಮಠದ ಜಗದ್ಗುರುಗಳಾದ ಜಯದೇವ ಮುರುಘರಾಜೇಂದ್ರ ಪುರಾಣದಲ್ಲಿ ಬಾಲ್ಯದಲ್ಲಿಯ ಲೀಲಾ ಸನ್ನಿವೇಶ

xiii) ಹುಬ್ಬಳ್ಳಿ ಮೂರು ಸಾವಿರ ಮಠದ ಕರ್ತೃ – ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಪುರಾಣ – ೧೯೪೯

xiv) ಜೇವರಗಿ ಷಣ್ಮುಖ ಶಿವಯೋಗಿಗಳ ಪುರಾಣ ಲಭ್ಯವಿಲ್ಲ.

xv) ಸೊನ್ನಲಾಪುರದ ಸಿದ್ಧರಾಮ ಪುರಾಣ ಗ್ರಂಥದಲ್ಲಿ ಚಿತ್ರಗಳನ್ನು ಮುದ್ರಿಸಿಲ್ಲ ಹಾಗೂ ಆ ಚಿತ್ರಗಳು ಲಭ್ಯವಿಲ್ಲ.

xvi) ಇಲಕಲ್ಲ ಮಹಾಂತ ಶಿವಯೋಗಿಗಳ ಪುರಾಣ ಗ್ರಂಥದಲ್ಲಿ ಚಿತ್ರಗಳನ್ನು ಮುದ್ರಿಸಿಲ್ಲ ಹಾಗೂ ಆ ಚಿತ್ರಗಳು ಲಭ್ಯವಿಲ್ಲ.

xvii) ಶ್ರೀ ನಿಡಸೋಶಿ ಶಿವಲಿಂಗೇಶ್ವರ ಪುರಾಣ. ಎಂದು ಹೇಳಿದ್ದಾರೆ. ಆದರೆ ಅಲ್ಲಿ ಕ್ಷೇತ್ರಕಾರ್ಯ ಮಾಡಿದಾಗ. ಆ ಪುರಾಣ ಪ್ರಕಟಿಸಲು ಅನಿವಾರ್ಯ ಕಾರಣಗಳಿಂದ ತಡೆಯಾಗಿದ್ದಕ್ಕಾಗಿ ಚಿಟ್ಟಿಯವರ ಚಿತ್ರಗಳು ಅದರಲ್ಲಿ ಲಭ್ಯವಿಲ್ಲವೆಂದು ತಿಳಿದು ಬಂದಿತು. ಎರಡೇ ಚಿತ್ರಗಳು ಈಗ ಅಲ್ಲಿ ಉಪಲಬ್ಧವಿದ್ದ ಕಾರಣ ಅಷ್ಟನ್ನು ಮಾತ್ರ ವಿಶ್ಲೇಷಿಸಲಾಗಿದೆಯಲ್ಲದೇ ಈ ಚಿತ್ರಗಳು ಪುರಾಣದಲ್ಲಿ ಕಾಣುವುದಿಲ್ಲ. ಮಠದಲ್ಲಿ ಈ ಚಿತ್ರಗಳನ್ನು ನೋಡಬಹುದು.

ii) ವಿರೂಪಾಕ್ಷ ಪಂಡಿತ ಕೃತ ಚೆನ್ನಬಸವಪುರಾಣದ ಚಿತ್ರಗಳು ೧೯೩೪

ಈ ಪುರಾಣದಲ್ಲಿ ೨ ಚಿತ್ರಗಳನ್ನು ರಚಿಸಿದ್ದಾರೆ.

ಚಿತ್ರ ೩೫ : ಪ್ರಸಾದ ಸೇವಿಸುವ ನಾಗಲಾಂಬಿಕೆ

ಶಯ್ಯೆಯಲ್ಲಿ ಶಿವಧ್ಯಾನದೊಂದಿಗೆ ಯೋಗ ಪರವಶದಲ್ಲಿರಲು ಈಶ್ವರನು ಜಂಗಮಮೂರ್ತಿಯಾಗಿ ಬಂದು ಅವಳನ್ನು ಎಚ್ಚರಿಸಿ " ಎಲೈ ತರುಣಿಯೇ ಈ ಪ್ರಸಾದವನ್ನು ತೆಗೆದುಕೊಳ್ಳು "[೨೬] ಎನ್ನುವ ದೃಶ್ಯ. ನಾಗಲಾಂಬಿಕೆಗೆ ಮುಂದೆ ಚೆನ್ನಬಸವನು ಹುಟ್ಟುವನೆಂಬ ಮುನ್ಸೂಚನೆಯ ಸಂದರ್ಭ. ಈ ರೀತಿ ನಾಗಲಾಂಬಿಕೆ ಕನಸಿನಲ್ಲಿ ಆ ಚಿತ್ರವನ್ನು ಕಂಡಂತೆ ಅನುಭವವಾಯಿತು.

ಚಿಟ್ಟಿಯವರು ಆ ಅನುಭವವನ್ನು ತಮ್ಮ ಚಿತ್ರಕಲಾ ಅನುಭವದಲ್ಲಿ ಅತ್ಯಂತ ಅಮೋಘವಾದ ಚಿತ್ರ ರಚನೆ ಮಾಡಿದ್ದಾರೆ. ಚಿತ್ರದಲ್ಲಿ ನಾಗಲಾಂಬಿಕೆ ಅರೆಗಣ್ಣನ್ನು ಮುಚ್ಚಿ ಎದ್ದು ಕುಳಿತಿದ್ದಾಳೆ. ಎದುರಿಗೆ ಶಿವನು ಜಂಗಮಮೂರ್ತಿಯಾಗಿ ಆಕೆಗೆ ಆಶೀರ್ವದಿಸುತ್ತಿದ್ದಾನೆ. ಮಂದವಾದ ದೀಪದ ಬೆಳಕು ರಾತ್ರಿಯ ಪ್ರಶಾಂತತೆಯನ್ನು ಬೀರುತ್ತಿದೆ. ಭಾರತೀಯ ಶೈಲಿಗೆ ಅತ್ಯುತ್ತಮ ಉದಾಹರಣೆಯಾಗಿದೆ. ಅವಶ್ಯವಿದ್ದಲ್ಲಿ ಮಾತ್ರ ರೇಖೆಗಳನ್ನು ಎಳೆದಿದ್ದಾರೆ. ಕೆಲವೇ ಬಣ್ಣಗಳ ಪಾರದರ್ಶಕ ಲೇಪನ ಚಿತ್ರಕ್ಕೆ ಸಿರಿತನ ತಂದಿದೆ. ಆಕೆಯ ಕಣ್ಣಿನಲ್ಲಿ ಕನಸನ್ನು ಕಾಣುತ್ತಿರುವಂಥ ಭಾವ. ಜಂಗಮಮೂರ್ತಿಯ ಸಾತ್ವಿಕ ಕಳೆ. ನಮ್ಮನ್ನು ಭಾವನಾ ಪ್ರಪಂಚಕ್ಕೆ ಎಳೆದೊಯ್ಯುತ್ತದೆ. ಈ ಚಿತ್ರ ಪುರಾಣದ ೩೧ ನೇ ಪುಟದಲ್ಲಿ ನೋಡಬಹುದು. (ಅಧ್ಯಾಯ ಏಳರಲ್ಲಿಯ ೩೭ ನೇ ಚಿತ್ರವನ್ನು ನೋಡಿರಿ)

---

೨೬. ವೀರಭದ್ರಪ್ಪಾ ಹಾಲಭಾವಿ (ಸಂ.) : ವಿರೂಪಾಕ್ಷ ಪಂಡಿತ : ಚೆನ್ನಬಸವ ಪುರಾಣ. ಪುಟ ೮

ಚಿತ್ರ ೩೬ : ಚೆನ್ನಬಸವೇಶನ ಪುಷ್ಪಕೋತ್ಸವ

ಶಿವನ ಮಗನೆ ಈತನೆಂದು ಭಾವಿಸಿ " ಬಿಜ್ಜಳನು ತನ್ನ ಪುಷ್ಪಕವನ್ನು ತರಿಸಿ ಅದರಲ್ಲಿ ನಾಗಲಾಂಬಿಕೆಯ ಮಗನನ್ನು ಕುಳ್ಳಿರಿಸಿ ನಮಸ್ಕರಿಸಿದನು. "[೨೭] ಚೆನ್ನಬಸವೇಶನ ಪುಷ್ಪಕೋತ್ಸವ ಈ ರೀತಿ ರಾಜ ಮರ್ಯಾದೆಯಲ್ಲಿ ನಡೆಯಿತು. ಆ ಉತ್ಸವದ ಸನ್ನಿವೇಶದ ಚಿತ್ರ ಇದಾಗಿದೆ.

ಚೆಟ್ಟಿಯವರು ಇಲ್ಲಿ ಅತ್ಯಂತ ವೈಭವಕೃತವಾಗಿ ಚಿತ್ರ ರಚಿಸಿದ್ದಾರೆ. ರಾಜಬೀದಿಯಲ್ಲಿ ಉತ್ಸವ ನಡೆದಿದೆ. ಉತ್ಸವದ ಮುಂದೆ ಬಸವಣ್ಣನವರು ಅವರ ಪಕ್ಕ ಬಿಜ್ಜಳಮಹಾರಾಜ. ಪುಷ್ಪಕವನ್ನು ಹೂವಿನಿಂದ ಅಲಂಕರಿಸಿದ್ದಾರೆ. ಪಟ್ಟಣದ ಸ್ತ್ರೀಯರೆಲ್ಲ ನೆರೆದಿರುವರು. ನಾನಾ ರೀತಿಯ ವಾದ್ಯಗಳನ್ನು ಮೊಳಗಿಸುತ್ತ ಜನ ನಡೆದಿರುವರು. " ಶಾರದೆ. ಇಂದ್ರಾಣಿ. ಸಿರಿ. ರತಿ, ಅಹಲ್ಯೆ, ಅರುಂಧತಿ ಮುಂತಾದ ದೇವತಾಸ್ತ್ರೀಯರಿಗೆ ಸಮಾನರಾದ ಆ ಪಟ್ಟಣದ ಮಹಾಸತಿಯರು ಅತಿ ಭಕ್ತಿಯಿಂದ ಮುತ್ತಿನಾರತಿ. ರತ್ನದಾರತಿ, ಪಚ್ಚದಾರತಿ. ಸೊಡರುಗಳ ಆರತಿ ಮೊದಲಾದವುಗಳಿಂದ ನಿವಾಳಿಸಿ. ಹರಸಿ "[೨೮] ಎಂಬ ಕವಿಯ ಕಲ್ಪನೆಯಂತೆಯೇ ಚೆಟ್ಟಿಯವರು ಆ ಹೆಂಗಳೆಯರನ್ನು ಚಿತ್ರಿಸಿದ್ದಾರೆ. ಪುಷ್ಪಕದ ಪಕ್ಕದಲ್ಲಿ ತಾಯಿ ನಾಗಲಾಂಬಿಕೆ, ಮಗುವಿನ ಲಕ್ಷವೆಲ್ಲ ತಾಯಿಯ ಕಡೆಗೆ ಇರುವಂತೆ ಮಗುವನ್ನು ವಾಲಿಸಿ ಚಿತ್ರಿಸಿದ್ದಾರೆ. ತಾಯಿ ಮಗುವಿನ ವಾತ್ಸಲ್ಯವನ್ನು ಅಲ್ಲಿ ಸೆರೆಹಿಡಿದಿದ್ದಾರೆ. ಅಕ್ಕಪಕ್ಕದಲ್ಲಿ ಛತ್ರಚಾಮರ ಬೀಸುತ್ತಿರುವ ಸ್ತ್ರೀಯರು.

ಚೆಟ್ಟಿಯವರು ಇಲ್ಲಿ ಪ್ರತಿಯೊಬ್ಬರ ವೇಷಭೂಷಣಗಳನ್ನು ಆ ವ್ಯಕ್ತಿಗಳಿಗೆ ತಕ್ಕಂತೆ ಚಿತ್ರಿಸಿದ್ದಾರೆ. ಮುಖಭಾವವು ಅಷ್ಟೆ ನಿಖರವಾಗಿವೆ. ಇವರೇ ಆ ವ್ಯಕ್ತಿ ಎನ್ನುವುದು ವೀಕ್ಷಕನು ನೋಡಿದಾಕ್ಷಣ ಹೇಳಬಹುದು. ಭಾರತೀಯ ಭಿತ್ತಿಚಿತ್ರಗಳನ್ನು ನೆನಪಿಗೆ ತರುವ ಈ ಚಿತ್ರ ರಚನೆ. ಸೌಮ್ಯ ಹಾಗೂ ಉಜ್ವಲ ವರ್ಣಗಳ ಹದವರಿತ ಮೇಳವಾಗಿ ಸಂಭ್ರಮ ಹಾಗೂ ವೈಭವಯುತದ ಪರಿಣಾಮ ಬೀರುತ್ತದೆ. ಹೀಗೆ ಅನೇಕ ಜನರ ಸಂಯೋಜನೆಯ ರೀತಿಯು ಅವರ ಗುರುಗಳಾದ ಶ್ರೀ ತಾಸ್ಕರ್ ಅವರಿಂದ ಬಂದ ಬಳುವಳಿ ಎನ್ನಬಹುದು. ಈ ಚಿತ್ರ ಪುರಾಣದ ೪೦ ನೇ ಪುಟದಲ್ಲಿ ನೋಡಬಹುದು.

ಈ ಪುರಾಣದ ಚಿತ್ರಗಳು ಚೆಟ್ಟಿಯವರ ಸಂಯೋಜನಾ ಕೌಶಲ್ಯದ ಉತ್ಕೃಷ್ಟ ಕೃತಿಗಳಾಗಿವೆ. ಹೀಗೆ ಮೂಡಿ ಬರಲು ಇನ್ನೊಂದು ಕಾರಣವು ಇರಬಹುದು. ಅದೇಂದರೆ. ಈ ಪುರಾಣದಲ್ಲಿ ದಂಡಾವತಿಮಠ. ಮಿಣಜಗಿ. ಬಡಿಗೇರ. ಕಾರಡಗಿ ಹಾಗೂ ಹಾಲಭಾವಿಯವರು ಚಿತ್ರಗಳನ್ನು ರಚಿಸಿದ್ದಾರೆ. ಆದ್ದರಿಂದ ಸ್ಪರ್ಧಾತ್ಮಕ ಮನೋಭಾವವು ಇರಬಹುದು. ಒಟ್ಟಾರೆ ಚೆಟ್ಟಿಯವರ ಕಲಾ ಕೌಶಲ್ಯ ಸ್ತುತ್ಯರ್ಹವಾದುದು. (ಅಧ್ಯಾಯ ಏಳರ ೧೭ ನೇ ಚಿತ್ರ ನೋಡಿರಿ)

iii) ಚಾಮರಸನ ಪ್ರಭುಲಿಂಗಲೀಲೆ :

ಇದರಲ್ಲಿ ಒಂದೇ ಚಿತ್ರವನ್ನು ರಚಿಸಿದ್ದಾರೆ.

ಚಿತ್ರ ೩೭ : " ಪ್ರಭು ಮಾಯೆಗೆ ಸಿಕ್ಕದೆ ಹೋದದ್ದು "[೨೯] ಚಿತ್ರದಲ್ಲಿ ಅಲ್ಲಮನನ್ನು ಹುಡುಕಿಕೊಂಡು ಮಾಯೆ ಬರಲು ಆಕೆಯನ್ನು ನೋಡಿದ ತಪಸ್ವಿಗಳೆಲ್ಲ ದಿಕ್ಕೆಟ್ಟು ಓಡುತ್ತಿದ್ದಾರೆ. ಇಲ್ಲಿ " ಅಲ್ಲಮನು ಓಡುತ್ತಿದ್ದ ತಪಸ್ವಿಗಳನ್ನು

---

೨೭. ವೀರಭದ್ರಪ್ಪ ಹಾಲಭಾವಿ (ಸಂ.) : ವಿರೂಪಾಕ್ಷ ಪಂಡಿತ : ಚೆನ್ನಬಸವ ಪುರಾಣ. ಪುಟ ೧೧

೨೮. ವೀರಭದ್ರಪ್ಪ ಹಾಲಭಾವಿ (ಸಂ.) : ವಿರೂಪಾಕ್ಷ ಪಂಡಿತ : ಚೆನ್ನಬಸವ ಪುರಾಣ. ಪುಟ ೧೨

೨೯. ಹು. ಫ. ಕಟ್ಟೀಮನಿ (ಸಂ.) : ಚಾಮರಸ ಕೃತ ಪ್ರಭುಲಿಂಗ ಲೀಲೆ. ಮೊದಲ ಪುಟ

ತಡೆದು ನಿಲ್ಲಿಸಿ, ಭಯ ಬೇಡವೆಂದು ಓರ್ವ ತಪಸ್ವಿಯ ರೂಪಿನಲ್ಲಿ ಕರುಣಾಮಯನಾಗಿ ಆ ತಪಸ್ವಿಗಳ ಸಮೂಹಕ್ಕೆ (ಕಾಣಿಸಿಕೊಂಡನು) ಧೈರ್ಯಗೊಟ್ಟನು. (ಆದರೆ) ನಲಿದು ಓಡಿ ಬರುತ್ತಿದ್ದ ಮಾಯೆಯನ್ನು ಮೂದಲಿಸಿ, ಭಂಗಿಸಿ ಹಿಂತಿರುಗಿಸುವೆನೆಂದು ಮೊದಲಿನಂತೆ ಮಾಯೆಗೆ ರೂಪುದೋರಿದನು. "[೩೦]

ಚಿಟ್ಟಿಯವರು ಈ ಚಿತ್ರದಲ್ಲಿ ಹಲವಾರು ಸನ್ನಿವೇಶಗಳನ್ನು ಸಂಯೋಜಿಸಿ ಚಿತ್ರಿಸಿದ್ದಾರೆ. ಚಿತ್ರದ ಹಿನ್ನೆಲೆಯಲ್ಲಿ ಸಂದರ್ಭಕ್ಕೆ ತಕ್ಕಂತೆ ನಿಸರ್ಗವನ್ನು ಚೆನ್ನಾಗಿ ದುಡಿಸಿಕೊಂಡಿದ್ದಾರೆ. ಹರಿಯುತ್ತಿರುವ ನದಿ, ಸುಂದರವಾದ ವನಸಿರಿ, ನವಿಲು, ಜಿಂಕೆ, ಹುಲಿ, ಸ್ವೇಚ್ಛೆಯಾಗಿ ವಿಹರಿಸುತ್ತಿವೆ. ಅಲ್ಲೊಂದು ಆಲದ ಮರ ಅಲ್ಲಿಯೇ ಅಲ್ಲಮನು ತಪಸ್ವಿಯಾಗಿ ಕುಳಿತಿದ್ದಾನೆ. ಆತನ ಮುಂದೆ ತಪಸ್ವಿಗಳು (ಯಾವ ಕಡೆಗೆ ಓಡಬೇಕೆಂಬ) ದಿಕ್ಕು ಕಾಣದೇ ವಿಚಾರ ಮಗ್ನರಾದಂತಿದೆ. ತಪಸ್ವಿಗಳು ಕೈಯಲ್ಲಿ ಕಮಂಡಲ, ಹುಲಿದೊಗಲನ್ನು ಹಿಡಿದುಕೊಂಡು ನಿಂತಿದ್ದಾರೆ. ಚಿತ್ರದ ಬಲಭಾಗದಲ್ಲಿ ಅಲ್ಲಮನನ್ನು ಅರಸುತ್ತ ಬಂದ ಮಾಯೆಗೆ ನಿಜರೂಪವನ್ನು ತೋರಿಸಿದ್ದಾನೆ. ಆ ಆಕೃತಿಯನ್ನು ತಿಳಿಯಾಗಿ ಚಿತ್ರಿಸಿ ಸುತ್ತಲೂ ಜ್ಞಾನ ಪ್ರಭೆಯ ಕಿರಣಗಳನ್ನು ಚಿತ್ರಿಸಿದ್ದಾರೆ.

ಚಿತ್ರದ ಮುಂಭಾಗದ ಎಡಕ್ಕೆ ವಿಮಳೆ ಕೈಮುಗಿದು ಅಲ್ಲಮನನ್ನು ಬೇಡಿಕೊಳ್ಳುತ್ತಿದ್ದಾಳೆ. ಅಲ್ಲಮನು "ಬಯಲನ್ನು ಬಂಧಿಸಬೇಕೆಂದು ವ್ಯಥ ನಿರ್ಧಾರ ಮಾಡಲು ಅದು ಸಿಗಬಲ್ಲದೇ ? ನಿಶ್ಚಿತವಾಗಿಯೂ ನನ್ನನ್ನು ಹಿಡಿಯಕೊಳ್ಳುವೆಯಾದರೆ ನೀನು (ಪ್ರಯತ್ನಿಸಿ) ನೋಡು "[೩೧] ಎನ್ನುವಂತೆ ಮಾಯೆಯನ್ನು ತಿರಸ್ಕರಿಸಿ ನಿರ್ಬಯಲು ಬಲೆಯನ್ನು ಬೀಸಿ ಅಲ್ಲಿಂದ ನಿರ್ಗಮಿಸುತ್ತಿದ್ದಾನೆ. ಮಾಯೆ ಅತಿಯಾದ ದುಃಖದಿಂದ ನೆಲಕ್ಕೆ ಕುಸಿದಿದ್ದಾಳೆ. ಸಖಿಯರೆಲ್ಲ ಸಮಾಧಾನ ಮಾಡುತ್ತಿದ್ದಾರೆ.

ಇದೊಂದು ಭಿತ್ತಿಚಿತ್ರದಂತೆ ಕಾಣುತ್ತದೆ. ಈ ಜಲವರ್ಣಾಕೃತಿ ವರ್ಣ ಪ್ರಯೋಗ ಮತ್ತು ರೇಖೆಯ ಲಯದ ಮೇಲಿನ ಸಾಧನೆಯ ಪ್ರತೀಕವಾಗಿದೆ. ಇಲ್ಲಿ ಮಾಯೆ ತನ್ನ ಸ್ನಿಗ್ಧ ಸೌಂದರ್ಯದಿಂದ ಭಾವನೆಗಳಿಗೆ ಲಗ್ಗೆಯಿಡುತ್ತಾಳೆ. ಯಾಕೆಂದರೆ ಅಲ್ಲಮನಂಥವನನ್ನು ಗೆಲ್ಲಬಂದವಳು. ಚಿತ್ರದ ಎಡಭಾಗದಲ್ಲಿ ಮತ್ತು ಬಲಭಾಗದಲ್ಲಿ ಈಕೆಯೇ ಮಾಯೆ ಎಂದು ನೋಡುಗರಿಗೆ ಥಟ್ಟನೆ ಹೊಳೆಯುತ್ತದೆ. ಒಂದೆಡೆ ಓಡಿಬಂದು ನೋಡುವ ಕಾತುರ ಇನ್ನೊಂದೆಡೆ ಅಲ್ಲಮನನ್ನು ಕಳೆದುಕೊಂಡ ದುಃಖದ ಛಾಯೆ ಮುಖದಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ. ವಸ್ತ್ರವಿನ್ಯಾಸಗಳಲ್ಲಿ ತೆಳುವಾಗಿ ಕುಂಚ ಪ್ರಯೋಗಿಸಿ ನೀಡುವ ವರ್ಣಲೇಪನ ಕೃತಿಯ ಮೌಲ್ಯವನ್ನು ಹೆಚ್ಚಿಸುತ್ತದೆ. ಅಲ್ಲಮನನ್ನು ಸಹಿತ ಆಕೆಯ ಭಾವನೆಗಳನ್ನು ಕೆರಳುವಷ್ಟು ಸುಂದರವಾಗಿ ಚಿತ್ರಿಸಿದ ಕಲ್ಪನೆ ಅದ್ಭುತ. ಆಕೆಯೆಡೆ ಮುಖ ತಿರುಗಿಸಿ ತಿರಸ್ಕರಿಸಿ ಮುನ್ನಡೆಯುತ್ತಿದ್ದಾನೆ. ಚಿತ್ರವೂ ಕಾವ್ಯಮಯವಾಗಿ ಮೂಡಿಬಂದಿದೆ. ಚಿಟ್ಟಿಯವರ ಸಂಯೋಜನಾ ಕೌಶಲ್ಯಕ್ಕೆ ಇದೊಂದು ಉತ್ತಮ ನಿದರ್ಶನವಾಗಿದೆ. (ಅಧ್ಯಾಯ ಏಳರಲ್ಲಿಯ ೪೨ ನೇ ಚಿತ್ರವನ್ನು ನೋಡಿರಿ)

---

೩೦. ಎಸ್. ವಿದ್ಯಾಶಂಕರ : ಚಾಮರಸನ ಪ್ರಭುಲಿಂಗಲೀಲೆ ಗದ್ಯಾನುವಾದ : ಪುಟ ೩೬೬ - ೪೭ ನೆ ಪದ್ಯ

೩೧. ಎಸ್. ವಿದ್ಯಾಶಂಕರ : ಚಾಮರಸನ ಪ್ರಭುಲಿಂಗಲೀಲೆ ಗದ್ಯಾನುವಾದ : ಪುಟ ೩೬೩ - ೮೭ ನೆ ಪದ್ಯ

iv) ಬಾಲಲೀಲಾ ಮಹಾಂತೇಶ್ವರ ಪುರಾಣ : ಕವಿ ಚೆನ್ನಕವಿ : ಪ್ರಥಮ ಮುದ್ರಣ : ೧೯೪೭. ದ್ವಿತೀಯ ಮುದ್ರಣ : ೧೯೭೩

ಈ ಪುರಾಣದಲ್ಲಿ ಎರಡು ಚಿತ್ರಗಳಿವೆ. ಎರಡು ಕಪ್ಪುಬಿಳುಪು ಛಾಯೆಯಲ್ಲಿ ಮುದ್ರಿತವಾಗಿವೆ.

ಚಿತ್ರ : ಶ್ರೀ ನಿ. ಪ್ರ. ಮುರುಘರಾಜೇಂದ್ರ ಮಹಾಶಿವಯೋಗಿಗಳು. ಗಚ್ಚಿನಮಠ. ಅಥಣಿ [೩೨]

– ಈ ಚಿತ್ರದಲ್ಲಿ ಶಿವಯೋಗಿಗಳು ಕಟ್ಟೆಯ ಮೇಲೆ ಕುಳಿತಿದ್ದಾರೆ. ಹಿನ್ನೆಲೆಯಲ್ಲಿ ನಿಸರ್ಗದ ಸೌಂದರ್ಯವಿದೆ. ಪಕ್ಕದಲ್ಲಿ ವಿವರವಾಗಿ ಚಿತ್ರಿಸಲ್ಪಟ್ಟ ಹೂವು ಎಲೆಗಳು. ಗಿಡದ ಮೇಲೆ ಪಕ್ಷಿಗಳನ್ನು ಅದರ ಎಲೆಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಇದೊಂದು ಜೀವಮಾದರಿ ಚಿತ್ರದಂತಿದ್ದರೂ ನಿಸರ್ಗ ಹಾಗೂ ವ್ಯಕ್ತಿ ಚಿತ್ರಗಳಿಂದಾಗಿ ಇದೊಂದು ಸಂಯೋಜನ ಚಿತ್ರದಂತಿದೆ. ಮುಖದಲ್ಲಿ ಸಾತ್ವಿಕ ಕಳೆ. ಇದನ್ನು ಗ್ರಂಥದ ಮೊದಲನೇ ಪುಟದಲ್ಲಿ ನೋಡಬಹುದು.

ಚಿತ್ರ : ಶ್ರೀ ನಿ. ಪ್ರ. ಸ್ವ. ಬಾಲಲೀಲಾ ಮಹಾಂತ ಶಿವಯೋಗಿಗಳು. ಮುಳಗುಂದ [೩೩]

ಈ ಚಿತ್ರದಲ್ಲಿ ಶಿವಯೋಗಿಗಳು ಮಂಚದ ಮೇಲೆ ಪವಡಿಸಿದ್ದಾರೆ. ತಲೆಗೆ ಬಟ್ಟೆಯನ್ನು ಕಟ್ಟಿಕೊಂಡಿದ್ದಾರೆ. ಮಂಚಕ್ಕೆ ಕಟ್ಟಿದ ಪರದೆ ಅಲಂಕೃತವಾಗಿದೆ. ಸ್ವಾಮಿಗಳ ಎಡಗೈಯಲ್ಲಿ ಹೆಣೆದ ಬೀಸಣಿಕೆಯಿದೆ. ಶಾಲನ್ನು ಕುತ್ತಿಗೆಯವರೆಗೂ ಹೊದ್ದುಕೊಂಡಿದ್ದಾರೆ. ಕಟ್ಟಿಗೆಯ ಮಂಚದ ಭಾವನೆ ಬರುವ ರೀತಿಯಲ್ಲಿ ಹಿತಮಿತವಾದ ನೆರಳು ಬೆಳಕನ್ನು ಚಿತ್ರಿಸಿದ್ದಾರೆ. ಇಂತಹದೇ ಒಂದು ಕೃತಿ ಧಾರವಾಡದ ಮುರುಘಾಮಠದಲ್ಲಿ ನೋಡಬಹುದು. ಈ ಚಿತ್ರವನ್ನು ಗ್ರಂಥದ ೮೫ ನೇ ಪುಟದಲ್ಲಿ ನೋಡಬಹುದು.

vi) ಶ್ರೀ ಫಲಾಹಾರ ಶಿವಯೋಗೀಶ್ವರ ಪುರಾಣವು (ಕವಿ ಶಿ. ಪಂ. ವೈ. ನಾಗೇಶಕವಿ) : ೧೯೫೧

೧೮ ನೇ ಶತಮಾನದಲ್ಲಿ ಆಗಿಹೋದ ಶ್ರೀ ಅವರಾದಿ ಫಲಾಹಾರೇಶ್ವರ ಚರಿತ್ರಾಂಶಗಳಲ್ಲಿ ಬರುವಂತಹ ಹೆಚ್ಚು ಗಮನೀಯವಾದ ಸನ್ನಿವೇಶಗಳ ಚಿತ್ರಗಳು. ಈ ಪುರಾಣದಲ್ಲಿ ಒಟ್ಟು ೧೦ ಚಿತ್ರಗಳನ್ನು ರಚಿಸಿದ್ದಾರೆ. ಈ ಎಲ್ಲಾ ಚಿತ್ರಗಳ ಅಳತೆ ೩೦" X ೨೨". ಈ ಮೂಲ ಚಿತ್ರಗಳನ್ನು ಅವರಾದಿ ಫಲಾಹಾರೇಶ್ವರ ಮಠದಲ್ಲಿ ನೋಡಬಹುದು. ಪುರಾಣದಲ್ಲಿ ಈ ಚಿತ್ರದ ಕಪ್ಪು - ಬಿಳುಪು ಛಾಯಾಚಿತ್ರಗಳನ್ನು ಪ್ರಕಟಿಸಿರುತ್ತಾರೆ.

ಚಿತ್ರ ೩೮ : ಶ್ರೀ ಬಾಲತಪಸ್ವಿ ಫಲಾಹಾರೇಶನು ಗೋರಕ್ಷಣನೆವದಿಂದ ಅಡವಿಗೆ ಹೋಗಿ ಅಲ್ಲಿ ಲಿಂಗಾನಂದ ಪರವಶನಾಗಿ ಕುಳಿತಿದ್ದು.[೩೪] ಶಿವಕೃಪೆಯಿಂದ ಜನಿಸಿದ ಫಲಾಹಾರೇಶ್ವರ ಶಿವಕಳೆಯನ್ನು ಪಡೆದು ಲಿಂಗಾರ್ಚನೆಗೈಯುತ್ತ ಶಿವಯೋಗ ಶಕ್ತಿಯನ್ನು ಪಡೆದನು.

ಇಲ್ಲಿ ಚಿಟ್ಟಿಯವರು ಫಲಾಹಾರೇಶ್ವರನು ಬಾಲ ತಪಸ್ವಿಯಂತೆ ಅತ್ಯಂತ ಮುಗ್ಧ ಮುಖಭಾವದ ದೇವೋನ್ಮಾದದ ಲಿಂಗಾರ್ಚನೆಯಲ್ಲಿ ತೊಡಗಿರುವಂತೆ ಚಿತ್ರಿಸಿದ್ದಾರೆ. ಆತನ ಜೊತೆಗೆ ಬಂದ ಎಲ್ಲ ಗೋವುಗಳು ಲಿಂಗಪೂಜೆಯನ್ನು

---

೩೨. ಶ್ರೀ ನಿ. ಪ್ರ. ಸ್ವ. ಮಹಾಂತ ಸ್ವಾಮಿಗಳು. ಮುರಘಾಮಠ. ಧಾರವಾಡ (ಸಂ.) : ಚೆನ್ನಕವಿ : ಬಾಲಲೀಲಾ ಮಹಾಂತೇಶ್ವರ ಪುರಾಣ. ಪುಟ ೧

೩೩. ಶ್ರೀ ನಿ. ಪ್ರ. ಸ್ವ. ಮಹಾಂತ ಸ್ವಾಮಿಗಳು. ಮುರಘಾಮಠ. ಧಾರವಾಡ (ಸಂ.) : ಚೆನ್ನಕವಿ : ಬಾಲಲೀಲಾ ಮಹಾಂತೇಶ್ವರ ಪುರಾಣ. ಪುಟ ೮೫

೩೪. ಶಿ. ಪಂ. ವೈ. ನಾಗೇಶ ಕವಿ : ಶ್ರೀ ಫಲಾಹಾರ ಶಿವಯೋಗೀಶ್ವರ ಪುರಾಣ : ಪುಟ ೩೧

ಬೆರಗಾಗಿ ನೋಡುತ್ತಿವೆ. ಹಗಲಿರುಳು ಶಿವಧ್ಯಾನದಲ್ಲಿ ತೊಡಗಿದ ಆತನನ್ನು ಕಾಣಲು ಊರಿನ ಜನರೆಲ್ಲ ಬಂದು ಬಾಲ ಶಿವಯೋಗಿಗೆ ನಮಸ್ಕರಿಸಿದರೆ ಹೆಂಗಳೆಯರು ಆಶ್ಚರ್ಯದಿಂದ ನೋಡುತ್ತಿದ್ದಾರೆ. ದೃಶ್ಯಾಂತರ ತೋರಿಸಿದ್ದಾರೆ. ಅಲ್ಲದೆ ಅತೀ ದೂರದ ಗಿಡಗಳನ್ನು ದಟ್ಟ ನೆಲಸಿ (mass) ನಂತೆ ವರ್ಣಲೇಪನ ಮಾಡಿದ್ದರೆ ಸನಿಹದ ಗಿಡಗಳಲ್ಲಿ ವಿವರಪೂರ್ಣವಾಗಿ ಎಲೆ. ಹೂ. ಕಾಯಿ ಎಲ್ಲವನ್ನೂ ಚಿತ್ರಿಸಿದ್ದಾರೆ. ಚೆಟ್ಟಿಯವರು ನಿಸರ್ಗದ ಪ್ರತಿಯೊಂದು ವಸ್ತುವಿನ ಸೂಕ್ಷ್ಮ ಅಧ್ಯಯನ ಮಾಡಿದ್ದು ಇಲ್ಲಿ ಗೋಚರಿಸುತ್ತದೆ. ಬಾಲಶಿವಯೋಗಿಯ ವ್ಯಕ್ತಿತ್ವವನ್ನು ಸಾಂಕೇತಿಕವಾಗಿ ನಿರೂಪಿಸಿದ್ದಾರೆ. ಹೇಗೆಂದರೆ ಆತನ ಲಿಂಗಾರ್ಚನೆ ಧ್ಯಾನವನ್ನು ಕಂಡ ಮನುಷ್ಯರಷ್ಟೇ ಅಲ್ಲ. ಪ್ರಾಣಿಗಳೂ ಸಹಿತ ಬೆರಗಾದವು ಎಂಬಂತೆ ಚಿತ್ರಿಸಿದ್ದಾರೆ. ಸೌಮ್ಯ ವರ್ಣಲೇಪನವಿದ್ದು ನೀಲ ವರ್ಣವನ್ನು ಹೆಚ್ಚಾಗಿ ಉಪಯೋಗಿಸಿದ್ದಾರೆ. ಇಂತಹ ಸೌಮ್ಯ ವರ್ಣಗಳಲ್ಲಿ ಶಾಂತತೆಯನ್ನು ಪ್ರೇರಿಸುವ ಗುಣವಿದೆ. " ಶಾಂತತೆಯಿದ್ದರೆ ಧ್ಯಾನವೂ. ಧ್ಯಾನದಿಂದ ಆನಂದವೂ ಉಂಟಾಗುವುದು "[೩೫] ಆದ್ದರಿಂದ ಚೆಟ್ಟಿಯವರು ಸನ್ನಿವೇಶಕ್ಕೆ ತಕ್ಕಂತಹ ವರ್ಣಗಳ ಲೇಪನದಿಂದ ಆ ಚಿತ್ರಗಳು ಜನರ ಮನ ಸೂರೆಗೊಳ್ಳುವಂತೆ ಮಾಡಿದ್ದಾರೆ. ಈ ಚಿತ್ರವನ್ನು ಗ್ರಂಥದ ೩೧ ನೇ ಪುಟದಲ್ಲಿ ನೋಡಬಹುದು.

ಚಿತ್ರ ೩೯ : ಶ್ರೀ ಬಾಲತಪಸ್ವಿ ಫಲಾಹಾರೇಶನು ಹಂಪೆಯ ಚಕ್ರತೀರ್ಥದಲ್ಲಿ ತನಗೆ ಆತ್ಮಾರ್ಪಣವನ್ನೂ ಮಾಡಿದ ಭಕ್ತದಂಪತಿಗಳನ್ನು ಉದ್ಧರಿಸಿದುದು.[೩೬]

ಈ ಚಿತ್ರದಲ್ಲಿ ಚಕ್ರತೀರ್ಥದಲ್ಲಿ ಸ್ನಾನ ಮಾಡಲು ಹೋದ ಶಿವಮೂರ್ತಿಯು ಗತಪ್ರಾಣನಾದನೆಂದು ತಿಳಿದು ಭಕ್ತದಂಪತಿಗಳು ರಕ್ಷಿಸಲು ತಾವೇ ಹಾರಿದಾಗ ಅವರನ್ನು ಬಾಲ ತಪಸ್ವಿ ಮೇಲಕ್ಕೆ ಎತ್ತಿ ತಂದಿದ್ದಾನೆ. ಭಕ್ತ ದಂಪತಿಗಳ ಮುಖದಲ್ಲಿ ಆಶ್ಚರ್ಯ ಮೂಡಿದರೆ ದಂಡೆಯ ಮೇಲಿರುವವರೆಲ್ಲ ಕೈ ಮುಗಿದು. ಕೈ ಎತ್ತಿ ಬೆರಗಾಗಿದ್ದಾರೆ. ಬಾಲಕನು ತಪಸ್ವಿ ಜ್ಞಾನಿ ಎಂದು ತೋರಿಸಲು ಚೆಟ್ಟಿಯವರು ಆತನ ತಲೆಯ ಹಿಂದೆ ಜ್ಞಾನದ ಪ್ರಭಾವಳಿಯನ್ನು ಚಿತ್ರಿಸಿದ್ದಾರೆ. ದೃಶ್ಯಾಂತರವಿದೆ. ದೂರಲ್ಲಿ ಹಂಪೆ ವಿರೂಪಾಕ್ಷನ ದೇವಾಲಯ ಚಕ್ರತೀರ್ಥ ಪಕ್ಕದಲ್ಲಿ ವಿಜಯ ನಗರದ ಗತವೈಭವವನ್ನು ಸಾರುತ್ತಿರುವ ಕಲ್ಲಿನ ಮಂಟಪ. ಅಲ್ಲಲ್ಲಿ ದೊಡ್ಡ ಕಲ್ಬಂಡೆಗಳನ್ನು ನೈಜವಾಗಿ ಚಿತ್ರಿಸಿದ್ದಾರೆ. ಚಕ್ರತೀರ್ಥವೆಂದು ನೋಡುಗನಿಗೆ ಅರ್ಥವಾಗುವಂತೆ ಆ ಮೂವರು ನಿಂತ ಸ್ಥಳದಲ್ಲಿ ನೀರಿನ ಅಲೆಗಳನ್ನು ಗೋಲಾಕಾರವಾಗಿ ಚಿತ್ರಿಸಿದ್ದಾರೆ. ಮರದ ಮೇಲೆ ಹಂಪೆಯ ಪ್ರಸಿದ್ಧ ಮಂಗಗಳನ್ನು ಚಿತ್ರಿಸಿದ್ದಾರೆ. ಆಗಸದಲ್ಲಿಯ ವರ್ಣಲೇಪನ ರಮ್ಯವಾಗಿದೆ. ಈ ಚಿತ್ರ ಪುರಾಣದಲ್ಲಿ ೫೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೪೦ : ಶ್ರೀ ಬಾಲತಪಸ್ವಿ ಫಲಹಾರ ಶಿವಯೋಗಿಯ ಶ್ರೀಶೈಲ ತಪೋನುಷ್ಠಾನವು[೩೭]

ಈ ಚಿತ್ರದಲ್ಲಿ ಬಾಲತಪಸ್ವಿ ಆಲದ ಮರದ ಕೆಳಗಡೆ ಮಲ್ಲಿಕಾರ್ಜುನನನ್ನು ಒಲಿಸಿಕೊಳ್ಳಲು ಇಷ್ಟಲಿಂಗಾರ್ಚನೆ ಮಾಡಿಕೊಳ್ಳುತ್ತಿದ್ದಾನೆ. ದೂರದಲ್ಲಿ ಆಕಳು. ಹುಲಿ. ಸಮೀಪದಲ್ಲಿ ನವಿಲು. ಹಾವು. ಜಿಂಕೆಗಳು ವೈರತ್ವವನ್ನು ಮರೆತು

---

೩೫. ಶಿವರಾಮ ಕಾರಂತ : ಭಾರತೀಯ ಚಿತ್ರಕಲೆ : ಪುಟ ೧೪

೩೬. ಶಿ. ಪಂ. ವೈ. ನಾಗೇಶ ಕವಿ : ಶ್ರೀ ಫಲಾಹಾರ ಶಿವಯೋಗಿಶ್ವರ ಪುರಾಣ : ಪುಟ ೫೪

೩೭. ಶಿ. ಪಂ. ವೈ. ನಾಗೇಶ ಕವಿ : ಶ್ರೀ ಫಲಾಹಾರ ಶಿವಯೋಗಿಶ್ವರ ಪುರಾಣ : ಪುಟ ೭೧

ಭಯವಿಲ್ಲದೆ ಸ್ನೇಹಿತರಂತೆ ಆಡ್ಡಾಡುತ್ತಿವೆ. ಫಲಹಾರ ಶಿವಯೋಗೀಶ್ವರರ ಮುಂದೆ ಪೂಜಾ ಸಾಮಗ್ರಿ ನೈಜವಾಗಿ ಚಿತ್ರಿಸಿದ್ದಾರೆ. ಧೂಪದ ಹೊಗೆಯನ್ನು ಸಹಿತ ಚಿತ್ರಿಸಿದ್ದಾರೆ. ಸೌಮ್ಯ ವರ್ಣಗಳ ಸಂಯೋಜನೆ. ಚಿತ್ರಕ್ಕೆ ಸಿರಿತನ ತಂದಿದೆ. ಹಣೆ, ಮೈತುಂಬೆಲ್ಲಾ ಭಸ್ಮವನ್ನು ಧರಿಸಿದಂತೆ ಚಿತ್ರಿಸಿದ್ದಾರೆ. ತಪಸ್ವಿಗಳಿರುವ ಸ್ಥಳದಲ್ಲಿ ಯಾವ ವೈರತ್ವವವೂ ಇರುವದಿಲ್ಲ ಎನ್ನುವುದಕ್ಕೆ ಇಲ್ಲಿ ಚಿತ್ರಿಸಿದ ಪ್ರಾಣಿ ಪಕ್ಷಿಗಳೇ ಸಾಕ್ಷಿ. ಆ ತಾತ್ವಿಕತೆ ಕಲಾವಿದನಲ್ಲಿದ್ದಾಗ ಮಾತ್ರ ಇಂತಹ ಕಲ್ಪನೆಗಳು ಅಭಿವ್ಯಕ್ತಗೊಳ್ಳಲು ಸಾಧ್ಯ. ಈ ಚಿತ್ರವನ್ನು ಗ್ರಂಥದ ೭೧ ನೇ ಪುಟದಲ್ಲಿ ನೋಡಬಹುದು.

ಚಿತ್ರ ೪೦ : ಶ್ರೀ ಬಾಲತಪಸ್ವಿ ಫಲಾಹಾರೇಶನಿಗೆ ಶ್ರೀಶೈಲ ಮಲ್ಲಿಕಾರ್ಜುನನು ಜಂಗಮರೂಪದಿಂದ ಪ್ರತ್ಯಕ್ಷನಾಗಿ ಶಿವಾನುಭವ ಬೋಧೆಯನ್ನು ಮಾಡಿ ಚರಾಧಿಕಾರವನ್ನು ಕೊಟ್ಟಿದ್ದು.[೩೮]

ಚಿತ್ರದಲ್ಲಿ ಶಿವನು ಜಂಗಮರೂಪ ತಾಳಿ ಬಾಲ ತಪಸ್ವಿಗೆ ನರನು ಹರನಾಗುವ ಮಾರ್ಗವನ್ನು ಭೋದಿಸುತ್ತಿದ್ದಾನೆ. ಫಲಹಾರೇಶನು ಅತ್ಯಂತ ನಮ್ರವಾಗಿ ಭಕ್ತಿಯಿಂದ ಆಲಿಸುತ್ತಿರುವಂತೆ ಚಿತ್ರಿಸಿದ್ದಾರೆ. ಸುತ್ತೆಲ್ಲ ವನದ ಸಿರಿ ದೊಡ್ಡದಾದ ಮರ. ಮರದ ಮೈವಳಿಕೆಯನ್ನು ನೈಜವಾಗಿ ಚಿತ್ರಿಸಿದ್ದಾರೆ. ಹರ್ಷದಿಂದ ಕುಣಿಯುತ್ತಿರುವ ನವಿಲು ಆ ಸಂದರ್ಭದ ಶಿವ ಹಾಗೂ ಬಾಲ ತಪಸ್ವಿಯ ಮಿಲನದ ಹರ್ಷವನ್ನು ಸೂಚಿಸುವಂತಿದೆ. ಉಳಿದ ಪ್ರಾಣಿ ಪಕ್ಷಿಗಳು ನಿರ್ಭಯವಾಗಿ ಓಡಾಡುತ್ತಿವೆ. ಹಾರಾಡುತ್ತಿರುವ ಪಕ್ಷಿಗಳು. ದೂರದಲ್ಲಿ ಬೆಟ್ಟದ ಮೇಲೆ ಮಲ್ಲಿಕಾರ್ಜುನ ದೇವಾಲಯವನ್ನು ಚಿತ್ರಿಸಿದ್ದಾರೆ. ದೃಶ್ಯಾಂತರದ ಕಲ್ಪನೆ ಅಗಾಧವಾದುದು. ಈ ಚಿತ್ರವನ್ನು ಗ್ರಂಥದಲ್ಲಿ ೭೭ ನೇ ಪುಟದಲ್ಲಿ ನೋಡಬಹುದು.

ಚಿತ್ರ ೪೨ : ಶ್ರೀ ಫಲಾಹಾರ ಶಿವಯೋಗೀಶನು ಕೊಣ್ಣೂರ ಮುಂದೆ ತುಂಬಿ ಹರಿಯುವ ಮಲಾಪಹಾರಿಣೀ ಹೊಳೆಯನ್ನು ಕಂಬಳಿಯ ಮೇಲೆ ಕುಳಿತು ದಾಟಿದ್ದು.[೩೯]

ಶಿವನನ್ನು ಒಲಿಸಿಕೊಂಡವನಿಗೆ ಯಾವುದೂ ಅಸಾಧ್ಯವಲ್ಲವೆಂಬಂತೆ ಈ ಚಿತ್ರದಲ್ಲಿ ಫಲಾಹಾರೇಶ್ವರ ತಮ್ಮ ದಿವ್ಯ ಶಕ್ತಿಯಿಂದ ಹರಿಯುವ ಹೊಳೆಯಲ್ಲಿ ಕಂಬಳಿಯನ್ನು ಹಾಸಿ ಅದರ ಮೇಲೆ ಕುಳಿತು ಹೋಗುತ್ತಿದ್ದಾರೆ. ದಂಡೆಯ ಮೇಲಿರುವ ಭಕ್ತಾದಿಗಳೆಲ್ಲ ಕೈಮುಗಿದು ಬೀಳ್ಕೊಡುತ್ತಿದ್ದಾರೆ. ಅವರ ಮುಖದಲ್ಲಿ ಆಶ್ಚರ್ಯ. ಭಕ್ತಿಭಾವ ತುಂಬಿದೆ. ಇಲ್ಲಿ ದೃಶ್ಯಾಂತರವನ್ನು ತೋರಿಸಿದ್ದಾರೆ. ದೂರದಲ್ಲಿ ಬೆಟ್ಟಗಳು. ಸಮೀಪದ ಗಿಡಗಳನ್ನು ಅಲಂಕಾರಿಕ ಶೈಲಿಯಲ್ಲಿ ರಚಿಸಿದ್ದಾರೆ. ಚಿತ್ರದ ಸಂಯೋಜನೆ ಅತ್ಯುತ್ತಮವಾಗಿದೆ. ಚಿತ್ರದ ಬಲಗಡೆ ಅಷ್ಟೊಂದು ಜನರಿದ್ದರೂ ಎಡಗಡೆ ಫಲಾಹಾರೀಶ್ವರರನ್ನು ಚಿತ್ರಿಸಿ ನೋಡುಗನ ದೃಷ್ಟಿ ಮೊದಲು ಅಲ್ಲಿ ಕೇಂದ್ರಿತವಾಗಿ ಅನಂತರ ಎಲ್ಲ ಕಡೆಗೂ ಹರಿಯುವಂತೆ ಚಿತ್ರಿಸಿದ್ದಾರೆ. ಈ ಚಿತ್ರವನ್ನೂ ಗ್ರಂಥದ ೧೩೩ ನೇ ಪುಟದಲ್ಲಿ ನೋಡಬಹುದು.

---

೩೮. ಶಿ. ಮು. ವೈ. ನಾಗೇಶ ಕವಿ : ಶ್ರೀ ಫಲಾಹಾರ ಶಿವಯೋಗಿಶ್ವರ ಪುರಾಣ : ಪುಟ ೭೭

೩೯. ಶಿ. ಮು. ವೈ. ನಾಗೇಶ ಕವಿ : ಶ್ರೀ ಫಲಾಹಾರ ಶಿವಯೋಗಿಶ್ವರ ಪುರಾಣ : ಪುಟ ೧೩೩

ಚಿತ್ರ ೪೩ : ತನ್ನ ಅಸಾಧ್ಯ ರೋಗನಿವಾರಣಕ್ಕಾಗಿ ಮೊರೆಹೊಕ್ಕ ನರಗುಂದ ಮಹಾರಾಜನಿಗೆ ಶ್ರೀ ಫಲಾಹಾರೇಶನು ತೀರ್ಥ ಕಲಶವನ್ನು ಆಶೀರ್ವದಿಸಿದುದು.[೪೦]

ಈ ಚಿತ್ರದಲ್ಲಿ ರೋಗಗ್ರಸ್ಥ ನರಗುಂದ ರಾಜನು ಆಸೆಯಿಂದ ತೀರ್ಥಕಲಶವನ್ನು ಸ್ವೀಕರಿಸುತ್ತಿದ್ದಾನೆ. ಫಲಹಾರೇಶ್ವರನು ಮಂತ್ರೋದಕ ತುಂಬಿದ ಕಲಶವನ್ನು ರಾಜನಿಗೀಯುತ್ತಿದ್ದಾನೆ. ರಾಜಪರಿವಾರದವರು ಭಕ್ತಿಯಿಂದ ನಮಿಸುತ್ತಿದ್ದಾರೆ. ದೂರದಲ್ಲಿ ಊರಿನ ಜನರು ಪವಡಿಸಿ ಆ ದೃಶ್ಯವನ್ನು ವೀಕ್ಷಿಸುತ್ತಿದ್ದಾರೆ. ಶಿವಯೋಗಿಯ ಹಿಂದುಗಡೆ ಆಶ್ರಮ. ಸುತ್ತಲೂ ನಿಸರ್ಗ, ಪ್ರಶಾಂತ ನೆಲೆ ಇದ್ದು. ರಾಜನ ದೃಷ್ಟಿ ಮಾತ್ರ ಆಸೆಯಿಂದ ತೀರ್ಥದ ಗಿಂಡಿಯ ಮೇಲೆ ಇದೆ. ತನ್ನ ರೋಗ ವಾಸಿಯಾಗುತ್ತದೆ ಎಂಬ ಹಂಬಲ ಆತನ ಮುಖದಲ್ಲಿ ಕಾಣುವಂತೆ ಚಿತ್ರಿಸಿದ್ದಾರೆ. ಅದೇ ಸೌಮ್ಯ ವರ್ಣಗಳು. ಈ ಚಿತ್ರವನ್ನು ಗ್ರಂಥದ ೧೫೪ ನೇ ಪುಟದಲ್ಲಿ ನೋಡಬಹುದು.

ಚಿತ್ರ ೪೪ : ಶ್ರೀ ಫಲಾಹಾರೇಶನು ಸಾಲಾಪುರದ ಹಳ್ಳದಲ್ಲಿ ಗಂಗೋದ್ಭವ ಲೀಲೆಯನ್ನು ಮಾಡಿದುದು.[೪೧]

ಈ ಚಿತ್ರದಲ್ಲಿ ಸಾಲಾಪುರದಲ್ಲಿ ಸಿಹಿ ನೀರಿನ ಕೊರತೆ ಹೆಚ್ಚಾದಾಗ ಜನಾಗ್ರಹದ ಮೇರೆಗೆ ಆಗಮಿಸಿದ ಫಲಾಹಾರೇಶನು ಗಣಾರಾಧನೆ ನಡೆಸಲು ಹೇಳಿ ಹಳ್ಳದ ಒಂದೆಡೆಯಿಂದ ಪೂಜೆ ಮಾಡಿ ನಡೆಯುತ್ತಿದ್ದಾರೆ. ಅವರ ಹಿಂದೆಯೇ ಹಳ್ಳದಿಂದ ಉದ್ಭವಿಸಿದ ಗಂಗೆ ಮಂದಗಾಮಿನಿಯಾಗಿ ಹರಿಯತೊಡಗಿದ್ದಾಳೆ.

ಚಿಟ್ಟಿಯವರು ಚಿತ್ರದಲ್ಲಿ ಗಣಾರಾಧನೆಯ ಸಲುವಾಗಿ ಎಲ್ಲ ಜನರು ಅಡಿಗೆಯ ಹೆಡಿಗೆ (ಪುಟ್ಟಿ) ಗಳನ್ನು ಹಿಡಿದುಕೊಂಡು ಬಂದಂತೆ. ನೀರು ಹರಿದಾಗ ಹೆಂಗಳೆಯರೆಲ್ಲ ಗಂಗಾ ಮಾತೆಗೆ ಆರತಿಯನ್ನು ಬೆಳಗಿ ಪೂಜಿಸುವ ನಮ್ಮ ನಾಡಿನ ಸಂಪ್ರದಾಯವನ್ನು ಅಭಿವ್ಯಕ್ತಿಸಿದ್ದಾರೆ. ಜನರು ಸಂತೋಷದಿಂದ ಕಹಳೆ ವಾದ್ಯಗಳನ್ನು ಮೊಳಗಿಸುತ್ತಿದ್ದಾರೆ. ಅಲ್ಲಿ ನೆರೆದ ಜನರ ಮುಖದಲ್ಲಿ ಸಂತೋಷ ಹಾಗೂ ಆಶ್ಚರ್ಯ ಎರಡು ಭಾವನೆಗಳು ಮೇಳವಿಸಿ ವ್ಯಕ್ತವಾದಂತಿದೆ. ಹೆಂಗಳೆಯರ ಮೂಗಿನಲ್ಲಿನತ್ತು. ಉತ್ತರ ಕರ್ನಾಟಕದ ಜೀವನ ರೀತಿಯನ್ನು ಸಾರುವಂಥ ವೇಷಭೂಷಣಗಳನ್ನು ಚಿತ್ರಿಸಿದ್ದಾರೆ.

ಚಿತ್ರ ೪೫ : ಶ್ರೀ ಫಲಾಹಾರೇಶನು ಚಂದ್ರಗಿರಿಯ ಸಮೀಪದ ಪರ್ವತದಲ್ಲಿ ಲಿಂಗಾನುಷ್ಠಾನಕ್ಕೆ ಕುಳಿತಾಗ ಉದುಪುಡಿಯ ರಾಣಿಯು ಆತನ ಕಂಟಲಿ ಬಸವನ ಸೇವೆಯನ್ನು ಮಾಡಿ ಕೃತಾರ್ಥಳಾದುದು.[೪೨]

ಈ ಚಿತ್ರದಲ್ಲಿ ಫಲಾಹಾರೇಶ್ವರರು ಲಿಂಗಪೂಜೆಯಲ್ಲಿ ನಿರತರಾಗಿದ್ದಾರೆ. ಎದುರುಗಡೆ ಭಕ್ತನು ಕೊಟ್ಟಂತಹ ಬಸವ ಅದು ತದೇಕ ಚಿತ್ತದಿಂದ ಪೂಜೆಯನ್ನು ನೋಡುತ್ತಿದೆ. ಉದುಪುಡಿಯ ರಾಣಿ ಆ ಬಸವನ ಸೇವೆಗೆಂದೇ ಹುಲ್ಲನ್ನು ಕಿತ್ತುಕೊಂಡು ತಲೆಯ ಮೇಲೆ ಹೊತ್ತುಕೊಂಡು ಬರುತ್ತಿದ್ದಾಳೆ. ಬಲಗೈಯಲ್ಲಿ ಹುಲ್ಲು ಕಿತ್ತುವ ಕುರುಚಿಗೆ ಇದೆ.

ರಾಣಿಯಾದರೂ ಸಿರಿಯ ಮದವಿಲ್ಲದ ಆಕೆಯ ಮುಖದಲ್ಲಿ ಸೇವಾಭಾವನೆ ಎದ್ದು ಕಾಣುತ್ತಿದೆ. ಬರಿಗಾಲಲ್ಲೇ ಬರುತ್ತಿದ್ದಾಳೆ. ಬಸವನನ್ನು ಅಲಂಕಾರಿಕವಾಗಿ ಚಿತ್ರಿಸಿದ್ದಾರೆ. ವನಸಿರಿಯು ಸೊಬಗಿನಿಂದ ಕೂಡಿದೆ. ದೃಶ್ಯಾಂತರವಿದೆ.

---

೪೦. ಶಿ. ಷಂ. ವೈ. ನಾಗೇಶ ಕವಿ : ಶ್ರೀ ಫಲಾಹಾರ ಶಿವಯೋಗೀಶ್ವರ ಪುರಾಣ : ಪುಟ ೧೫೪

೪೧. ಶಿ. ಷಂ. ವೈ. ನಾಗೇಶ ಕವಿ : ಶ್ರೀ ಫಲಾಹಾರ ಶಿವಯೋಗೀಶ್ವರ ಪುರಾಣ : ಪುಟ ೧೫೪

೪೨. ಶಿ. ಷಂ. ವೈ. ನಾಗೇಶ ಕವಿ : ಶ್ರೀ ಫಲಾಹಾರ ಶಿವಯೋಗೀಶ್ವರ ಪುರಾಣ : ಪುಟ ೧೮೯

ಜಿಂಕೆಯ ಹಿಂಡನ್ನೇ ಚಿತ್ರಿಸಿದ್ದಾರೆ. ನವಿಲು ಮುಂತಾದ ಪಕ್ಷಿಗಳು. ಶಿವಪೂಜೆಗೆ ಬೇಕಾಗುವ ಸಾಮಗ್ರಿಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ರಾಜಮನೆತನದ ಹೆಣ್ಣಾದ್ದರಿಂದ ಆಕೆಯನ್ನು ಅತ್ಯಂತ ಕೋಮಲವಾಗಿ. ಲಾಲಿತ್ಯವಾಗಿ ಚಿತ್ರಿಸಿದ್ದಾರೆ. ಅದೇ ಸೌಮ್ಯವರ್ಣಗಳು ಈ ಚಿತ್ರ ಗ್ರಂಥದ ೧೭೯ ನೇ ಪುಟದಲ್ಲಿ ನೋಡಬಹುದು. (ಅಧ್ಯಾಯ ಏಳರಲ್ಲಿಯ ೧೭ ನೇ ಚಿತ್ರವನ್ನು ನೋಡಿರಿ)

ಚಿತ್ರ ೪೬ : ಶ್ರೀ ಫಲಾಹಾರೇಶನು ತೊರಗಲ್ಲ ಅರಮನೆಯಲ್ಲಿ ಶಿವಪೂಜೆಗೆ ಕುಳಿತು ಶಾಪದಿಂದ ಬ್ರಹ್ಮರಾಕ್ಷಸನಾದ ಭಕ್ತನನ್ನು ಉದ್ಧರಿಸಿದುದು. [೪೩]

ಈ ಚಿತ್ರದಲ್ಲಿ ತೊರಗಲ್ಲ ಅರಸನ ಮನೆಗೆ ಪೂಜೆಗೈಯಲು ಯೋಗಿಯು ಹೋಗಿದ್ದಾನೆ. ಪೂಜಾ ಮನೆಯಲ್ಲಿ ಫಲಹಾರೇಶನು ಪೂಜೆಗೈಯುತ್ತಿರಲು ಆ ಸಮಯದಲ್ಲಿ ಶಾಪದಿಂದ ಬ್ರಹ್ಮರಾಕ್ಷಸನು ಯೋಗಿಯ ಪಾದಗಳಿಗೆ ನಮಸ್ಕರಿಸುತ್ತಿದ್ದಾನೆ. ಯೋಗಿಯು ಆಶೀರ್ವದಿಸಿ ಆತನ ಶಾಪ ವಿಮೋಚನೆ ಗೈಯ್ಯುತ್ತಿದ್ದಾರೆ. ಯೋಗಿಯ ಪಕ್ಕದಲ್ಲಿ ಅರಸನು ಭಕ್ತಿಯಿಂದ ನಮಸ್ಕರಿಸುತ್ತಿದ್ದಾನೆ. ಇನ್ನೊಂದು ಕಡೆಗೆ ಜನಸ್ತೋಮ ನಮಸ್ಕರಿಸುತ್ತಿದೆ.

ಅರಮನೆಯ ವೈಭೋಗದ ಪೂಜಾ ಮನೆಯನ್ನು ಅಲಂಕಾರಿಕವಾಗಿ ಚಿತ್ರಿಸಿದ್ದಾರೆ. ಅಲ್ಲಿ ಚಿತ್ರಿಸಿದ ಕಂಬಗಳು ಜಾಲಂದ್ರಗಳು ದೇವಸ್ಥಾನದ ವಾಸ್ತುಶಿಲ್ಪದಂತೆ ಚಿತ್ರಿಸಿದ್ದಾರೆ. ಮಧ್ಯದಲ್ಲಿ ಇಳಿಬಿಟ್ಟ ತೋರಣಗಳು. ಪೂಜಾ ಸಾಮಗ್ರಿಗಳಾದ ಸಮೆ. ಆರತಿ ಅವುಗಳಲ್ಲಿ ದೀಪಗಳನ್ನು ನೈಜವಾಗಿ ಚಿತ್ರಿಸಿದ್ದಾರೆ. ರಾಕ್ಷಸನನ್ನು ಮನುಷ್ಯರ ಆಕೃತಿಗಳಿಗಿಂತ ಬೇರೆಯಾಗಿ ವಿಕಾರರೂಪವಾಗಿ ರಾಕ್ಷಸತನದ ಗುಣಗಳನ್ನು ಆತನದಲ್ಲಿ ಬಿಂಬಿಸಿದ್ದಾರೆ. ಬಣ್ಣಗಳನ್ನು ಸ್ವಲ್ಪವೇ ಬಳಸಿದ್ದರೂ. ಎಲ್ಲ ಆಕೃತಿಗಳು ಸ್ಪಷ್ಟವಾಗಿ ಕಾಣುತ್ತಿವೆ. ಈ ಚಿತ್ರವನ್ನು ಗ್ರಂಥದ ೧೮೩ ನೇ ಪುಟದಲ್ಲಿ ನೋಡಬಹುದು.

ಚಿತ್ರ ೪೭ : ಶ್ರೀ ಫಲಾಹಾರೇಶನು ತಮ್ಮ ಮಠದೊಳಗೆ ಶಿವಪೂಜೆಗೆ ಕುಳಿತಾಗ ಕೈಯೆತ್ತಿ ಹೊಳೆಯಲ್ಲಿ ಮುಳುಗುತ್ತಿದ್ದ ಬಾಲಕನನ್ನು ಕಾಪಾಡಿದುದು. [೪೪]

ಚಿತ್ರದ ಒಂದು ಭಾಗದಲ್ಲಿ ಲಿಂಗಾರ್ಚನೆಯನ್ನು ಮಾಡುತ್ತಿರುವಾಗ ಫಲಹಾರೇಶ್ವರರು ಕೈಯೆತ್ತಿದ್ದಾರೆ. ಇನ್ನೊಂದೆಡೆ ತೊರೆಯಲ್ಲಿ ಮುಳುಗುತ್ತಿರುವ ಮಗುವನ್ನು ಒಂದು ಕೈ ಎತ್ತಿ ಹಿಡಿದಿದೆ. ಅಲ್ಲಿ ನಿಂತ ಪಾಲಕರು ತಮ್ಮ ಮಗು ಮುಳುಗೇ ಹೋಯಿತೆಂಬ ದುಃಖದ ಜೊತೆಗೆ ಮತ್ತೆ ಮೇಲೆ ಕಾಣಿಸಿದ ಮಗುವನ್ನು ನೋಡಿ ಗಾಬರಿ ಸಂತೋಷಗೊಂಡಿದ್ದಾರೆ

ಚಿಟ್ಟಿಯವರು ಒಂದೇ ಚಿತ್ರದಲ್ಲಿ ಎರಡು ವಿಷಯಗಳನ್ನು ಚಿತ್ರಿಸಿದ್ದಾರಲ್ಲದೆ ಆ ಚಿತ್ರಗಳ ಸಂಬಂಧವನ್ನು ನಿರೂಪಿಸಿದ್ದಾರೆ. ಲಿಂಗಾರ್ಚನೆ ಮಾಡುತ್ತಿರುವ ಶಿವಯೋಗಿ ಎತ್ತಿದ ಕೈಯೇ ಆ ತೊರೆಯಲ್ಲಿ ಮುಳುಗುತ್ತಿರುವ ಮಗುವನ್ನು ಎತ್ತಿ ಹಿಡಿದು ರಕ್ಷಿಸಿದೆ. ಯೋಗಿ ತಮ್ಮ ಆಂತರಿಕ ದಿವ್ಯಶಕ್ತಿಯಿಂದ ಆ ಪ್ರಸಂಗವನ್ನು ಕಂಡು

---

೪೩. ಶಿ. ಪಂ. ವೈ. ನಾಗೇಶ ಕವಿ : ಶ್ರೀ ಫಲಾಹಾರ ಶಿವಯೋಗೀಶ್ವರ ಪುರಾಣ : ಪುಟ ೧೮೩

೪೪. ಶಿ. ಪಂ. ವೈ. ನಾಗೇಶ ಕವಿ : ಶ್ರೀ ಫಲಾಹಾರ ಶಿವಯೋಗೀಶ್ವರ ಪುರಾಣ : ಪುಟ ೨೦೫



೩೮. ಶ್ರೀ ಬಾಲ ತಪಸ್ವಿ ಫಲಹಾರೇಶನು (ಗೋರಕ್ಷಣ ನೆವದಿಂದ ಅಡವಿಗೆ ಹೋಗಿ ಅಲ್ಲಿ) ಲಿಂಗಾನಂದ ಪರವಶನಾಗಿ ಕುಳಿತದ್ದು



೩೯. ಶ್ರೀ ಫಲಹಾರೇಶನು [illegible] ಮಾಡಿದ ಭಕ್ತ [illegible]



೪೦. ಫಲಹಾರೇಶ ಶಿವಯೋಗಿಯ ಶ್ರೀಶೈಲ ತಪೋನುಷ್ಠಾನ



[illegible]



೪೨. ಫಲಹಾರೇಶನು ತುಂಬಿ ಹರಿಯುವ ಹೊಳೆಯನ್ನು ಕಂಬಳಿಯ ಮೇಲೆ ಕುಳಿತು ದಾಟಿದ್ದು



೪೩. ಫಲಹಾರೇಶನು ನರಗುಂದ ಮಹಾರಾಜನಿಗೆ [illegible]



೪೪. ಫಲಹಾರೇಶನು ಗಂಗೋದ್ಭವ ಮಾಡಿದುದು



೪೫. ಫಲಹಾರೇಶನು ಬ್ರಹ್ಮರಾಕ್ಷಸನಾದ ಭಕ್ತನನ್ನು ಉದ್ಧರಿಸಿದುದು

ಕುಳಿತಲ್ಲಿಂದಲೇ ಮಗುವನ್ನು ರಕ್ಷಿಸಿದ್ದಾರೆಂಬ ಕಲ್ಪನೆ ಅದ್ಭುತವಾಗಿದೆ. ಚಿತ್ರದ ಬಲದ ಮೂಲೆಯಲ್ಲಿ ಮನೆಯ ಒಳಗಿನ ಒಂದು ಭಾಗ ಚಿತ್ರಿಸಿದರೆ ಇತ್ತ ದೃಶ್ಯಾಂತರ ಗಿಡಮರಗಳು. ತೊರೆಯಲ್ಲಿಯ ನೀರಿನಲ್ಲಿ ನಿಂತ ಹೆಣ್ಣು ಮಗಳ ಸೀರೆ ತೇಲುತ್ತಿರುವಂತೆ ಅಂದರೆ ನೀರಿನ ಅನುಭವವನ್ನು ನೋಡುಗರಲ್ಲಿ ಥಟ್ಟನೆ ಮಾಡುವಂಥ ರೀತಿಯಲ್ಲಿ ಚಿತ್ರಿಸಿದ್ದಾರೆ. ಈ ಚಿತ್ರವನ್ನು ಗ್ರಂಥದ ೨೦೫ ನೇ ಪುಟದಲ್ಲಿ ನೋಡಬಹುದು.

ಈ ಎಲ್ಲಾ ಸಂಯೋಜನಾ ಚಿತ್ರಗಳನ್ನು ಚೆಟ್ಟಿಯವರು ಕಡುಹಳದಿ (yellow ochre) ವರ್ಣದ ಪೋಸ್ಟರ್ ಕಾಗದದ ಮೇಲೆ ಚಿತ್ರಿಸಿದ್ದಾರೆ. ಆದ್ದರಿಂದ ಇಲ್ಲಿ ಅದೇ ಬಣ್ಣವನ್ನು ಹಿನ್ನೆಲೆಯಾಗಿ ಉಪಯೋಗಿಸಿಕೊಂಡು ನಂತರದಲ್ಲಿ ನೀಲಿಯ ವರ್ಣವನ್ನು (cobalt blue) ಅದರ ನೆರಳಿನೋಪಾದಿಯಲ್ಲಿ ಬಳಸಿದ್ದಾರೆ. ಬಿಳಿವರ್ಣವನ್ನು ಪ್ರಮುಖ ಬೆಳಕು (highlight) ಕೊಡಲು ಬಳಸಿದ್ದಾರೆ. ಅಲ್ಲಲ್ಲಿ ಇತರ ಒಂದೆರಡು ವರ್ಣಗಳನ್ನು ಮಾತ್ರ ಉಪಯೋಗಿಸಿ ಈ ಎಲ್ಲಾ ಸನ್ನಿವೇಷಗಳ ಒಂದು ಶಾಂತ. ಆಹ್ಲಾದ. ಆನಂದದ ಸಂಕೇತವಾಗಿ ನಿರೂಪಿಸುವಲ್ಲಿ ಚೆಟ್ಟಿಯವರ ವರ್ಣಗಳ ಜ್ಞಾನ ಎಂಥವರನ್ನೂ ಬೆರಗುಗೊಳಿಸುತ್ತದೆ.

ಈ ಚಿತ್ರಗಳಲ್ಲಿ ಚಿತ್ರಿಸಿದ ಪ್ರತಿಯೊಂದು ಪ್ರಾಣಿ. ಪಕ್ಷಿ. ಹೂವು. ಎಲೆ. ಎಲ್ಲಾ ವಸ್ತುಗಳ ಆಳವಾದ ಸೂಕ್ಷ್ಮವಾದ ಅಧ್ಯಯನದ ಅರಿವು ನೋಡುಗನಿಗಾಗುತ್ತದೆ. ಅಂತೆಯೇ ಈ ಹಿಂದಿನ ಅವರ ರೇಖಾಚಿತ್ರಗಳ ಅಧ್ಯಯನವನ್ನು ಮಾಡಿದಾಗ ಆ ಪ್ರಾಣಿ. ಪಕ್ಷಿ. ಎಲ್ಲವನ್ನೂ ಯಾವ ರೀತಿ ಇಂತಹ ಸಂಯೋಜನೆಗಳಲ್ಲಿ ಅಳವಡಿಸಿಕೊಂಡಿದ್ದಾರೆಂಬುದಲ್ಲದೇ ಅವುಗಳ ವಿವಿಧ ಭಂಗಿಗಳನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡಿದ ಹಿನ್ನೆಲೆಯ ಪರಿಣಾಮ ಇಲ್ಲಿ ವ್ಯಕ್ತವಾದಂತಿದೆ. ಐವತ್ತು ವರ್ಷಗಳ ಹಿಂದಿನ ಚಿತ್ರಗಳಾದರೂ ಈಗ ರಚಿಸಿದಂತೆ ಇವೆ.

vii) ಶ್ರೀಮದ್ ಅಥಣಿ ಶಿವಯೋಗೀಶ್ವರ ಚಾರಿತ್ರ : (ಪಂಡಿತ ಸದಾಶಿವ ಕವಿ) : ೧೯೫೭

ಈ ಗ್ರಂಥದ ದ್ವಿತೀಯ ಮುದ್ರಣ : ೧೯೮೨ ರಲ್ಲಿ ಆಗಿದೆ. ಆದರೆ ಈ ಗ್ರಂಥದಲ್ಲಿ ಆ ಚಿತ್ರಗಳನ್ನು ಮುದ್ರಿಸಲಾಗಿಲ್ಲ. ಈ ಎಲ್ಲಾ ಮೂಲ ಚಿತ್ರಗಳು ೩೦" x ೨೨" ಆಗಿದ್ದು ಇವುಗಳನ್ನು ಧಾರವಾಡದ ಮುರುಘಾಮಠದಲ್ಲಿ ಈಗ ನೋಡಬಹುದಾಗಿದೆ. ಈ ಚಿತ್ರಗಳು ಅವರ ಚರಿತ್ರೆಯಲ್ಲಿ ಬರುವ ಲೀಲಾಮಯ ಘಟನೆಗಳಾಗಿವೆ.

ಚಿತ್ರ ೪೮ : ಶಿವಯೋಗಿಗಳಿಗೆ ಹುಲಿಯು ನಮಸ್ಕರಿಸಿದ್ದು

" ಶಿವಯೋಗಿಗಳು ತೀರ್ಥಕ್ಷೇತ್ರಗಳನ್ನು ಸಂದರ್ಶಿಸಲು ಹೋದಾಗ ಘೋರ ಅರಣ್ಯ ಗೋಚರವಾಯಿತು. ಆ ಅಡವಿಯಲ್ಲಿ ಒಂದು ಹೆಬ್ಬುಲಿ ಘುಡುಘುಡಿಸುತ್ತಾ ಅವರತ್ತ ಸಾಗಿ ಬಂದಾಗ. ಹುಲಿಯ ಮೇಲೆ ಕೈಯಾಡಿಸಿ. ಆಶೀರ್ವಾದಿಸಿದಾಗ ಹುಲಿಯು ಅತ್ಯಾನಂದದಿಂದ ಮುರುಘೇಶನ ಪಾದಕ್ಕೆರಗಿ ಹೊರಟು ಹೋಯಿತು. ಹೀಗೆ ಖಗ ಮೃಗಾದಿಗಳಿಗೂ ಸಹ ಜ್ಞಾನ ನೀಡಿದರು "[೪೫] ಎಂಬ ಸನ್ನಿವೇಶಕ್ಕೆ ಚೆಟ್ಟಿಯವರು ದೃಶ್ಯದ ಮುಖಾಂತರ ಅಭಿವ್ಯಕ್ತಿಸಿರುವ

---

೪೫. ಶ್ರೀ ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು. ಮುರುಘಾಮಠ. ಧಾರವಾಡ (ಸಂ.) : ಪಂಡಿತ ಸದಾಶಿವ ಕವಿ : ಅಥಣಿ ಶಿವಯೋಗೀಶ್ವರ ಚರಿತ್ರೆ : ಪುಟ ೧೦

ರೀತಿ ಇದಾಗಿದೆ. ಇವರಿಗೆ ಶಿವಯೋಗಿಗಳೇ ಆರಾಧ್ಯ ದೈವವಾದ್ದರಿಂದ ಅವರ ಚಿತ್ರಗಳನ್ನು ಸಹಿತ ಅಷ್ಟೇ ಭಕ್ತಿಯಿಂದ ರಚಿಸಿದ್ದಾರೆ. ಇಲ್ಲಿ ಕ್ರೂರವು ಸಹಿತ ಸಾತ್ವಿಕ ಗುಣಕ್ಕೆ ಮಣಿಯುತ್ತದೆ ಎಂಬ ಸಂಕೇತದೊಂದಿಗೆ ಆಶ್ಚರ್ಯವನ್ನುಂಟು ಮಾಡುವಂತೆ ರಚಿಸಿದ್ದಾರೆ. ಶಿವಯೋಗಿಗಳ ಪಾದಕ್ಕೆ ಬಂದೆರಗಿದ ಹುಲಿಯ ಮುಖದಲ್ಲಿ ದೈನ್ಯಭಾವವಿದೆ. ಶರಣರ ಮುಖದಲ್ಲಿ ಸಾತ್ವಿಕತೆ ಎಂತಹ ಕ್ರೂರತನವನ್ನು ಅಳಿಸಿ ಹಾಕುವ ಶಕ್ತಿಯು ಭಾವದಲ್ಲಿದೆ. ಹಿನ್ನೆಲೆಯಲ್ಲಿ ಕಾನನದ ರಮ್ಯ ಸೊಬಗು. ಹರಿಯುವ ನೀರು. ಕಿರುರೂಪ ಚಿತ್ರಗಳಂತೆ ಗಿಡದಲ್ಲಿಯ ವಿವರ ಪೂರ್ಣ ಆಕಾರಗಳು ನೀಲಿ ವರ್ಣವನ್ನು ಹೆಚ್ಚಾಗಿ ಬಳಸಿ ಆ ವಾತಾವರಣಕ್ಕೆ ಪ್ರಶಾಂತ ಸೌಮ್ಯ ಕಳೆಯನ್ನು ತಂದಿದ್ದಾರೆ.

ಯಾವ ವಿಷಯದ ಬಗ್ಗೆ ಗೌರವ ಇದೆಯೋ ಅಲ್ಲಿ ಚಿಟ್ಟಿಯವರು ಬಹಳ ಕೆಲಸ ಮಾಡಿದ್ದಾರೆ. ಅಂತೆಯೇ ಶರಣರ ಈ ಚಿತ್ರಗಳನ್ನು ನೋಡುವಾಗ ನಮ್ಮನ್ನು ಆ ಕಾಲಕ್ಕೆ. ಪ್ರದೇಶಕ್ಕೆ ಕರೆದುಕೊಂಡು ಹೋಗುತ್ತಾರೆ.

ಚಿತ್ರ ೪೯ : ಬಕುಳ ವೃಕ್ಷದ ಮೇಲೆ ಬಂದು ಕುಳಿತ ಪಕ್ಷಿಗಳೆರಡನ್ನು ಶ್ರೀ ಶಿವಯೋಗಿಗಳು ತಮ್ಮ ಗುರುಸ್ವರೂಪದಲ್ಲಿ ಕಂಡ ದೃಶ್ಯ : " ಶಿವಯೋಗಿಗಳು ಎಲ್ಲೆಲ್ಲಿಯೂ ಶಿವನ ಹೊರತು ಮತ್ತೊಂದನ್ನು ಕಾಣುತ್ತಿಲ್ಲವೆಂಬುದೇ ಇದರ ಅರ್ಥ. "[೪೬] ಅವರ ದರ್ಶನದ ಹೊರತು ಆ ಪಕ್ಷಿಗಳು ಗಿಡದಿಂದ ಹೋಗುತ್ತಿರಲಿಲ್ಲ. ಅವುಗಳನ್ನು ತಮ್ಮ ಗುರುಗಳೆಂದು ಜನರಿಗೆ ಮನವರಿಕೆ ಮಾಡಿದ ದೃಶ್ಯ.

ಬಕುಳದ ಗಿಡದ ಮೇಲೆ ಎರಡು ಬಿಳಿಯ ಪಕ್ಷಿಗಳು ಕುಳಿತಿವೆ. ಜನರು ಅವುಗಳ ಬಗ್ಗೆ ಶಿವಯೋಗಿಗಳಿಗೆ ತಿಳಿಸಿದಾಗ. ಶಿವಯೋಗಿಗಳು ಅವುಗಳ ಬಗ್ಗೆ ಜನರಿಗೆ ಮನವರಿಕೆ ಮಾಡಿವಾಗ ಎಲ್ಲರೂ ಆಶ್ಚರ್ಯದಿಂದ ಕೈ ಮುಗಿಯುತ್ತಿದ್ದಾರೆ. ಶಿವಯೋಗಿಗಳ ಮುಖದಲ್ಲಿ ಆನಂದ. ಜನರೆಲ್ಲರ ಮುಖಗಳನ್ನು ಭಕ್ತಿ ಹಾಗೂ ಬೆರಗಿನ ಭಾವಗಳಿಂದ ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ತೋಟವನ್ನು ಚಿತ್ರಿಸಿದ್ದಾರೆ. ಬಣ್ಣಗಳ ನೆರಳು -ಬೆಳಕಿನ ಲಾಲಿತ್ಯ ಚಿತ್ರಕ್ಕೆ ಮೆರಗು ತಂದಿದೆ. ಎಲ್ಲರ ದೃಷ್ಟಿ ಆ ಪಕ್ಷಿಗಳ ಮೇಲೆಯೇ ಇದೆ. ಈ ಚಿತ್ರ ಗ್ರಂಥದ ೫೮ ನೆ ಪುಟದ ಎದುರಿಗೆ ಲಭ್ಯವಿದೆ.

ಚಿತ್ರ ೫೦ : ಸವದತ್ತಿ ಕಲ್ಮಠದಲ್ಲಿ ಪುರಾಣದ ಮಹಾಮಂಗಲದ ಗಣಾರಾಧನೆಯ ಸಮಯದಲ್ಲಿ ಕವಿದುಬಂದ ಕಾರ್ಮೋಡಗಳನ್ನು ಶ್ರೀ ಶಿವಯೋಗಿಗಳು ಚದುರಿಸಿದ ದೃಶ್ಯ :[೪೭] " ಪ್ರಸಾದ ಕೊಡುವ ವೇಳೆ ಸಮೀಪಿಸಿತ್ತು. ಆಗ ಒಮ್ಮೆಗೆ ಗುಡುಗು ಮಿಂಚು ಆಕಾಶವನ್ನಡರಿದಂತೆ. ಭಕ್ತರು ಗಾಬರಿಗೊಂಡಂತೆ. ಶಿವಯೋಗಿಗಳು ಅವರ ದುಗುಡವನ್ನರಿತು ತಮ್ಮ ಕೈಗಳನ್ನು ಮೇಲೆತ್ತಿ ಮೋಡಗಳಿಗೆ ತಡೆ ಹಾಕಿದಂತೆ ಚಿತ್ರಿಸಿದ್ದಾರೆ. ಅಲ್ಲದೆ ಪ್ರಸಾದ ವಿತರಣೆಯ ಸ್ಥಳವನ್ನು ಬಿಟ್ಟು ಸುತ್ತಲೂ ಧಾರಾಕಾರವಾಗಿ ಮಳೆ ಸುರಿಯುತ್ತಿದೆ. "[*]

---

೪೬. ಶ್ರೀ ಸಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು. ಮುರುಘಾಮಠ. ಧಾರವಾಡ (ಸಂ.) : ಪಂಡಿತ ಸದಾಶಿವ ಕವಿ : ಅಥಣಿ ಶಿವಯೋಗೀಶ್ವರ ಚರಿತ್ರೆ : ಪುಟ ೧೬

೪೭. ಶ್ರೀ ಸಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು. ಮುರುಘಾಮಠ. ಧಾರವಾಡ (ಸಂ.) : ಪಂಡಿತ ಸದಾಶಿವ ಕವಿ : ಅಥಣಿ ಶಿವಯೋಗೀಶ್ವರ ಚರಿತ್ರೆ : ಪುಟ ೧೪

* ಶ್ರೀ ಸಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು. ಮುರುಘಾಮಠ. ಧಾರವಾಡ (ಸಂ.) : ಪಂಡಿತ ಸದಾಶಿವ ಕವಿ : ಅಥಣಿ ಶಿವಯೋಗೀಶ್ವರ ಚರಿತ್ರೆ : ಪುಟ ೧೬

ಚೆಟ್ಟಿಯವರು ಇಲ್ಲಿ ಬಿಸಿಲು ಹಾಗೂ ಮಳೆ ಎರಡೂ ದೃಶ್ಯವನ್ನು ಏಕಕಾಲದಲ್ಲಿ ತೋರಿಸಿದ್ದಾರೆ. ಈ ಕಲ್ಪನೆ ಅದ್ಭುತ. ಮಳೆ ಬೀಳುವ ಪ್ರದೇಶವೆಲ್ಲ ಮೋಡಗಳಿಂದ ಆವೃತವಾಗಿ ಮಬ್ಬಾಗಿ ಕಾಣುತ್ತಿರುವಂತೆ, ಪ್ರಸಾದ ವಿತರಿಸುವ ಸ್ಥಳದಲ್ಲಿ ಸೂರ್ಯನ ಬೆಳಕನ್ನು ಅಲ್ಲಿ ನಿಂತಂತ ಎಲ್ಲ ವ್ಯಕ್ತಿಗಳ ನೆರಳನ್ನು ಸಹಿತ ಚಿತ್ರಿಸುವುದರ ಮೂಲಕ ಸ್ಪಷ್ಟಪಡಿಸಿದ್ದಾರೆ. ಶಿವಯೋಗಿಗಳು ತಮ್ಮ ಕೈಗಳನ್ನು ಮೇಲೆತ್ತಿ ಮೋಡಗಳನ್ನು ಚದುರಿಸುತ್ತಿರುವಂತೆ ಜನರಲ್ಲ ಆ ದೃಶ್ಯವನ್ನು ಕಂಡು ಬೆರಗಾಗಿದ್ದಾರೆ ಎನ್ನುವ ಭಾವ ಮೂಡಿಸಿದ್ದಾರೆ. ಇದನ್ನೇ ಮಹಿಮೆ, ಪವಾಡ ಎಂದರೆ ಶಿವಯೋಗಿಗಳ ಜೀವನವೇ ಒಂದು ಪವಾಡವೆಂದು ಹೇಳಬಹುದು. ಕೆಲವೇ ವರ್ಣಗಳನ್ನು ಇಲ್ಲಿ ಬಳಸಿದ್ದಾರೆ. ಪ್ರಸಾದ ಬಯಲಲ್ಲಿ ನಡೆಯುತ್ತಿರುವುದರಿಂದ ದೂರ ಸಮೀಪದ ದೃಶ್ಯಾಂತರವನ್ನು ತೋರಿಸಿದ್ದಾರೆ. ಮೋಡಗಳಿಂದ ಮಳೆ ಬೀಳುತ್ತಿರುವಂತೆ ಕುಂಚದ ಎಳೆತಗಳನ್ನು ನೋಡಬಹುದಾಗಿದೆ. ಧರಿಸಿದ ಬಟ್ಟೆಗಳ ಮೇಲೆ ಹಿತ-ಮಿತವಾದ ಛಾಯಾಂಕಣವನ್ನು ತೋರಿಸಿದ್ದಾರೆ. ಈ ಚಿತ್ರವನ್ನು ಗ್ರಂಥದ ೬೮ ಮತ್ತು ೬೯ ಪುಟಗಳ ಮಧ್ಯದಲ್ಲಿ ನೋಡಬಹುದು.

ಚಿತ್ರ ೫೧ : ಶಿವಯೋಗಿಗಳನ್ನು ಸುತ್ತು ಹಾಕಿದ ಎರಡು ಹೋರಿಗಳ ಹಗ್ಗ ಅವರು ಶಿವಾ ಶಿವಾ ಎಂದೊಡನೆ ಹರಿದ ದೃಶ್ಯ : ಈ ಚಿತ್ರದಲ್ಲಿ " ಒಂದೇ ಹಗ್ಗದಿಂದ ಕಟ್ಟಿದ ಎರಡು ಹೋರಿಗಳು ಅವರನ್ನು ಸುತ್ತುಹಾಕಿ ಜಗ್ಗಿಬಿಟ್ಟಿವೆ. ಆಗ ಅವರು ಶಿವನನ್ನು ನೆನೆಯಲು ಹಗ್ಗ ಹರಿದು ಹೋಗಿದೆ. " [೪೮]

ಚೆಟ್ಟಿಯವರು ಹಗ್ಗದಿಂದ ಸುತ್ತಿಕೊಂಡು ಜಗ್ಗುತ್ತಿರುವ ಹೋರಿಗಳ ಶಕ್ತಿಯ ಚಾಲನೆಯನ್ನು ನೈಜವಾಗಿ ಚಿತ್ರಿಸಿದ್ದಾರೆ. ಹೋರಿಗಳು ಬಾಲವೆತ್ತಿಕೊಂಡು ದಿಕ್ಕೆಟ್ಟು ಓಡುತ್ತಿವೆ ಎನ್ನುವಂತೆ ಚಿತ್ರಿಸಿದ್ದಾರೆ. ಶಿವಯೋಗಿಗಳನ್ನು ಅಷ್ಟೇ ಶಾಂತಿ, ಸೌಮ್ಯ ಮುಖಭಾವದಿಂದ ಚಿತ್ರಿಸಿದ್ದಾರೆ. ಶಿವಯೋಗಿಗಳ ಮುಖದಲ್ಲಿ ಯಾವುದೆ ಗಾಭರಿ, ದುಗುಡ, ಭಯ ಇಲ್ಲ. ಎರಡು ವಿರೋಧ ಭಾವಗಳನ್ನು ನೋಡುಗನ ಮನಸ್ಸಿನ ಮೇಲೆ ಒಮ್ಮೆಲೆ ಪರಿಣಾಮ ಬೀರುವಂತೆ ತೌಲ್ಯವಾಗಿ ಚಿತ್ರಿಸಿದ್ದಾರೆ.

ಅವರು ಸುತ್ತಿಕೊಂಡಂಥ ಹಗ್ಗ ಹರಿದಂತೆ ತೋರಿಸಿದ್ದಾರೆ. ಶಿವಯೋಗಿಗಳ ಶಿಷ್ಯವೃಂದ, ಜನಸಮೂಹ ಮುಖಭಾವದಲ್ಲಿ ಗಾಬರಿ, ಆಶ್ಚರ್ಯ ಕಾಣುತ್ತೇವೆ. ಕೆಲವೇ ವರ್ಣಗಳ ಮಧ್ಯದಲ್ಲಿ ನೀಲವರ್ಣವನ್ನು ಹೆಚ್ಚಾಗಿ ಬಳಸಿ ಅಲ್ಲಿ ಸಂಜೆಯ ವಾತಾವರಣವನ್ನು ನಿರ್ಮಿಸಿದ್ದಾರೆ. ಘಟನೆ ಹೊರ ವಲಯದಲ್ಲಿ ನಡೆದಿದ್ದರಿಂದ ದೃಶ್ಯಾಂತರವನ್ನು ಚೆನ್ನಾಗಿ ತೋರಿಸಿದ್ದಾರೆ. ಇಲ್ಲೆಲ್ಲ ಚೆಟ್ಟಿಯವರ ನಿಸರ್ಗ ಚಿತ್ರದ ಆಳವಾದ ಅಧ್ಯಯನದ ಅನುಭವವನ್ನು ಕಾಣುತ್ತೇವೆ. ಅಲ್ಲದೆ ಇಂತಹ ಹೊರ ವಲಯದ ದೃಶ್ಯಗಳ ವಿಷಯಗಳನ್ನೊಳಗೊಂಡ ಸಂಯೋಜನಾ ಚಿತ್ರಗಳಲ್ಲಿ ನಿಸರ್ಗವನ್ನು ಚೆನ್ನಾಗಿ ದುಡಿಸಿಕೊಂಡಿದ್ದಾರೆ. ಈ ಚಿತ್ರ ಗ್ರಂಥದ ೮೮ ಹಾಗೂ ೮೯ ನೇ ಪುಟದ ಮಧ್ಯದಲ್ಲಿ ನೋಡಬಹುದು.

---

೪೮. ಶ್ರೀ ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು, ಮುರುಘಾಮಠ, ಧಾರವಾಡ (ಸಂ.) : ಪಂಡಿತ ಸದಾಶಿವ ಕವಿ : ಅಥಣಿ ಶಿವಯೋಗೀಶ್ವರ ಚರಿತ್ರೆ : ಪುಟ ೧೭

ಚಿತ್ರ ೫೨ : ಶ್ರೀ ಶಿವಯೋಗೀಶ್ವರರ ಲಿಂಗಪೂಜಾ ಸಮಯದಲ್ಲಿ ಫಣಿರಾಜನು ಹೆಡೆ ತೆಗೆದು ತೂನೆದಾಡಿದ ದೃಶ್ಯ [೬೯] : ಈ ಚಿತ್ರದಲ್ಲಿ ಶಿವಯೋಗಿಗಳು ಲಿಂಗಪೂಜೆಯಲ್ಲಿ ನಿರತರಾಗಿದ್ದಾರೆ. ಅವರ ಮುಂದೊಂದು ಘಟಸರ್ಪ ಹೆಡೆ ತೆಗೆದು ಲೋಲಾಡುತ್ತಿದೆ. ಹಿನ್ನೆಲೆಯ ಸೂರ್ಯೋದಯದಲ್ಲಿ ವನರಾಜಿ ಮಿಂದಂತಿದೆ. ಮುನ್ನೆಲೆಯಲ್ಲಿ ಹರಿಯುತ್ತಿರುವ ನೀರು.

ಚಿಟ್ಟಿಯವರ ಸೌಮ್ಯ ಸಂಯೋಜನೆಯಿಂದ ಇದೊಂದು ಪ್ರಶಾಂತ ಪವಿತ್ರ ಸ್ಥಳ ಎನ್ನುವಂಥ ಭಾವ ಮೂಡಿಸುತ್ತದೆ. ಸ್ವತಃ ಚಿಟ್ಟಿಯವರೇ ವೀರಶೈವರಾದ್ದರಿಂದ ಲಿಂಗಪೂಜಾ ವಿಧಾನದ ಅನುಭವದ ಸ್ಪಷ್ಟವಾದ ಚಿತ್ರಣ ಇಲ್ಲಿದೆ. ಧ್ಯಾನದಲ್ಲಿ ಮಗ್ನರಾದ ಶಿವಯೋಗಿಗಳ ಶಾಂತ ಮುಖಕ್ಕೆ ಪ್ರತಿಯಾಗಿ ಘಟಸರ್ಪವು ಅಷ್ಟೇ ಶಾಂತವಾಗಿ ಆ ಸನ್ನಿವೇಶವನ್ನು ವೀಕ್ಷಿಸುತ್ತಿದೆ ಎಂಬಂತೆ ಚಿತ್ರಿಸಿದ್ದಾರೆ. ಕ್ರೂರ ಜಂತುಗಳು ಸಹಿತ ಸತ್ಪುರುಷರ ಸಂಗದಲ್ಲಿ ಸಾಧುಗಳಾಗುತ್ತವೆ ಎಂಬ ಸಂದೇಶ ನೀಡುತ್ತದೆ. ಹಿನ್ನೆಲೆಯಲ್ಲಿ ಹೊಂಬೆಳಕು. ದೃಶ್ಯಾಂತರದ ಕಲ್ಪನೆ. ಸನ್ನಿವೇಶಕ್ಕೆ ಪೂರಕವಾಗಿದೆ. ಈ ಚಿತ್ರವನ್ನು ಗ್ರಂಥದ ೩೬ ಹಾಗೂ ೩೭ ನೇ ಪುಟದ ಮಧ್ಯದಲ್ಲಿ ನೋಡಬಹುದು.

ಚಿತ್ರ ೫೩ : ಬಂಡಿಯಿಂದ ಬಿದ್ದು ಪ್ರಾಣ ಹೋದ ರಾಚಯ್ಯನಿಗೆ ಶ್ರೀ ಶಿವಯೋಗಿಗಳು ಪ್ರಾಣದಾನ ಮಾಡಿದ ದೃಶ್ಯ : " ಚಕ್ಕಡಿ ಸಿದ್ಧವಾಯಿತು. ಮಧ್ಯರಾತ್ರಿಯ ಸಮಯ ದಾರಿ ತಪ್ಪಿತು. ಚಕ್ಕಡಿ ಬುಡಮೇಲಾಯಿತು. ರಾಚಯ್ಯನೆಂಬ ಭಕ್ತ ಚಕ್ಕಡಿಯ ಬುಡದಲ್ಲಿ ಸಿಕ್ಕು ಅಸುನೀಗಿದ " [೭೦] ಆತನಿಗೆ ಶಿವಯೋಗಿಗಳು ಪ್ರಾಣದಾನ ಮಾಡಿದ ದೃಶ್ಯ.

ಈ ಚಿತ್ರದಲ್ಲಿ ಬಂಡಿಯಿಂದ ರಾಚಯ್ಯ ಕೆಳಗೆ ಬಿದ್ದಿದ್ದಾನೆ. ಶಿವಯೋಗಿಗಳು ಆತನಿಗೆ ಪ್ರಾಣದಾನ ಮಾಡಿದ್ದಾರೆ. ಚಿತ್ರದ ಹಿನ್ನೆಲೆಯಲ್ಲಿ ಬಂಡಿಯವ ಎತ್ತುಗಳು ಸರಿದಾಡದಂತೆ ಬಂಡಿಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಾನೆ. ಚಿಟ್ಟಿಯವರು ಇಲ್ಲಿ ರಾಚಯ್ಯನು ನೆಲದ ಮೇಲೆ ಬಿದ್ದು ಪ್ರಾಣ ಕಳೆದುಕೊಂಡು ಮತ್ತೆ ಶಿವಯೋಗಿಗಳ ಆಶೀರ್ವಾದದಿಂದ ಎಚ್ಚರಗೊಂಡು ಧನ್ಯ ಭಾವದಿಂದ ಶಿವಯೋಗಿಗಳಿಗೆ ಕೈಮುಗಿಯುತ್ತಿರುವಂತೆ. ಚಿತ್ರಿಸಿದ್ದಾರಲ್ಲದೆ. ಬಂಡಿಯವನು ತನ್ನೆಲ್ಲ ಶಕ್ತಿಯಿಂದ ಬಂಡಿಯನ್ನು ಬಿಗಿಯಾಗಿ ಹಿಡಿದುಕೊಂಡಂತೆ ಚಿತ್ರಿಸಿದ್ದಾರೆ. ಬಂಡಿಯನ್ನು ಸ್ವಲ್ಪ ವಾಲಿದಂತೆ. ಅಲ್ಲಿ ನೆರೆದ ಜನ ಈ ಲೀಲೆಯನ್ನು ಕಂಡು ಮುಖದಲ್ಲಿ ಆಶ್ಚರ್ಯದ ಭಾವನೆ. ವ್ಯಕ್ತಪಡಿಸಿದ್ದಾರೆ. ದೃಶ್ಯಾಂತರವಿದೆ. ಹೊಲದಲ್ಲಿ ಜೋಳದ ತೆನೆಗಳನ್ನು ನೈಜವೆಂಬಂತೆ ಚಿತ್ರಿಸಿದ್ದಾರೆ. ಸ್ವಲ್ಪವೇ ಛಾಯಾಂಕಣವಿದೆ. ಈ ಚಿತ್ರ ಗ್ರಂಥದ ೧೦೦ ರಿಂದ ೧೦೧ ನೆಯ ಪುಟದ ಮಧ್ಯದಲ್ಲಿ ನೋಡಬಹುದು.

---

೬೯. ಶ್ರೀ ಸಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು. ಮುರುಘಾಮಠ. ಧಾರವಾಡ (ಸಂ.) : ಪಂಡಿತ ಸದಾಶಿವ ಕಪಿ : ಅಥಣಿ ಶಿವಯೋಗಿಶ್ವರ ಚರಿತ್ರೆ : ಪುಟ ೧೯

೭೦. ಶ್ರೀ ಸಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು. ಮುರುಘಾಮಠ. ಧಾರವಾಡ (ಸಂ.) : ಪಂಡಿತ ಸದಾಶಿವ ಕಪಿ : ಅಥಣಿ ಶಿವಯೋಗಿಶ್ವರ ಚರಿತ್ರೆ : ಪುಟ ೧೯



೪೭. ಫಲಹಾರೇಶನು ಹೊಳೆಯಲ್ಲಿ ಮುಳುಗುತ್ತಿದ್ದ ಬಾಲಕನನ್ನು ಕಾಪಾಡಿದುದು

೪೮. ಶಿವಯೋಗಿಗಳಿಗೆ ಹುಲಿಯು ನಮಸ್ಕರಿಸಿದುದು





೪೯. ಶಿವಯೋಗಿಗಳು ಪಕ್ಷಿಗಳೆರಡನ್ನು ತಮ್ಮ ಗುರು ಸ್ವರೂಪದಲ್ಲಿ ಕಂಡದ್ದು



೫೦. ಶಿವಯೋಗಿಗಳು ಕಾರ್ಯೋದ್ಯೋಗಕ್ಕೆ [illegible]



೫೧. ಶಿವಯೋಗಿಗಳು ಸುತ್ತು ಹಾಕಿದ ಎರಡು ಹೋರಿಗಳ ಹಗ್ಗವನ್ನು ಹರಿದ ದೃಶ್ಯ

೫೨. ಶಿವಯೋಗೀಶ್ವರರು ಲಿಂಗಪೂಜಾಸಮಯದಲ್ಲಿ ಫಣಿರಾಜನನ್ನು ಹೆಡೆ ತೆಗೆದು ತೂನೆದಾಡಿದ ದೃಶ್ಯ





೫೩. ಶಿವಯೋಗಿಗಳು ರಾಚಯ್ಯನಿಗೆ ಪ್ರಾಣದಾನ ಮಾಡಿದ ದೃಶ್ಯ



೫೪. ಶಿವಯೋಗಿಗಳ ಕೃಪೆಯಿಂದ ಕಳೆದ ಲಿಂಗ ಪಡೆದುಕೊಂಡ ದೃಶ್ಯ

ಚಿತ್ರ ೫೪ : ಹೊಳೆಯಲ್ಲಿ ಲಿಂಗವನ್ನು ಕಳೆದುಕೊಂಡ ಭಕ್ತನೋರ್ವನು ಶ್ರೀ ಶಿವಯೋಗಿಗಳ ಕೃಪೆಯಿಂದ ಅದನ್ನು ಹುಡುಕಿದ ದೃಶ್ಯ [೫೧] : ಚಟ್ಟಿಯವರು ಇಲ್ಲಿ ಪೂರ್ತಿ ಹೊಳೆಯ ದೃಶ್ಯವನ್ನೇ ಚಿತ್ರಿಸಿದ್ದಾರೆ. ದೃಶ್ಯಾಂತರ ದೂರದಲ್ಲಿ ಬೆಟ್ಟ. ಮರಗಳ ಸಾಲು. ಕೆಲವು ಜನರು ನೀರಿನಲ್ಲಿ ಈಜುತ್ತಿರುವಂತೆ ಚಿತ್ರಿಸಿದ್ದಾರೆ. ಹೊಳೆಯಲ್ಲಿ ಹೆಣ್ಣುಮಕ್ಕಳು ಸಹಿತ ತಮ್ಮ ಮಕ್ಕಳಿಗೆ ಸ್ನಾನ ಮಾಡಿಸುತ್ತಿದ್ದಾರೆ. ಶಿವಯೋಗಿಗಳು ತಮ್ಮ ಶಿಷ್ಯರೊಂದಿಗೆ ಹೊಳೆಯಲ್ಲಿ ಸ್ನಾನ ಮಾಡುತ್ತಿರುವಂತೆ ಅಲ್ಲಿಯೇ ಸಮೀಪದಲ್ಲಿ ಭಕ್ತನೊಬ್ಬನು ಶಿವಯೋಗಿಗಳ ಕೃಪೆಯಿಂದ ಕಳೆದ ಲಿಂಗವನ್ನು ಬಗ್ಗಿ ಹಿಡಿಯುತ್ತಿದ್ದಾನೆ. ಆ ದೃಶ್ಯವನ್ನು ಕಂಡಂತ ಜನರ ಮುಖದಲ್ಲಿ ಆಶ್ಚರ್ಯವಿದೆ. ಹಾಗೆಯೇ ಕೈ ಮುಗಿದಿದ್ದಾರೆ. ನೀರಿನಲ್ಲಿ ಅಲೆಗಳು. ಈಜುವಾಗ ಕದಡುವ ನೀರಿನ ಕಲ್ಪನೆಯನ್ನು ನೈಜವಾಗಿ ಚಿತ್ರಿಸಿದ್ದಾರೆ. ಮುಂಜಾವಿನ ಸೂರ್ಯನ ಬೆಳಕು ಚಿತ್ರಕ್ಕೆ ಆಹ್ಲಾದ ಭಾವನೆಯನ್ನು ನೀಡಿದೆ. ಈ ಚಿತ್ರ ಗ್ರಂಥದ ೧೯೬ ಹಾಗೂ ೧೯೭ ನೇ ಪುಟದ ಮಧ್ಯದಲ್ಲಿ ನೋಡಬಹುದು.

ಈ ಎಲ್ಲಾ ಚಿತ್ರಗಳಲ್ಲಿ ಗಮನಿಸಬಹುದಾದ ಒಂದು ವಿಷಯವೆಂದರೆ. ಶಿವಯೋಗಿಗಳ ಮುಖವನ್ನು ಎಷ್ಟು ದೂರದಿಂದಲೂ ಗುರ್ತಿಸುವಷ್ಟು ಸಾದೃಶ್ಯ ಲಕ್ಷಣಗಳನ್ನು ಕಾಣುತ್ತೇವೆ. ಸ್ವಾಮಿಗಳು ಧರಿಸುವಂತಹ ಉಡುಪು. ಆಗಿನ ಜನರ ಭಾವನೆ. ಹೆಂಗಳೆಯರ ಯಾವತ್ತು ತಲೆಯ ಮೇಲಿನ ಸೆರಗು ಆ ಕಾಲದ ಸಂಸ್ಕೃತಿ ಸಂಪ್ರದಾಯವನ್ನು ಅಭಿವ್ಯಕ್ತಿಸುತ್ತವೆ. ಅಲ್ಲದೆ ಕಲಾಕಾರನ ಚಿತ್ರ ಹಾಗೂ ಸಾಹಿತ್ಯದ ಆಳವಾದ ಅಧ್ಯಯನದ ಅರಿವಾಗುತ್ತದೆ. ಸನ್ನಿವೇಶಕ್ಕೆ ತಕ್ಕಂತಹ ಚಿತ್ರಣ ಅದರಲ್ಲಿಯ ಜನಸಮೂಹ ಅವರ ಮುಖಭಾವನೆಗಳನ್ನು ಅಭಿವ್ಯಕ್ತಿಸುವಲ್ಲಿ ಚಟ್ಟಿಯವರ ಪ್ರತಿಭೆಯನ್ನು ಗುರ್ತಿಸಬಹುದು.

viii) ಚೆಳ್ಳಗುರಿಕಿ ಶ್ರೀ ಎರ್ರಿಸ್ವಾಮಿಗಳ ಲೀಲಾವಿಲಾಸ : ಸಿ. ವ. ಚೆನ್ನಬಸವೇಶ್ವರ ಬಳ್ಳಾರಿ - ೧೯೬೩

ಪವಾಡ ಚಿತ್ರಗಳು : ಇವೇ ಚಿತ್ರಗಳನ್ನು ೧೯೬೬ ರಲ್ಲಿ ಶ್ರೀ ವೈ. ನಾಗೇಶ ಶಾಸ್ತ್ರಿಗಳು ಬಳ್ಳಾರಿ ಇವರು ಬರೆದ ಲೀಲಾಮೃತ ಚೆಳ್ಳಗುರಿಕೆ ಎರ್ರಿಸ್ವಾಮಿಗಳ ಚರಿತ್ರೆಯಲ್ಲೂ ನೋಡಬಹುದು. ಇಲ್ಲಿ ಒಟ್ಟು ೬ ಚಿತ್ರಗಳನ್ನು ರಚಿಸಿ ಕೊಟ್ಟಿದ್ದಾರೆ. ಈ ಎಲ್ಲಾ ಚಿತ್ರಗಳ ಅಳತೆ ೩೦" X ೨೨" ಇದ್ದು ಗ್ರಂಥದಲ್ಲಿ ಕಪ್ಪು-ಬಿಳುಪು ಛಾಯಾ ಚಿತ್ರಗಳನ್ನು ಮುದ್ರಿಸಿದ್ದಾರೆ. ಈ ಮೂಲಚಿತ್ರಗಳನ್ನು ಚೇಳ್ಳಗುರಿಕೆಯ ಶ್ರೀಮಠದಲ್ಲಿ ನೋಡಲು ಲಭ್ಯವಿರುತ್ತವೆ.

ಚಿತ್ರ ೫೫ : ಶ್ರೀ ಎರ್ರಿಸ್ವಾಮಿಗಳು ಮುಷ್ಟೂರು ಗ್ರಾಮದಲ್ಲಿ ನಂದಿಯ ಶಿಲಾವಿಗ್ರಹವನ್ನು ನಡೆಯಿಸಿದ ಪವಾಡ [೫೨]

ಈ ಚಿತ್ರದಲ್ಲಿ ಎರ್ರಿಸ್ವಾಮಿಗಳು ಶಿವನ ಗುಡಿಯ ಒಳಗಡೆ ಇರುವ ಕಟ್ಟೆಯ ಮೇಲೆ ಎಡಗೈಯಲ್ಲಿ ಲಿಂಗ ಹಿಡಿದುಕೊಂಡು ನಡೆದು ಬಂದ ಕಲ್ಲು ಬಸವನಿಗೆ ಆಶೀರ್ವದಿಸುತ್ತಿದ್ದಾರೆ. ಈ ದೃಶ್ಯವನ್ನು ಕಂಡ ಅಲ್ಲಿಯ ಜನರೆಲ್ಲ ಆಶ್ಚರ್ಯ ಪಡುತ್ತಿದ್ದಾರೆ. ಚಿತ್ರದ ಎಡಗಡೆ ಶಿವನ ಮೂರ್ತಿಯನ್ನು ಚಿತ್ರಿಸಿದ್ದಾರೆ.

---

೫೧. ಶ್ರೀ ಸಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು. ಮುರುಘಾಮಠ. ಧಾರವಾಡ (ಸಂ.) : ಪಂಡಿತ ಸದಾಶಿವ ಕವಿ : ಅಥಣಿ ಶಿವಯೋಗೀಶ್ವರ ಚರಿತ್ರೆ : ಪುಟ ೧೯೬

೫೨. ಸಿ. ವ. ಚೆನ್ನಬಸವೇಶ್ವರ : ಚೆಳ್ಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಲೀಲಾ ವಿಲಾಸ : ಪುಟ ೧೫

ತಾತನನ್ನು ಮಹಾತ್ಮನೆಂದು ಚೆಟ್ಟಿಯವರು ಇಲ್ಲಿ ಅವರ ತಲೆಯ ಹಿಂದುಗಡೆ ಜ್ಞಾನದ ಪ್ರಭಾವಳಿಯನ್ನು ಚಿತ್ರಿಸಿದ್ದಾರೆ. ಅಲ್ಲಿ ಬಳಸಿದ ಬಿಳಿ ವರ್ಣ ಜ್ಞಾನ ಹಾಗೂ ಶಾಂತಿಯ ಸಂಕೇತದಂತಿದೆ. ಕೆಲ ಹೆಂಗಸರು ಪವಾಡದ ಬಗ್ಗೆ ಮಾತನಾಡುತ್ತಿದ್ದರೆ ಇನ್ನು ಕೆಲವರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಶಿವನ ಎದುರಾಗಿ ಮುಖ ಮಾಡಿ ಕುಳಿತ ಕಲ್ಲು ಬಸವ ಸರ್‍ರನೆ ತಿರುಗಿ ತಾತನ ಬಳಿಗೆ ಬಂದಿದೆ. ಆ ರೀತಿ ಬಸವ ತಿರುಗಿದಂತೆ ಅಲ್ಲಿ ಎಳೆದ ಕುಂಚಗಳ ಎಳೆತ ಆ ಚಲನೆಯನ್ನು ಸ್ಪಷ್ಟಪಡಿಸುತ್ತದೆ. ಈ ಚಿತ್ರದಲ್ಲಿ ಸೌಮ್ಯ ಹಾಗೂ ಉಜ್ವಲ ವರ್ಣಗಳ ಮೇಳವಿಕೆ ಕಣ್ಣಿಗೆ ಆನಂದ ನೀಡುತ್ತದೆ. ಈ ಚಿತ್ರವನ್ನು ಗ್ರಂಥದ ೧೫ ನೇ ಪುಟದಲ್ಲಿ ನೋಡಬಹುದು.

ಚಿತ್ರ ೫೬ : ಶ್ರೀ ತಾತನವರು ಸಮಾಧಿಯಲ್ಲಿರಲು ಕಳ್ಳರು ತೆಂಗಿನ ಕಾಯಿಯನ್ನು ಕುಕ್ಕಿದರೂ ಶ್ರೀಗಳು ಅಚಂಚಲ ಸಮಾಧಿಮಗ್ನರಾಗಿರುವುದು. [೫೩]

" ಕಳ್ಳರು ತಾವು ಲೂಟಿ ಮಾಡಲು ಹೋದರೆ ಜಯವಾಗುವುದೋ ಎಂಬ ವಿಷಯವನ್ನು ತಾತನಿಗೆ ಕೇಳಲಾಗಿ ಅಂತರ್ಮುಖಿಯಾದ ತಾತನು ಅದನ್ನು ಲಕ್ಷಿಸದೇ ಸುಮ್ಮನೆ ಇದ್ದ. " [೫೪] ಈ ಸನ್ನಿವೇಶದ ಚಿತ್ರದಲ್ಲಿ ದೇವಾಲಯದ ಮಂಟಪದ ಮಧ್ಯದಲ್ಲಿ ತಾತ ಸಮಾಧಿ ಸ್ಥಿತಿಯಲ್ಲಿ ಕುಳಿತಿದ್ದಾನೆ. ಕಳ್ಳರು ಅವರನ್ನು ಸುತ್ತುವರಿದು ಪೀಡಿಸುತ್ತಿದ್ದಾರೆ. ಅದರಲ್ಲಿ ಒಬ್ಬನು ತಾತನ ತಲೆಗೆ ತೆಂಗಿನ ಕಾಯಿಯನ್ನು ಕುಕ್ಕಿದ್ದಾನೆ. ರಕ್ತ ಸುರಿಯುತ್ತಿದೆ.

ಚೆಟ್ಟಿಯವರು ಇಲ್ಲಿ ಕಳ್ಳರನ್ನು ಅವರ ಗುಣಗಳಿಗೆ ತಕ್ಕ ಹಾಗೆ ಚಿತ್ರಿಸಿದ್ದಾರೆ. ದೊಡ್ಡ ಕಣ್ಣುಗಳು. ದೊಡ್ಡ ಮೀಸೆ. ದಷ್ಟಪುಷ್ಟವಿದೆ. ಮುಖದಲ್ಲಿ ಕ್ರೌರ್ಯಭಾವನೆ ತುಂಬಿದೆ. ಅಷ್ಟೆ ಅಂತರ್ಮುಖಿಯಾಗಿ ಪ್ರಪಂಚದ ಅರಿವಿಲ್ಲದಂತೆ ಕುಳಿತಿರುವ ಭಾವ. ಹಳೆಯ ದೇವಾಲಯ ಎಂಬುದಕ್ಕೆ ಕಂಬಗಳು ಅಲ್ಲಲ್ಲಿ ಬಿದ್ದಿರುವಂತೆ ರಚಿಸಿದ್ದಾರೆ. ಕಳ್ಳರ ಮುಖಭಾವದಲ್ಲಿ ಕ್ರೌರ್ಯದ ಜೊತೆ ಗಾಭರಿಯು ಉಂಟಾಗಿದೆ. ಹಿತಮಿತವಾದ ಛಾಯಾಂಕಣವಿದೆ. ಈ ಚಿತ್ರ ಗ್ರಂಥದ ೧೭ ನೇ ಪುಟದಲ್ಲಿ ಲಭ್ಯವಿದೆ.

ಚಿತ್ರ ೫೭ : ಶ್ರೀ ಎರ್ರಿಸ್ವಾಮಿಗಳು ಓರ್ವ ಭಕ್ತನಿಗೆ ಆಶೀರ್ವದಿಸುತ್ತ ಹಾವುಗಳು ಬಂಗಾರವಾದ ಪವಾಡ. [೫೫]

ಈ ಚಿತ್ರದ ಬಗ್ಗೆ ಈಗಾಗಲೇ ಹಿಂದೆ ಪೆನ್ಸಿಲ್ ಮಾಧ್ಯಮದ ವಿವರಣೆ ಹೇಳಿಯಾಗಿದೆ. ಆ ಚಿತ್ರ ಈ ವರ್ಣ ಚಿತ್ರದ ಕರಡು (Sketch) ಆಗಿದೆ. ಆದರೂ ಇಲ್ಲಿ ಕೆಲವು ಮಾರ್ಪಾಡುಗಳಿವೆ. ಚಿತ್ರದಲ್ಲಿ ಹಾವಿನ ಹುತ್ತ ತಾತನ ಬಳಿಯಲ್ಲಿ ಇದೆ. ಹುತ್ತದಿಂದಲೇ ನೇರವಾಗಿ ಹಾವನ್ನು ತೆಗೆದು ಭಕ್ತನಿಗೆ ನೀಡುತ್ತಿದ್ದಾನೆ.

ಚೆಟ್ಟಿಯವರು ಈ ಚಿತ್ರದಲ್ಲಿ ತಾತನ ದೃಷ್ಟಿ ಭಕ್ತನ ಮೇಲೆ ನಾಟಿರುವಂತೆ ಚಿತ್ರಿಸಿದ್ದಾರೆ. ಆ ಭಕ್ತನು ಮಾತ್ರ ಧನ್ಯ ಭಾವದಿಂದ ಕಣ್ಮುಚ್ಚಿ ಸ್ವೀಕರಿಸುವಂತೆ ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ನಿಸರ್ಗ ಅಲ್ಲಲ್ಲಿ ಆಡುಗಳು ಮೇಯುತ್ತಿವೆ.

---

೫೩. ಕಿ. ವ. ಚೆನ್ನಬಸವೇಶ್ವರ : ಬೆಳ್ಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಲೀಲಾ ವಿಲಾಸ : ಪುಟ ೧೪

೫೪. ಕಿ. ವ. ಚೆನ್ನಬಸವೇಶ್ವರ : ಬೆಳ್ಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಲೀಲಾ ವಿಲಾಸ : ಪುಟ ೧೪

೫೫. ಕಿ. ವ. ಚೆನ್ನಬಸವೇಶ್ವರ : ಬೆಳ್ಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಲೀಲಾ ವಿಲಾಸ : ಪುಟ ೨೨

ತಾತನ ವರ್ಣವನ್ನು ಗೌರವವಾಗಿಯೂ ಭಕ್ತನ ವರ್ಣವನ್ನು ಕಪ್ಪಾದ ನಿಲವರ್ಣದಲ್ಲಿಯೂ ಚಿತ್ರಿಸಿದ್ದಾರೆ. ಇದರಿಂದ ಆತನನ್ನು ಜನಸಾಮಾನ್ಯನಾಗಿಯೂ ತಾತನನ್ನು ಮಹಿಮಾಪುರುಷನಾಗಿಯೂ ಚಿತ್ರಿಸಿದ್ದಾರೆ. ಈ ಚಿತ್ರವು ಗ್ರಂಥದ ೨೨ ನೇ ಪುಟದಲ್ಲಿ ಲಭ್ಯವಿದೆ.

ಚಿತ್ರ ೫೮ : ಶ್ರೀ ಚೆಳ್ಳಗುರಿಕಿಯ ಹತ್ತಿರದ ಮಲ್ಲಪ್ಪನ ಮಟ್ಟಿಯ ಮೇಲೆ ಊರಿಗೆ ಬರುವ ಮುನ್ನ ಶ್ರೀ ತಾತನವರು ಶಿವಯೋಗ ಸಮಾಧಿ ಮಗ್ನರಾಗಿರುವುದು.[೫೬]

ಈ ಚಿತ್ರದಲ್ಲಿ ಮಲ್ಲಪ್ಪನ ಮಟ್ಟಿ (ತಿಪ್ಪೆ) ಯ ಮೇಲೆ ತಾತ ಶಿವಯೋಗ ಸಮಾಧಿಯಲ್ಲಿದ್ದಾನೆ. ಸುತ್ತಲೂ ಜನರು ಆತನನ್ನು ಕೂಗುತ್ತಿದ್ದಾರೆ. ಹತ್ತಿರದಿಂದ ಹಾಸಿ ಹೋಗುತ್ತಿರುವ ಹೆಂಗಸರು ಗಂಡಸರು ಮಾತನಾಡಿಕೊಳ್ಳುತ್ತಿದ್ದಾರೆ. ದನಗಳು ಸಹಿತ ಅಲ್ಲಿಯೇ ನಿಂತಿವೆ. ದಾರಿಹೋಕರ ಜೊತೆ ನಾಯಿಯು ಬರುತ್ತಿದೆ.ಹೀಗೆ ಚಿಟ್ಟಿಯವರು ಚಿತ್ರಕ್ಕೆ ಚಾಲನೆಯನ್ನು ನೀಡಿದ್ದಾರೆ. ತಾತನ ಹಿಂದೆ ಅದೇ ಜ್ಞಾನದ ಬೆಳಕು ಅದರ ಹಿಂದೆ ಒಂದು ವೃಕ್ಷ ಚಿತ್ರಿಸಿದ್ದಾರೆ. ಜನರ ಮುಖದಲ್ಲಿ ಎದ್ದು ಬಾರದ ತಾತನ ಬಗ್ಗೆ ಚಿಂತೆ. ಕಾತರದ ಭಾವನೆ ಇದ್ದರೆ. ಸಮಾಧಿ ಸ್ಥಿತಿಯ ಭಾವನೆ ತಾತನ ಮುಖದಲ್ಲಿ ವ್ಯಕ್ತವಾಗಿದೆ. ಮೇಲೆ ತಿಳಿಯಾದ ಆಕಾಶ. ದೃಶ್ಯಾಂತರ ಎಲ್ಲ ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಸೌಮ್ಯವರ್ಣವಿದೆ. ಈ ಚಿತ್ರವು ಗ್ರಂಥದ ೧೦೩ ನೇ ಪುಟದಲ್ಲಿ ಲಭಿಸಿದೆ.

ಚಿತ್ರ ೫೯ : ಶ್ರೀ ಎರ್ರಿಸ್ವಾಮಿಗಳು ಸತ್ತ ಎಮ್ಮೆಯ ಕರುವನ್ನು ತಮ್ಮ ಪಾದಸ್ಪರ್ಶದಿಂದ ಬದುಕಿಸಿದ ಪವಾಡ.[೫೭]

ಈ ಚಿತ್ರದಲ್ಲಿ ಸತ್ತ ಕರುವನ್ನು ತಾತನವರು ತಮ್ಮ ಪಾದಸ್ಪರ್ಶದಿಂದ ಬದುಕಿಸಿದ್ದಾರೆ. ಸುತ್ತಲೂ ಹೆಂಗಸರು ಆ ದೃಶ್ಯ ನೋಡಿ. ಕೈ ಮುಗಿದು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಎಮ್ಮೆಯೂ ಸಂತೋಷದಿಂದ ಕರುವನ್ನು ನೆಕ್ಕುತ್ತಿದೆ.

ಚಿಟ್ಟಿಯವರು ಇಲ್ಲಿ ಹಾಲು ಮಾರುವವಳ ಸ್ಥಿತಿಗತಿಗೆ ತಕ್ಕಂತ ಮನೆಯನ್ನು ಚಿತ್ರಿಸಿದ್ದಾರೆ. ಮೂಲೆಯಲ್ಲಿ ಅಡಕಲು ಗಡಿಗೆಗಳನ್ನು ತೂಗಿ ಬಿಟ್ಟಿದ್ದು ಹಳ್ಳಿಯ ಸಂಪ್ರದಾಯ ಹಾಗೂ ಆಕೆಯ ಬಡತನವನ್ನು ಸೂಚಿಸುತ್ತದೆ. ಕರು ಬದುಕಿದ್ದಕ್ಕೆ ಆಕೆಯ ಮುಖದಲ್ಲಿ ಸಂತೋಷ ಗಾಭರಿ ಭಾವನೆ ಮೂಡಿಸಿದ್ದಾರೆ. ಮಕ್ಕಳೆಲ್ಲ ಸಂತೋಷದಿಂದ ಚಪ್ಪಾಳೆ ತಟ್ಟುತ್ತಿವೆ. ತಾತನ ಮುಖದಲ್ಲಿ ಸಾತ್ವಿಕ ಕಳೆ. ಹೊರಗಿನ ಬಿಸಿಲು ಬಂದಿದ್ದರಿಂದ ಅಲ್ಲಿ ನಿಂತವರ ಹಾಗೂ ಎಮ್ಮೆಯ ನೆರಳನ್ನೂ ಚಿತ್ರಿಸಿದ್ದಾರೆ. ಈ ಚಿತ್ರ ಗ್ರಂಥದ ೨೯ ನೇ ಪುಟದಲ್ಲಿ ಲಭ್ಯವಿದೆ.

ಚಿತ್ರ ೬೦ : ಶ್ರೀ ಎರ್ರಿಸ್ವಾಮಿಗಳನ್ನು ಗ್ರಾಮದ ಮತ್ತು ಲೆಕ್ಕಯಾದಿ ಭಕ್ತರು ಪೋಲೀಸ್ ಸಿಬ್ಬಂದಿಯೊಂದಿಗೆ ಗ್ರಾಮದಿಂದ ಶ್ರೀಮಠಕ್ಕೆ ಉತ್ಸವದೊಂದಿಗೆ ಕರೆತರುತ್ತಿರುವುದು.[೫೮]

ಈ ಚಿತ್ರ ಉತ್ಸವದ. ಸಂಭ್ರಮದ ಚಿತ್ರವಾಗಿದೆ. ಊರಿನ ಜನರೆಲ್ಲ ನೆರೆದಿದ್ದಾರೆ. ಚಿತ್ರದ ಬಲಭಾಗದಲ್ಲಿ ತಾತನವರು ಬರುತ್ತಿದ್ದಾರೆ. ಅವರ ತಲೆಯ ಮೇಲೆ ಛತ್ರ ಹಿಡಿದು. ಚಾಮರವನ್ನು ಬೀಸುತ್ತಿದ್ದಾರೆ. ಮುಂದೆ

---

೫೬. ಸಿ. ವ. ಚೆನ್ನಬಸವೇಶ್ವರ : ಚೆಳ್ಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಲೀಲಾ ವಿಲಾಸ : ಪುಟ ೧೦೩

೫೭. ಸಿ. ವ. ಚೆನ್ನಬಸವೇಶ್ವರ : ಚೆಳ್ಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಲೀಲಾ ವಿಲಾಸ : ಪುಟ ೨೯

೫೮. ಸಿ. ವ. ಚೆನ್ನಬಸವೇಶ್ವರ : ಚೆಳ್ಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಲೀಲಾ ವಿಲಾಸ : ಪುಟ ೪೩

೨೫. ಎರಿಸ್ವಾಮಿಗಳು ನಂದಿಯ ಶಿಲಾವಿಗ್ರಹವನ್ನು ನಡೆಯಿಸಿದುದು



೨೬. ಎರಿಸ್ವಾಮಿಗಳು ಸಮಾಧಿಯಲ್ಲಿರಲು ಕಳ್ಳರು ಟೆಂಗಿನ ಕಾಯಿಗಳನ್ನು ಕುಕ್ಕಿದ ದೃಶ್ಯ





೫೭. ಎರ್ರಿಸ್ವಾಮಿಗಳ ಆಶೀರ್ವಾದಿಂದ ಹಾವುಗಳು ಬಂಗಾರವಾದದ್ದು



೫೮. ಎರ್ರಿತಾತ ಶಿವಯೋಗ ಮಗ್ನರಾಗಿರುವುದು



೫೯. ಎರ್ರಿಸ್ವಾಮಿಗಳು ಸತ್ತ ಎಮ್ಮೆಯ ಕರುವನ್ನು ಬದುಕಿಸಿದ್ದು



೬೦. ಎರ್ರಿಸ್ವಾಮಿಗಳು ಶ್ರೀ ಮಠಕ್ಕೆ ಉತ್ಸವದೊಂದಿಗೆ ಬರುತ್ತಿರುವುದು

ಹೆಂಗಳೆಯರು ಕೊಡದಿಂದ ತಾತನವರ ಕಾಲುಗಳನ್ನು ತೊಳೆಯುತ್ತಿದ್ದಾರೆ. ಇನ್ನೂ ಕೆಲವರು ಆರತಿ ತರುತ್ತಿದ್ದಾರೆ. ಕೆಲಜನರು ವಾದ್ಯಗಳನ್ನು ಮೊಳಗಿಸುತ್ತಿದ್ದಾರೆ.

ಚೆಟ್ಟಿಯವರು ಎಲ್ಲರ ಮುಖಗಳಲ್ಲಿ ಆನಂದ. ಸಂತೋಷ ಭಾವನೆಯು ತುಂಬಿದಂತೆ ಚಿತ್ರಿಸಿದ್ದಾರೆ. ಹೆಂಗಳೆಯರ ಮುಖದಲ್ಲಿ ಭಕ್ತಿ: ಜನರು ಮೈಮರೆತು ವಾದ್ಯಗಳನ್ನು ನುಡಿಸುತ್ತಿದ್ದಾರೆ. ಆಗಿನ ಕಾಲದ ಪೊಲೀಸರ ಸಮವಸ್ತ್ರ ಹಾಗೂ ಅವರ ಠೀವಿಯನ್ನು ಅಭಿವ್ಯಕ್ತಿಸಿದ್ದಾರೆ. ಚಿತ್ರದ ತುಂಬೆಲ್ಲ ಆಕೃತಿಗಳನ್ನು ಉತ್ತಮ ರೀತಿಯಲ್ಲಿ ಸಂಯೋಜಿಸಿದ್ದಾರೆ. ಅದೇ ಸಾತ್ವಿಕ ಕಳೆಯ ತಾತನ ಮುಖ. ಹೀಗೆ ಒಟ್ಟಾರೆ ಚಿತ್ರದಲ್ಲಿ ಎಲ್ಲ ಭಾವನೆಗಳ ಮಿಲನದಿಂದಾಗಿ ಆ ಚಿತ್ರ ಒಂದು ಭಾವನಾ ಪ್ರಧಾನ ಚಿತ್ರವಾಗಿದೆ ಎನ್ನಬಹುದು.

ಈ ಎಲ್ಲ ಚಿತ್ರಗಳಲ್ಲಿ ಸೌಮ್ಯವರ್ಣಗಳನ್ನು ಬಳಸಿದ್ದಾರಲ್ಲದೆ. ಇಲ್ಲಿಯ ಚಿತ್ರಗಳಲ್ಲಿಯೂ ಸಹಿತ ನೀಲವರ್ಣವನ್ನು ಹೆಚ್ಚಾಗಿ ಬಳಸಿದ್ದಾರೆ. ಫಲಹಾರೇಶ್ವರರ ಚಿತ್ರಗಳ ಹಿನ್ನೆಲೆಯಂತೆಯೆ ಇಲ್ಲಿಯೂ ಆ ಕಾಗದದ ವರ್ಣವನ್ನೇ ಬಳಸಿಕೊಂಡಿದ್ದಾರೆ. ಈ ಚಿತ್ರಗಳಲ್ಲಿ ವಾಸ್ತುವನ್ನು ಹೆಚ್ಚಾಗಿ ದುಡಿಸಿಕೊಂಡಿದ್ದಾರೆ. ದೇವಾಲಯದ ಒಳಾಂಗಣ. ಹಾಳು ಬಿದ್ದ ದೇವಾಲಯದ ವಸ್ತು. ಹಾಲು ಮಾರುವವಳ ಬಡತನದ ಗುಡಿಸಲು ಹೀಗೆ ಸಂದರ್ಭಕ್ಕನುಸಾರವಾಗಿ ವಸ್ತುವನ್ನು ದುಡಿಸಿಕೊಂಡಿದ್ದಾರೆ. ಈ ಚಿತ್ರವನ್ನು ಗ್ರಂಥದ ೪೩ ನೇ ಪುಟದಲ್ಲಿ ನೋಡಬಹುದು.

ix) ಶ್ರೀ ನರಗುಂದ ವಿರಕ್ತಮಠದ ಶ್ರೀ ಚೆನ್ನಬಸವ – ಶಿವಯೋಗೀಶ್ವರ ಲೀಲೆ (ಪುರಾಣ) - ಪಂ. ವಾಯ್. ನಾಗೇಶಶಾಸ್ತ್ರಿಗಳವರು

ಇದರಲ್ಲಿ ಒಟ್ಟು ೯ ಚಿತ್ರಗಳಿವೆ. ಇವುಗಳ ಮೂಲ ಕೃತಿಗಳ ನರಗುಂದದ ವಿರಕ್ತಮಠದಲ್ಲಿ ಈಗಲೂ ನೋಡಲು ಲಭ್ಯ. ಆದರೆ ಅಲ್ಲಿ ೮ ಚಿತ್ರಗಳು ಮಾತ್ರ ಇವೆ. ಇನ್ನೊಂದು ಚಿತ್ರ ಏನಾದುದೆಂಬುದರ ಬಗ್ಗೆ ಮಾಹಿತಿ ಲಭ್ಯವಿಲ್ಲ. ಈ ಎಲ್ಲ ಚಿತ್ರಗಳ ಅಳತೆ ೩೦" x ೨೨".

ಚಿತ್ರ ೬೧ : ಶ್ರೀ ಚೆನ್ನಬಸವ ಸ್ವಾಮಿಗಳವರು ವಿರಕ್ತಮಠ. ನರಗುಂದ [೫೯]

ಚಿತ್ರದಲ್ಲಿ ಚೆನ್ನಬಸವಸ್ವಾಮಿಗಳು ಆಶೀರ್ವದಿಸುತ್ತ. ಗಿಡದ ಕೆಳಗೆ ನಿಂತಿದ್ದಾರೆ. ಮುಂದೆ ನೀರು ಹರಿದಿದೆ. ನವಿಲುಗಳು ನಲಿವಿಂದ ಆಡುತ್ತಿವೆ. ಹಿನ್ನೆಲೆಯಲ್ಲಿ ಕಾಡಿನ ಸಿರಿ. ಚೆಟ್ಟಿಯವರು ಇಲ್ಲಿ ದೃಶ್ಯಾಂತರವನ್ನು ತೋರಿಸಿದ್ದಾರೆ. ಯುವಕರಾದ ಚೆನ್ನಬಸವ ಸ್ವಾಮಿಗಳ ಮುಖದಲ್ಲಿ ಅತ್ಯಂತ ತೇಜಸ್ಸು ತುಂಬಿದೆ. ಮುಖದಲ್ಲಿ ಶಾಂತಿಯ ಸಾತ್ವಿಕ ಕಳೆ. ಜಗದುದ್ಧಾರ ಮಾಡುವಂಥ ಸಾಮರ್ಥ್ಯ ಕಂಡುಬರುತ್ತದೆ. ಅವರು ಧರಿಸಿದ ಕಾವಿಯ ವೇಷ ಅವರ ಸಾತ್ವಿಕ ಗುಣವನ್ನು ಸಾರುವಂತಿದೆ. ಈ ಚಿತ್ರವು ಪುರಾಣ ಗ್ರಂಥದ ೩೭ ನೇ ಪುಟದಲ್ಲಿದೆ.

---

೫೯. ಪಂ. ವಾಯ್. ನಾಗೇಶ ಶಾಸ್ತ್ರಿಗಳವರು : ಶ್ರೀ ನರಗುಂದ ವಿರಕ್ತಮಠದ ಶ್ರೀ ಚೆನ್ನಬಸವ ಶಿವಯೋಗೀಶ್ವರ ಲೀಲೆ (ಪುರಾಣ) : ಪುಟ ೩೭

ಚಿತ್ರ ೬೨ : ಶ್ರೀ ಚೆನ್ನಬಸವಸ್ವಾಮಿಗಳು ನರಗುಂದ ವಿರಕ್ತಮಠದ ಶ್ರೀ ನಿರಂಜನ ಸ್ವಾಮಿಗಳವರ ಸನ್ನಿಧಿಗೆ ದಯಮಾಡಿಸಿದ್ದು [೬೦]

ಈ ಚಿತ್ರದಲ್ಲಿ ಶಿವಪ್ರೇರಣೆಯಂತೆ ಶ್ರೀ ಚೆನ್ನಬಸವನು ನಿರಂಜನ ಸ್ವಾಮಿಗಳಿಗೆ ನೀನೆ ಸಾರಸರ್ವಸ್ವ ಎನ್ನುವ ಭಾವದಲ್ಲಿ ಕೈಮುಗಿದು ನಿಂತಿದ್ದಾನೆ. ನಿರಂಜನಸ್ವಾಮಿಗಳ ದೃಷ್ಟಿ ಆ ಬಾಲಕನ ಮೇಲೆಯೇ ಇದೆ. ಸುತ್ತೆಲ್ಲ ಊರಿನ ಗಣ್ಯರು ಹುಡುಗ ಯಾರಿರಬಹುದೆಂದು ಯೋಚಿಸುತ್ತಿರುವಂತಿದೆ.

ಚಿಟ್ಟಿಯವರು ಇಲ್ಲಿ ಅಂದಿನ ಮಠಗಳ ಆಚರಣೆ ಎಲ್ಲವನ್ನೂ ತಮ್ಮ ಚಿತ್ರದಲ್ಲಿ ತಂದಿದ್ದಾರೆ. ಮಠದ ಒಳನೋಟದಲ್ಲಿ ತೊಲೆಗಳಿಂದ ಕೂಡಿದ ಛಾವಣಿ. ಬಾಗಿಲುಗಳಿಗೆ ದಾರದಿಂದ ಹೆಣೆದು ಮಾಡಿದ ತೋರಣಗಳನ್ನು ಹಾಕಿದ್ದಾರೆ. ಕಂಬಗಳಿಗೆ ಅಲ್ಲಲ್ಲಿ ಶರಣರ ಚಿತ್ರಗಳನ್ನು ತೂಗುಬಿಟ್ಟಿದ್ದಾರೆ. ಅಲ್ಲದೆ ಮೇಲ್ಛಾವಣಿಗೆ ಗಾಜಿನ ಗುಳಾಪುಗಳಿಂದ ಅಲಂಕರಿಸಿದ್ದಾರೆ. ಇಲ್ಲಿ ನೆರೆದ ಎಲ್ಲ ಭಕ್ತರು ತಲೆಗೆ ರುಮಾಲನ್ನು ಸುತ್ತಿಕೊಂಡಿದ್ದಾರೆ. ನೊಸಲಿಗೆ ವಿಭೂತಿಯಿದೆ. ತಮ್ಮದೇ ಆದ ಶೈಲಿಯ ಉದ್ದನೆಯ ಆಕೃತಿಗಳು ಮೀಸೆಯನ್ನು ಮಾತ್ರ ಎಲ್ಲರಿಗೂ ದಪ್ಪನಾಗಿ ಚಿತ್ರಿಸಿದ್ದಾರೆ. (ಇದರಲ್ಲಿ ಅವರ ಆಸಕ್ತಿ ಎದ್ದು ಕಾಣುತ್ತದೆ). ಬಾಲಕನ ತೇಜಸ್ಸಿನಿಂದ ಕೂಡಿದ ಮುಖ. ಈತನೇ ಮಠಕ್ಕೆ ಮುಂದೆ ಪೀಠಕ್ಕಾಗುವನೆಂಬ ಆಲೋಚನೆಯಲ್ಲಿರುವ ನಿರಂಜನ ಸ್ವಾಮಿಗಳು. ಆ ಹುಡುಗ ಯಾರಿರಬಹುದೆಂಬ ಪ್ರಶ್ನಾರ್ಥಕ ಭಾವನೆ ನೆರೆದವರ ಮುಖದಲ್ಲಿ ಕಂಡುಬರುತ್ತದೆ. ಭಕ್ತಿಯ ವಾತಾವರಣವನ್ನು ಮೂಡಿಸುವ ವರ್ಣಸಂಯೋಜನೆ ಇದೆ. ಈ ಚಿತ್ರವನ್ನು ಗ್ರಂಥದ ೨೯ ನೇ ಪುಟದಲ್ಲಿ ನೋಡಬಹುದು.

ಚಿತ್ರ ೬೩ : ಶ್ರೀ ನಿರಂಜನಸ್ವಾಮಿಗಳಿಂದ ಶ್ರೀ ಚೆನ್ನಬಸವ ಸ್ವಾಮಿಗಳವರಿಗೆ ಅಧಿಕಾರ ದೊರೆತದ್ದು.

" ಹುಬ್ಬಳ್ಳಿಯ ರುದ್ರಾಕ್ಷಿಮಠದ ಸಂಗನಬಸವ ಸದ್ಗುರುಗಳ ದಿವ್ಯ ಸನ್ನಿಧಾನದಲ್ಲಿ ಚೆನ್ನಬಸವ ಸ್ವಾಮಿಗಳಿಗೆ ಚರಪಟ್ಟಾಧಿಕಾರವನ್ನು ಕಟ್ಟಲಾಯಿತು. " [೬೧]

ಚಿತ್ರದಲ್ಲಿ ಊರಿನ ಪ್ರಮುಖ ಗಣ್ಯವ್ಯಕ್ತಿಗಳೆಲ್ಲ ನೆರೆದಿದ್ದಾರೆ. ಚೆನ್ನಬಸವ ಸ್ವಾಮಿಗಳು ಪೀಠಾರೋಹಿಗಳಾಗಿ ತಮ್ಮ ಅಧಿಕಾರ ಗ್ರಹಣವನ್ನು ಮಾಡುತ್ತಿದ್ದಾರೆ. ಜನರೆಲ್ಲ ಹೂಮಾಲೆ. ತುರಾಯಿ ಹಿಡಿದುಕೊಂಡು ನಿಂತಿದ್ದಾರೆ. ಮಕ್ಕಳು ಮೊದಲಾಗಿ ಈ ಸಂಭ್ರಮದಲ್ಲಿ ಪಾಲ್ಗೊಂಡಿದ್ದಾರೆ. ಎಲ್ಲರ ಮುಖಗಳಲ್ಲಿ ಉತ್ಸಾಹದ ಭಾವನೆ. ಚನ್ನಬಸವನ ಮುಖದಲ್ಲೂ ಗುರುವಿನ ಆಣತಿಯನ್ನು ಶಿರಸಾ ವಹಿಸಿ ಪಾಲಿಸುತ್ತಿರುವ ಲವಲವಿಕೆ ಇದೆ. ಈ ಚಿತ್ರ ಗ್ರಂಥದ ೪೯ ನೇ ಪುಟದಲ್ಲಿ ಇದೆ. ಸೌಮ್ಯ ಬಣ್ಣಗಳ ಸಾಮರಸ್ಯವಿದೆ.

---

೬೦. ಪಂ. ವಾಯ್. ನಾಗೇಶ ಶಾಸ್ತ್ರಿಗಳವರು : ಶ್ರೀ ನರಗುಂದ ವಿರಕ್ತಮಠದ ಶ್ರೀ ಚೆನ್ನಬಸವ ಶಿವಯೋಗೀಶ್ವರ ಲೀಲೆ (ಪುರಾಣ) : ಪುಟ ೨೯

೬೧. ಪಂ. ವಾಯ್. ನಾಗೇಶ ಶಾಸ್ತ್ರಿಗಳವರು : ಶ್ರೀ ನರಗುಂದ ವಿರಕ್ತಮಠದ ಶ್ರೀ ಚೆನ್ನಬಸವ ಶಿವಯೋಗೀಶ್ವರ ಲೀಲೆ (ಪುರಾಣ) : ಪುಟ ೪೮

ಚಿತ್ರ ೬೪ : ವಿರಕ್ತಮಠದ ಬಾವಿಯಲ್ಲಿ ಬಿದ್ದು ಮೃತಪಟ್ಟ ನಂದೀ ಬಸಮ್ಮನವರಿಗೆ ಶ್ರೀ ಚೆನ್ನಬಸವ ಸ್ವಾಮಿಗಳವರು ಪ್ರಾಣದಾನ ಮಾಡಿದ್ದು. [೬೨]

ಚಿತ್ರದಲ್ಲಿ ಮಠದ ಭಾವಿಯಲ್ಲಿ ನೀರು ತರಲು ಬಂದ ಹೆಣ್ಣುಮಗಳು ಕಾಲುಜಾರಿ ಅಸುನೀಗಿದ್ದಾಳೆ. ಆಕೆಯನ್ನು ಮಠದಲ್ಲಿ ತಂದುಹಾಕಿದ್ದಾರೆ. ಸುತ್ತಲೂ ಜನ ಗೋಳಿಡುತ್ತಿದ್ದಾರೆ. ಕೆಲವರು ಆಕೆಯನ್ನು ಬದುಕಿಸಿರೆಂದು ಕೈಮುಗಿದು ಸ್ವಾಮಿಗಳನ್ನು ಬೇಡಿಕೊಳ್ಳುತ್ತಿದ್ದಾರೆ. ಒಬ್ಬನ ಕೈಯಲ್ಲಿ ಸ್ವಾಮಿಗಳು ದಯಪಾಲಿಸಿದ ಭಸ್ಮವಿದೆ. ಸ್ವಾಮಿಗಳು ಆಶೀರ್ವದಿಸಿ ಪ್ರಾಣದಾನ ನೀಡುತ್ತಿದ್ದಾರೆ.

ಚಿತ್ರದ ಬಲಗಡೆಯ ಹೆಣ್ಣುಮಗಳೊಬ್ಬಳ ಹಿಂದೆ ನಿಂತ ಮಗು ಅದಕ್ಕೆ ಕಟ್ಟಿದ ಕುಲಾಯಿ ಹೆಣ್ಣುಮಕ್ಕಳು ಉಟ್ಟಂತಹ ಇಳಕಲ್ ಸೀರೆ. ಕುಪ್ಪಸ. ಇದನ್ನು ಚಿತ್ರಿಸುವದರೊಂದಿಗೆ ಚೆಟ್ಟಿಯವರು ಆ ಕಾಲದ ಧಾರವಾಡ ಜಿಲ್ಲೆಯ ಹಳ್ಳಿಗಳ ಸಂಪೂರ್ಣ ಚಿತ್ರಣವನ್ನು ಸೆರೆಹಿಡಿದಿದ್ದಾರೆ. ವಿಭೂತಿಯನ್ನು ಹಿಡಿದಂಥ ಭಕ್ತನು ಭಸ್ಮವನ್ನು ಹಚ್ಚಲೇ ? ಎಂದು ಕೇಳುವಂತಿದೆ ಆತನ ಮುಖಭಾವ. ದಯಮಾಡಿ ಆಕೆಯನ್ನು ಬದುಕಿಸಿರಿ ಎಂಬ ಭಾವನೆ ಕೆಲವರಲ್ಲಿ ಬಾವಿಯ ಸುತ್ತಲೂ ಬಂದ ಆಕೆಯ ಓರಗೆಯವರ ಮುಖದಲ್ಲಿ ಗಾಬರಿ - ಭಯ ಇವೆಲ್ಲವುಗಳ ಮಧ್ಯ ಶಾಂತ ಮೂರ್ತಿಯಂತೆ ಚೆನ್ನಬಸವ ಸ್ವಾಮಿಗಳು ತಮ್ಮ ಗುರುವಿನ ಕೃಪೆಯಿಂದ ಆಕೆಗೆ ಪ್ರಾಣದಾನ ಮಾಡುತ್ತಿರುವನೆಂಬ ನಿರಹಂಕಾರದ ಭಾವನೆ ಇವೆ. ಈ ಚಿತ್ರವು ಗ್ರಂಥದ ೬೫ ನೇ ಪುಟದಲ್ಲಿದೆ. (ಅಧ್ಯಾಯ ಏಳರಲ್ಲಿಯ ೪೧ ನೇ ಚಿತ್ರವನ್ನು ನೋಡಿರಿ)

ಚಿತ್ರ ೬೫ : ಶ್ರೀ ಚೆನ್ನಬಸವಸ್ವಾಮಿಗಳು. ರುದ್ರಸ್ವಾಮಿಗಳು. ನಾಗಲಿಂಗಪ್ಪನವರು. ಬನ್ನಟ್ಟಿ ದಾರಿಯಲ್ಲಿ ಕೂತಾಗ ಲೀಲೆಯಿಂದ ವಯೋವೃದ್ಧಳಿಗೆ ಬಸುರಾದಂತೆ ತೋರಿಸಿ ನಿವಾರಣೆಯನ್ನು ಮಾಡಿದ್ದು. [೬೩]

ಚಿತ್ರದಲ್ಲಿ ಮೂವರು ಸ್ವಾಮಿಗಳು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆ. " ಅಲ್ಲಿ ಒಬ್ಬ ಮುದುಕಿಯು ಕುಳ್ಳನ್ನು ಆರಿಸುತ್ತಿದ್ದಳು. ಸ್ವಾಮಿಗಳಿಗೆ ನಮಸ್ಕರಿಸದೇ. ಅವಳು ತನ್ನ ಕೆಲಸದಲ್ಲಿ ತೊಡಗಿದ್ದಳು. ಇದನ್ನು ಕಂಡು ನಾಗಲಿಂಗಪ್ಪನವರು ಸ್ವಾಮಿಗಳು ಬೇಡವೆಂದರೂ. ಅವಳ ಗರ್ಭ ಬೆಳೆಯುವಂತೆ ಮಾಡಿದ್ದು " [೬೪] ದೃಶ್ಯ.

ಮುದುಕಿ ಗಾಬರಿಯಾಗಿ ಸ್ವಾಮಿಗಳ ಹತ್ತಿರ ಬಂದಿದ್ದಾಳೆ. ಸುತ್ತಲಿದ್ದ ಜನರೆಲ್ಲ ಆಶ್ಚರ್ಯಪಟ್ಟಿದ್ದಾರೆ. ಸ್ವಾಮಿಗಳು ದಯಪಾಲಿಸಿದ ವಿಭೂತಿಯನ್ನು ಒಬ್ಬನು ಕೈಯಲ್ಲಿ ಹಿಡಿದುಕೊಂಡಿದ್ದಾನೆ. ಒಬ್ಬಳು ತಲೆಯ ಮೇಲೆ ಕುಳ್ಳಿನ ಬುಟ್ಟಿ ಹೊತ್ತುಕೊಂಡಿದ್ದಾಳೆ.

---

೬೨. ಪಂ. ವಾಯ್. ನಾಗೇಶ ಶಾಸ್ತ್ರಿಗಳವರು : ಶ್ರೀ ನರಗುಂದ ವಿರಕ್ತಮಠದ ಶ್ರೀ ಚೆನ್ನಬಸವ ಶಿವಯೋಗೀಶ್ವರ ಲೀಲೆ (ಪುರಾಣ) : ಪುಟ ೬೫

೬೩. ಪಂ. ವಾಯ್. ನಾಗೇಶ ಶಾಸ್ತ್ರಿಗಳವರು : ಶ್ರೀ ನರಗುಂದ ವಿರಕ್ತಮಠದ ಶ್ರೀ ಚೆನ್ನಬಸವ ಶಿವಯೋಗೀಶ್ವರ ಲೀಲೆ (ಪುರಾಣ) : ಪುಟ ೧೩೭

೬೪. ಪಂ. ವಾಯ್. ನಾಗೇಶ ಶಾಸ್ತ್ರಿಗಳವರು : ಶ್ರೀ ನರಗುಂದ ವಿರಕ್ತಮಠದ ಶ್ರೀ ಚೆನ್ನಬಸವ ಶಿವಯೋಗೀಶ್ವರ ಲೀಲೆ (ಪುರಾಣ) : ಪುಟ ೧೩೭

ಸಂದರ್ಭಕ್ಕೆ ತಕ್ಕಂತೆ ಮುದುಕಿಯ ಹೊಟ್ಟೆ ಮುಂದೆ ಬಂದು ಇದೇನೆಂದು ಗಾಬರಿಯಿಂದ ಸ್ವಾಮಿಗಳಲ್ಲಿ ತನ್ನ ತಪ್ಪಿನ ಅರಿವನ್ನು ಮಾಡಿಕೊಳ್ಳುವ ಭಾವ. ಅಲ್ಲಿಯೇ ಇರುವ ಮನುಷ್ಯ ತವಕದಿಂದ ಆಕೆಗೆ ಭಸ್ಮ ಹಚ್ಚುತ್ತಿದ್ದಾನೆ. ಮಕ್ಕಳು ಮೊದಲಾಗಿ ಗಾಬರಿಯಿಂದ ನೋಡತ್ತಿದ್ದಾರೆ. ಸ್ವಾಮಿಗಳ ಮುಖ ಕಿರುನಗೆ ಹಾಗೂ ಶಾಂತತೆಯಿಂದ ಕೂಡಿದೆ. ದೃಶ್ಯಾಂತರವಿದೆ. ಮರ ಬಳ್ಳಿಗಳನ್ನು ನೈಜತೆಯಿಂದ ಚಿತ್ರಿಸಿದ್ದಾರೆ. ಈ ಚಿತ್ರವು ಗ್ರಂಥದ ೧೩೭ ನೇ ಪುಟದಲ್ಲಿ ಲಭ್ಯವಿದೆ.

ಚಿತ್ರ ೬೬ : ಶ್ರೀ ಚೆನ್ನಬಸವಸ್ವಾಮಿಗಳವರು ಹುಬ್ಬಳ್ಳಿ ದಾರಿಯಲ್ಲಿ ಮೂಕನಿಗೆ ವಾಣಿಯನ್ನು ದಯಪಾಲಿಸಿದ್ದು. [೬೫]

ಈ ಚಿತ್ರದಲ್ಲಿ ಮೂಗನು ತನಗೆ ಮಾತು ಬರುವದಿಲ್ಲವೆಂದು ಹೇಳುತ್ತಿದ್ದಾನೆ. ಅದಕ್ಕೆ ಸ್ವಾಮಿಗಳು ತಮ್ಮ ಶಿಷ್ಯರ ಕೈಯಲ್ಲಿ ವಿಭೂತಿ ಕೊಟ್ಟು ಆತನಿಗೆ ತಿನಿಸಲು ಹೇಳುತ್ತಿದ್ದಾರೆ. ಅದರಂತೆ ಆ ವ್ಯಕ್ತಿ ಕೈಯಲ್ಲಿ ವಿಭೂತಿ ಹಿಡಿದಿದ್ದಾನೆ. ಮೂಕನ ಹಿಂದೆ ನಿಂತ ಯುವಕ ಗಾಬರಿಯಾಗಿದ್ದಾನೆ. ಚಿತ್ರದ ಹಿನ್ನೆಲೆಯಲ್ಲಿ ನಿಸರ್ಗ ಮನ್ನೆಲೆಯಲ್ಲಿ ನಡೆದುಕೊಂಡು ಹೋಗುವ ಕಾಲ್ದಾರಿ. ಸ್ವಾಮಿಗಳ ಮುಖ ಕರುಣಾಭಾವದಿಂದ ಕೂಡಿದೆ. ಮೂಗನು ಆಶ್ಚರ್ಯನಾಗಿ ತನಗೆ ಮಾತು ಬರುತ್ತದೆಯೇ ಎಂಬ ಸಂತೋಷವಿದ್ದರೆ ಹಿಂದೆ ನಿಂತ ಯುವಕನು ಈ ಪವಾಡವನ್ನು ನೋಡಿ ಹೌಹಾರಿ ಬಾಯಿಮೇಲೆ ಕೈಯಿಟ್ಟುಕೊಂಡಿದ್ದಂತೆ ಪ್ರಸಂಗದ ನಿರೂಪಣೆಯನ್ನು ಚೆನ್ನಾಗಿ ಮಾಡಿದ್ದಾರೆ. ಸೌಮ್ಯ ಹಾಗೂ ಉಜ್ವಲ ವರ್ಣಗಳ ಮೇಳದ ಸಂಯೋಜನೆ. ಆಗಸದ ಸಹಜವಾದ ತಿಳಿ ಮೋಡಗಳು. ಹಾಗೂ ಚಿತ್ರದಲ್ಲಿ ದೃಶ್ಯಾಂತರವಿದೆ. ಈ ಚಿತ್ರ ಗ್ರಂಥದ ೧೬೧ ನೇ ಪುಟದಲ್ಲಿ ನೋಡಬಹುದು.

ಚಿತ್ರ ೬೭ : ಶ್ರೀ ಚೆನ್ನಬಸವಸ್ವಾಮಿಗಳವರು ಶಿವಾನುಭವ ಪ್ರವಚನವನ್ನು ವಿರಕ್ತಮಠದಲ್ಲಿ ನಡೆಸಿದ್ದು [೬೬]

ಈ ಚಿತ್ರದಲ್ಲಿ ಚೆನ್ನಬಸವಸ್ವಾಮಿಗಳು ಪೀಠದ ಮೇಲೆ ಕುಳಿತು ಭಕ್ತರಿಗೆ ಶಿವಾನುಭವವನ್ನು ಬೋಧಿಸುತ್ತಿದ್ದಾರೆ. ಊರಿನ ಯಜಮಾನರು ಪುರುಷರು ಮೊದಲುಗೊಂಡು ಶಿವಾನುಭವವನ್ನು ಅತ್ಯಂತ ಭಕ್ತಿಯಿಂದ ಕೈಮುಗಿದು ಆಲಿಸುತ್ತಿದ್ದಾರೆ. ಸ್ವಾಮಿಯವರ ಮುಂದೆ ಹಣ್ಣು. ಕಾಯಿ ಹೂವು ಎಲ್ಲವನ್ನೂ ಜನರು ತಂದಿರಿಸಿದ್ದಾರೆ.

ಎಲ್ಲರ ಮುಖದಲ್ಲೂ ಶಿವಾನುಭವದ ಆನಂದದ ಕಳೆ ತೃಪ್ತಿಭಾವ ಸ್ವಾಮಿಗಳ ಹೇಳಿಕೆಗೆ ತಲೆಬಾಗುವಂತೆ ಕುಳಿತಿದ್ದಾರೆ. ಕಟ್ಟೆಯ ಮೇಲೆ. ಕೆಳಗೆ ಕೂಡ ಜನರನ್ನು ಕೂಡಿಸಿದಂತೆ ಚಿತ್ರಿಸಿದ್ದಾರೆ. ಇಷ್ಟೊಂದು ಮಾನವಾಕೃತಿಗಳಿದ್ದರೂ ಸಂಯೋಜನೆ ಅತ್ಯಂತ ಸಮತೋಲನವಾಗಿದೆ. ಭಕ್ತಿರಸದಿಂದ ಈ ಚಿತ್ರ ಕೂಡಿದೆ. ಈ ಚಿತ್ರವನ್ನು ಗ್ರಂಥದ ೧೯೩ ನೇ ಪುಟದಲ್ಲಿ ನೋಡಬಹುದು.

---

೬೫. ಪಂ. ವಾಯ್. ನಾಗೇಶ ಶಾಸ್ತ್ರಿಗಳವರು : ಶ್ರೀ ನರಗುಂದ ವಿರಕ್ತಮಠದ ಶ್ರೀ ಚೆನ್ನಬಸವ ಶಿವಯೋಗೀಶ್ವರ ಲೀಲೆ (ಪುರಾಣ) : ಪುಟ ೧೬೧

೬೬. ಪಂ. ವಾಯ್. ನಾಗೇಶ ಶಾಸ್ತ್ರಿಗಳವರು : ಶ್ರೀ ನರಗುಂದ ವಿರಕ್ತಮಠದ ಶ್ರೀ ಚೆನ್ನಬಸವ ಶಿವಯೋಗೀಶ್ವರ ಲೀಲೆ (ಪುರಾಣ) : ಪುಟ ೧೯೩

ಚಿತ್ರ ೬೮ : ಶ್ರೀ ಚೆನ್ನಬಸವಸ್ವಾಮಿಗಳವರು ನಂದೀ ಬಸಮ್ಮನವರಿಗೆ ಪಾದುಕೆಗಳನ್ನು ಮತ್ತು ಬೆತ್ತವನ್ನು ತಮ್ಮ ಅಂತ್ಯಕಾಲಕ್ಕೆ ಆಶೀರ್ವಾದ ಮಾಡಿದ್ದು.[೬೭]

ಈ ಚಿತ್ರದಲ್ಲಿ ನಂದೀ ಬಸಮ್ಮನವರಿಗೆ ಬೆತ್ತ ಹಾಗೂ ಅವುಗೆ (ಪಾದುಕೆಗಳು) ಗಳನ್ನು ಆಶೀರ್ವಾದ ಮಾಡುತ್ತಿದ್ದಾರೆ. ಅಷ್ಟೇ ಭಕ್ತಿಪೂರ್ಣವಾಗಿ ಅವರು ಸ್ವೀಕರಿಸುತ್ತಿದ್ದರೆ ಬಸಮ್ಮನವರ ಹಿಂದೆ ಒಬ್ಬ ಹೆಣ್ಣು ಮಗಳು ನಮಸ್ಕರಿಸುತ್ತಾ ನಿಂತಿದ್ದಾಳೆ. ಸ್ವಾಮಿಗಳ ಇಕ್ಕೆಲಗಳಲ್ಲಿ ಕುಳಿತ ಜನರು ಗಾಬರಿಯಿಂದ ಮಾತನಾಡಿಕೊಳ್ಳುತ್ತಿದ್ದಾರೆ. ಎದುರುಗಡೆ ಒಬ್ಬಳು ಆರತಿಯನ್ನು ಹಿಡಿದು ನಿಂತಿದ್ದಾಳೆ.

ನಾನು ಯಾವತ್ತು ನಿಮ್ಮಲ್ಲಿಯೇ ಇರುತ್ತೇನೆಂಬ ಭಾವನೆಯಿಂದ ಆ ವಸ್ತುಗಳನ್ನು ನೀಡುತ್ತಿದ್ದಾರೆ. ಆಶೀರ್ವಾದ ಪಡೆದ ಅವರೇ ಧನ್ಯ ಎನ್ನುವಂಥ ಭಾವನೆಯಿಂದ ಜನ ಮಾತನಾಡಿಕೊಳ್ಳುವಂತಿದೆ. ಕಂಬದ ಮಗ್ಗುಲಿಗೆ ಕಟ್ಟಿದ ಪರದೆಯ ಗೊಂಡೆ, ಬಾಗಿಲುತೋರಣ. ನೆಲಹಾಸಿಗೆಯ ಅಲಂಕಾರ ನಕ್ಷೆಗಳು. ಸ್ವಾಮಿಗಳ ಪಾದದಡಿಯಲ್ಲಿ ಹೂವಿನ ಹಾಸು ಪ್ರತಿಯೊಂದನ್ನು ವಿವರವಾಗಿ ಮತ್ತು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ನಾವೂ ಆ ಸಮಾರಂಭದಲ್ಲಿ ಪಾಲ್ಗೊಂಡಿದ್ದೇವೆಯೋ ಎನ್ನುವಷ್ಟು ಚಿತ್ರ ಹತ್ತಿರವಿದೆ. ಆಗಿನ ಕಾಲದ ಹೆಂಗಸರು ಹಾಕುವ ವಂಕಿ. ನಾಗಮುರಿಗೆ ಆಭರಣಗಳನ್ನು ಚಿತ್ರಿಸಿದ್ದಾರೆ. ಅಲ್ಲಲ್ಲಿ ಅವಶ್ಯವಿದ್ದಲ್ಲಿ ನವಿರಾದ ಛಾಯಾಂಕಣವಿದೆ. ಈ ಚಿತ್ರವು ಗ್ರಂಥದ ೨೫೩ ನೇ ಪುಟದಲ್ಲಿದೆ.

ಚಿತ್ರ ೬೯ : ಶ್ರೀ ಚೆನ್ನಬಸವಸ್ವಾಮಿಗಳವರು ಲಿಂಗಪೂಜೆಗೆ ಕುಳಿತಾಗ ನಾಗರಹಾವು ನೆರಳು ಮಾಡಿದ್ದು.[೬೮]

ಚಿತ್ರದಲ್ಲಿ ಶ್ರೀ ಚೆನ್ನಬಸವಸ್ವಾಮಿಗಳು ತಮ್ಮ ಕೊನೆಯ ದಿನಗಳನ್ನು ಸತತ ಲಿಂಗ ಪೂಜೆಯಲ್ಲೇ ಕಳೆಯುತ್ತಿರುವಂತೆ ಲಿಂಗಪೂಜಾ ನಿರತರಾಗಿದ್ದಾರೆ. ಅವರಿಗೆ ಬಿಸಿಲು ತಗಲಬಾರದೆಂಬಂತೆ ದೊಡ್ಡ ನಾಗರ ಹಾವು ಅವರ ತಲೆಯ ಹಿಂದೆ ನಿಂತು. ನೆರಳು ಮಾಡಿದೆ.

ಚಿತ್ರದಲ್ಲಿ ದೃಶ್ಯಾಂತರವಿದೆ. ದೂರದಲ್ಲಿ ಬೆಟ್ಟಗಳು. ಸಮೀಪದಲ್ಲಿ ಗಿಡಗಳನ್ನು ವಿವರಪೂರ್ಣವಾಗಿ ಚಿತ್ರಿಸಿದ್ದಾರೆ. ಪಕ್ಕದಲ್ಲೇ ನೀರು ಹರಿಯುತ್ತಿದೆ. ನವಿಲು ನಲಿಯುತ್ತಿದೆ. ಜಿಂಕೆ. ಹುಲಿಗಳೆಲ್ಲ ಸ್ನೇಹಮಯವಾಗಿ ಒಂದೇ ಕಡೆ ಓಡಾಡುತ್ತಿವೆ. ಚಿಟ್ಟಿಯವರು ಸೌಮ್ಯವರ್ಣಗಳಿಂದ ಪ್ರಶಾಂತತೆಯ ಪರಿಣಾಮವನ್ನು ಬೀರಿದ್ದಾರೆ. ಲಿಂಗಸಾಮರಸ್ಯದ ಅನನ್ಯ ಭಾವನೆ ಸ್ವಾಮಿಗಳ ಮುಖದಲ್ಲಿ ಕಾಣುತ್ತಿದೆ. ಹಾರಾಡುತ್ತಿರುವ ಪಕ್ಷಿಗಳಿವೆ ಹಾವನ್ನು ಕಂಡ ನೋಡುಗನಿಗೆ ಭಯವಾಗದೆ ಅಲ್ಲಿ ಭಕ್ತಿ ಮೂಡುವಂತೆ ರಚಿಸಿದ್ದಾರೆ. ಈ ಚಿತ್ರ ಗ್ರಂಥದ ೨೬೧ ನೇ ಪುಟದಲ್ಲಿ ಲಭ್ಯವಿದೆ.

ಈ ಎಲ್ಲಾ ಚಿತ್ರಗಳಲ್ಲಿ ನಿಸರ್ಗ ಹಾಗೂ ವಾಸ್ತುವನ್ನು ಸರಿಯಾಗಿ ದುಡಿಸಿಕೊಂಡಿದ್ದಾರೆ. ಆ ಕಾಲದ ವಾಸ್ತುವಿನ ರೀತಿ ಹಾಗೂ ಅವರ ಅಲಂಕರಣೆಯನ್ನು ಅತ್ಯಂತ ಸೂಕ್ಷ್ಮವಾಗಿ ರಚಿಸಿದ್ದಾರಲ್ಲದೆ ಮಾನವಾಕಾರಗಳು ನಿಜವಾಗಿಯೂ

೬೭. ಪಂ. ವಾಯ್. ನಾಗೇಶ ಶಾಸ್ತ್ರಿಗಳವರು : ಶ್ರೀ ನರಗುಂದ ವಿರಕ್ತಮಠದ ಶ್ರೀ ಚೆನ್ನಬಸವ ಶಿವಯೋಗೀಶ್ವರ ಲೀಲೆ (ಪುರಾಣ) : ಪುಟ ೨೫೩

೬೮. ಪಂ. ವಾಯ್. ನಾಗೇಶ ಶಾಸ್ತ್ರಿಗಳವರು : ಶ್ರೀ ನರಗುಂದ ವಿರಕ್ತಮಠದ ಶ್ರೀ ಚೆನ್ನಬಸವ ಶಿವಯೋಗೀಶ್ವರ ಲೀಲೆ (ಪುರಾಣ) : ಪುಟ ೨೬೧



೬೨. ಶ್ರೀ ಚೆನ್ನಬಸವ ಸ್ವಾಮಿಗಳು ನರಗುಂದ ಮಠಕ್ಕೆ ಆಗಮಿಸಿದ್ದು



೬೧. ಶ್ರೀ ಚೆನ್ನಬಸವ ಸ್ವಾಮಿಗಳು ವಿರಕ್ತಮಠ. ನರಗುಂದ

೬೫. ಶ್ರೀ ಚೆನ್ನಬಸವಸ್ವಾಮಿಗಳು [illegible]





೬೩. ಶ್ರೀ ನಿರಂಜನ ಸ್ವಾಮಿಗಳಿಂದ ಶ್ರೀ ಚೆನ್ನಬಸವ ಸ್ವಾಮಿಗಳಿಗೆ ಅಧಿಕಾರ ದೊರಕಿದ್ದು



೬೬. ಶ್ರೀ ಚೆನ್ನಬಸವಸ್ವಾಮಿಗಳು ಮೂಕನಿಗೆ ವಾಣಿಯನ್ನು ದಯಪಾಲಿಸಿದ್ದು



೬೭. ಶ್ರೀ ಚೆನ್ನಬಸವಸ್ವಾಮಿಗಳವರು ಶಿವಾನುಭವ ಪ್ರವಚನವನ್ನು ವಿರಕ್ತಮಠದಲ್ಲಿ ನಡೆಸಿದ್ದು



೬೮. ಶ್ರೀ ಚೆನ್ನಬಸವ ಸ್ವಾಮಿಗಳವರು ನಂದೀಬಸವಮ್ಮನವರಿಗೆ ಪಾದುಕೆ ಹಾಗೂ ಚಿತ್ರವನ್ನು ಆಶೀರ್ವಾದ ಮಾಡಿದ್ದು

ಮಾತನಾಡುತ್ತಿವೆಯೇನೋ ಎನ್ನುವಂತಹ ಭಾವನೆ ಮೂಡಿಸಿದ್ದಾರೆ. ಕಲಾವಿದರಾದ ಆರ್. ಎಮ್. ಹಡಪದ ಅವರು ಇವರ ಚಿತ್ರಗಳ ಬಗ್ಗೆ ಈ ರೀತಿ ಹೇಳುತ್ತಾರೆ: " ಮಾತುಗಳನ್ನೇ ಚಿತ್ರರೂಪದಲ್ಲಿ ಭಾವಪೂರ್ವಕವಾಗಿ (ಕಾವ್ಯಮಯವಾಗಿ) ಚಿತ್ರಿಸಿವಂಥಹದ್ದು ಕೆಲವು ಸಾರೆ ಸಿಂಬಾಲಿಕ್ (ಹುಲಿ ನಮಸ್ಕರಿಸಿದಂತೆ) ಚಿತ್ರಸ್ತಾ ಇದ್ದು. ನೋಡುಗನಿಗೆ ಆಶ್ಚರ್ಯವನ್ನುಂಟು ಮಾಡುತ್ತಾರೆ. [೬೯] ಎನ್ನುವ ಮಾತಿನಲ್ಲಿ ಸತ್ಯವಿದೆ.

x) ಶ್ರೀ ಬಸವೇಶ್ವರ ಪುರಾಣ –ಕವಿ ಉಭಯಗಾಯನಾಚಾರ್ಯ ಪಂ. ಪುಟ್ಟರಾಜ ಗವಾಯಿಗಳು – ೧೯೬೦

೧೨ ಶತಮಾನದಲ್ಲಿ ಆಗಿಹೋದಂತಹ ಸಕಲಜೀವಾತ್ಮರಿಗೆ ಲೇಸನ್ನೇ ಬಯಸಿದ ಶರಣ ಬಸವಣ್ಣನವರ ಜೀವನ ಚರಿತ್ರೆಯ ಒಟ್ಟು ೯ ಚಿತ್ರಗಳು ಈ ಪುರಾಣದಲ್ಲಿ ಇವೆ. ಇವುಗಳ ಮೂಲ ಅಳತೆ ૩೦" x ૩૩".

ಚಿತ್ರ ೭೦ : ಲಿಪಿಯನ್ನು ಓದುವ ಲೀಲೆ. [೭೦]

ಚಿತ್ರದಲ್ಲಿ ರಾಜನಿಗೂ ಓದಲು ಬರದಂಥ ಲಿಪಿಯನ್ನು ಬಸವಣ್ಣ ಓದುತ್ತಿದ್ದಾನೆ. ರಾಜನನ್ನು ಮೊದಲುಗೊಂಡು ಸಭೆಯ ಪಂಡಿತ ಪಾಮರರೆಲ್ಲ ಆಶ್ಚರ್ಯವ್ಯಕ್ತಡಿಸಿದ್ದಾರೆ.

ರಾಜವೈಭವಕ್ಕೆ ತಕ್ಕಂಥ ಸಿಂಹಾಸನ ಒಡ್ಡೋಲಗ ನೆಲಹಾಸು ಎಲ್ಲ ಆಲಂಕಾರಿಕವಾಗಿ ಚಿತ್ರಿಸಿದ್ದಾರೆ. ಬಸವಣ್ಣನವರು ಮಗ್ನರಾಗಿ ಲಿಪಿ ಓದುತ್ತಿದ್ದರೆ, ಬಿಜ್ಜಳನ ಮುಖದಲ್ಲಿ ಆಶ್ಚರ್ಯ ಸಂತೋಷಗಳೆರಡೂ ಇವೆ. ಎಲ್ಲರ ತಲೆಯ ಮೇಲೆ ರುಮಾಲು. ಆಸ್ಥಾನದ ಕಂಬ ಪರದೆಗಳಲ್ಲಿ ಸ್ವಲ್ಪ ನಾಟಕದ ಪ್ರಭಾವ ಕಂಡುಬರುತ್ತದೆ. ಚಿಟ್ಟಿಯವರು ನಾಟಕ. ಚಲನಚಿತ್ರಗಳನ್ನು ಬಹಳಷ್ಟು ವೀಕ್ಷಿಸುತ್ತಿದ್ದರು. ಅಂತೆಯೇ ಅದರ ಪ್ರಭಾವ ಇಲ್ಲಿ ಕಂಡುಬರುತ್ತದೆ. ಬಹುಶಃ ಈ ಚಿತ್ರಗಳನ್ನು ಅತ್ಯಂತ ಅವಸರದಲ್ಲಿ ರಚಿಸಿಕೊಟ್ಟಂತೆ ಕಾಣುತ್ತವೆ. ಅಲ್ಲಲ್ಲಿ ಛಾಯಾಂಕಣವಿದೆ. ಈ ಚಿತ್ರವನ್ನು ಗ್ರಂಥದ ೮೨ ನೇ ಪುಟದಲ್ಲಿ ನೋಡಬಹುದು.

ಚಿತ್ರ ೭೧ : ಶ್ರೀ ಅಲ್ಲಮಪ್ರಭುಗಳ ಲೀಲೆ [೭೧]

ಪ್ರಭುದೇವರು ಬಸವನ ಮನೆಗೆ ಬಂದು ಅಂದಿನ ದಾಸೋಹಕ್ಕೆ ತಯಾರಿಸಿದ ಎಲ್ಲ ಪ್ರಸಾದವನ್ನು ಸ್ವೀಕರಿಸುತ್ತಾರೆ. ಗಾಬರಿಯಾದ ಬಸವಣ್ಣ ಕೊನೆಗೆ ತನ್ನನ್ನೆ ಅರ್ಪಿಸಿಕೊಂಡಾಗ ಪ್ರಭುದೇವರಿಗೆ ತೃಪ್ತಿ. ಬಸವನಲ್ಲಿದ್ದ ಅಲ್ಪಸ್ವಲ್ಪ ' ನಾನು ' ಅನ್ನುವಂತಹ ಭಾವ ಹೋಗಲಾಡಿಸಿ ಸರ್ವಸಮರ್ಪಣೆಯ ಮಹತ್ವ ತಿಳಿಸಿದ್ದು.

ಚಿತ್ರದಲ್ಲಿ ಪ್ರಭುದೇವರು ಲಿಂಗಾರ್ಚನೆ ಮಾಡಿ ಪ್ರಸಾದ ಸ್ವೀಕರಿಸುತ್ತಿದ್ದಾರೆ. ಪ್ರಸಾದ ನೀಡುತ್ತಿರುವಂತ ನೀಲಾಂಬಿಕೆ ಮತ್ತು ಉಳಿದ ಜನರೆಲ್ಲ ಮಾಡಿದ ಅಡಿಗೆ ಖಾಲಿ ಆಗಲು ಗಾಬರಿಯ ಭಾವನೆಯಿಂದ ಮಾತನಾಡಿಕೊಳ್ಳುತ್ತಿದ್ದಾರೆ. ಇಲ್ಲಿ ಚಿಟ್ಟಿಯವರು ಆಶ್ಚರ್ಯ ಭಾವನೆಯನ್ನು ಸುಂದರವಾಗಿ ನಿರೂಪಿಸಿದ್ದಾರೆ. ಕೆಲವರಂತೂ ಕಕ್ಕಾವಿಕ್ಕಿಯಾಗಿ ಬಾಯಿಮೇಲೆ ಕೈ ಇರಿಸಿಕೊಂಡಿದ್ದಾರೆ. ಪ್ರಭುವಿನ ಮುಖ ಏಕಾಗ್ರತೆಯಿಂದ ಕೂಡಿದೆ.

---

೬೯. ಆರ್. ಎಂ. ಹಡಪದ ಅವರ ಸಂದರ್ಶನ ದಿನಾಂಕ ೧೪-೪-೨೦೦೦. ಬೆಂಗಳೂರು

೭೦. ಪಂ. ಪುಟ್ಟರಾಜ ಗವಾಯಿಗಳು (ಅನು.) : ಶ್ರೀ ಬಸವೇಶ್ವರ ಪುರಾಣ : ಪುಟ ೮೨

೭೧. ಪಂ. ಪುಟ್ಟರಾಜ ಗವಾಯಿಗಳು (ಅನು.): ಶ್ರೀ ಬಸವೇಶ್ವರ ಪುರಾಣ : ಪುಟ ೧೦೬

ಜನರ ಅನಿಸಿಕೆಗಳು ಅವರ ಕಣ್ಣುಗಳಲ್ಲಿ ಮತ್ತು ಶರೀರದ ಹಾವಭಾವದಲ್ಲಿ ಮೂಡಿ ಬಂದಿದೆ. ಸೌಮ್ಯ ಹಾಗೂ ಉಜ್ವಲ ವರ್ಣಗಳ ಮೇಳವಿಕೆ ಇದೆ. ಈ ಚಿತ್ರವನ್ನು ಗ್ರಂಥದ ೧೦೬ ನೇ ಪುಟದಲ್ಲಿ ನೋಡಬಹುದು.

ಚಿತ್ರ ೭೨ : ಜೋಳ ಮುತ್ತುಗಳಾಗಿ ಪರಿವರ್ತನೆ ಹೊಂದಿದ ಲೀಲೆ. [೭೨]

ಒಂದು ದಿನ ಒಬ್ಬ ಯತಿ ಲಿಂಗಾರ್ಚನೆಯ ಮನೆಯ ಮುಂದೆ ಅಲಂಕರಿಸಲು ರಂಗೋಲಿಗೆ ಮುತ್ತು ಬೇಕು ಮುತ್ತು. ಆದ್ದರಿಂದ ನಮಗೆ ಮುತ್ತನ್ನು ಕೊಡಿ ಎಂದು ಕೇಳಿದಾಗ ಆಗ ಬಸವೇಶನು ಅಲ್ಲಿಯೇ ಇದ್ದ ಜೋಳವನ್ನು ಆತನ ಕೈಗೆ ಹಾಕಲು ಅವು ಮುತ್ತಾಗಿ ಪರಿವರ್ತನೆ ಹೊಂದಿದವು. ಚಿತ್ರದಲ್ಲಿ ಬಸವೇಶನು ಯತಿಗೆ ಜೋಳ ಹಾಕುತ್ತಿದ್ದಾನೆ. ಅವು ಮುತ್ತಾಗಿವೆ. ಸ್ವೀಕರಿಸುತ್ತಿರುವವನ ಮುಖದಲ್ಲಿ ಸಂತೋಷ. ಅಲ್ಲಿ ನಿಂತ ಉಳಿದ ಜನರ ಮುಖದಲ್ಲಿ ಆಶ್ಚರ್ಯ ಹಾಗೆಯೇ ಬಸವನ ಬಗ್ಗೆ ಭಕ್ತಿಯ ಭಾವ ಮೂಡಿದೆ.

ಬಸವಣ್ಣನ ಶುದ್ಧ ಮನಸ್ಸು ಶಾಂತಿಯ ಮುಖಭಾವ ಚಿತ್ರಕ್ಕೆ ಹೆಚ್ಚಿನ ಮೆರಗನ್ನು ತಂದಿದೆ. ಮನೆಯ ಜಾಲಂಧರ ಎಲ್ಲವೂ ಆಗಿನ ದೇವಾಲಯ ವಾಸ್ತುಶಿಲ್ಪದ ಪ್ರಭಾವದಂತೆ ಕಾಣುತ್ತಿದೆ. ಹೆಂಗಳೆಯರ ಸೀರೆಯ ಮಡಿಕೆ. ತಲೆಯ ಮೇಲಿನ ಸೆರಗು ನೈಜವಾಗಿ ಮೂಡಿಬಂದಿವೆ. ಈ ಚಿತ್ರಗಳನ್ನು ಪೋಸ್ಟರ್ ವರ್ಣಗಳಿಂದ ರಚಿಸಿದ್ದರಿಂದ ಚಿತ್ರದ ಸನ್ನಿವೇಶಕ್ಕೆ ತಕ್ಕ ಹಾಗೆ ಬಿಳಿ ವರ್ಣವನ್ನು ಯಥೇಚ್ಚವಾಗಿ ಉಪಯೋಗಿಸಿದ್ದಾರೆ. ಈ ಚಿತ್ರ ಗ್ರಂಥದ ೧೧೮ ನೇ ಪುಟದಲ್ಲಿದೆ.

ಚಿತ್ರ ೭೩ : ಬದನೇಕಾಯಿ ಲಿಂಗಗಳಾಗಿ ಪರಿವರ್ತನೆಗೊಂಡ ಲೀಲೆ. [೭೩]

ಒಮ್ಮೆ ಬಸವಣ್ಣನವರು ಮಹಾಮನೆಗೆ ಕೆಲವು ಕಪಟಿಗಳು ಜಂಗಮವೇಷ ಧರಿಸಿಕೊಂಡು ಕೊರಳಲ್ಲಿ ಬದನೆಕಾಯಿ ಕಟ್ಟಿಕೊಂಡು ಬಂದಿದ್ದರು. ಬಸವಣ್ಣನವರು ಪೂಜೆ ಮಾಡಿಕೊಳ್ಳಲು ಜಂಗಮರಿಗೆ ಹೇಳಿದಾಗ ಅವರು ಕೊರಳಲ್ಲಿಯ ವಸ್ತ್ರ ಬಿಚ್ಚಲು ಅವೆಲ್ಲ ಲಿಂಗಗಳಾಗಿದ್ದವು. ಅದೇ ದೃಶ್ಯ.

ಇಲ್ಲಿ ಬಸವಣ್ಣ ಹಾಗೂ ಆತನ ಧರ್ಮಪತ್ನಿಯರಾದ ಗಂಗಾಂಬಿಕೆ. ನೀಲಾಂಬಿಕೆಯರು ದಾಸೋಹಕ್ಕೆ ಸಿದ್ಧರಾಗಿ ನಿಂತಿದ್ದಾರೆ. ಜಂಗಮರ ಮುಖದಲ್ಲಿ ಆಶ್ಚರ್ಯ. ಕಟ್ಟಿಕೊಂಡು ಬಂದ ಬದನೆಕಾಯಿಗಳೆಲ್ಲ ಲಿಂಗವಾಗಿವೆ. ಇಲ್ಲಿ ಚಿಟ್ಟಿಯವರು ಬದನೆಕಾಯಿಯ ಹೊರ ರೂಪ ಕೊಟ್ಟು ಒಳಗಡೆ ಲಿಂಗವನ್ನು ಚಿತ್ರಿಸಿದ್ದಾರೆ. ಇದರಿಂದ ನೋಡುಗನಿಗೆ ಲಿಂಗ ಹಾಗೂ ಬದನೆಕಾಯಿ ಎರಡರ ಕಲ್ಪನೆ ಮೂಡುತ್ತದೆ. ಇಂತಹ ಕುಶಲತೆ ಒಂದರಲ್ಲೇ ಎರಡು ಆಕಾರ. ಸನ್ನಿವೇಶ ತೋರಿಸುವುದು ಚಿಟ್ಟಿಯವರ ವಿಶೇಷತೆ. ವರ್ಣಗಳ ಸಂಯೋಜನೆ ಚಿತ್ರಕ್ಕೆ ಪೂರಕವಾಗಿ ಇವೆ. ಈ ಚಿತ್ರವು ಗ್ರಂಥದ ೧೨೨ನೇ ಪುಟದಲ್ಲಿದೆ.

---

೭೨. ಪಂ. ಪುಟ್ಟರಾಜ ಗವಾಯಿಗಳು (ಅನು.): ಶ್ರೀ ಬಸವೇಶ್ವರ ಪುರಾಣ : ಪುಟ ೧೧೮

೭೩. ಪಂ. ಪುಟ್ಟರಾಜ ಗವಾಯಿಗಳು (ಅನು.): ಶ್ರೀ ಬಸವೇಶ್ವರ ಪುರಾಣ : ಪುಟ ೧೨೨

ಚಿತ್ರ ೨೪ : ಸಂಗಮೇಶನಿಗೆ ಕಣ್ಣನ್ನು ಕೊಡುವ ದೃಶ್ಯ. [೨೪]

' ಶಿವನು ಜಂಗಮವೇಷದಿಂದ ಬಸವಣ್ಣನಲ್ಲಿಗೆ ಬಂದು ತನಗೆ ಹಣೆಗಣ್ಣನ್ನು ಕೇಳಿದನು. ಆಗ ಬಸವನು ನಿನಗೆ ಇದು ಹೊಸದೇ ' ನಿನ್ನ ಮಾಯೆಯ ಪರಿಯನ್ನು ನಾನು ಬಲ್ಲೆ ಎಂದು ನುಡಿದು ಅವನ ಮುಖಕ್ಕೆ ಕನ್ನಡಿಯನ್ನು ಹಿಡಿದು " ನೋಡಿಕೊ ಮೂರು ಕಣ್ಣಿವೆ ಎಂದನು. ಶಿವನು ಭಂಗಿತನಾಗಿ ಓಡತೊಡಗಿದನು. " [೨೫] ಆದರೂ ಬಸವ ಆತನನ್ನು ಬಿಡದೇ ತನ್ನ ಕಣ್ಣನ್ನು ಕಿತ್ತು ಕೊಡುವಾಗ ಶಿವನು ಆತನ ಕೈಯನ್ನು ಹಿಡಿದ ದೃಶ್ಯ.

ದೇವಾಲಯದ ಮಧ್ಯದಲ್ಲಿ ಬಸವನು ಶಿವನಿಗೆ ಕಣ್ಣನ್ನು ಕಿತ್ತುಕೊಡುತ್ತಿದ್ದಾನೆ. ಶಿವನು ಆತನ ಕೈಯನ್ನು ಹಿಡಿದಿದ್ದಾನೆ. ಈ ದೃಶ್ಯ ನೋಡುತ್ತಿರುವ ಜನ ಬೆರಗಾಗಿ ಕೈಮುಗಿದಿದ್ದಾರೆ. ಗಂಗಾಂಬಿಕೆ. ನೀಲಾಂಬಿಕೆಯರು ಕೈ ಮುಗಿದ ಧನ್ಯಭಾವ ವ್ಯಕ್ತವಾಗಿದೆ. ಬಸವನ ಮುಖದಲ್ಲಿ ಅಷ್ಟೇ ಸಾತ್ವಿಕ ಭಾವವಿದೆ. ಶಿವನು ನಸುನಗುತ್ತಿರುವನು. ಇಲ್ಲಿ ಶಿವನು ಮೊದಲು ಜಂಗಮನಾಗಿ ನಂತರ ಶಿವರೂಪ ತೋರುವುದರಿಂದ ಶಿವನ ಕೈಯಲ್ಲಿ ಸಾಂಕೇತಿಕವಾಗಿ ಚಿಟ್ಟಿಯವರು ಜಂಗಮರು ಹಿಡಿದುಕೊಳ್ಳುವ ಪಗಡೆಯನ್ನು ಚಿತ್ರಿಸಿದ್ದಾರೆ. ಹಿತಮಿತವಾದ ನೆರಳು ಬೆಳಕಿನ ಛಾಯಾಂಕಣವಿದೆ. ಸೌಮ್ಯ ಹಾಗೂ ಉಜ್ವಲ ವರ್ಣಗಳ ಮೇಳಾಪವಿದೆ. ಈ ಚಿತ್ರವು ಗ್ರಂಥದ ೧೨೫ ನೇ ಪುಟದಲ್ಲಿ ಲಭ್ಯವಿದೆ.

ಚಿತ್ರ ೨೫ : ಗೊಲ್ಲತಿಯ ಹರವಿಗಳನ್ನು ಎತ್ತಿ ಹಿಡಿದದ್ದು. [೨೬]

" ತ್ರಿಪುರಾಂತಕ ದೇವಾಲಯದ ಪೂರ್ವಕ್ಕೆ ಅರ್ಧ ಗಾವುದದೊಳಗೆ ಕಪಿಲೇಶ್ವರವುಂಟು. ಅದಕ್ಕೆ ಪೂಜಾರಿ ಸಾವಿರದಾರನೂರು ಖಂಡುಗ ಕ್ಷೀರಾಭಿಷೇಕ ಮಾಡಿದನು. ಅದರಿಂದ ಬೀದಿಯಲ್ಲಿ ಕೆಸರಾಗಿದೆ. ಅಲ್ಲೊಬ್ಬ ಗೊಲ್ಲತಿ ಮಜ್ಜಿಗೆ ಹೊತ್ತುಕೊಂಡು ಬರುವಾಗ ಜಾರಿ ಬೀಳುತ್ತ ' ಬಸವಾ ' ಎಂದಳು ಅದಕ್ಕಾಗಿ ಹರವಿಯನ್ನು ಎತ್ತಿ ಹಿಡಿದನು. " [೨೭]

ಚಿತ್ರದಲ್ಲಿ ಅದೃಶ್ಯವಾಗಿರುವ ಬಸವೇಶ್ವರರನ್ನು ನೋಡುಗರಿಗೆ ಸನ್ನಿವೇಶಕ್ಕೆ ತಕ್ಕ ಹಾಗೆ ಕಲ್ಪನೆ ಬರುವದಕ್ಕೋಸ್ಕರವಾಗಿ ಚಿತ್ರಿಸಿದ್ದಾರೆ. ಚಿತ್ರದಲ್ಲಿ ಇರುವ ಹೆಣ್ಣುಮಗಳಿಗೆ ತನ್ನ ಹರವಿಗಳನ್ನು ಯಾರು ಹಿಡಿದಿದ್ದಾರೆಂಬ ಕಲ್ಪನೆ ಇಲ್ಲ. ಅವಳು ಎರಡೂ ಕೈಬಿಟ್ಟು ನೆಲದ ಮೇಲೆ ಜಾರುತ್ತಿದ್ದಾಳೆ. ಹರಿವೆಗಳು ಅಂತರದಲ್ಲಿವೆ. ಅವಳ ಮುಖದಲ್ಲಿ ಗಾಬರಿ ಇದೆ. ಅವಳು ಬೀಳುವ ರಭಸದಲ್ಲಿ ಚಲನೆ ಇದೆ. ಬಸವೇಶ್ವರರು ಸಭೆಯಲ್ಲೇ ಕುಳಿತು ಈ ಹರಿವೆಗಳನ್ನು ಹಿಡಿದಿದ್ದಾರೆ ಎಂಬ ವಿಷಯ ಈ ರೀತಿ ಜಾಣ್ಮೆಯಿಂದ ಚಿಟ್ಟಿಯವರು ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಸೂರ್ಯಾಸ್ತದ ಬೆಳಕು ದೃಶ್ಯಾಂತರ ಮಧ್ಯದಲ್ಲಿ ಕಟ್ಟಡಗಳ ನೆರಳು. ಹರಿವೆಗಳ ಮೇಲೆ ಸೂರ್ಯನ ಬೆಳಕು.

---

೨೪. ಪಂ. ಪುಟ್ಟರಾಜ ಗವಾಯಿಗಳು (ಅನು.): ಶ್ರೀ ಬಸವೇಶ್ವರ ಪುರಾಣ : ಪುಟ ೧೨೭

೨೫. ಡಾ. ಆರ್. ಸಿ. ಹಿರೇಮಠ (ಸಂ) : ಭೀಮ ಕವಿಯ ಬಸವಪುರಾಣ : ಪುಟ ೧೩೩

೨೬. ಪಂ. ಪುಟ್ಟರಾಜ ಗವಾಯಿಗಳು (ಅನು.): ಶ್ರೀ ಬಸವೇಶ್ವರ ಪುರಾಣ : ಪುಟ ೧೩೦

೨೭. ಡಾ. ಆರ್. ಸಿ. ಹಿರೇಮಠ (ಸಂ) : ಭೀಮ ಕವಿಯ ಬಸವಪುರಾಣ : ಪುಟ ೧೩೩

ಬಸವಣ್ಣನವರು ಏನೂ ಆಗದು ಎಂದು ಹೇಳುವಂತೆ ನಿಂತಿದ್ದಾರೆ. ಆಕೆಯ ಕುಪ್ಪಸದಲ್ಲಿಯ ನಕ್ಷೆಯನ್ನು ಸಹಿತ ವಿವರವಾಗಿ ಚಿತ್ರಿಸಿದ್ದಾರೆ. ಈ ಚಿತ್ರವು ಗ್ರಂಥದ ೧೩೦ ನೇ ಪುಟದಲ್ಲಿದೆ.

ಚಿತ್ರ ೭೬ : ವಸ್ತ್ರ ಅಕ್ಷಯವಾದ ಲೀಲೆ. [೭೮]

" ಒಂದು ದಿನ ಸೂಳೆಯ ಮನೆಯಲ್ಲಿದ್ದ ಅಯ್ಯನೊಬ್ಬನು ತನ್ನ ಪಡಿಯನ್ನು ತರುವುದಕ್ಕಾಗಿ ತೊತ್ತನ್ನು ಬಸವನಲ್ಲಿಗೆ ಕಳುಹಿದನು. ಅವಳು ಬಂದು ಆತನ ಪಟ್ಟದರಸಿ ಉಟ್ಟಿದ್ದ ದುಕೂಲವನ್ನು ಕಂಡು ಬೆರಗಾಗಿ ಹಾಗೆಯೇ ತಿರುಗಿ ಬಂದು ತನ್ನ ಒಡತಿಗೆ ಅದನ್ನು ಬಣ್ಣಿಸಿ " ನಿನಗಾಗಿ ಅದನ್ನು ಭಾವನಿಂದ ತರಿಸಿಕೋ " ಎಂದು ಹೇಳಿದಳು. ಸೂಳೆಯ ಮನಿಷಿಯಂತೆ ವಿಟನು ಬಸವಣ್ಣನಲ್ಲಿಗೆ ಹೋಗಿ ಗಂಗಾಂಬಿಕೆಯ ದುಕೂಲವನ್ನು ಬೇಡಿದನು. ಆತನು ಘಟ್ಟನೆ ' ಹಸಾದ ' ವೆಂದು ಅಯ್ಯನಿಗೆ ನಿನ್ನ ಹುಟ್ಟಿಗೆಯನ್ನು ಕೊಡು ಎನ್ನತ್ತ ಅದನ್ನು ಸೆಳೆಯತೊಡಗಿದನು. ಸೆಳೆಸೆಳೆದಂತೆ ಅದು ಅಕ್ಷಯವಾಯಿತು. [೭೯]

ಚಿತ್ರದಲ್ಲಿ ಗಂಗಾಂಬಿಕೆಯು ಕೈಮುಗಿದು ನಿಂತಿದ್ದಾಳೆ. ಬಸವಣ್ಣನವರು ಸೀರೆಯನ್ನು ಎಳೆಯುತ್ತಿದ್ದಾರೆ. ನೀಲಾಂಬಿಕೆಯು ಕಣ್ಮುಚ್ಚಿ ಕೈಮುಗಿದು ನಿಂತಿದ್ದಾಳೆ. ನೆರೆದ ಜನ ಇದೇನು ಎಂಬಂತೆ ಗಾಭರಿಯಾಗಿದ್ದಾರೆ. ವಿಟನು ಸೀರೆಯನ್ನು ಗಂಟು ಸುತ್ತಿ ಬೇಸತ್ತಿದ್ದಾನೆ. ಅವನು ಸಾಕಿನ್ನು ಎಂಬಂತೆ ಬಸವನಿಗೆ ಹೇಳುತ್ತಿರುವಂತಿದೆ. ಈ ದೃಶ್ಯ ಮಹಾಭಾರತದ ದುಶ್ಶಾಸನನನ್ನು ದ್ರೌಪದಿಯ ಸೀರೆಯನ್ನು ಸೆಳೆಯುತ್ತಿರುವ ದೃಶ್ಯವನ್ನು ಜ್ಞಾಪಕಕ್ಕೆ ತರುತ್ತದೆ. ಆದರೆ ಇದೇ ಬೇರೆ. ಅದೇ ಬೇರೆ. ಇಲ್ಲಿ ಬಸವಣ್ಣನವರ ಮುಖದಲ್ಲಿ ಶಾಂತಿ ಸಂಯಮಗಳಿವೆ. ಗಂಗಾಂಬಿಕೆಯ ತಲೆಯ ಮೇಲಿನ ಸೆರಗು ಹಾಗೇ ಇದೆ. ಇಲ್ಲಿ ಯಾವ ದೌರ್ಜನ್ಯದ ಚಿಹ್ನೆಗಳೇ ಮೂಡದಂತೆ ಚಿತ್ರಿಸಿದ್ದಾರೆ. ಕಂಬ. ಪರದೆ ಇವೆಲ್ಲ ಸ್ವಲ್ಪ ನಾಟಕೀಯ ಪ್ರಭಾವಕ್ಕೆ ಪಕ್ಕಾಗಿವೆ. ಈ ಚಿತ್ರವು ಗ್ರಂಥದ ೧೩೭ ನೇ ಪುಟದಲ್ಲಿದೆ. (ಅಧ್ಯಾಯ ಏಳರಲ್ಲಿಯ ೪೯ ನೇ ಚಿತ್ರವನ್ನು ನೋಡಿರಿ)

ಚಿತ್ರ ೭೭ : ಸ್ತ್ರೀಯರೆಲ್ಲರೂ ಜಂಗಮರಾದ ಲೀಲೆ. [೮೦]

ಬಿಜ್ಜಳನು ದುರ್ಜನರ ಮಾತುಗಳನ್ನು ಕೇಳಿ ಬಸವನನ್ನು ಅಪಮಾನಗೊಳಿಸಲು ತನ್ನ ಅಂತಃಪುರದ ಸ್ತ್ರೀಯರಿಗೆಲ್ಲ ಜಂಗಮವೇಷ ಹಾಕಿ ಬಸವನ ಮನೆಗೆ ಕಳಿಸಿದನು. ಬಸವನು ಎಂದಿನಂತೆ ಅವರಿಗೆ ನಮಸ್ಕರಿಸಿ ಉಪಚರಿಸಲು ಬಿಜ್ಜಳನು ಬಂದು ಇವರೆಲ್ಲ ಸ್ತ್ರೀಯರು ಎನ್ನಲು. ಆದರೆ ಅವರು ಸ್ತ್ರೀ ಆಗಿರದೆ ನಿಜವಾದ ಜಂಗಮ ರೂಪಿಗಳಾಗಿದ್ದರು.

ಹೀಗೆ ಬಸವಣ್ಣನ ಅಚಲ ಭಕ್ತಿಯನ್ನು ತೋರಿಸುವ ಚಿತ್ರವಿದಾಗಿದೆ. ಬಸವಣ್ಣ ಧನ್ಯತೆಯಿಂದ ಕೈಮುಗಿದ ಭಂಗಿಯಲ್ಲಿದ್ದಾನೆ. ಚಿತ್ರದ ಎಡಗಡೆ ಸ್ತ್ರೀಯರೆಲ್ಲ ಜಂಗಮರಾಗಿದ್ದಾರೆ ಅದನ್ನು ಚೆಟ್ಟಿಯವರು ಕೊನೆಗೆ ಚಿತ್ರಿಸಿದ್ದಾರೆ.

---

೭೮. ಪಂ. ಪುಟ್ಟರಾಜ ಗವಾಯಿಗಳು (ಅನು.): ಶ್ರೀ ಬಸವೇಶ್ವರ ಪುರಾಣ : ಪುಟ ೧೩೧

೭೯. ಡಾ. ಆರ್. ಸಿ. ಹಿರೇಮಠ (ಸಂ) : ಭೀಮ ಕವಿಯ ಬಸವಪುರಾಣ : ಪುಟ ೧೨೪

೮೦. ಪಂ. ಪುಟ್ಟರಾಜ ಗವಾಯಿಗಳು (ಅನು.): ಶ್ರೀ ಬಸವೇಶ್ವರ ಪುರಾಣ : ಪುಟ ೪೦೧

ಉದಾಹರಣೆ ಎಂಬಂತೆ ಒಬ್ಬ ಸ್ತ್ರೀ ಎದ್ದು ನಿಂತು ಏನೋ ಹೇಳುತ್ತಿದ್ದಾಳೆ. ಅವಳ ಹಿಂದೆಯೇ ಜಂಗಮನನ್ನು ಮಸುಕಾಗಿ ಚಿತ್ರಿಸಿದ್ದಾರೆ. ಅಂದರೆ. ಸ್ತ್ರೀಯರು ಪುರುಷ ಜಂಗಮರಾದರೆಂದು ತೋರಿಸಿದ್ದಾರೆ. ರಾಜನ ವೈಭವಯುತವಾದ ಉಡುಗೆ. ಆತನು ಕೈ ಮಾಡಿ ಇವರೆಲ್ಲ ಸ್ತ್ರೀಯರೇ ಎಂದು ಅಪಹಾಸ್ಯ ಮಾಡುತ್ತಿರುವಂತೆ ಹೇಳುವಂತಿದೆ. ಎಲ್ಲ ಜಂಗಮ ವೇಷದ ಸ್ತ್ರೀಯರು. ನೀಲಾಂಬಿಕೆ ಮೊದಲುಗೊಂಡು ಗಾಬರಿಯ ಛಾಯೆ ಅವರ ಮುಖದಲ್ಲಿದೆ. ಈ ಚಿತ್ರ ಗ್ರಂಥದ ೪೦೧ ನೇ ಪುಟದಲ್ಲಿ ಲಭ್ಯವಿದೆ.

ಚಿತ್ರ ೭೮ : ಸಿಂಹಾಸನ ಸುಟ್ಟು ಭಸ್ಮವಾಗುತ್ತಿರುವ ಲೀಲೆ.[೮೧]

ಅಸೂಯಾ ಬುದ್ಧಿಯಿಂದ ಗುರುವಿನ ಮಹತಿಯನ್ನು ತಿಳಿಯದೆ ಅಪಚಾರ ಮಾಡಿದ್ದರಿಂದ ಈ ರೀತಿ ಸಿಂಹಾಸನಕ್ಕೆ ಬೆಂಕಿ ಬಿದ್ದಿದೆ ಎಂದು ಬಿಜ್ಜಳನು ಹೌಹಾರಿ ಪಶ್ಚಾತ್ತಾಪ ಪಡುತ್ತಿದ್ದಾನೆ. ಬಸವಣ್ಣನವರು ಭಕ್ತಿಯಿಂದ ಗುರುಸ್ಮರಣೆ ಮಾಡಿ ಆ ಬೆಂಕಿಯನ್ನು ನಂದಿಸಿದರು. ಚಿತ್ರದಲ್ಲಿ ಸಿಂಹಾಸನಕ್ಕೆ ಬೆಂಕಿ ಹತ್ತಿಕೊಂಡು ಉರಿಯುತ್ತಿದೆ. ಜನರೆಲ್ಲ ಏನೂ ಮಾಡಲಾಗದೆ ಗಾಬರಿಯಿಂದ ದೃಶ್ಯವನ್ನು ನೋಡುತ್ತಿದ್ದಾರೆ.

ಹಿನ್ನೆಲೆಯಲ್ಲಿ ರಾಜವೈಭವದ ಅಲಂಕರಣೆ ಇದೆ. ಬಸವಣ್ಣನು ಅಷ್ಟೇ ಶಾಂತಿಯಿಂದ ಭಕ್ತಿಯಿಂದ ಕೈಮುಗಿಯುತ್ತಿದ್ದಾನೆ. ಸುತ್ತೆಲ್ಲ ಭಯಾನಕ ವಾತಾವರಣ ಆವರಿಸಿದ್ದರೂ ಬಸವಣ್ಣನ ಮುಖದಲ್ಲಿ ಯಾವುದು ವಿಚಲತೆ ಇಲ್ಲದಂತೆ ಚಿತ್ರಿಸಿದ್ದಾರೆ. ಸಹಜ ಮಾನವನ ಪ್ರತಿಕ್ರಿಯೆ ಹಾಗೂ ದೇವಮಾನವರ ಪ್ರತಿಕ್ರಿಯೆಯನ್ನು ಸ್ಪಷ್ಟವಾಗಿ ಉತ್ತಮವಾಗಿ ಚಿತ್ರಿಸಿದ್ದಾರೆ. ಅವೇ ಹಿಂದೆ ಹೇಳಿದ ವರ್ಣಗಳ ಬಳಕೆ. ಈ ಚಿತ್ರವನ್ನು ಗ್ರಂಥದ ೪೨೭ ನೇ ಪುಟದಲ್ಲಿ ನೋಡಬಹುದು.

ಬಸವಪುರಾಣವು ಪುರಾಣಗಳಲ್ಲೆ ಅತ್ಯಂತ ಪ್ರಸಿದ್ಧವಾದ ಕೃತಿಯಿದು. ಈ ಕೃತಿಯನ್ನು ಪಂ. ಪುಟ್ಟರಾಜ ಗವಾಯಿ ಕವಿಗಳು ಬೇರೆ ಬೇರೆ ಮೂಲಗಳಿಂದ ವಿಷಯ ಸಂಗ್ರಹಿಸಿ ಹಿಂದೀ ಭಾಷೆಗೆ ಅನುವಾದಿಸಿದ್ದಾರೆ. ಅದರಲ್ಲಿ ಭೀಮಕವಿ ವಿರಚಿತ ಬಸವ ಪುರಾಣದ ಕೆಲವು ವಿಷಯಗಳನ್ನು ಇದರಲ್ಲಿ ಬಳಸಿದ್ದರಿಂದ. ಆ ವಿಷಯಗಳ ಮೇಲೆ ಚಿಟ್ಟಿಯವರು ಚಿತ್ರಗಳನ್ನು ರಚಿಸಿದ್ದರಿಂದ. ಆ ಪುರಾಣದ ಉಲ್ಲೇಖಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

ಈ ಎಲ್ಲ ಚಿತ್ರಗಳು ಒಂದೇ ತೆರನಾದ ಸೌಮ್ಯ ಹಾಗೂ ಉಜ್ವಲ ವರ್ಣಗಳ ಬಳಕೆಯಾದ್ದರಿಂದ ಕೆಲವು ಚಿತ್ರಗಳಲ್ಲಿ ಮಾತ್ರ ಅದರ ಬಗ್ಗೆ ತಿಳಿಸಲಾಗಿದೆ. ರಾಜ ವೈಭವವನ್ನು ಇಲ್ಲಿ ತೋರಿಸುವುದರ ಸಲುವಾಗಿ ಉಜ್ವಲ (warm) ವರ್ಣಗಳನ್ನು ಬಹಳಷ್ಟು ದುಡಿಸಿಕೊಂಡಿದ್ದಾರೆ. ಉಳಿದಂತೆ ಹಿಂದೆ ಚರ್ಚಿಸಿದ ಪುರಾಣಗಳ ಚಿತ್ರಗಳಿಗಿಂತಲೂ ಇಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ಇಲ್ಲಿ ಅರಮನೆಯ ಒಳಾಂಗಣದ ಚಿತ್ರದಲ್ಲಿ ಬಳಸಿದ ಅಲಂಕಾರಿಕತೆಯಲ್ಲಿ ಸ್ವಲ್ಪ ನಾಟಕದ ಪ್ರಭಾವ ಕಂಡುಬರುತ್ತದೆ. ಪರದೆಗಳು. ಕಂಬಗಳು. ನೆಲಹಾಸುಗಳು ಇತ್ಯಾದಿ.

ಅವರದೇ ಆದ ಶೈಲಿಯನ್ನು ಬಿಂಬಿಸುವ ಆಕೃತಿಗಳು. ಅವಶ್ಯವಿದ್ದಲ್ಲಿ ನೆರಳು - ಬೆಳಕಿನ ಸಂಯೋಜನೆ ಆ ಕಾಲದ ಉಡುಗೆ ತೊಡುಗೆ ನಮ್ಮನ್ನು ೧೨ ನೇ ಶತಮಾನಕ್ಕೆ ಕರೆದೊಯ್ಯುತ್ತವೆ. ಭಾವನಾಪ್ರಧಾನವಾದ ಚಿತ್ರಗಳು.

---

೮೧. ಪಂ. ಪುಟ್ಟರಾಜ ಗವಾಯಿಗಳು : ಶ್ರೀ ಬಸವೇಶ್ವರ ಪುರಾಣ : ಪುಟ ೪೨೭



೧೯. ಶ್ರೀ ಚೆನ್ನಬಸವ ಸ್ವಾಮಿಗಳವರು ಲಿಂಗಪೂಜೆಗೆ ಕುಳಿತಾಗ ನಾಗರ ಹಾವು ನೆರಳು ಮಾಡಿದ್ದು

೨೦. ಬಸವಣ್ಣನು ಲಿಪಿಯನ್ನು ಓದುವ ಲೀಲೆ






೭೧. ಅಲ್ಲಮ ಪ್ರಭುಗಳ ಲೀಲೆ



೭೨. ಜೋಳ ಮುತ್ತುಗಳಾಗಿ ಪರಿವರ್ತನ ಹೊಂದಿದ ಲೀಲೆ



೭೩. ಬದನೆಕಾಯಿ ಲಿಂಗಗಳಾಗಿ ಪರಿವರ್ತನೆಗೊಂಡ ಲೀಲೆ



೭೪. ಸಂಗಮೇಶನಿಗೆ ಕಣ್ಣನ್ನು ಕೊಡುವ ದೃಶ್ಯ

೭೬. ಗೊಲ್ಲತಿಯ ಹರಿವಿಗಳನ್ನು ಎತ್ತಿಹಿಡಿದದ್ದು



घट धरने की लीला

೭೭. ಸ್ತ್ರೀಯರೆಲ್ಲರೂ ಜಂಗಮರಾದ ಲೀಲೆ



स्त्री जन जंगम होने की लीला

ರೇಖಾಪ್ರಧಾನವಾದ ಚಿತ್ರಗಳು –ಈ ಎಲ್ಲ ಚಿತ್ರಗಳಲ್ಲಿ ವೇಷಭೂಷಣಗಳಿಗೆ ಬಿಳಿವರ್ಣವನ್ನು ಸಾಕಷ್ಟು ದುಡಿಸಿಕೊಂಡಿದ್ದಾರೆ. ಎಲ್ಲ ಚಿತ್ರಗಳಲ್ಲಿ ಬಸವಣ್ಣನವರ ಸಾತ್ವಿಕ ಮುಖಭಾವ. ಬಿಜ್ಜಳನ ರಾಜದರ್ಪದ ಮುಖಭಾವ ಒಂದೇ ರೀತಿಯಾಗಿ ಮೂಡಿಬಂದಿದೆ.

xi) ಶ್ರೀ ಸಾವಳಗಿ ಶಿವಲಿಂಗೇಶ್ವರ ಪುರಾಣ : ೧೯೬೭ ಕವಿ– ಶಿವಪುರದ ಸಿದ್ಧಲಿಂಗ ಕವಿ

ಇದರಲ್ಲಿ ಒಟ್ಟು ಎಂಟು ಚಿತ್ರಗಳಿವೆ. ಅದರಲ್ಲಿ ಎರಡು ಶ್ರೀಮಠದ ಮೊದಲು ಆಗಿಹೋದ ಸ್ವಾಮಿಗಳ ಜೀವಮಾದರಿ ಚಿತ್ರಗಳಿವೆ. ಉಳಿದ ಆರು ಪುರಾಣಕ್ಕೆ ಸಂಬಂಧಿಸಿದ ಸನ್ನಿವೇಶಗಳ ಚಿತ್ರಗಳಾಗಿವೆ. ಇದರಲ್ಲಿ ಈಗ ಸಾವಳಗಿಯ ಮಠದಲ್ಲಿ ಮೂರು ಚಿತ್ರಗಳು ಮಾತ್ರ ಲಭ್ಯವಿವೆ.

ಶ್ರೀಮದ್ ಘನಲಿಂಗ ಚಕ್ರವರ್ತಿ ಸಂಗಮೇಶ್ವರ ಪಟ್ಟದ್ದೇವರು. ಹಿರೇಮಠ. ಕುಸಲಾಪುರ.[೮೨]

ಶ್ರೀ ಮ. ನಿ. ಪ್ರ. ಸಿದ್ಧರಾಮಸ್ವಾಮಿಗಳು. ಸಂಸ್ಥಾನ ಸಾವಳಗಿಮಠ. ಇವೆರಡು ಚಿತ್ರಗಳನ್ನು ಗ್ರಂಥದಲ್ಲಿ ಮುನ್ನುಡಿಯ ಮೊದಲಿನ ಪುಟ ಹಾಗೂ ಕಥಾಸಾರಕ್ಕಿಂತ[೮೩] ಮೊದಲಿನ ಪುಟದಲ್ಲಿ ನೋಡಬಹುದು.

ಚಿತ್ರ ೭೯ : ಬಾಲ ಶಿವಲಿಂಗೇಶನು ಅಡವಿಗೆ ಗೋ ಕಾಯಲು ಹೋದಾಗ ಮರದ ಕೆಳಗೆ ನಿದ್ರಿಸುವಾಗ ಘಟಸರ್ಪ ಆತನಿಗೆ ನೆರಳು ನೀಡಿದ್ದು.[೮೪]

ಚಿತ್ರದಲ್ಲಿ ಶಿವಲಿಂಗನು ಮರದ ಕೆಳಗೆ ಪವಡಿಸಿದ್ದಾನೆ. ನಿದ್ದೆಹೋದ ಆತನಿಗೆ ಹಾವು ನೆರಳು ಮಾಡಿದೆ. ಸನ್ನಿವೇಶವನ್ನು ನೋಡಿದ ಆಬಾಲವೃದ್ಧ. ತಂದೆ ತಾಯಿಗಳೆಲ್ಲ ಗಾಬರಿಯಾಗಿ ಕೈಮುಗಿದು ನಿಂತಿದ್ದಾರೆ. ಬಾಲಕನಿಗೆ ಇದಾವುದರ ಪರಿವೆ ಇಲ್ಲದೆ ನಿಶ್ಚಿಂತೆಯಿಂದ ಮಲಗಿದ್ದಾನೆ. ಹಿಂದೆ ನವಿಲು ಈ ದೃಶ್ಯ ಕಂಡು ಗರಿ ಬಿಚ್ಚಿ ಕುಣಿಯುತ್ತಿದೆ. ಊರ ಜನರು ಹೆದರಿ ದೂರದಲ್ಲಿ ನಿಂತಂತಿದೆ. ಸಮೀಪದಲ್ಲೇ ನೀರು. ಹಿನ್ನೆಲೆಯಲ್ಲಿ ಶಿವಮಂಟಪ. ಎದುರಿಗೆ ನಂದಿ. ಸುತ್ತಲೂ ಹಾವಿನ ಹುತ್ತಗಳಿವೆ. ಚಿತ್ರದಲ್ಲಿ ದೃಶ್ಯಾಂತರವಿದೆ. ಮರದ ಮೈವಳಿಕೆ ನೈಜವಾಗಿ ಚಿತ್ರಿತವಾಗಿದೆ. ಜೋಡಿನವಿಲು. ಬಣ್ಣಗಳ ಸಾಮರಸ್ಯವಿದೆ. ಈ ಚಿತ್ರವನ್ನು ಗ್ರಂಥದಲ್ಲಿ ೪೯ ನೇ ಪುಟದಲ್ಲಿ ನೋಡಬಹುದು.

ಚಿತ್ರ ೮೦ : ಶ್ರೀ ಶಿವಲಿಂಗೇಶ್ವರನನ್ನು ಕಲಬುರ್ಗಿಗೆ ಆಹ್ವಾನಿಸಿ ಕರೆತರಲು ಬಂದ ಕಲಬುರ್ಗಿ ಬಾದಶಹರ ಚತುರಂಗಬಲದ ಪವಾಡದ ದೃಶ್ಯ.[೮೫]

ಅಹಂಕಾರದಿಂದ ಶ್ರೀಗಳನ್ನು ಕರೆಯಲು ಬಂದ ರೋಜದ ಸಾಹೇಬನ ಸೈನ್ಯವೆಲ್ಲ ನಾಶವಾಯಿತು. ಕೊನೆಗೆ ಕಲಬುರಗಿ ಇಸ್ಲಾಂ ಶರಣ ಬಂದೇನವಾಜರೇ ಹುಲಿಯ ಮೇಲೆ ಕುಳಿತು ಅವರನ್ನು ಭೇಟಿ ಆಗಲು ಬಂದಾಗ ಶಿವಲಿಂಗೇಶ್ವರರು ತಮ್ಮ ಕಟ್ಟೆಯನ್ನೇ ಅವನೆಡೆಗೆ ನಡೆಸಿ ತಂದರು. ಎಲ್ಲರೂ ಆಶ್ಚರ್ಯಪಟ್ಟು ಶರಣಾದರು.

---

೮೨. ಶ್ರೀ ಮ. ನಿ. ಪ್ರ. ಸಿದ್ಧರಾಮಸ್ವಾಮಿಗಳು. ಸಾವಳಗಿ (ಸಂ.) : ಶಿವಪುರದ ಸಿದ್ಧಲಿಂಗ ಕವಿ : ಶ್ರೀ ಶಿವಲಿಂಗೇಶ್ವರ ಪುರಾಣ : ಮುನ್ನುಡಿ

೮೩. ಶ್ರೀ ಮ. ನಿ. ಪ್ರ. ಸಿದ್ಧರಾಮಸ್ವಾಮಿಗಳು. ಸಾವಳಗಿ (ಸಂ.) : ಶಿವಪುರದ ಸಿದ್ಧಲಿಂಗ ಕವಿ : ಶ್ರೀ ಶಿವಲಿಂಗೇಶ್ವರ ಪುರಾಣ : ಮುನ್ನುಡಿ

೮೪. ಶ್ರೀ ಮ. ನಿ. ಪ್ರ. ಸಿದ್ಧರಾಮಸ್ವಾಮಿಗಳು. ಸಾವಳಗಿ (ಸಂ.) : ಶಿವಪುರದ ಸಿದ್ಧಲಿಂಗ ಕವಿ : ಶ್ರೀ ಶಿವಲಿಂಗೇಶ್ವರ ಪುರಾಣ : ಪುಟ ೪೯

೮೫. ಶ್ರೀ ಮ. ನಿ. ಪ್ರ. ಸಿದ್ಧರಾಮಸ್ವಾಮಿಗಳು. ಸಾವಳಗಿ (ಸಂ.) : ಶಿವಪುರದ ಸಿದ್ಧಲಿಂಗ ಕವಿ : ಶ್ರೀ ಶಿವಲಿಂಗೇಶ್ವರ ಪುರಾಣ : ಪುಟ ೮೧

ಈ ಚಿತ್ರದಲ್ಲಿ ಚಿಟ್ಟಿಯವರು ಎರಡು ಮೂರು ವಿಷಯಗಳನ್ನು ಒಮ್ಮೆಲೇ ತೋರಿಸಿದ್ದಾರೆ. ಒಂದೆಡೆ ಸೈನ್ಯ ಸೋತು ನಾಶವಾದದ್ದು. ಶಿವಲಿಂಗಸ್ವಾಮಿಗಳು ಕಟ್ಟೆಯನ್ನು ನಡೆಸಿಕೊಂಡು ಬಂದದ್ದು. ಶರಣಾಗತರಾದ ಗುಲ್ಬರ್ಗಾದ ರೋಜದ ಸಾಹೇಬ ಬಾಲಮಹಾಂತಸ್ವಾಮಿಗಳನ್ನು ಶೃಂಗರಿಸಿದ ಆನೆಯ ಮೇಲೆ ಕರೆದುಕೊಂಡು ಹೋಗುತ್ತಿರುವುದು. ಈ ಎಲ್ಲ ವಿಷಯಗಳನ್ನು ಅತ್ಯಂತ ಚಾಣಾಕ್ಷತನದಿಂದ ಸಂಯೋಜಿಸಿದ್ದಾರೆ. ಅದರ ಮಧ್ಯದಲ್ಲಿ ರೋಜದ ಸಾಹೇಬ ಕಳಿಸಿದ ರಾಕ್ಷಸನನ್ನು ಚಿತ್ರಿಸಿದ್ದಾರೆ. ಗ್ರಂಥದ ಆರನೇ ಅಧ್ಯಾಯದ ಸಂಪೂರ್ಣ ವಿವರಣೆ ಈ ಚಿತ್ರದಲ್ಲಿದೆ. ಜನಾಂಗಕ್ಕ ತಕ್ಕಂತೆ ವೇಷಭೂಷಣ ಹಾಗೂ ಅಲ್ಲಿ ನೆರೆದ ಜನರ ಮುಖದಲ್ಲಿ ಸಂತೋಷ ಆಶ್ಚರ್ಯವಾದರೆ ಇಸ್ಲಾಂ ಧರ್ಮದವರು ಶಿವಲಿಂಗ ಸ್ವಾಮಿಗಳನ್ನು ಕಂಡು ' ಯಾ ಅಲ್ಲಾ ' ಎಂದು ಉದ್ಗಾರ ತೆಗೆದಂತಿದೆ. ಆನೆಯ ಮೇಲೆ ಹೊದಿಸಿದ ಬಟ್ಟೆ ಹಾಗೂ ಹುಲಿಯ ಮೇಲಿನ ಬಟ್ಟೆ ಅಲಂಕಾರಿಕವಾಗಿ ಚಿತ್ರಿಸಿದ್ದಾರೆ. ಅಲ್ಲದೆ ಒಟ್ಟಾರೆ ಚಿತ್ರವೈಭವಪೂರಿತವಾಗಿದೆ. ಈ ಚಿತ್ರವು ಗ್ರಂಥದ ೮೧ ನೇ ಪುಟದಲ್ಲಿದೆ.

ಚಿತ್ರ ೮೧ : ನೀರಿನ ಮೇಲೆ ಕುಳಿತು ನಮಾಜ ಮಾಡುತಲಿದ್ದ ದೆಹಲಿಯ ಆಲ್ಲಂಗೀರ್ (ಔರಂಗ) ಬಾದಶಹನಿಗೆ ಶ್ರೀ ಶಿವಲಿಂಗೇಶ್ವರರು ಅಂತರೀಕ್ಷದಲ್ಲಿ ದರ್ಶನ ದಯಪಾಲಿಸಿದ ದೃಶ್ಯ.[೮೭]

ಈ ಚಿತ್ರದಲ್ಲಿ ಮೂರು ದೃಶ್ಯಗಳಿವೆ.

i) ಔರಂಗಬಾದಶಹನಿಗೆ ನೀರಿನ ಮೇಲೆ ಕುಳಿತು ನಮಾಜ ಮಾಡುತ್ತೇನೆಂಬ ಅಹಂ ಇತ್ತು. ಅದಕ್ಕೆ ಶಿವಲಿಂಗಸ್ವಾಮಿಗಳು ಅಂತರಿಕ್ಷದಲ್ಲಿ ದರ್ಶನ ನೀಡಿ ಹರಸುತ್ತಿದ್ದಾರೆ. ಔರಂಗನು ನಾಚಿಕೆಯಿಂದ ಅವರಲ್ಲಿ ತನ್ನ ತಪ್ಪಿನ ಕ್ಷಮೆಯನ್ನು ಕೇಳುವಂತಿದೆ. ಜನರೆಲ್ಲ ಈ ದೃಶ್ಯ ನೋಡಿ ಆಶ್ಚರ್ಯಪಟ್ಟಿದ್ದಾರೆ. ಹಿನ್ನೆಲೆಯಲ್ಲಿ ನಿಸರ್ಗ ದೃಶ್ಯಾಂತರ ನದಿ ನೀರು ಹರಿಯುವಿಕೆ. ದೂರದಲ್ಲಿ ಸೂರ್ಯನ ಬೆಳಕನ್ನು ಕಾಣಬಹುದು.

ii) ಇವರಲ್ಲಿ ಔರಂಗ ಬಾದಶಹ ನಡೆದ ವಿಸ್ಮಯ ಸಂಗತಿ ಹೆಂಡತಿಗೆ ನಾಚಿಕೆಯಿಂದ ಅವಳ ಸೆರಗು ಹಿಡಿದುಕೊಂಡು ಹೇಳುತ್ತಿರುವಂತಿದೆ. ಅಷ್ಟರಲ್ಲಿ ಶಿವಲಿಂಗಸ್ವಾಮಿಗಳು ಕಾಣಿಸಿಕೊಂಡಿದ್ದಾರೆ.

iii) ಇಬ್ಬರು ದಂಪತಿಗಳು ಶ್ರೀಗಳವರ ದರ್ಶನ ಪಡೆದು ಕೃತಾರ್ಥರಾಗಿದ್ದಾರೆ.

ಹೀಗೆ ಚಿಟ್ಟಿಯವರು ಈ ಪುರಾಣದಲ್ಲಿ ಒಂದೇ ಚಿತ್ರದಲ್ಲಿ ೩ - ೪ ದೃಶ್ಯಗಳನ್ನು ಒಮ್ಮೆಲೇ ಚಿತ್ರಿಸಿ ವಿಷಯ ಪ್ರಸ್ತಾವನೆಯನ್ನು ವಿವರಿಸಿ ಹೇಳಿದಂತಿದೆ. ಇದು ಇಲ್ಲಿಯ ವಿಶೇಷತೆ. ಸೌಮ್ಯ ಹಾಗೂ ಉಜ್ವಲ ವರ್ಣಗಳ ಮೇಳವಿಕೆ ಇದೆ. ಈ ಚಿತ್ರವನ್ನು ಗ್ರಂಥದ ೧೦೫ ನೇ ಪುಟದಲ್ಲಿ ನೋಡಬಹುದು.

ಚಿತ್ರ ೮೨ : ಬಾಲಖೇಡದಲ್ಲಿ ಬಾದಶಹನು ಒಂದೇ ದಿನದಲ್ಲಿ ಮಠವನ್ನು ನಿರ್ಮಿಸಿ ಶಿವಲಿಂಗೇಶ್ವರರಿಗೆ ಸಮರ್ಪಿಸುತ್ತಿರುವಾಗ ಮಹಾಮಹಿಮರು ದ್ವಿಮುಖದಲ್ಲಿ ದರ್ಶನವೀಯುತ್ತಿರುವ ದೃಶ್ಯ.[೮೮]

ಚಿತ್ರದಲ್ಲಿ ಶಿವಲಿಂಗೇಶ್ವರರು ದ್ವಿಮುಖವಾಗಿ ಎರಡು ಕೈಗಳಿಂದ ಆಶೀರ್ವದಿಸುತ್ತಿದ್ದಾರೆ. ಎರಡು ಕಡೆ ಏಕಕಾಲದಲ್ಲಿ ನಡೆದ ಸಮಾರಂಭದಲ್ಲಿ ಅವರು ಭಾಗವಹಿಸಿದರೆಂದು ಬಲಗಡೆ ಹಾಗೂ ಎಡಗಡೆಯ ಎರಡು ಗುಂಪುಗಳ

---

೮೭. ಶ್ರೀ ಮ. ನಿ. ಪ್ರ. ಸಿದ್ಧರಾಮಸ್ವಾಮಿಗಳು. ಸಾವಳಗಿ (ಸಂ.) : ಶಿವಪುರದ ಸಿದ್ಧಲಿಂಗ ಕವಿ : ಶ್ರೀ ಶಿವಲಿಂಗೇಶ್ವರ ಪುರಾಣ : ಪುಟ ೧೦೫

೮೮. ಶ್ರೀ ಮ. ನಿ. ಪ್ರ. ಸಿದ್ಧರಾಮಸ್ವಾಮಿಗಳು. ಸಾವಳಗಿ (ಸಂ.) : ಶಿವಪುರದ ಸಿದ್ಧಲಿಂಗ ಕವಿ : ಶ್ರೀ ಶಿವಲಿಂಗೇಶ್ವರ ಪುರಾಣ : ಪುಟ ೧೧೫

ಮಧ್ಯ ಶ್ರೀಗಳನ್ನು ಚಿತ್ರಿಸಿದ್ದಾರೆ. ಮಧ್ಯದಲ್ಲಿ ಅದೇ ಎರಡು ಮುಖಿಗಳ ಶ್ರೀಗಳನ್ನು ರಚಿಸಿದ್ದಾರೆ. ಅವರ ಹಿಂದೆ ಜ್ಞಾನದ ಪ್ರಭಾವಳಿ ಇದೆ. ಬಾದಶಹನ ಮುಖದಲ್ಲಿ ಆಶ್ಚರ್ಯ. ನೋಡುಗರೆಲ್ಲರೂ ಆಶ್ಚರ್ಯಪಟ್ಟಿದ್ದಾರೆ. ' ಹೀಗೂ ಉಂಟೆ ' ಎನ್ನುವ ಭಾವ ಅವರ ಮುಖದಲ್ಲಿದೆ. ಜೊತೆಗೆ ಭಕ್ತಿಯಿಂದ ಪೂಜೆ ಸಲ್ಲಿಸುತ್ತಿದ್ದಾರೆ. ಹಿನ್ನೆಲೆಯಲ್ಲಿ ದೇವಸ್ಥಾನದ ಭಿತ್ತಿಯನ್ನು ಚಿತ್ರಿಸಿದ್ದಾರೆ. ಇಲ್ಲಿ ನಿಂತವರೆಲ್ಲರ ನೆರಳನ್ನು ಚಿತ್ರಿಸಿದ್ದಾರೆ. ಅನೇಕ ಉಜ್ವಲ ವರ್ಣಗಳನ್ನು ಬಳಸಿದ್ದರೂ ವರ್ಣಸಂಯೋಜನೆಯಲ್ಲಿ ಸಮತೋಲನವಿದೆ. ಎಲ್ಲರ ಮುಖಗಳನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಈ ಚಿತ್ರವು ಗ್ರಂಥದ ೧೪೫ ನೇ ಪುಟದಲ್ಲಿ ಲಭ್ಯವಿಧೆ.

ಚಿತ್ರ : ಖ್ವಾಜಾ ಬಂದೇನವಾಜರು ಹುಲಿಯ ಮೇಲೆ ಹತ್ತಿಕೊಂಡು ಭಾಮಿನಿ ಬಾದಶಹರ ಕೂಡ ಬಂದಾಗ ಶ್ರೀ ಶಿವಲಿಂಗೇಶ್ವರರು ಕಟ್ಟೆಯನ್ನು ನಡೆಸಿದ್ದು. [೮೮]

ಚಿತ್ರದ ಮುನ್ನೆಲೆಯಲ್ಲಿ ಬಂದೇನವಾಜರು ಕೈಯಲ್ಲಿ ಹಾವನ್ನು ಹಿಡಿದುಕೊಂಡು ಹುಲಿ ಏರಿ ಬಂದು ಶಿವಲಿಂಗೇಶ್ವರರಿಗೆ ಕೈಮುಗಿದಿದ್ದಾರೆ. ಶಿವಲಿಂಗೇಶ್ವರರು ಬಾಲಮಹಾಂತೇಶನೊಡನೆ ಕಟ್ಟೆಯನ್ನೆ ಇವರೆಡೆಗೆ ತಂದಿದ್ದಾರೆ. ಆಕಾಶಮಾರ್ಗವಾಗಿ ದೂರದಲ್ಲಿ ಬೆಟ್ಟಗಳನ್ನು ಕೈಲಾಸ ಪರ್ವತದಂತೆ ಚಿತ್ರಿಸಿದ್ದಾರೆ. ಭೂಮಿಯ ಮೇಲೆ ನಿಂತ ಜನ ಈ ದೃಶ್ಯ ನೋಡಿ ಆಶ್ಚರ್ಯಪಟ್ಟಿದ್ದಾರೆ.

ಇಲ್ಲಿ ಚಿಟ್ಟಿಯವರು ಶಿವಲಿಂಗೇಶ್ವರರಿಗೆ ಸಮಾನರಾದ ಬಂದೇನವಾಜರನ್ನು ಮಧ್ಯದಲ್ಲಿ ತೋರಿಸಿ ಸಾಮಾನ್ಯ ಜನರನ್ನು ಅತ್ಯಂತ ಕೆಳಗೆ ಚಿತ್ರಿಸಿದ್ದಾರೆ. ಇಲ್ಲಿ ಅವರವರ ಯೋಗ್ಯತೆಯ ಅರಿವಾಗುತ್ತದೆ. ಸಹಜ ನೀಲಿಯ ಆಕಾಶವಿದೆ. ಈ ಚಿತ್ರವನ್ನು ಗ್ರಂಥದ ೨೧ ನೇ ಪುಟದಲ್ಲಿ ನೋಡಬಹುದು. ಇದು ಇಲ್ಲಿ ಕಪ್ಪು - ಬಿಳುಪಿನಲ್ಲಿ ಅಚ್ಚಾಗಿದೆ.

ಚಿತ್ರ : ಶ್ರೀ ಶಿವಲಿಂಗೇಶ್ವರರು ಕೃಷ್ಣಾನದಿಯ ನೀರಿನ ಮೇಲೆ ನಡೆದು ಹೋಗಿ ವಲ್ಲಿಗಳಿಗೆ ಆಶೀರ್ವದಿಸಿದ್ದು. [೮೯]

ಚಿತ್ರದ ಮುನ್ನಲೆಯಲ್ಲಿ ಅನೇಕ ವಲ್ಲಿಗಳು ನದಿಯನ್ನು ದಾಟದೆ ನಿಂತಿದ್ದಾರೆ. ಮಧ್ಯದಲ್ಲಿ ಎದುರುಗಡೆಯಿಂದ ಶಿವಲಿಂಗೇಶ್ವರರು ಹಾಗೆ ಸಲೀಸಲಾಗಿ ದಾಟಿಕೊಂಡು ಬರುತ್ತಿದ್ದಾರೆ. ಹಿನ್ನೆಲೆಯಲ್ಲಿ ಎಲ್ಲ ಜನರು ಗಾಬರಿಯಿಂದ ಕೈ ಮುಗಿದಿದ್ದಾರೆ. ನಡೆದು ಬರುವಾಗ ಆಗುವ ನೀರಿನ ಚಲನೆಯ ಗೆರೆಗಳನ್ನು ನೈಜವಾಗಿ ಚಿತ್ರಿಸಿದ್ದಾರೆ. ಸುತ್ತಲೂ ಸಮಸ್ತ ಜನರಿದ್ದರೂ ನಮ್ಮ ದೃಷ್ಟಿ ಚಿತ್ರ ನೋಡಿದಾಕ್ಷಣ ಮಧ್ಯದಲ್ಲಿರುವ ಶಿವಲಿಂಗ ಸ್ವಾಮಿಗಳ ಮೇಲೆ ಮೊದಲು ಗಮನ ಹರಿದು ನಂತರ ಎಲ್ಲ ಕಡೆ ಹರಿಯುವಂತೆ ಉತ್ತಮವಾಗಿ ಸಂಯೋಜಿಸಿದ್ದಾರೆ. ಈ ಚಿತ್ರವು ಗ್ರಂಥದ ೧೯ ನೇ ಪುಟದಲ್ಲಿ ಲಭ್ಯ. ಹಿನ್ನೆಲೆಯಲ್ಲಿ ಗಿಡ ಹಾಗೂ ನೀರಿನಲ್ಲಿ ಪಕ್ಷಿಗಳನ್ನು ಅಲಂಕಾರಿಕವಾಗಿ ಚಿತ್ರಿಸಿದ್ದಾರೆ. ಇದು ಗ್ರಂಥದಲ್ಲಿ ಕಪ್ಪು - ಬಿಳುಪಿನಲ್ಲಿ ಅಚ್ಚಾಗಿದೆ.

ಈ ಪುರಾಣ ಗ್ರಂಥದಲ್ಲಿ ೨ - ೩ ವಿಷಯಗಳನ್ನು ಒಂದೇ ಚಿತ್ರದಲ್ಲಿ ಚಿತ್ರಿಸಿರುವುದು ವಿಶೇಷವಲ್ಲದೆ. ಹಿಂದೂ ಮುಸ್ಲಿಂರ ಐಕ್ಯತೆಯ ಭಾವನೆ ಈ ಚಿತ್ರಗಳಲ್ಲಿ ಮೂಡಿ ಬಂದಿದೆ.

---

೮೮. ಶ್ರೀ ಮ. ನಿ. ಪ್ರ. ಸಿದ್ಧರಾಮಸ್ವಾಮಿಗಳು. ಸಾವಳಗಿ (ಸಂ.) : ಶಿವಪುರದ ಸಿದ್ಧಲಿಂಗ ಕವಿ : ಶ್ರೀ ಶಿವಲಿಂಗೇಶ್ವರ ಪುರಾಣ : ಪುಟ ೨೧

೮೯. ಶ್ರೀ ಮ. ನಿ. ಪ್ರ. ಸಿದ್ಧರಾಮಸ್ವಾಮಿಗಳು. ಸಾವಳಗಿ (ಸಂ.) : ಶಿವಪುರದ ಸಿದ್ಧಲಿಂಗ ಕವಿ : ಶ್ರೀ ಶಿವಲಿಂಗೇಶ್ವರ ಪುರಾಣ : ಪುಟ ೧೯



सिंहासन भस्म होने की लीला

೭೮. ಸಿಂಹಾಸನ ಸುಟ್ಟು ಭಸ್ಮವಾಗುತ್ತಿರುವ ಲೀಲೆ



೭೯. ಶಿವಲಿಂಗೋತ್ತರರಿಗೆ ಘಟಸರ್ಪವು ನೆರಳು ನೀಡಿದ್ದು



೮೦. ಶಿವಲಿಂಗೇಶ್ವರರನ್ನು ಕಲ್ಬುರ್ಗಿಗೆ ಕರೆತರಲು ಬಂದ ಬಾದಶಹರ ಚತುರಂಗ ಬಲ



೮೧. ದೆಹಲಿಯ ಆಲ್ಲಂಗೀರ ಬಾದಶಹರು ನೀರಿನ ಮೇಲೆ ನಮಾಜ ಮಾಡುವಾಗ ಶ್ರೀ ಶಿವಲಿಂಗೇಶ್ವರರು [illegible]



೮೨. ಬಾದಶಹನು ಮಠವನ್ನು ನಿರ್ಮಿಸಿ ಶಿವಲಿಂಗೇಶ್ವರರಿಗೆ ಅರ್ಪಿಸಿದ್ದು



೮೩. ಶ್ರೀ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಬಾಲ್ಯದ ಆಟದ ಸಮಯದಲ್ಲಿ ಹರಿದು ಬಂದ ಕಾಳಸರ್ಪವನ್ನು ಗಗನಕ್ಕೆ ತೂರಿದ ದೃಶ್ಯ

xiii) ಹುಬ್ಬಳ್ಳಿಯ ಮೂರು ಸಾವಿರಮಠದ ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಪುರಾಣ - ೧೯೬೮
(ಕವಿ ಡಾ. ಪುಟ್ಟರಾಜ ಕವಿ ಗವಾಯಿಗಳು)

ಈ ಪುರಾಣ ಗ್ರಂಥದಲ್ಲಿ ಎರಡು ಚಿತ್ರಗಳಿವೆ. ಅವು ಕಪ್ಪು-ಬಿಳುಪಿನಲ್ಲಿ ಮುದ್ರಿತವಾಗಿದ್ದು ಅದರ ಮೂಲ ಚಿತ್ರವು ಲಭ್ಯವಿರದೇ ಇರುವುದರಿಂದ ಆ ಚಿತ್ರದ ವರ್ಣಗಳ ಬಗ್ಗೆ ಇಲ್ಲಿ ಚರ್ಚಿಸಿಲ್ಲ.

ಚಿತ್ರ : ಹುಬ್ಬಳ್ಳಿ ಬಿಲ್ವವನದಲ್ಲಿ ಅಲ್ಲಮ ಪ್ರಭುದೇವರ ಹಾಗೂ ಶ್ರೀ ಗುರುಸಿದ್ಧೇಶ್ವರರ ಸಮಾಗಮ [೯೩] ಇಂತಹದೇ ಒಂದು ರೇಖಾ ಚಿತ್ರದ ಬಗ್ಗೆ ಈಗಾಗಲೇ ಇಂಕ್ ಮಾಧ್ಯಮದ ರೇಖಾಚಿತ್ರಗಳಲ್ಲಿ ಚರ್ಚಿಸಲಾಗಿದೆ. ಇಲ್ಲಿ ಸ್ವಲ್ಪ ಬದಲಾವಣೆಯನ್ನು ನೋಡಬಹುದು.

ಚಿತ್ರದಲ್ಲಿ ಆಲದಮರ ಅದರ ಸುತ್ತಲೂ ಸಾಧು ಹಾಗೂ ಕ್ರೂರ ಪ್ರಾಣಿಗಳಾದ. ಆಕಳು. ಹುಲಿ. ಜಿಂಕೆ. ಜೊತೆಯಾಗಿಯೇ ನಿರ್ಭೀತಿಯಿಂದ ಸಂಚರಿಸುತ್ತಿವೆ. ಹಿನ್ನೆಲೆಯಲ್ಲಿ ಕಾಡಿನ ವಿಶಾಲತೆಯನ್ನು ಸೂಚಿಸುವಂತೆ ದಟ್ಟವಾದ ಗಿಡ ಮರಗಳನ್ನು ಚಿತ್ರಿಸಿದ್ದು ವನವು ರುದ್ರರಮಣೀಯತೆಯನ್ನು ಹೊಂದಿದೆ. ದೂರದಲ್ಲಿ ಊರಿನ ಜನ. ಮರದ ಕೆಳಗೆ ಅಲ್ಲಮಪ್ರಭು ಹಾಗೂ ಗುರುಸಿದ್ಧೇಶ್ವರರ ಸಮಾಗಮನವನ್ನು ಕಂಡು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ದೂರದಲ್ಲಿದ್ದರೂ ಆ ಮುಖದಲ್ಲಿ ಈ ಭಾವನೆಗಳು ತೋರುವ ರೀತಿಯಲ್ಲಿ ಚಿಟ್ಟಿಯವರು ಚಿತ್ರಿಸಿದ್ದಾರೆ. ಇಬ್ಬರೂ ಮಹಾಸಿಯರ ಸಮಾಗಮ ಎರಡು ತೇಜೋಮೂರ್ತಿಗಳು ಒಂದಾದ ಬೆಳಕಿನಂತೆ ಪ್ರಜ್ವಲವಾಗಿವೆ. ಮೊದಲು ದೃಷ್ಟಿ ಆ ಮಹಾನೀಯರ ಮೇಲೆ ಹರಿದು ಕೊನೆಗೆ ಸುತ್ತಾಡಿ ದೂರದಲ್ಲಿರುವ ಜನರೊಂದಿಗೆ ಬೆರೆಯುವಂಥ ಸಂಯೋಜನೆ ಇದೆ. ವಿವರವಾದ ಮರದ. ಪ್ರಾಣಿಗಳ ರಚನೆ. ಒಟ್ಟಾರೆ ಅಲ್ಲಿ ಪ್ರಶಾಂತದ ಪರಿಣಾಮಬೀರಿದೆ. ಈ ಚಿತ್ರವನ್ನು ಗ್ರಂಥದ ೨೧ ನೇ ಪುಟದಲ್ಲಿ ನೋಡಬಹುದು.

ಚಿತ್ರ : ಕರ್ತೃ ಶ್ರೀ ಗುರುಸಿದ್ಧೇಶ್ವರರು ತೋಳದಿಂದ ಆಕಳ ಕರುವನ್ನು ಬಿಡಿಸಿ ಸಲುಹಿದ ಲೀಲೆ [೯೪]

"ದನ ಕಾಯುವ ಹುಡುಗರು ಅದೇ ಅಡವಿಯಲ್ಲಿ ಪಶುಗಳನ್ನು ಮೇಯಿಸುತ್ತಿರುವಾಗ. ಒಂದು ಆಕಳು ಕರುವನ್ನೀಯಲು ಒಂದು ತೋಳವು ಬಂದು ಕರುವನ್ನು ತೆಗೆದುಕೊಂಡು ಹೋಯಿತು. ದನಕಾಯುವ ಹುಡುಗರು ಬೆದರಿ ಚೀರಾಡಲು. ಹುಚ್ಚೀಶನು (ಗುರುಸಿದ್ಧೇಶ) ಗವಿಯಿಂದ ಹೊರಗೆ ಬಂದು ಈ ಘಟನೆಯನ್ನು ನೋಡಿ " ಎಲೈ ತೋಳವೆ ಬಾ ಎಂದು ಕರೆಯಲು. ತೋಳವು ಹುಚ್ಚೀಶನ ಸಮೀಪಕ್ಕೆ ಬಂದು ಆ ಕರುವನ್ನು ಬಿಟ್ಟು ಅವರು ಕೊಟ್ಟ ಕರ್ಜೂರವನ್ನು ತೆಗೆದುಕೊಂಡು ಹೋಯಿತು. ಕರುವಿಗೆ ಆದ ಗಾಯಕ್ಕೆ ಭಸ್ಮ ಹಚ್ಚಿ ಗುಣಪಡಿಸುತ್ತಿರುವುದು " [೯೫] ಈ ಸನ್ನಿವೇಶದ ಚಿತ್ರ.

ಚಿತ್ರದಲ್ಲಿ ಗುರುಸಿದ್ಧೇಶ್ವರರು ಕರುವಿಗೆ ಭಸ್ಮವನ್ನು ಹಚ್ಚುತ್ತಿದ್ದಾರೆ. ಅವರ ಹಿಂದೆ ತೋಳವು ತಿರುಗಿ ಕಾಡಿನೊಳಕ್ಕೆ ಹೋಗುತ್ತಿದೆ. ಚಿತ್ರದ ಹಿನ್ನೆಲೆಯಲ್ಲಿ ದನಕಾಯುವ ಹುಡುಗರು. ಅವರು ಗಾಬರಿಯಿಂದ ಕೈಮಾಡಿ ಚೀರುತ್ತಿರುವಂತಿದೆ.

---

೯೩. ಪುಟ್ಟರಾಜ ಕವಿ ಗವಾಯಿಗಳು : ಗುರುಸಿದ್ಧೇಶ್ವರ ಪುರಾಣ : ಪುಟ ೨೧
೯೪. ಪುಟ್ಟರಾಜ ಕವಿ ಗವಾಯಿಗಳು : ಗುರುಸಿದ್ಧೇಶ್ವರ ಪುರಾಣ : ಪುಟ ೩೯
೯೫. ಪುಟ್ಟರಾಜ ಕವಿ ಗವಾಯಿಗಳು : ಗುರುಸಿದ್ಧೇಶ್ವರ ಪುರಾಣ : ಪುಟ ೬೩-೬೪

ಅದರ ಹಿಂದೆ ತುಂಬಿದ ವನರಾಶಿ. ಗುರು ಸಿದ್ಧೇಶ್ವರ ಮುಖದಲ್ಲಿ ಕರುಣೆ. ಅನುಕಂಪ ಭಾವವಿದೆ. ಕರು ಗಾಬರಿಯಿಂದ ಬೆರಗುಗಣ್ಣಿನಿಂದ ಅವರನ್ನೇ ನೋಡುತ್ತಿದೆ. ಗಿಡದ ತುಂಬಾ ಪಕ್ಷಿಗಳು. ಗಿಡದ ವಿವರವಾದ ಚಿತ್ರಣ ಪ್ರತಿ. ಎಲೆ. ಬೇರುಗಳನ್ನು ಚಿತ್ರಿಸಿದ್ದಾರೆ. ಸಣ್ಣ ಗಿಡಗಳಲ್ಲಿ ಹೂವುಗಳನ್ನು ಚಿತ್ರಿಸಿದ್ದಾರೆ. ಚಿತ್ರದಲ್ಲಿ ದೃಶ್ಯಾಂತರವಿದೆ. ಈ ಚಿತ್ರವನ್ನು ಗ್ರಂಥದ ೩೯ ನೇ ಪುಟದಲ್ಲಿ ನೋಡಬಹುದಾಗಿದೆ.

xvii) ನಿಡಸೋಸಿ ಮಠದಲ್ಲಿಯ ಚಿತ್ರಗಳು

ಇಲ್ಲಿ ಎರಡು ಚಿತ್ರಗಳಿವೆ. ಆ ಚಿತ್ರಗಳು ಶ್ರೀಮಠದ ಆದ್ಯ ಶ್ರೀ ನಿಜಲಿಂಗೇಶ್ವರರ ಜನನ ಹಾಗೂ ಅವರ ತಂದೆ ತಾಯಿಗಳು ಇಷ್ಟಲಿಂಗ ನಿಷ್ಠೆ ತೋರಿಸಲಾಗಿದೆ. ಈ ಚಿತ್ರಗಳು ೩೦" X ೨೨" ಅಳತೆಯುವಿವೆ.

ಈ ಮಠದಲ್ಲಿ ಶ್ರೀ ನಿಜಲಿಂಗೇಶ್ವರ ಹಾಗೂ ಶಿವಲಿಂಗೇಶ್ವರ ಪರಂಪರೆಯನ್ನು ನೋಡುತ್ತೇವೆ. ಮೂಲ ಕರ್ತೃಗದ್ದುಗೆ ಶ್ರೀ ದುರದುಂಡೇಶ್ವರರದು. ಆದ್ದರಿಂದ ಈ ಚಿತ್ರಗಳು ಯಾವ ಕಾಲದ ಮಹನೀಯರವು ಎಂಬುವನ್ನು ಕೆಲವು ಉಲ್ಲೇಖಗಳಿಂದ ಹಾಗೂ ಆ ಚಿತ್ರದ ಮೇಲೆ ಬರೆದ ಹೆಸರುಗಳಿಂದ ತಿಳಿದುಕೊಳ್ಳಲು ಸಾಧ್ಯವಾಗಿದೆ. " ಶ್ರೀಮಠಕ್ಕೆ ಗದ್ದುಗೆಯನ್ನೇರುವ ಸಿದ್ಧಗುರುಗಳಲ್ಲಿ ಒಂದು ವೈಶಿಷ್ಟ್ಯವಿದೆ. ನಿಜಲಿಂಗೇಶ್ವರ ನಾಮದ ಒಂದು ಪರಂಪರೆ. ಶಿವಲಿಂಗೇಶ್ವರ ನಾಮದ ಇನ್ನೊಂದು ಪರಂಪರೆ. ನಿಜಲಿಂಗ ಶಿವಲಿಂಗ ತತ್ವದಲ್ಲಿ ಒಂದೇ ಆದರೂ ಈ ಮಠದ ಇತಿಹಾಸ ಪರಂಪರೆಯಲ್ಲಿ ಎರಡೂ ರೂಪಗಳಾಗಿ ಒಂದನ್ನೊಂದು ಸ್ವಾಗತಿಸುತ್ತ ಮುಂದುವರಿದಿರುವದೊಂದು ವೈಶಿಷ್ಟ್ಯ "[೯೬] ಎನ್ನುವಂತೆ. ಆ ಚಿತ್ರಗಳ ಮೇಲೆ ಮಹಾಸ್ವಾಮಿಗಳ ತಂದೆ ತಾಯಿಯರ ಹೆಸರನ್ನು ಸೂಚಿಸಿದ್ದರಿಂದ ಈ ಚಿತ್ರಗಳು ಆದ್ಯ ಶ್ರೀ ನಿಜಲಿಂಗೇಶ್ವರರವು ಎಂದು ಖಚಿತವಾಗಿದೆ.

ಚಿತ್ರ ೮೪ : ನಿಡಸೋಸಿ ಶ್ರೀ ನಿಜಲಿಂಗೇಶ್ವರ ಮಹಾಸ್ವಾಮಿಗಳವರ ತಂದೆ - ತಾಯಂದಿರಾದ ಪುಣ್ಯವಂತ ಶ್ರೀ ಶಿವಲಿಂಗಯ್ಯ ಲಿಂಗಮ್ಮನವರ ಇಷ್ಟಲಿಂಗ ನಿಷ್ಠೆ.[೯೭]

" ಆದ್ಯ ಶ್ರೀ ನಿಜಲಿಂಗೇಶ್ವರ ಮಹಾಸ್ವಾಮಿಗಳು ಶಿವಲಿಂಗಯ್ಯ ಹಾಗೂ ಲಿಂಗಮ್ಮ ಈ ದಂಪತಿಗಳ ಉದರದಲ್ಲಿ ಶಕೆ ೧೬೪೦ ರಲ್ಲಿ ಜನ್ಮ ತಳೆದರು."[೯೮] ಈ ಆಧಾರದ ಮೇಲೆ ಈ ಚಿತ್ರ ಆದ್ಯ ಶ್ರೀ ನಿಜಲಿಂಗೇಶ್ವರ ಮಹಾಸ್ವಾಮಿಗಳ ಚರಿತ್ರೆಗೆ ಸಂಬಂಧಿಸಿದ್ದವೆಂದು ಖಚಿತಪಡಿಸಿಕೊಳ್ಳಲಾಗಿದೆ.

ಈ ಚಿತ್ರದಲ್ಲಿ ಇಬ್ಬರೂ ದಂಪತಿಗಳು ಇಷ್ಟಲಿಂಗ ಪೂಜೆಯಲ್ಲಿ ಮಗ್ನರಾಗಿದ್ದಾರೆ. ಈ ಪೂಜೆಯಲ್ಲಿ ಬೇರೆ ಮನೆಯ ಜನರು ಭಾಗಿಯಾಗಿದ್ದಾರೆ. ಅವರ ಭಕ್ತಿ ಪೂಜೆಗೆ ಮೆಚ್ಚಿದ ಶಿವನು ಪ್ರತ್ಯಕ್ಷವಾದಂತೆ ಚಿತ್ರಿಸಿದ್ದಾರೆ. ಮನೆಯ ಗೂಡಿನಲ್ಲಿ ಗಣಪತಿ ಇದ್ದು ಗೋಡೆಯ ಮೇಲೆ ಚಿತ್ರ ಬಿಡಿಸಿದಂತಿದೆ. ಪೂಜಾ ಸಾಮಗ್ರಿಗಳನ್ನೆಲ್ಲ ವಿವರವಾಗಿ

---

೯೬. ಚಿತ್ರಗಳ ಕೆಳಗೆ ಹೀಗೆ ತಲೆಬರಹ ಕೊಡಲಾಗಿದೆ.

೯೭. ದಕ್ಷಿಣ ಮೂರ್ತಿ ಪುರಾಣಿಕ. ಗಂಗಾಧರ ವಾಲಿ (ಸಂ) : ಷಷ್ಟ್ಯಬ್ದಿ ಪೂರ್ತಿ ಹಾಗೂ ಪ್ರಥಮ ದ್ವಾದಶ ಪಟ್ಟ ಮಹೋತ್ಸವ ಸಂಸ್ಮರಣ ಗ್ರಂಥ : ಪುಟ ೧೭

೯೮. ದಕ್ಷಿಣ ಮೂರ್ತಿ ಪುರಾಣಿಕ. ಗಂಗಾಧರ ವಾಲಿ (ಸಂ) : ಷಷ್ಟ್ಯಬ್ದಿ ಪೂರ್ತಿ ಹಾಗೂ ಪ್ರಥಮ ದ್ವಾದಶ ಪಟ್ಟ ಮಹೋತ್ಸವ ಸಂಸ್ಮರಣ ಗ್ರಂಥ : ಪುಟ ೯

ಚಿತ್ರಿಸಿದ್ದಾರೆ. ಧೂಪದ ಹೊಗೆ ಮೊದಲು ಮಾಡಿ ಚಿತ್ರಿಸಿದ್ದಾರೆ. ಸೌಮ್ಯ ಹಾಗೂ ಉಜ್ವಲ ವರ್ಣಗಳ ಮೇಳಾಪವಿದೆ. ಆದರೂ ಪ್ರಶಾಂತ ವಾತಾವರಣವನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಪೂಜೆಗೈಯುತ್ತಿರುವವರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ಉಳಿದವರನ್ನು ಚಿತ್ರಿಸುವಲ್ಲಿ ಗೌಣತೆ ಕಂಡುಬರುತ್ತದೆ. ಪೂಜೆಯಲ್ಲಿ ಮಗ್ನತೆಯ ಭಾವ. ಶಿವನ ಮುಖದಲ್ಲಿ ಮಂದಸ್ಮಿತ ಪ್ರತ್ಯಕ್ಷವಾದಾಗಿನ ಆತನ ತೇಜಸ್ಸಿನ ಬೆಳಕನ್ನು ಸುತ್ತಲೂ ತೋರಿಸಿದ್ದಾರೆ. ಇದನ್ನು ೧೯೬೧ ರಲ್ಲಿ ರಚಿಸಿದ್ದಾರೆ.

ಚಿತ್ರ ೮೫ : ಶ್ರೀ ನಿಜಲಿಂಗೇಶ್ವರರ ತಾಯಂದಿರಾದ ಲಿಂಗಮ್ಮನವರ ದಿವ್ಯ ಸ್ವಪ್ನ.[೯೯]

ಚಿತ್ರದ ಮೇಲ್ಭಾಗದಲ್ಲಿ ಇಡೀ ಸ್ವರ್ಗದ ಕಲ್ಪನೆಯನ್ನೇ ಚಿತ್ರಿಸಿದ್ದಾರೆ. ಎಲ್ಲಾ ದೇವಗಣಗಳು ಹಿಮಾಲಯಾವೃತ ಕೈಲಾಸಪರ್ವತಗಳು. ಇವರ ಮಧ್ಯ ಶಿವಪಾರ್ವತಿಯರು ಇದ್ದಾರೆ. ಕೆಳಭಾಗದ ಚಿತ್ರದಲ್ಲಿ ಲಿಂಗಮ್ಮ ನಿದ್ದೆ ಮಾಡುತ್ತಿದ್ದಾಳೆ. ಆ ನಿದ್ರೆಯಲ್ಲಿ ಶಿವದೃಶ್ಯವನ್ನು ಕಂಡಂತೆ ಸಂತೋಷ ಅವಳ ಮುಖದ ಮೇಲಿದೆ. ಆ ಚಿತ್ರವನ್ನು ಅವಳು ನೋಡುತ್ತಿರುವಂತೆ ಆಕೆಯದೆ ಶಿರಭಾವ ಚಿತ್ರದ ಮಧ್ಯದಲ್ಲಿ ಚಿತ್ರಿಸಿದ್ದಾರೆ.

ಶಿವನ ಕರುಣೆಯಿಂದ ನಿಜಲಿಂಗೇಶ್ವರ ಜನಿಸಿದನೆಂಬಂತೆ ಶಿವನಿಂದ ಬಂದಂತಹ ದಿವ್ಯ ಕಿರಣಗಳು ಲಿಂಗಮ್ಮನ ಗರ್ಭವನ್ನು ಪ್ರವೇಶಿಸುತ್ತವೆ. ಆ ಕಿರಣಗಳ ಮಧ್ಯ ಮಗುವಿನ ರೂಪವನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಶಯ್ಯಾಗೃಹದ ಪ್ರತಿಯೊಂದು ವಸ್ತುವನ್ನು ಅಲಂಕಾರಿಕವಾಗಿ ಚಿತ್ರಿಸಿದ್ದಾರೆ. ಆ ಮಗುವೇ ಶ್ರೀ ನಿಜಲಿಂಗೇಶ್ವರ ಎಂಬ ಕಲ್ಪನೆ ಇದೆ. ಈ ಮೊದಲಿನ ಚಿತ್ರಕ್ಕಿಂತಲೂ ಇದು ಹೆಚ್ಚಿನ ಉಜ್ವಲ ವರ್ಣಗಳಿಂದ ವೈಭವಯುತವಾಗಿ ಮೂಡಿಬಂದಿದೆ. ಭಾರತೀಯ ಚಿತ್ರಕಲೆಯಂತೆ ಅಲಂಕಾರಿಕವಾಗಿ ಚಿತ್ರಿಸಿದ್ದಾರೆ. ಈ ಚಿತ್ರವನ್ನು ೧೯೬೧ ರಲ್ಲಿ ಚಿತ್ರಿಸಿದ್ದಾರೆ.

ಈ ಚಿತ್ರಗಳಲ್ಲಿ ಚೆಟ್ಟಿಯವರು ವಿಷಯಕ್ಕೆ ಸಂಬಂಧಿಸಿದ ವಿವರಣೆಯನ್ನೆಲ್ಲ ಶಾಬ್ದಿಕ ರೂಪದಲ್ಲಿ ಚಿತ್ರಮಯವಾಗಿ ಸೃಷ್ಟಿಸಿದ್ದಾರೆ. ವೀಕ್ಷಕನಿಗೆ ಎಲ್ಲಾ ವಿಷಯ ಒಂದರಲ್ಲೇ ಅರ್ಥವಾಗುವಂತೆ ಚಿತ್ರಿಸಿದ್ದಾರೆ. ಭಾರತೀಯ ಚಿತ್ರಶೈಲಿಯಂತೆ ಅಲಂಕಾರಿಕವಾಗಿ ವೈಭವೀಕರಿಸುವ ರೀತಿ ಇಲ್ಲಿದೆ. (ಅಧ್ಯಾಯ ಏಳರಲ್ಲಿಯ ೪೪ ನೇ ಚಿತ್ರವನ್ನು ನೋಡಿರಿ)

ಹನ್ನೆರಡನೇ ಶತಮಾನದ ಶ್ರೀ ಬಸವಣ್ಣನವರ ಅನುಯಾಯಿಗಳಲ್ಲಿ. ತತ್ವಜ್ಞಾನಿ. ಸಮಾಜ ಸುಧಾರಕಿ. ಸ್ವತಂತ್ರ ವಿಚಾರವಾದಿಯಾದ ಉಡುತಡಿಯ ಮಹಾದೇವಿಯಕ್ಕನೂ ಒಬ್ಬಳು. " ಭಕ್ತಸ್ಥಳದಿಂದ ಐಕ್ಯಳಾಗಿ ಜೀವನದಲ್ಲಿ ' ಶರಣಸತಿ ಲಿಂಗಪತಿ ' ಎಂಬುದನ್ನು ಸಿದ್ಧ ಮಾಡಿದ ಸಿದ್ಧ ಪುರುಷೆ "[೧೦೦] ಈ ಶಿವಶರಣೆಯ ಜೀವನಕ್ಕೆ ಸಂಭಂದಿಸಿದಂತೆ ನಾಲ್ಕು ಜಲವರ್ಣದ ಸಂಯೋಜನಾ ಚಿತ್ರಗಳನ್ನು ಚಿತ್ರಿಸಿದ್ದಾರೆ. ಚಿತ್ರಿಸಿದ ವರ್ಷ ೧೯೬೯. ಈ ಎಲ್ಲ ಚಿತ್ರಗಳನ್ನು ಗದುಗಿನ ಅಕ್ಕನ ಬಳಗದ ಕಟ್ಟಡದಲ್ಲಿ ನೋಡಬಹುದಾಗಿದೆ.

---

೯೯. ಡಾ. ಕುಣಕುಪ್ಪಿ ಕೊಟ್ಟೂರು ಬಸವಪ್ಪ : ಶ್ರೀ ಜಗದ್ಗುರು ಜಯದೇವ ದಿಗ್ವಿಜಯ. ಪುಟ ೧೧

೧೦೦. ಟಿ. ಹೆಚ್. ಎಮ್. ಸದಾಶಿವಯ್ಯನವರು : ಉಡುತಡಿಯ ಮಹಾದೇವಿಯಕ್ಕನವರ ಸಾಹಿತ್ಯ (ಪ್ರಸ್ತಾವನೆ)



೮೪. ನಿಡಸೋಸಿ ಆದ್ಯ ನಿಜಲಿಂಗೇಶ್ವರರ ತಂದೆ-ತಾಯಂದಿರಾದ ಪುಣ್ಯವಂತ ಶ್ರೀ ಶಿವಲಿಂಗಯ್ಯ-ಲಿಂಗಮ್ಮನವರು ಇಷ್ಟಲಿಂಗ ನಿಷ್ಠೆ

ಚಿತ್ರ ೮೬ : ಅಕ್ಕಮಹಾದೇವಿಯ ಜನನ [೧೦೧]

ಅಕ್ಕಮಹಾದೇವಿಯ " ತಂದೆಯಾದ ನಿರ್ಮಲ ತಾಯಿ ಸುಮತಿ " [೧೦೨] ಅತ್ಯಂತ ಸಂತೋಷದಲ್ಲಿದ್ದರೆ. ತಾಯಿ ಸುಮತಿ ಮಗು ಮಹಾದೇವಿಯನ್ನು ತನ್ನ ತೊಡೆಯಮೇಲೆ ಮಲಗಿಸಿಕೊಂಡಿದ್ದಾಳೆ. ಆ ಸಂದರ್ಭದಲ್ಲಿ ಅಲ್ಲಿಗೆ ಬಂದಂಥ ಆ ರಾಜ್ಯದ ರಾಣಿ ಹಾಗೂ ಗುರುಗಳು ಬಂದು ಆಶೀರ್ವದಿಸುತ್ತಿದ್ದಾರೆ. ಅಲ್ಲಿ ನೆರೆದಂಥ ಜನರೆಲ್ಲ ಧನ್ಯಭಾವದಿಂದ ಕೈಮುಗಿದಿದ್ದಾರೆ. ಮಗು ತನ್ನ ಆಟದಲ್ಲಿ ಮಗ್ನವಾಗಿದೆ.

ಚಿತ್ರದಲ್ಲಿ ಸೌಮ್ಯ ಹಾಗೂ ಉಗ್ರವರ್ಣಗಳ ಮೇಳವಿದೆ. ಕಣ್ಣಿಗೆ ತಂಪನ್ನೇ ನೀಡುವ ತಂತ್ರಗಾರಿಕೆ. ಆಕಾಲದ ಮನೆಯ ಒಳಗಣ ದೃಶ್ಯವನ್ನು ನೈಜವಾಗಿ ಚಿತ್ರಿಸಿದ್ದಾರೆ. ಮೇಲ್ಛಾವಣಿಯಲ್ಲಿರುವ ಕಂಭಗಳು ಅವುಗಳ ಮಧ್ಯ ಇಳಿಬಿಟ್ಟ ದೀಪಗಳು. ಆ ಕಾಲದ ನೆನಪನ್ನು ತಂದುಕೊಡುತ್ತವೆಯಲ್ಲದೆ ವೇಷಭೂಷಣಗಳಿಂದ ರಾಣಿ. ಪ್ರಜೆಗಳ ಅಂತರವನ್ನು ನೋಡಬಹುದಾಗಿದೆ. ಅವಕಾಶದಲ್ಲಿ ಅಚ್ಚುಕಟ್ಟಾಗಿ ಆಕೃತಿಗಳನ್ನು ಸಂಯೋಜಿಸಿದ ರೀತಿ ಆ ಆಕೃತಿಗಳ ಮುಖಭಾವ ಆ ಚಿತ್ರಕ್ಕೆ ಚಾಲನೆ ತಂದಿದೆ. ಅವರದೇ ಶೈಲಿಯ ಉದ್ದನೆಯ ಆಕೃತಿಗಳನ್ನು ಇಲ್ಲಿ ಕಾಣುತ್ತೇವೆ. ಚಿತ್ರದ ಅಳತೆ ೧' x ೨' ಇದೆ.

ಚಿತ್ರ ೮೭ : ಗುರುಲಿಂಗ ದೇವರ ಸಾನ್ನಿಧ್ಯದಲ್ಲಿ ವಿದ್ಯಾರ್ಜನೆ [೧೦೩]

ಚಿತ್ರದಲ್ಲಿ ಗುರುಲಿಂಗದೇವರು ವಿದ್ಯಾಭ್ಯಾಸವನ್ನು ಹೇಳಿಕೊಡುತ್ತಿದ್ದಾರೆ. ಅವರ ಎರಡು ಮಗ್ಗುಲಲ್ಲಿ ವಿದ್ಯಾರ್ಥಿಗಳು ಸಾಲಾಗಿ ಕುಳಿತಿದ್ದಾರೆ. ಗಂಡುಮಕ್ಕಳು ಹಾಗೂ ಹೆಣ್ಣುಮಕ್ಕಳು ಹಿನ್ನೆಲೆಯಲ್ಲಿ ಅನೇಕ ಹಿರಿಯ ವ್ಯಕ್ತಿಗಳು ನಿಂತಿದ್ದಾರೆ.

ಹೆಣ್ಣುಮಕ್ಕಳ ಸಾಲಿನಲ್ಲಿ ಕುಳಿತ ಹೆಣ್ಣುಮಗಳೊಬ್ಬಳು ಗುರುಗಳನ್ನು ಏನೋ ಪ್ರಶ್ನಿಸುತ್ತಿರುವಂತಿದೆ. ಇದರಿಂದ ಆಕೆಯು ಅಕ್ಕಮಹಾದೇವಿಯೆಂದು ಸುಲಭವಾಗಿ ಗುರುತಿಸಬಹುದು. ಅಲ್ಲದೆ ಆ ಕಾಲದಲ್ಲಿಯೂ ಈ ರೀತಿ ಗಂಡು-ಹೆಣ್ಣು ಕೂಡಿ ಕಲಿಯುವ ಪದ್ಧತಿ ಇತ್ತೆಂಬುದು ಈ ಚಿತ್ರದಿಂದ ಸ್ಪಷ್ಟವಾಗುತ್ತದೆ. ಆ ಕಾಲದ ಉಡುಗೆ ತೊಡುಗೆ. ತಾಡೋಲೆಗಳ ಮೇಲೆ ಬರೆಯುವ ಪದ್ಧತಿ. ಹಿನ್ನೆಲೆಯಲ್ಲಿ ದೀಪ ಎಲ್ಲವನ್ನು ವಿವರವಾಗಿ ಚಿತ್ರಿಸಿದ್ದಾರೆ. ಹಿತಮಿತವಾದ ಬಣ್ಣಗಳ ಬಳಕೆ. ಆಕೃತಿಗಳ ಉಬ್ಬು ತಗ್ಗುಗಳಿಗೆ ಅನ್ವಯವಾಗುವಂತೆ ನೆರಳು ಬೆಳಕು ಇಲ್ಲಿ ಕಾಣಬಹುದು. ಈ ಚಿತ್ರದ ಅಳತೆ ೨' x ೩' ಇದೆ.

ಚಿತ್ರ ೮೮ : ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನ್ನು ಅರಸುತ್ತ ಹೋಗುತ್ತಿರುವ ದೃಶ್ಯ [೧೦೪]

ಈ ಚಿತ್ರದ ವಿಶೇಷವೇನೆಂದರೆ ಅಕ್ಕಮಹಾದೇವಿಯನ್ನು ಶ್ವೇತಾಂಬರಿಯನ್ನಾಗಿ ಚಿತ್ರಿಸಿದ್ದಾರೆ. ಎಲ್ಲ ಚಿತ್ರಗಳಲ್ಲೂ ನಗ್ನ ರೂಪದಲ್ಲಿರುವ ಮಹಾದೇವಿ ಇಲ್ಲಿ ಮಾತ್ರ ವಸ್ತ್ರಧಾರಿ ಆಗಿದ್ದಾರೆ. ಇಲ್ಲಿಯೂ ಸಹಿತ ಕಾಡಿನಲ್ಲಿಯ

---

೧೦೧. ಚಿತ್ರದ ಕೆಳಗೆ ಹೀಗೆ ತಲೆಬರಹ ಕೊಡಲಾಗಿದೆ.

೧೦೨. ಟಿ. ಹೆಚ್. ಎಮ್. ಸದಾಶಿವಯ್ಯನವರು : ಉಡುತಡಿಯ ಮಹಾದೇವಿಯಕ್ಕನವರ ಸಾಹಿತ್ಯ : ಪುಟ ೨

೧೦೩. ಚಿತ್ರದ ತಲೆಬರಹ

೧೦೪. ಚಿತ್ರದ ತಲೆಬರಹ

ಪ್ರತಿಯೊಂದು ಪ್ರಾಣಿ. ಪಕ್ಷಿಗಳಿಗೆ ತನ್ನ ಚೆನ್ನಮಲ್ಲಿಕಾರ್ಜುನನ ಇರುವನ್ನು ಕೇಳುತ್ತಿದ್ದಾಳೆ. ಮೈಮೇಲೆ ರುದ್ರಾಕ್ಷಿಯ ಆಭರಣಗಳು. ಕೊರಳಲ್ಲಿ ಲಿಂಗ, ಮುಡಿಹರಡಿಕೊಂಡಿದೆ. ಅಲ್ಲಿಯೇ ಒಂದು ಮರದ ಮೇಲೆ ಕುಳಿತ ಗಿಳಿಗಳನ್ನು ಉದ್ದೇಶಿಸಿ ಬಲಗೈಮುಂದೆ ಮಾಡಿ ಚೆನ್ನಮಲ್ಲಿಕಾರ್ಜುನನನ್ನು ನೀವು ಕಾಣಿರೇ ಎಂದು ಪ್ರಶ್ನಿಸುವಂಥ ಭಾವವನ್ನು ಇಲ್ಲಿ ಕಾಣುತ್ತೇವೆ. ಸುತ್ತೆಲ್ಲ ನವಿಲು, ಜಿಂಕೆ, ಹಂಸ. ಕೋಗಿಲೆ. ಗಿಳಿ. ಮೊಲ ಎಲ್ಲ ಖಗ ಮೃಗಗಳು. ಹಿನ್ನೆಲೆಯಲ್ಲಿ ಆಕಾಶ. ವನ ಮರಗಳು. ಅಕ್ಕಮಹಾದೇವಿ ಇಲ್ಲಿ ಬಿಳಿಸೀರೆಯನ್ನು ಉಟ್ಟುಕೊಂಡಿದ್ದಾಳೆ ಇದು ಶಾಂತಿಯ ಸಂಕೇತವಾಗಿದೆ. ಆಕೆಯ ಸಾತ್ವಿಕ ರೂಪಕ್ಕೆ ಒಪ್ಪುಗೆಯಾಗಿದೆ. ದೂರಲ್ಲಿ ನೀರಝರಿ ಇದೆ. ಹತ್ತಿರದಲ್ಲಿ ಚಿಲಿಪಿಲಿ ಎಂದು ಹಾರುವ ಪಕ್ಷಿಗಳಿವೆ. ಒಟ್ಟಿನಲ್ಲಿ ಆ ವಚನದ ಸನ್ನಿವೇಶ ಇಲ್ಲಿ ನೈಜವಾಗಿ ಮೂಡಿಬಂದಿದೆ. ಅಕ್ಕಮಹಾದೇವಿಯನ್ನು ಈ ರೀತಿ ವಸ್ತ್ರಭರಿತಳಾಗಿ ಚಿತ್ರಿಸಿರುವುದು ಆ ಚಿತ್ರ ಬರೆಸಿದ ಭಕ್ತರ ಕೋರಿಕೆಯಾಗಿರಬಹುದೆಂದು ನನ್ನ ಅನಿಸಿಕೆ. ಚಿತ್ರದ ಅಳತೆ ೨' X ೩' ಇರುವುದು.

ಚಿತ್ರ ೮೯ : ಅಕ್ಕಮಹಾದೇವಿ ಲಿಂಗಾರ್ಚನೆಯಲ್ಲಿ ತೊಡಗಿರುವುದು [೧೦೫]

ಈ ಚಿತ್ರದಲ್ಲಿ ವಸ್ತ್ರಧಾರಿಯಾದ ಅಕ್ಕಮಹಾದೇವಿ ಲಿಂಗಾರ್ಚನೆಯಲ್ಲಿ ತೊಡಗಿದ್ದಾಳೆ. ಹಿನ್ನೆಲೆಯಲ್ಲಿ ದೊಡ್ಡದಾದ ಮರವಿದೆ. ಆಕೆಯ ತಲೆಯ ಹಿಂದೆ ಜ್ಞಾನದ ಪ್ರಭಾವಳಿಯಿದೆ. ಮೈತುಂಬ ವಿಭೂತಿ. ರುದ್ರಾಕ್ಷಿಯ ಸರಗಳಿವೆ. ಮುಡಿಯೆಲ್ಲ ಹರಡಿದೆ. ಧ್ಯಾನಾಸಕ್ತಳಾದ ಅಕ್ಕನ ಮುಖ ತೊಜೋಮಯವಾಗಿದೆ. ಕಣ್ಣುಗಳಲ್ಲಿ ಭಕ್ತಿಯೆ ತುಂಬಿದಂತಿದೆ. ಚಿತ್ರದಲ್ಲಿ ದೃಶ್ಯಾಂತರವಿದೆ. ಇಲ್ಲಿಯೂ ಚಿಗರೆ ಮುಂತಾದ ಪ್ರಾಣಿ ಪಕ್ಷಿಗಳನ್ನು ನೋಡಬಹುದು. ಪೂಜೆಗೆ ಕುಳಿತಂಥ ಭಂಗಿ ನೋಡುಗರ ಮನಸ್ಸು ಹಾಗೂ ಕಣ್ಣುಗಳನ್ನು ತಡೆದುನಿಲ್ಲಿಸುತ್ತದೆ. ಅತ್ಯಂತ ತೆಳುವಾದ ವರ್ಣಲೇಪನ ಮಹಾದೇವಿ ಬಿಳಿಸೀರೆಯುಟ್ಟರೂ. ಸಿರಿತನವನ್ನು ಹೆಚ್ಚಿಸಿದೆ. ಈ ಚಿತ್ರದ ಅಳತೆ ೨' X ೩' ಇದೆ.

ಈ ಎಲ್ಲ ಚಿತ್ರಗಳು ಅಕ್ಕಮಹಾದೇವಿಯ ಸಂಕ್ಷಿಪ್ತ ಜೀವನ ಚರಿತ್ರೆಯ ಚಿತ್ರಗಳೆಂದರೂ ಆಕೆಯ ಜೀವನದ ಅನೇಕ ವಿಷಯಗಳನ್ನು ತಿಳಿಸುವಂತೆ ನಿರೂಪಿಸಿದ್ದಾರೆ. ಇದು ಚೆಟ್ಟಿಯವರ ಕಲಾಕೃತಿ ನಿರೂಪಣೆಯ ವಿಶಿಷ್ಟತೆಯಾಗಿದೆ.

ಅಣ್ಣಿಗೇರಿಯ ನಂದೀಶ್ವರ ಮಠದಲ್ಲಿಯ ಎರಡು ಚಿತ್ರಗಳು

ಚಿತ್ರ ೯೦ : ಶ್ರೀ ನಿರಂಜನ ಜಗದ್ಗುರು ತೋಂಟದ ನಂದೀಶ್ವರ ಮಹಾಸ್ವಾಮಿಗಳವರು.

ಮಹಾಸ್ವಾಮಿಗಳು ಧ್ಯಾನಾಸಕ್ತರಾಗಿ ಕುಳಿತಿದ್ದಾರೆ. ಅವರ ಸುತ್ತಲೂ ಭಕ್ತರು. ಶಿಷ್ಯರು ಕೈಮುಗಿದು ನಿಂತಿದ್ದಾರೆ. ಸ್ವಾಮಿಗಳ ಹಿಂದೆ ಜ್ಞಾನದ ಪ್ರಭಾವಳಿ ಇದೆ. ಮುಖದಲ್ಲಿ ಸಾತ್ವಿಕ ಕಳೆ ಇದೆ. ಒಳಗಿನ ಆವರಣ ಸೌಮ್ಯವರ್ಣಗಳ ಲೇಪನವಿದೆ. ೧೯೭೮ ರಲ್ಲಿ ರಚಿಸಿದ್ದಾರೆ. ಅಳತೆ ೧೬" X ೨೨"

ಚಿತ್ರ ೯೧ : ಮಠದ ಮುಂದೆ ಕುಳಿತಿರುವ ಅರ್ಧನಾರೀಶ್ವರ ಸ್ವಾಮಿಗಳ ಚಿತ್ರ.

ಹಿನ್ನೆಲೆಯಲ್ಲಿ ಮಠದ ಚಿತ್ರರವಿದೆ. ಮುಂದೆ ಭಕ್ತಾದಿಗಳು. ಶಿಷ್ಯಂದಿರು ಭಕ್ತಿಯಿಂದ ಕೈಮುಗಿದು ಕುಳಿತಿರುವರು. ಸ್ವಾಮಿಗಳು ಅವರಿಗೆ ಆಶೀರ್ವಾದ ಮಾಡುತ್ತಿರುವರು. ಮುಂದೆಲ್ಲ ಪೂಜಾ ಸಾಮಗ್ರಿಗಳನ್ನು ನೈಜವಾಗಿ ಚಿತ್ರಿಸಿದ್ದಾರೆ. ಇದು ಸಹಿತ ಮೇಲೆ ಹೇಳಿದ ಚಿತ್ರದ ವರ್ಣಗಳನ್ನೆ ಹೊಂದಿದೆ. ಈ ಚಿತ್ರವನ್ನು ೧೯೭೯ ರಲ್ಲಿ ರಚಿಸಿದ್ದಾರೆ. ಅಳತೆ ೧೬" X ೨೨"

---

೧೦೫. ಚಿತ್ರದ ಶೀರ್ಷಿಕೆಯಲ್ಲಿ ಹೀಗೆ ಬರೆಯಲಾಗಿದೆ.



೮೬. ಅಕ್ಕಮಹಾದೇವಿಯ ಜನನ



೮೭. ಗುರುಲಿಂಗ ದೇವರ ಸಾನ್ನಿಧ್ಯದಲ್ಲಿ ಅಕ್ಕಮಹಾದೇವಿಯ [illegible]



೮೮. ಅಕ್ಕಮಹಾದೇವಿಯು ಚೆನ್ನಮಲ್ಲಿಕಾರ್ಜುನನ್ನು ಅರಸುತ್ತ ಹೋಗುತ್ತಿರುವ ದೃಶ್ಯ

೮೯. ಅಕ್ಕಮಹಾದೇವಿ ಲಿಂಗಾರ್ಚನೆಯಲ್ಲಿ ತೊಡಗಿರುವುದು



ಚಿತ್ರ : ಚೆನ್ನವೀರ ಸ್ವಾಮಿಗಳು ಲಿಂಗನಾಯಕನಹಳ್ಳಿ ರಾಣೆಬೆನ್ನೂರ

ಈ ಶರಣರ ಕುರಿತು ಜಲವರ್ಣದಲ್ಲಿ ಒಂದು ಸಂಯೋಜನಾ ಚಿತ್ರವನ್ನು ರಚಿಸಿದ್ದಾರೆ. ಇದು ಧಾರವಾಡದ ಮುರುಘಾಮಠದಲ್ಲಿದೆ. ಎಂದು ಚೆಟ್ಟಿಯವರೆ ಹೇಳಿಕೊಂಡಿದ್ದಾರೆ. ಆದರೆ ಅಲ್ಲಿ ಈಗ ಅದು ಉಪಲಬ್ಧವಿಲ್ಲ ನಮಗೆ ಸಿಕ್ಕಿರುವುದು ಕಪ್ಪು-ಬಿಳುಪು ಛಾಯಾ ಚಿತ್ರ. ಇದರಿಂದ ಈ ಚಿತ್ರದ ವಿವರಣೆಯನ್ನು ಮಾತ್ರ ಕೊಡಲು ಸಾಧ್ಯ ವರ್ಣಗಳ ಬಗ್ಗೆ ತಿಳಿಸಲು ಸಾಧ್ಯವಿಲ್ಲ.

ಈ ಚಿತ್ರದಲ್ಲಿ ಚೆನ್ನವೀರ ಸ್ವಾಮಿಗಳು ಮೈಲಾರದ ಬಸವಲಿಂಗ ಶರಣರಿಗೆ ವೀರಶೈವ ಧರ್ಮೋಪದೇಶವನ್ನು ತುಂಗಭದ್ರಾನದಿ ದಂಡೆಯ ಮೇಲೆ ಕುಳಿತು ಹೇಳುತ್ತಿದ್ದಾರೆ. ದೊಡ್ಡದಾದ ಆಲದ ಮರದ ಕೆಳಗೆ ಸ್ವಾಮಿಗಳು ಕುಳಿತಿದ್ದಾರೆ. ಬಸವಲಿಂಗ ಶರಣರು ಕೈಮುಗಿದು ಆ ವಿಷಯವನ್ನು ಧನ್ಯತೆಯ ಭಾವನೆಯಿಂದ ಆಲಿಸುತ್ತಿದ್ದಾರೆ. ಅದರಂತೆ ಅವರ ಇನ್ನೂ ಅನೇಕ ಅನುಯಾಯಿಗಳು ಅಲ್ಲಿ ಕುಳಿತಿದ್ದಾರೆ. ಹಿನ್ನಲೆಯಲ್ಲಿ ಮರಗಳು ಗುಡಿಸಲನ್ನು ಚಿತ್ರಿಸಿದ್ದಾರೆ. ಹತ್ತಿರದಲ್ಲೇ ನವಿಲು ಹಾವು ಇತರ ಪಕ್ಷಿಗಳು ಸಂತೋಷದಿಂದ ನಲಿದಾಡುತ್ತಿವೆ. ಈ ಚಿತ್ರವನ್ನು ೧೯೬೫ ರಲ್ಲಿ ರಚಿಸಿದ್ದಾರೆ.

ಹುಬ್ಬಳ್ಳಿಯ ಮೂರುಸಾವಿರಮಠ ಪ್ರಕಟಮಾಡಿದ ಶಿವಶರಣರ ಪುಸ್ತಕಗಳ ಮುಖಪುಟಗಳ ಚಿತ್ರಗಳು.

ಈ ಎಲ್ಲ ಚಿತ್ರಗಳನ್ನು ಜಲವರ್ಣದಲ್ಲೇ ರಚಿಸಿದ್ದಾರೆ.

ಚಿತ್ರ : ಡೋಹರ ಕಕ್ಕಯ್ಯ [೧೦೬]

ಈತನ ಬಗ್ಗೆ ಈಗಾಗಲೇ ರೇಖಾಚಿತ್ರದಲ್ಲಿ ವಿವರಿಸಲಾಗಿದೆ. ಇಲ್ಲಿ ವರ್ಣ ಚಿತ್ರದ ಬಗ್ಗೆ ಹೇಳಲಾಗಿದೆ. ಈ ಚಿತ್ರದಲ್ಲಿ ಕಕ್ಕಯ್ಯನು ಚರ್ಮಹದಮಾಡುತ್ತಿದ್ದಾನೆ. ಆತನ ಸುತ್ತ ಕಾಯಕಕ್ಕೆ ತಕ್ಕಂತಹ ಸಲಕರಣೆಗಳು ಹಿನ್ನಲೆಯಲ್ಲಿ ಆತನ ಗುಡಿಸಲು ಇದೆ. ಅಲ್ಲಿ ಆತನ ಹೆಂಡತಿ ನಿಂತಿದ್ದಾಳೆ. ಅದರ ಹಿಂದೆ ನಿಸರ್ಗ ಈ ರೀತಿ ದೃಶ್ಯಾಂತರವಿದೆ. ಕಕ್ಕಯ್ಯನ ಮುಖದಲ್ಲಿ ಶರಣ ಕಳೆ ಹಾಗೂ ಕಾಯಕದಲ್ಲಿ ಮಗ್ನತೆಯ ಭಾವವಿದೆ. ಚಪ್ಪರದ ಮೇಲೆ ಹೂಬಳ್ಳಿ. ಅಲ್ಲಲ್ಲಿ ನೆರಳು ಬೆಳಕಿನ ಸಂಯೋಜನೆ. ಸೌಮ್ಯ ಹಾಗೂ ಉಜ್ವಲವರ್ಣಗಳ ಮೇಳವಾದರೂ ಪ್ರಶಾಂತ ಹಾಗೂ ಚೈತನ್ಯಪೂರಕವಾದ ವಾತಾವರಣ ನಿರ್ಮಾಣ ಮಾಡಿದೆ.

ಚಿತ್ರ : ಉರಿಲಿಂಗದೇವ [೧೦೭]

ಈತನ ಬಗ್ಗೆ ರೇಖಾ ಚಿತ್ರದಲ್ಲಿ ವಿವರಿಸಲಾಗಿದೆ. ಇಲ್ಲಿ ವರ್ಣಚಿತ್ರದ ಬಗ್ಗೆ ವಿಶ್ಲೇಷಿಸಲಾಗಿದೆ. ಮಹಾರಾಷ್ಟ್ರದವರಾದ ಈ ಶರಣ ಕಾಂಧಾ ಪ್ರದೇಶದಿಂದ ಕನ್ನಡ ನಾಡಿಗೆ ಬಂದು ಸರಳಸುಂದರವಾಗಿ ವಚನಗಳನ್ನು ರಚಿಸಿ ಬಸವಾದಿ ಶರಣರ ಸಮಕಾಲೀನ ವಚನಕಾರರೂ. ಭಕ್ತಿ ಭಾವುಕರೂ. ಕ್ರಾಂತಿಕಾರರೂ. ವಿದ್ವಾಂಸರೂ ಹಾಗೂ ತಪಸ್ವಿಗಳು ಆಗಿದ್ದರು. ಚಿತ್ರದಲ್ಲಿ ಲಿಂಗದೇವ ಶಿವಲಿಂಗ ಪೂಜೆಯಲ್ಲಿ ನಿರತರಾಗಿದ್ದಾರೆ. ಗುಡಿಸಲಿನ ಸುತ್ತಲೂ

---

೧೦೬. ಟಿ. ನೀಲಾಂಬಿಕೆ : ಡೋಹರ ಕಕ್ಕಯ್ಯ : ಮುಖಪುಟ

೧೦೭. ಎಮ್. ಎಸ್. ಇಂಚಲ : ಉರಿಲಿಂಗದೇವ : ಮುಖಪುಟ

ಉರಿಹತ್ತಿದರೂ ಅದರ ಪರಿವೆಯೇ ಇಲ್ಲ. ಅಲ್ಲದೆ ಆ ಉರಿ ಅವರನ್ನು ಸುತ್ತುವರಿದರೂ ಅವರಿಗೆ ಸ್ವಲ್ಪವೂ ತಾಗದಂತೆ ಇದೆ. ಈ ದೃಶ್ಯನೋಡಿದ ಹೊರಗಿನ ಜನರ ಮುಖದಲ್ಲಿ ಆಶ್ಚರ್ಯ ಮತ್ತು ಗಾಬರಿಯ ಭಾವನೆ ಇದೆ. ಲಿಂಗದೇವರು ಮಾತ್ರ ವಿಚಲಿತಗೊಳ್ಳದೆ ಕುಳಿತಿದ್ದಾರೆ. ಈ ಎಲ್ಲ ಚಿತ್ರಗಳನ್ನು ಚೆಟ್ಟಿಯವರು ಭಾವನಾತ್ಮಕವಾಗಿ ಚಿತ್ರಿಸಿದ್ದಾರೆ.

ಚಿತ್ರ : ಸಕಲೇಶ ಮಾದರಸ [೧೧೮]

ಅರಸನಾದ ಮಾದರಸ ರಾಜಯೋಗದಿಂದ ತ್ಯಾಗಯೋಗಕ್ಕೆ ಸರಿದು. ಶಿವಯೋಗ ಸಾಧಿಸಿದವರಾಗಿದ್ದಾರೆ. ತಂದೆಯೂ ಕೂಡಾ ಶರಣ. ಅವರ ತಂದೆ ಕುರಿಕಾಯುವವನ ವೇಷಧರಿಸಿ ಬಂದು ಮಾದರಸರನ್ನು ಪರೀಕ್ಷಿಸಿದಾಗ ತಮ್ಮ ಧ್ಯಾನಯೋಗಕ್ಕೆ ಭಂಗ ತಂದರೆಂದು ಆತನನ್ನು ಬೈಯಲು ತಮ್ಮ ನಿಜರೂಪತೋರಿ ' ಮಲ್ಲಿಕಾರ್ಜುನನನ್ನು ಮನಸ್ಸಿನಿಂದ ಧ್ಯಾನಿಸಬೇಕೆ ಹೊರತು ಈ ರೀತಿ ಆಡಂಬರ ಸಲ್ಲದು ' ಎಂದು ಹೇಳಿ ಅವರನ್ನು ತಿದ್ದುವ ಸನ್ನಿವೇಶವಿದೆ.

ಚಿತ್ರದಲ್ಲಿ ಮಾದರಸ ಮರದ ಕೆಳಗೆ ಧ್ಯಾನಾಸಕ್ತರಾಗಿದ್ದಾರೆ. ಆತನ ತಂದೆ ಮಲ್ಲರಸ ಕುರುಬನ ವೇಷಧರಿಸಿ ಬಂದಿದ್ದಾನೆ. ಆತನ ಇಕ್ಕೆಲದಲ್ಲಿ ಕುರಿಗಳಿವೆ. ಕಂಬಳಿ. ಬಡಿಗೆ ಕಾಯಕಕ್ಕೆ ತಕ್ಕಂಥ ವೇಷಭೂಷಣ ಚಿತ್ರಿಸಿದ್ದಾರೆ. ಮಾದರಸರಿಗೆ ಬುದ್ಧಿಮಾತು ಹೇಳುವ ರೀತಿಯಲ್ಲಿ ನಿಂತಿದ್ದಾರೆ. ಅದೇ ಸೌಮ್ಯ ವರ್ಣಗಳ ಬಳಕೆ ನೋಡಬಹುದಾಗಿದೆ.

ಚಿತ್ರ : ಮಹಾಶಿವಶರಣೆ ನೆಲ್ಲೂರ ನೆಂಬೆಕ್ಕ [೧೧೯] ಚಿಕ್ಕವಳಿರುವಾಗಲೇ ಗಂಡನನ್ನು ಕಳೆದುಕೊಂಡ ನೆಂಬೆಕ್ಕ ಕೂಲಿಕುಂಬಳಿ ಮಾಡಿಬಂದ ಹಣದಲ್ಲಿ ಬಂದ ಜಂಗಮರಿಗೆ ನಿತ್ಯ ಉಣಿಸಿ ತೃಪ್ತಿಪಡುತ್ತಿದ್ದಳು. ' ಕಾಯಕವೇ ಕೈಲಾಸ ' ಎಲ್ಲವೂ ' ಶಿವಭಕ್ತಿ ಕೃಪೆ ' ಎಂದು ತಿಳಿದುಬಾಳಿದವಳು.

ಚಿತ್ರದಲ್ಲಿ ನೆಂಬೆಕ್ಕ ಇಷ್ಟಲಿಂಗ ಪೂಜೆಯನ್ನು ಮಾಡುತ್ತಿದ್ದಾಳೆ ಆಕೆಯ ಹಿಂದೆ ಶಿವ-ಪಾರ್ವತಿಯರನ್ನು ಚಿತ್ರಿಸಿದ್ದಾರೆ. ಅವಳ ಭಕ್ತಿಗೆ ಮೆಚ್ಚಿದ ಶಿವ-ಪಾರ್ವತಿಯರು ಆಕೆಗೆ ಆಶೀರ್ವಾದ ಮಾಡುತ್ತಿದ್ದಾರೆ. ಅವರ ಕೈಯಿಂದ ಕಿರಣಗಳು ಹೊರಟು ಅವಳ ತಲೆಯನ್ನು ಸ್ಪರ್ಶಿಸಿವೆ. ಸುತ್ತೆಲ್ಲ ಬೆಳಕು ಹಿನ್ನೆಲೆ ನಾಟಕೀಯ ರೀತಿಯಲ್ಲಿ ಚಿತ್ರಿತವಾಗಿದೆ.

ಚಿತ್ರ : ಶಿವಶರಣ ಹರಳಯ್ಯ [೧೨೦]

ವೃತ್ತಿಯಿಂದ ಸಮಗಾರನಾದರೂ ಪ್ರವೃತ್ತಿಯಿಂದ ಶಿವಶರಣ. ' ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ' ಎನ್ನುವಂತೆ ಒಮ್ಮೆ ಬಸವಣ್ಣನವರು ಶರಣು ಶರಣಾರ್ಥಿ ಎಂದು ಒಂದು ' ಶರಣು ' ಹೆಚ್ಚಾದ್ದರಿಂದ ದಂಪತಿಗಳು ಅವರ ಭಾರ ಇಳಿಸಿಕೊಳ್ಳಲು ತಮ್ಮ ಮೈ ಚರ್ಮದಿಂದ ಪಾದರಕ್ಷೆಮಾಡಿ ಬಸವನಿಗೆ ಅರ್ಪಿಸಿದಾಗ ಇವು ' ಕೂಡಲಸಂಗಮನಿಗೆ ಯೋಗ್ಯ ' ಎಂದು ಬಸವಣ್ಣನವರು ಹೇಳಿದರಂತೆ.

ಚಿತ್ರದಲ್ಲಿ ಹರಳಯ್ಯ ಗುಡಿಸಲಿನ ಹೊರಗೆ ಮರದ ಕೆಳಗೆ ಕುಳಿತು ಶಿವಲಿಂಗ ಪೂಜೆಯನ್ನು ಮಾಡಿಕೊಳ್ಳುತ್ತಿದ್ದಾನೆ.

---

೧೧೮. ಮಲ್ಲಿಕಾರ್ಜುನ ದೇವರು ತೆಲಸಂಗ : ಸಕಲೇಶ ಮಾದರಸ : ಮುಖಪುಟ

೧೧೯. ಚೆನ್ನವೀರಸ್ವಾಮಿ ಹಿರೇಮಠ : ಮಹಾ ಶಿವಶರಣೆ ನೆಲ್ಲೂರ ನೆಂಬೆಕ್ಕ : ಮುಖಪುಟ

೧೨೦. ಬಾಳೇಶ ಲಕ್ಷೆಟ್ಟಿ : ಶಿವಶರಣ ಹರಳಯ್ಯ : ಮುಖಪುಟ

ಆಪೂಜೆಯಲ್ಲೇ ಮಗ್ನನಾದಂತೆ ಶಾಂತಮಯವಾದ ಕಣ್ಣುಗಳು. ಹಿನ್ನೆಲೆಯಲ್ಲಿ ಗುಡಿಸಲುಗಳು. ಮರ. ಸೂರ್ಯೋದಯದ ಕಿರಣಗಳು. ಮುಖ. ಕೈ. ಕಾಲು ಹಾಗೂ ಪಾತ್ರೆಗಳ ಮೇಲೆ ಆ ಬೆಳಕನ್ನು (Highlight) ಚೆನ್ನಾಗಿ ಚಿತ್ರಿಸಿದ್ದಾರೆ. ಇದರಿಂದ ಚಿತ್ರದಲ್ಲಿ ಒಂದು ಜೀವಂತಿಕೆ ಇದೆ.

ಚಿತ್ರ : ಬಿಜ್ಜ ಮಹಾದೇವಿ [೧೧೧]

ಚಿಕ್ಕವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡು ವಿಧವೆಯಾಗಿದ್ದಳು. ಆದರೂ ಧೃತಿಗೆಡದೆ ರಾಟೆನೂಲುತ್ತ ಜೀವನ ನಡೆಸಿದ್ದಳು. ಬಿಜ್ಜಪುರದ ಈಕೆ ಕಾಯಕದಲ್ಲಿ ಕೈಲಾಸ ಕಂಡ ಮಹಾತಾಯಿ. ಶಿವನಿಗೆ ಸರ್ವಸ್ವವನ್ನೂ ಅರ್ಪಿಸಿ. ಆತನನ್ನೇ ಮಗುವಾಗಿ ಪಡೆದುಕೊಂಡವಳು.

ಚಿತ್ರದಲ್ಲಿ ಮಹಾದೇವಿ ರಾಟೆ ನೂಲುತ್ತಿದ್ದಾಳೆ. ಹಿನ್ನೆಲೆಯಲ್ಲಿ ಗುಡಿಸಲ ಬಾಗಿಲು. ಆಕೆ ತನ್ನ ಕಾಯಕದಲ್ಲಿ ತಲ್ಲೀನಳಾಗಿದ್ದಾಳೆ ಎನ್ನುವದನಷ್ಟೇ ಅಲ್ಲದೆ ಆಕೆಯ ಸಾತ್ವಿಕ ಜೀವನವನ್ನೇ ನಿರೂಪಿಸುವ ವ್ಯಕ್ತಿತ್ವದ ಅಭಿವ್ಯಕ್ತಿಯಾಗಿ ಚಿತ್ರಿಸಿದ್ದಾರೆ. ಮುಖದಲ್ಲಿ ಅಷ್ಟೇ ಸಾತ್ವಿಕಕಳೆ ಎಲ್ಲವೂ ಶಿವನದೆಂಬ ಮನೋಭಾವ ಇಲ್ಲಿ ವ್ಯಕ್ತವಾಗಿದೆ. ಉಜ್ವಲ ಹಾಗೂ ಸೌಮ್ಯ ವರ್ಣಗಳ ಮೇಳಾಪವಿದೆ.

ಚಿತ್ರ : ನುಲಿಯ ಚಂದಯ್ಯ [೧೧೨]

ಈತನ ಕಾಯಕ ಹುಲ್ಲನ್ನು ತಂದು ಹದಮಾಡಿ ಹಗ್ಗ ಕಣ್ಣಿಗಳನ್ನು ತಯಾರಿಸುವುದು. ಕೊರಳಲ್ಲಿಯ ಲಿಂಗ ನೀರಿನಲ್ಲಿ ಹರಿದು ಹೋದರೂ ಲೆಕ್ಕಿಸದೆ ಕಾಯಕದ ಕರೆಗೆ ಓಗೊಟ್ಟವನು. ಚಿತ್ರದಲ್ಲಿ ಚಂದಯನು ಹುಲ್ಲನ್ನು ಹದ ಮಾಡಿ ಕಾಲಬೆರಳಲ್ಲಿ ಸಿಕ್ಕಿಸಿ ಹಗ್ಗ ತಯಾರಿಸುತ್ತಿದ್ದಾನೆ. ಆತನ ಮುಖದಲ್ಲಿ ಕಾಯಕದ ತೃಪ್ತಿಭಾವವಿದೆ.. ಹಿನ್ನೆಲೆಯಲ್ಲಿ ದೇವಾಲಯ. ಗಿಡಗಳು. ಸೂರ್ಯೋದಯದ ಬೆಳಕು ಇದೆ. ಅಂದರೆ ಕಾಯಕದೊಂದಿಗೆ ಇವರ ದಿನ ಪ್ರಾರಂಭವಾಗುತ್ತದೆ ಎಂಬ ಸಂಕೇತವನ್ನು ವರ್ಣಗಳ ಯೋಜನೆಯಿಂದ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಚಿತ್ರದಲ್ಲಿ ದೃಶ್ಯಾಂತರವಿದೆ.

ಚಿತ್ರ : ಮೋಳಿಗೆಯ ಮಹಾದೇವಿ [೧೧೩]

ಈಗಾಗಲೇ ರೇಖಾಚಿತ್ರದಲ್ಲಿ ವಿವರಿಸಲಾಗಿದೆ. ಇಲ್ಲಿ ಅದೇ ವಿಷಯವಿದೆ. ಶಿವಗಣಂಗಳ ಬರುವಿನ ಸಂತೋಷದಲ್ಲಿ ರಂಗವಲ್ಲಿಯನ್ನು ಹಾಕುತ್ತಿದ್ದಾಳೆ. ಚಿತ್ರದಲ್ಲಿ ಗುಡಿಸಲ ಮುಂದೆ ಮಹಾದೇವಿ ನಿಷ್ಕಾಮ ಭಕ್ತಿಯಿಂದ ಹಸನ್ಮುಖಿಳಾಗಿ ರಂಗೋಲಿಯನ್ನು ಹಾಕುತ್ತಿದ್ದಾಳೆ. ಜೊತೆಗೆ ಬಣ್ಣ ಬಣ್ಣದ ರಂಗೋಲಿಗಳು ಸಹಿತ ಇವೆ. ಆಕೆಯ ಶುದ್ಧವಾದ ಬಿಳಿ ಉಡುಗೆ ಆಕೆಯ ಪರಿಶುದ್ಧವಾದ ಜೀವನದ ಸಂಕೇತದಂತೆ ಚಿತ್ರಿತವಾಗಿದೆ. ಹಣೆಯಲ್ಲಿ ವಿಭೂತಿ ಕೈ. ಕೊರಳಲ್ಲಿ ರುದ್ರಾಕ್ಷಿ ಹಿನ್ನೆಲೆಯ ಗುಡಿಸಲು ನೈಜವಾಗಿ ಚಿತ್ರಿತವಾಗಿದೆ. ಅದರಲ್ಲಿ ಅವಶ್ಯವಿದ್ದೆಡೆ ನೆರಳು ಬೆಳಕು ಹಿನ್ನೆಲೆಯಲ್ಲಿ ಮರದ ಜೊಡ್ಡೆ ಸುತ್ತಲೂ ಇರುವ ಉಜ್ವಲ ವರ್ಣಗಳ ಜೊತೆಗೆ ಉಡಿಗೆಯ ಬಿಳಿಬಣ್ಣ ಮೇಳವಾಗಿ ಚಿತ್ರಕ್ಕೆ ಸಿರಿತನ ತಂದಿದೆ.

---

೧೧೧. ಸುವರ್ಣಾ ವಾಲಿಶೆಟ್ಟಿ : ಬಿಜ್ಜಮಹಾದೇವಿ : ಮುಖಪುಟ

೧೧೨. ಎಸ್. ಎಸ್. ಭೂಸರೆಡ್ಡಿ : ನುಲಿಯ ಚಂದಯ್ಯ : ಮುಖಪುಟ

೧೧೩. ನಿಜಲಿಂಗಪ್ಪ ಕೊಪ್ಪಳ : ಮೋಳಿಗೆಯ ಮಹಾದೇವಿ : ಮುಖಪುಟ

ಚಿತ್ರ : ಮುಕ್ತಾಯಕ್ಕ [೧೧೪]

ಈಕೆಯ ಬಗ್ಗೆ ಈಗಾಗಲೇ ರೇಖಾ ಚಿತ್ರದಲ್ಲಿ ಚರ್ಚಿಸಲಾಗಿದೆ. ಆದರೆ ಇದು ವರ್ಣಚಿತ್ರ. ಸಹೋದರ ಪ್ರೇಮ ಆತನನ್ನೇ ಗುರುವನ್ನಾಗಿ ಮಾಡಿಕೊಂಡು ಶಿವಪಥವನ್ನರಿತವಳು. ಚಿತ್ರದಲ್ಲಿ ಶಿವಾಧೀನನಾದ ತನ್ನ ಅಣ್ಣನ ತಲೆಯನ್ನು ತೊಡೆಯಮೇಲಿರಿಸಿಕೊಂಡು ಮುಕ್ತಾಯಕ್ಕ ದುಃಖಿಸುತ್ತಿದ್ದಾಳೆ. ಅಲ್ಲಿಗೆ ಬಂದ ಅಲ್ಲಮನು ಆಕೆಯನ್ನು ಸಮಾಧಾನ ಪಡಿಸುತ್ತಿದ್ದಾನೆ. ಅಲ್ಲಮನ ಹಿಂದೆ ಜ್ಞಾನದ ಪ್ರಭಾವಳಿಯನ್ನು ಚಿತ್ರಿಸಿದ್ದಾರೆ. ತನಗಿನ್ನಾರು ಗತಿ ಎಂಬ ಭಾವದಲ್ಲಿ ಮುಕ್ತಾಯಕ್ಕ ಹಣೆಗೆ ಕೈಹಚ್ಚಿ ಕುಳಿತುಕೊಂಡಿದ್ದಾಳೆ. ಕರುಣೆಯ ರಸ ಅಭಿವ್ಯಕ್ತಿಸುವ ಚಿತ್ರವಾಗಿದೆ. ಸನ್ನಿವೇಶಕ್ಕೆ ತಕ್ಕಂತೆ ಸೌಮ್ಯವರ್ಣಗಳ ಬಳಕೆ ಇದೆ.

ಚಿತ್ರ : ಹಂಪೆಯ ಹರಿಹರ [೧೧೫]

ತನ್ನ ತನುಮನಧನ ಎಲ್ಲವೂ ಹಂಪೆಯ ವಿರೂಪಾಕ್ಷನಿಗೆ ಮೀಸಲು. ಬೇರೆ ದೇವರಿಗೆ ವಂದಿಸಲಾರೆ ಎಂಬದು ಹರಿಹರನ ಪ್ರತಿಜ್ಞೆ. ವಿರೂಪಾಕ್ಷನನ್ನು ಮೆಚ್ಚಿಸಲು ಕಾವ್ಯ ರಚಿಸಿದನು. ಶಿವಭಕ್ತಿ ಹರಿಹರನ ಕಾವ್ಯದ ಮೂಲ ಪ್ರೇರಣೆಯಾಗಿದೆ. ಚಿತ್ರದಲ್ಲಿ ಹರಿಹರನು ಮಂಟಪದ ಮಧ್ಯದಲ್ಲಿ ಕುಳಿತು ಕಾವ್ಯರಚನೆಯಲ್ಲಿ ಮಗ್ನನಾಗಿದ್ದಾನೆ. ಆತನ ಕಣ್ಣುಗಳು ವಿದ್ವತ್ಪೂರ್ಣತೆಯನ್ನು ಹೊರಸೂಸುತ್ತಿರುವಂತಿವೆ. ಅಷ್ಟೇ ಶಾಂತಭಾವನೆ ಮೈಯೆಲ್ಲಾ ಭಸ್ಮವನ್ನು ಧರಿಸಿಕೊಂಡ ಹರಿಹರನ ರೂಪ ವಿರೂಪಾಕ್ಷನ ಭಕ್ತಿಯ ಪ್ರತೀಕದಂತಿದೆ. ಚಪ್ಪಟೆಯಾದ ವರ್ಣಲೇಪನವಿದೆ.

ಚಿತ್ರ : ಮೂರುಸಾವಿರ ಮಠದ ಕರ್ತೃ ಗುರುಸಿದ್ಧೇಶ್ವರರು [೧೧೬]

ತಮ್ಮಷ್ಟಕ್ಕೆ ಮಂತ್ರ ಹೇಳುತ್ತ ನಗುತ್ತ ಭಜನೆ ಮಾಡುತ್ತ ಇದ್ದ ಆತನನ್ನು 'ಪೂಬಳ್ಳಿ' (ಈಗಿನ ಹುಬ್ಬಳ್ಳಿ)ಯ ಜನ ಹುಚ್ಚಯೋಗಿ ಎಂದೇ ಕರೆಯುತ್ತಿದ್ದರು.ಅಂತಹ ಜನರಿಗೆ ಬಾಳುವ ಮಾರ್ಗವನ್ನು ತೋರಿಸಿ ಒಳ್ಳೆಯ ನಡತೆಯನ್ನು ಬಿತ್ತುತ್ತಿದ್ದರು. ಇವರು ಅಲ್ಲಮಪ್ರಭುಗಳಿಗೆ ಸರಿಸಮಾನರು. ಚಿತ್ರದಲ್ಲಿ ಗುರುಸಿದ್ಧೇಶ್ವರರು ಒಂದು ಮರದ ಕೆಳಗೆ ಧ್ಯಾನಾಸಕ್ತರಾಗಿ ಕುಳಿತಿದ್ದಾರೆ. ಹಿನ್ನೆಲೆಯಲ್ಲಿ ನಿಸರ್ಗ. ಅವರ ಕುಟೀರವಿದೆ. ಪ್ರಾಪಂಚಿಕದ ಹಂಗುದೊರೆದ ಪಾರಮಾರ್ಥಿಕ ಶರೀರದ ತೇಜಸ್ಸು. ಸಾತ್ವಿಕ ಕಳೆ ಕಣ್ಣಿನಲ್ಲಿ ಶಾಂತಿಯ ಸಂಕೇತ. ಅವರ ತಲೆಯ ಹಿಂದೆ ಜ್ಞಾನದ ಪ್ರಭಾವಳಿಯನ್ನು ಚಿತ್ರಿಸಿದ್ದಾರೆ. ಹೀಗೆ ಎಲ್ಲ ಗುಣಗಳನ್ನು ಸ್ಫುರಿಸುವ ವರ್ಣ ಮೇಳವಿದೆ.

ಚಿತ್ರ : ಸರ್ಪಭೂಷಣ ಶಿವಯೋಗಿಗಳು [೧೧೭]

ಚಿಕ್ಕಂದಿನಲ್ಲಿಯೇ ದೇವರನ್ನು ಕಾಣುವ ಹಂಬಲಹೊಂದಿದ ಸಪ್ಪಣ್ಣ ಒಮ್ಮೆ ಶಿವಧ್ಯಾನದಲ್ಲಿ ಮುಳುಗಿದಾಗ ಸರ್ಪ ಆತನನ್ನು ಸುತ್ತುವರಿದು ಏನೂಮಾಡದೆ ಹಾಗೇ ಹೋಯಿತು. ಇದನ್ನು ಕಂಡ ಮಠದ ಸ್ವಾಮಿಗಳು ಆತನಿಗೆ

---

೧೧೪. ಎಚ್. ಎಸ್. ಮುಕ್ತಾಯಕ್ಕ : ಮುಕ್ತಾಯಕ್ಕ : ಮುಖಪುಟ

೧೧೫. ಬಸವರಾಜ ಮಲಶೆಟ್ಟಿ : ಹಂಪೆಯ ಹರಿಹರ : ಮುಖಪುಟ

೧೧೬. ಶ್ರೀಮತಿ ಶಶಿಕಲಾ ವಸ್ತ್ರದ : ಮೂರುಸಾವಿರ ಮಠದ ಕರ್ತೃ ಗುರುಸಿದ್ಧೇಶ್ವರರು : ಮುಖಪುಟ

೧೧೭. ಬಾಳೇಶ ಲಕ್ಷೆಟ್ಟಿ : ಸರ್ಪಭೂಷಣ ಶಿವಯೋಗಿ : ಮುಖಪುಟ

ಸರ್ಪಭೂಷಣ ಎಂದು ಕರೆದರು. ' ವೇದಾಂತ ಶಿಖಾರತ್ನ ಪ್ರಕಾಶಿಕೆ '. ಸಂಸ್ಕೃತದಲ್ಲಿ ' ಜ್ಞಾನಶತಕ ಬರೆದವರು ' ಶಿವನನ್ನು ಒಲಿಸಿಕೊಂಡ ಅನುಭಾವ ಮೂರ್ತಿ ಶ್ರೀ ಸರ್ಪಭೂಷಣ ಶಿವಯೋಗಿಗಳು.

ಚಿತ್ರದಲ್ಲಿ ಅನುಭಾವದ ಮೂರ್ತಿಯಂತೆಯೇ ಚಿತ್ರಿಸಿದ್ದಾರೆ. ಒಂದು ಮರದ ಕೆಳಗೆ ಅಭಯ ಹಸ್ತದೊಂದಿಗೆ ನಿಂತಿದ್ದಾರೆ. ಹಿನ್ನೆಲೆಯಲ್ಲಿ ಊರಿನ ದೃಶ್ಯವಿದೆ. ಚಿತ್ರದಲ್ಲಿ ದೃಶ್ಯಾಂತರವಿದೆ. ದೂರದ ಮರಗಳನ್ನು ದಟ್ಟಛಾಯೆ (mass) ಆಗಿ ಚಿತ್ರಿಸಿದ್ದಾರೆ. ಸನಿಹದಲ್ಲಿಯ ಗಿಡಗಳಲ್ಲಿ ಹೂವು ಎಲೆಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ಸೌಮ್ಯ ವರ್ಣಗಳು ಪರಿಣಾಮಕಾರಿಯಾಗಿ ಬಳಕೆಯಾಗಿವೆ.

ಚಿತ್ರ : ಮೋಳಿಗೆಯ ಮಾರಯ್ಯ [೧೧೮]

ಮಹಾದೇವ ಅರಸ ಗಂಗಾದೇವಿ ಅರಸಿ ಮೋಳಿಗೆಯ (ಕಟ್ಟಿಗೆಯ) ಕಾಯಕವನ್ನು ಮಾಡಿ ಕಲ್ಯಾಣದಲ್ಲಿ ನೆಲಸಿದರು. ಈ ದಂಪತಿಗಳು ಮಾರಯ್ಯ ಮಹಾದೇವಿಯಾದರು. ಈ ದಂಪತಿಗಳು ಐಹಿಕ. ಪಾರಲೌಕಿಕ ಜೀವನದಲ್ಲಿ ಒಂದಾಗಿ ನಡೆದು ದಿವ್ಯಾನುಭಾವದಲ್ಲಿ ನಿಂದು ಸರ್ವಾಂಗದ ನಿಲುವನ್ನು ಪಡೆದರು. ಚಿತ್ರದಲ್ಲಿ ಮಾರಯ್ಯ ಕಾಡಿನಿಂದ ಕಟ್ಟಿಗೆಯನ್ನು ಕಡಿದು ಕಟ್ಟಿಗೆಯನ್ನು ತಲೆಯ ಮೇಲೆ ಇಟ್ಟುಕೊಂಡು ಶಿವಧ್ಯಾನದಲ್ಲಿ ಬರುತ್ತಿರುವಂತೆ ಮುಖಭಾವ. ಬರಿಗಾಲಲ್ಲೇ ನಡೆದು ಹೋಗುತ್ತಿದ್ದಾರೆ. ಚಿತ್ರದಲ್ಲಿ ದೃಶ್ಯಾಂತರವಿದೆ. ಹಿನ್ನೆಲೆಯಲ್ಲಿ ವನಸಿರಿಯ ವೈಭವವಿದೆ. ಮಧ್ಯದಲ್ಲಿ ಕಾಲುದಾರಿ ಸೌಮ್ಯವರ್ಣಗಳನ್ನೇ ಇಲ್ಲಿ ಹೆಚ್ಚಾಗಿ ಬಳಸಿದ್ದಾರೆ. ಶುದ್ಧ ಕಾಯಕ ಶ್ವೇತವರ್ಣದ ವೇಷಭೂಷಣ ನೊಸಲಿಗೆ ವಿಭೂತಿ. ಕೊರಳಲ್ಲಿ ರುದ್ರಾಕ್ಷಿ. ಶರಣ ಸಂಸ್ಕೃತಿಯ ಪ್ರತೀಕವಾಗಿದೆ.

ಚಿತ್ರ : ಹಾವಿನಹಾಳ ಕಲ್ಲಯ್ಯ [೧೧೯]

ಈತ ಮಹಾಶಿವಭಕ್ತ ತಂದೆ ಆತನಿಗೆ ದೇವಾಲಯಕ್ಕೆ ಹೋಗುವದಕ್ಕೆ ನಿಷೇಧಿಸಿದನು. ಆಗ ಕಲ್ಲಯ್ಯ ಲೌಕಿಕದ ತಂದೆಯನ್ನು ತೊರೆದು ಲೋಕಗಳ ತಂದೆಗೆ ಮೊರೆಹೋದನು. ಈ ಧರೆಗೆ ತನ್ನನ್ನು ತಂದ ತಂದೆ ನೀನು ಅದಕ್ಕೆ ನಿನಗೇ ಅರ್ಪಿತ ಎಂದು ತನ್ನ ಕೈಯಲ್ಲಿಯ ಚೂರಿಯಿಂದ ತನ್ನ ಹೊಟ್ಟೆಯನ್ನು ತಿವಿದುಕೊಳ್ಳುವ ದೃಶ್ಯ.

ಚಿತ್ರದಲ್ಲಿ ಶಿವದೇವಾಲಯವಿದೆ. ಕಲ್ಲಯ್ಯ ಶಿವನನ್ನು ಬಾಚಿ ತಬ್ಬಿಕೊಂಡಿದ್ದಾನೆ. ಹೊಟ್ಟೆಯಿಂದ ರಕ್ತಧಾರಾಕಾರವಾಗಿ ಸುರಿಯುತ್ತಿದೆ. ಎಡಗೈಯಲ್ಲಿ ಚೂರಿ ಇದೆ. ಬುಟ್ಟಿಯಲ್ಲಿ ಶಿವನನ್ನು ಪೂಜಿಸಲು ತಂದ ಹೂವುಗಳಿವೆ. ಅಷ್ಟೆಲ್ಲ ರಕ್ತ ಹರಿದರೂ ಕಲ್ಲಯ್ಯ ದೃತಿಗೆಡದೆ ಶಾಂತ ಚಿತ್ತನಾಗಿ ಶಿವನನ್ನು ಧ್ಯಾನಿಸುವಂತೆ ಇದ್ದಾನೆ. ಇಲ್ಲಿ ಶರಣರು ತಮ್ಮನ್ನು ಧ್ಯಾನಿಸುವಂತೆ ಇದ್ದಾನೆ. ಇಲ್ಲಿ ಶರಣರು ತಮ್ಮನ್ನು ಶಿವಲಿಂಗಕ್ಕೆ ಸಂಪೂರ್ಣವಾಗಿ ಅರ್ಪಿಸಿಕೊಂಡಂತ ಭಾವನೆ ಅಭಿವ್ಯಕ್ತವಾಗಿದೆ. ಹಿನ್ನೆಲೆಯಲ್ಲಿ ಶಿವಬೆಳಗು ತುಂಬಿಕೊಂಡು ಜ್ಞಾನದ ಬೆಳಕು ಹರಡಿದಂತಿದೆ. ಉಜ್ವಲ ಹಾಗೂ ಸೌಮ್ಯ ವರ್ಣಗಳ ಮೇಳಾಪವಿದೆ.

---

೧೧೮. ದೇವೆಂದ್ರಕುಮಾರ ಹಕಾರಿ : ಮೋಳಿಗೆಯ ಮಾರಯ್ಯ : ಮುಖಪುಟ

೧೧೯. ಸಿಂ. ಪಿ. ಲಿಂಗಣ್ಣ : ಹಾವಿನಾಳ ಕಲ್ಲಯ್ಯ : ಮುಖಪುಟ

ಚಿತ್ರ : ಕಾರಿಕಾಲಮ್ಮ[೧೨೦]

ಈಕೆಯ ಶಿವಭಕ್ತಿ ಸತಿಧರ್ಮದ ಹಿರಿಮೆ. ವ್ರತನಿಷ್ಠೆ ಸುಸ್ಮರಣೀಯವಾದದು. ತನ್ನ ಪವಿತ್ರ ಜೀವನದಿಂದ ಪರಮಾತ್ಮನನ್ನು ಒಲಿಸಿಕೊಂಡ ಆದರ್ಶ ಶಿವಶರಣೆಯಾಗಿದ್ದಾಳೆ. ಚಿತ್ರದಲ್ಲಿ ಮಹಾಸಾಧ್ವಿ ಸ್ವರ್ಗ ಸೇರಬಯಸಿದ ಸಂದರ್ಭವಿದೆ. ಶಿವನ ಆಜ್ಞೆಯಿಂದ ಅದಕ್ಕಾಗಿ ಸಿದ್ಧಳಾದಳು. " ಸ್ವರ್ಗದ ದಾರಿ ದಯಾಸಾಗರನ ದಿನಚರಿಯ ದಾರಿ ಶಿವಶರಣರು ಸಾಧುಸಿದ್ಧರು. ಸಂತರುಗಳ ಸತತ ಸಂಚಾರದ ಶುದ್ಧ ದಾರಿ. ಆ ಹರನ ಹೆದ್ದಾರಿಯಲ್ಲಿ ಹಿರಿಯ ಶರಣರ ಹೆಜ್ಜೆ ಮೂಡಿದೆ " ಆದ್ದರಿಂದ ತನ್ನ ಅಡಿಯಿಂದ ಅದನ್ನು ಅಪವಿತ್ರಗೊಳಿಸಬಾರದೆಂದು ತನ್ನಲ್ಲಿಯ ಶಿವಶಕ್ತಿಯಿಂದ ಕೈಯನ್ನು ಕೆಳಕ್ಕೆ ಊರಿ ಕಾಲು ನೆಲಕ್ಕೆ ಮುಟ್ಟದಂತೆ ನಡೆದು ಸ್ವರ್ಗ ಸೇರಿದ ಮಹಾಶರಣೆ ಅದೇ ರೀತಿಯಲ್ಲಿ ಚಿತ್ರಿಸಿದ್ದಾರೆ. ದಿಗಂತದಲ್ಲಿ ಶಿವನು ಪ್ರತ್ಯಕ್ಷನಾಗಿ ಆಕೆಗೆ ಆಶೀರ್ವದಿಸುತ್ತಿದ್ದಾನೆ. ಆಕೆಯ ಮುಖದಲ್ಲಿ ಭಕ್ತಿಯ ಭಾವವಿದೆ. ಶ್ವೇತವರ್ಣ ಸಾತ್ವಿಕ. ಪರಿಶುದ್ಧ ಸಂಕೇತವಾಗಿದೆ.

ಚಿತ್ರ : ಮಹಾಕವಿ ರಾಘವಾಂಕ[೧೨೧]

ರಾಘವಾಂಕನು ಶಿವಕವಿ ಹರಿಹರ ದೇವನನ್ನು ಗುರುವಾಗಿ ಸ್ವೀಕರಿಸಿದವನು. ಶೈವ ಧರ್ಮದವನಾದ ಈತನು ಶರಣರನ್ನು ಕುರಿತ ಗ್ರಂಥಗಳ ರಚನೆ ಮಾಡಿದ. ಷಟ್ಪದಿ ಸಾಹಿತ್ಯದ ಸ್ಥಾಪನಾಚಾರ್ಯನಾದ ಈತನು ಕರುಣ. ವೀರ. ಭಕ್ತಿ ರಸಗಳಿಂದ ತುಂಬಿದ ಕಾವ್ಯಗಳ ರಚನೆ ಮಾಡಿದನು. ಸತ್ಯ. ಸ್ವಮತನಿಷ್ಠ ಪ್ರೇಮ. ಲೋಕೋಪಕಾರ ಮೊದಲಾದ ತತ್ವಗಳನ್ನು ತಿಳಿಯಾದ ಭಾಷೆಯಲ್ಲಿ ಕಾವ್ಯದ ಮೂಲಕ ತಿಳಿಸಿದ್ದಾನೆ. ಆ ಎಲ್ಲ ಭಾವನೆಗಳನ್ನೊಳಗೊಂಡ ಇದೊಂದು ಗುರು ಶಿಷ್ಯರ ಅಪೂರ್ವ ಚಿತ್ರವಾಗಿದೆ. ಗುರುವೇ ಸರ್ವಸ್ವ ಎನ್ನುವ ರೀತಿಯಲ್ಲಿ ರಾಘವಾಂಕ ಆತನ ಅಜ್ಞೆಗೆ ಸಿದ್ಧನಾಗಿರವಂಥ ಭಾವನೆ ಈ ಚಿತ್ರದಲ್ಲಿ ಮೂಡಿ ಬಂದಿದೆ.

ಚಿತ್ರ : ಶರಣ ಅಜಗಣ್ಣ[೧೨೨]

ಕಾಯಕವೇ ಕೈಲಾಸವೆಂದು ಹೇಳಿ ದುಡಿಮೆಯ ಮಹತ್ವವನ್ನು ತಿಳಿಸಿಕೊಟ್ಟು ಶರಣ. ಕಾಸಿ ಕಮ್ಮಾರನಾದ. ಜೀಸಿ ಮಡಿವಾಳನಾದ ಹಾಸನಿಕ್ಕಿ ಸಾಲಿಗನಾದ ಎಂದು ತಿಳಿಸಿ ಪ್ರತಿಯೊಬ್ಬರು ದುಡಿದು ತಿನ್ನಬೇಕು. ಎನ್ನುವ ಧ್ಯೇಯವನ್ನು ಹೊಂದಿದವನು. ಅಜಗಣ್ಣ ಮುಕ್ತಾಯಕ್ಕ ಇಬ್ಬರು ಅಣ್ಣ ತಂಗಿಯರು. ಅಧ್ಯಾತ್ಮ ಚಿಂತಕರಾಗಿದ್ದರು.

ಚಿತ್ರದಲ್ಲಿ ಅಣ್ಣನ ಶವವನ್ನು ಕಂಡು ಶೋಕಮಾಡದೇ ಶಿವಯೋಗ ತತ್ವವೆಂಬ ರತ್ನವನ್ನೊಳಗೊಂಡ ಗುರುವಾದ ಅಣ್ಣನ ಅಗಲಿಕೆಗಾಗಿ ಶೋಕ ಮಾಡಿದಳು. ಆಧ್ಯಾತ್ಮಿಕ ನೆರವು ತಪ್ಪಿದ್ದಕ್ಕಾಗಿ ದುಃಖಿಸುತ್ತಿರುವಂತೆ ಚಿತ್ರಿಸಿದ್ದಾನೆ. ಅಲ್ಲಿಗೆ ಆಗಮಿಸಿದ ಪ್ರಭುದೇವರು ಅವಳಿಗೆ ಸಮಾಧಾನ ಹೇಳುತ್ತಿದ್ದಾರೆ. ಕರುಣರಸ. ಸೌಮ್ಯವರ್ಣಗಳ ಲೇಪನದಿಂದ ಚಿತ್ರ ಪರಿಣಾಮಕಾರಿಯಾಗಿ ಮೂಡಿಬಂದಿದೆ.

---

೧೨೦. ಎಸ್. ಪಿ. ಶಹಾಪೂರಮಠ : ಕಾರಿಕಾಲಮ್ಮ : ಮುಖಪುಟ

೧೨೧. ಮಾರುತಿ ಹ. ಒಡೆಯರ : ಮಹಾಕವಿ ರಾಘವಾಂಕ : ಮುಖಪುಟ

೧೨೨. ಎಮ್. ಎಸ್. ವಾಲಿ : ಶರಣ ಅಜಗಣ್ಣ : ಮುಖಪುಟ

ಚಿತ್ರ : ಮರುಳ ಶಂಕರ ದೇವರು [೧೨೩]

ಇವರು ಅನುಸರಿಸಿದ ಬದುಕಿನ ನೀತಿ ನಿರ್ಮಲ ಧರ್ಮದ ರೀತಿ. ಶರಣರು ಪರೋಪಕಾರಿಗಳು. ಸಕಲರಿಗೆ ಲೇಸ ಬಯಸುವವರು ಸೇವೆ ಮಾಡುವುದೇ ಪರಮಧರ್ಮ ಎಂದು ತಿಳಿದು ಇವರು ಹನ್ನೆರಡು ವರ್ಷಗಳ ಸುದೀರ್ಘ ಕಾಲ ಮಹಾಮನೆಯಲ್ಲಿ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

ಚಿತ್ರದಲ್ಲಿ ವಚನ ರಚನೆಯಲ್ಲಿ ಮಗ್ನರಾಗಿದ್ದಾರೆ. ಪಕ್ಕದಲ್ಲಿ ಅನೇಕ ವಚನಗಳನ್ನು ರಚಿಸಿ ಇಟ್ಟಿದ್ದಾರೆ. ಸುಮರ್ಪಣೆಯ ಮನೋಭಾವವಿದೆ.

ಚಿತ್ರ : ಗಣದಾಸಿ ವೀರಣ್ಣ [೧೨೪]

ಈತನು ಬಸವಣ್ಣನ ಸಮಕಾಲೀನ ಶರಣ. ತಾನು ಕಂಡುಂಡ ಅನುಭವವನ್ನು ಸರಸವಾಗಿ. ಸರಳವಾಗಿ ವಚನ ರಚನೆಯಲ್ಲಿ ಪವಡಿಸಿದವನು. ಅರಿವು ಆಚಾರಗಳನ್ನು ಭಕ್ತಿಯ ಪರಿಭಾಷೆಯಲ್ಲಿ ಮೂಡಿಸಿದವನು. ಶರಣಸತಿ ಲಿಂಗಪತಿ ಎಂಬ ಭಾವನೆ. ಭಕ್ತರುಂಡುಳಿದ ಪ್ರಸಾದವನ್ನು ಸ್ವೀಕರಿಸುವವನು. ಶರಣರಿಗೆ ತಾನು ದಾಸಾನುದಾಸಿಯೇ ಎಂಬಭಾವ. ಚಿತ್ರದಲ್ಲಿ ಗಣದಾಸಿಯು ವಚನರಚಿಸುವಲ್ಲಿ ತಲ್ಲೀನರಾಗಿದ್ದಾರೆ. ಹಸನ್ಮುಖಿ ಹಾಗೂ ತೃಪ್ತಿಯ ಭಾವನೆ ಇಲ್ಲಿ ಅಭಿವ್ಯಕ್ತವಾಗಿದೆ. ಅದೇ ವರ್ಣಗಳು.

ಚಿತ್ರ : ನಿಜಗುಣ ಶಿವಯೋಗಿ [೧೨೫]

ರಾಜನಾಗಿಯೂ ರಾಜ್ಯದ ಸಿರಿಸಂಪತ್ತನ್ನು ತೊರೆದು ವಿರಾಗಿಯಾಗಿ. ಶಂಭುಲಿಂಗವೇ ತಾನಾಗಿ ಕಾವ್ಯದ ತೆರೆಯ ಮೇಲೆ ನಿಂತು ಆಧ್ಯಾತ್ಮದ ಆಕಾಶವನ್ನೇ ಮುಟ್ಟಿದ ಸತ್ಯಶಾಂತಿಗಳ ಸಾಕಾರ ಮೂರ್ತಿ. ನಿರಾಸಮಜ್ಞಾನಿ. ಅನುಭಾವಿ.

ಚಿತ್ರದಲ್ಲಿ ಶಿವಯೋಗಿಗಳು ಮರದ ಕೆಳಗೆ ಕುಳಿತು ಕೃತಿ ರಚನೆಯಲ್ಲಿ ತೊಡಗಿದ್ದಾರೆಯಲ್ಲದೆ ಅಭಯಹಸ್ತದಿಂದ ಆಶೀರ್ವದಿಸುತ್ತಿದ್ದಾರೆ. ಹಿನ್ನೆಲೆಯಲ್ಲಿ ನಿಸರ್ಗ ದೃಶ್ಯಾಂತರವನ್ನು ತೋರಿಸಿದ್ದಾರೆ. ದೂರದ. ಮಧ್ಯದ. ಸಮೀಪದ ವಸ್ತುಗಳನ್ನು ಸೌಮ್ಯ ಹಾಗೂ ಉಜ್ವಲ ವರ್ಣಗಳಿಂದ ತೋರಿಸಿದ್ದಾರೆ.

ಚಿತ್ರ : ಅಲ್ಲಮ ಪ್ರಭುದೇವರು [೧೨೬]

ಶೂನ್ಯ ಸಂಪಾದನೆಯ ಪೀಠವನ್ನು ಅಲಂಕರಿಸಿ. ಅನುಭವ ಮಂಟಪದಲ್ಲಿ ಅಧ್ಯಕ್ಷ ಸ್ಥಾನಕ್ಕೆ ಯೋಗ್ಯತೆಯನ್ನು ಪಡೆದು ಮಾಯೆಯನ್ನು ಗೆದ್ದ ಅಲ್ಲಮಪ್ರಭು ಬಸವಣ್ಣನಿಗೆ ಜಂಗಮನೇ ಲಿಂಗರೂಪಿ ಎನ್ನುವುದನ್ನು ತಿಳಿಸಿ ಎಲ್ಲ ಶರಣರಿಗೆ ಸಲಹೆಗಳನ್ನು ನೀಡುತ್ತ. ಅನುಭವ ಮಂಟಪದಲ್ಲಿ ಅವರ ನಿಜ ವ್ಯಕ್ತಿತ್ವವನ್ನು ಬಹಿರಂಗ ಪಡಿಸುತ್ತಿದ್ದರು. ಚಿತ್ರದಲ್ಲಿ ಅಲ್ಲಮನು ಶೂನ್ಯ ಪೀಠವನ್ನು ಅಲಂಕರಿಸಿದ್ದಾರೆ. ಅಭಯಹಸ್ತದಿಂದ ಎಲ್ಲರನ್ನೂ ಆಶೀರ್ವದಿಸುತ್ತಿದ್ದಾರೆ.

---

೧೨೩. ಬಿ. ಸಿ. ಜವಳಿ : ಮರಳ ಶಂಕರದೇವರು : ಮುಖಪುಟ

೧೨೪. ಸಿಂಪಿ. ಲಿಂಗಣ್ಣ : ಗಣದಾಸಿ ವೀರಣ್ಣ : ಮುಖಪುಟ

೧೨೫. ಈಶ್ವರಚಂದ್ರ ಚಿಂತಾಮಣಿ : ನಿಜಗುಣಶಿವಯೋಗಿ : ಮುಖಪುಟ

೧೨೬. ಯೋಗೀಶ ಯಡ್ರಾವಿ : ಅಲ್ಲಮಪ್ರಭುದೇವರು : ಮುಖಪುಟ

ಶಿವನಿಗೆ ಸವಾಲೆಸಗಿ ಜಯಿಸಿದಂತ ಭಕ್ತ ಮನೋಭಾವವನ್ನು ಇಲ್ಲಿ ಚಿಟ್ಟಿಯವರು ಚಿತ್ರಿಸಿದ್ದಾರೆ. ಸೌಮ್ಯ ಹಾಗೂ ಉಗ್ರವರ್ಣಗಳ ಲೇಪನವಿದೆ.

ಚಿತ್ರ : ಮಲುಹಣ ದೇವ [೧೨೭]

ಈತನ ಬಗ್ಗೆ ಈಗಾಗಲೇ ರೇಖಾಚಿತ್ರದಲ್ಲಿ ಹೇಳಲಾಗಿದೆ. ಆಸೆ ಆಮಿಷಗಳನ್ನು ತೊರೆದು ಭಾವಸಿದ್ಧಿಯನ್ನು ಪಡೆದು. ದೇವರಿಗೆ ಸಮರ್ಪಣೆ ಮಾಡಿ ಜೀವನ ಸಾರ್ಥಕ ಮಾಡಿಕೊಂಡ ದಿವ್ಯ ಜ್ಯೋತಿ. ಚಿತ್ರದಲ್ಲಿ ಮಲುಹಣೆಯ ಧ್ಯಾನದಲ್ಲಿ ಕುಳಿತ ಮಲುಹಣನಿಗೆ ಮೇಲಿಂದ ಚೆಲ್ಲುವ ಕಸ ಮುಸುರೆಯ ನೀರಿನ ಬಗ್ಗೆ ಪರಿವೆಯೇ ಇಲ್ಲದೆ ಹಾಗೆ ಕಣ್ಣುಮುಚ್ಚಿ ಕುಳಿತಿದ್ದಾನೆ. ಈ ದೃಶ್ಯವನ್ನು ಮಲುಹಣೆಯ ತಾಯಿ ಮಹಡಿಯ ಮೇಲೆ ನಿಂತು ವೀಕ್ಷಿಸುತ್ತಿದ್ದಾಳೆ. ನೀರಿನ ಹನಿಗಳನ್ನು ವರ್ಣಗಳಿಂದ ತೋರಿಸಿದ್ದಾರೆ.

ಚಿತ್ರ : ಕವಿ ಷಡಕ್ಷರ ದೇವ [೧೨೮]

ಮಹಾಕವಿ ಷಡಕ್ಷರದೇವ ' ರಾಜಶೇಖರ ವಿಳಾಸ ' ' ಬಸವರಾಜ ವಿಜಯ ಮಹಾಪುರಾಣ '. ' ಶಬರ ಶಂಕರ ವಿಳಾಸ '. ' ಷಡಕ್ಷರ ಮಂತ್ರ ಸ್ತೋತ್ರಂ ' ಎಂಬ ನಾಲ್ಕು ಕೃತಿಗಳನ್ನು ರಚಿಸಿದ್ದಾನೆ. ಇಲ್ಲಿಯ ಈ ಚಿತ್ರ ' ರಾಜಶೇಖರ ವಿಳಾಸದ ' ಒಂದು ಸನ್ನಿವೇಶದ ಚಿತ್ರವಾಗಿ. ' ಅನ್ಯಾಯವನ್ನು ಎಸಗಿದವ ಅರಸನ ಪುತ್ರನೇ ಆಗಿದ್ದರೂ ಆತನಿಗೆ ಶಿಕ್ಷೆ ತಪ್ಪದು ' ಎನ್ನುವ ಸನ್ನಿವೇಶ ಚಿತ್ರದಲ್ಲಿ ಅರಸನ ಮಗನ ರುಂಡವನ್ನು ಕತ್ತರಿಸುತ್ತಿದ್ದಾರೆ. ರಾಜ ರಾಣಿಯರು ಆ ಕೃತ್ಯವನ್ನು ನೋಡಲಾರದೇ ದೇವರನ್ನು ಪ್ರಾರ್ಥಿಸುತ್ತಿದ್ದಾರೆ. ಶೋಕದ ಸನ್ನಿವೇಶ. ಅದಕ್ಕೆ ತಕ್ಕಂತ ವರ್ಣವಿನ್ಯಾಸವಿದೆ.

ಚಿತ್ರ : ಗುಡ್ಡಾಪೂರದ ದಾನಮ್ಮ [೧೨೯]

ಭಕ್ತಿ ಸಾಧನೆಯಿಂದ ದೇವಪದವಿಯನ್ನು ಪಡೆದ ಮಹಾಮಹಿಮಶಾಲಿನಿ ದೇಶಕ್ಕೊದಗಿದ ಬಿಕ್ಕಟ್ಟಿನ ಪ್ರಸಂಗದಲ್ಲಿ ಶಸ್ತ್ರ ಹಿಡಿದು ಯುದ್ಧಮಾಡಿ ಜಯ ಸಂಪಾದಿಸಿದ ವೀರಮಹಿಳೆ. ಅವಳು ಮಾಡಿದ ಧರ್ಮಪ್ರಸಾರಕಾರ್ಯ ಗಣನೀಯವಾದುದು. ಚಿತ್ರದಲ್ಲಿ ದಾನಮ್ಮನವರು ಹಸ್ತದಲ್ಲಿ ಪುಸ್ತಕವನ್ನು ಹಿಡಿದುಕೊಂಡು ಆಶೀರ್ವದಿಸುತ್ತಿದ್ದಾರೆ. ಅವರು ನಿಂತ ಠೀವಿ ವೇಷ ಭೂಷಣಗಳಿಂದ ವೀರತನದ ಭಾವನೆ ಮೂಡಿದೆ. ಮುಖದಲ್ಲಿ ಅಷ್ಟೇ ಭಕ್ತಿಯಿಂದ ಕೂಡಿದ ಸಾತ್ವಿಕ ಭಾವವನ್ನು ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಊರಿನ ದೃಶ್ಯವಿದೆ.

ಚಿತ್ರ : ಮಡಿವಾಳ ಮಾಚಿದೇವ [೧೩೦]

ಬಟ್ಟೆಗಳನ್ನು ತೊಳೆದು ಶುದ್ಧಮಾಡಿ ಕೊಡುವ ಕಾಯಕ ಈತನದು. ಸಿರಿವಂತನ ಮನೆಯಲ್ಲಿ ಪಡಸಾಲೆಯಲ್ಲೇ ನಿಂತು ಕೊಟ್ಟುಕೊಳ್ಳುವುದು ಸಹಜ. ತರುಣ ಮಾಚಿದೇವ ಅದನ್ನು ಅನುಲಕ್ಷಿಸಿ ಕಟ್ಟೆಯನ್ನು ಹತ್ತಿ ಬಟ್ಟೆಗಳನ್ನು

---

೧೨೭. ಪಿ. ಶಿವಾನಂದ : ಮಲುಹಣದೇವ : ಮುಖಪುಟ

೧೨೮. ವಿರೂಪಾಕ್ಷ ಬಡಿಗೇರ : ಕವಿ ಷಡಕ್ಷರದೇವ : ಮುಖಪುಟ

೧೨೯. ಹಿಂ. ಪಿ. ಲಿಂಗಣ್ಣ : ಗುಡ್ಡಾಪುರದದಾನಮ್ಮ : ಮುಖಪುಟ

೧೩೦. ದು. ಸಿಂ. ಬೆಳಗಲಿ : ಮಡಿವಾಳ ಮಾಚಿದೇವ : ಮುಖಪುಟ

ಕೊಟ್ಟಿದ್ದರಿಂದ ' ಸಿರಿವಂತ 'ನು ನನ್ನ ಮನೆ ಮೈಲಿಗೆಯಾಯಿತೆಂದನು. ಮನುಷ್ಯತ್ವದ ಅರಿವಿಲ್ಲದ ಸಿರಿವಂತನ ಮನೆ ಮೈಲಿಗೆಯಲ್ಲ, ಮನಸ್ಸೆ ಮೈಲಿಗೆ ಎಂಬ ಅರಿವನಿಂದ ಆ ಊರನ್ನ ಬಿಟ್ಟು ಕಲ್ಯಾಣಕ್ಕೆ ಬಂದು ಶರಣರ ಬಟ್ಟೆಮಡಿ ಮಾಡುವುದರಲ್ಲೇ ಶಿವನನ್ನು ಕಂಡವನು. ಚಿತ್ರದಲ್ಲಿ ಮಾಚಿದೇವ ಬಟ್ಟೆಯ ಗಂಟನ್ನು ಇಟ್ಟುಕೊಂಡು ನಿಂತಿದ್ದಾನೆ. ತಾನು ಬರುತ್ತಿರುವುದು ಎಲ್ಲರಿಗೂ ತಿಳಿಯುವುದಕ್ಕೋಸ್ಕರ ಎಡಗೈಯಲ್ಲಿ ಬಾರಿಸಲು ಗಂಟೆಯನ್ನು ಹಿಡಿದುಕೊಂಡಿದ್ದಾನೆ. ವೀರತನದ ಸದೃಡ ಆಕಾರ ಅಷ್ಟೇ ಶಿವ ಭಕ್ತಿಯ ಸಾಕಾರವೂ ಕೂಡ ಚಿತ್ರದಲ್ಲಿ ಚಿತ್ರಿಸಿದ್ದಾರೆ. ಸುತ್ತಲೂ ನಿಸರ್ಗ ಚಿತ್ರಿಸಿದ್ದಾರೆ. ಅದೇ ಉಗ್ರ ಹಾಗೂ ಸೌಮ್ಯ ವರ್ಣಗಳ ಮೇಳವಿದೆ.

ಚಿತ್ರ : ಕದಿರೆ ರೇವಯ್ಯ [೧೩೧]

ಈತನ ಬಗ್ಗೆ ಈಗಾಗಲೇ ರೇಖಾಚಿತ್ರದಲ್ಲಿ ವಿವರಿಸಲಾಗಿದೆ. ನೂಲುವ ರಾಟಿಗೆ ಕದಿರೆಗಳನ್ನು ತಯಾರಿಸುವವನು. ಚಿತ್ರದಲ್ಲಿ ಅತ್ಯಂತ ತನ್ಮಯತೆಯಿಂದ ಕದಿರನ್ನು ತಯಾರಿಸುತ್ತಿದ್ದಾನೆ. ತಲೆಯ ಮೇಲೆ ರುಮಾಲು ನೊಸಲಿಗೆ ವಿಭೂತಿ ಕೊರಳಲ್ಲಿ ಲಿಂಗ ಹಿಂದೆ ನೂಲುವ ಚರಕವಿದೆ. ಅದರ ಹಿನ್ನೆಲೆಯಲ್ಲಿ ಗುಡಿಸಲು ಚಪ್ಪರದ ಮೇಲೆಲ್ಲಾ ಹೂವುಗಳು. ಸುಂದರವಾದ ವರ್ಣಗಳ ಮೇಳ ಇಲ್ಲಿದೆ ಪಕ್ಕದಲ್ಲಿ ಅಂತಹ ಅನೇಕ ಕದಿರುಗಳನ್ನು ತಯಾರಿಸಿ ಇಟ್ಟಿದ್ದಾರೆ.

ಚಿತ್ರ : ಆಯ್ದಕ್ಕಿ ಮಾರಯ್ಯ [೧೩೨]

ಮಾರಯ್ಯ ಲಕ್ಕಮ್ಮನವರ ಕಾಯಕ ಸರ್ವಕಾಲಕ್ಕೂ ಇತರರಿಗೆ ನಿದರ್ಶನ. ಮಹಾಮನೆಗೆ ಅಕ್ಕಿಯ ಚೀಲಗಳನ್ನು ಸಾಗಿಸುವಾಗ ಚೆಲ್ಲುವ ಅಕ್ಕಿಯನ್ನು ಆಯ್ದು ಜಂಗಮರಿಗೆ ಉಣಸಿ ತಾವು ಉಣ್ಣುತ್ತಿದ್ದರು. ' ಬೇರೆಯವರು ಎಸೆಯುವ ಧಾನ್ಯವನ್ನು ನಾವು ರಕ್ಷಿಸಿ ದಾನ ಕೊಟ್ಟರೆ ಅದಕ್ಕಿಂತ ದೊಡ್ಡದಾನವಿಲ್ಲವೆಂದು ಭಾವಿಸಿದ್ದರು. ಗಂಡ ಹೆಚ್ಚಿಗೆ ತಂದ ಅಕ್ಕಿಯನ್ನು ಲಕ್ಕಮ್ಮ ತಿರುಗಿ ಕಳಿಸಿದಳು. ' ಆಸೆ ಶರಣರಿಗಲ್ಲ ಅರಸರಿಗೆ ' ಎಂದು ಯಾವುದೇ ಕಾಯಕವಾದರೂ ಅದರಲ್ಲಿ ಶ್ರದ್ಧೆ. ಭಕ್ತಿ. ಇರಬೇಕು ಎಂದು ತಿಳಿಸಿಕೊಟ್ಟವರು. ಚಿತ್ರದಲ್ಲಿ ಮಾರಯ್ಯ ಹೆಚ್ಚಿಗೆ ತಂದ ಅಕ್ಕಿಯನ್ನು ಮೊರಕ್ಕೆ ಸುರಿಯುತ್ತಿದ್ದಾನೆ. ಹೆಂಡತಿ ಲಕ್ಕಮ್ಮ ಗಾಬರಿಯಿಂದ ಇಂದೇನಾಯಿತು ಎನ್ನುವ ದುಗುಡ ಮನೋಭಾವದಲ್ಲಿ ಇರುವಳು. ಆಕೃತಿಗಳಲ್ಲಿ ಮಾತ್ರ ಸ್ವಲ್ಪ ನೆರಳು ಬೆಳಕನ್ನು ತೋರಿಸಿದ್ದಾರೆ. ಉಳಿದಂತೆ ಚಪ್ಪಟೆ ವರ್ಣಲೇಪನವಿದೆ.

ಚಿತ್ರ : ಶರಣ ಬಸವೇಶ್ವರ [೧೩೩]

೧೨ ನೇ ಶತಮಾನದಿಂದೀಚೆಗೆ ಶರಣ ಜೀವನದ ಅಂಗವಾದ ದಾಸೋಹ ತತ್ವ ಜೀವಂತವಾಗಿ ಬದುಕಿಬಂದರೆ ಬಸವಣ್ಣನವರು ದಾಸೋಹಕ್ಕೆ ಹೊಸ ಜನ್ಮ ನೀಡಿದರೆ ಈ ಶರಣಬಸವೇಶ್ವರರು ದಾಸೋಹಕ್ಕೆ ಹೊಸ ಹೊಸ ಮುಖಗಳನ್ನು ನೀಡಿದರು. ಹುಟ್ಟಿದಾರಂಭದಿಂದ ಕೊನೆಯವರೆಗೆ ದಾಸೋಹವೆ ಅವರ ಬದುಕಾಯಿತು. ಚಿತ್ರದ ಸಂಯೋಜನೆ ಈ ರೀತಿ ಇದೆ. ಹೊಲದಲ್ಲಿ ಹಾಲ್ತೆನೆಗಳು ಬೆಳೆದುನಿಂತಿವೆ. ಎಲ್ಲೆಲ್ಲೂ ಪಕ್ಷಿಗಳ ಕೂಗು ಅದರೂ

---

೧೩೧. ಪುಟ್ಟರಾಜ ಗವಾಯಿಗಳು : ಕದಿರೆ ಶಿವಯ್ಯ : ಮುಖಪುಟ

೧೩೨. ಬಿ. ಎಸ್. ಸ್ವಾಮಿ : ಆಯ್ದಕ್ಕಿ ಮಾರಯ್ಯ : ಮುಖಪುಟ

೧೩೩. ಬಿ. ಗಿ. ಯಲ್ಲಟ್ಟಿ : ಶರಣಬಸವೇಶ್ವರ : ಮುಖಪುಟ

ಹೊಲ ಕಾಯುವವರಿಲ್ಲ ಬೇಲಿಮೊದಲಿಲ್ಲ. ಅಂಥದ್ದರಲ್ಲಿ ಕಾಳುತಿಂದ ಪಕ್ಷಿಗಳಿಗೆ ನೀರಿನ ವ್ಯವಸ್ಥೆ ನೀರನ್ನು ಸ್ವತಃ ತಾವೇ ಹಾಕುತ್ತಿದ್ದಾರೆ. ' ಈ ಜಗವು ಆ ಶಿವನ ದಾಸೋಹ ಧಾಮ ' ಎಂದು ತಿಳಿದುಕೊಂಡಂಥ ಭಾವನೆ ವ್ಯಕ್ತವಾಗಿದೆ. ಅವರ ಕಣ್ಣಲ್ಲಿ ದಾಸೋಹದ ತೃಪ್ತಿ, ಮುಖದಲ್ಲಿ ಮಂದಹಾಸ ಶರಣ ಕುರುಹುಗಳೆಲ್ಲ ಒಡಮೂಡುವಂತೆ ಚಿತ್ರಿಸಿದ್ದಾರೆ. ಸೌಮ್ಯವರ್ಣಗಳ ಲೇಪನವಿದೆ.

ಚಿತ್ರ : ಶರಣ ಮೇದಾರ ಕೇತಯ್ಯ [೧೩೪]

ಈತನು ಬೇಲೂರಿನವನು. ಬಿದಿರಿನ ಕೆಲಸ ಮಾಡುತ್ತ ಜೀವಿಸುತ್ತಿದ್ದನು. ಈತನ ಹೆಂಡತಿ ಸಾತವ್ವ. ಬಿದಿರನ್ನು ಎಳೆಎಳೆಯಾಗಿ ಸೀಳಿ ಅದರಿಂದ ಚಿತ್ತಾರದ ಬುಟ್ಟಿ. ಮೊರ ಚಿಬ್ಬಲ ಮೊದಲಾದವನ್ನು ಹೆಣೆಯುತ್ತಿದ್ದರು. ಎದೆಗೆ ಬಿದಿರು ಚುಚ್ಚಿ ಸಾಯುವ ಸ್ಥಿತಿಯಲ್ಲಿದ್ದರೂ ಜಂಗಮಸೇವೆ ನಿಲ್ಲದಂತೆ ನಡೆಯುತ್ತಾನೆ. ಇಲ್ಲಿ ನಾವು ಕೇತಯ್ಯನ ಕಾಯಕ ನಿಷ್ಠೆಯನ್ನು ಕಾಣುತ್ತೇವೆ.

ಚಿತ್ರದಲ್ಲಿ ಸತಿಪತಿಗಳಿಬ್ಬರು ಕಾಯಕದಲ್ಲಿ ನಿರತರಾಗಿದ್ದಾರೆ. ಹೆಂಡತಿ ಬಿದಿರನ್ನು ಸೀಳಿಕೊಟ್ಟರೆ ಕೇತಯ್ಯ ಸುಂದರವಾಗಿ ಬುಟ್ಟಿ ಹೆಣೆಯುತ್ತಿದ್ದಾನೆ. ಇಕ್ಕೆಲದಲ್ಲಿ ಹೆಣೆದಿಟ್ಟ ಬುಟ್ಟಿ ಮೊರಗಳಿವೆ ಹಿನ್ನೆಲೆ ಚಪ್ಪಟೆಯ ನೀಲಿವರ್ಣವನ್ನು ಹೊಂದಿದರೆ ವೇಷಗಳಲ್ಲಿ ನೆರಳು ಬೆಳಕಿನ ಛಾಯೆ ಇದೆ. ಇಬ್ಬರ ಮುಖದಲ್ಲಿ ಸಂತೃಪ್ತಿಯ ಭಾವ ಅಭಿವ್ಯಕ್ತವಾಗಿದೆ.

ಚಿತ್ರ : ಶ್ರೀ ಸಿದ್ಧರಾಮ ಶಿವಯೋಗಿ [೧೩೫]

ಚಿಕ್ಕವನಿರುವಾಗಲೇ ಆಧ್ಯಾತ್ಮಿಕ ವಿಚಾರದಲ್ಲಿ ತೊಡಗಿರುವಂತೆ ಇರುತ್ತಿದ್ದ ಸಿದ್ಧರಾಮ ಶಿವನನ್ನು ಅರಸುತ್ತ ಶ್ರೀಶೈಲಕ್ಕೆ ಬಂದ ದೃಶ್ಯ.

ಚಿತ್ರದಲ್ಲಿ ಬಾಲಕ ಸಿದ್ಧರಾಮ ಶ್ರೀ ಶೈಲದಲ್ಲಿಯೂ ಶಿವನು ಕಾಣದಾದಾಗ ಬಿಡದೇ ತನುಕರಗಿ ಮನಕರಗಿ ಮಲ್ಲಿಕಾರ್ಜುನನಿಲ್ಲದೆ ತನಗೆ ಬದುಕಿಲ್ಲವೆಂದು ಬಗೆದು ಶ್ರೀ ಶೈಲದಲ್ಲಿ ಇರುವ ಭಯಂಕರವಾದ ರುದ್ರಗಮ್ಮರಿಯಲ್ಲಿ ಹಾರಬೇಕೆನ್ನುವಾಗ ಸಾಕ್ಷಾತ್ ಮಲ್ಲಿನಾಥನೆ ಅವನನ್ನು ಎತ್ತಿ ಹಿಡಿದಿದ್ದಾನೆ. ಹಿನ್ನೆಲೆಯಲ್ಲಿ ಜಲಪಾತವಿದೆ. ಇದರಿಂದ ಆಳವಾದ ಕಮ್ಮರಿಯ ಅನುಭವವಾಗುತ್ತದೆ. ಬಾಲಕನಾದರೂ ಶಿವಭಕ್ತಿ ಅನಂತವಾದುದು. ಎಂಬ ಭಾವನೆ ಊಕ್ಕುವಂತೆ ಚಿತ್ರಿತವಾಗಿದೆ. ಸನ್ನಿವೇಶಕ್ಕೆ ತಕ್ಕಂತೆ ವರ್ಣ ಲೇಪನವಿದೆ.

ಚಿತ್ರ : ಶ್ರೀ ಚೆನ್ನಬಸವಣ್ಣನವರು [೧೩೬]

ಇವರ ಬಗ್ಗೆ ಈಗಾಗಲೇ ರೇಖಾಚಿತ್ರದಲ್ಲಿ ಚರ್ಚಿಸಲಾಗಿದೆ. ಷಟ್‌ಸ್ಥಲ ಜ್ಞಾನಿ. ಮಧುವರಸ. ಹರಳಯ್ಯನವರ ಸಂಬಂಧದಿಂದಾಗಿ ಕಲ್ಯಾಣದಲ್ಲಿ ಕ್ರಾಂತಿ ಪ್ರಾರಂಭವಾಯಿತು. ಮತಿಗೇಡಿಗಳು ಶರಣರನ್ನು ಕಂಡಲ್ಲಿ ತುಂಡರಿಸಲು ನಿರ್ಧರಿಸಿದಾಗ ಚೆನ್ನಬಸವಣ್ಣ ಎಲ್ಲ ಶರಣರ ರಕ್ಷಣೆಯನ್ನು ಮಾಡಿ ಉಳವಿಗೆ ಕರೆದುಕೊಂಡು ಹೋಗಿ ಅಲ್ಲಿ ನೆಲೆಸಿದರು.

---

೧೩೪. ಮಲ್ಲಿಕಾರ್ಜುನ ಲತ್ತೆ : ಶರಣ ಮೇದಾರ ಕೇತಯ್ಯ : ಮುಖಪುಟ

೧೩೫. ಶ್ರೀಮತಿ ಶಾಂತಾ ಯೋಗೀಶ ಯಡ್ರಾವಿ : ಶ್ರೀಸಿದ್ಧರಾಮ ಶಿವಯೋಗಿ : ಮುಖಪುಟ

೧೩೬. ಯೋಗೀಶ ಯಡ್ರಾವಿ : ಶ್ರೀ ಚೆನ್ನಬಸವಣ್ಣನವರು : ಮುಖಪುಟ



i ಶಿವಶರಣ-ಶರಣೆಯರು



ii ಶಿವಶರಣ-ಶರಣೆಯರು



ಮೇದಾರ ಕೇತಯ್ಯ



ಆಯ್ದಕ್ಕಿ ಮಾರಯ್ಯ



ಕದಿರೆ ರೇವಯ್ಯ



ಸಿದ್ಧರಾಮೇಶ್ವರ

ಚಿತ್ರದಲ್ಲಿ ಚೆನ್ನಬಸವಣ್ಣ ತಾನು ರಚಿಸಿದ ವಚನ, ತಾಡೋಲೆಗಳನ್ನು ಹಿಡಿದುಕೊಂಡು ಮರದ ಮುಂದೆ ನಿಂತಿದ್ದಾನೆ. ಹಿನ್ನೆಲೆಯಲ್ಲಿ ಹೊಲಗದ್ದೆಗಳ ದೃಶ್ಯಂತರವಿದೆ. ಯುವಕ ಚೆನ್ನಬಸವಣ್ಣನ ಮುಖದಲ್ಲಿ ಸಾತ್ವಿಕತೆ ಅಭಿವ್ಯಕ್ತವಾಗಿದೆ.

ಈ ಎಲ್ಲ ಚಿತ್ರಗಳು ಶರಣರ ಜೀವನ ತಾತ್ಪರ್ಯವನ್ನು ಜನರಿಗೆ ತಿಳಿಸಿಕೊಡುವ ಜೀವನದ ಮೌಲ್ಯಗಳ ಸಂದೇಶವನ್ನು ಸಾರುವ ಕಿರುಪುಸ್ತಕಗಳ ಮುಖಪುಟಗಳಾಗಿವೆ. ಚೆಟ್ಟಿಯವರು ಈ ಎಲ್ಲ ಮುಖಪುಟಗಳಲ್ಲಿಯ ಚಿತ್ರಗಳಲ್ಲಿ ಆಯಾಶರಣರು ನಡೆದುಬಂದ ರೀತಿ ಹಾಗೂ ಅವರ ಕಾರ್ಯ ಮಹತ್ವವನ್ನು ಸಾರುವ ಸಂದೇಶದಂತೆ ವಿಷಯ ನಿರೂಪಣೆ ಮಾಡಿದ್ದಾರೆ. ತಲೆಬರಹವಿಲ್ಲದೆ ಕಾಯಕದ ಮುಖಾಂತರವೆ ಆ ಶರಣರನ್ನು ಗುರ್ತಿಸುವಂತೆ ಚಿತ್ರಿಸಿದ್ದಾರೆ. ಶರಣರ ಪರಿಶುದ್ಧವಾದ ಜೀವನ ರೀತಿ ಅವರ ನಡವಳಿಕೆ ಅವರ ಜಂಗಮ ಪ್ರೀತಿ. ದಯೆ. ಅನುಕಂಪ. ಕರುಣೆ. ಭಕ್ತಿ, ಕಾಯಕನಿಷ್ಠೆ ನಿಸ್ವಾರ್ಥ ಭಾವನೆ. ಎಲ್ಲವನ್ನೂ ಒಟ್ಟಾರೆಯಾಗಿ ಚಿತ್ರದಲ್ಲಿ ಸೆರೆಹಿಡಿದಿದ್ದಾರೆ. ಹೆಚ್ಚು ಕಡಿಮೆ ಎಲ್ಲಾ ಚಿತ್ರಗಳಲ್ಲಿ ಸೌಮ್ಯ ಹಾಗೂ ಪ್ರಖರ ಬಣ್ಣಗಳ ಬಳಕೆ ಮಾಡಿದ್ದಾರೆ. ಆದರೆ ಅವುಗಳನ್ನು ನಿರೂಪಿಸಿದ ರೀತಿ ಬೇರೆ ಬೇರೆಯಾಗಿದೆ. ಸೌಮ್ಯ ಹಾಗೂ ಉಜ್ವಲ ವರ್ಣಗಳ ಮೇಳವಿಕೆ ಇದ್ದರೂ ಎಲ್ಲೂ ಅದರ ಸಮತೋಲನ ಮೀರಿಲ್ಲ. ಇಂತಹ ಒಟ್ಟು ೩೫ ಪುಸ್ತಕಗಳು ಪ್ರಕಟಗೊಂಡಿವೆ. ಆದರೆ ಈಗ ಲಭ್ಯವಾಗಿರುವುದು ೩೧ ಮಾತ್ರ. ಮತ್ತೆ ಮುಂದೆ ಇನ್ನೂ ನಾಲ್ಕು ಮುಖಪುಟದ ಚಿತ್ರಗಳು ಸಿಕ್ಕರೆ ಅವನ್ನು ಸೇರಿಸಿಕೊಳ್ಳಾಗುತ್ತದೆ.

vii) ಶ್ರವಣಬೆಳಗೊಳದ ಭಿತ್ತಿಚಿತ್ರಗಳ ಪ್ರತಿಗಳು :

ಕ್ರಿ. ಶ. ೧೭೫೦ - ೧೮೫೫ ರಲ್ಲಿ ಮೈಸೂರು ಅರಸರ ಕಾಲದ ಜೈನಮಠ ಶ್ರವಣಬೆಳಗೋಳದಲ್ಲಿ ರಚಿಸಿದ ಭಿತ್ತಿ ಚಿತ್ರಗಳ ಪ್ರತಿರೂಪವನ್ನು ಕರ್ನಾಟಕ ಲಲಿತಕಲಾ ಅಕೆಡೆಮಿಯವರು ಹಮ್ಮಿಕೊಂಡಂಥ ಕಾರ್ಯದಲ್ಲಿ ಭಾಗಿಯಾಗಿ ಈ ಚಿತ್ರಗಳ ಪ್ರತಿಕೃತಿಗಳನ್ನು ರಚಿಸಿಕೊಟ್ಟಿದ್ದಾರೆ. ಭಿತ್ತಿ ಚಿತ್ರಗಳ ವಿವಿಧ ವಿನ್ಯಾಸಗಳ ರಚನೆಯ ಬಗ್ಗೆ ಕರಗತ ಮಾಡಿಕೊಂಡವರಿಗೆ ಮಾತ್ರ ಇಂತಹ ಚಿತ್ರಗಳನ್ನು ಚಿತ್ರಿಸಲು ಸಾಧ್ಯ. ಆ ಶ್ರೇಯಸ್ಸು ಚೆಟ್ಟಿಯವರಿಗೆ ಸಲ್ಲುತ್ತದೆ.

ಭಿತ್ತಿ ಚಿತ್ರಣ ಶೈಲಿಯೂ ಕ್ರಿ. ಶ. ೨ ನೆಯ ಶತಮಾನದಿಂದಲೇ ಪ್ರಚಲಿತದಲ್ಲಿದೆ. " ಆದರೆ ಈ ಶೈಲಿಯ ಕಲೆ ತನ್ನ ಉತ್ತಮ ಸ್ಥಿತಿಯನ್ನು ಕಂಡದ್ದು ವಿಜಯನಗರದ ಪತನದ ನಂತರವೇ ಅವುಗಳ ಅವಶೇಷಗಳನ್ನು ಹಿಂದಿನ ಮೈಸೂರು ಸಂಸ್ಥಾನದ ಹಲವು ಹನ್ನೆರಡು ಕ್ಷೇತ್ರಗಳಲ್ಲಿ ಇಂದಿಗೂ ಕಾಣಬಹುದು. ಅಂತಹ ಚಿತ್ರ ವಿಶೇಷಗಳಲ್ಲಿ ಹಲವು ಶಿಥಿಲಗೊಂಡು ಚಿತ್ರದ ಸೂಕ್ಷ್ಮ ಅಂಶಗಳು ನಾಶವಾಗಿರುವುದುಂಟು. ಆದರೆ ಚಿತ್ರರಚನೆಯ ಚಾತುರ್ಯ ಚಿತ್ರಕಾರರ ಸೌಂದರ್ಯ ಪ್ರಜ್ಞೆ ಮತ್ತು ಅವರುಗಳ ವಸ್ತು ನಿಷ್ಠೆಯ ಅನುಭವವು ಉಳಿದಿರುವ ಹರುಕು ಮುರುಕು ಚಿತ್ರಗಳಿಂದ ಧಾರಾಳವಾಗಿ ಆಗುತ್ತವೆ. ಹಿಂದಿನ ಎಂದರೆ ಚಾಲುಕ್ಯರ ಕಾಲದಲ್ಲಿ ಮೊದಲುಗೊಂಡು ಶೈಲಿಯ ಮತ್ತು ನಮಗೆ ಹೆಚ್ಚು ಸಮೀಪದ ೧೭-೧೮ ನೆಯ ಶತಮಾನದ ಈ ನಮೂನೆಗಳಲ್ಲಿ ಕಂಡು ಬರುವ ಬೆಳವಣಿಗೆಯ ಅರಿವೂ ಉಂಟಾಗಲು ಸಾಕು. ಈ ಸಾಂಪ್ರಾದಾಯಿಕ ಕಲೆಯು ಮೈಸೂರಿನಲ್ಲಿ ಹೇಗೆ ಭದ್ರವಾಗಿ ನೆಲೆಯೂರಿತ್ತು ಮತ್ತು ಈ ಸಂಸ್ಥಾನದ

ಹೈದರಾಲಿ, ಟಿಪ್ಪೂಸುಲ್ತಾನರೂ ಸೇರಿದಂತೆ ಮೈಸೂರು ರಾಜಮನೆತನಗಳಿಂದ ಹೇಗೆ ಪ್ರೋತ್ಸಾಹ ದೊರಕಿತು ಎಂಬುದನ್ನು ಈ ಚಿತ್ರಗಳಿಂದ ಊಹಿಸಬಹುದು " [೧೩೭] ಎನ್ನುವ ಮಾತು ನಿಜ. ಅಂತೆಯೇ ಚೆಟ್ಟಿಯವರು ಆ ಚಿತ್ರಗಳನ್ನು ಯಥಾವತ್ತಾಗಿ ಈಗ ಯಾವ ಸ್ಥಿತಿಯಲ್ಲಿ ಇರುವವೋ ಹಾಗೆಯೇ ಚಿತ್ರಿಸಿದ್ದಾರೆ. ಆ ಭಿತ್ತಿಯ ಮೇಲಿನ ಚಿತ್ರ ಅಳಿಸಿ ಹೋದರು ಆ ಎಲ್ಲ ಸಂಗತಿಗಳನ್ನು ಚೆಟ್ಟಿಯವರು ಹಾಗೂ ಇನ್ನಿತರ ಕಲಾವಿದರು ರಚಿಸಿ ಕೊಟ್ಟಂತಹ ಈ ಪ್ರತಿಕೃತಿಗಳಿಂದ ಅರಿಯಬಹುದಾಗಿದೆ. ಒಟ್ಟು ೧೨ ಚಿತ್ರಗಳನ್ನು ಅಕಾಡೆಮಿಯವರಿಗೆ ರಚಿಸಿ ಕೊಟ್ಟಿದ್ದಾರೆ. ಇವುಗಳನ್ನು " ಅವರೇ ಹೇಳುವಂತೆ ಈ ಚಿತ್ರಗಳನ್ನು ೧೯೭೮ ರಿಂದ ೧೯೮೧ ರ ವರೆಗೆ " [೧೩೮] ರಚಿಸಿರುವುದಾಗಿ ಹೇಳಿದ್ದಾರೆ.

ಚಿತ್ರ ೯೨ : ಚಕ್ರವರ್ತಿ ಅರವಿಂದನ ಅರಮನೆ [೧೩೯]

ಮೈಸೂರು ಶೈಲಿ. ಚಿತ್ರದಲ್ಲಿ ಅರವಿಂದ ಚಕ್ರವರ್ತಿ ತೀರ್ಥಂಕರರ ಸಾಲಿಗೆ ಸೇರಿದವನು. ಯುದ್ಧಸನ್ನದ್ಧನಾಗಿರುವ ರಾಜ ತನ್ನ ರಾಣಿವಾಸದವರಿಂದ ಬೀಳ್ಕೊಳ್ಳುತ್ತಿದ್ದಾನೆ. ಮತ್ತೊಂದು ಕಡೆ ಮಹಾರಾಣಿ, ರಾಜನನ್ನು ಬರಮಾಡಿಕೊಳ್ಳಲು ಸಜ್ಜಾಗುತ್ತಿದ್ದಾಳೆ. ಇಲ್ಲೂ ಆಕೃತಿ ಚಿತ್ರಣದ ವಿಶೇಷಗಳನ್ನು ಕಾಣಬಹುದು. ಆಕೃತಿ ಪೋಷಾಕುಗಳಲ್ಲೆಲ್ಲಾ ಮರಾಠರ ಪ್ರಭಾವವು ಎದ್ದು ನಿಂತಿದೆ. ಅವರ ಮುಖದ ನಿರೂಪಣೆಯಲ್ಲೂ ಈ ಪ್ರಭಾವ ಸುಸ್ಪಷ್ಟ. ಕೆಂಪಿನ ಬಳಕೆ ಹೆಚ್ಚಾಗಿ ಕಂಡು ಬಂದರೂ ಕರಿ ಬಣ್ಣದ ಬಳಕೆ ಆಕರ್ಷಣೀಯವಾಗಿದೆ. ರಾಣಿವಾಸ ಮೊಗಲರ ಜನಾನಾವನ್ನು ನೆನೆಪಿಗೆ ತರುವಂತಿದೆ. ಈ ಪ್ರತಿಕೃತಿಯನ್ನು ನೋಡಿ ಎಸ್. ಎನ್. ಚಂದ್ರಶೇಖರ್ ಅವರು ಅವುಗಳ ಅಧ್ಯಯನ ಮಾಡಲು ಮುಂದಿನ ಪೀಳಿಗೆಗೆ ಸಹಾಯಕವಾಗುತ್ತದೆ ಎಂದಿದ್ದಾರೆ. ಚೆಟ್ಟಿಯವರು ಸಹಿತ ಅಷ್ಟೇ ಆ ವಿಷಯಗಳ ಬಗ್ಗೆ ಆ ಕಲಾವಿದನ ಬಗ್ಗೆ ಆಳವಾದ ಅಧ್ಯಯನ ಮಾಡಿ ಆಕೃತಿಗಳ ನಕಲು ಮಾಡಿದಂತಿದೆ.

ಚಿತ್ರ ೯೩ : ಜಾನಪದ ಕಿರುರೂಪದ ಶೈಲಿಯ ಒಂದು ಚಿತ್ರ

ಇದನ್ನು ಚೆಟ್ಟಿಯವರು ಜಲವರ್ಣದಲ್ಲಿ ೧೯೯೧ ರಲ್ಲಿ ರಚಿಸಿದ್ದಾರೆ. ಸ್ವಲ್ಪ ವಿಜಯನಗರ ಶೈಲಿಯನ್ನು ಹೋಲುವ ಈ ಚಿತ್ರವು ೫' X ೩' ಇದೆ. ಈ ಚಿತ್ರದಲ್ಲಿ ಒಬ್ಬ ಹೆಣ್ಣು ಮಗಳು ಕೈಯಲ್ಲಿ ಹೂದಾಸಿಯನ್ನು ಹಿಡಿದುಕೊಂಡು ನಿಂತಿದ್ದಾಳೆ. ಕಿರುರೂಪ ಚಿತ್ರದಲ್ಲಿಯಂತೆ ಅಲಂಕರಣೆಯನ್ನು ಇಲ್ಲಿ ಕಾಣುತ್ತೇವೆ. ಆಕೆಯ ಕೇಶವಿನ್ಯಾಸ ತಲೆಯಮೇಲೆ ಕಿರೀಟ ಮೈತುಂಬಾ ಆಭರಣಗಳಿವೆ. ಪ್ರತಿಯೊಂದನ್ನು ವಿವರವಾಗಿ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಅವರ ಚಿತ್ರಗಳಲ್ಲಿ ಇದೊಂದು ವಿಭಿನ್ನ ರೀತಿಯಲ್ಲಿ ಚಿತ್ರಿಸಲ್ಪಟ್ಟಿದೆ.

ಪ್ರಾಣಿಯ ಚಿತ್ರ : ಜಲವರ್ಣದಲ್ಲಿ ರಚಿಸಿದ ಸಂಯೋಜನಾ ಚಿತ್ರದಲ್ಲಿ ಈಗಾಗಲೇ ಅನೇಕ ಪ್ರಾಣಿಗಳ ಚಿತ್ರಗಳನ್ನು ನೋಡಿದ್ದೇವೆ. ಇವುಗಳಿಂದ ಪ್ರಾಣಿ ಕುರಿತಾದ ಅವರ ಅದರಿಂದಲೇ ಅವರ ಆ ವಿಷಯ ಕುರಿತಾದ ಅಭ್ಯಾಸದ ಆಳ ನಮಗೆ ತಿಳಿಯುತ್ತದೆ.

---

೧೩೭. ಎಸ್. ಎನ್. ಚಂದ್ರಶೇಖರ : ಕರ್ನಾಟಕದ ಭಿತ್ತಿ ಚಿತ್ರಗಳು ಚಿತ್ರಸಂಪುಟ ೧

೧೩೮. ಎಂ. ಎ. ಚೆಟ್ಟಿಯವರ ಹಸ್ತಪ್ರತಿ

೧೩೯. ಎಸ್. ಎನ್. ಚಂದ್ರಶೇಖರ : ಕರ್ನಾಟಕದ ಭಿತ್ತಿ ಚಿತ್ರಗಳು ಚಿತ್ರಸಂಪುಟ ೧


೯೧. ಮಠದ ಮುಂದೆ [illegible]



೯೦ ಶ್ರೀ ನಿರಂಜನ ತೋಂಟದ ನಂದೀಶ್ವರ ಮಹಾಸ್ವಾಮಿಗಳ ಚಿತ್ರ ಅಣ್ಣಿಗೇರಿ



೯೨. ಚಕ್ರವರ್ತಿ ಅರವಿಂದರ ಅರಮನೆ



೯೩. ಜನಪದ ಶೈಲಿಯ ಒಂದು ಚಿತ್ರ



೯೪. ವಿಶ್ರಮಿಸುತ್ತಿರುವ ದನಗಳು

ಚಿತ್ರ ೯೪ : ಈ ಚಿತ್ರದಲ್ಲಿ ಎರಡು ಆಕಳುಗಳು ವಿಶ್ರಾಂತಿ ಪಡಯುತ್ತಿವೆ. ಒಂದು ಆಕಡೆ ಮುಖಮಾಡಿದರೆ ಇನ್ನೊಂದು ಈಕಡೆ ತಿರುಗಿ ಕುಳಿತಿದೆ. ಒಂದು ಸ್ವಲ್ಪ ಕಪ್ಪು ಆಕಳಿದ್ದಂತೆ ಇನ್ನೊಂದು ಗೌರವ ವರ್ಣವನ್ನೂ ಹೊಂದಿದೆ ಅವುಗಳ ನೆರಳು ಬೆಳಕಿನಿಂದಲೇ ಆಕಳುಗಳ ನಿಜವರ್ಣವನ್ನು ಗುರುತಿಸುವಂತೆ ತೆಳುವಾಗಿ ವರ್ಣವನ್ನು ಲೇಪಿಸಿದ್ದಾರೆ. ಅವುಗಳ ನೆರಳನ್ನು ಕೂಡಾ ಚಿತ್ರಿಸಿದ್ದಾರೆ. ಈ ಚಿತ್ರದಲ್ಲಿ ಅವರ ಜಲವರ್ಣದ ಅಗಾಧ ಜ್ಞಾನ ಹಾಗೂ ಕುಂಚಗಳ ಮೇಲಿನ ಹಿಡಿತವನ್ನು ಮನಗಾಣಬಹುದಾಗಿದೆ. ಅಳತೆ ೧೫" x ೨೨" ಚೆಟ್ಟಿಯವರ ಸಂಗ್ರಹದಿಂದ.

೨. ತೈಲವರ್ಣ ಮಾಧ್ಯಮದ ವರ್ಣ ಚಿತ್ರಗಳು :

ಈ ಮಾಧ್ಯಮ ನಮ್ಮ ಭಾರತಕ್ಕೆ ಬಂದುದು ಮಧ್ಯಯುಗದಿಂದಲೇ ಎಂದು ಕಂಡುಬರುತ್ತದೆ. " ತೈಲಚಿತ್ರ ರಚನೆಯ ಪ್ರಾರಂಭದಲ್ಲಿ ವರ್ಣದ್ರವ್ಯದ ಪುಡಿಯನ್ನು ಅಮೃತ ಶಿಲೆಯ ಮೇಲೆ ಅರೆದು ಅದಕ್ಕ ಸ್ವಲ್ಪತೈಲವನ್ನು ಸೇರಿಸಿ ಬೇಕಾದ ತೈಲವರ್ಣವನ್ನು ತಯಾರಿಸಿಕೊಳ್ಳುತ್ತಿದ್ದರು ".[೧೪೦] ಈಗ ತೈಲವರ್ಣ ಟ್ಯೂಬುಗಳಲ್ಲಿ ದೊರೆಯುತ್ತದೆ. ಬಣ್ಣವನ್ನು ತೆಳುಮಾಡಿಕೊಳ್ಳಲು ಟರ್ಪೆಂಟೈನ್ ಮತ್ತು ಲಿನಿಸಿಡ್ ತೈಲವನ್ನು ಉಪಯೋಗಿಸುತ್ತಾರೆ. ಈ ವರ್ಣ ಆರಿಕೊಳ್ಳುವುದು ನಿಧಾನ ಹಾಗೂ ಕಲಾವಿದ ತನಗೆ ಬೇಡವಾದ ವರ್ಣವನ್ನು ತೆಗೆದು. ಬೇರೆ ಬಣ್ಣವನ್ನು ಉಪಯೋಗಿಸಬಹುದು. ಕಲಾವಿದ ಇದನ್ನು ತೆಳುವಾಗಿಯೂ. ದಪ್ಪವಾಗಿಯೂ ಉಪಯೋಗಿಸಬಹುದು. ಈ ಚಿತ್ರಗಳು ಬಹಳ ಕಾಲದವರೆಗೆ ಇರುತ್ತವೆ. " ಭಾರತೀಯ ಕಲಾವಿದರಲ್ಲಿ ರವಿವರ್ಮನಿಂದ ತೈಲ ಚಿತ್ರರಚನೆ ವ್ಯಾಪಕವಾಗಿ ಆರಂಭಗೊಂಡಿತೆಂದು ಹೇಳಬಹುದು "[೧೪೧]

ಈ ರೀತಿ ತೈಲ ಮಾಧ್ಯಮದಲ್ಲಿ ಚಿತ್ರಗಳನ್ನು ರಚಿಸುವ ಪದ್ಧತಿ ಜಾರಿಗೆ ಬಂದನಂತರ ಚೆಟ್ಟಿಯವರು ಸಹಿತ ಈ ಮಾಧ್ಯಮದಲ್ಲಿ ಭಾವಚಿತ್ರ. ಸಜೀವ ಚಿತ್ರ. ಸಂಯೋಜನಾ ಚಿತ್ರ. ಸ್ಥಿರರೂಪ ಚಿತ್ರ ಹಾಗೂ ನಿಸರ್ಗ ಚಿತ್ರಗಳನ್ನು ರಚಿಸಿದ್ದಾರೆ. ಇವೆಲ್ಲವುಗಳಲ್ಲಿ ಅವರು ಹೆಚ್ಚಾಗಿ ಚಿತ್ರಿಸಿದ್ದು ಭಾವಚಿತ್ರಗಳು. ಅನೇಕ ಮನೆ-ಮಠಗಳಲ್ಲಿ ಈ ಚಿತ್ರಗಳು ನೋಡಲು ಸಿಗುತ್ತವೆ.

೧) ಭಾವಚಿತ್ರ :

ಚೆಟ್ಟಿಯವರು ಭಾವಚಿತ್ರಗಳನ್ನು ಸಾಕಷ್ಟು ರಚಿಸಿದ್ದಾರೆ. ಕೆಲವು ರೂಪದರ್ಶಿಗಳನ್ನು ತೆಗೆದುಕೊಂಡು ಚಿತ್ರಿಸಿದರೆ. ಇನ್ನು ಕೆಲವು ಭಾವಚಿತ್ರಗಳನ್ನು ಆ ವ್ಯಕ್ತಿಗಳ ಛಾಯಾ ಚಿತ್ರವನ್ನು ನೋಡಿ ರಚಿಸಿಕೊಟ್ಟಿರುತ್ತಾರೆ. ಚೆಟ್ಟಿಯವರು ರಚಿಸಿದಂಥ ಭಾವಚಿತ್ರಗಳನ್ನು ಕಂಡು. " ಅವರ ರೇಖೆಗಳ ಮೇಲಿನ ಹಿಡಿತವನ್ನು ವರ್ಣಗಳ ಮೇಲೆ ಅವರು ಸಾಧಿಸಿದ್ದ ಪ್ರಭುತ್ವವನ್ನು ಮೆಚ್ಚಿಕೊಂಡಿದ್ದ ಚೂಡೇಕರ ಶಿಕ್ಷಕರು ತಮ್ಮ ವಿದ್ಯಾರ್ಥಿ ತನ್ನ ಕಲಾಭಿವ್ಯಕ್ತಿಗೋಸುಗ ಒಂದು ಮಾಧ್ಯಮವನ್ನು ಆರಿಸಿಕೊಳ್ಳಬೇಕೆಂದು. ಭಾವ ಚಿತ್ರವು ಒಂದು ಪರಿಣಾಮಕಾರೀ ಕ್ಷೇತ್ರವೆನಿಸಬಹುದೆಂದು ಹೇಳುತ್ತಿದ್ದರು "[೧೪೨] ಅದರಂತೆ ಚೆಟ್ಟಿಯವರು ಚಿತ್ರಕಲಾಭ್ಯಾಸವನ್ನು ಮುಂದುವರಿಸಿದರು.

---

೧೪೦. ಟಿ. ಆರ್. ತಿಪ್ಪೇಸ್ವಾಮಿ (ಸಂ.) : ಚಿತ್ರಕಲಾ ಪ್ರಪಂಚ. ಪುಟ ೧೭೭

೧೪೧. ಟಿ. ಆರ್. ತಿಪ್ಪೇಸ್ವಾಮಿ (ಸಂ.) : ಚಿತ್ರಕಲಾ ಪ್ರಪಂಚ. ಪುಟ ೧೭೭

೧೪೨. ಮಹಾಲಿಂಗ ಯಾಳಗಿ (ಸಂ.) : ಕಲಾತಪಸ್ವಿ : ಎಂ. ವಿ. ಚೆಟ್ಟಿಯವರ ಅಭಿನಂದನ ಗ್ರಂಥ. ಪುಟ ೪೯

" ಸಾಹಿತಿಯೇ ಆಗಲಿ,, ಕಲಾವಿದನೇ ಆಗಲಿ ಹಲವು ಮಾಧ್ಯಮಗಳಲ್ಲಿ ಕೈ ಆಡಿಸಿದರೂ, ಅವನ ಪ್ರತಿಭೆ ಒಂದೇ ಕ್ಷೇತ್ರದಲ್ಲಿ ಇನ್ನುಳಿದ ಕ್ಷೇತ್ರಗಳಿಗಿಂತಲೂ ಹೆಚ್ಚು ಚೆನ್ನಾಗಿ ಅರಳಿರುತ್ತದೆ. ತನ್ನ ಅಭಿವ್ಯಕ್ತಿಯ ಸಹಜ ಮಾಧ್ಯಮವನ್ನು ಹುಡುಕಿಕೊಂಡು ಅದರ ಮೇಲೆಯೇ ತನ್ನ ಗಮನವನ್ನು ಕೇಂದ್ರಿಕರಿಸಿ ಅದರಲ್ಲಿ ತನ್ನ ಕಲಾಸಿದ್ಧಿಯನ್ನು ಕಂಡುಕೊಳ್ಳಬೇಕು. ಚಿಟ್ಟಿಯವರು ಎಲ್ಲ ವಿಧದ ಚಿತ್ರಗಾರಿಕೆಯಲ್ಲಿ ತಮ್ಮ ಕುಂಚವನ್ನು ಓಡಿಸುತ್ತಿರುವರಾದರೂ, ಅವರು ಭಾವಚಿತ್ರಗಳ ಮೇಲೆಯೇ ತಮ್ಮ ಮಮತೆಯನ್ನು ಹೆಚ್ಚು ಹರಿಸಿದ್ದಾರೆ "[೧೪೩] ಎನ್ನುವುದು ನಿಜ.

ಇಲ್ಲಿಯ ಭಾವ ಚಿತ್ರಗಳಲ್ಲಿ ರೂಪದರ್ಶಿಗಳನ್ನು ಬಳಸಿ ಚಿತ್ರರಚಿಸಿದ್ದು ಮತ್ತು ಛಾಯಚಿತ್ರಗಳನ್ನು ನೋಡಿ ಚಿತ್ರಿಸಿರುವುದನ್ನು ನೋಡಬಹುದು.

i) ರೂಪದರ್ಶಿಗಳನ್ನು ಬಳಸಿದ ಭಾವಚಿತ್ರಗಳು :

ಮುಂದೆ ಇರುವ ರೂಪದರ್ಶಿಯು ಕಣ್ಣಿಗೆ ಕಂಡಂತೆ ನೆಳಲು ಬೆಳಕು ತುಂಬಿಸಿ ಚಿತ್ರಿಸುವುದಲ್ಲ. ಅಥವಾ ನಿಗದಿತ ಅಂಗಾಗಗಳನ್ನೂ ಹೊಂದಿದ ಮನುಷ್ಯ ರೂಪಿನ ಸಾಮಾನ್ಯ ಚಿತ್ರಣವಲ್ಲ. ರೂಪದರ್ಶಿಯನ್ನು ಹೋಲದಿದ್ದರೆ ಅದು ಒಳ್ಳೆಯ ಭಾವಚಿತ್ರವಲ್ಲ. ಆದರೆ ಇಲ್ಲಿ ರೂಪದರ್ಶಿಯ ಬಾಹ್ಯದ ರೂಪರೇಷೆ. ವಸ್ತುಗಳ ಹೋಲಿಕೆಯನ್ನಷ್ಟೇ ಹಿಡಿಯುವುದಲ್ಲ. ಅವನ ಒಟ್ಟಾರೆ ವ್ಯಕ್ತಿತ್ವದ ಶಿಲ್ಪದ ಪಡಿ ಮೂಡಬೇಕು "[೧೪೪] ಎನ್ನುವಂತೆ ಚಿತ್ರಿಸಿದ್ದಾರೆ.

ಚಿಟ್ಟಿಯವರು ಚಿತ್ರಸಿದ ಭಾವಚಿತ್ರ ತದ್ರೂಪತೆಯನ್ನಷ್ಟೇ ಅಲ್ಲ ಜೀವಂತಿಕೆಯಿಂದ ನೋಡುಗರನ್ನು ಬೆರಗುಗೊಳಿಸುತ್ತವೆ. ಮಲ್ಲಿಕಾರ್ಜುನ ಸಿದ್ಧಪ್ಪಹತ್ತಿಯವರು ತಮ್ಮ ಲೇಖನದಲ್ಲಿ ಈ ರೀತಿ ಹೇಳಿದ್ದಾರೆ. ಒಮ್ಮೆ ಸಭೆಯಲ್ಲಿ ನಡೆದ ಅದ್ಭುತ ಘಟನೆಯಿದು. ಅಥಣಿಯ ಶೀವಯೋಗಿಗಳ ಭಾವಚಿತ್ರವನ್ನು ಗೋಡೆಗೆ ತೂಗು ಹಾಕಿದಾಗ ಅದುಗಾಳಿ ಬೀಸುವಿಕೆಯಿಂದ ಅತ್ತಿತ್ತ ಹೊಯ್ದಾಡಹತ್ತಿತ್ತು. ಆಗ ಸಭೆಯಲ್ಲಿದ್ದ ಜನರು ಶಿವಯೋಗಿಗಳೇ ಎದ್ದು ಬಂದರೇನೋ ಎಂಬ ಭ್ರಮೆಯಿಂದ ಓಡಿಹೋಗಿ ನಮಸ್ಕರಿಸಿದರು ".[೧೪೫] ಇಂತಹ ಒಂದು ಜೀವಂತಿಕೆ ಚಿಟ್ಟಿಯವರ ಭಾವಚಿತ್ರಗಳಲ್ಲಿ ಇದೆ.

ಚಿಟ್ಟಿಯವರು ಅನೇಕ ಕಡೆ ಈ ರೀತಿ ರೂಪದರ್ಶಿಯನ್ನು ಬಳಸಿಕೊಂಡು ಪ್ರತ್ಯಕ್ಷಿಕೆಯನ್ನು ನೀಡಿದ್ದಾರೆ. ಅಲ್ಲಿಯೂ ಹಾಗೆ ಇದ್ದುದರಲ್ಲಿಯೇ ಚಿತ್ರ ಪೂರ್ಣಗೊಳಿಸುವಿಕೆಯ ಜಾಣತನವಿದೆ. ಇವರ ಪ್ರಾತ್ಯಕ್ಷಿಕೆ ನೋಡಿದ ಮಹಾದೇವ ಜಗತಾಪ ಅವರ ಅನಿಸಿಕೆ. " ಇವರ ಪೊರ್ಟ್ರೇಟ್ ಪ್ರಾತ್ಯಕ್ಷಿಕೆ ನೋಡುವ ಭಾಗ್ಯ ನನಗೆ ದೊರೆತದ್ದು ಹುನಗುಂದ ತಾಲೂಕಿನ ಚಿತ್ರಕಲಾ ಹಾಗೂ ಕಾರ್ಯಾನುಭವ ಶಿಕ್ಷಕ ಸಂಘದವರು ಏರ್ಪಡಿಸಿದ ಸನ್ಮಾನ ಸಮಾರಂಭದಲ್ಲಿ ಶ್ರೀ ಗರಡಿಗುರುಗಳ ಭಾವಚಿತ್ರ ಪ್ರಾತ್ಯಕ್ಷಿಕೆ ಏರ್ಪಡಿಸಿದ್ದರು. ಬಣ್ಣಗಳ ಹಾಗೂ ಕುಂಚಗಳ ಕೊರತೆ ಇದ್ದರೂ ಕೂಡಾ ಕೇವಲ ಒಂದು ಗಂಟೆಯ ಒಳಗಾಗಿ ಸುಂದರವಾದ ಭಾವಚಿತ್ರ ನಿರ್ಮಿಸಿದರು ".[೧೪೬]

---

೧೪೩. ಮಹಾಲಿಂಗ ಯಾಳಗಿ (ಸಂ.) : ಕಲಾತಪಸ್ವಿ : ಎಂ. ವಿ. ಚಿಟ್ಟಿಯವರ ಅಭಿನಂದನ ಗ್ರಂಥ. ಪುಟ ೪೯

೧೪೪. ಟಿ. ಆರ್. ತಿಪ್ಪೇಸ್ವಾಮಿ (ಸಂ.) : ಚಿತ್ರಕಲಾ ಪ್ರಪಂಚ. ಪುಟ ೪೩೫

೧೪೫. ಮಹಾಲಿಂಗ ಯಾಳಗಿ (ಸಂ.) : ಕಲಾತಪಸ್ವಿ : ಎಂ. ವಿ. ಚಿಟ್ಟಿಯವರ ಅಭಿನಂದನ ಗ್ರಂಥ. ಪುಟ ೨೯

೧೪೬. ಮಹಾಲಿಂಗ ಯಾಳಗಿ (ಸಂ.) : ಕಲಾತಪಸ್ವಿ : ಎಂ. ವಿ. ಚಿಟ್ಟಿಯವರ ಅಭಿನಂದನ ಗ್ರಂಥ. ಪುಟ ೩೨

ಚಿತ್ರ ೯೫ : ಇದೊಂದು ಯುವತಿಯ ಭಾವಚಿತ್ರ ಈ ಚಿತ್ರ ಅತ್ಯಂತ ಹಳೆಯದು ಈಗ ಅದು ಅಷ್ಟೊಂದು ಒಳ್ಳೆಯ ಸ್ಥಿತಿಯಲ್ಲಿ ಇಲ್ಲ. ಇದನ್ನು ತೈಲ ಕಾಗದ (oil paper) ಮೇಲೆ ರಚಿಸಿದ್ದು, ಅಲ್ಲಲ್ಲಿ ಕತ್ತರಿಸಿ ಹೋಗಿದೆ. ಇಲ್ಲಿ ವರ್ಣಗಳ ಲೇಪನ ಅತ್ಯಂತ ಚೆನ್ನಾಗಿದೆ. ಕುಂಚದ ಹೊಡೆತಗಳು ನೇರವಾಗಿವೆ. ವರ್ಣಗಳನ್ನು ಮುಖದ ಮೇಲೆ ಒಂದನ್ನೊಂದು ಬೆರಸದಂತೆ ನೇರವಾಗಿ ಬೆರಸಿ ಲೇಪನಮಾಡಿದ್ದಾರೆ. ಈ ಚಿತ್ರದಲ್ಲಿ ಆ ಯುವತಿ ಅತ್ಯಂತ ಆಲೋಚನಾಮಗ್ನಳಾಗಿದ್ದಾಳಲ್ಲದೆ. ಜೀವನದಲ್ಲಿ ಬಹಳ ನೊಂದಿರುವಂತೆ ಭಾವನೆ ವ್ಯಕ್ತವಾಗಿದೆ. ಹಿನ್ನೆಲೆಯಲ್ಲಿ ವರ್ಣಗಳ ಕುಂಚದ ಹೊಡೆತಗಳನ್ನು ನೋಡುತ್ತೇವೆ. ಹಿನ್ನೆಲೆಯಲ್ಲಿ ನೆರಳು-ಬೆಳಕು ಛಾಯೆಯಂತೆ ವರ್ಣಗಳನ್ನು ವಿಭಾಗಿಸಿ ಲೇಪಿಸಿದ್ದಾರೆ. ಮುಖದಲ್ಲಿಯೂ ನೆರಳು-ಬೆಳಕಿನ ವಿಂಗಡನೆ ಕಣ್ಣಿನಲ್ಲಿ ಜೀವ ಚೈತನ್ಯವಿದೆ. ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೯೬ : ಇದೊಂದು ಮುದುಕನ ಭಾವಚಿತ್ರ. ಇದರಲ್ಲಿ ಚೆಟ್ಟಿಯವರ ವರ್ಣಲೇಪನ ಬೇರೆಯೇ ಆಗಿದೆ. ಇಲ್ಲಿ ಆ ವ್ಯಕ್ತಿಯ ಚರ್ಮದ ಪರಿಣಾಮವನ್ನು ನೈಜವಾಗಿ ಚಿತ್ರಿಸಿದ್ದಾರೆ. ಮುಖದಲ್ಲಿ ನೇರವಾದ ಕುಂಚದ ಹೊಡೆತಗಳಿರದೆ ಬಣ್ಣಗಳ ಮೃದು ಬೆರಕೆ ಇಲ್ಲಿದೆ. ಈ ಮನುಷ್ಯ ಅತ್ಯಂತ ಕಪ್ಪುವರ್ಣವನ್ನು ಹೊಂದಿದವನಾದ್ದರಿಂದ ಆತನ ಮುಖದಲ್ಲಿಯ ಹೈಲೈಟನ್ನು ಅತ್ಯಂತ ಜಾಣ್ಮೆಯಿಂದ ಚಿತ್ರಿಸಿದ್ದಾರೆ. ತಲೆಗೆ ಸುತ್ತಿಕೊಂಡ ರುಮಾಲಿನಲ್ಲಿ ನೆರಳು ಬೆಳಕಿನ ಸಂಯೋಜನೆ ಸಮನಾಗಿದೆ. ಇಲ್ಲಿ ಬೆಳಕು ಸ್ವಲ್ಪ ನೇರವಾಗಿ ಬೀಳುವುದರಿಂದ ಮುಖದಲ್ಲಿ ಸಮನಾಗಿ ಹರಡದೆ ಬಲಗಡೆಯ ಭಾಗದಲ್ಲಿ ಸ್ವಲ್ಪ ಹೆಚ್ಚಾಗಿದೆ. (ಅಧ್ಯಾಯ ಏಳರಲ್ಲಿಯ ೧೯ ನೇ ಚಿತ್ರವನ್ನು ನೋಡಿರಿ)

ಚಿತ್ರ ೯೭ : ಇದೊಂದು ಪುರುಷನ ಚಿತ್ರ. ಈತನ ಚಿತ್ರವನ್ನು ರೇಖಾ ಚಿತ್ರದಲ್ಲೂ ರಚಿಸಿದ್ದಾರೆ. ಪಾರ್ಶ್ವಮುಖದ ಭಾವಚಿತ್ರ. ಮುಖದಲ್ಲಿಯ ಅಂಗಶಾಸ್ತ್ರದಂತೆ ಉಬ್ಬು ತಗ್ಗುಗಳನ್ನು ಅತ್ಯಂತ ಸೂಕ್ಷ್ಮವಾಗಿ ತೋರಿಸಿದ್ದಾರೆ. ಇದೊಂದು ಉತ್ತಮ ಪಾರ್ಶ್ವ ಭಾವಚಿತ್ರವಾಗಿದೆ. ಕಿವಿಯ ಒಳಗಿನ ಭಾಗವನ್ನೂ ಸಹಿತ ವಿವರವಾಗಿ ಚಿತ್ರಿಸಿದ್ದಾರೆ. ಅಲ್ಲಲ್ಲಿ ಕುಂಚದ ಎಳೆತಗಳನ್ನು ಕಂಡರೂ ಹೆಚ್ಚುಭಾಗ ವರ್ಣಗಳ ಬೆರಕೆಯನ್ನು ಕಾಣುತ್ತೇವೆ. ಕಣ್ಣಿನಲ್ಲಿ ಜೀವ ಚೈತನ್ಯವಿದೆ. ತಲೆಯ ಮೇಲೆ ವಿಭೂತಿ ಅಷ್ಟೇ ರೇಶ್ಮೆಯ ಬಟ್ಟೆಯಿಂದ ತಯಾರಿಸಿದ ಟೊಪ್ಪಿಗೆ ಹುಬ್ಬಿನಲ್ಲಿಯ ಬಿಳಿ ಕೂದಲನ್ನೂ ಚಿತ್ರಿಸಿದ್ದಾರೆ. ತಲೆಯ ಮೇಲಿನ ಕೂದಲೆಳೆಗಳನ್ನು ಬಿಡಿಬಿಡಿಯಾಗಿ ಚಿತ್ರಿಸಿದ್ದಾರೆ. ಹಿನ್ನೆಲೆ ಮುಖಕ್ಕೆ ತಕ್ಕಂತೆ ತೆಳುವಾದ ವರ್ಣವನ್ನು ಬಳಸಿದ್ದಾರೆ. ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೯೮ : ಈ ಭಾವಚಿತ್ರ ಚೆಟ್ಟಿಯವರ ಶ್ರೀಮತಿಯವರಾದ ಸುಂದರಮ್ಮ ಚೆಟ್ಟಿಯವರದು. ಈ ಭಾವಚಿತ್ರವನ್ನು ೧೯೯೧ ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ದೂರದರ್ಶನದ ವತಿಯಿಂದ ಚೆಟ್ಟಿಯವರ ಸಾಕ್ಷಚಿತ್ರವನ್ನು ಚಿತ್ರೀಕರಿಸಲು ಬಂದಾಗ ಚಿತ್ರಿಸಿದ್ದು. ಚೆಟ್ಟಿಯವರಿಗೆ ಆಗ ೮೮ ವರ್ಷ. ಅಂತಹ ಇಳಿವಯಸ್ಸಿನಲ್ಲೂ ಈ ಭಾವಚಿತ್ರವನ್ನು ನಿಂತುಕೊಂಡೇ ಚಿತ್ರಿಸಿದ್ದಾರೆ. ಅವರ ಐದು ದಶಕಗಳ ಕಲಾನುಭವದ ಪ್ರತೀಕವಿದಾಗಿದೆ. ಸ್ವಲ್ಪೇ ಸಮಯದಲ್ಲಿ ಸ್ವಲ್ಪೇ ವರ್ಣಗಳಲ್ಲಿ ವಿವರವಾಗಿ ಚಿತ್ರಿಸಿದ್ದಾರೆ. ಮೂಗಿನ ನತ್ತು, ತಲೆಯ ಮೇಲಿನ ಸೆರಗು ಅದರಲ್ಲಿಯ

ಜರಿಯ ಪಟ್ಟಿ ಇದೆಲ್ಲ ಅಲ್ಲದೆ ಕಲಾವಿದನ ಹೆಂಡತಿಯಾಗಿ ಕಲಾ ಸೇವೆಗೈದ ತೃಪ್ತಿಯ ನಗೆಯ ಭಾವವಿಲ್ಲಿದೆ. ಹಿನ್ನೆಲೆಯಲ್ಲೂ ಕುಂಚದ ಹೊಡೆತಗಳನ್ನು ಕಾಣುತ್ತೇವೆ. ಇಂತಹ ಇಳಿವಯಸ್ಸಿನಲ್ಲೂ ಕೈನಡುಗುವದಾಗಲಿ. ದೃಷ್ಟಿದೋಷವಾಗಲಿ ಇಲ್ಲ. ಇನ್ನೂ ತರಣರಂತೆ ಚಿತ್ರರಚಿಸುತ್ತಾರೆ. ಅವರ ಕಲಾ ಪ್ರೌಢಿಮೆಯ ಹೆಗ್ಗುರುತಾಗಿದೆ ಈ ಚಿತ್ರ. ಚೆಟ್ಟಿಯವರ ಸಂಗ್ರಹದಿಂದ.

ii) ಛಾಯಾ ಚಿತ್ರಗಳನ್ನು ಆಧರಿಸಿ ಚಿತ್ರಿಸಿದ ಭಾವಚಿತ್ರಗಳು :

ಚಿತ್ರ ೯೯ : ಶಿರಸಂಗಿ ಲಿಂಗರಾಜರ ಭಾವಚಿತ್ರ : ಈ ಭಾವಚಿತ್ರವನ್ನು ಚಿತ್ರಿಸುವುದರ ಹಿಂದೆ ಇರುವ ಘಟನೆಯೂ ಸಹಿತ ಚಿತ್ರದಷ್ಟೇ ಮಹತ್ವವಾಗಿದೆ. ಚೆಟ್ಟಿಯವರೇ ಹೇಳುವಂತೆ " ನಾನು ಮುಂಬಯಿಯಲ್ಲಿ ಕಲಾವಿದ್ಯಾಭ್ಯಾಸವನ್ನು ಮಾಡಲು ಶಿರಸಂಗಿ ಟ್ರಸ್ಟಫಂಡ ಸ್ಕಾಲರ್‌ಶಿಪ್ ನೀಡಿ ಸಹಾಯ ಮಾಡಿತ್ತು. ಅವರಿಂದ ನಾನು ಪಡೆದ ಹಣ ೬೫೦ ರೂಗಳನ್ನು ಪಾವತಿ ಮಾಡುವಂತೆ ಪತ್ರ ಬಂದಿತು. ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವಾಗ ಸಿರಸಂಗಿ ಫಂಡಿನ ಹಣ ಹೇಗೆ ತುಂಬಬೇಕು ಎಂಬ ವಿಚಾರದಲ್ಲಿ ಬಿದ್ದಿರುವಾಗ ತಕ್ಷಣ ಯೋಚನೆಯೊಂದು ಹೊಳೆಯಿತು. ಅಲ್ಲಿಯವರೆಗೆ ದಾನವೀರ ಶಿರಸಂಗಿ ಲಿಂಗರಾಜರ ದೊಡ್ಡ ತೈಲ ಚಿತ್ರಗಳಿರಲಿಲ್ಲ. ಯಾರಹಣ ನನ್ನ ಈ ಕಲಾಧ್ಯಯನಕ್ಕೆ ಸಹಾಯ ಮಾಡಿತೋ ಅದೇ ಕಲೆಯಿಂದ ಚಿತ್ರತೆಗೆಯಲು ನಿರ್ಧರಿಸಿ ೪' X ೩" ಅಳತೆಯ ಶಿರಸಂಗಿ ಲಿಂಗರಾಜರ ತೈಲಚಿತ್ರ ತೆಗೆದು ಸುಂದರವಾಗಿ ಕಟ್ಟು ಹಾಕಿಸಿಕೊಟ್ಟೆ" [೧೪೭] ಅದು ಈಗಲೂ ಬೆಳಗಾವಿಯ ಲಿಂಗರಾಜ ಟ್ರಸ್ಟಿನಲ್ಲಿ ಇದೆ. ಈ ಚಿತ್ರವನ್ನು ಬಹುಶಃ ೧೯೪೦ ರಲ್ಲಿ ರಚಿಸಿರಬಹುದು. ಈಗ ಅದು ಅಷ್ಟೊಂದು ಒಳ್ಳೆಯ ಸ್ಥಿತಿಯಲ್ಲಿ ಇಲ್ಲ. ಅಲ್ಲಲ್ಲಿ ಚಿತ್ರಸ್ವಲ್ಪ ಉದುರಿ ಹೋಗುತ್ತಿದೆ. ಆರುದಶಕಗಳಷ್ಟು ಪುರಾತನವಾಗಿದೆ. ಆದರೂ ಆಟ್ರಿಸ್ಟಿನವರು ಅದರ ಛಾಯಾಚಿತ್ರವನ್ನು ಬಳಸಿಕೊಂಡು ಕ್ಯಾಲೆಂಡರ್ ಮತ್ತು ಕಾರ್ಡುಗಳನ್ನು ಮಾಡಿದ್ದಾರೆ.

ಇದೊಂದು ಅತ್ಯುತ್ತಮ ಭಾವಚಿತ್ರವಾಗಿದೆ. ಲಿಂಗರಾಜರವರ ಮುಖದಲ್ಲಿ ಮೀಸೆ ದಪ್ಪವಾಗಿದ್ದರೂ ಕಳೆ ಮಾತ್ರ ಶಾಂತವಾಗಿದೆ. ಕಣ್ಣುಗಳು ಜೀವತುಂಬಿಬಂದಿದೆ. ಕಿವಿಯಲ್ಲಿ ಚುಚ್ಚಿದ ಮುತ್ತಿನೋಲೆ. ತಲೆಯ ಮೇಲಿನ ಜರಿಪಟ್ಟಿಯ ರುಮಾಲು. ನೊಸಲಿಗೆ ವಿಭೂತಿ. ಮುಖದಲ್ಲಿ ಹಿತಮಿತವಾದ ನೆರಳು. ಬೆಳಕಿನ ವಿಭಜನೆ ಇದೆ. ಇಲ್ಲಿ ಯಾವುದೇ ಬ್ರಶ್‌ಗಳ ನೇರ ಹೊಡೆಗಳಿಲ್ಲ. ಬಣ್ಣಗಳನ್ನು ಬೆರಸಿ ಮೃದುವಾಗಿ ಲೇಪಿಸಿದ್ದಾರೆ. ಹಿನ್ನೆಲೆಯಲ್ಲಿಯ ಪರದೆ ಅದರ ನೆರಿಗೆಗಳು ಅದರ ಮೈವಳಿಕೆ ನೈಜವಾಗಿ ಚಿತ್ರಿಸಿದ್ದಾರೆ. ಈ ಚಿತ್ರವನ್ನು ಋಣಮುಕ್ತದ ಭಾವನೆಯಿಂದ ಮಾಡಿದ್ದರಿಂದ ಆ ಕಲಾವಿದನ ತೃಪ್ತಿಯನ್ನು ಈ ಚಿತ್ರದಲ್ಲಿ ಕಾಣಬಹುದು. ಅಂತೆಯೇ ಪಾಶ್ಚಾತ್ಯ ಕಲಾವಿದರಿಗಿಂತಲೂ ಶ್ರೇಷ್ಠ ಮಟ್ಟದಲ್ಲಿ ಈ ಭಾವಚಿತ್ರ ರಚಿಸಿದ್ದಾರೆ.

ಚಿತ್ರ ೧೦೦ : ಇದೊಂದು ಹೆಣ್ಣುಮಗಳ ಭಾವಚಿತ್ರ. ಇಲ್ಲಿಯೂ ಸಹಿತ ಸೂಕ್ಷ್ಮವಾಗಿ ಎಲ್ಲ ವಿವರವನ್ನು ಚಿತ್ರಿಸಿದ್ದಾರೆ. ಮೂಗಿನಲ್ಲಿಯ ಮೂಗುತಿಯನ್ನು. ಕುಪ್ಪಸದ ಬಟ್ಟೆಯ ನಕ್ಷೆಯನ್ನು ಚಿತ್ರಿಸಿದ್ದಾರೆ. ಅದೇ ಬಣ್ಣಗಳ

---

೧೪೭. ಎಂ. ವಿ. ಚೆಟ್ಟಿ : ನೆನಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೩೭-೧೩೭

ಬೆರಕೆಯ ಮೃದು ಲೇಪನ ಸೀರೆಯ ಸೆರಗಿನ ಜರಿಅಂಚು ಅಲ್ಲಲ್ಲಿ ಮುದಡಿದ್ದನ್ನು ನೈಜವಾಗಿ ಚಿತ್ರಿಸಿದ್ದಾರೆ. ಇದರ ಅಳತೆ ೧೬" X ೨೦" ಚೆಟ್ಟಿಯವರ ಸಂಗ್ರಹದಲ್ಲಿದೆ. (ಅಧ್ಯಾಯ ಏಳರಲ್ಲಿಯ ೨೦ ನೇ ಚಿತ್ರವನ್ನು ನೋಡಿರಿ)

ಚಿತ್ರ ೧೧೧ : ಇದೊಂದು ವಯಸ್ಸಾದ ಪುರುಷನ ಭಾವಚಿತ್ರ ಈ ಚಿತ್ರದಲ್ಲಿ ಚರ್ಮದ ಮೈವಳಿಕೆ ಅತ್ಯಂತ ನೈಜವಾಗಿ ಚಿತ್ರಿತವಾಗಿದೆ. ಮುಖದಲ್ಲಿ ಜೋತುಬಿದ್ದ ಅಲ್ಲಲ್ಲಿ ನೆರಿಗೆಗಟ್ಟಿ ಚರ್ಮದ ಪರಿಣಾಮ ನೈಜವಾಗಿ ಚಿತ್ರಿಸಿದ್ದಾರೆ. ತಲೆಯ ರುಮಾಲಿನಲ್ಲಿಯ ಜರಿಯ ಚೌಕಳಿ ಹಾಗೂ ಜರಿಪಟ್ಟೆ ಅದರಲ್ಲಿ ಸೂಕ್ಷ್ಮ ನೆರಳು ಬೆಳಕು ಕಣ್ಣಲ್ಲಿ ಜೀವಭಾವ ತುಂಬಿದೆ. ಈ ಚಿತ್ರದ ಅಳತೆ ೧೬" X ೨೦" ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೧೨ : ಈ ಚಿತ್ರ ಪುರುಷನದಾಗಿದೆ. ಇಲ್ಲಿ ಆಗಿನ ಶ್ರೀಮಂತ ವರ್ಗದವರು ಧರಿಸುತ್ತಿದ್ದ ಪೋಷಾಕಿನ ಬಗ್ಗೆ ಹೆಚ್ಚು ತಿಳಿವಳಿಕೆಯನ್ನು ನೀಡುವಂತಹದಾಗಿದೆ. ಆತ ಧರಿಸಿದ ಜರಿಯ ಮೈಸೂರು ಪೇಟ ಮತ್ತು ಕರಿಕೋಟಿನ ಮೇಲೆ ಜರಿಯ ಪಟ್ಟೆಶಲ್ಯ ಕೊರಳಲ್ಲಿ ಬಂಗಾರದ ಆಭರಣ ಅಲ್ಲದೆ ಹಣೆಯ ಮೇಲೆ ತಿಲಕ. ಇಲ್ಲಿ ಜರಿಬಟ್ಟೆಯ ಮೈವಳಿಕೆಯಾಗಲಿ. ಅದರ ಪರಿಣಾಮವಾಗಲಿ ನಿಜವಾಗಿಯೂ ಜರಿಬಟ್ಟೆಯನ್ನೇ ಕತ್ತರಿಸಿ ಹಚ್ಚಿರುವರೇನೋ ಎನ್ನುವಷ್ಟು ನೈಜವಾಗಿ ಚಿತ್ರಿಸಿದ್ದಾರೆ. ಮುಖದಲ್ಲಿ ಶ್ರೀಮಂತಿಕೆಯ ಕಳೆ ಇದೆ. ಈ ಚಿತ್ರ ೧೬" X ೨೦" ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೧೩ : ಇದೊಂದು ಇಂಗ್ಲೀಷ ವ್ಯಕ್ತಿಯ ಚಿತ್ರವಾಗಿದೆ. ಮುಖದಲ್ಲಿ ಅಷ್ಟೇ ರಕ್ತವನ್ನು ಹೊರ ಚಿಮ್ಮಿಸುವ ಚರ್ಮದ ಪರಿಣಾಮವಿದೆ. ಮೀಸೆ. ದಾಡಿ. ತಲೆಗೂದಲು ಬಿಳಿಮಿಶ್ರಿತ ಕಂದುಬಣ್ಣವನ್ನು ಹೊಂದಿದೆ. ಇಲ್ಲಿ ಮುಖದಲ್ಲಿ. ಕೋಟಿನಲ್ಲಿ ಕೆಲವು ಕುಂಚಗಳ ಎಳೆತಗಳನ್ನು ಅಲ್ಲಲ್ಲಿ ಕಾಣುತ್ತೇವೆ. ಈ ಚಿತ್ರದ ಅಳತೆ ೧೬" X ೨೦" ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೧೪ : ಇದು ಅತ್ಯಂತ ಹಳೆಯ ಚಿತ್ರವಾಗಿದ್ದು ಅಲ್ಲಲ್ಲಿ ಬಣ್ಣ ಉದುರಿ ಹೋಗಿದೆ. ಇದೊಂದು ವಯಸ್ಸಾದ ಪುರುಷನ ಭಾವಚಿತ್ರ. ಈ ಚಿತ್ರದಲ್ಲಿ ಮುಖದಲ್ಲಿಯ ಬಣ್ಣದ ಬೆರಕೆ. ವಿಶೇಷವಾಗಿ ನೀಲಿಯ ಕಣ್ಣುಗಳು (ಬೆಕ್ಕಿನ ಕಣ್ಣಿನಂತೆ) ಅದರಲ್ಲಿಯ ಜೀವ ನೈಜವಾಗಿ ಚಿತ್ರಿತಗೊಂಡಿದೆ. ಕುತ್ತಿಗೆಯ ವರೆಗಿನ ಕರಿಕೋಟು ತಲೆಯ ಮೇಲೆ ಬಿಳಿರುಮಾಲು ಕೋಟಿನ ಮೇಲೆ ಅಡ್ಡಹಾಕಿರುವ ಬಿಳಿಶಲ್ಯೆ. ಜೊತೆಗೆ ಬಿಳಿ ಮೀಸೆ. ಮುಖದಲ್ಲಿ. ಉಡುಗೆಯಲ್ಲಿ ಎಷ್ಟು ಬೇಕೋ ಅಷ್ಟು ಮಾತ್ರ ನೆರಳು ಬೆಳಕು ಇದೆ. ಇದರ ಅಳತೆ ೧೬" X ೨೦" ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೧೫ : ಈ ಚಿತ್ರ ಶ್ರೀ ದಿ. ದೀವಾನ ಬಹದ್ದೂರ ಶಿವಪ್ಪ ಮಾಸ್ತಿಯವರ ಭಾವಚಿತ್ರ. ಇದು ಗದುಗಿನ ಕೃತಪುರ ಪ್ರೆಸ್‌ನಲ್ಲಿ ಇದೆ. ಅಳತೆ ೧೬" X ೨೦". ಆಗಿನ ಪೋಷಾಕು ಜರಿರುಮಾಲು ತಲೆಯ ಮೇಲಿದ್ದರೆ ಮೈ ಮೇಲೆಲ್ಲ ಬ್ರಿಟೀಷ ರೀತಿಯ ಪೋಷಾಕು. ಮೀಸೆ ವ್ಯಕ್ತಿಯ ದರ್ಪವನ್ನು ಸೂಚಿಸುವ ಮುಖಭಾವದೊಂದಿಗೆ ಮೇಳವಾಗಿದೆ. ಕೊರಳಲ್ಲಿ ಟೈ ಕಾಲರ್ ಅಸ್ತವ್ಯಸ್ತವಾಗಿರುವುದು ನೈಜವಾಗಿ ಚಿತ್ರಿತವಾಗಿದೆ. ಕೋಟು ಮುಂತಾದ ಉಡುಪುಗಳ ಮೈವಳಿಕೆಗಳು ಮುಟ್ಟಿನೋಡುವಂಥ ಅನುಭವ ನೀಡುವಷ್ಟು ನೈಜವಾಗಿ ಚಿತ್ರಿಸಿದ್ದಾರೆ. ಕಣ್ಣಲ್ಲಿ ಜೀವ ಚೈತನ್ಯವಿದೆ.



६२.



६४.



೯೯. ಶಿರಸಂಗಿ ಲಿಂಗರಾಜರು



೯೮ ಶ್ರೀಮತಿ ಸುಂದರಮ್ಮ ಚೆಟ್ಟಿ



೧೦೨



೧೦೩



൧൦൪.



൧൦൨.



೧೦೬. ದಿ. ಶ್ರೀ ಶಾಂತಪ್ಪ ವೀರಪ್ಪ ಕೋಟಿ



೧೦೫. ದಿ. ಶ್ರೀ ಶಿವಪ್ಪ ದಿವಾನ ಬಹಾದ್ದೂರ



೧೦೭. ದಿ. ಶ್ರೀ ಜಿ. ಎಸ್. ಮಾನ್ವಿ

ಚಿತ್ರ ೧೦೬ : ಇದು ಶ್ರೀ ಶಾಂತಪ್ಪ ವೀರಪ್ಪ ಕೋಟಿಯವರ ಭಾವಚಿತ್ರ. ಇದು ಸಹಿತ ಗದುಗಿನ ಕೃತಪುರ ಪ್ರೆಸ್‌ನಲ್ಲಿ ಇದೆ. ಅಳತೆ ೧೬" X ೨೦" ಈ ಚಿತ್ರದಲ್ಲಿ ಮುಖ್ಯವಾಗಿ ಎದ್ದು ಕಾಣುವದು ಮುಖದಲ್ಲಿಯ ಉದ್ದನೆಯ ಮೀಸೆ, ಠೀವಿಯಿಂದ ಕೂಡಿದ ಭಾವನೆ. ಕಿವಿಯಲ್ಲಿ ಮುತ್ತಿನ ಓಲೆ. ತಲೆಯಮೇಲೆ ಜರಿಯ ರುಮಾಲು. ಕೋಟಿನ ಮೇಲೆ ಅಡ್ಡವಾಗಿ ಹಾಕಿಕೊಂಡಿರುವ ಜರಿಯ ಶಲ್ಯೆ. ಇಲ್ಲಿ ಕೋಟಿನ ಗುಂಡಿಗಳನ್ನು ಸಹಿತ ನೆರಳು ಬೆಳಕಿನೊಂದಿಗೆ ಸಹಜವೆಂಬಂತೆ ಚಿತ್ರಿಸಿದ್ದಾರೆ. ಚೆಟ್ಟಿಯವರು ಭಾವ ಚಿತ್ರವೇ ಇರಲಿ ಯಾವುದೇ ಇರಲಿ ಅತ್ಯಂತ ಸಣ್ಣ ವಸ್ತುವಿಗೂ ಅಷ್ಟೇ ಪ್ರಾಮುಖ್ಯತೆಯನ್ನು ನೀಡಿರುವದು ಇಂತಹ ಚಿತ್ರಗಳನ್ನು ನೋಡಿದಾಗ ಅರ್ಥವಾಗುತ್ತದೆ.

ಚಿತ್ರ ೧೦೭ : ಇದು ದಿ. ಶ್ರೀ ಜಿ. ಎಸ್. ಮಾಸ್ತಿಯವರ ಭಾವಚಿತ್ರ. ಮಧ್ಯವಯಸ್ಕರ ಚಿತ್ರ ಇದಾಗಿದೆ. ಇಲ್ಲಿ ಚೆಟ್ಟಿಯವರು ಚಿತ್ರಿಸಿದ ಕನ್ನಡಕದ ಸೂಕ್ಷ್ಮತೆಯನ್ನೂ ಕಾಣಬಹುದು. ಕನ್ನಡಕದ ಹಿಂದೆ ಕಣ್ಣಿನ ಸುತ್ತಲೂ ಇರುವ ಕಪ್ಪು ನೈಜವಾಗಿ ಚಿತ್ರಿತವಾಗಿದೆ. ಮುಖದಲ್ಲಿ ಕಿರುನಗೆ ಈ ಚಿತ್ರವೂ ಸಹಿತ ಗದುಗಿನ ಕೃತಪುರ ಪ್ರೆಸ್‌ನಲ್ಲಿ ಇದೆ. ಅಳತೆ ೧೬" X ೨೦"

ಹೀಗೆ ಚೆಟ್ಟಿಯವರು ಅನೇಕರ ಭಾವ ಚಿತ್ರಗಳನ್ನು ಚಿತ್ರಿಸಿಕೊಟ್ಟಿದ್ದಾರೆ. ಅವುಗಳೆಲ್ಲವನ್ನು ಇಲ್ಲಿ ವಿವರಿಸಲು ಸಾಧ್ಯವಿಲ್ಲ. ಯಾಕೆಂದರೆ ಇಲ್ಲಿ ಮಹಾಪ್ರಬಂಧವು ತನ್ನದೇ ಆದಂಥಹ ಚೌಕಟ್ಟನ್ನು ಹೊಂದಿರುವುದರಿಂದ ಈ ರೀತಿ ಅವರು ಚಿತ್ರಿಸಿದ ಹೆಸರುಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

೨. ಜೀವಮಾದರಿ ಚಿತ್ರಗಳು (Life painting)

ಜೀವಮಾದರಿಯ ಚಿತ್ರಗಳನ್ನು ಸಹಿತ ಚೆಟ್ಟಿಯವರು ಸಾಕಷ್ಟು ರಚಿಸಿದ್ದಾರೆ. ಅನೇಕ ರೂಪದರ್ಶಿಗಳನ್ನು ಇಲ್ಲಿ ಬಳಸಿ ಚಿತ್ರಿಸಿದ್ದಾರೆ. ಮತ್ತು ಅನೇಕ ಸ್ವಾಮಿಗಳ ಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ. ಆದ್ದರಿಂದ ಇಲ್ಲಿಯೂ ಸಹಿತ ರೂಪದರ್ಶಿ ಜೀವಮಾದರಿ ಚಿತ್ರಗಳು ಹಾಗೂ ಛಾಯಾಚಿತ್ರಗಳ ಜೀವಮಾದರಿ ಚಿತ್ರಗಳೆಂದು ವಿಭಾಗಿಸಲಾಗಿದೆ.

I) ರೂಪದರ್ಶಿಗಳನ್ನು ಬಳಸಿಕೊಂಡು ಚಿತ್ರಿಸಿದ ಜೀವಮಾದರಿ ಚಿತ್ರಗಳು

i) ಕುಳಿತ ರೂಪದರ್ಶಿಗಳ ಚಿತ್ರಗಳು

ಚಿತ್ರ ೧೦೮ : ಹುಕ್ಕಾ ಸೇದುತ್ತ ಕುಳಿತ ವ್ಯಕ್ತಿಯ ಚಿತ್ರ : ಈ ಚಿತ್ರವನ್ನು ಗೋಕಾಕದಲ್ಲಿ ರಚಿಸಿದ್ದು. ಚೆಟ್ಟಿಯವರು ಹಾಗೆ ದಾರಿಯಲ್ಲಿ ಹೋಗುವಾಗ ಯಾರದಾದರೂ ಚಿತ್ರ ರಚಿಸಬೇಕು ಅಂದ್ರೆ ರಚಿಸಿಯೇ ಬಿಡುತ್ತಿದ್ದರೆಂದು ಅವರ ಶಿಷ್ಯರಾದ ಶ್ರೀ ಎಸ್. ಜಿ. ಮುಂಗರವಾಡಿಯವರು ಈ ಚಿತ್ರರಚಿಸಿದ ಹಿನ್ನೆಲೆ ಹೀಗೆ ಹೇಳಿದರು. " ಒಮ್ಮೆ ನಾನು ಚೆಟ್ಟಿಯವರು ಇಲ್ಲೆ ದಾರಿಯಲ್ಲಿ ಹೋಗಬೇಕಾದ್ರ ಒಬ್ಬ ಮುದುಕ ದಪ್ಪ ಮೀಸೆಯುಂವ ಧೋತರ ಉಟಗೊಂಡು ಹೊರಟಿದ್ದ ಅವನಿಗೆ ತಡೆದು ಎರಡು ನಿಮಿಷ ನನಗ ಅವನ ಜೊತೆ ಮಾತನಾಡ್ಲಿಕ್ಕೆ ಹೇಳಿ ಕೂಡ್ಲೆ ಒಂದು ಸ್ಕೆಚ್ ತೆಗದ್ರು ಅಲ್ಲದೆ ಅವನ ಪೇಂಟಿಂಗ. ಮಾಡಬೇಕನ್ಸೈತಿ ಅಂತ ಹೇಳಿ ಅವನನ್ನು ಮನಿಗೆ ಕರಕೊಂಡು ಹೋಗಿ ಅವನಿಗೆ ಊಟಾಕೊಟ್ಟು ಕೂಡ್ರಿಸಿ ತೈಲ ಚಿತ್ರ ರಚಿಸಿದ್ರು" [೧೪೮] ಅದೇ ಈ ಚಿತ್ರ. ಚಿತ್ರದಲ್ಲಿ ಮುದುಕನು ಚಿಂತಾಮಗ್ನನಾಗಿ

---

೧೪೮. ಎಸ್. ಜಿ. ಮುಂಗರವಾಡಿ ಅವರ ಸಂದರ್ಶನ. ದಿನಾಂಕ ೨೨-೧೦-೨೦೦೦. ಗೋಕಾಕ

ಹುಕ್ಕಾ ಸೇದುತ್ತಿದ್ದಾನೆ. ಪಕ್ಕದಲ್ಲಿ ಒಂದು ತಂಬಿಗೆ ಮತ್ತು ಕುಡುಗೋಲಿದೆ. ದಪ್ಪನಾದ ಬಿಳಿ ಮೀಸೆ ಕಣ್ಣಿಗೆ ಆದ ಗುಳ್ಳೆಯನ್ನು ಸಹಿತ ಚಿತ್ರಿಸಿದ್ದಾರೆ. ಸುಕ್ಕುಗಟ್ಟಿದ ಮುಖ ಚರ್ಮದ ಮೈವಳಿಕೆ ನೈಜವಾಗಿ ಚಿತ್ರಿತವಾಗಿದೆ. ಕೈಯಲ್ಲಿ ಹಿಡಿದ ಹುಕ್ಕಾ (ಬಿಡಿ) ದಿಂದ ಹೊಗೆ ಹೋಗುತ್ತಿರುವುದನ್ನು ಸಹಿತ ಚಿತ್ರಿಸಿದ್ದಾರೆ. ತೊಟ್ಟಂತಹ ಉಡುಪಿನಲ್ಲಿ ನೆರಳು ಬೆಳಕಿನಿಂದ ಅದರ ಮಡಿಕೆಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ತೊಟ್ಟ ಅಂಗಿ ಮೊಣಕೈ ಹತ್ತಿರ ಹರಿದುಹೋಗಿದೆ. ಇದೊಂದು ಅತ್ಯುತ್ತಮವಾದ ಜೀವ ಮಾದರಿ ಚಿತ್ರವಾಗಿದೆ. ಇದರ ಅಳತೆ ೨' X ೨' ಚೆಟ್ಟಿಯವರ ಸಂಗ್ರಹದಿಂದ ೧೯೬೭ ರಲ್ಲಿ ರಚಿಸಿದ್ದು. (ಅಧ್ಯಾಯ ಏಳರಲ್ಲಿಯ ೨೧ ನೇ ಚಿತ್ರವನ್ನು ನೋಡಿರಿ)

ಚಿತ್ರ ೧೦೯ : ಇದೊಂದು ಸ್ವಾಮೀಜಿ (ಸನ್ಯಾಸಿಯ) ಚಿತ್ರವಾಗಿದೆ. ಕಪ್ಪು ವರ್ಣದವನಾಗಿದ್ದರಿಂದ ಈತನ ಮೈಬಣ್ಣದಲ್ಲಿ ನೆರಳು ಬೆಳಕನ್ನ ಜಾಣ್ಮೆಯಿಂದ ವಿಂಗಡಿಸಿದ್ದಾರೆ. ತಲೆಯ ಮೇಲೆ ಭಾರವಾದ ಬಹುಗಾತ್ರದ ಜಟೆ ಅದಕ್ಕೆ ತೌಲ್ಯವಾಗಿ ಉದ್ದನೆಯ ಗಡ್ಡ. ಮೀಸೆ. ಹಣೆಯ ಮೇಲೆ ವಿಭೂತಿ. ಹಿನ್ನೆಲೆಯ ಬಟ್ಟೆಯನ್ನು ಆತನ ಮೈಗೆ ತಕ್ಕಂತೆ ನೀಲಿ ಅದರಲ್ಲಿ ಬಿಳಿ ಮಿಶ್ರಿತ ವರ್ಣ ಉಪಯೋಗಿಸಿದ್ದಾರೆ. ಆತನ ನೆರಳನ್ನು ಸಹಿತ ಚಿತ್ರಿಸಿದ್ದಾರೆ. ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೧೦ : ಒಂದರ ಕಾಲಮೇಲೊಂದು ಕಾಲನ್ನು ಹಾಕಿ ಕುಳಿತ ಒಬ್ಬ ಸ್ವಾಮಿಯ ಚಿತ್ರ ತಲೆಯ ಮೇಲೆ ಜಟೆ ಉದ್ದನೆಯ ಗಡ್ಡ. ಮೀಸೆ ಎರಡು ಕೈಗಳನ್ನು ಮಡಚಿ ಹಿಡಿದುಕೊಂಡು ಕುಳಿತಿರುವನು. ಮೈಮೇಲೆ ಲಂಗೋಟಿ ಒಂದನ್ನು ಹೊರತುಪಡಿಸಿ ಇನ್ನಾವ ಬಟ್ಟೆಯೂ ಇಲ್ಲ. ಕಪ್ಪನೆಯ ವರ್ಣ. ಹಿನ್ನೆಲೆಯಲ್ಲಿ ಅಲ್ಲಲ್ಲಿ ಕುಂಚದ ಹೊಡೆತಗಳನ್ನು ನೋಡುತ್ತೇವೆ. ಸರಿಯಾಗಿ ಊಟವಿಲ್ಲದ ಕೃಶವಾದ ದೇಹವಾಗಿದ್ದರಿಂದ ಮೈಯಲ್ಲಿಯ ಎಲವುಗಳು ಕಾಣುವಂತೆ ನೈಜವಾಗಿ ಚಿತ್ರಿಸಿದ್ದಾರೆ. ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೧೧ : ಇದು ಸಹಿತ ಒಬ್ಬ ಸ್ವಾಮಿಯ ಚಿತ್ರ ಧ್ಯಾನದಲ್ಲಿ ಕುಳಿತಿರುವಂತಿದೆ. ಬಿಳಿ ಮೀಸೆ. ಗಡ್ಡ. ನೊಸಲಿಗೆ ವಿಭೂತಿ ಕೃಶವಾದ ದೇಹವಾದ್ದರಿಂದ ಇಲ್ಲಿ ಕೈಯಲ್ಲಿ ಕಾಣುತ್ತಿರುವ ನರಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ಎದೆಯ ಮೇಲೆ ಕಾವಿ ಬಟ್ಟೆಯ ಪಂಚೆಯನ್ನು ಅಡ್ಡಲಾಗಿ ಹಾಕಿಕೊಳ್ಳಲಾಗಿದೆ. ಅರೆಮುಚ್ಚಿದ ಕಣ್ಣು ಇಂತಹ ಕಲಾ ಕೃತಿಗಳು ಚೆಟ್ಟಿಯವರ ಅಂಗ ಶಾಸ್ತ್ರದ (Anatomy) ಆಳವಾದ ಅಭ್ಯಾಸದ ಪ್ರತೀಕವಾಗಿವೆ. ರೂಪದರ್ಶಿಗೆ ತಕ್ಕಂತೆ ಹಿನ್ನೆಲೆಯ ಬಣ್ಣ ನೀಲಿ ಮತ್ತು ಬಿಳಿಯನ್ನು ಬಳಸಲಾಗಿದೆ. ಈ ಚಿತ್ರ ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೧೨ : ಈ ಚಿತ್ರದಲ್ಲಿ ಒಬ್ಬ ಯೋಗಿ ಪ್ರಾಣಾಯಾಮ ಮಾಡುತ್ತಿರುವಂತೆ ಕುಳಿತಿದ್ದಾನೆ. ಹಿನ್ನೆಲೆಯಲ್ಲಿ ನಿಸರ್ಗಮುದಿಸಿಕೊಂಡದ್ದು ಕಂಡು ಬರುತ್ತದೆ. ಸದೃಢಕಾಯ ಕಪ್ಪನೆಯ ದೇಹವಾದ್ದರಿಂದ ಅದರ ಮುಖ್ಯ ಬೆಳಕನ್ನು (High light) ತಕ್ಕಂತೆ ಚಿತ್ರಿಸಿದ್ದಾರೆ. ಬಣ್ಣಗಳ ಬೆರಕೆಯ ಜೊತೆ ಕುಂಚಗಳ ಏಳೆತಗಳನ್ನು ಕಾಣುತ್ತೇವೆ. ಹರಿಸಿದ ತಲೆ ಉದ್ದನೆಯ ಮೀಸೆ. ಗಡ್ಡ. ಆಸನದ ಕೆಳಗೆ ಹುಲಿ ಚರ್ಮವಾದರೂ ಅದರ ಬಣ್ಣ ಎಲ್ಲಿಯೂ ಪ್ರಖರವಾಗಿ ಕಾಣದಂತೆ

ಚಿತ್ರಿಸಿದ್ದಾರೆ. ಉಗ್ರವರ್ಣವನ್ನು ಸೌಮ್ಯವಾಗಿ ಬಳಸುವದೇ ಅವರ ವಿಶಿಷ್ಟತೆ. ಕುಳಿತಂಥ ರೂಪದರ್ಶಿ ಸಂಪೂರ್ಣವಾಗಿ ಧ್ಯಾನಾಸಕ್ತನಾಗಿದ್ದಾನೆ. ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೧೩ : ಇದು ಪುರುಷನ ಜೀವಮಾದರಿ ಚಿತ್ರ ಇಲ್ಲಿ ರೂಪದರ್ಶಿ ಕೈಯಲ್ಲಿ ಪುಸ್ತಕವನ್ನು ಹಿಡಿದುಕೊಂಡು ಕುಳಿತಿದ್ದಾನೆ. ಪ್ರತಿಯೊಂದು ಅಂಶವನ್ನು ವಿವರವಾಗಿ ಚಿತ್ರಿಸಿದ್ದಾರೆ. ತಲೆಯ ಕೂದಲು. ಹುಬ್ಬಿನ ಬಿಳಿಕೂದಲು. ಕೈಯ ಮೇಲಿನ ನರಗಳು ಇಲ್ಲಿ ಬಣ್ಣಗಳ ಬೆರಕೆ ಮೃದು ಕುಂಚದ ಓಡಾಟವನ್ನು ನೋಡುತ್ತೇವೆ. ಮೈಮೇಲಿನ ವಸ್ತ್ರಗಳಲ್ಲಿ ಬೇಕಿನಿಸುವಷ್ಟು ನೆರಳು ಬೆಳಕು. ಶರೀರ ಭಾಗದಲ್ಲಿಯೂ ಕೂಡಾ ಅಷ್ಟೇ. ಹಿನ್ನೆಲೆಯಲ್ಲಿ ಕಲ್ಲಿನ ಮಂಟಪದಂತೆ ಚಿತ್ರಿಸಿದ್ದಾರೆ. ಈ ಚಿತ್ರ ೧೯೮೧ ರಲ್ಲಿ ರಚಿಸಿದ್ದು. ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೧೪ : ಇಲ್ಲಿ ಈ ಚಿತ್ರದಲ್ಲಿ ವಯಸ್ಸಾದ ಮುದುಕ ಕೈಯಲ್ಲಿ ಪುಸ್ತಕ ಹಿಡಿದುಕೊಂಡು ಪಠಣ ಮಾಡುತ್ತಿರುವಂತಿದೆ. ನೇರನಾಸಿಕ ಗೌರವರ್ಣ. ತಲೆ. ಮೀಸೆ. ದಾಡಿ ಎಲ್ಲವೂ ಶ್ವೇತ ವರ್ಣ ತಲೆತುಂಬ ವಸ್ತ್ರವನ್ನು ಹೊದೆದುಕೊಂಡಿದ್ದಾರೆ. ಬಿಳಿಧೋತರ. ಬಿಳಿಯ ಉಡುಪಾದ್ದರಿಂದ ಇಲ್ಲಿ ನೆರಳಿನ ಭಾಗದಲ್ಲಿ ಕೆಂಪು. ನೀಲಿ ಹಾಗೂ ಹಳದಿ ವರ್ಣಗಳ ಬಳಕೆಯನ್ನು ಮಾಡಿ ಆ ಪರಿಣಾಮವನ್ನು ತಂದಿದ್ದಾರೆ. ಕೈಯ ಪ್ರತಿಯೊಂದು ಮಾಂಸ ಖಂಡಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ಶಾಂತ ಮುಖಭಾವ ಹಿನ್ನೆಲೆಯಲ್ಲಿ ಇಲ್ಲಿಯೂ ಕಲ್ಲಿನ ಮಂಟಪದಂತೆ ರಚಿಸಿದ್ದಾರೆ. ಇದನ್ನು ೧೯೮೩ ರಲ್ಲಿ ಚಿತ್ರಿಸಿದ್ದಾರೆ. ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೧೫ : ಈ ಚಿತ್ರದಲ್ಲಿ ಸ್ವಾಮಿ ಯೊಬ್ಬ ಪುಸ್ತಕಹಿಡಿದು ಏನೋ ಓದುತ್ತಿರುವಂತಿದೆ. ಅಗಲವಾಗಿ ಹರಡಿದ ಬಿಳಿ ಮೀಸೆ ಗಡ್ಡಗಳು ತಲೆಯ ಮೇಲೆ ಕಾವಿ ಬಟ್ಟೆಯ ರುಮಾಲು ಕೊರಳಲ್ಲಿ ಲಿಂಗದಕಾಯಿ ರುದ್ರಾಕ್ಷಿ. ಕಪ್ಪುವರ್ಣ ಅದಕ್ಕೆ ತಕ್ಕಂತೆ ನೆರಳು ಬೆಳಕಿನ ಸಂಯೋಜನೆ. ಹೆಗಲ ಮೇಲೆ ಕಾವಿ ವಸ್ತ್ರ ಎದ್ದು ತೋರುವ ಅಂಗಾಂಗಗಳ ಪ್ರತಿಯೊಂದು ಸ್ನಾಯುಭಾಗ. ವಿವರವಾಗಿ ಚಿತ್ರಿಸಿದ್ದಾರೆ. ಚೆಟ್ಟಿಯವರ ಸಂಗ್ರಹದಿಂದ

ಈ ಎಲ್ಲ ವ್ಯಕ್ತಿಗಳ ಜೀಮಾದರಿ ಚಿತ್ರಗಳಲ್ಲಿ ನೋಡುವದೆಂದರೆ ಅವರು ಕುಳಿತಂತ ವಿವಿಧ ಭಂಗಿ. ಶರೀರ ರಚನೆ. ವರ್ಣಗಳ ಸಂಯೋಜನೆ ಹಿನ್ನೆಲೆಯಲ್ಲಿ ಬಳಸಿದ ವರ್ಣಗಳು ಹಾಗೂ ಪರಿಸರದ ಕಲ್ಪನೆ. ಕಪ್ಪುದೇಹ ಹಾಗೂ ಗೌರವವರ್ಣದ ದೇಹದ ನೆರಳು ಬೆಳಕು ಅದರಲ್ಲಿ ಮುಖ್ಯವಾದ ಬೆಳಕು (High light) ನ್ನು ಬಳಸಿದ ಜಾಣ್ಮೆ ಎಲ್ಲವೂ ಚೆಟ್ಟಿಯವರ ಆಳವಾದ ವರ್ಣಗಳ ಅಭ್ಯಾಸದ ಮೌಲ್ಯವನ್ನು ತಿಳಿಸುವ ಚಿತ್ರಗಳಾಗಿವೆ.

ii) ಆಸನ ಅಥವಾ ಕಟ್ಟೆಯ ಮೇಲೆ ಕುಳಿತಂಥ ವಿವಿಧ ಭಂಗಿಯ ಜೀವಮಾದರಿಯ ಚಿತ್ರಗಳು :

ಚಿತ್ರ ೧೧೬ : ಕಟ್ಟೆಯ ಮೇಲೆ ಕುಳಿತ ವ್ಯಕ್ತಿ ಆತನ ಮುಖ ಭಾವ ಹಾಗೂ ಉಡುಪುಗಳಿಂದ ಆತನೊಬ್ಬ ಮುಸ್ಲಿಂ ವ್ಯಕ್ತಿ ಎಂದು ತಿಳಿದುಬರುತ್ತದೆ. ಇನ್ನು ಹದಿವಯಸ್ಸಿನವನಾದ್ದಾನೆ. ಚಿಕ್ಕನ ಕಣ್ಣುಗಳು ಕಂದು ಬಣ್ಣದ ಮೀಸೆ ದಾಡಿಗಳನ್ನು ನೈಜ ವರ್ಣದಂತೆ ಚಿತ್ರಿಸಿದ್ದಾರೆ. ತಲೆಯ ಮೇಲೆ ಟೋಪಿ ದಾರದಿಂದ ಹೆಣೆದದ್ದು ಎಡಗೈಲಿ ದಪ್ಪನೆಯ ಕೋಲನ್ನು ಹಿಡಿದುಕೊಂಡಿದ್ದಾನೆ. ಉಟ್ಟುಕೊಂಡ ಉದ್ದನೆಯ ತೋಳಿನ ಅಂಗಿ. ಕಿತ್ತಳೀ ಬಣ್ಣದ ಪ್ಯಾಂಟು. ಹೆಚ್ಚಾಗಿ

ಅನೇಕ ಕಲಾವಿದರು ಮುಖಕ್ಕೆ ಮಾತ್ರ ಹೆಚ್ಚಿನ ಪ್ರಾಮುಖ್ಯತೆನೀಡಿ ಕೈ ಕಾಲುಗಳನ್ನು ಕಟ್ಟಿಗೆಯ ಬಣ್ಣದಂತೆ ಚಿತ್ರಿಸಿರುತ್ತಾರೆ. ಆದರೆ ಚೆಟ್ಟಿಯವರು ಮುಖದಷ್ಟೆ ಪ್ರಾಮುಖ್ಯತೆಯನ್ನು ಸರ್ವಾಂಗಗಳಿಗೆ ನೀಡಿ ಚಿತ್ರಿಸಿದ್ದರಿಂದ ಕೃತಿಯು ನೈಜತೆಗೆ ಅತ್ಯಂತ ಹತ್ತಿರವಾಗಿದೆ. ಬೆರಳ ಮೇಲಿನ ಉಬ್ಬುತಗ್ಗುಗಳನ್ನು ಅಷ್ಟೇ ವಿವರವಾಗಿ ಚಿತ್ರಿಸಿದ್ದಾರೆ. ಕಣ್ಣಿನಲ್ಲಿ ಜೀವ ಚೈತನ್ಯವಿದೆ. ಹಿನ್ನೆಲೆಯಲ್ಲಿ ಮತ್ತೆ ಅದೇ ಮಂಟಪದ ಕಂಬಗಳು. ೧೯೫೫ ರಲ್ಲಿ ರಚಿಸಿದ್ದು ಅಳತೆ ೨' X ೩' ಚೆಟ್ಟಿಯವರ ಸಂಗ್ರಹದಿಂದ ಇದಕ್ಕೆ ಯಾತ್ರಿಕ ಎಂದು ಹೆಸರನ್ನು ಕೊಟ್ಟಿದ್ದಾರೆ.

ಚಿತ್ರ ೧೧೭ : ಇದೊಂದು ಫಕೀರನ ಚಿತ್ರ. ೨' X ೩' ಅಳತೆಯದು. ಕಟ್ಟೆಯ ಮೇಲೆ ಎಡಗೈಯಲ್ಲಿ ಕೊಡಲಿ ಆಕಾರದ ಬಡಿಗೆ ಹಿಡಿದಿದ್ದಾನೆ. ಬಲ ಮಗ್ಗುಲಲ್ಲಿ ಭಿಕ್ಷಾ ಪಾತ್ರೆಯಿದೆ. ಅದರ ಕರಿಬಣ್ಣದ ನುಣುಪುತನ ನೈಜತೆಯಿಂದ ಕೂಡಿದೆ. ಅದರ ಕೆಳಗೆ ಜೋಳಿಗೆ. ಮುಖಲಕ್ಷಣ ಭಾವನೆಗಳಿಂದಲೇ ಆತ ಮುಸ್ಲಿಂ ಎಂದು ತಿಳಿಯುವಷ್ಟು ತದ್ರೂಪತೆ ಅದರಲ್ಲಿದೆ. ತಲೆಮೇಲೆ ಟೋಪಿ ಚೌಕಾಕಾರದ ಗಡ್ಡ. ಹುರಿ ಮೀಸೆ. ಹೆಗಲ ಮೇಲೆ ಹಾಕಿದ ಬಟ್ಟೆ. ಕೊರಳಲ್ಲಿ ಮುತ್ತಿನ ಸರಗಳು. ಕೈಯಲ್ಲಿ ಕಬ್ಬಿಣದ ಬಳೆಗಳು ಇವೆ. ತೊಟ್ಟುಕೊಂಡ ಲುಂಗಿಯ ಮೇಲಿನ ನಕ್ಷೆಯನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ. ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೧೮ : ಕಾಗದವನ್ನು ಓದುತ್ತಾ ಕಟ್ಟೆಯ ಮೇಲೆ ಕುಳಿತಿರುವ ಮುದುಕ. ಹೆಗಲ ಮೇಲೆ ಒಂದು ವಸ್ತ್ರವನ್ನು ಇಳಿಬಿಟ್ಟುಕೊಂಡಿದ್ದಾನೆ. ಲಕ್ಷವೆಲ್ಲ ಕಾಗದದ ಮೇಲೆ ಚವರಿಯಂತೆ ದಪ್ಪನಾದ ಬಿಳಿಮೀಸೆ ತಲೆಯ ಮೇಲೆ ಹರವಿದ ಸ್ವಲ್ಪ ಕೂದಲು ಕೃಷವಾದ ದೇಹ ಮೈಯಲ್ಲಿಯ ಎಲಬು. ನರಗಳನ್ನು ಇದು ಸೂಕ್ಷ್ಮವಾಗಿ ರಚಿಸಿದ್ದಾರೆ. ಬಾಗಿದ ಬೆನ್ನು ಹಿನ್ನೆಲೆಯಲ್ಲಿ ಹಾಕಿದ ಗೋಡೆಯಂತೆ ಚಿತ್ರಿಸಿದ್ದಾರೆ. ಕೂದಲು ಬಿಡಿಬಿಡಿಸಿ ಗುಂಪಾಗಿ ಕಾಣುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಅವರು ಬಳಸಿದ ಕುಂಚದ ಓಡಾಟ ಮೆಚ್ಚುವಂತಹದು. ಅಳತೆ ೨' X ೩' ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೧೯ : ಲಂಬಾಣಿ ಹೆಣ್ಣುಮಗಳು ಕಟ್ಟೆಯ ಮೇಲೆ ಕುಳಿತಿದ್ದು. ಹಿನ್ನೆಲೆಯಲ್ಲಿ ನಿಸರ್ಗ ರಚಿಸಿದ್ದಾರೆ. ಗಿಡ ಅದರ ಟೊಂಗೆಗಳು ಎಲೆಗಳನ್ನು ಮಸುಕಾಗಿ ಚಿತ್ರಿಸಿದ್ದಾರೆ. ಅವಳು ಹಾಕಿಕೊಂಡ ಎಲ್ಲಾ ಆಭರಣ ಬಟ್ಟೆಗೆ ಹಚ್ಚಿದ ನಾಣ್ಯಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ಕೈಯಲ್ಲಿ ಹಾಕಿದ ದಂತದ ಬಳೆಗಳು ಕಾಲಿನ ಎಲ್ಲಾ ಬೆರಳುಗಳಿಗೆ ಹಾಕಿದ ಕಾಲುಂಗುರ ಮತ್ತು ಅವುಗಳ ನಕ್ಷೆ. ಮೂಗುತಿ. ಬಟ್ಟೆಯ ಮೇಲೆ ತುಂಡು ಬಟ್ಟೆಗಳನ್ನು ಹಚ್ಚಿ ಮಾಡಿದ ನಕ್ಷೆಯನ್ನೂ ನೈಜವಾಗಿ ಚಿತ್ರಿಸಿದ್ದಾರೆ. ಇಲ್ಲಿ ಚೆಟ್ಟಿಯವರು ಬಳಸಿದ ಬಣ್ಣಗಳು ರೂಪದರ್ಶಿಯಲ್ಲಿ ಉಗ್ರವಾದ ವರ್ಣಗಳಿದ್ದರೂ ಹಿನ್ನೆಲೆಯಲ್ಲಿ ಸೌಮ್ಯ ವರ್ಣಗಳನ್ನು ಬಳಸಿದ್ದಾರೆ. ಇದನ್ನು ೧೯೭೮ ರಲ್ಲಿ ರಚಿಸಿದ್ದಾರೆ. ಅಳತೆ ೨' X ೩' ಇರುತ್ತವೆ.

ಚಿತ್ರ ೧೨೦ : ಕಟ್ಟೆಯ ಮೇಲೆ ಕುಳಿತ ಮುದುಕ. ಚಿತ್ರದ ಬಲಗಡೆ ಒಂದು ಇದ್ದಿಲು ಒಲೆ ಅದರ ಮೇಲೆ ದೊಡ್ಡದಾದ ಪಾತ್ರೆಯನ್ನು ಇರಿಸಿದ್ದಾರೆ. ಎಡಕ್ಕೆ ಒಂದು ಬಕೇಟನ್ನು ಇಟ್ಟಿದ್ದಾರೆ. ಹಿನ್ನೆಲೆಯಲ್ಲಿ ಆಲದ ಮರವನ್ನು ಚಿತ್ರಿಸಿದ್ದಾರೆ. ಈ ಚಿತ್ರಗಳು ಒಂದು ರೀತಿಯಲ್ಲಿ ಸಂಯೋಜನಾ ಚಿತ್ರಗಳಂತೆ ಇವೆ. ತಲೆಗೆ ಕಟ್ಟಿದ ಕೆಂಪು ವಸ್ತ್ರ ಹಳದಿ

ವರ್ಣದ ಲುಂಗಿ ಸುತ್ತಿಕೊಂಡಿದ್ದಾನೆ. ಆ ಬಟ್ಟೆಯ ಛಾಯೆಯನ್ನು ಪಕ್ಕದಲ್ಲಿ ಇಟ್ಟಿರುವ ಪಾತ್ರೆಗಳ ಮೇಲೆ ಪ್ರತಿಫಲಿಸಿರುವುದನ್ನು ಕಾಣುತ್ತೇವೆ. ಅಳತೆ ೨' X ೩' ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೨೧ : ಏಕದಾರಿ (ತಾನಪುರ) ಹಿಡಿದು ಕುಳಿತ ದಾಸನ ಚಿತ್ರ. ಕಟ್ಟೆಯ ಮೇಲೆ ಕುಳಿತಿದ್ದಾನೆ. ತಲೆಗೆ ರುಮಾಲು ಹಣೆಯ ಮೇಲೆ ನಾಮ ಹೆಗಲ ಮೇಲೆ ಬಿಳಿವಸ್ತ್ರ ಬಟ್ಟೆಗಳಲ್ಲಿಯ ಮಡಿಕೆಗಳನ್ನು ನೈಜವಾಗಿ ಚಿತ್ರಿಸಿದ್ದಾರೆ. ಅಳತೆ ೨' X ೩' ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೨೨ : ಕುರ್ಚಿಯ ಮೇಲೆ ಕುಳಿತ ಹೆಣ್ಣುಮಗಳು ಕೈಯಲ್ಲಿ ಪುಸ್ತಕ ಹಿಡಿದುಕೊಂಡಿದ್ದಾಳೆ. ಬಲಗಾಲ ಕೆಳಗೆ ಒಂದು ದುಂಡನೆಯ ದಿಂಬಿನಂತಹದನ್ನು ಇರಿಸಿದ್ದಾರೆ. ಈ ರೀತಿ ಮೊದಲಿನ ಕಪ್ಪು-ಬಿಳಿಪಿನ ಛಾಯಾ ಚಿತ್ರಗಳನ್ನು ತೆಗೆಯುವಾಗ ಬಳಸುತ್ತಿದ್ದರು. ಇಲ್ಲಿ ಅದೇ ರೀತಿ ಆಕೆಯನ್ನು ಕೂಡಿಸಿ ಚಿತ್ರಿಸಿದ್ದಾರೆ. ಜರಿ ಅಂಚಿನ ಕಿತ್ತಳೆ ವರ್ಣದ ಸೀರೆ. ತಲೆಯಲ್ಲಿ ಮುಡಿದ ದಾಸವಾಳದ ಹೂ. ಕಿವಿಯಲ್ಲಿಯ ಬುಗುಡಿ (ಆಭರಣ)ಯನ್ನು ಮೂಗಿನ ಮುತ್ತನ್ನು ಚಿತ್ರಿಸಿದ್ದಾರೆ. ಅಳತೆ ೨' X ೩' ಇದೆ. ಚೆಟ್ಟಿಯವರ ಸಂಗ್ರಹದಲ್ಲಿದೆ.

iii) ನಿಂತುಕೊಂಡ ರೂಪದರ್ಶಿಗಳ ಜೀವಮಾದರಿ ಚಿತ್ರಗಳು

ಚಿತ್ರ ೧೨೩ : ಪಾರ್ಶ್ವ ಮುಖವಾಗಿ ನಿಂತುಕೊಂಡ ಒಬ್ಬ ಮುಸಲ್ಮಾನ ಫಕೀರ ಬಲಗೈಯಲ್ಲಿ ಕೊಡಲಿ ಆಕಾರವನ್ನು ಹೊಂದಿದ ದಂಡವಿದೆ ಎಡಗೈಲಿ ಜಪಮಾಲೆ ಅಗಲವಾದ ಪೈಜಾಮ ಮೇಲೆ ಜಾಕೇಟ್ ಕೈಮೇಲೆ ಮಡಚಿಹಾಕಿಕೊಂಡ ಬಿಳಿಬಟ್ಟೆ. ತಲೆಯ ಮೇಲೆ ದಾರದಿಂದ ಮಾಡಿದ ಟೊಪ್ಪಿಗೆ ಕಾಲಲ್ಲಿ ಮಸರಾಯಿ ಬೂಟುಗಳು. ಬಿಳಿಗಡ್ಡ ಇವೆಲ್ಲ ಆ ವ್ಯಕ್ತಿಯ ಗಂಭೀರತೆಯನ್ನು ವ್ಯಕ್ತಪಡಿಸುತ್ತವೆ. ಹಿನ್ನೆಲೆಯಲ್ಲಿ ಮನೆಯ ಒಳಾಂಗಣದ ದೃಶ್ಯವಿದೆ ಚಿತ್ರದ ಬಲಕ್ಕೆ ಕಿಟಕಿ ಇದೆ. ಚಿತ್ರದ ಅಳತೆ ೨' X ೩' ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೨೪ : ಇದೊಂದು ಭಿಕ್ಷುಕನ ಜೀವಮಾದರಿ ಚಿತ್ರ. ಅಳತೆ ೨' X ೪' ಇದೆ. ಬಲಗೈಯಲ್ಲಿ ಕೋಲನ್ನು ಹಿಡಿದುಕೊಂಡಿದ್ದಾನೆ. ಎಡಗೈಲಿ ಒಂದು ಪಾತ್ರೆ ಬಗಲಲ್ಲಿ ಜೋಳಿಗೆ ತಲೆಯ ಮೇಲೆ ವಸ್ತ್ರವನ್ನು ಸುತ್ತಿಕೊಂಡಿದ್ದಾನೆ. ಗಡ್ಡದ ರೀತಿ. ಮುಖಚರ್ಯೆ ಇವು ಆತನೊಬ್ಬ ಮುಸ್ಲಿಂ ಭಿಕ್ಷುವಾಗಿದ್ದಾನೆ ಎಂಬುದನ್ನು ಸೂಚಿಸುತ್ತವೆ. ಆತನು ತೊಟ್ಟಂತಹ ಮಡಿಕೆಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಮನೆಯ ಬಾಗಿಲು ಇದ್ದು. ಅಲ್ಲಿಯೇ ನಿಂತಂತೆ ಇದೆ. ಚೆಟ್ಟಿಯವರ ಸಂಗ್ರಹದಿಂದ

ಈ ಎಲ್ಲ ಜೀವಮಾದರಿ ಚಿತ್ರಗಳಲ್ಲಿ ವಿಭಿನ್ನ ರೀತಿಯ ಭಂಗಿಗಳಲ್ಲಿ ಕುಳಿತ ನಿಂತ ರೂಪದರ್ಶಿಗಳ ಚಿತ್ರಗಳಲ್ಲಿ ಬಳಸಿದ ವರ್ಣಗಳು. ಪೂರ್ಣವಿವರಣೆ. ಸಣ್ಣ ಆಭರಣಕ್ಕೂ ಅವರು ಕೊಟ್ಟ ಮಹತ್ವ. ಅಲ್ಲದೆ ನೆರಳು. ಬೆಳಕಿನ ಸಮ ವಿಭಜನೆ ಮತ್ತು ಹಿನ್ನೆಲೆಯಲ್ಲಿ ಮಡಿಸಿಕೊಂಡ ನಿಸರ್ಗದ ರೀತಿ ಹಾಗೂ ಒಂದು ರೀತಿಯ ಸಂಯೋಜನೆಯಂತೆಯೇ ಈ ಜೀವ ಮಾದರಿ ಚಿತ್ರಗಳನ್ನು ರಚಿಸಿದ್ದಾರೆ.

II) ಛಾಯಾಚಿತ್ರಗಳನ್ನು ಆಧರಿಸಿ ರಚಿಸಿದ ಜೀವಮಾದರಿ ಚಿತ್ರಗಳು

ಈ ಚಿತ್ರಗಳಲ್ಲಿಯ ಶರಣರನ್ನು, ಇತರ ವ್ಯಕ್ತಿಗಳನ್ನು ಛಾಯಚಿತ್ರಗಳ ಆಧಾರದಿಂದ ರಚಿಸಿದರೂ ಹಿನ್ನೆಲೆ ಮುಂತಾದ ಸುತ್ತಮುತ್ತಲಿನ ಕೆಲವು ವಸ್ತುಗಳ ಬದಲಾವಣೆ ಸಂಯೋಜನಾ ಚಿತ್ರಗಳಂತೆ ಕಾಣುತ್ತೇವೆ. ಕೆಲವು ಚಿತ್ರಗಳಲ್ಲಂತೂ ನಿಸರ್ಗವನ್ನು ಯಥೇಚ್ಛೆಯಾಗಿ ದುಡಿಸಿಕೊಂಡಿದ್ದಾರೆ. ಒಂದು ರೀತಿಯ ಭಾವನಾತ್ಮಕ ಪರಿಸರದ ಪರಿಣಾಮವನ್ನು ಇಲ್ಲಿ ಉಂಟು ಮಾಡಿದ್ದಾರೆ.

i) ಕೆಳಗೆ ಕುಳಿತ ಚಿತ್ರಗಳು

ಚಿತ್ರ ೧೨೫ : ಗದುಗಿನ ಪಂಚಾಕ್ಷರಿ ಗವಾಯಿಗಳ ಆಶ್ರಮದಲ್ಲಿ ಲಭ್ಯವಿದೆ. ಅಳತೆ. ೪' X ೩' ಇವೆ. ಹುಟ್ಟುಕುರುಡರಾದ ಪಂ. ಪಂಚಾಕ್ಷರಿ ಗವಾಯಿಗಳವರು ಉಭಯ ಗಾಯನಾಚಾರ್ಯರಾಗಿ ಸಂಗೀತ ಕ್ಷೇತ್ರಕ್ಕೆ ತಮ್ಮನ್ನರ್ಪಿಸಿ ಅನೇಕ ಅಂಧ ಮಕ್ಕಳ ಉದ್ಧಾರಮಾಡಿದ ಮಹಾಯೋಗಿ ಅವರ ಜೀವಮಾದರಿ. ಕಲಾಕೃತಿ ಇದು. ಇಲ್ಲಿ ಗವಾಯಿಗಳು ಲಿಂಗಪೂಜೆಯಲ್ಲಿ ನಿರತರಾಗಿದ್ದಾರೆ. ಮುಂದೆಲ್ಲ ಪೂಜಾಸಾಮಗ್ರಿ. ಹೂ. ದೊಡ್ಡ ದೀಪದ ಸಮೆಗಳು. ಮುಖದಲ್ಲಿ ತೇಜಸ್ಸು ಶಾಂತ ಕಳೆ. ಮುಗುಳು ನಗೆ ತ್ಯಾಗದ ಭಾವ. ಶಿವಮಯವಾದ ಶರೀರದ ತುಂಬೆಲ್ಲ ವಿಭೂತಿಯನ್ನು ಧರಿಸಿದ್ದಾರೆ. ಕೊರಳಲ್ಲಿ. ಕೈಯಲ್ಲಿ ರುದ್ರಾಕ್ಷಿ ಮಾಲೆ. ತಲೆಯ ಮೇಲೆ ವಸ್ತ್ರ. ಧೂಪದ ಹೊಗೆ ಎಲ್ಲವನ್ನು ಸಹಜ ಹಾಗೂ ನೈಜವಾಗಿ ಚಿತ್ರಿಸಿದ್ದಾರೆ.

ಚಿತ್ರ ೧೨೬ : ಈ ಚಿತ್ರ ಬೆಂಗಳೂರಿನ ಸರ್ಪಭೂಷಣ ಮಠದಲ್ಲಿ ಲಭ್ಯವಿದೆ. ಇದು ಶ್ರೀ ಸರ್ಪಭೂಷಣ ಶಿವಯೋಗಿಗಳ ಚಿತ್ರ ಶಿವಯೋಗಿಗಳು. ತಮ್ಮ ಮುಂದೆ ತಾಡೋಲೆಗಳನ್ನು ಇಟ್ಟುಕೊಂಡು ಕುಳಿತಿದ್ದಾರೆ. ಶಿವಯೋಗಿಗಳ ಹಿನ್ನೆಲೆ ನಿಸರ್ಗದಿಂದ ಆವೃತವಾಗಿದೆ. ಕಾವಿಬಟ್ಟೆಯನ್ನು ಹೊದ್ದುಕೊಂಡಿದ್ದಾರೆ. ಕಣ್ಣಿನಲ್ಲಿ ತೇಜಸ್ಸು ಪ್ರಕಾಶಮಾನವಾಗಿದೆ. ನೊಸಲು. ಶರೀರವೆಲ್ಲ ಭಸ್ಮಮಯ ತಲೆಯ ಮೇಲೆ ಕಾವಿಯ ಬಟ್ಟೆಯನ್ನೆ ರುಮಾಲಾಗಿ ಸುತ್ತಿಕೊಂಡಿದ್ದಾರೆ. ಕೊರಳಲ್ಲಿ ಲಿಂಗ ರುದ್ರಾಕ್ಷಿ ಸರವಿದೆ. ಅಳತೆ ೨' X ೨ ೧/೨' ಇದೆ.

ಚಿತ್ರ ೧೨೭ : ಸಜ್ಜಲಗುಡ್ಡದ ಶರಣಮ್ಮನವರ ಚಿತ್ರ

ಇಲಕಲ್ಲ ತಾಲೂಕಿನಲ್ಲಿ ಬರುವ ಸಜ್ಜಲಗುಡ್ಡ ಗ್ರಾಮದಲ್ಲಿ ೧೯ ನೇ ಶತಮಾನದಲ್ಲಿ ಆಗಿಹೋದ ಮಹಾಶಿವಶರಣೆಯ ಜೀವಮಾದರಿ ಚಿತ್ರ. ಈ ಚಿತ್ರ ಸಜ್ಜಲಗುಡ್ಡದ ಮಠದಲ್ಲಿ ಲಭ್ಯವಿದೆ. ಅಳತೆ ೨' X ೩' ಇದ್ದು ಚಿತ್ರದಲ್ಲಿ ಶರಣಮ್ಮನವರು ಕೈಮುಗಿದು ಕುಳಿತಿದ್ದಾರೆ. ಕಾವಿಬಣ್ಣದ ನೂಲಿನ ಸೀರೆ. ತಲೆಯ ಮೇಲೆ ಸೆರಗು ಹೊದ್ದುಕೊಂಡಿದ್ದಾರೆ. ಕೈಗಳಲ್ಲಿ ರುದ್ರಾಕ್ಷಿಮಾಲೆ. ಪಕ್ಕದಲ್ಲಿ ನೀರಿನ ಕಮಂಡಲವಿದೆ.

ಮುಖದಲ್ಲಿ ಗುರುಭಕ್ತಿ-ಲಿಂಗನಿಷ್ಠೆಯ ಸಮರ್ಪಣಾಭಾವನೆ. ಅದೆ ಕಣ್ಣಲ್ಲಿ ಸತ್ಯಾರಾಧನೆಯ ಬೆಳಕಿನಂಥಹ ಸೌಮ್ಯ ತೇಜಸ್ಸಿನ ಕಳೆ. ನೊಸಲಿಗೆ ವಿಭೂತಿ. ಕೊರಳಲ್ಲಿ ಲಿಂಗ. ಸೀರೆಯ ಮಡಿಕೆಗಳಲ್ಲಿ ಸ್ವಲ್ಪ ನೆರಳು ಬೆಳಕನ್ನು ಕಾಣುತ್ತೇವೆ. ಈ ಎಲ್ಲ ಭಾವನೆಗಳನ್ನು ಚಿಟ್ಟಿಯವರು ತಾದ್ರೂಪ್ಯವಾಗಿ ಚಿತ್ರಿಸಿದ್ದಾರೆ. ನೆಲಹಾಸುವಿನ ನಕ್ಷೆಯನ್ನು ವಿವರವಾಗಿ ಚಿತ್ರಿಸಿದ್ದಾರೆ.

ಚಿಟ್ಟಿಯವರು ಹೆಚ್ಚಾಗಿ ಪುರುಷರ ಚಿತ್ರಗಳನ್ನು ಬಹಳ ಚಿತ್ರಿಸಿದ್ದಾರೆ. ಭಾವಚಿತ್ರ ಹಾಗೂ ಜೀವಮಾದರಿ ಚಿತ್ರಗಳಲ್ಲಿ ಹೆಣ್ಣುಮಕ್ಕಳ ಚಿತ್ರಗಳು ತೀರ ಕಡಿಮೆ. ಆದರೆ ಸಂಯೋಜನಾ ಚಿತ್ರಗಳಲ್ಲಿ ಹೆಣ್ಣುಮಕ್ಕಳ ಆಕೃತಿಗಳೇ ಹೆಚ್ಚು. ಆದರೂ ಇದೊಂದು ಅಪ್ರತಿಮ ಕೃತಿಯಾಗಿದೆ.

ಚಿತ್ರ ೧೨೮ : ಶ್ರೀ ಮ. ನಿ. ಪ್ರ. ಶ್ರೀ ಮುರುಘೇಂದ್ರ ಮಹಾಶಿವಯೋಗಿಗಳು. ಗಚ್ಚಿನಮಠ ಅಥಣಿ : ಇದನ್ನು ೧೯೮೨ ರಲ್ಲಿ ಚಿತ್ರಿಸಿದ್ದಾರೆ. ಇದು ಈಗ ಅಥಣಿಯ ಗಚ್ಚಿನ ಮಠದಲ್ಲಿದೆ. ಮಹಾಶಿವಯೋಗಿಗಳು ಕುಳಿತಿದ್ದಾರೆ. ಆಸನದ ಕೆಳಗೆ ಹುಲಿತೊಗಲು ಇದೆ ಮುಂದೆ ಪುಸ್ತಕವಿದೆ. ಹಿನ್ನೆಲೆಯಲ್ಲಿ ಗಿಡಗಳಿವೆ. ಜಿಂಕೆಗಳಿವೆ. ಎಲ್ಲೆಲ್ಲೂ ಹಸಿರು. ಶಿವಯೋಗಿಗಳ ಕೈ ಮೇಲಿನ ನರಗಳನ್ನು ಚಿತ್ರಿಸಿದ್ದಾರೆ. ಇಲ್ಲಿ ಚಿಟ್ಟಿಯವರ ಭಕ್ತಿಯೇ ಮುಖ್ಯವಾದ್ದರಿಂದ ಮತ್ತು ಚಿಟ್ಟಿಯವರು ಚಿಕ್ಕವರಿದ್ದಾಗ ಶ್ರೀಗಳು ಆಶೀರ್ವಾದ ಮಾಡಿದ್ದರು. ಚಿಟ್ಟಿಯವರಿಗೆ ಶಿವಯೋಗಿಗಳ ಮೇಲೆ ಎಲ್ಲಿಲ್ಲದ ಪ್ರೀತಿ ವಿಶ್ವಾಸ. ಅಂತೆಯೇ ಆ ಭಕ್ತಿಯ ಭರದಲ್ಲಿ ಮೂಡಿ ಬಂದ ಈ ಚಿತ್ರ ಯಾವುದರಲ್ಲೂ ಕೊರತೆಯಿಲ್ಲ ಸೊಗಸಿನಿಂದ ಮೂಡಿಬಂದಿದೆ. ತೈಲ ಚಿತ್ರವಾದರೂ ಜಲವರ್ಣದಂತೆ ತೆಳುವಾದ ವರ್ಣಗಳ ಲೇಪನ ಇಲ್ಲಿದೆ.

ii) ಆಸನದ ಮೇಲೆ ಕುಳಿತ ಚಿತ್ರಗಳು :

ಗದುಗಿನ ನಗರೇಶ್ವರ ದೇವಸ್ಥಾನದಲ್ಲಿ ಲಭ್ಯವಿರುವ ಈ ಚಿತ್ರ ಕುಷ್ಟಗಿ ದಂಪತಿಗಳವರವು. ಕುಷ್ಟಗಿ ರಾಮಚಂದ್ರಪ್ಪ ಹಾಗೂ ಅವರ ಕುಟುಂಬ ಶ್ರೀಮತಿ ತಾರಾದೇವಿ.

ಚಿತ್ರ ೧೨೯ : ಶ್ರೀಮತಿ ತಾರಾದೇವಿ ಕುಷ್ಟಗಿ ಅವರ ಚಿತ್ರ ರಚಿಸಿದ್ದು. ಈ ರೀತಿಯ ಜೀವಮಾದರಿಯ ಚಿತ್ರಗಳಲ್ಲಿ ಇವು ಉತ್ಕೃಷ್ಟ ಕೃತಿಗಳಾಗಿವೆ. ಇವರು ಅತ್ಯಂತ ಶ್ರೀಮಂತ ವರ್ಗದವರೆಂದು ನೋಡಿದಾಕ್ಷಣ ಹೇಳಬಹುದು. ಜರತಾರಿ ಸೀರೆ. ರವಿಕೆ. ಬಂಗಾರದ ಆಭರಣಗಳು ಇತ್ಯಾದಿ. ಚಿಟ್ಟಿಯವರು ಇಲ್ಲಿ ಜರತಾರಿ ಸೀರೆಯ ಒಳಗಿನ ಜರಿ ನಕ್ಷೆಯನ್ನು ಅಷ್ಟೇ ವಿವರವಾಗಿ ಅಲ್ಲದೇ ಅಲ್ಲಿ ಬಂದಿರುವ ಮಡಿಕೆಗಳು. ಛಾಯಾ ಚಿತ್ರವನ್ನು ಮೀರಿಸುವಂಥ ಸೂಕ್ಷ್ಮ ವಿವರಗಳು ಈ ಕೃತಿಯಲ್ಲಿವೆ. ಎಡಗಡೆಗೆ ಗುಲಾಬಿಹೂಗಳು ಅದರ ಕೆಳಗೆ ಹಾಸಿದ ಹಾಸು ಅಲ್ಲದೆ ನೆಲಹಾಸಿನ ಮೇಲೆ ಇರುವ ಹೂವಿನ ಚಿತ್ರ ಅವುಗಳ ವರ್ಣ ಅದರಲ್ಲಿ ನೆರಳ ಬೆಳಕು. ಹಿನ್ನೆಲೆಯ ಪರದೆಗಳು ಎಲ್ಲ ಚಿತ್ರಿತವಾಗಿವೆ. ಕಣ್ಣುಗಳಲ್ಲಿ ಜೀವಚೈತನ್ಯವಿದೆ. ಹಿನ್ನೆಲೆ ಮಸುಕಾಗಿ ಇದ್ದರೂ ವಿವರಗಳು ಸ್ಪಷ್ಟವಾಗಿವೆ. ಇದೀಗ ಚಿತ್ರಿಸಿದಂತೆ ತಾಜಾತನವನ್ನು ಹೊಂದಿದೆ. ಅಳತೆ ೪' X ೩' ಇದೆ.

ಚಿತ್ರ ೧೩೦ : ಶ್ರೀ ರಾಮಚಂದ್ರಪ್ಪ ಕುಷ್ಟಗಿಯವರದು. ಈ ಚಿತ್ರವು ಸಹಿತ ಅಷ್ಟೇ ಶ್ರೀಮಂತವಾಗಿದೆ. ಆ ವ್ಯಕ್ತಿ ತೊಟ್ಟಂತಹ ಕೋಟು. ಹೆಗಲ ಮೇಲೆ ಅಡ್ಡಲಾಗಿ ಹಾಕಿಕೊಂಡ ವಸ್ತ್ರ. ಜಳಿಘೋತರ ತಲೆಯ ಮೇಲೆ ರುಮಾಲು ಇವೆಲ್ಲವುಗಳಲ್ಲಿ ಹಿತಮಿತವಾದ ನೆರಳು ಬೆಳಕು. ಕುಳಿತಂತ ಕುರ್ಚಿ ಕಟ್ಟಿಗೆಯದು ಅದರಲ್ಲಿಯ ನಕ್ಷೆ ನೈಜವಾಗಿ ಚಿತ್ರಿತವಾಗಿದೆ. ಪ್ರತಿಯೊಂದು ವಸ್ತುವಿನ ಮೈವಳಿಕೆ ಅದರ ನೈಜ ಅನುಭವವನ್ನು ಕೊಡುವಂತೆ ಚಿತ್ರಿಸಿದ್ದಾರೆ. ಇದರ ಅಳತೆ ಕೂಡ ೪' X ೩' ಇದೆ.

ಚಿತ್ರ ೧೩೧ : ಗದುಗಿನ ತೋಂಟದಾರ್ಯ ಕಾಲೇಜಿನಲ್ಲಿ ಇರುವ ಜಗದ್ಗುರುಗಳವರ ಚಿತ್ರ ಅಳತೆ ೬' X ೪' ಸಿಂಹಾಸನದ ಮೇಲೆ ಜಗದ್ಗುರುಗಳು ಆಸೀನರಾಗಿದ್ದಾರೆ. ಹೆಗಲ ಮೇಲೆ ಜರತಾರಿ ಶಲ್ಯೆ ಕಾಲಲ್ಲಿ ಬಂಗಾರದ ಕಡಗ. ತಲೆಯಮೇಲೆ ಜರಿರೇಶ್ಮೆ ರುಮಾಲು. ಕಾವಿ ಬಟ್ಟೆ. ಅವರಲ್ಲಿ ನೆರಳು ಬೆಳಕು. ನೊಸಲ ಮೇಲೆ ವಿಭೂತಿ ವಿವರವಾದ ಚಿತ್ರ.

ಚಿತ್ರ ೧೩೨ : ಇದೊಂದು ಪುರುಷನ ಜೀವಮಾದರಿ ಚಿತ್ರ. ಇದನ್ನು ೧೯೩೬ ರಲ್ಲಿ ರಚಿಸಿದ್ದಾರೆ. ಈ ವ್ಯಕ್ತಿಯು ಜರತಾರಿ ರುಮಾಲು ಹೆಗಲ ಮೇಲೆ ಹಾಕಿಕೊಂಡ ಶಲ್ಯೆ. ಕೋಟು. ಬಿಳಿಧೋತರ ಬಲಗಡೆಗೆ ಒಂದು ಮೇಜು ಅದರ ಮೇಲೆ ಹಾಸಿದ ನಕ್ಷೆಯ ಬಟ್ಟೆ ಆಗತಾನೆ ಕಲಾಧ್ಯಯನವನ್ನು ಮುಗಿಸಿ ಬಂದಾಗ ಚಿತ್ರಿಸಿದ್ದು ಆದ್ದರಿಂದ ವಿವರಣೆ ಇದೆ. ಅಭ್ಯಾಸದ (Studied) ರೀತಿಯಲ್ಲೇ ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ನಿಸರ್ಗವನ್ನು ಚಿತ್ರಿಸಿದ್ದಾರೆ. ೨' X ೩' ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೩೩ : ಇದು ಮಹಿಳೆಯ ಜೀವಮಾದರಿ ಚಿತ್ರ. ಇದು ಸಹಿತ ೨' X ೩' ಇದ್ದು ಇದನ್ನು ೧೯೩೬ ರಲ್ಲಿ ರಚಿಸಿದ್ದಾಗಿದೆ. ಇವೆರಡು ಚಿತ್ರಗಳು ಒಂದೇ ಮನೆಯವರದಾಗಿರಬಹುದು. ಈ ಚಿತ್ರದಲ್ಲಿ ಮಹಿಳೆ ಪೀತಾಂಬರವನ್ನು ಕಚ್ಚೆಯ ಮಾದರಿಯಲ್ಲಿ ಮರಾಠಿ ಪದ್ಧತಿಯಂತೆ ಉಟ್ಟುಕೊಂಡಿದ್ದಾಳೆ. ಮೂಗಿನಲ್ಲಿ ಮುತ್ತಿನ ನತ್ತು ಬಹುಶಃ ಈ ಚಿತ್ರಗಳು ಸೊಲ್ಲಾಪುರದಲ್ಲಿ ಇದ್ದಾಗ ರಚಿಸಿಬಹುದೆಂದೆನಿಸುತ್ತದೆ. ಬಲಗಡೆ ಮೇಜು ಅದರ ಮೇಲೆ ಕೈಯಿರಿಸಿ ಪುಸ್ತಕ ಹಾಗೂ ದಿಪತ್ರಿಕೆಯುಂತಹದು ಅದರ ಮೇಲೆ ಕೈಯಿರಿಸಿ ಕುಳಿತಿದ್ದಾಳೆ. ಹಿನ್ನೆಲೆಯಲ್ಲಿ ಆ ಕಾಲದ ಗೋಡೆಯ ಅಲಂಕಾರಿಕ ವಸ್ತುಗಳನ್ನು ನೋಡಬಹುದು ಕುರ್ಚಿಯ ಮೇಲೆ ಆಸೀನವಾಗಿದ್ದಾಳೆ. ಬೇಕಾದಷ್ಟು ವಿವರವಾಗಿ ಚಿತ್ರಿಸಿದ್ದಾರೆ. ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೩೪ : ಇದೊಂದು ಸ್ವಾಮಿಗಳ ಸಿಂಹಾಸನದ ಮೇಲೆ ಆಸೀನರಾದ ಚಿತ್ರ ಇಲ್ಲಿಯೂ ಸಹಿತ ವಿವರವಾಗಿ ಚಿತ್ರಿಸಿದ್ದಾರೆ. ಕಾವಿ ಬಟ್ಟೆಯಲ್ಲಿಯ ನೆರಳು ಬೆಳಕು ತಲೆಯ ಮೇಲೆ ಕಾವಿ ಬಟ್ಟೆಯ ರುಮಾಲು ಬಲಗೈಲಿ ದಂಡವನ್ನು ಹಿಡಿದುಕೊಂಡಿದ್ದಾರೆ. ಕೊರಳಲ್ಲಿ ರುದ್ರಾಕ್ಷಿಮಾಲೆ. ಹಿನ್ನೆಲೆಯಲ್ಲಿ ಪರದೆಯನ್ನು ಚಿತ್ರಿಸಿದ್ದಾರೆ. ಮುಖದಲ್ಲಿ ಎಷ್ಟು ಬೇಕೋ ಅಷ್ಟು ನೆರಳು ಬೆಳಕು ಚಿತ್ರಿಸಿ ಕಣ್ಣಿನಲ್ಲಿ ಜೀವಭಾವ ತುಂಬಿದ್ದಾರೆ. ಇದರ ಅಳತೆ ೬' X ೪' ಚೆಟ್ಟಿಯವರ ಸಂಗ್ರಹದಿಂದ.

iii) ನಿಂತಿರುವ ಚಿತ್ರಗಳು

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇದಕ್ಕೆ ಒಟ್ಟು ಮೂರು ಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ.

ರ್‍ಯಾಂಗ್ಲರ ಡಿ. ಸಿ. ಪಾವಟೆಯವರದು ೬' X ೪'. ಜಹಾಗಿರದಾರ ಅವರದು ೩' X ೨'. ಹಾಗೂ ಮೈಸೂರು ಜಯಚಾಮರಾಜ ಒಡೆಯರವರ ಚಿತ್ರ ೬' X ೪' ಅಳತೆಯುದಿದೆ. ಅದರೆ ಈಗ ಅಲ್ಲಿ ಇರುವುದು ಮೈಸೂರು

ಜಯಚಾಮರಾಜ ಒಡೆಯರವರ ಚಿತ್ರಮಾತ್ರ. ಇದು ವಿಶ್ವವಿದ್ಯಾಲಯದ ಹಣಕಾಸು ವಿಭಾಗವಲ್ಲಿ ಲಭ್ಯವಿದೆ. ಉಳಿದ ಯಾವ ಕೃತಿಗಳು ಈಗ ಅಲ್ಲಿ ಲಭ್ಯವಿಲ್ಲ.

ಚಿತ್ರ ೧೩.೫ : ಮೈಸೂರು ಜಯಚಾಮರಾಜ ಒಡೆಯರವರ ಚಿತ್ರ. ಈ ಮಾದರಿಯ ಚಿತ್ರಗಳಲ್ಲಿ ಉತ್ಕೃಷ್ಟ ಕೃತಿಯಾಗಿದೆ. ಇದು ೬' X ೪' ಅಳತೆಯದು. ಇಲ್ಲಿ ಪ್ರತಿಯೊಂದು ವಸ್ತುವನ್ನು ವಿವರವಾಗಿ ಚಿತ್ರಿಸುವುದರೊಂದಿಗೆ ಉಡುಪುಗಳಾಗಲಿ ಆಭರಣಗಳಾಗಲಿ ಅವುಗಳ ಮೂಲ ವೌಲ್ಯದ ಅನುಭವವನ್ನು ನೀಡುತ್ತವೆ. ತಲೆಯ ಮೇಲಿನ ಮೈಸೂರು ಪೇಟ ಅದಕ್ಕೆ ಹೊಂದಿದಂತೆ ಪದಕ. ಹಸನ್ಮುಖ ಭಾವ ಹಿನ್ನಲೆ ದಟ್ಟ ವರ್ಣದಿಂದ ಕೂಡಿದರು ಆಕೃತಿಗೆ ಯಾವ ರೀತಿಯಿಂದಲೂ ಅಡ್ಡಿ ಉಂಟುಮಾಡಿಲ್ಲ. ಅಂತೆಯೇ ಹಿನ್ನಲೆಯ ಪರದೆಗಳಿಗೆ ಅಲ್ಪತೆಯನ್ನು ನೀಡಿದ್ದಾರೆ. ಸೌಮ್ಯವಾಗಿ ರಚಿಸಿದ್ದಾರೆ. ನೆಲಹಾಸುಗೆಯ ಮೇಲಿನ ನಕ್ಷೆಯನ್ನು ಚಿತ್ರಿಸಿದ್ದಾರೆ. ಅಕಾಡೆಮಿಕ್ ಶೈಲಿ ಈ ಕೃತಿಯಲ್ಲಿ ಅತ್ಯುನ್ನತವಾಗಿ ಮೂಡಿ ಬಂದಿದೆ. ಬಣ್ಣಗಳ ಬಳಕೆಯಿಂದ ಹೊಳಪಿನ ಪರಿಣಾಮ ನೈಜವಾಗಿದೆಯಲ್ಲದೆ ಚಿತ್ರದಲ್ಲಿ ತಾಜತನವಿದೆ. ಇದೀಗ ತಾನೆ ರಚಿಸಿದಂತಿದೆ. ಚೆಟ್ಟಿಯವರ ಜೀವಮಾದರಿಯ ಚಿತ್ರದ ಕೌಶಲ್ಯ ಈ ಕಲಾಕೃತಿಯಲ್ಲಿ ನೋಡಬಹುದಾಗಿದೆ. (ಅಧ್ಯಾಯ ಏಳರಲ್ಲಿಯ ೨೨ ನೇ ಚಿತ್ರವನ್ನು ನೋಡಿರಿ)

ಇನ್ನೂ ಧಾರವಾಡದ ಮುರುಘಾಮಠದಲ್ಲಿಯ ಮೂರು ಜೀವಮಾದರಿಯ ಚಿತ್ರಗಳು ಅಳತೆ ೬' X ೪'

i) ಮಹಾಂತಪ್ಪಗಳ ಚಿತ್ರ

ii) ಮೃತ್ಯುಂಜಯಸ್ವಾಮಿಗಳ ಚಿತ್ರ

iii) ಅಥಣಿಯ ಶ್ರೀ ಮರುಘೇಂದ್ರ ಶಿವಯೋಗಿಗಳವರ ಚಿತ್ರ

ಚಿತ್ರ ೧೩.೬ : ಮಹಾಂತಪ್ಪಗಳ ಎದ್ದು ನಿಂತಿರುವ ಚಿತ್ರ ಉದ್ದವಾದ ಕಾವಿ ಬಟ್ಟೆಯ ನಿಲುವಂಗಿ ತಲೆಯಮೇಲೆ ರುಮಾಲು ಕೊರಳಲ್ಲಿ ಲಿಂಗವನ್ನು ವಸ್ತ್ರದಲ್ಲಿ ಕಟ್ಟಿಕೊಂಡಿದ್ದಾರೆ. ಹಣೆಯ ಮೇಲೆ ವಿಭೂತಿ. ಶಾಂತ. ತೇಜಸ್ವಿನ ಮುಖಭಾವ ಕಣ್ಣಲ್ಲಿ ಜೀವ ಚೈತನ್ಯ ತುಂಬಿದ್ದಾರೆ. ಹಿನ್ನೆಲೆಯಲ್ಲಿ ನಿಸರ್ಗವನ್ನು ದುಡಿಸಿಕೊಂಡಿದ್ದಾರೆ. ದೃಶ್ಯಾಂತರವಿದೆ. ಹಿತ-ಮಿತವಾದ ನೆರಳು ಬೆಳಕು ಹಾಗೇ ನಡೆದುಕೊಂಡು ಬರುವಂಥ ತದ್ರೂಪ್ಯವಿದೆ.

ಚಿತ್ರ ೧೩.೭ : ಮೃತ್ಯುಂಜಯ ಸ್ವಾಮಿಗಳದು. ನಿಂತಿರುವ ಚಿತ್ರ ಎರಡು ಕೈ ಕಟ್ಟಿಕೊಂಡು. ಬಲಗೈಯಲ್ಲಿ ಜಿತ್ತವನ್ನು ಹಿಡಿದುಕೊಂಡು ನಿಂತಿದ್ದಾರೆ. ಕನ್ನಡಕದ ಕಟ್ಟನ್ನು ಅದರ ಹಿಂದಿರುವ ಕಣ್ಣು ಅದರಲ್ಲಿಯ ಚೈತನ್ಯವನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಇಲ್ಲಿಯೂ ಹಿನ್ನೆಲೆಯಲ್ಲಿ ನಿಸರ್ಗ ಚಿತ್ರರಚಿಸಿದ್ದಾರೆ. ನೊಸಲಿಗೆ ವಿಭೂತಿ ಕುತ್ತಿಗೆಯುವರೆಗೂ ಹೊತ್ತುಕೊಂಡ ಕಾವಿಯ ವಸ್ತ್ರ.

ಚಿತ್ರ ೧೩.೮ : ಅಥಣಿಯ ಶ್ರೀ ಮರುಘೇಂದ್ರ ಶಿವಯೋಗಿಗಳವರ ಚಿತ್ರ. ಈ ತರಹದ ಚಿತ್ರಗಳನ್ನು ಅಣ್ಣಿಗೇರಿಯ ತೋಂಟದಾರ್ಯ ಶಾಖಾಮಠದಲ್ಲಿಯೂ. ಅಥಣಿಯ ಗಚ್ಚಿನ ಮಠ ಹಾಗೂ ಅಥಣಿ ಮುರುಘೇಂದ್ರ ಕಾಲೇಜಿಗೆ ಇದೇ ತರಹದ ಚಿತ್ರ ಪ್ರತಿಗಳನ್ನು ಮಾಡಿಕೊಟ್ಟಿದ್ದಾರೆ.



൧൧൦.



൧൦൯



୮୮୭.



୮୮୮



૧૧૪.



૧૧૨.



੧੧੬.



੧੧੫.



๑๑๘.



๑๑๒.



૧૨૦.



૧૧૬



೧೨೨.



೧೨೧.



੧੭੪.



੧੭੩.



[illegible]



[illegible]



[illegible]. ಶ್ರೀ ಮ. ನಿ. ಪ್ರ. ಮುರುಘೇಂದ್ರ ಮಹಾಶಿವಯೋಗಿಗಳು



[illegible]. ಕಪ್ಪಲಗುಡ್ಡದ ಶರಣಮ್ಮನವರು



೧೮೦. ಶ್ರೀ ರಾಮಚಂದ್ರಪ್ಪ ಕುಷ್ಟಗಿ



೧೮೧. ಶ್ರೀಮತಿ ತಾರಾದೇವಿ ಕುಷ್ಟಗಿ



೧೩೨.



೧೧. ಶ್ರೀ ತೋಂಟದ ಮಹಾಸ್ವಾಮಿಗಳು



೭೨೪



೭೨೨



೧೫೬. ಶ್ರೀ ಮೃತ್ಯುಂಜಯ ಸ್ವಾಮಿಗಳು



೧೫೭. ಶ್ರೀ ಮಹಾಂತಪ್ಪಗಳು

ಇಲ್ಲಿ ಶ್ರೀಗಳು ಬಲಗೈಲಿ ಬೆತ್ತವನ್ನು ಹಿಡಿದುಕೊಂಡು ನಿಂತಿದ್ದಾರೆ. ಅದೇ ತೇಜಸ್ಸಿನಿಂದ ಕೂಡಿದ ಮುಖಭಾವ ಹಿನ್ನೆಲೆಯಲ್ಲಿ ನಿಸರ್ಗವನ್ನು ದುಡಿಸಿಕೊಂಡಿದ್ದಾರೆ. ಗಿಡಮರಗಳು ಹರಿಯುವ ನೀರು ನವಿಲು, ಮೊಲ, ಇತರ ಪಕ್ಷಿಗಳು, ಹೂವುಗಳನ್ನು ಚಿತ್ರಿಸಿದ್ದಾರೆ. ತೊಟ್ಟಂತಹ ಉಡುಪು ಮುಖದಲ್ಲಿ ನೆರಳು ಬೆಳಕಿನ ಸಂಯೋಜನೆ ಹಿತವಾಗಿದೆ. ಚರ್ಮದ ಮೈವಳಿಕೆ ಯಥಾವತ್ತಾಗಿದೆ. ಇದೇ ಕೃತಿಯನ್ನು ಶ್ರೀಮದಥಣಿ ಮುರಘೇಂದ್ರ ಸ್ವಾಮಿ ಅರ್ಬನ್ ಕೋ-ಆಪ್ ಬ್ಯಾಂಕ್, ಅಥಣಿ ಇವರು ಕ್ಯಾಲೆಂಡರ್ ಮಾಡಿಸಿದ್ದಾರೆ.

ಈ ಚಿತ್ರಗಳನ್ನು ನೋಡಿದಂಥ ಅನ್ನದಾನಿ ಹಿರೇಮಠ ಅವರು ಈ ರೀತಿ ತಮ್ಮ ಅನುಭವವನ್ನು ಹೇಳಿದ್ದಾರೆ. " ಮುರುಘಾಮಠದ ಆವರಣ ಬಾಗಿಲೆದುರಲ್ಲೇ ಇರುವ ಮಂದಿರದ ಒಳಗಡೆ ಆಳೆತ್ತರಕ್ಕೂ ಹೆಚ್ಚು ನಿಲುವಿನಲ್ಲಿ ಶ್ರೀ ಮೃತ್ಯುಂಜಯಪ್ಪಗಳ ಹಾಗೂ ಅವರ ಗುರುಗಳಾದ ಶ್ರೀ ಅಥಣಿ ಮುರುಘೇಂದ್ರ ಶಿವಯೋಗಿಗಳ ಭಾವಚಿತ್ರಗಳೆರಡು ಬಾಗಿಲಿನ ಎಡಕ್ಕೂ ಬಲಕ್ಕೂ ನಿಂತಿವೆ. ಮೃತ್ಯುಂಜಯಪ್ಪಗಳು ಅದೇ ವರ್ಷ (೧೯೬೪) ಲಿಂಗೈಕ್ಯರಾದರು. ಆ ಚಿತ್ರ ನೋಡುತ್ತಾ ನಿಂತಂತೆಯೇ ಅವರು ಲಿಂಗೈಕ್ಯರಾಗಿದ್ದರೆಂಬುದನ್ನೇ ನಾನು ಮರೆತೆ. ಸಾಷ್ಟಾಂಗ ನಮಸ್ಕಾರ ಹಾಕಿ ಮೇಲೇಳುತ್ತಿದ್ದಂತೆಯೇ 'ಬಾ ಎಲ್ಲಿಂದ ಬಂದಿರುವೆ' ಎಂದು ಮೆಲ್ಲಗೆ ಮೈ ತಟ್ಟಿ ಮೃದುವಾಗಿ ನನ್ನ ಮಾತನಾಡಿಸಿದಂತಾಯಿತು " ಹೀಗೆ[೧೪೯] ಚಿಟ್ಟಿಯವರು ಚಿತ್ರಿಸಿದ ಚಿತ್ರಗಳಲ್ಲಿ ಜೀವವಿದೆ ನಮ್ಮೊಂದಿಗೆ ಮಾತನಾಡುತ್ತಿವೆಯೋ ಎಂಬ ರಸಭಾವನೆಗಳು ಆ ಚಿತ್ರಗಳಲ್ಲಿ ಮೂಡಿವೆ. ಅಂತೆಯೇ ಪಾಟೀಲ ಪುಟ್ಟಪ್ಪನವರು ಹೇಳುವಂತೆ ಈ ಕಲಾ ತಪಸ್ವಿಯ ಕೈಯಿಂದ ಸಾಧು ಸತ್ಪುರುಷರು ಮತ್ತೆ ಜೀವ ಪಡೆದು ಕಾಣಿಸಿಕೊಂಡಿದ್ದಾರೆ ಎಂಬ ಮಾತು ಸತ್ಯವಾಗಿದೆ.

ಹೀಗೆ ಇನ್ನೂ ರಂಗರಾವ್ ದಿವಾಕರ ೩' X ೨'. ಬಾಳಾಸಾಹೇಬ ಖೇರ ಅವರದು ೩' X ೨'. ಲೋಕೂರಿ ಜಡ್ಜ ಅವರದು ೩' X ೩' ಚಿತ್ರಿಸಿ ಕೊಟ್ಟಿದ್ದಾರೆ. ಇವೆಲ್ಲ ಈಗ ಲಭ್ಯವಿಲ್ಲ. (ಅಧ್ಯಾಯ ಏಳರ ೪೫ ನೇ ಚಿತ್ರವನ್ನು ನೋಡಿರಿ)

೩) ನಿಸರ್ಗ ಚಿತ್ರಗಳು :

ಚಿಟ್ಟಿಯವರು ತೈಲವರ್ಣಗಳಲ್ಲಿಯೂ ನಿಸರ್ಗ ಚಿತ್ರಗಳನ್ನು ರಚಿಸಿದ್ದಾರೆ.

ಚಿತ್ರ ೧೩೯ : ಮುಂಬೈಯ ಒಂದು ಮಾರ್ಗದ ದೃಶ್ಯ. ಆಕಾಶದೆತ್ತರಕ್ಕೆ ಬೆಳೆದ ಕಟ್ಟಡಗಳು ಮಾರ್ಗದಲ್ಲಿ ಹೋಗುತ್ತಿರುವ ಅನೇಕ ಜನ. ಈ ಚಿತ್ರ ಮೇಲಿನ ಅಂತಸ್ತಿನಲ್ಲಿ ಕುಳಿತು ಚಿತ್ರಿಸಿದ್ದಾರೆ. ಇದು ಹಳೆಯ ಮುಂಬೈ ಅಂದರೆ ಎಪ್ಪತ್ತು ವರ್ಷಗಳ ಹಿಂದಿನದು. ಈ ಚಿತ್ರದಲ್ಲಿ ಕಟ್ಟಡಗಳಿಗೆ ಬಹಳ ಮಹತ್ವನೀಡಿದ್ದರಿಂದ ಅವನ್ನೆ ವಿವರವಾಗಿ ಚಿತ್ರಿಸಿದ್ದಾರೆಯಲ್ಲದೆ. ಇಲ್ಲಿಯ ಬಣ್ಣಗಳಲ್ಲಿ ಹೊಸತನವನ್ನು ಕಾಣುತ್ತೇವೆ. ಇದೊಂದು (old master) ಹಳೆಯ ಪಾಶ್ಚಾತ್ಯ ಶ್ರೇಷ್ಠ ಕಲಾವಿದರ ಚಿತ್ರದಂತೆ ಕಾಣುತ್ತದೆ. ಅಂದರೆ ಜೆ. ಜೆ. ಶಾಲೆಯ ಸಂಪೂರ್ಣ ಪ್ರಭಾವವನ್ನು ಇಲ್ಲಿ ಕಾಣಬಹುದು. ಇದೊಂದು ಉತ್ತಮ ತೈಲ ವರ್ಣದ ನಿಸರ್ಗ ಚಿತ್ರವಾಗಿದೆ. ಚಿಟ್ಟಿಯವರ ಸಂಗ್ರಹದಿಂದ. (ಅಧ್ಯಾಯ ಏಳರಲ್ಲಿಯ ೨೩ ನೇ ಚಿತ್ರವನ್ನು ನೋಡಿರಿ)

---

೧೪೯. ಅನ್ನದಾನಿ ಹಿರೇಮಠ : ಎಂ. ವಿ. ಚಿಟ್ಟಿ : ಪುಟ ೧

ಚಿತ್ರ ೧೪೦ : ದೇವಾಲಯದ ಆವರಣದ ಚಿತ್ರ. ಇಲ್ಲಿ ಹಿನ್ನೆಲೆಯಲ್ಲಿ ದೇವಾಲಯವಿದೆ ಮುನ್ನೆಲೆಯಲ್ಲಿ ನೀರಿನ ಹೊಂಡವಿದೆ. ಎರಡು ಕಡೆ ಸಾಲು ಮಂಟಪವಿದ್ದು ಅವುಗಳ ಪ್ರತಿಬಿಂಬ ನೀರಿನಲ್ಲಿ ಮೂಡಿದೆಯಲ್ಲದೆ ಆಗಸದ ವರ್ಣಗಳು ನೈಜವಾಗಿ ಲೇಪಿಸಲ್ಪಟ್ಟಿವೆ. ಅದರ ಪ್ರತಿಬಿಂಬವೂ ನೀರಿನಲ್ಲಿದೆ. ನೀರಿನ ಪರಿಣಾಮ ಅದೇ ಅನುಭವವನ್ನು ನೀಡುವಂತಿದೆ. ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೪೧ : ಈ ಚಿತ್ರದಲ್ಲಿ ಹಳೆಯ ಹಾಗೂ ಆಧುನಿಕ ರೀತಿಯ ಕಟ್ಟಡಗಳಿವೆ ಮನೆಯ ಮುಂದೆ ಜನರು ಕೆಲಸವಲ್ಲಿ ತೊಡಗಿರುವಂತಿದೆ. ಬಲಕ್ಕೆ ಒಂದು ಒಣಗಿದ ದೊಡ್ಡ ಮರವಿದೆ. ಮರದಲ್ಲಿ ಕಾಗೆಗಳನ್ನು ಸಹಿತ ಚಿತ್ರಿಸಿದ್ದಾರೆ. ಮನೆಗಳ ಮೇಲಿನ ನೆರಳು ಬೆಳಕುಗಳ ವಿಂಗಡಣೆ. ಮರದಲ್ಲಿಯೂ ಸಹಿತ ಕಾಣುತ್ತೇವೆ. ಇದರಲ್ಲಿ ಕುಂಚದ ಹೊಡೆತಗಳನ್ನು ಹೆಚ್ಚು ಕಾಣುತ್ತೇವೆ. ಚಿತ್ರದಲ್ಲಿ ದೃಶ್ಯಾಂತರವಿದೆ. ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೪೨ : ಇದೊಂದು ದೇವಾಲಯದ ನಿಸರ್ಗ ಚಿತ್ರವಾಗಿದೆ. ಈ ಚಿತ್ರದಲ್ಲಿ ದೇವಾಲಯ ಮಧ್ಯವಿದ್ದು ಸುತ್ತೆಲ್ಲಾ ಗಿಡಮರಗಳು ಆವೃತ್ತವಾಗಿವೆ. ಮುಂದೆ ಒಂದು ನೀರಿನ ಹೊಂಡವಿದೆ. ಅದರಲ್ಲಿ ಕೆಲವರು ಸ್ನಾನ ಮಾಡುತ್ತಿರುವರು ಇನ್ನೂ ಕೆಲವರು ದೇವಸ್ಥಾನದ ಕಡೆಗೆ ಹೋಗುತ್ತಿರುವರು. ಚೆಟ್ಟಿಯವರು ಇಲ್ಲಿ ಎಲ್ಲವನ್ನು ವಿವರವಾಗಿ ಚಿತ್ರಿಸಿದ್ದಾರೆ. ಮರಗಳ ಮೈವಳಿಕೆ ಅದರ ನೈಜತೆಯ ಅನುಭವ ನೀಡುತ್ತಿದೆ. ಮರದಲ್ಲಿ ಅವರು ಬಳಸಿದ ವರ್ಣಗಳು. ಅವುಗಳ ಅಂಕು ಡೊಂಕು ಪ್ರತಿಯೊಂದರಲ್ಲೂ ನೆರಳು ಬೆಳಕಿನ ವಿಂಗಡಣೆ ಇದೆ. ಚೆಟ್ಟಿಯವರ ಸಂಗ್ರಹದಲ್ಲಿದೆ. (ಅಧ್ಯಾಯ ಏಳರಲ್ಲಿಯ ೨೪ ನೇ ಚಿತ್ರವನ್ನು ನೋಡಿರಿ)

ಚಿತ್ರ ೧೪೩ : ಇದೊಂದು ಮರದ ಬೊಡ್ಡೆಯ ಚಿತ್ರ ಈ ರೀತಿ ಚಿತ್ರಗಳನ್ನು ಚಿತ್ರಿಸುವಲ್ಲಿ ಚೆಟ್ಟಿಯವರ ಮರಗಳ ಕುರಿತು ಅವರು ಮಾಡಿದ ಆಳವಾದ ಅಧ್ಯಯನದ ಅರಿವಾಗುತ್ತದೆ. ಇಂತಹದೇ ಒಂದು ಮರದ ಬೊಡ್ಡೆ ಚಿತ್ರಕ್ಕೆ ೧೯೨೮ ರಲ್ಲಿ ಮುಂಬೈ ಆರ್ಟ ಸೊಸೈಟಿಯಿಂದ ಬಹುಮಾನ ದೊರಕಿದೆ. ಆದರೆ ಆ ಚಿತ್ರ ಈಗ ಲಭ್ಯವಿಲ್ಲ.

ಈ ಚಿತ್ರವು ಸಹಿತ ಅಂಹದೇ ಚಿತ್ರವಾಗಿದ್ದು. ಇಲ್ಲಿ ಪ್ರತಿಯೊಂದನ್ನು ವಿವರವಾಗಿ ಚಿತ್ರಿಸಿದ್ದಾರೆ. ಮರದ ಮೇಲಿನ ಪದರಿನ ಸೂಕ್ಷ್ಮತೆಯನ್ನು ಚಿತ್ರಿಸಿದ್ದಾರೆ. ಅದರ ಮೈವಳಿಕೆ. ವರ್ಣಗಳು ಮರದ ಗಟ್ಟಿತನದ ಅನುಭವವನ್ನು ನೀಡುತ್ತವೆ. ಜಲವರ್ಣದ ಬಳಕೆ ಆಗಿದ್ದರೂ ಚಿತ್ರ ಎಲ್ಲಿಯೂ ಮಾಸಿದಂತೆ ಕಾಣದೆ ತನ್ನ ತಾಜಾತನ ಹಾಗೂ ಸಿರಿವಂತಿಕೆಯನ್ನು ಉಳಿಸಿಕೊಂಡಿದೆ. ಚಿತ್ರದಲ್ಲಿ ದೃಶ್ಯಾಂತರವಿದೆ. ದೂರದಲ್ಲಿ ಅಲ್ಲಲ್ಲಿ ಗಿಡಗಳಿವೆ. ಭೂಮಿಯ ಮೇಲೆ ಬಿಸಿಲಿನ ಬೆಳಕು ಅದರೊಂದಿಗೆ ಮರಗಳ ನೆರಳನ್ನು ಚಿತ್ರಿಸಿದ್ದಾರೆ. ಚೆಟ್ಟಿಯವರ ಸಂಗ್ರಹದಿಂದ. (ಅಧ್ಯಾಯ ಏಳರಲ್ಲಿಯ ೨೫ ನೇ ಚಿತ್ರವನ್ನು ನೋಡಿರಿ)

ಚಿತ್ರ ೧೪೪ : ಬಾದಾಮಿ ಗುಹಾ ಚಿತ್ರ : ಕರ್ನಾಟಕ ಲಲಿತ ಕಲಾ ಅಕಾಡೆಮಿಯವರು ಬಾದಾಮಿಯಲ್ಲಿ ಏರ್ಪಡಿಸಿದ ಕಲಾಶಿಬಿರದಲ್ಲಿ ಭಾಗವಹಿಸಿದ್ದ ಚೆಟ್ಟಿಯವರು ಆ ಸಂದರ್ಭದಲ್ಲಿ ರಚಿಸಿದ ಚಿತ್ರ. ಆಗ ಚೆಟ್ಟಿಯವರ ವಯಸ್ಸು ೮೦. ಅವರು ಅಲ್ಲಿ ಚಿತ್ರ ರಚಿಸುವದನ್ನು ನೋಡಿದ ಪ್ರತ್ಯಕ್ಷದರ್ಶಿಯಾದ ಶ್ರೀ ಮಹಾದೇವ ಮಾ. ಜಗತಾಪ ಅವರು ಈ ರೀತಿ ಹೇಳಿದ್ದಾರೆ. " ಶ್ರೀ ಚೆಟ್ಟಿಯವರು ತಮ್ಮ ಎಂಬತ್ತನೆಯ ವರ್ಷದಲ್ಲಿ ಕಲಾ ಶಿಬಿರಕ್ಕೆ ಹಾಜರಾಗಿ



১৪০.



১৪১.



೧೪೪. ಬಾದಾಮಿಯ ಗುಹಾಚಿತ್ರ

ಬಾದಾಮಿಯ ಗುಹೆಯಲ್ಲಿ ನಿಂತು ಚಾಲುಕ್ಯರ ಅವಧಿಯ ಉಬ್ಬುಶಿಲ್ಪವನ್ನು ಚಿತ್ರಕಲೆಗೆ ಅಳವಡಿಸುವಾಗ ಅವರ ತಾಳ್ಮೆ, ಕಾರ್ಯ ತತ್ಪರತೆ ನೋಡಿ ಬೆರಗಾದೆ "[೧೫೦] ಎಂದು ಉದ್ಗಾರ ತೆಗೆದಿದ್ದಾರೆ.

ಈ ಚಿತ್ರದಲ್ಲಿ ಬಾದಾಮಿ ಗುಹೆಯ ಹೊರಗಿನ ವಾಸ್ತುವಿನ ಚಿತ್ರ ರಚಿಸಿದ್ದಾರೆ. ಹಲವಾರು ವರ್ಷಗಳಿಂದ ಮಳೆಗಾಳಿ, ಬಿಸಿಲನ್ನು ಸಹಿಸಿದ ಬಂಡೆಯ ನೈಜತೆಯನ್ನು ತಮ್ಮ ವರ್ಣಗಳಲ್ಲಿ ಸೆರೆ ಹಿಡಿದಿದ್ದಾರೆ. ಅದರ ಮೇಲೆ ಅಲ್ಲಲ್ಲಿ ಓಡಾಡುತ್ತಿರುವ ಜನರನ್ನು ಚಿತ್ರಿಸಿದ್ದಾರೆ. ಆ ವಯಸ್ಸಿನಲ್ಲಿ ಇಂತಹ ಚಿತ್ರವನ್ನು ನಿಂತು ಪರಿಪೂರ್ಣವಾಗಿ ರಚಿಸಿದ ಚೆಟ್ಟಿಯವರ ತಾಳ್ಮೆ ಆ ಬಂಡೆಯಷ್ಟೆ ಎಂದರು ತಪ್ಪಾಗಲಿಕ್ಕಿಲ್ಲ. ಇಳಿವಯಸ್ಸಿನ ಬೇಸರವಾಗಲಿ ನಿಶ್ಯಕ್ತಿಯಾಗಲಿ ಈ ಚಿತ್ರದಲ್ಲಿ ಎಲ್ಲಿಯೂ ಕಂಡುಬರುವದಿಲ್ಲ. ಅಷ್ಟೊಂದು ಪರಿಪೂರ್ಣ ಚಿತ್ರ ಇದಾಗಿದೆ. ಅದಕ್ಕೆ ಕಾರಣ ಅವರ ಐವತ್ತು ವರ್ಷಗಳ ಅಗಾಧವಾದ ಕಲಾಸಾಧನೆಯಾಗಿದೆ.

೪) ಸಂಯೋಜನಾ ಚಿತ್ರಗಳು (Composition) :

ತೈಲವರ್ಣಗಳಲ್ಲಿಯೂ ಧಾರ್ಮಿಕ, ಐತಿಹಾಸಿಕ ಹಾಗೂ ಸಾಮಾಜಿಕ ವಿಷಯಗಳನ್ನು ಕುರಿತು ಚಿತ್ರಿಸಿದ್ದಾರೆ.

i) ಧಾರ್ಮಿಕ ಮತ್ತು ಐತಿಹಾಸಿಕ ಚಿತ್ರಗಳು

ಅದರಲ್ಲಿ ಅವರು ತೈಲವರ್ಣದಲ್ಲಿ ರಚಿಸಿದ ಮೊಟ್ಟ ಮೊದಲ ಚಿತ್ರ ಭಗವದ್ಗೀತೆಯ ಹದಿನಾಲ್ಕನೆಯ ಅಧ್ಯಾಯದಲ್ಲಿ ಬರುವ ' ವಿಶ್ವರೂಪದರ್ಶನ ' ದ ಚಿತ್ರವಾಗಿದೆ. ಈ ಚಿತ್ರವನ್ನು ಮಾಡುವ ಮೊದಲು ಅವರು ಆ ಚಿತ್ರ ರಚಿಸಿದ ಬಗ್ಗೆ ಈ ರೀತಿ ಹೇಳುತ್ತಾರೆ. " ಭಗವದ್ಗೀತೆಯ ಹದಿನಾಲ್ಕನೇಯ ಅಧ್ಯಾಯ ಆ ವಿಶ್ವರೂಪದರ್ಶನದ ಪ್ರಸಂಗವನ್ನು ಒಂದು ತಿಂಗಳ ವರೆಗೆ ಅಧ್ಯಯನ ಮಾಡಿದೆ. " ಆ ಪೇಂಟಿಂಗ್ ಪ್ರಾರಂಭಿಸಿ ಹಗಲು ರಾತ್ರಿ ಬಿಡದೆ ೧೫ ದಿನಗಳ ವರೆಗೆ ಚಿತ್ರ ರಚಿಸಿದೆ. "[೧೫೧] ಅಳತೆ ೪' X ೩' ರಲ್ಲಿ ರಚಿಸಿದ ಈ ಚಿತ್ರವೇ ಅಖಿಲಭಾರತ ಚಿತ್ರಕಲಾ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಗಳಿಸಿದ್ದು ಹೆಮ್ಮೆಯ ವಿಷಯ. ಈ ಚಿತ್ರ ೧೯೩೪ ರಲ್ಲಿ ರಚಿಸಿದ್ದಾರೆ.

ಚಿತ್ರ ೧೪೫ : ಶ್ರೀಕೃಷ್ಣನು ಅರ್ಜುನನಿಗೆ ಧರ್ಮಯುದ್ಧದ ಸಂದರ್ಭದಲ್ಲಿ ಉಪದೇಶ ಮಾಡುವಂಥ ಸಂದರ್ಭದಲ್ಲಿ ತನ್ನ ವಿಶ್ವರೂಪದರ್ಶನ ನೀಡಿದ್ದು. ಈ ಚಿತ್ರದಲ್ಲಿ ಶ್ರೀಕೃಷ್ಣನ ವಿವಿಧ ನೂರಾರು ಮುಖಗಳು ಅದಕ್ಕೆ ತಕ್ಕಂತೆ ಕೈಗಳು ಅದರಲ್ಲಿ ಆಯುಧಗಳು ಬಾಯಿಗಳಲ್ಲಿ ಮನುಷ್ಯರು. ಕಾಲಡಿಯಲ್ಲಿ ಮನುಷ್ಯರು. ಪ್ರತಿಯೊಂದನ್ನು ವಿವರವಾಗಿ ಚಿತ್ರಿಸಿದ್ದಾರೆ. ಆ ಎಲ್ಲಾ ಮುಖಗಳಲ್ಲಿಯ ಉಗ್ರ, ಸೌಮ್ಯ, ಭಾವನೆಗಳು ಭಯಂಕರ ಆಕಾರಗಳಿದ್ದರೂ ಮಧ್ಯದಲ್ಲಿ ಇರುವ ಶ್ರೀಕೃಷ್ಣನ ನಿಜರೂಪ, ಶಾಂತ, ನಗುಮುಖದಿಂದ ಕೂಡಿದ್ದು ವೀಕ್ಷಕನ ಗಮನವನ್ನು ಸೆಳೆಯುವುದರ ಜೊತೆಗೆ ಗಾಬರಿಯನ್ನುಂಟು ಮಾಡುತ್ತದೆ. ಚೆಟ್ಟಿಯವರ ಕಲ್ಪನೆಯ ಚಿತ್ರಕ್ಕೆ ಇದೊಂದು ಉತ್ಕೃಷ್ಟ ಮಾದರಿಯಾಗಿದೆ. ಬಣ್ಣಗಳ ಬಳಕೆ ಮೌಲ್ಯವಾಗಿದೆ. ಚಿತ್ರ ಈಗ ಸ್ವಲ್ಪ ಅಲ್ಲಲ್ಲಿ ಹಾಳಾಗಿದೆ. ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೪೬ : ಲಕ್ಷ್ಮೀನಾರಾಯಣರ ಚಿತ್ರ : ಇದನ್ನು ೧೯೩೮ ರಲ್ಲಿ ರಚಿಸಿದ್ದಾರೆ. ೨' X ೩' ಅವರ ಕಲಾಭ್ಯಾಸ ಮುಗಿದ ತಕ್ಷಣವೇ ಈ ಚಿತ್ರ ರಚಿಸಿದ್ದರಿಂದ ಇದು ಪೂರ್ತಿಯಾಗಿ ಅಕಾಡೆಮಿಕ್ ಶೈಲಿಯಲ್ಲಿ ರಚಿತವಾಗಿದೆ. ಬಣ್ಣಗಳನ್ನು

---

೧೫೦. ಮಹಾಲಿಂಗ ಯಾಳಗಿ (ಸಂ.) : ಕಲಾತಪಸ್ವಿ : ಎಂ. ವಿ. ಚೆಟ್ಟಿಯವರ ಅಭಿನಂದನ ಗ್ರಂಥ. ಪುಟ ೬೧

೧೫೧. ಎಂ. ವಿ. ಚೆಟ್ಟಿ : ನೆನಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೨೮-೧೨೯

ಬರೆಸಿ ಲೇಪಿಸಿದ್ದಾರೆ. ಲಕ್ಷ್ಮಿಯು ಕಮಲದ ಹೂವಿನ ಮಧ್ಯದಲ್ಲಿ ನಿಂತಿದ್ದಾಳೆ. ಪಕ್ಕದಲ್ಲಿ ವಾಹನವಾದ ಗಜರಾಜ ನೀರಿನಲ್ಲಿ ನಿಂತು ಪ್ರಣಾಮ ಮಾಡುತ್ತಿದ್ದಾನೆ. ನಾರಾಯಣನು ಆದಿಶೇಷನ ಮೇಲೆ ಪವಡಿಸಿದ್ದಾನೆ. ಅದರ ಹೆಡೆ ನಾರಾಯಣನಿಗೆ ನೆರಳಿನಂತೆ ತೆರೆದುಕೊಂಡಿದೆ. ಇದೊಂದು ಪೌರಾಣಿಕ ಚಿತ್ರವಾಗಿದೆ. ಲಕ್ಷ್ಮಿಯು ತನ್ನ ಕೈಯಲ್ಲಿ ಕಮಲದ ಹೂ ಹಿಡಿದುಕೊಂಡಿದ್ದರೆ, ನಾರಾಯಣ ಚಕ್ರವನ್ನು ಹಿಡಿದುಕೊಂಡಿದ್ದಾನೆ. ಇನ್ನೊಂದು ಕೈಯಲ್ಲಿ ಶಂಖ. ಕಿರೀಟ, ಆಭರಣ ಎಲ್ಲವನ್ನು ವಿವರವಾಗಿ ಚಿತ್ರಿಸಿದ್ದಾರೆ. ಆಕಾಶವು ಸೂರ್ಯನ ಓಕಳಿ ಬಣ್ಣದಿಂದ ಕೂಡಿದೆ. ಈ ಚಿತ್ರದಲ್ಲಿ ರವಿವರ್ಮನ ಪ್ರಭಾವವನ್ನು ಕಾಣುತ್ತೇವೆ. (ಅಧ್ಯಾಯ ಏಳರಲ್ಲಿಯ ೨೬ ನೇ ಚಿತ್ರವನ್ನು ನೋಡಿರಿ)

ಚಿತ್ರ ೧೪೭ : ಇದೊಂದು ಐತಿಹಾಸಿಕ ಚಿತ್ರ. ಬ್ರಿಟೀಷರ ವಿರುದ್ಧ ಹೋರಾಡಿದ ಕನ್ನಡ ನಾಡಿನ ವೀರ ಮಹಿಳೆ ಕಿತ್ತೂರಿನ ರಾಣಿ ಚೆನ್ನಮ್ಮನದು. ಬ್ರಿಟೀಷರ ವಿರುದ್ಧ ಹೋರಾಡುತ್ತಿರುವ ಚಿತ್ರವಿದು. ಇಂತಹ ಚಿತ್ರಪ್ರತಿಗಳನ್ನು ಮಾಡಿದುದರ ಬಗ್ಗೆ ಚೆಟ್ಟಿಯವರು ಈ ರೀತಿ ಹೇಳಿದ್ದಾರೆ. " ಕಿತ್ತೂರು ಚೆನ್ನಮ್ಮ ಮತ್ತು ಸೇನಾಪತಿ ಸರದಾರ ಗುರುಸಿದ್ಧಪ್ಪ ಅವರ ವರ್ಣಚಿತ್ರವನ್ನು ಶ್ರೀಮತಿ ಪಂಚವ್ವತಾಯಿ ಸರದಾರ ಅವರು ತಮ್ಮ ಪತಿ ದಿವಂಗತ ಬ್ಯಾರಿಸ್ಟರ್ ಎಸ್. ಎಮ್. ಸರದಾರ ಅವರ ಸ್ಮರಣಾರ್ಥವಾಗಿ ಕಿತ್ತೂರಿನಲ್ಲಿರುವ ಸ್ಮಾರಕ ಭವನಕ್ಕೆ ಉಡುಗೊರೆಯಾಗಿ ನೀಡಿದ್ದಾರೆ. "[೧೫೨] ಇಂಥ ಮೂರು ಚಿತ್ರಗಳನ್ನು ರಚಿಸಿದ್ದು ಅಥಣಿಯ ತಾಲೂಕ ಕಚೇರಿಗಳಲ್ಲಿ. ಒಂದು ಬೆಂಗಳೂರಿನ ವಿಧಾನ ಸೌಧದಲ್ಲಿ ಮಗದೊಂದನ್ನು ಕಿತ್ತೂರು ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ. ಈಗ ಆ ಚಿತ್ರದ ಕ್ಯಾಲೆಂಡರನ್ನು ಸಹಿತ ಮಾಡಿದ್ದಾರೆ. ಇಲ್ಲಿರುವ ಚಿತ್ರ ಅಥಣಿಯ ತಾಲೂಕ ಕಛೇರಿಯಲ್ಲಿಯದು. ಈ ಚಿತ್ರ ೧೯೩೨ ರಲ್ಲಿ ರಚಿಸಲಾಗಿದೆ. ೨' X ೩' ಅಳತೆ.

ಬ್ರಿಟೀಷ ಅಧಿಕಾರಿ ಥ್ಯಾಕರೆಯ ವಿರುದ್ಧ ಆರಂಭವಾದ ಯುದ್ಧಕ್ಕೆ ತೇಜಸ್ಸಿನ ಚೆನ್ನಮ್ಮ ತನ್ನ ವೀರ ಅಂಗರಕ್ಷಕ ಸೇನಾಧಿಪತಿಯಾದ ಸರದಾರ ಗುರುಸಿದ್ಧಪ್ಪನೊಡನೆ ವೀರ ಮಹಿಳೆ ವೀರಗಚ್ಚೆಯನ್ನು ತೊಟ್ಟು ಶ್ವೇತ ಬಣ್ಣದ ಬಲಿಷ್ಠ ಲಕ್ಷಣವಾದ ಕುದುರೆ ಮೇಲೆ ಕುಳಿತು ಕತ್ತಿ ವರಸೆ ಮಾಡುತ್ತ ಹೊರಟಿದ್ದಾಳೆ. ಮುಂದೆ ಮುಂದೆ ಸರದಾರ ಸೈನ್ಯಕ್ಕೆ ಏನೋ ಆದೇಶ ಸಾರುತ್ತಿರುವಂತೆ ಹಿಂದಿರುಗಿ ನೋಡಿದ್ದಾನೆ. ಹಿಂದೆ ಮುಂದೆ ಪಕ್ಕದಲ್ಲೆಲ್ಲ ಸೈನಿಕರು. ಅವರನ್ನು ಗೌಣವಾಗಿ ಮಸುಕಾಗಿ ಚಿತ್ರಿಸಿ ಇಲ್ಲಿ ಚೆನ್ನಮ್ಮನಿಗೆ ಮೊದಲ ಪ್ರಾಶಸ್ತ್ಯ ಕೊಟ್ಟರೆ. ಸರದಾರ ಗುರುಸಿದ್ಧಪ್ಪನವರಿಗೆ ಎರಡನೇಯ ಪ್ರಾಶಸ್ತ್ಯ ನೀಡಲಾಗಿದೆ. ಚೆನ್ನಮ್ಮ ಉಟ್ಟುಕೊಂಡ ದಟ್ಟ ಕೆಂಪು ಸೀರೆಯ ಬಣ್ಣ ರೌದ್ರದ ಪ್ರತೀಕ ನೆಲೆಯುಂಟಂತೆ ಇದೆ. ಇಲ್ಲಿಯೂ ದೃಶ್ಯಾಂತರವಿದೆ. ದೂರದಲ್ಲಿ ಕೋಟೆಯ ಚಿತ್ರವನ್ನು ತೋರಿಸಿದ್ದಾರೆ. ಮೊದಲು ವೀಕ್ಷಕನ ಕಣ್ಣು, ಚೆನ್ನಮ್ಮನ ಮೇಲೆ ಹೋದರೂ ನಂತರ ಸುತ್ತೆಲ್ಲ ಆಕ್ರಮಿಸುವಂತೆ ಸಂಯೋಜನೆ ಹಾಗೂ ವರ್ಣವಿಭಜನೆಯನ್ನು ಸಮತೋಲನದಿಂದ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ನೂರೈವತ್ತು ವರ್ಷಗಳ ಹಿಂದಿನ ಐತಿಹಾಸಿಕ ಘಟನೆಯೊಂದನ್ನು ನೆನಪಿಗೆ ಕಣ್ಣೆದುರಿಗೆ ತಂದು ನಿಲ್ಲಿಸಿದಂತಿದೆ. ಎಲ್ಲವನ್ನೂ ವಿವರವಾಗಿ ಚಿತ್ರಿಸಿದ್ದಾರೆ.

ಚಿತ್ರ ೧೪೮ : ಪುರಂದರದಾಸರು : ಇದನ್ನು ೧೯೬೩ ರಲ್ಲಿ ರಚಿಸಿದ್ದಾರೆ. ಪುರಂದರದಾಸರು ಹಂಪಿಗೆ ಬಂದ ದೃಶ್ಯವಿದು. ಅಂತೆಯೇ ಅಲ್ಲಿ ವಿಶಾಲ ಮಂಟಪವನ್ನು ಕಾಣುತ್ತೇವೆ. ಪುರಂದರದಾಸರು ಭಕ್ತಿಮಾರ್ಗವನ್ನು ಸ್ವೀಕರಿಸಿ

---

೧೫೨. ಎಂ. ಎ. ಚೆಟ್ಟಿ : ನೆನಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೪೯

ಕಾಲಿಗೆ ಗಜ್ಜೆ ಕಟ್ಟಿ ತಂಬೂರಿ ಹಿಡಿದು. ಗೀತೆಗಳನ್ನು ರಚಿಸುತ್ತ ಹಾಡುತ್ತ ಆಧ್ಯಾತ್ಮಿಕ ವಿಕಾಸವನ್ನು ಹೊಂದಿ ಜನರ ಜಾಗರಣೆ ಮಾಡಿದ ಸಂದರ್ಭ.

ಚಿತ್ರದಲ್ಲಿ ದಾಸರು ಕೈಯಲ್ಲಿ ತಂಬೂರಿ. ತಾಳ ಹಿಡಿದುಕೊಂಡು ಕಾಲಲ್ಲಿ ಗೆಜ್ಜೆಯನ್ನು ಕಟ್ಟಿಕೊಂಡು ತಾಳ ಹಾಕುತ್ತಾ ಹಾಡುತ್ತಿದ್ದಾರೆ. ಹಿನ್ನೆಲೆಯಲ್ಲಿ ಜನರು ಭಕ್ತಿಯಿಂದ ಅವರ ಸಂದೇಶಗಳಿಗೆ ತಲೆಬಾಗಿ ಕೈಮುಗಿದು ನಿಂತಿದ್ದಾರೆ. ಕಲ್ಲಿನ ಮಂಟಪದ ಶಿಲ್ಪಗಳನ್ನು ಚೆಟ್ಟಿಯವರು ವಿವರವಾಗಿ ಚಿತ್ರಿಸಿದ್ದಾರೆ. ಮಂಗಗಳಿಂದ ತುಂಬಿದ ಹಂಪೆ ಕ್ಷೇತ್ರ ಎಂಬುದಕ್ಕೆ ಚಿತ್ರದಲ್ಲಿಯೂ ಸಹಿತ ಎರಡು ಮಂಗಗಳನ್ನು ಚಿತ್ರಿಸಿದ್ದಾರೆ. ದಾಸರಿಗೆ ಪ್ರಾಮುಖ್ಯತೆ ನೀಡಿರುವುದರಿಂದ ಅಲ್ಲಿ ಬಳಸಿದ ವರ್ಣಗಳು ಉಜ್ವಲವಾಗಿವೆ. ಉಳಿದವರನ್ನು ಗೌಣವಾಗಿ ಚಿತ್ರಕ್ಕೆ ಪೂರಕವಾಗುವಂತೆ ವರ್ಣ ಲೇಪನ ಮಾಡಿದ್ದಾರೆ. ಚಿತ್ರದ ಅಳತೆ ೨' X ೩' ಚೆಟ್ಟಿಯವರ ಸಂಗ್ರಹದಿಂದ.

ಸಿದ್ಧಲಿಂಗೇಶ್ವರರ ಎರಡು ಕೃತಿಗಳಿವೆ ಈಗಾಗಲೇ ಇವುಗಳ ವಿವರಣೆಯನ್ನು ಹಿಂದಿನ ಅಧ್ಯಾಯಗಳಲ್ಲಿ ಮಾಡಲಾಗಿದೆ. ಇಲ್ಲಿ ವರ್ಣಗಳ ಬಗ್ಗೆ ವಿಶ್ಲೇಷಿಸಲಾಗಿದೆ.

ಚಿತ್ರ ೧೪೯ : ಸಿದ್ಧಲಿಂಗೇಶ್ವರರು ಶಿವಲಿಂಗ ಧ್ಯಾನಾಸಕ್ತರಾಗಿದ್ದಾರೆ. ಸುತ್ತೆಲ್ಲ ಹುತ್ತು ಬೆಳೆದಿದೆ. ಅವರಲ್ಲಿ ಹಾವುಗಳು ಬಂದು ನೆಲೆಸಿವೆ. ಅದರ ಮೇಲೆ ನಿಂತ ಆಕಳು ಹಾಲನ್ನು ಕರೆಯುತ್ತಿದೆ. ಮುನ್ನೆಲೆಯಲ್ಲಿ ಜನ ಭಕ್ತಿಯಿಂದ ಕೈ ಮುಗಿದು ನಿಂತಿದ್ದಾರೆ. ಒಬ್ಬ ಶಿಷ್ಯ ತಾಡೋಲೆಗಳನ್ನು ಹಿಡಿದು ಕುಳಿತಿದ್ದಾನೆ. ಹಿನ್ನೆಲೆಯಲ್ಲಿ ಸೂರ್ಯಾಸ್ತದ ಹೊಳಪಿ ವರ್ಣ. ಚಿತ್ರದಲ್ಲಿ ಪ್ರಖರ ಹಾಗೂ ಸೌಮ್ಯ ವರ್ಣಗಳ ಮೇಳಾಪವಿದೆ.ಎಲ್ಲವನ್ನೂ ನೈಜವಾಗಿ ಚಿತ್ರಿಸಿದ್ದಾರೆ. ಅಳತೆ ೨' X ೩' ಇದೆ. ಚೆಟ್ಟಿಯವರ ಸಂಗ್ರಹದಲ್ಲಿದೆ.

ಚಿತ್ರ ೧೫೦ : " ೧೯೫೫ ರ ಜನವರಿ ೨೯ - ೩೦ ರಂದು ಬಸವಕಲ್ಯಾಣದಲ್ಲಿ ೧೬ ನೆಯ ಅಖಿಲ ಭಾರತ ವೀರಶೈವ ಮಹಾಸಭೆ ಸಮಾವೇಶಗೊಂಡಿತ್ತು" [೧೫೩] ಆ ಸಂದರ್ಭದಲ್ಲಿ ಈ ' ಶಿವಾನುಭವ ಮಂಟಪ ' ದ ೮' X ೬' ಅಳತೆಯ ತೈಲಚಿತ್ರವನ್ನು ಚಿತ್ರಿಸಿದ್ದಾರೆ.

ಚಿತ್ರ ಅತ್ಯಂತ ಹೃದಯಸ್ಪರ್ಶಿಯಾಗಿದೆ. ಚಿತ್ರದಲ್ಲಿ. ವಿರಾಗಿಣಿ ಅಕ್ಕಮಹಾದೇವಿಯು ಶ್ರೀ ಚೆನ್ನಮಲ್ಲಿಕಾರ್ಜುನನನ್ನರಸುತ್ತ ಕೇಶಾಂಬರ ಧಾರಣೆಯಾಗಿ ಅನುಭವಮಂಟಪಕ್ಕೆ ಬಂದಿದ್ದಾಳೆ. ಮಹಾಯೋಗೀಶ್ವರ ಅಲ್ಲಮಪ್ರಭುಗಳು ಅವಳೊಡನೆ ಚರ್ಚೆ ನಡೆಸಿದ್ದಾರೆ. ಅವರು ಶೂನ್ಯ ಸಿಂಹಾಸನದಲ್ಲಿ ಆಸೀನರಾಗಿದ್ದಾರೆ. ಅದರ ಸುತ್ತಲೂ ಮಹಾಮಹಿಮರಾದ ಬಸವಣ್ಣ. ಚೆನ್ನಬಸವಣ್ಣ. ಮಡಿವಾಳ ಮಾಚಿದೇವ. ಮೋಳಿಗೆಯ ಮಾರಯ್ಯನವರು. ಅಕ್ಕ ನೀಲಾಂಬಿಕೆ. ಅಕ್ಕ ನಾಗಮ್ಮ ಮೊದಲಾಗಿ ಮಹಾಶಿವಶರಣೆಯರು ಪವಡಿಸಿದ್ದಾರೆ.

ಈ ಸಭೆಯಲ್ಲಿ ಎಲ್ಲ ಶಿವಶರಣೆಯರು ತಮ್ಮ ಮುಂದೆ ತಾವು ರಚಿಸಿದ ವಚನಗಳ ತಾಡೋಲೆಗಳನ್ನು ಇಟ್ಟುಕೊಂಡಿದ್ದಾರೆ. ಚಿತ್ರದ ಎಡಕ್ಕೆ ಎಲ್ಲ ಶರಣರು ಬಲಕ್ಕೆ ಎಲ್ಲ ಶರಣೆಯರು ಆಸೀನರಾಗಿದ್ದಾರೆ. ಬಸವಣ್ಣನವರು

---

೧೫೩. ಎಂ. ಎ. ಚೆಟ್ಟಿ : ನೆನಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೯೬

ಚನ್ನಬಸವಣ್ಣನವರು ಉಳಿದೆಲ್ಲರೂ ಇವರೇ ಎನ್ನುವಷ್ಟು ತದ್ರೂಪ್ಯವಾಗಿ ಚಿತ್ರಿಸಿದ್ದಾರೆ. ಚಿತ್ರದಲ್ಲಿ ಅಲ್ಲಮಪ್ರಭು ಹಾಗೂ ಮಹಾದೇವಿಗೆ ಹೆಚ್ಚಿನ ಪ್ರಾಶಸ್ತ್ಯವನ್ನೂ ನೀಡಿದ್ದಾರೆ. ಇದೊಂದು ವರ್ತುಲಾಕಾರದ ಸಂಯೋಜನೆಯಾಗಿದೆ. ಅನುಭವ ಮಂಟಪ ಅತ್ಯಂತ ಭವ್ಯವಾಗಿರುವುದರಿಂದ ಸುತ್ತೆಲ್ಲಾ ಶಿಲ್ಪಗಳ ರಚನೆಯನ್ನು ಮಾಡಿದ್ದಾರೆ. ಮಾಚಿದೇವ ಎಂದಾಕ್ಷಣ ಆತನ ಪಕ್ಕದಲ್ಲಿ ಗಂಟೆ. ಹೀಗೆ ಪ್ರತಿಯೊಂದು ವಿಷಯ ಅರ್ಥವಾಗುವಂತಹ ರೀತಿಯಲ್ಲಿ ಚಿತ್ರಿಸಿದ್ದಾರೆ. ವರ್ಣಗಳು ಸಹಿತ ಅದಕ್ಕೆ ಪೂರಕವಾಗಿ ಸಭೆಯ ಪರಿಣಾಮವನ್ನು ಬೀರಿವೆ. ಅಕ್ಕಮಹಾದೇವಿಯನ್ನು ಕಂಡ ಕೆಲ ಶರಣರು ಗಾಬರಿಯಿಂದ ಮಾತನಾಡುತ್ತಿದ್ದರೆ. ಇನ್ನೂ ಕೆಲವರು ಕೈಮುಗಿದು ಕುಳಿತಿದ್ದಾರೆ. ಒಟ್ಟಾರೆ ನಮ್ಮನ್ನು ೧೨ ನೇ ಶತಮಾನಕ್ಕೆ ಕರೆದೊಯ್ಯುವ ಅಪೂರ್ವ ಕೃತಿಯಾಗಿದೆ.

ಈ ಚಿತ್ರವನ್ನು ನೋಡಿ ಆನಂದ ಪಟ್ಟ ಮಹಾಜನತೆಯಲ್ಲಿ " ಶ್ರೀ ಬಂಥನಾಳದ ಮಹಾಶಿವಯೋಗಿಗಳು ಆ ಚಿತ್ರವನ್ನು ಬಹುವಾಗಿ ಮೆಚ್ಚಿಕೊಂಡು, " ೧೨ ನೇ ಶತಮಾನದಲ್ಲಿ ಇದೇ ಸ್ಥಳದಲ್ಲಿ ಜರುಗಿದ್ದ ' ಶಿವಾನುಭವಮಂಟಪ ' ವನ್ನು ಕಣ್ಣಾರೆ ಎಂಟು ಶತಮಾನಗಳ ನಂತರ ಕಾಣುವಂತೆ... ಮಾಡಿದ ಸುಪ್ರಸಿದ್ಧ ಕಲಾವಿದ ಚೆಟ್ಟಿಯವರ ಕಲೆ ಅಮೋಘವಾದುದು. ಅವರ ಹಸ್ತದಲ್ಲಿ ಅದ್ಭುತ ಶಕ್ತಿ ಇದೆ. ಕುಂಚದಲ್ಲಿ ಚೈತನ್ಯವಡಗಿದೆ " [೧೫೪] ಎಂದು ಶ್ಲಾಘಿಸಿದ್ದಾರೆ.

ಚಿತ್ರ ೧೫೧ : ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ. ಎಡೆಯೂರು [೧೫೫]

ಈ ಚಿತ್ರವನ್ನು ಚೆಟ್ಟಿಯವರು ೧೯೬೭ ರಲ್ಲಿ ಚಿತ್ರಿಸಿದ್ದಾರೆ. ಇಂಥಹ ಚಿತ್ರಗಳನ್ನೇ ಸ್ವಲ್ಪ ಬದಲಾವಣೆ ಮಾಡಿ ಅನೇಕರಿಗೆ ಮಾಡಿಕೊಟ್ಟಿದ್ದಾರೆ. ಅಂತಹ ಒಂದು ಚಿತ್ರ ಗದುಗಿನ ಅಕ್ಕನ ಬಳಗದಲ್ಲಿದೆ. ಅಲ್ಲದೇ ಈ ಚಿತ್ರದ ಕ್ಯಾಲೆಂಡರ್ ಸಹಿತ ಮಾಡಿಸಿದ್ದಾರೆ ತೈಲವರ್ಣದ ಚಿತ್ರ. ಈ ಚಿತ್ರದ ಸನ್ನಿವೇಶದ ಬಗ್ಗೆ ಶ್ರೀ ಸಿದ್ಧೇಶ್ವರ ಮಹಾಪುರಾಣದಲ್ಲಿ ಬರುತ್ತದೆ. " ತೋಂಟದಾರ್ಯನು ಕಗ್ಗೆರೆಯ ಹೂತೋಟದಲ್ಲಿ ಶಿವಯೋಗ ಸಮಾಧಿಯಲ್ಲಿದ್ದಾನೆ. ದೇಹದ ಮೇಲೆ ಹುತ್ತು ಬೆಳೆದುದು. " [೧೫೬]

ಚಿತ್ರದಲ್ಲಿ ತೋಂಟದಾರ್ಯನು ಶಿವಯೋಗ ಸಮಾಧಿಯಲ್ಲಿದ್ದಾರೆ. ಅವರ ಸುತ್ತಲೂ ಭಯಂಕರವಾದ ಹುತ್ತು ಬೆಳೆದಿದೆ. ಅದರೊಳಗಿಂದ ಹಾವುಗಳು ಅತ್ತಿತ್ತ ಹರಿದಾಡುತ್ತಿವೆ. ಹುತ್ತಿನ ಮೇಲೆ ನಿಂತ ಆಕಳು ಕ್ಷೀರಾಭಿಷೇಕ ಮಾಡುತ್ತಿದೆ. ಆ ಹನಿಗಳು ಲಿಂಗದ ಮೇಲೆ ಬೀಳುತ್ತಿರುವಂತೆ ಚಿತ್ರಿಸಿದ್ದಾರೆ. ಅವರ ಅಕ್ಕ ಪಕ್ಕದಲ್ಲಿ ವಿಭೂತಿ ಗಂಟೆ ಮೊದಲು ಮಾಡಿ ಎಲ್ಲ ಪೂಜಾ ಸಾಮಗ್ರಿಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ಚಿತ್ರದಲ್ಲಿ ದೃಶ್ಯಾಂತರವಿದೆ. ಹಿನ್ನೆಲೆಯಲ್ಲಿ ಕಗ್ಗೆರೆಯ ನೀರು. ಸುತ್ತಲೂ ಟೆಂಗಿನಮರ. ಸೂರ್ಯೋದಯದ ಹೊಂಬಣ್ಣ. ಆಕಾಶದಲ್ಲಿ ಪಕ್ಕಿಗಳ

---

೧೫೪. ಎಂ. ವಿ. ಚೆಟ್ಟಿ : ನೆನಪಿನ ಕಿಟಕಿಯಿಂದ : ಕಲಾತಪಸ್ವಿ ಅಭಿನಂದನ ಗ್ರಂಥ. ಪುಟ ೧೪೭

೧೫೫. ಚಿತ್ರದ ಕೆಳಗೆ ಹೀಗೆ ತಲೆಬರಹ ಕೊಡಲಾಗಿದೆ

೧೫೬. ಶ್ರೀ ವಿರಕ್ತ ತೋಂಟದಾರ್ಯ ವಿರಚಿತ : ಶ್ರೀ ಸಿದ್ದೇಶ್ವರ ಮಹಾಪುರಾಣ ಪುಟ ೧೯೫

ಹಾರಾಟ, ಮುನ್ನೆಲೆಯಲ್ಲಿ ಗರಿಕೆ, ಹೂ, ಗಿಡಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ಎದುರಿಗೆ ಸರ್ಪವೊಂದು ಹೆಡೆಯೆತ್ತಿ ನಿಂತಿದೆ. ತೋಂಟದಾರ್ಯರ ಹಿಂದೆ ಜ್ಞಾನದ ಪ್ರಭಾವಳಿಯಿದೆ. ಸೂರ್ಯನ ಬೆಳಕು ಹುತ್ತದ ಮೇಲೆ ಬಂಗಾರದ ರೇಖೆಯ ಹಾಗೆ ಹರಡಿರುವಂತೆ ಚಿತ್ರಿಸಿದ್ದಾರೆ.

ಆಕಳನ್ನು ಲಾಲಿತ್ಯಮಯವಾಗಿ ಚಿತ್ರಿಸಿದ್ದಾರೆ. ಅದರ ಅಂಗಸೌಷ್ಟವ, ಹಿತಮಿತವಾದ ನೆರಳು ಬೆಳಕು. ಅದರ ದಷ್ಟಪುಷ್ಟತೆಯನ್ನು ಎತ್ತಿ ತೋರುತ್ತಿದೆ. ವರ್ಣಮೇಳ (colour harmony) ಕಣ್ಣಿಗೆ, ಮನಸ್ಸಿಗೆ ಆನಂದವನ್ನು ನೀಡುತ್ತದೆ.

ಚಿತ್ರ ೧೫೨ : ಸಿದ್ಧಲಿಂಗ ಯತಿಗಳಿಗೆ ಹರಿಯುವ ನದಿ ದಾರಿ ನೀಡಿದ್ದು. ಇಂತಹ ಚಿತ್ರ ಪೆನ್ಸಿಲ್ . ಇಂಕ್ ಮಾಧ್ಯಮದಲ್ಲಿ ಈಗಾಗಲೇ ನೋಡಲಾಗಿದೆ. ಇಲ್ಲಿಯೂ ಅದೇ ಸನ್ನಿವೇಶ. ಯತಿಗಳು ಅಭಯ ವಚನದೊಂದಿಗೆ ಮುನ್ನಡೆಯುತ್ತಿದ್ದಾರೆ. ನದಿದಾರಿ ಬಿಟ್ಟದ್ದರಿಂದ ತಳದಲ್ಲಿರುವ ಹಾವು, ಕಪ್ಪೆ, ಮೀನುಗಳು ನೀರೊಂದಿಗೆ ಜಿಗಿಯುತ್ತಿರುವಂತೆ ಚಿತ್ರಿಸಿದ್ದಾರೆ. ಅವರ ಹಿಂದೆ ಶಿಷ್ಯರ ತಂಡವೇ ಇದೆ. ಎಲ್ಲರ ಮುಖದಲ್ಲಿಯೂ ಗಾಭರಿಯೊಂದಿಗೆ ಭಕ್ತಿಯ ಭಾವನೆ ಮೂಡಿದಂತಿದೆ. ಪ್ರತಿಯೊಬ್ಬರ ಮುಖವನ್ನು ವಿವರವಾಗಿ ಚಿತ್ರಿಸಿದ್ದಾರೆ. ಎಲ್ಲರೂ ತಲೆಗೆ ಕಾವಿ ಬಟ್ಟೆಯ ರುಮಾಲು ಸುತ್ತಿದರೆ ಯತಿಗಳು ಮಾತ್ರ ಜಟಾಧಾರಿಯಾಗಿದ್ದಾರೆ. ಎಲ್ಲರ ನೊಸಲಿಗೂ ವಿಭೂತಿ ಕೊರಳಲ್ಲಿ ಲಿಂಗ.

ಚಿತ್ರದಲ್ಲಿ ದೃಶ್ಯಾಂತರವಿದೆ. ಕಣ್ಣಿಗೆ ಕಾಣುವ ದೂರದವರೆಗೂ ಶಿಷ್ಯವೃಂದವನ್ನು ರಚಿಸಿದ್ದಾರೆ. ಅದರ ಹಿಂದೆ ಬೆಟ್ಟ, ಆಕಾಶ ಗಿಡಮರಗಳನ್ನು ಚಿತ್ರಿಸಿದ್ದಾರೆ. ಸೌಮ್ಯಭಾವದೊಂದಿಗೆ ಬಣ್ಣಗಳು ಸೌಮ್ಯವಾಗಿರುವಂತೆ ಚಿತ್ರಿಸಿದ್ದಾರೆ. ಇದನ್ನು ೧೯೮೧ ರಲ್ಲಿ ರಚಿಸಿದ್ದಾರೆ. ಚೆಟ್ಟಿಯವರ ಸಂಗ್ರಹದಿಂದ ಅಳತೆ ೨' X ೩'. (ಅಧ್ಯಾಯ ಏಳರಲ್ಲಿಯ ೩೫ ನೇ ಚಿತ್ರವನ್ನು ನೋಡಿರಿ)

ಚಿತ್ರ ೧೫೩ : ಹನ್ನೆರಡನೆಯ ಶತಮಾನದ ಭಕ್ತಿಭಾಂಡಾರಿ ಎನಿಸಿದ ಬಸವಣ್ಣನವರು ಕುದುರೆಯ ಮೇಲೆ ಕುಳಿತು ಹೋಗುತ್ತಿರುವ ದೃಶ್ಯ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಬಸವಣ್ಣನವರು ಶ್ವೇತ ವರ್ಣದ ಬಲಿಷ್ಟ ಕುದುರೆಯ ಮೇಲೆ ಕುಳಿತು ಹೋಗುತ್ತಿದ್ದಾರೆ. ಹಿಂದೆ ಮುಂದೆ ರಾಜಭಟರಿರುವರು ಹಿಂದಿನ ವ್ಯಕ್ತಿ ಬಸವಣ್ಣನವರಿಗೆ ಛತ್ರವನ್ನು ಹಿಡಿದರೆ ಇನ್ನೊಬ್ಬ ಚವರಿಯನ್ನು ಬೀಸುತ್ತಿದ್ದಾನೆ. ಬಸವಣ್ಣನವರ ಮುಖಭಾವ ಭಕ್ತಿ, ಜ್ಞಾನ, ಶಾಂತತೆಯನ್ನು ಸಾರುವಂತಿದೆ. ಕುದುರೆಯು ಸಹಿತ ಆಭರಣಭೂಷಿತವಾಗಿದೆ. ಅದರ ಕಾಲಲ್ಲೂ ಬಂಗಾರದ ಕಡಗವನ್ನು ತೊಡಿಸಿದ್ದಾರೆ. ಕುದುರೆಯ ಪಡಿನೆರಳು, ಮನುಷ್ಯರ ನೆರಳನ್ನು ನೋಡಿದರೆ ಇದು ಮಧ್ಯಾಹ್ನದ ಸಮಯವನ್ನು ಸೂರ್ಯ ನೆತ್ತಿಗೇರಿದ ಸಮಯವನ್ನು ಸೂಚಿಸುತ್ತದೆ.

ನಿಸರ್ಗ ಚಿತ್ರದಂತೆ ಇಲ್ಲಿಯೂ ಸಹಿತ ಕಾಲವನ್ನು ಸೂಚಿಸಬಹುದೆಂಬುದನ್ನು ನೋಡಬಹುದಾಗಿದೆ. ಹಿನ್ನೆಲೆಯಲ್ಲಿ ನಿಸರ್ಗವನ್ನು ಬಹಳ ಸೌಮ್ಯರೀತಿಯಲ್ಲಿ ಮೂಡಿಸಿಕೊಂಡಿದ್ದಾರೆ. ಈ ಚಿತ್ರದಲ್ಲಿ ಛತ್ರದ ಇಳಿಬಿದ್ದಿರುವ ಗೊಂಡೆ ಸಹಿತವಾಗಿ ಪ್ರತಿಯೊಂದನ್ನು ಸೂಕ್ಷ್ಮವಾಗಿ ವಿವರವಾಗಿ ಚಿತ್ರಿಸಿದ್ದಾರೆ. ೧೯೮೧ ರಲ್ಲಿ ರಚಿಸಿದ್ದಾರೆ. ಅಳತೆ ೨' X ೩' ಇದೆ. ಚೆಟ್ಟಿಯವರ ಸಂಗ್ರಹದಲ್ಲಿದೆ.

ಬುದ್ಧನ ಚರಿತ್ರೆಯನ್ನು ಸಾರುವ ಎರಡು ಚಿತ್ರಗಳು :

ಚಿತ್ರ ೧೫೪ : ಬುದ್ಧನು ಜೀವನ್ಮರಣಗಳ ತಿಳಿವಳಿಕೆಯನ್ನು ಬೋಧಿಸಿದ್ದು.

" ಒಮ್ಮೆ ಕಿಶಾಗೌತಮಿ ಎಂಬ ಸ್ತ್ರೀಯು ತನ್ನ ಮೃತ ಬಾಲಕನ ಶವವನ್ನು ಹಿಡಿದುಕೊಂಡು ಸಿಟ್ಟಿನಿಂದ ಬುದ್ಧನ ಬಳಿಗೆ ಬಂದಳು. ಹೇಗಾದರೂ ಮಾಡಿ ತನ್ನ ಮಗುವಿಗೆ ಜೀವ ಕೊಡಬೇಕೆಂದು ಅವಳು ಅವನೊಡನೆ ಬೇಡಿಕೊಂಡಿದ್ದಳು. ಬುದ್ಧನು ಆಗ ಶಾಂತ ಭಾವದಿಂದ ಹೀಗೆಂದನು " ತಂಗೀ ಯಾವ ಮನೆಯಲ್ಲಿ ಇಂದಿನ ತನಕ ಮೃತ್ಯುವು ಬಂದಿಲ್ಲವೋ ಅಂತಹ ಮನೆಯಿಂದ ಒಂದಿಷ್ಟು ಸಾಸುವೆ ಉಪ್ಪು ತೆಗೆದುಕೊಂಡು ಬಾ. ಅಂದರೆ ನಿನ್ನ ಬಾಲಕನನ್ನು ಮತ್ತೆ ಬದುಕಿಸುವೆ " [೧೫೭] ಎನ್ನುವ ಸನ್ನಿವೇಶದ ಚಿತ್ರ ಇದಾಗಿದೆ.

ಚಿತ್ರದಲ್ಲಿ ಬುದ್ಧ ಹಾಗೂ ಆತನ ಅನುಯಾಯಿಗಳು ಅಧ್ಯಯನ ಮಾಡುತ್ತಿದ್ದಾರೆ. ಬುದ್ಧನು ಶಾಂತತೆಯಿಂದ ಕುಳಿತಿದ್ದಾನೆ. ಎದುರಿಗೆ ಇರುವವಳೇ ಕಿಶಾಗೌತಮಿ ಆಕೆಯ ಮುಂದೆ ಸತ್ತ ಬಾಲಕನಿದ್ದಾನೆ. ಆಕೆ ಒಂದೇ ಸವನೆ ಆತನನ್ನು ಬದುಕಿಸಿಕೊಡು ಎಂದು ಗೋಗರೆಯುವ ಭಾವವಿದ್ದರೆ ಅಷ್ಟೇ ವಿರೋಧವಾಗಿ ಬುದ್ಧನ ಮುಖದಲ್ಲಿ ನಿಶ್ಚಂಚಲತೆಯ ಭಾವನೆ ಇದೆ. ಇಲ್ಲಿ ಬುದ್ಧನಿಗೆ ಪ್ರಮುಖ ಪ್ರಾಶಸ್ತ್ಯ ಕೊಟ್ಟು ಎರಡನೇಯದಾಗಿ ಕಿಶಾಗೌತಮಿ ಮತ್ತವಳ ಮಗುವಿಗೆ ಕೊಡಲಾಗಿದೆ. ಅನುಯಾಯಿಗಳನ್ನು ಅಷ್ಟೇ ಸೌಮ್ಯವಾಗಿ ಚಿತ್ರಕ್ಕೆ ಪೂರಕವಾಗುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಬುದ್ಧನ ತಲೆಯ ಹಿಂದೆ ಅದೇ ಜ್ಞಾನಪ್ರಭಾವಳಿ. ಅದರ ಹಿಂದೆ ಆಲದ ಮರ. ಚಿತ್ರದಲ್ಲಿ ದೃಶ್ಯಾಂತರವಿದೆ. ಅಳತೆ ೨' X ೩' ಚಿಟ್ಟಿಯವರ ಸಂಗ್ರಹದಿಂದ.

ಚಿತ್ರ ೧೫೫ : ಬುದ್ಧನು ಜನರಿಗೆ ಉಪದೇಶವನ್ನು ಮಾಡುವ ಚಿತ್ರ. ಆತನನ್ನು ಕಾಣಲು ಎಲ್ಲ ರೀತಿಯ ಜನರು ಬರುತ್ತಿದ್ದರು. ರಾಜ ರಾಣಿ ಮುಂತಾದವರೆಲ್ಲ ಅಂತೆಯೇ. ಚಿತ್ರದಲ್ಲಿ ಬುದ್ಧನು ಆಶೀರ್ವಾದ ಮಾಡುತ್ತ ಮರದ ಕೆಳಗೆ ಆಸೀನನಾಗಿದ್ದಾನೆ. ರಾಜರಾಣಿಯರು ಆತನಿಗೆ ಅರ್ಪಿಸಲು ಹೂಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಚಿತ್ರದ ಬಲಕ್ಕೆ ಒಬ್ಬಳು ದೀಪವನ್ನು ಬೆಳಗಿಸುತ್ತಿದ್ದಾಳೆ. ಎದುರಿಗೆ ಒಬ್ಬ ಸಾಮಾನ್ಯ ಮನುಷ್ಯ ಪುಷ್ಪವನ್ನರ್ಪಿಸುತ್ತಿದ್ದಾನೆ. ಈ ರೀತಿ ಎಲ್ಲರೂ ಧನ್ಯ ಭಾವನೆಯಿಂದ ಬುದ್ಧನ ಸೇವೆಗೈಯುತ್ತಿದ್ದಾರೆ. ಚಿತ್ರದಲ್ಲಿ ಪ್ರತಿಯೊಂದನ್ನು ವಿವರವಾಗಿ ಚಿತ್ರಿಸಿದ್ದಾರೆ. ಎಲ್ಲಾ ಪ್ರಾಣಿ ಪಕ್ಷಿಗಳು ಒಂದೆಡೆ ಸೇರಿವೆ. ಹಿನ್ನೆಲೆಯಲ್ಲಿ ರಥ ನಿಂತಿದೆ. ಚಿತ್ರವು ತಾಜಾತನದಿಂದ ಹಾಗೂ ವರ್ಣಗಳ ಸಿರಿವಂತಿಕೆಯಿಂದ ಕೂಡಿದೆ. ಇಲ್ಲಿಯ ವರ್ಣಸಂಯೋಜನೆ ಭಿತ್ತಿಚಿತ್ರಗಳ ಅನುಭವವನ್ನು ನೀಡುತ್ತದೆ. ಅಳತೆ ೩೦" X ೨೨" ಈ ಚಿತ್ರ ಚಿಟ್ಟಿಯವರ ಸಂಗ್ರಹದಿಂದ. (ಅಧ್ಯಾಯ ೪ರಲ್ಲಿಯ ೨೭ ನೇ ಚಿತ್ರವನ್ನು ನೋಡಿರಿ)

ಚಿತ್ರ ೧೫೬ : ಈ ಚಿತ್ರ ಮೋಹಿನಿ ಭಸ್ಮಾಸುರರ ಚಿತ್ರವಾಗಿದೆ. ಅಳತೆ ೨ ೧/೨ ' X ೩' ಬೆಂಗಳೂರಿನ ಕರ್ನಾಟಕ ಲಲಿತಕಲಾ ಅಕಾಡೆಮಿಯಲ್ಲಿ ಲಭ್ಯವಿದೆ.

ಇಂತಹುದೇ ಚಿತ್ರವನ್ನು ಈಗಾಗಲೇ ಪೆನ್ಸಿಲ್ ರೇಖಾಚಿತ್ರದಲ್ಲಿ. ಜಲವರ್ಣ ಮಾಧ್ಯಮದಲ್ಲಿ ವಿಶ್ಲೇಷಿಸಲಾಗಿದೆ. ಆದರೆ ಇದು ತೈಲಮಾಧ್ಯಮದ್ದು. ಜಲವರ್ಣದ ಕೃತಿಗೂ ಇದಕ್ಕೂ ಬಹಳ ವ್ಯತ್ಯಾಸವಿದೆ. ಅದು ಅತ್ಯಂತ

---

೧೫೭. ಕಾಶೀನಾಥ ಪೋತದಾರ : ಬುದ್ಧಚರಿತ : ಪುಟ ೬೮

ಅಲಂಕಾರಿಕವಾಗಿ ಚಿತ್ರಿಸಲ್ಪಟ್ಟರೆ ಈ ಚಿತ್ರ ಅತ್ಯಂತ ಸರಳ ರೀತಿಯಲ್ಲಿ ಚಿತ್ರಿಸಿದ್ದಾರೆ. ನೃತ್ಯ ಮಾಡುತ್ತ ಬಲಗೈಯನ್ನು ನೆತ್ತಿಯ ಮೇಲೆ ಒಯ್ಯುವ ರೀತಿಯಲ್ಲಿ ನೃತ್ಯದ ಚಲನೆ ಇದೆ. ಭಸ್ಮಾಸುರನು ಇಲ್ಲಿ ಅಷ್ಟೊಂದು ಭಯಂಕರನಾಗಿರದೆ ಸ್ವಲ್ಪ ಒರಟಾಗಿರುವಂತೆ ಚಿತ್ರಿಸಿದ್ದಾರೆ. ತೆಳುವಾದ ವರ್ಣಗಳ ಲೇಪನ ಜಲವರ್ಣದಂತೆ ಪರಿಣಾಮಕಾರಿಯಾಗಿದೆ. ಎಷ್ಟು ಬೇಕೋ ಅಷ್ಟೇ ಆಭರಣಗಳನ್ನು ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಮರವಿದೆ. ಒಟ್ಟಾರೆಯಾಗಿ ಆ ಸನ್ನಿವೇಶದ ದೃಶ್ಯವನ್ನು ಸೆರೆಹಿಡಿದಿದ್ದಾರೆ. (ಅಧ್ಯಾಯ ಏಳರಲ್ಲಿಯ ೩೨ ನೇ ಚಿತ್ರವನ್ನು ನೋಡಿರಿ)

ii) ಸಾಮಾಜಿಕ ಚಿತ್ರಗಳು :

ಈ ವಿಷಯಗಳಲ್ಲಿ ಕೆಲವು ಜಾನಪದೀಯ ವಿಷಯಗಳಾಗಿವೆ. ಅದರಲ್ಲಿ ಇದು ಜೋಗತಿಯ ಚಿತ್ರ.

ಚಿತ್ರ ೧೫೭ : ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದ ದೇವತೆಯ ಆರಾಧಕರು. " ಗ್ರಾಮದ ಜವಾಬ್ದಾರಿಗೆ ಗ್ರಾಮದೇವತೆಯ ಪರಿಕಲ್ಪನೆ ಬೆಳೆದು ಬಂದಿತು. ಹಿಂದೆ ಅಡವಿಯಲ್ಲಿ ಪೂಜಿತಳಾಗುತ್ತಿದ್ದ ಶಕ್ತಿದೇವತೆಯನ್ನು ಊರಿಗೆ ತಂದು ಊರ ಮಧ್ಯದಲ್ಲಿ ಸ್ಥಾಪಿಸುವ ಮೂಲಕ ಮನುಷ್ಯ ಪೂಜೆ ಉತ್ಸವಗಳನ್ನಾರಂಭಿಸಿದ. "[೧೫೮] ಆ ಹಿನ್ನೆಲೆಯಲ್ಲಿ ಸವದತ್ತಿ ಎಲ್ಲಮನ ಪ್ರಭಾವ ಉತ್ತರ ಕರ್ನಾಟಕದಲ್ಲಿ ಹೆಚ್ಚು. ಎಲ್ಲಮ್ಮ ದೇವರ ಮೂರ್ತಿಯನ್ನು ತಲೆಯ ಮೇಲೆ ಹೊತ್ತುಕೊಂಡು ಹಾಡು ಹಾಡುತ್ತ ಮನೆ ಮನೆಗೆ ಹೋಗುವುದು ವಾಡಿಕೆ.

ಚಿತ್ರದಲ್ಲಿ ಜೋಗತಿ ಎಲ್ಲಮ್ಮನ ಮೂರ್ತಿಯನ್ನು ಬುಟ್ಟಿಯಲ್ಲಿ ಹೊತ್ತುಕೊಂಡಿದ್ದಾಳೆ. ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡಿದ್ದಾಳೆ. ಆಕೆಯ ಬಲಕ್ಕೆ ಹೆಣ್ಣು ಜೋಗತಿ ಚೌಡಿಕೆ ವಾದ್ಯ ಬಾರಿಸುತ್ತ ಹಾಡುತ್ತಿದ್ದಾಳೆ. ಎಡಕ್ಕೊಬ್ಬ ಜೋಗಪ್ಪನಿದ್ದಾನೆ. ಅವನು ಹಾಡುತ್ತಿದ್ದಾನೆ. ಕಪ್ಪು ವರ್ಣದವರಾದ ಇವರು ಹಣೆಗೆ ಹಳದಿ ಭಂಡಾರವನ್ನು ದೇವಿಯ ಆಶೀರ್ವಾದವೆಂದು ಹಚ್ಚಿಕೊಂಡಿರುತ್ತಾರೆ. ಉಗ್ರದೇವತೆಯಾದ್ದರಿಂದ ಆಕೆಯ ಕಣ್ಣುಗಳನ್ನು ಉಗ್ರಭಾವದಿಂದ ರಚಿಸಿದ್ದಾನೆ. ಉಗ್ರವರ್ಣದ ಉಡುಪುಗಳು. ಇಲ್ಲಿ ಅತ್ಯಂತ ದಟ್ಟವಾದ ಬಣ್ಣಗಳನ್ನು ಉಪಯೋಗಿಸಿದ್ದಾರೆ. ನಮ್ಮ ನಾಡಿನ ಜನಪದ ಶೈಲಿಯನ್ನು ಆ ಸಂಸ್ಕೃತಿಯನ್ನು ಎತ್ತಿ ತೋರಿಸುವ ಚಿತ್ರ ಇದಾಗಿದೆ ಅಳತೆ ೩೦" X ೨೨" ಇದೆ. (ಅಧ್ಯಾಯ ಏಳರಲ್ಲಿಯ ೨೮ ನೇ ಚಿತ್ರವನ್ನು ನೋಡಿರಿ)

ಚಿತ್ರ ೧೫೮ : ಇದೊಂದು ಜಾನಪದ ನೃತ್ಯದ ದೃಶ್ಯ. ಉತ್ತರ ಕರ್ನಾಟಕದಲ್ಲಿ ಇರುವ ಡೊಳ್ಳು ಕುಣಿತ. ಕುರುಬ ಜನಾಂಗದವರು ಹೆಚ್ಚಾಗಿ ಈ ಕುಣಿತವನ್ನು ಬೆಳೆಸಿಕೊಂಡು ಬಂದವರು. ಇದು ಸಹಿತ ಒಂದು ಆರಾಧನೆಯ ರೀತಿಯಾಗಿದೆ. " ತಮಗೆ ಬೇಕಾದಾಗ ಬಿಡುವೆನಿಸಿದಾಗ ಹಾಡುವ. ಸೇವೆ ಮಾಡುವ ಪ್ರವೃತ್ತಿ ಇಲ್ಲಿನದು. "[೧೫೯]

ಈ ಚಿತ್ರದಲ್ಲಿ ಡೊಳ್ಳು ಬಾರಿಸುವವರು ನಾಲ್ಕು ಜನರಿರುವರು. ಹಣೆಗೆ ಹಳದಿಯ ಬಂಡಾರವನ್ನು ಹಚ್ಚಿಕೊಂಡಿರುವರು. ಹೆಗಲ ಮೇಲೆ ವೃತ್ತಿಯನ್ನು ಸೂಚಿಸುವ ಕಂಬಳಿಯನ್ನು ಹೊದ್ದುಕೊಂಡಿದ್ದಾರೆ. ಹೆಜ್ಜೆ ಹಾಕುತ್ತ ಗತಿಯಿಂದ ಡೊಳ್ಳು ಬಾರಿಸುವುದರಲ್ಲಿ ಮಗ್ನರಾಗಿದ್ದಾರೆ. ಬೆಟ್ಟಿಯವರು ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಬಳಸಿದ್ದರೂ

---

೧೫೮. ವಿರೇಶ ಬಡಿಗೇರ : ಉತ್ತರ ಕರ್ನಾಟಕದ ಜಾನಪದ ಗೀತಮೇಳಗಳು - ಒಂದು ಸಾಂಸ್ಕೃತಿಕ ಅಧ್ಯಯನ: ಪುಟ ೨೪

೧೫೯. ವಿರೇಶ ಶೀ. ಬಡಿಗೇರ : ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು ಒಂದು ಸಾಂಸ್ಕೃತಿಕ ಅಧ್ಯಯನ ಪುಟ ೧೫೫

ಅದು ಕಣ್ಣಿಗೆ ಉಗ್ರವಾಗಿ ಕಾಣದ ರೀತಿಯಲ್ಲಿ ಅದಕ್ಕೆ ಪ್ರತಿಯಾಗಿ ಅದಕ್ಕಿಂತಲೂ ಉಜ್ವಲವಾಗಿ ಕಾಣುವ ಶ್ವೇತವರ್ಣವನ್ನು ಕುಣಿಯುವವರ ಉಡುಪುಗಳಲ್ಲಿ ಬಳಸಿದ್ದರಿಂದ ವರ್ಣಗಳ ಸಮತೋಲನವು ಸಮವಾಗಿದೆ. ಡೊಳ್ಳಿನ ಕುಣಿತದಿಂದ ಚಿತ್ರಕ್ಕೆ ಒಂದು ರೀತಿಯ ಲಯಬದ್ಧವಾದ ಚಾಲನೆ ಇದೆ. ಡೊಳ್ಳಿನ ಭಾರಕ್ಕೆ ಹಿಂದೆ ಬಾಗಿ ಕುಣಿಯುತ್ತಿರುವುದು ಅವುಗಳ ಭಾರದ ಕಲ್ಪನೆಯನ್ನು ನೀಡುತ್ತದೆ. ಚಿತ್ರದ ಅಳತೆ ೨' X ೨ ೨/೩ ' ಕರ್ನಾಟಕ ಲಲಿತಕಲಾ ಅಕಾಡೆಮಿ ಸಂಗ್ರಹದಿಂದ.

ಚಿತ್ರ ೧೫೯ : ಮೀನುಗಾರರು : ಈ ಚಿತ್ರದಲ್ಲಿ ಕಡಲ ತೀರದಲ್ಲಿ ಮೀನುಗಾರರು ಹೆಣ್ಣುಮಕ್ಕಳು. ಪುರುಷರು ತಮ್ಮ ಕಾರ್ಯದಲ್ಲಿ ತನ್ಮಯರಾಗಿದ್ದಾರೆ. ಕೆಲ ಮಹಿಳೆಯರು ಕುಳಿತು ಮೀನುಗಳನ್ನು ಬುಟ್ಟಿಗೆ ತುಂಬುತ್ತಿದ್ದರೆ. ಪುರುಷನೊಬ್ಬ ಅದನ್ನು ಓರ್ವ ಹೆಣ್ಣುಮಗಳ ತಲೆಯ ಮೇಲೆ ಇರಿಸುತ್ತಿದ್ದಾನೆ. ಹಿನ್ನೆಲೆಯಲ್ಲಿ ಕಡಲು ಅಲ್ಲಲ್ಲಿ ಮೀನು ಹಿಡಿಯುವ ದೋಣಿಗಳು. ಇಲ್ಲಿಯ ಆಕೃತಿಗಳನ್ನು ಅತ್ಯಂತ ದಷ್ಟಪುಷ್ಟವಾಗಿ ಚಿತ್ರಿಸಿದ್ದಾರೆ ಹಾಗೂ ಮುಖದಲ್ಲಿ ಒರಟುತನದ ಭಾವನೆ ಇದೆ. ಅವರು ಮಾಡುತ್ತಿರುವ ಕೆಲಸಕ್ಕೆ ತಕ್ಕಂತೆ ಶರೀರವನ್ನು ಚಿತ್ರಿಸಿದ್ದಾರೆ. ಸೌಮ್ಯವರ್ಣಗಳ ಜೊತೆಗೆ ಉಗ್ರವರ್ಣಗಳ ಮೇಳಾಪವು ಕಡಲ ತೀರದ ಪರಿಣಾಮವನ್ನು ಬೀರಿದೆ. ಮೀನುಗಳ ಆಕೃತಿಯನ್ನು ಚಿತ್ರಿಸುವಲ್ಲಿ ಕುಂಚದ ಒಂದೇ ಎಳೆತದಲ್ಲಿ ತೋರಿಸಿದ್ದಾರೆ. ಈ ಚಿತ್ರವನ್ನು ನೇರವಾಗಿ ಪ್ಲಾವುಡ್ ಮೇಲೆ ತೈಲವರ್ಣಗಳಿಂದ ಚಿತ್ರಿಸಿದ್ದಾರೆ. ಅಳತೆ ೧' X ೨' ಚೆಟ್ಟಿಯವರ ಸಂಗ್ರಹದಿಂದ. (ಅಧ್ಯಾಯ ಏಳರಲ್ಲಿಯ ೨೯ ನೇ ಚಿತ್ರವನ್ನು ನೋಡಿರಿ)

ಚಿತ್ರ ೧೬೦ : ದನದ ಕೊಟ್ಟಿಗೆ (ಹಟ್ಟಿ) ಯ ಚಿತ್ರ : ಚಿತ್ರದಲ್ಲಿ ಸಾಲಾಗಿ ಎದುರು ಬದುರಾಗಿ ಎಮ್ಮೆಗಳು ನಿಂತಿವೆ. ಒಬ್ಬ ವ್ಯಕ್ತಿ ಸಗಣಿಬುಟ್ಟಿ ಹೊತ್ತುಕೊಂಡು ಹೋಗುತ್ತಿದ್ದಾನೆ. ಇನ್ನೊಬ್ಬ ವ್ಯಕ್ತಿ ಮೇವನ್ನು ತುಂಬುತ್ತಿದ್ದಾನೆ. ಹೆಣ್ಣುಮಗಳೊಬ್ಬಳು ಹಾಲು ಕರೆಯಲು ತಂಬಿಗೆಯನ್ನು ಹಿಡಿದುಕೊಂಡು ಕಾಯುತ್ತಿದ್ದಾಳೆ. ಸಮೀಪದಲ್ಲಿ ಒಂದು ಕರುವಿದೆ.

ಅತ್ಯಂತ ಸುಂದರವಾದ ದೃಶ್ಯ. ಚೆಟ್ಟಿಯವರು ಇಲ್ಲಿ ಎಮ್ಮೆಗಳ ಮುಖಭಾವವನ್ನು ನಾನಾ ರೀತಿಯಲ್ಲಿ ಚಿತ್ರಿಸಿದ್ದಾರೆ. ಅವುಗಳ ಕೋಡುಗಳು ಸಹಿತ ಒಂದರಂತೆ ಇನ್ನೊಂದಿಲ್ಲ. ಮಧ್ಯದಲ್ಲಿ ದೋಣಿ ಅದರಲ್ಲಿ ಮೇವು. ಕರು ಕಿವಿಗಳನ್ನು ನೆಟ್ಟಿಸಿ ಕಾತರವಾಗಿ ನಿಂತಂತೆ ಸಹಜ ವಾತಾವರಣವನ್ನು ನಿರ್ಮಿಸಿದ್ದಾರೆ. ಎಮ್ಮೆಗಳ ಮುಖದಲ್ಲಿ ನೆರಳು - ಬೆಳಕನ್ನು ವಿಂಗಡಿಸುವುದರೊಂದಿಗೆ ಅವುಗಳ ಮುಖದಲ್ಲಿಯ ಉಬ್ಬು - ತಗ್ಗುಗಳೊಂದಿಗೆ ಆಕೃತಿಗಳನ್ನು ನೈಜತೆಯಿಂದ ಸ್ಪಷ್ಟಪಡಿಸಿದ್ದಾರೆ. ಚೆಟ್ಟಿಯವರ ಸಂಗ್ರಹದಿಂದ.

ಚೆಟ್ಟಿಯವರ ಈ ಎಲ್ಲ ತೈಲವರ್ಣದ ಸಂಯೋಜನಾ ಚಿತ್ರಗಳನ್ನು ಗಮನಿಸಿದಾಗ ಅವರ ಜಲವರ್ಣದ ಸಂಯೋಜನಾ ಚಿತ್ರಗಳನ್ನು ಗಮನಿಸಿದಾಗ ಅವರ ಜಲವರ್ಣದ ಆಳವಾದ ಅಧ್ಯಯನದ ಪ್ರಭಾವ ಈ ಚಿತ್ರಗಳಲ್ಲಿ ಅಲ್ಲಲ್ಲಿ ಪರಿಣಾಮ ಬೀರಿದೆ. ಮೊದಮೊದಲು ಚಿತ್ರಗಳು ಅಕಾಡೆಮಿಕ್ ಶೈಲಿಯಂತೆ ಕಂಡರು. ನಂತರದಲ್ಲಿ ಚಿತ್ರಿಸಿದ ಚಿತ್ರಗಳು ಅವರದೇ ಆದ ಶೈಲಿಯನ್ನು ಹೊಂದಿವೆ. ಉದ್ದನೆಯ ಆಕೃತಿಗಳನ್ನು ನೋಡುತ್ತೇವೆ. ಅಲ್ಲದೆ ಉತ್ತರ

೧೪೬. ವಿಶ್ವರೂಪ ದರ್ಶನ



೧೪೭. ವೀರರಾಣಿ ಕಿತ್ತೂರ ಚೆನ್ನಮ್ಮ



೧೪೮. ಪುರಂದರ ದಾಸರು




೧೪೯. ಶ್ರೀ ಎಡೆಯೂರ ಸಿದ್ಧಲಿಂಗೇಶ್ವರರು



೧೫೦. ಶಿವಾನುಭವ ಮಂಟಪ ದೃಶ್ಯ



೧೫೧. ಶ್ರೀ ಎಡೆಯೂರ ಸಿದ್ಧಲಿಂಗೇಶ್ವರರು



೧೫೩. ಬಸವಣ್ಣನವರು ಕುದುರೆಯ ಮೇಲೆ ಕುಳಿತು ಹೋಗುತ್ತಿರುವುದು



೧೫೪. ಬುದ್ಧನ ಉಪದೇಶ





೧೫೮. ಡೊಳ್ಳು ಕುಣಿತ



೧೫೯. ದನದ ಕೊಟ್ಟಿಗೆ

ಕರ್ನಾಟಕದ ಜನಜೀವನ ಇಲ್ಲಿಯ ಜಾನಪದ ಸಂಪ್ರದಾಯಗಳ ತಿಳಿವಳಿಕೆಯನ್ನು ನೀಡುವ ಚಿತ್ರಗಳಾಗಿವೆ. " ರೂಪನಿರ್ಮಾಣ ಮಾಡುವುದೊಂದೇ ಕಲಾ ಕೋವಿದನ ಕೆಲಸವಲ್ಲ. ಅವನಿಗೆ ಇದಕ್ಕೂ ಹಿರಿದೆನಿಸಿದ ಗುರಿಯೊಂದಿದೆ. ತನ್ನ ಕೃತಿಯಲ್ಲಿ ನಿತ್ಯ ಸತ್ಯ ಸೌಂದರ್ಯವನ್ನು ಪ್ರತಿಬಿಂಬಿಸಬೇಕಾಗಿದೆ. "[೧೬೦] ಎಂದು ಪ್ರಸಿದ್ಧ ಬಂಗಾಳಿ ಚಿತ್ರಕಾರ ಅಸಿತಕುಮಾರ ಹಾಲ್ದಾರರು ನುಡಿದಿರುವುದನ್ನು ಚೆಟ್ಟಿಯವರ ಕಲಾಕೃತಿಗಳಲ್ಲಿ ಕಾಣುತ್ತೇವೆ.

೫) ಸ್ಥಿರ ವಸ್ತುಚಿತ್ರಣ :

ಈ ವಿಷಯದ ಬಗ್ಗೆ ಈಗಾಗಲೇ ಹಿಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಇಲ್ಲಿ ತೈಲ ಮಾಧ್ಯಮದಲ್ಲಿ ರಚಿಸಿದ ಚಿತ್ರಗಳು.

ಚಿತ್ರ ೧೬೧ : ಇದು ಅತ್ಯಂತ ಹಳೆಯ ಚಿತ್ರವಾಗಿದೆ. ಇದನ್ನು ೧೯೫೧ ರಲ್ಲಿ ರಚಿಸಿದ್ದಾರೆ. ' ಮೊನೊಕ್ರೊಮ್ ' ಒಂದೇ ಬಣ್ಣದಿಂದ ನೆರಳು - ಬೆಳಕಿನ ವಿಂಗಡಣೆಯನ್ನೂ ಮಾಡಿದ್ದಾರೆ. ಚಿತ್ರದಲ್ಲೊಂದು ಕಾಜಿನ ಚಹಾದ ಕಿತ್ತಲೆ ಇದೆ. ಹಿಂದೆ ಗಾಜಿನ ತಟ್ಟೆ, ಎರಡೂ ಪಕ್ಕದಲ್ಲಿ ಕಪ್ ಮತ್ತು ಬಶಿ ನಂತರ ಎದುರುಗಡೆ ಗಾಜಿನ ತಟ್ಟೆಯಲ್ಲಿ ಎರಡು ಮೊಟ್ಟೆಗಳಿವೆ. ಹಿನ್ನೆಲೆಯಲ್ಲಿ ಬಟ್ಟೆ ಇದೆ. ಪ್ರತಿಯೊಂದು ವಸ್ತುವಿನ ನೈಜತೆ ಅದರ ಮೈವಳಿಕೆಯನ್ನು ಚಿತ್ರಿಸವುದರ ಮೂಲಕ ನಮ್ಮ ಅನುಭವಕ್ಕೆ ಬರುವಂತೆ ಮಾಡಿದ್ದಾರೆ. ಇದನ್ನು ತೈಲ ಕಾಗದದ ಮೇಲೆ ರಚಿಸಿದ್ದಾರೆ. ಅಳತೆ ೧೫" X ೨೨" ಚೆಟ್ಟಿಯವರ ಸಂಗ್ರಹದಿಂದ.

ಚಿತ್ರ ೧೬೨ : ಈ ಚಿತ್ರ ೧೯೭೪ ರಲ್ಲಿ ಚಿತ್ರಿಸಿದ್ದಾರೆ. ಚಿತ್ರದಲ್ಲಿ ಅನೇಕ ಪಿಂಗಾಣಿ ಮಣ್ಣಿನ ವಸ್ತುಗಳಿವೆ. ಜೊತೆಗೆ ಮುಂದೆ ಇರುವ ತಟ್ಟೆಯಲ್ಲಿ ಬ್ರೆಡ್ ಹಾಗೂ ತರಕಾರಿ ಇಟ್ಟಿದ್ದಾರೆ. ಮಧ್ಯದಲ್ಲಿ ಇರುವ ಪಾತ್ರೆಯ ಮೇಲೆ ಹೆಚ್ಚಿದ ಕುಂಬಳಕಾಯಿಯ ಹೋಳು ಇದೆ. ಎಡಪಕ್ಕದಲ್ಲಿ ಒಂದು ಪಕ್ಷಿ. ಹಾಗೂ ಬಾಳೆಹಣ್ಣುಗಳು. ಬಲಪಕ್ಕದಲ್ಲಿ ಹಾಳೆಯ ಸುರುಳಿ ಇದೆ. ಹಿನ್ನೆಲೆಯಲ್ಲಿ ಕಂದು ಹಾಗೂ ಹಳದಿ ಬಣ್ಣದ ಪರದೆಗಳನ್ನು ಇಳಿಬಿಟ್ಟಿರುತ್ತಾರೆ. ಇಲ್ಲಿ ವಸ್ತುಗಳ ಗುಣಧರ್ಮ ಅದರ ನುಣುಪುತನವನ್ನು ವರ್ಣಗಳ ಮೂಲಕ ಬಹಳ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ವಸ್ತುಗಳ ಮೇಲೆ ಹಿಂದೆ ಇಳಿಬಿಟ್ಟ ಬಟ್ಟೆಗಳ ಪ್ರತಿಫಲನದ ಜೊತಗೆ ಅವುಗಳ ನೆರಳಿನ ಬಣ್ಣವನ್ನು ಲೇಪಿಸಿ ಅದಕ್ಕೆ ಘನಾಕೃತಿಯ ಅನುಭವವನ್ನು ನೀಡಿದ್ದಾರೆ. ಚಿತ್ರದ ಅಳತೆ ೩೦" X ೨೨" ಚೆಟ್ಟಿಯವರ ಸಂಗ್ರಹದಿಂದ.

೬) ಪ್ರಾಣಿಯ ಚಿತ್ರ :

ಚೆಟ್ಟಿಯವರು ತೈಲವರ್ಣದಲ್ಲಿ ರಚಿಸಿದ ಒಂದು ನಾಯಿಯ ಚಿತ್ರ ಲಭ್ಯವಿದೆ.

ಚಿತ್ರ ೧೬೩ : ಕುಳಿತ ನಾಯಿಯ ಚಿತ್ರ. ಈ ಚಿತ್ರವನ್ನು ನೇರವಾಗಿ ಪ್ಲಾವುಡ್ ಮೇಲೆ ತೈಲವರ್ಣಗಳಿಂದ ರಚಿಸಿದ್ದಾರೆ. ಅತ್ಯಂತ ಚುರುಕಾದ ನಾಯಿಯಂತೆ ಭಾಸವಾಗುತ್ತದೆ. ನಾಯಿಯ ಅಂಗರಚನೆ ಚೆಟ್ಟಿಯವರ ಆಳವಾದ

---

೧೬೦. ಶ್ರೀ ಜೆ. ಎಚ್. ಕಷಿನ್ನರವರು " Asitkumar Haldar " ಎಂಬ ಗ್ರಂಥದಲ್ಲಿ ಉದ್ಧರಿಸಿದುದು (ಶಿವರಾಮ ಕಾರಂತ : ಭಾರತೀಯ ಚಿತ್ರಕಲೆ ಪುಟ ೩

ಪ್ರಾಣಿಗಳ ಅಂಗರಚನಾ ಶಾಸ್ತ್ರದ ಅಧ್ಯಯನದ ಅರಿವನ್ನು ಮೂಡಿಸುತ್ತದೆ. ಬಿಳಿ ಬಣ್ಣದಿಂದ ಅದಕ್ಕೆ ಪ್ರಮುಖ ಬೆಳಕನ್ನು ನೀಡಿದ್ದಾರೆ. ಹಿನ್ನೆಲೆ ನೀಲಿ ವರ್ಣದ್ದಾಗಿದೆ. ಈ ರೀತಿಯ ನಾಯಿಯ ವಿವಿಧ ಸ್ಕೆಚ್‌ಗಳನ್ನು ಪೆನ್ಸಿಲ್ ಮಾಧ್ಯಮದಲ್ಲಿ ಸಾಕಷ್ಟು ರಚಿಸಿದ್ದಾರೆ. ಬಹುಶಃ ಇದು ಮನೆಯಲ್ಲಿ ಸಾಕಿದ ನಾಯಿ ಇರಬೇಕು. ಅದರ ಪ್ರತಿಯೊಂದು ಚಲನವಲನವನ್ನು ತಮ್ಮ ಚಿತ್ರದಲ್ಲಿ ಸೆರೆ ಹಿಡಿದಿರುವುದನ್ನು ಕಾಣುತ್ತೇವೆ. ಚೆಟ್ಟಿಯವರ ಸಂಗ್ರಹದಿಂದ.

೩) ಪೆಸ್ಟಲ್ ಮಾಧ್ಯಮದ ಚಿತ್ರಗಳು :

ಪೆಸ್ಟಲ್ ಎನ್ನುವ ವರ್ಣಕಡ್ಡಿಯಿಂದ ಈ ಚಿತ್ರಗಳನ್ನು ರಚಿಸುತ್ತಾರೆ. "ಬಣ್ಣದ ಸೀಮೆ ಸುಣ್ಣದ ಹುಡಿಗೆ ಮೇಣ ಮುಂತಾದ ಬಂಧಕ ಬಳಸಿ ಮಾಡಲಾಗುತ್ತದೆ." [೧೬೧] ಈ ಕಡ್ಡಿಗಳು ಎಲ್ಲ ವರ್ಣಛಾಯೆಗಳಲ್ಲಿಯೂ ದೊರೆಯುತ್ತವೆ.

ಚಿತ್ರ ೧೬೪ : ಪೋಸ್ಟರ್ ಕಾಗದದ ಮೇಲೆ ಅದನ್ನೇ ಹಿನ್ನೆಲೆಯಾಗಿ ಬಳಸಿಕೊಂಡು ಅಲ್ಲಲ್ಲಿ ಅದನ್ನು ಹಾಗೆ ಉಳಿಸಿ ಅವಶ್ಯವಿದ್ದಲ್ಲಿ ಪೆಸ್ಟಲ್ ಬಣ್ಣಗಳ ಲೇಪನ ಮಾಡಿದ್ದಾರೆ. ಚಿತ್ರದಲ್ಲಿ ಒಬ್ಬ ಬಾಲಕ ಮಲಗಿದ್ದಾನೆ. ಅತ್ಯಂತ ಸುಖನಿದ್ರೆಯಲ್ಲಿ ಜಗತ್ತಿನ ಯಾವ ಪರಿವೆಯಿಲ್ಲದೆ ನಿಶ್ಚಿಂತನಾಗಿ ಮಲಗಿದಂತಿದೆ. ಹಾಗೆ ಸ್ಥಳದಲ್ಲಿ ಕುಳಿತು ಈ ಚಿತ್ರ ರಚಿಸಿದಂತಿದೆ. ಹಿನ್ನೆಲೆಯಲ್ಲಿ ಮನೆಯ ಭಿತ್ತಿಯನ್ನು ಚಿತ್ರಿಸಿದ್ದಾರೆ. ಅತ್ಯಂತ ಸಹಜ ರೀತಿಯಲ್ಲಿ ಚಿತ್ರಿತವಾಗಿದೆ. ಅಳತೆ ೨' X ೨' ಚೆಟ್ಟಿಯವರ ಸಂಗ್ರಹದಿಂದ.

ಚೆಟ್ಟಿಯವರ ವರ್ಣಚಿತ್ರಗಳಲ್ಲಿ ಕಂಡು ಬರುವ ಅಂಶಗಳು

* ಜಲವರ್ಣ. ತೈಲವರ್ಣ ಹಾಗೂ ಪೇಸ್ಟ್‌ಲ್ ವರ್ಣಗಳಲ್ಲಿ ಚಿತ್ರಗಳನ್ನು ರಚಿಸಿದ್ದಾರೆ.
* ಚೆಟ್ಟಿಯವರು ತಮ್ಮ ಮನಸ್ಸಿನ ಪಕ್ವತೆಯ ಭಾವನೆಗಳಿಗೆ ತಕ್ಕಂತೆ ಬಣ್ಣಗಳನ್ನು ಆಯ್ದುಕೊಂಡಿದ್ದಾರೆ.
* ವರ್ಣಚಿತ್ರಗಳು ಸಹೃದಯನ ಮನಸ್ಸನ್ನು ಸೂರೆಗೊಳ್ಳುವಂತೆ ವರ್ಣಸಂಯೋಜನೆ. ರೇಖೆಗಳ ಲಯಾತ್ಮಕತೆ. ರಂಗುಗಳ ಘನತ್ವ. ಕುಂಚಗಳ ಹರಿದಾಟವಿದೆ. ಹಾಗೂ ಅದ್ಭುತ ಆಳ ಆಕರ್ಷಕತೆ ಮತ್ತು ಅರ್ಥವಂತಿಕೆಯನ್ನು ಹೊಂದಿವೆ.
* ಅಕೆಡಿಮಿಕ್ ಶೈಲಿಯನ್ನು ರೂಢಿಸಿಕೊಂಡ ಚೆಟ್ಟಿಯವರು ಜಲವರ್ಣಗಳನ್ನು ಪ್ರಯೋಗಿಸಿ ಅಭಿವ್ಯಕ್ತಿಸಿದ ಚಿತ್ರಗಳು ಅನೇಕ ಪಾರದರ್ಶಕ ಚಿತ್ರಗಳಲ್ಲಿ ವರ್ಣದ ಬಿಳುಪನ್ನು ಕುಂಚದಿಂದಲೇ ನಿಯಂತ್ರಿಸಿರುವದನ್ನು ಕಾಣುತ್ತೇವೆ. ಇದರಿಂದ ಜಲವರ್ಣಗಳ ಮೇಲಿನ ಅವರ ಹಿಡಿತ ಹಾಗೂ ಪ್ರೌಢಿಮೆಯ ಅರಿವಾಗುತ್ತದೆ.
* ಭಾವಚಿತ್ರಗಳಲ್ಲಿ ಬಳಸಿದ ಜಲವರ್ಣಗಳು ಚರ್ಮದ ನೈಜ ಅನುಭವ ನೀಡುವದರೊಂದಿಗೆ ಮಾಸದಂತೆ ತಾಜಾತನವನ್ನು ಹೊಂದಿವೆ.

---

೧೬೧. ಟಿ. ಆರ್. ತಿಪ್ಪೇಸ್ವಾಮಿ : ಕಲಾಕೋಶ. ಪುಟ ೨೧೫



൧൬൧.



൧൬൨.



൧൬൨.



൧൬൪.

* ಚಿಟ್ಟಿಯವರು ನಿಸರ್ಗ ಚಿತ್ರಗಳನ್ನು ಸ್ವತಂತ್ರವಾಗಿ ರಚಿಸುವುದರ ಜೊತೆಗೆ. ಸಂಯೋಜನಾ ಚಿತ್ರಗಳಲ್ಲಿ ಹಿನ್ನೆಲೆಯಾಗಿ ನಿಸರ್ಗವನ್ನು ಸಾಕಷ್ಟು ದುಡಿಸಿಕೊಂಡಿದ್ದಾರೆ. ನಮ್ಮ ಭಾರತೀಯ ಶೈಲಿಯ ಸೊಗಡು ಅದರಲ್ಲಿದೆ. ಗಿಡ. ಮರ. ಬಳ್ಳಿ. ಪಕ್ಷಿಗಳು ಎಲ್ಲವನ್ನೂ ವಿವರವಾಗಿ ನೈಜ ವರ್ಣಗಳ ಲೇಪನವನ್ನು ಹೊಂದಿ ನಮ್ಮನ್ನು ಭ್ರಮಾಲೋಕಕ್ಕೆ ಕರೆನೊಯ್ಯುತ್ತವೆ.
* ಜಲವರ್ಣದ ನಿಸರ್ಗ ಚಿತ್ರಗಳಲ್ಲಿ ಅನೇಕ ವಸ್ತು ವೈವಿಧ್ಯತೆಯನ್ನು ಕಾಣುತ್ತೇವೆ. ಜೊತೆಗೆ ನೀರು. ಆಕಾಶ. ಪ್ರತಿಬಿಂಬ ಅದರಂತೆ ಬಣ್ಣಗಳ ವೈವಿಧ್ಯತೆಯ ಛಾಯಾ ಮೌಲ್ಯ. ದೃಶ್ಯಾಂತರದ ಅನುಭವ ಸ್ಪಷ್ಟವಾಗಿ ಚಿತ್ರಿತವಾಗಿದೆ. ಬಣ್ಣಗಳ ಪಾರದರ್ಶಿಕೆ ವಸ್ತುಗಳ ಗುಣಧರ್ಮಕ್ಕೆ ಮೆರಗು ತಂದಿವೆ.
* ತಮ್ಮ ವ್ಯಕ್ತಿತ್ವದಂತೆಯೇ ಧಾರ್ಮಿಕ ವಸ್ತು ವಿಷಯಗಳನ್ನು ಆಯ್ಕೆಮಾಡಿಕೊಂಡಿದ್ದಾರೆ. ಉತ್ತಮ ಸಂಪ್ರದಾಯದ ನಡತೆಯಂತೆ ಚಿತ್ರ ವಿಷಯಗಳನ್ನು ಕಂಡುಕೊಂಡಿರುವ ಅದನ್ನು ಆ ದೃಷ್ಟಿಕೋನಕ್ಕೆ ಸರಿಯಾಗಿ ಚಿತ್ರಿಸಿರುವ ರೀತಿಗಳ ನಡುವೆ ಅವಿನಾಭಾವ ಸಂಬಂಧವನ್ನು ಕಾಣುತ್ತೇವೆ.
* ಇವರ ಚಿತ್ರಗಳ ಮುಖಾಂತರ ನಮ್ಮ ಆ ಕಾಲದ ನಾಡಿನ ಸಂಸ್ಕೃತಿ. ಜನಜೀವನದ ಅಂತರಂಗದ ಜೀವಂತ ಚಿತ್ರಣದ ಜೊತೆಗೆ ಆನಂದವನ್ನು ನೀಡುವ ಸನ್ನಿವೇಶಗಳನ್ನು ನಮ್ಮ ಕಣ್ಣಮುಂದೆ ನಿಲ್ಲಿಸುವ ಶಕ್ತಿ ಪಡೆದಿರುವುದನ್ನು ಕಾಣುತ್ತೇವೆ.
* ಭಾರತೀಯ ಸಂವೇದನೆಗಳಿಗೆ ಅನುಗುಣವಾಗಿ. ವೈಯಕ್ತಿಕವಾದ ತಂತ್ರ ಶೈಲಿ ಕಲಾ ನೈಪುಣ್ಯತೆಗಳಿಂದ. ನೈಜ ಕಲೆಯ ಮೂಲಭೂತ ಸತ್ವಗಳನ್ನು ರಕ್ತಗತ ಮಾಡಿಕೊಂಡು. ಭಾರತೀಯ ಕಾವ್ಯ. ನಾಡಿನ ಪುರಾಣ ಇತಿಹಾಸಗಳ ಸತ್ವಭರಿತ ಸನ್ನಿವೇಶಗಳ ಭಾಷಿಕ ರೂಪದಲ್ಲಿನ ಕಥೆಗೆ ಯಥಾವತ್ತಿನ ಚಿತ್ರರೂಪವನ್ನು ಕೊಟ್ಟಿದ್ದಾರೆ.
* ತಮ್ಮದೇ ಆದ ದೇಶೀಯ ಸಂಸ್ಕೃತಿಯ ಆಧ್ಯಾತ್ಮಿಕ ನಿಲುವು. ಭಾವಲಾವಣ್ಯ. ಆಳವಾದ ಅನುಭವ. ವಿವರವಾದ ನಿರೂಪಣೆಯನ್ನು ಹೊಂದಿರುವ ವಿಶಿಷ್ಟ ಕಲಾಕೃತಿಗಳಾಗಿವೆ.
* ಸಂಯೋಜನಾ ಚಿತ್ರಗಳಲ್ಲಿ ಕಾನನದ ರಮ್ಯತೆ. ಸೊಬಗು. ಹಾರಾಡುವ ಪಕ್ಷಿಯಿಂದ ಹಿಡಿದು ನೆಲದ ಮೇಲಿನ ಹುಲ್ಲಿಗೂ ಅಷ್ಟೇ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಲಯ. ಭಾವ ಅವುಗಳ ಸಂಗತಿಯ ಹಿಂದಿರುವ ಸತ್ಯದ ಅರಿವನ್ನು ಕಾಣುತ್ತೇವೆ.
* ಭಕ್ತಿ ಪ್ರಧಾನವಾದ ಚಿತ್ರಗಳೇ ಹೆಚ್ಚಾಗಿರುವುದರಿಂದ ಅಂತಹ ವಾತಾವರಣವನ್ನು ನಿರ್ಮಿಸಲು ನೀಲವರ್ಣವನ್ನು ಬಳಸಿ ಚಿತ್ರದಲ್ಲಿ ಸೌಮ್ಯತೆಯನ್ನು ತರುವುದು ವಿಶೇಷವಾಗಿದೆ.
* ಕೆಲವು ಚಿತ್ರಗಳು ಭಿತ್ತಿಚಿತ್ರಗಳನ್ನು ನೆನಪಿಗೆ ತರುವ ಗುಣಗಳನ್ನು ಹೊಂದಿದ್ದು ಸೌಮ್ಯ ಹಾಗೂ ಪ್ರಖರ ವರ್ಣಗಳ ಹದವರಿತ ಮೇಳವಾಗಿ ಸಂಭ್ರಮ ಹಾಗೂ ವೈಭವಯುತ ಪರಿಣಾಮ ಬೀರಿವೆ.

* ಸಂಯೋಜನೆಯಲ್ಲಿಯ ಆಕೃತಿಗಳ ವಸ್ತ್ರವಿನ್ಯಾಸಗಳಲ್ಲಿ ತೆಳುವಾಗಿ ಕುಂಚ ಪ್ರಯೋಗಿಸಿ ನೀಡುವ ವರ್ಣಲೇಪನ ಕಲಾಕೃತಿಯ ಮೌಲ್ಯವನ್ನು ಹೆಚ್ಚಿಸುತ್ತವೆ.
* ತೈಲವರ್ಣ ಚಿತ್ರಗಳನ್ನು ರಚಿಸುವಲ್ಲಿಯೂ ಅಷ್ಟೇ ಪ್ರಭುತ್ವವನ್ನು ಸಾಧಿಸಿದ್ದಾರೆ. ಭಾವಚಿತ್ರಗಳಲ್ಲಿ ಜೀವಂತಿಕೆಯನ್ನು ಮೂಡಿಸಿದ್ದಾರೆ. ಒಟ್ಟಾರೆ ವ್ಯಕ್ತಿತ್ವದ ಭಾವನೆಗಳು ಮೂಡಿಸುವುದರೊಂದಿಗೆ ತಾದ್ರೂಪ್ಯತೆಯನ್ನು ಹೊಂದಿವೆ.
* ಭಾವಚಿತ್ರಗಳಲ್ಲಿ ಕಣ್ಣಿನಲ್ಲಿ ಜೀವ ಚೈತನ್ಯ ತುಂಬಿದ್ದಾರೆ. ಕೂದಲೆಳೆಗಳನ್ನು ಎಳೆ ಎಳೆಯಾಗಿ ಚಿತ್ರಿಸಿದ್ದಾರಲ್ಲದೆ ಬಟ್ಟೆಗಳ ಮೈವಳಿಕೆಯ ನೈಜತೆಯನ್ನು ಮೆರೆದಿದ್ದಾರೆ. ಅನೇಕ ಚಿತ್ರಗಳಲ್ಲಿ ಕುಂಚದ ನೇರ ಹೊಡೆತಗಳಿಲ್ಲದೇ ಬಣ್ಣಗಳನ್ನು ಬೆರಸಿ ಮೃದುವಾಗಿ ಲೇಪಿಸಿರುವುದನ್ನು ಕಾಣುತ್ತೇವೆ.
* ತೈಲವರ್ಣಗಳ ಸಂಯೋಜನಾ ಚಿತ್ರಗಳ ಪರಿಣಾಮವನ್ನು ಕಾಣುತ್ತೇವೆ.
* ಇವರ ಚಿತ್ರಗಳು ವಿದೇಶಿ ಪದ್ಧತಿಯ ಕಲಾ ಶಿಕ್ಷಣದ ರೀತಿಯನ್ನು ಹೊಂದಿದ್ದರೂ. ಭಾವನೆಗಳು. ಅನುಭವಗಳು ಚೆಟ್ಟಿಯವರವೆ ಆಗಿವೆ.

ಹೀಗೆ ಚೆಟ್ಟಿಯವರು ವೈವಿಧ್ಯಮಯವಾದ ಚಿತ್ರಗಳನ್ನು ಅವರ ವೈಯ್ಯಕ್ತಿಕ ಮನೋಧರ್ಮದ ಮೇಲೆ ಪಾರಂಪರಿಕ ನೈಜ ಕಲಾ ಶೈಲಿಯಲ್ಲಿ ಕಲಾಕೃತಿಗಳ ರಚನೆಯನ್ನು ಮಾಡಿದ್ದಾರೆ. ತಮ್ಮ ಕಣ್ಣಲ್ಲಿ ಮನಸ್ಸಿನ ಭಾವನೆಗಳಲ್ಲಿ ಜೀವನದ ಕಣ ಕಣದಲ್ಲಿ ಆವರಿಸಿಕೊಂಡಿರುವ ಕಲೆಗೆ ತಮ್ಮದೇ ಆದ ವಿಶಿಷ್ಟ ಮೆರಗನ್ನು ಕೊಟ್ಟು ಆಹ್ಲಾದಕರ ರೀತಿಯಲ್ಲಿ ಮನಸ್ಸಿಗೆ ಆನಂದವನ್ನು ನೀಡುವಂಥ ಜನಮನ ಸೊರೆಗೊಳ್ಳುವ ರೀತಿಯಲ್ಲಿ ಚಿತ್ರಿಸಿರುವುದನ್ನು ಅವರ ಈ ಎಲ್ಲ ವರ್ಣ ಚಿತ್ರಗಳ ಅಧ್ಯಯನದಿಂದ ತಿಳಿದು ಬರುತ್ತದೆ.

ಚೆಟ್ಟಿಯವರ ಒಟ್ಟಾರೆ ಕಲಾಕೃತಿಗಳ ಅಧ್ಯಯನದಿಂದ ಕಂಡು ಬರುವ ಪ್ರಮುಖ ಅಂಶಗಳು

ಸಾಂಪ್ರದಾಯಿಕ ಕಲೆ. ಅಮೂರ್ತರೂಪದ ಆಧುನಿಕ ಕಲೆ ಎಂಬ ವರ್ಗೀಕರಣ ಇಂದಿನ ಸಮಕಾಲೀನ ಕಲಾ ಸಂದರ್ಭದಲ್ಲಿ ಕೇಳಿ ಬರುತ್ತಿದೆಯಾದರೂ ಕಲಾವಿದರ ವೈಯಕ್ತಿಕ ಮನೋಧರ್ಮದ ಮೇಲೆ ಅವರವರ ಆಯ್ಕೆಯಾಗುತ್ತದೆ. ಚೆಟ್ಟಿಯವರು ಸಾಂಪ್ರದಾಯಿಕವಾದ ನೈಜ ಕಲೆಯಲ್ಲಿ ವಿಶೇಷವಾಗಿ ತಮ್ಮನ್ನು ತೊಡಗಿಸಿಕೊಂಡು ಕಲಾಕೃತಿ ರಚನೆ ಮಾಡಿದ್ದಾರೆ. ಯಾವುದೇ ಪರಂಪರೆ ಇಲ್ಲದೆ ಯಾವ ಕಲೆಗಳು ಬೆಳೆಯುವುದಿಲ್ಲ. ಪರಂಪರೆ ಎನ್ನುವದನ್ನು ಕಟ್ಟಡಕ್ಕಿರುವ ಭದ್ರ ತಳಹದಿ ಇದ್ದಂತೆ. ಇಂದು ಎನ್ನುವುದು ನಿನ್ನೆಯದರ ಮುಂದುವರಿಕೆ ಎಂಬುದು ಗಮನಾರ್ಹ ಅಂಶವಾಗಿದೆ.

"ಚೆಟ್ಟಿಯವರನ್ನು ಕನ್ನಡ ನಾಡಿನ ರವಿವರ್ಮ" ಎಂದು ಅ.ನ.ಕೃ. ಕರೆದರು. ಅದಕ್ಕೆ ಕಾರಣ ಇವರ ಚಿತ್ರಗಳ ವಸ್ತು-ಶೈಲಿ. ರಾಜ ಮನೆತನದವರಾಗಿದ್ದ ರವಿವರ್ಮರು ದೇವ ದೇವತೆಗಳ ಚಿತ್ರಗಳನ್ನು

ಜನಸಾಮಾನ್ಯರಿಗೆ ಪ್ರಿಯವಾಗುವಂತೆ ರಚಿಸಿ ಪ್ರಸಿದ್ಧರಾದರು.[೧೬೨] ಇಂತಹ ನೈಜ ಕಲೆಯ ಪರಂಪರೆಯಲ್ಲಿ ನಡೆದವರು ಎಸ್. ಎಂ. ಪಂಡಿತ ಜಿ. ಎಸ್. ದಂಡಾವತಿಮಠ. ಕಮಡೊಳ್ಳಿ. ಡಿ. ವ್ಹಿ. ಹಾಲಭಾವಿ. ಡಿ. ಜಿ. ಬಡಿಗೇರ. ಸಿ. ವಿ. ಕಾರಡಗಿ. ಎಂ. ವ್ಹಿ. ಮಿಣಜಗಿ. ಆಲ್ಮೇಲಕರ. ಕೋಸ್ವ್ಯಾಳಕರ. ವೈ. ಸುಬ್ರಹ್ಮಣ್ಯರಾಜು. ಎನ್. ಹನುಮಯ್ಯ. ಎಂ. ಟಿ. ವಿ. ಆಚಾರ್ಯ. ಪಾವಂಜೆ. ನಂಜುಂಡಸ್ವಾಮಿ. ಎಸ್. ಎನ್. ಸ್ವಾಮಿ. ಪಿ. ಆರ್. ತಿಪ್ಪೇಸ್ವಾಮಿ ಇನ್ನೂ ಅನೇಕರು. ಈ ಕಲಾ ಪರಂಪರೆಯ ಕಲಾವಿದರ ಕೊನೆಯ ಕೊಂಡಿಯಾಗಿ ಇಂದು ನಮ್ಮೊಡನಿದ್ದು ಕಲಾಕೃತಿ ರಚಿಸುತ್ತಿರುವವರು ಎಂ. ಎ. ಚೆಟ್ಟಿಯವರು.

ಭಾರತೀಯ ಕಲೆಗೆ ಧರ್ಮವೇ ಸ್ಫೂರ್ತಿಯಾದ್ದರಿಂದ ಭಾರತೀಯರಿಗೆ "ಕಲೆ ಕಲೆಗಾಗಿ ಎಂದರೆ ಅಷ್ಟು ಸಮರ್ಪಕವಲ್ಲ. ಪರಬ್ರಹ್ಮ ತತ್ವವನ್ನು ಸಚ್ಚಿದಾನಂದ ಸ್ವರೂಪವೆಂದೇ ಪರಬ್ರಹ್ಮತತ್ವದಲ್ಲಿ ಸತ್ ಚಿತ್ ಆನಂದ. ತತ್ವಗಳು ಲೀನವಾಗಿರುವುವೆಂದೇ ತಿಳಿದ ಭಾರತೀಯ ತಾತ್ವಿಕರಿಗೆ ಕಲೆ ಅಥವಾ ಸೌಂದರ್ಯಾನುಭವ ಒಂದು ಸಾಧನ ಮಾತ್ರ, ಏಕೈಕ ಧ್ಯೇಯವಲ್ಲ. ಜೀವನದ ಅಂತಿಮ ಧ್ಯೇಯವಾದ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಸೌಂದರ್ಯಾನ್ವೇಷಣೆ ಒಂದು ಸಾಧನೆ: ಸೌಂದರ್ಯಾನುಭವ ನೀಡುವ ಆನಂದ ಬ್ರಹ್ಮಾನಂದದ ಒಂದು ಸ್ವರೂಪ"[೧೬೩] ಆಗಿದೆ. ಇಂತಹ ಬ್ರಹ್ಮಾನಂದವನ್ನು ನೀಡುವ "ಕಲೆ ಆತ್ಮದ ಶ್ರೇಯಸ್ಸನ್ನು ಸಾಧಿಸುವುದು ಕ್ಷಣಕಾಲವಾದರೂ ರಾಜಸಿಕ. ತಾಮಸಿಕ ಆವರಣಗಳನ್ನು ಭಂಗಮಾಡಿ ಒಂದು ವಿಶೇಷವಾದ ಆನಂದಾನುಭವವನ್ನು ಸಹೃದಯನಲ್ಲಿ ಉಂಟು ಮಾಡುವುದರಿಂದ ಕಲೆ ಪ್ರೇಕ್ಷಕನ ಮೇಲೆ ಅಥವಾ ಸಹೃದಯಿಯ ಮೇಲೆ ಮಾಡುವ ಸತ್ಪರಿಣಾಮದ ಫಲವೇ ಕಲೆಯಿಂದೊದಗುವ ಶ್ರೇಯಸ್ಸು"[೧೬೪] ಇಂತಹ ಶ್ರೇಯಸ್ಸನ್ನು ಎಂ. ಎ. ಚೆಟ್ಟಿಯವರ ಕಲಾನಿಷ್ಠೆ ಹಾಗೂ ಪರಿಶ್ರಮಗಳಿಂದ ಕೂಡಿದ ಚಿತ್ರಮಯ ಬದುಕಿನಲ್ಲಿ ಕಾಣುತ್ತೇವೆ.

ಭಾರತೀಯ ಚಿತ್ರ ಕಲೆಯ ಸಂವೇದನೆ ಮೂಲತಃ ರೊಮ್ಯಾಂಟಿಕ್ ಆದದ್ದು ಅಂತೆಯೇ ರವಿವರ್ಮನ ಪ್ರಭಾವ ವಿಸ್ತಾರವಾದದ್ದು. "ಅಂದಿನ ಜನರ ಸ್ವಾತಂತ್ರ್ಯ ಪ್ರೀತಿ ಸ್ವದೇಶಿ ಚಳುವಳಿ. ಬ್ರಿಟೀಷರ ದಬ್ಬಾಳಿಕೆ. ಜನರ ಒಳಗುದಿ ಇತ್ಯಾದಿಗಳು ನಮ್ಮ ಕಲಾವಿದರ ಕೃತಿಗಳಲ್ಲಿ ಕಾಣಿಸಿಕೊಳ್ಳಲಿಲ್ಲ ಎನ್ನುವುದು ಅವರ ಪುರಾಣ ಪ್ರೀಯತೆ. ರವಿವರ್ಮನ ಪ್ರಭಾವ ಇತ್ಯಾದಿಗಳನ್ನು ನೆನಪಿಸುತ್ತವೆ. ರೊಮ್ಯಾಂಟಿಕ್ ದೃಷ್ಟಿಯ ಸೃಷ್ಟಿಗಳು ಅವರವು"[೧೬೫] ಅಂದಿನ ಸಮಾಜದ ನಿರೀಕ್ಷೆಗಳೂ ಕಲೆಯ ಕುರಿತಂತೆ ಅಂಥವೇ ಆಗಿದ್ದವು. ಚೆಟ್ಟಿಯವರ ಸಮಕಾಲೀನ ಕಲಾವಿದರೆಲ್ಲ ರಚಿಸುವಂಥ ಭಾವಚಿತ್ರವಾಗಲಿ. ನಿಸರ್ಗ ಚಿತ್ರಗಳಾಗಲಿ ಧಾರ್ಮಿಕ ಸಂಯೋಜನೆಗಳ ಕೃತಿಗಳನ್ನು ನಿಜವಾದ ಗಂಭೀರ ಕಲೆ ಎಂದೇ ಭಾವಿಸಿದ್ದರು. ಯಾಕೆಂದರೆ "ಆ ಕಾಲದಲ್ಲಿ ಕಲಾವಿದರು ಕಲೆ

---

೧೬೨. ಎಲ್. ಶಿವಲಿಂಗಪ್ಪ : ಲೇ. ಕನ್ನಡ ಪ್ರಭ : ೧೬-೩-೧೯೯೭. ಸಾಪ್ತಾಹಿಕ ಪರಭ ಪುಟ ೧

೧೬೩. ಕೆ. ಬಿ. ರಾಮಕೃಷ್ಣರಾವ್ : ಸೌಂದರ್ಯ ಮತ್ತು ಕಲೆ. ಪುಟ ೫೬-೫೭

೧೬೪. ಜಿ. ಎಸ್. ಶಿವರುದ್ರಪ್ಪ : ಸೌಂದರ್ಯ ಸಮೀಕ್ಷೆ. ಪುಟ ೪೧೩

೧೬೫. ಕೆ. ವಿ. ಸುಬ್ರಹ್ಮಣ್ಯಂ : ಕಲಾ ಸಂವೇದನೆಯ ಒಳನೋಟಗಳು. ಪುಟ ೩೭

ಎಂದರೇನೆಂದು ಬೋಧಿಸುತ್ತಿದ್ದರೋ ಆ ಗುಣಲಕ್ಷಣಗಳಿಗೂ, ಅವರುಗಳು ಸೃಷ್ಟಿಸುತ್ತಿದ್ದ ಕಲೆಗೂ ಒಂದು ಬಗೆಯ ಅವಿನಾಭಾವ ಸಂಬಂಧವಿರುತ್ತಿತ್ತು. ಇಂದು ಅದು ಇಲ್ಲವಾಗಿದೆ. ಕಲೆಯನ್ನು ಕುರಿತಾದ ಒಂದು ತೀವ್ರತರಹದ ಮೌಖಿಕ, ಲಿಖಿತ ಹಾಗೂ ವಾಚ್ಯ ತಾತ್ವಿಕ ಜಿಜ್ಞಾಸೆಯು ಅಂದಿನಿಂದ ಇಂದಿನವರೆಗೂ ನಮ್ಮಲ್ಲಿ ಕಾಣೆಯಾಗಿದೆ".[೧೬೬] ಅಲ್ಲದೆ ಆ ಕಾಲದಲ್ಲಿ ಕಲಾ ಕ್ಷೇತ್ರದಲ್ಲಿ ಬೀಸಿದ ಹೊಸಗಾಳಿಗೆ ಅನೇಕ ಕಲಾವಿದರು ಸ್ಪಂದಿಸದಂಥ ಸಂದಿಗ್ಧ ಸ್ಥಿತಿಯಲ್ಲಿ ಇದ್ದರು. "ತಮಗೆ ಪರಿಣಿತಿ ಇದ್ದ ಹಿಂದಿನದರಲ್ಲಿ ಜೀವನಾಧಾರಕ್ಕೆ ದಾರಿ ಇತ್ತು. ಆದರೆ ತಮ್ಮ ಊಹೆಗೆ ನಿಲುಕದ ಈ ಹೊಸವರಲ್ಲಿ ಅನಿಶ್ಚಯ ಸ್ಥಿತಿ ಕಲೆಯ ಉದ್ದಿಶ್ಯ ಮತ್ತು ಆದರ್ಶಗಳೇನೇ ಇದ್ದರೂ ಕಲೆಗಾಗಿ ಕಲೆ ಎಂಬ ಸತ್ಯ ಅವರಿಗೆ ಹೊಸದು"[೧೬೭] ಹೀಗಾಗಿ ಹೊಸ ಕಲೆಯ ಬಗ್ಗೆ ಅಷ್ಟೊಂದು ಆಸಕ್ತಿಯನ್ನು ಅವರು ಹೊಂದಿರಲಿಲ್ಲ. ಅದು ಕಲಾವಿದನೊಬ್ಬನ ವೈಯಕ್ತಿಕ ಸ್ವಾತಂತ್ರ್ಯದ ವಿಚಾರವೂ ಆಗಿದೆ.

ಚೆಟ್ಟಿಯವರು ಒಬ್ಬ ಕಲಾವಿದರಾಗಿ ತಮ್ಮ ಸಮಕಾಲೀನ ಕಲೆಯನ್ನು ಬದುಕಿಸಿಕೊಂಡು ಮುಂದುವರಿಸಿಕೊಂಡು ಬಂದಂಥವರಲ್ಲಿ ಪ್ರಮುಖರು. ಕಲೆಗಳಲ್ಲಿ ಸಮಕಾಲೀನತೆಯ ಪ್ರಸ್ತುತತೆ ಅಗತ್ಯವಾಗಿ ಇರಲೇಬೇಕಾದಂಥ ಒಂದು ಮೌಲ್ಯ. "ಒಬ್ಬ ಕಲಾವಿದ ತನ್ನ ಕಾಲದ ವಿಶಿಷ್ಟ ಜೀವಧ್ವನಿಗೆ ಸವಾಲುಗಳಿಗೆ ತನ್ನನ್ನು ಸಮ್ಮುಖನಾಗಿಸಿಕೊಂಡು ಅಭಿವ್ಯಕ್ತಿಸುವ ಮೂಲಕ ಆ ಕಾಲ ಕುರಿತ ಅವನ ಧೋರಣೆ ಅಥವಾ ನಿಲವು ದಾಖಲಿಸುವ ಸಾಧ್ಯತೆಗಳಿವೆ. ಇಂಥ ಕೃತಿಯು ಸಮಕಾಲೀನ ದಾಖಲೆಯಾಗಿ ಹೆಚ್ಚು ಮಹತ್ವ ಪಡೆಯುತ್ತದೆ"[೧೬೮] ಚೆಟ್ಟಿಯವರ ಕಲಾ ಕೃತಿ ರಚನೆಯ ಧೋರಣೆ ನೀಲುವುಗಳನ್ನು ಅವರ ಚಿತ್ರಗಳ ಮುಖಾಂತರ ತಿಳಿದುಕೊಳ್ಳಬಹುದು.

ಚೆಟ್ಟಿಯವರಿಗೆ ಪಾರಂಪರಿಕ ಕಲಾವಿದರೆನ್ನುವ ಅಪವಾದವಿದೆ. ಆದರೆ ಪರಂಪರೆ ಇಲ್ಲದೆ ಯಾವುದನ್ನೂ ಅರಿತುಕೊಳ್ಳಲು ಸಾಧ್ಯವಿಲ್ಲ. ವಚನಕಾರರಾದ ಅಲ್ಲಮಪ್ರಭುಗಳು ಹೇಳುವಂತೆ "ಹಿಂದಣ ಹೆಜ್ಜೆಯನರಿತಲ್ಲದೆ ನಿಂದ ಹೆಜ್ಜೆಯನರಿಯಬಾರದು"[೧೬೯] ಅಂದರೆ ವರ್ತಮಾನ ಚೆನ್ನಾಗಿ ಅರಿಯಬೇಕಾದರೆ ಪರಂಪರೆಯನ್ನು ಚೆನ್ನಾಗಿ ಅರಿತಿರಬೇಕಾಗುತ್ತದೆ. ಅನ್ನುವ ಮಾತು ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. ಕಲಾಕ್ಷೇತ್ರದಲ್ಲಿ ಹುಟ್ಟಿದಂತಹ ನವ್ಯತೆಯ ಮೂಲ ನೈಜಪಾರಂಪರಿಕ ಕಲೆಯೆ ಎನ್ನುವುದನ್ನು ಕಡೆಗಣಿಸಬಾರದು. "ಈ ನೈಜ ಕಲಾ ಸ್ವರೂಪಗಳು ಪ್ರಪಂಚದ ಇತಿಹಾಸವನ್ನು ಸಮರ್ಥವಾಗಿ ನಿರೂಪಿಸಿವೆ. ಈ ಕಲಾಭಂಡಾರವಿಲ್ಲದೆ ಅಂದಿಗೂ ನವ್ಯ (ಅಮೂರ್ತ, ವಿರೂಪತೆಯ, ತಿರುಚಿದ ಅನ್ನುವ ಭಾವನೆಯಿಂದ ಕೂಡಿದ್ದು) ಶೈಲಿಯೇ

---

೧೬೬. ಎಚ್. ಎ. ಅನಿಲಕುಮಾರ : ಕರ್ನಾಟಕದ ದೃಷ್ಟಿಕೋನ ಹಿನ್ನೋಟ - ೧ ಪುಟ ೭

೧೬೭. ಬಿ. ವಿ. ಕೆ. ಶಾಸ್ತ್ರಿ : ಸಂ. ದೃಶ್ಯಕಲೆಯ ಆರಾಧಕರು. 'ಸಂಪಾದಕೀಯ'

೧೬೮. ಕೆ. ವಿ. ಸುಬ್ರಹ್ಮಣ್ಯಂ : ಕಲಾ ಸಂವೇದನೆಯ ಒಳನೋಟಗಳು. ಪುಟ ೨೧

೧೬೯. ಬಿ. ವ್ಹಿ. ಮಲ್ಲಾಪುರ (ಸಂ.) : ಅಲ್ಲಮಪ್ರಭುದೇವರ ವಚನ ಸಂಪುಟ (ವ - ೧೬೫). ಪುಟ ೧೩೦

ಇದ್ದಿದ್ದರೆ ನಾವು ಇತಿಹಾಸದ ಸತ್ಯ ಚಿತ್ರವನ್ನು ಹಿಂದಿನ ಸಂಸ್ಕೃತಿಯನ್ನೂ ಗುರುತಿಸಲು ಸಾಧ್ಯವಾಗುತ್ತಿತ್ತೇ "[೧೭೦] ಎನ್ನುವ ಎಂ. ಟಿ. ವಿ. ಆಚಾರ್ಯರ ಮಾತು ಸತ್ಯವಾಗಿದೆ.

ಯಾಕೆಂದರೆ ರಸಿಕ ನೋಡುಗನು ಕಲಾಕೃತಿಯಲ್ಲಿ ತನ್ನ ಅನುಭವಕ್ಕೆ ಬಂದ ವಸ್ತುಗಳ ಸಾದೃಶ್ಯತೆಯನ್ನು ಹುಡುಕುವುದು ಸಹಜ. ಅದಕ್ಕಾಗಿ ಕ್ರಿ.ಶ. ಸುಮಾರು ೭ ನೇ ಶತಮಾನದ ವರೆಗೆ ರೂಪಿಸಲ್ಪಟ್ಟ ಅಜಂತೆಯ ಚಿತ್ರಕಲಾ ವೈಭವವನ್ನು ಕಂಡು ಹೆಚ್. ಕಸಿನ್ಸರು ಈ ಬಗ್ಗೆ ಬರೆಯುತ್ತಾ " ಸಂಸ್ಕೃತಿಯು ಹಲವು ಉನ್ನತ ಮಟ್ಟದವರ ಸ್ವತ್ತಲ್ಲ. ಅದು ಅಪಾರ ಜನತೆಯ ಸ್ವತ್ತಾಗಬೇಕು. ಮಾನವನ ವಿನಾಶಕಾರಕ ದುರ್ಗುಣಗಳನ್ನು ನಿಯಂತ್ರಿಸಿ ಕ್ರಿಯಾತ್ಮಕತೆಯಿಂದ ಮಾನವರನ್ನು ಉನ್ನತಿಗೇರಿಸುವಂತಹ ಚೈತನ್ಯವೇ ಕಲೆ, ಸಂಸ್ಕೃತಿಗಳ ಹಿರಿಮೆ "[೧೭೧] ಎಂದಿರುವುದು ಸರ್ವ ಕಾಲಕ್ಕೂ ಮನನೀಯವಾದುದೆಂದರೆ ತಪ್ಪಲ್ಲ. " ನೋಡುಗ, ರಸಿಕ ಅಥವಾ ಸಹೃದಯ ಯಾರೇ ಆಗಿರಲಿ ಕಲಾಕೃತಿಯ ವಸ್ತುವಿನಲ್ಲಿ ಮೂಲ ಅಥವಾ ಸಮಾನವಾದ ಸಾದೃಶ್ಯವನ್ನು ಕಂಡಾಗ ಆತನಲ್ಲಿ ರಸಾನುಭೂತಿಯಾಗುತ್ತದೆ. ಆನಂದ ಉಂಟಾಗುತ್ತದೆ. ಹಾಗೆ ಕಲಾವಿದನನ್ನು ತಲುಪಲಾರದವರಿಗೆ ನಿರಾಶೆಯಾಗುತ್ತದೆ. ಈ ಮಾತು ಸಂಪ್ರದಾಯ ಹಾಗೂ ನವ್ಯ ಎರಡಕ್ಕೂ ಅನ್ವಯಿಸುತ್ತದೆ. ಸಂಪ್ರಾದಾಯದಲ್ಲಿ ಸಾದೃಶ್ಯದ ಅಂಶ ಹೆಚ್ಚಿರಬಹುದು "[೧೭೨] ಹೀಗಿರುವುದರಿಂದಲೇ ಈ ಕಲೆಯು ಜನರ ರಸಾನಂದಕ್ಕೆ ಹತ್ತಿರವಾಗುತ್ತದೆ. ಅಂತೆಯೇ ಚೆಟ್ಟಿಯವರು ನೈಜ ಕಲಾ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದರು. " ತಾನು ಬೆಳೆದ-ನಡೆದ, ಚಿಂತಿಸಿದ, ನೋವು ನಲಿವುಗಳನ್ನು ಅನುಭವಿಸಿದ ಕಲಾವಿದ ತನ್ನ ಕೈಯಲ್ಲಿ ಆ ಕಾಲದ ಸಂದರ್ಭಗಳು ಯಾವ ಸೃಷ್ಟಿಮಾಧ್ಯಮಗಳನ್ನು ಕೊಟ್ಟವೋ ಅವುಗಳನ್ನು ದುಡಿಸಿಕೊಂಡು, ಕಾಲ ಕಾಲಕ್ಕೆ ಹಲವು ಉದ್ದೇಶಗಳಿಗಾಗಿ ತನ್ನ ಅಭಿವ್ಯಕ್ತಿಯ ತೀವ್ರತೆಯನ್ನು ಬಳಸಿಕೊಂಡ "[೧೭೩] ಎನ್ನುವಂತೆ ಚೆಟ್ಟಿಯವರು ತಮ್ಮ ಕಾಲದಲ್ಲಿಯ ಸೃಷ್ಟಿ ಮಾಧ್ಯಮಗಳನ್ನೇ ದುಡಿಸಿಕೊಂಡು ಮುಂದೆ ಬಂದವರು. ಆರ್. ಎಮ್. ಹಡಪದ ಅವರು ಹೇಳುವಂತೆ " ಸಮಾಜದಲ್ಲಿ ಕಲೆ ಬೇಕು. ಕಲೆ ಒಂದು ಕಾಲದ, ಒಂದು ವ್ಯಕ್ತಿತ್ವದ ವಿಚಾರದ ಪ್ರವಾಹ ಅನ್ನುವಂಥ ತಿಳಿವಳಿಕೆಯನ್ನು ಪ್ರಮುಖವಾಗಿ ಉಳಿಸಿಕೊಟ್ಟವರು ಎಂ. ವಿ. ಚೆಟ್ಟಿಯವರು "[೧೭೪] ಎಂದು ಹೇಳುವಲ್ಲಿ ಸತ್ಯವಿದೆ.

" ಕಲಾಕೃತಿಯು ಕಲಾವಿದನ ಸಮಗ್ರ ಜೀವನದ ಪ್ರತಿಬಿಂಬ. ಒಂದು ಚಿತ್ರವೆಂದರೆ ಆತನ ಆತ್ಮ ದೃಷ್ಟಿಗೆ ಬೋಧೆಯಾದ ಒಂದು ದೃಶ್ಯ. ಹೇಗೆ ಕಲಾಕೃತಿಯು ಕಲಾವಿದನ ಸಮಗ್ರ ಜೀವನದ ಪ್ರತಿಬಿಂಬವೋ ಹಾಗೆಯೇ ಕಲಾವಿದನು ಸಮಗ್ರ ಜನಾಂಗದ ಪ್ರತಿಬಿಂಬ ಸಮಾಜದ ಅಂತಃಚಕ್ಷುವೇ ಕಲಾವಿದನೆಂದರೆ ತಪ್ಪಲ್ಲ "[೧೭೫]

---

೧೭೦. ಎಂ. ಟಿ. ವಿ. ಆಚಾರ್ಯ : ಕಲೆ ಮತ್ತು ನಾನು. ಪುಟ ೧೧೩

೧೭೧. ಎಂ. ಟಿ. ವಿ. ಆಚಾರ್ಯ : ಕಲೆ ಮತ್ತು ನಾನು. ಪುಟ ೮೮

೧೭೨. ಆ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ. ಪುಟ ೩೬

೧೭೩. ಕೆ. ವಿ. ಸುಬ್ರಹ್ಮಣ್ಯಂ : ಕಲಾ ಸಂವೇದನೆಯ ಒಳನೋಟಗಳು. ಪುಟ ೨೮

೧೭೪. ಕಲಾವಿದರಾದ ಆರ್. ಎಮ್. ಹಡಪದರ ಸಂದರ್ಶನ. ದಿನಾಂಕ ೧೪-೪-೨೦೦೦. ಬೆಂಗಳೂರು

೧೭೫. ಕೆ. ಬಿ. ರಾಮಕೃಷ್ಣರಾವ್ : ಸೌಂದರ್ಯ ಮತ್ತು ಕಲೆ. ಪುಟ ೧೧೬

ಆದ್ದರಿಂದ ಆಗಿನ ಸಮಾಜ ಯಾವುದನ್ನು ಒಪ್ಪಿಕೊಳ್ಳುತ್ತೋ ಅದನ್ನು ಕಲಾವಿದರು ಚಿತ್ರಿಸಿದರು. ಮತ್ತು ಆದರ ಬಗ್ಗೆ ಅವರಿಗೆ ಸಮಾಧಾನ, ತೃಪ್ತಿಯು ಇತ್ತು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

"ಸಂವೇದನೆ ಕಲಾವಿದನೊಬ್ಬನ ಯಾವುದೇ ಅನುಭವಕ್ಕೆ ಅವನದೇ ಆದ ಭಾವನಾತ್ಮಕ ಪ್ರತಿಕ್ರಿಯೆ. ಅಂತರಂಗದ ಸಾಮರ್ಥ್ಯ ಭಾವನಾತ್ಮಕ ಪ್ರಜ್ಞೆ ಹಾಗೆಯೇ ವೈಯಕ್ತಿಕ ಅಭಿರುಚಿಯ ಅಡಿಪಾಯದ ಮೇಲೆ ನಿಂತಿರುವಂಥದ್ದು"[೧೭೬] ಅಂತೆಯೇ ಚಿಟ್ಟಿಯವರು ತಮ್ಮ ಕಲಾಕೃತಿಗಳ ವಸ್ತುವಿಷಯಗಳಿಗೆ ಅನುಗುಣವಾಗಿ ನೈಜ ಶೈಲಿಯನ್ನು ಅಳವಡಿಸಿಕೊಂಡು ತಮ್ಮ ಸ್ವಂತಿಕೆಯ ಭಾವನಾ ವಿಶೇಷಗಳನ್ನು ನಿರೂಪಿಸಿದವರು. ಬಸವಣ್ಣನವರು ಹೇಳುವಂತೆ "ಆನು ಒಲಿದಂತೆ ಹಾಡುವೆ"[೧೭೭] ಎನ್ನುವಂತೆ ಚಿಟ್ಟಿಯವರು ತಮ್ಮದೇ ಆದ ಮಾರ್ಗವನ್ನು ಸೃಷ್ಟಿಸಿ ಚಿತ್ರ ಕಲಾ ಪ್ರಪಂಚದಲ್ಲಿ ನಡೆದುಬಂದವರು.

ನೈಜ ಶೈಲಿಯ ಬಗ್ಗೆ ಎಂ. ಟಿ. ವಿ. ಆಚಾರ್ಯ ಅವರು ಹೇಳುವಂತೆ "ನಮ್ಮಲ್ಲಿ ನೈಜ ಶೈಲಿಯ ಕಲೆಯು ಹಿಂದೆಯೂ ಇತ್ತು ಇಂದಿಗೂ ಮುಂದೆಯೂ ಇರುವ ಹಕ್ಕು ಅದಕ್ಕಿದೆ. ಇಂದು ಕೆಲವರ ಕಾರಸ್ಥಾನದಿಂದ ಜನಮನದಿಂದ ಅದನ್ನು ಎಂದೆಂದಿಗೂ ಅಳಿಸಲು ಯಾರಿಗೂ ಸಾಧ್ಯವಿಲ್ಲ. ಯಾವುದೇ ಕಾಲದಲ್ಲಿ. ಯಾವುದೇ ದೇಶದಲ್ಲಿ ಯಾವುದೇ ಶೈಲಿ ಪ್ರಭಾವಗಳನ್ನು ಅನುಸರಿಸಿ ಕಲಾವಿದನ ಸ್ವಂತಿಕೆ ಭಾವನಾ ವಿಶೇಷಗಳನ್ನು ನಿರೂಪಿಸಿದ ಕಲಾರೂಪ ಶೈಲಿಗಳೆಲ್ಲವೂ ಎಂದೆಂದಿಗೂ ಕಲೆಯಾಗಿಯೇ ಉಳಿದು ವಿಶ್ವದ ಸರ್ವಕಾಲಿಕ ಸಾಂಸ್ಕೃತಿಕ ನಿಧಿಯಾಗುತ್ತವೆ. ಎಂಬುದು ಸತ್ಯ"[೧೭೮] ಎನ್ನುತ್ತಾರೆ. ಇಂದಿಗೂ ಪಾಶ್ಚಾತ್ಯ ಕಲಾ ಸಂಗ್ರಹಾಲಯಗಳು ರೆಂಬ್ರಾಂಟ್. ಟಿಟನ್. ಮೈಕೆಲೆಂಜೆಲೋ ಮುಂತಾದವರ ಕಲಾಕೃತಿಗಳನ್ನು ಅಪೂರ್ವ ನಿಧಿಯಂತೆ ರಕ್ಷಿಸಿ ಅಸಂಖ್ಯಾತ ಜನಸಾಗರಕ್ಕೆ ಪ್ರದರ್ಶಿಸಿ ಮನತಣಿಯುವಂತೆ ಮಾಡಿದ್ದಾರೆ. ನಮ್ಮಲ್ಲಿಯೂ ಇಂತಹ ಸಂಪ್ರದಾಯ ಬೆಳೆದುಕೊಂಡು ಬಂದಿರುವುದನ್ನು ಕಾಣುತ್ತೇವೆ.

ಪ್ರಪಂಚದ ಅತ್ಯುನ್ನತ ಕಲಾವಿದರಲ್ಲೊಬ್ಬನಾದ ಪಿಕಾಸೋ ಸಹ ಇದನ್ನೇ ಹೇಳುತ್ತಾನೆ. 'ಲಂಡನ್ನಿನ ದಿ ಲಿವ್ವಿಂಗ್ ಮ್ಯೂಜಿಯಂ' ಎಂಬ ಮಾಸಿಕದಲ್ಲಿ ಪ್ರಕಟವಾದ ಅವನ ಬಿಚ್ಚುನುಡಿಗಳಿವು. "ಜನರು ದುಃಖ ಪರಿಹಾರವನ್ನಾಗಲೀ. ಚೈತನ್ಯವನ್ನಾಗಲೀ ಈಚಿನ ಕಲೆಯಿಂದ ಹೊಂದಲಾರರು. ಆದರೆ ಇಂದಿನ ಸುಸಂಸ್ಕೃತ ಶ್ರೀಮಂತ ಹಾಗೂ ಸೋಮಾರಿ ಜನ ಅಸಾಧಾರಣವೂ ಸ್ವಯಂ ಕಲ್ಪಿತವೂ ಮಿತಿಮೀರಿದ ಅಭ್ಯಾಸದ ಹೊಸದಾದ ಕಲೆಯನ್ನು ಬಯಸುವವರು. ಲೀಲಾಜಾಲವಾಗಿ ಎಳೆದ ಆಕಾರದ ರೇಖೆಗಳು ಅರ್ಥವಿಲ್ಲದ ಸಮಸ್ಯಾತ್ಮಕ ಕಲಾಕೃತಿಗಳು ನನ್ನನ್ನು ನಾನೇ ವಿನೋದಗೊಳಿಸಲಿಕ್ಕೆ ಹೂಡಿದ ಆಟಗಳು. ಅದರಿಂದಾಗಿ ನಾನು ಶೀಘ್ರವಾಗಿ ಪ್ರಸಿದ್ಧನಾದೆ. ಲಾಭ. ಹಣ ಅದೃಷ್ಟ ಎಲ್ಲವೂ ಕೂಡಿಕೊಂಡು ಕಲಾಜಗತ್ತಿನಲ್ಲಿ ಉನ್ನತ

---

೧೭೬. ಕೆ. ವಿ. ಸುಬ್ರಹ್ಮಣ್ಯಂ : ಕಲಾ ಸಂವೇದನೆಯ ಒಳನೋಟಗಳು. ಪುಟ ೩೬

೧೭೭. ಆರ್. ಸಿ. ಹಿರೇಮಠ (ಸಂ.) : ಬಸವಣ್ಣನವರ ವಚನಗಳು (ವಚನ - ೯೯೩). ಪುಟ ೯೪

೧೭೮. ಎಂ. ಟಿ. ವಿ. ಆಚಾರ್ಯ : ಕಲೆ ಮತ್ತು ನಾನು. ಪುಟ ೧೧೭

ಸ್ಥಾನಗಳಿಸಿದೆ "[೧೭೯] ಎಂದು ಹೇಳುತ್ತ ಆದರೆ ನಾನು ಏಕಾಂತದಲ್ಲಿದ್ದಾಗ ಮಾತ್ರ ಹಿಂದಿನ ಶ್ರೇಷ್ಠ ಕಲಾವಿದರಾದ ಗಿಯೇಟೋ, ಟಿಟಾನ್, ರೆಂಬ್ರಾಂಟ್ ಮುಂತಾದವರ ಸಾಧನೆ ನೆನಸಿದಲ್ಲಿ ಮತ್ತು ಅವರೊಡನೆ ಹೋಲಿಕೆಯ ದೃಷ್ಟಿಯಿಂದ ನಾನು ಕಲಾವಿದನೆಂದು ಭಾವಿಸಿಕೊಳ್ಳಲು ಧೈರ್ಯ ಮಾಡಲಾರೆ. ನಾನೊಬ್ಬ ಕೇವಲ ನನ್ನ ಕಾಲವರಿತು ನಡೆದು ರಂಜಿಸಿದ ವ್ಯಕ್ತಿ ಮಾತ್ರ"[೧೮೦] ಎಂದು ಹೇಳಿ ನೈಜ ಕಲೆಯ ಸತ್ವವನ್ನು ವಿಶ್ಲೇಷಿಸಿದ್ದಾನೆ.

"ಕಲಾ ಇತಿಹಾಸದ ಉದ್ದಕ್ಕೂ ಸೃಷ್ಟಿಯಾದ ಹಲವಾರು ಕಲಾಕೃತಿಗಳು ಮುಖ್ಯವಾಗಿ ತಮ್ಮ ಸಮಕಾಲೀನತೆಯ ದಟ್ಟ ಹೊಳಪನ್ನು ಹೊದ್ದ ಕಾರಣದಿಂದಲೇ ಇಂದಿಗೂ ನಮ್ಮನ್ನು ಗಾಢವಾಗಿ ಸ್ಪಂದಿಸುವ ಸಾಮರ್ಥ್ಯವನ್ನು ಹೊಂದಿವೆ "[೧೮೧] ಆಯಾ ಕಾಲದ ವಿವಿಧ ವಸ್ತು, ಆಶಯ ನಿರ್ವಹಣೆಗಳನ್ನು ಸಾಮಾಜಿಕ ಸ್ಥಿತಿಗತಿಗಳನ್ನು ನಿರ್ಧರಿಸುತ್ತವೆ. ಅಂಥ ಹೊಳಪನ್ನು ಚೆಟ್ಟಿಯವರ ಚಿತ್ರಗಳಲ್ಲಿ ಕಾಣುತ್ತೇವೆ. ಇದಕ್ಕೆ ಮೂಲ ಪ್ರೇರಣೆ ಚೆಟ್ಟಿಯವರ ಕಲಾಚೇತನಕ್ಕೆ ತಕ್ಕ ನೆಲ, ತಕ್ಕ ಪರಿಸರ, ಮತ್ತು ವಾತಾವರಣ, ಉತ್ತಮ ಪರಂಪರೆಯ ಸಂಸ್ಕಾರ, ಕಲಾಗುರುಗಳ ಜ್ಞಾನದ ಬೆಳಕು, ಇವುಗಳೆಲ್ಲ ದೊರಕಿದ್ದಕ್ಕೆ ಅವರ ಕಲಾ ಪ್ರತಿಭೆ ಫಲವತ್ತಾಗಿ ಬೆಳೆಯಲು ಕಾರಣವಾಯಿತು ".[೧೮೨]

ಕಲಾವಿದನಾದವನು ಯಾವ ರೀತಿ ಇರಬೇಕು ಎಂಬ ಭಾವನೆ ನಮ್ಮ ಪ್ರಾಚೀನ ಪರಂಪರೆಯಲ್ಲಿ ಹೇಗೆ ಇತ್ತೋ ಅಂತಹ ಗುಣಗಳನ್ನು ನಾವು ಚೆಟ್ಟಿಯವರಲ್ಲಿ ಕಾಣುತ್ತೇವೆ ಉದಾಹರಣೆಗೆ "ಚಿತ್ರಕಲಾವಿದ ಒಳ್ಳೆಯ ಮನುಷ್ಯನಾಗಿರಬೇಕು. ಸೋಮಾರಿಯಾಗಿರಬಾರದು ಕೋಪಗೊಳ್ಳಬಾರದು, ಶುದ್ಧಜೀವನ ನಡೆಸುವ, ಅಧ್ಯಯನಶೀಲನಾದ ಆತ್ಮಸಂಯಮದ, ಭಕ್ತ ಮನೋಭಾವದ, ಉದಾರ ಹೃದಯದ, ದ್ವೇಷಾಸೂಯೆರಹಿತವಾದ ವ್ಯಕ್ತಿಯಾಗಿರಬೇಕು ಎಂದು ಶ್ರೀ ಮಹಾ ವಜ್ರಭೈರವ ತಂತ್ರಕೃತಿ ಹೇಳುತ್ತದೆ ".[೧೮೩] ಈ ಎಲ್ಲ ಗುಣಗಳನ್ನು ಚೆಟ್ಟಿಯವರಲ್ಲಿ ನಾವು ಸಹಜವಾಗಿ ಗುರುತಿಸಬಹುದಾಗಿದೆ. ತಮ್ಮನ್ನು ಚಿತ್ರಕಲೆಗೇ ಅರ್ಪಿಸಿಕೊಂಡ ವ್ಯಕ್ತಿ ಚೆಟ್ಟಿಯವರು. ಚಿತ್ರಕಲೆಯೇ ಆತ್ಮವಾಗಿರುವ ಚೆಟ್ಟಿಯವರು ಅತ್ಯಂತ ಸಾತ್ವಿಕರು ಸರಳ ಸಜ್ಜನಿಕೆ ನಿರಾಡಂಬರಗಳ ಸಜೀವ ಮೂರ್ತಿ. ಪರಂಪರೆಯ ಮೌಲ್ಯವನ್ನು ಬದುಕಿಸಿ ಉಳಿಸಿಕೊಂಡು ಬಂದು ನಮ್ಮ ಚಿತ್ರಕಲಾ ಜಗತ್ತಿಗೆ ಹೊಂದಿಕೊಂಡು ಇರುವುದು ಅವರ ಜೀವನದ ವೈಶಿಷ್ಟ್ಯವಾಗಿದೆ. ತಪಸ್ಸಿನೋಪಾದಿಯಲ್ಲಿ ಬೆಳೆದು ಬಂದ ಅವರ ಕಲಾ ಜೀವನ ತರುಣ ಕಲಾವಿದರಿಗೆ ಮಾರ್ಗದರ್ಶಿ ಮತ್ತು ಸ್ಫೂರ್ತಿದಾಯಕವಾಗಿದೆ.

---

೧೭೯. ಪಿ. ಆರ್. ತಿಪ್ಪೆಸ್ವಾಮಿ : ಕಲಾವಿದನ ನೆನಪುಗಳು. ಪುಟ ೨೦

೧೮೦. ಎಂ. ಟಿ. ವಿ. ಆಚಾರ್ಯ : ಕಲೆ ಮತ್ತು ನಾನು. ಪುಟ ೧೧೮

೧೮೧. ಕೆ. ವಿ. ಸುಬ್ರಹ್ಮಣ್ಯಂ : ಕಲಾ ಸಂವೇದನೆಯ ಒಳನೋಟಗಳು. ಪುಟ ೨೬

೧೮೨. ಅನ್ನದಾನಿ ಹಿರೇಮಠ : ಎಂ. ಎ. ಚೆಟ್ಟಿ. ಪುಟ ೧೯

೧೮೩. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿ ಚಿತ್ರ ಪರಂಪರೆ. ಪುಟ ೧೬೧

ಕಲೆಯಲ್ಲಿ ಪ್ರಾಚೀನ ಪದ್ಧತಿ ಇಲ್ಲವೇ ಅರ್ವಾಚೀನ ಪದ್ಧತಿ ಎಂಬುದಕ್ಕೆ ಅವುಗಳಷ್ಟಕ್ಕೆ ವಿಶೇಷ ಅರ್ಥ ಇಲ್ಲ. ಹೂವಿಗೆ ಸುವಾಸನೆ ಇರಬೇಕಾದಂತೆ ಕಣ್ಣಿಗೆ ಹಬ್ಬವನ್ನುಂಟು ಮಾಡುವ ಆಹ್ಲಾದಕತೆ ಕಲೆಯಲ್ಲಿ ಇರಬೇಕು. ಮನಸ್ಸಿಗೆ ಮುದವನ್ನುಂಟುಮಾಡುವ ಕಲೆಯು ಎಂದಿಗೂ ಹಳೆಯದೆನಿಸುವುದಿಲ್ಲ ಯಾವಾಗಲೂ ನವನವೋನ್ಮೇಷಶಾಲಿನಿಯಾಗಿರುತ್ತದೆ. ಉದ್ದೀಪನಕಾರಿಯಾದ ಕಲೆಗೆ ವೃದ್ಧಾಪ್ಯ ಇಲ್ಲ"[೧೮೪] ಎಂದು ಹೇಳುವ ಪಾಟೀಲ ಪುಟ್ಟಪ್ಪನವರ ಮಾತಿನಲ್ಲಿ ಸತ್ಯವಿದೆ. ಅಂತಹ ಆಹ್ಲಾದಕತೆ, ಆನಂದವನ್ನುಂಟು ಮಾಡುವ ಕಲೆ ಚಿಟ್ಟಿಯವರದಾಗಿದೆ.

ಚಿಟ್ಟಿಯವರ ಕಲಾಕೃತಿಗಳಲ್ಲಿ ಎಂದೆಂದಿಗೂ ಸಂಸ್ಕೃತಿ ವಿರೋಧಿ ಮತ್ತು ಬಂಡಾಯದ ಅಂಶ ಕಾಣುವುದಿಲ್ಲ. ಧರ್ಮದ ಬಗ್ಗೆ ನಂಬಿಕೆ ಇಟ್ಟುಕೊಂಡ ಮನೋಧರ್ಮದವರಾಗಿದ್ದರು. ಅಂತೆಯೇ ತಾವು ಕಲಿತಿದ್ದುದರ ಮೇಲೆಯೆ ಹೆಚ್ಚಿನ ವಿಶ್ವಾಸ ಅವರಿಗೆ. ಹೀಗಾಗಿ ಬೇರೆ ಪ್ರಕಾರಗಳ ಕಡೆಗೆ ಅವರು ಮನಸ್ಸು ಮಾಡಲಿಲ್ಲ."[೧೮೫] ಅದು ಕಲಾವಿದನೊಬ್ಬನ ವೈಯಕ್ತಿಕ ವಿಚಾರವೆಂದೇ ಹೇಳಬೇಕು. ಚಿಟ್ಟಿಯವರು ತಾವು ಚಿತ್ರಿಸಿದ ಚಿತ್ರದಲ್ಲೇ ದೇವರನ್ನು ಕಾಣುವ ಭಾವನೆ ಹೊಂದಿದವರು. ಇದಕ್ಕೊಂದು ನಿದರ್ಶನ ಇಲ್ಲಿದೆ. "೧೯೬೪ ರಲ್ಲಿ ಚಿಟ್ಟಿಯವರ ಮನೆಗೆ ಹೋದಾಗ ಚಿಟ್ಟಿಯವರು ೪' x ೬' ಸೈಜಿನ ಚಿತ್ರವನ್ನು ತಮ್ಮ ಮನೆಯ ಅಟ್ಟದ ಮೇಲೆ ಮಾಡ್ತಾಇದ್ರು ಅದು ಅಥಣಿ ಶ್ರೀ ಶಿವಯೋಗಿಗಳ ಪೂರ್ಣ ಜೀವಚಿತ್ರ (Life). ಅಂದು ಅಡುಗೆ ಮನೆಯಲ್ಲಿ ಹೋಳಿಗೆ ಮಾಡಿಸಿ ಆ ಚಿತ್ರಮುಗಿದ ನಂತರ ಅದಕ್ಕೆ ಪೂಜೆ ನೈವೇದ್ಯಮಾಡಿದರು. ಅಷ್ಟರಲ್ಲಿ ನಾವು ಅಲ್ಲಿಗೆ ಹೋಗಲು ಅವರು 'ಬಂದ್ರ್ಯಾ ಬಾಳ ಚಲೋ ಆತು' ಅಂತ ಹೇಳಿ ಆ ಭಾವಚಿತ್ರಕ್ಕೆ ಹೋಳಿಗಿ ನೈವೇದ್ಯ ಮಾಡಿ. ನಮಗೂ ಪ್ರಸಾದ ಸ್ವೀಕರಿಸಲು ಹೇಳಿದರು. ಏನ್ರಿ ಸರ್ ಇವತ್ತು ಯಾವ ಹಬ್ಬಾನು ಇಲ್ಲ ! ಅಂದಾಗ. ಏನ್ರಿ ಮುಂಗರವಾಡಿ ಅವ್ರ. ಇವತ್ತ ನಮ್ಮ ಮನೆಯೊಳಗ ಅಥಣಿ ಶಿವಯೋಗಿ ಪ್ರತ್ಯಕ್ಷ ಆಗ್ಯಾರ. ಅದಕ್ಕಿಂತ ಸಂತೋಷ ಏನ ಬೇಕು ? ಅಂತ ಹೇಳಿ ತಾವು ರಚಿಸಿದ ಅಥಣಿ ಶಿವಯೋಗಿಯವರ ಚಿತ್ರವನ್ನು ತೋರಿಸಿದರು. ಚಿಟ್ಟಿಯವರು ಆ ಚಿತ್ರವನ್ನು ಚಿತ್ರವನ್ನಾಗಿ ನೋಡದೇ ಅಲ್ಲಿ ಭಾವುಕರಾಗಿ ದೇವರನ್ನು ಕಾಣುವ ಕಲಾವಿದರಾಗಿದ್ದರು"[೧೮೬] ಎಂದು ಅವರನ್ನು ತುಂಬ ಹತ್ತಿರದಿಂದ ಕಂಡ ಮುಂಗರವಾಡಿಯವರು ಹೇಳಿದ ವಿವರಣೆ ಇದು. ಇಂತಹ ಹಲವಾರು ನಿದರ್ಶನಗಳು ಇನ್ನೂ ನಮಗೆ ಸಿಗುತ್ತವೆ.

ಶ್ರೀ ಅರವಿಂದ ಅವರು ಕಲೆಯಬಗ್ಗೆ ಹೇಳುವ ಅಂಶಗಳನ್ನು ನಾವು ಚಿಟ್ಟಿಯವರ ಚಿತ್ರಗಳಲ್ಲಿ ಕಾಣುತ್ತೇವೆ. " Art is discovery and revelation of beauty, the aim of art is to embody beauty and give

---

೧೮೪. ಮಹಾಲಿಂಗ ಯಾಳಗಿ (ಸಂ.): ಕಲಾತಪಸ್ವಿ ಎಂ. ವಿ. ಚಿಟ್ಟಿಯವರ ಅಭಿನಂದನ ಗ್ರಂಥ. ಪುಟ ೧೬

೧೮೫. ಆರ್. ಎಮ್. ಹಡಪದ : ಸಂದರ್ಶನ ದಿನಾಂಕ ೧೪-೪-೨೦೦೦ ಬೆಂಗಳೂರು

೧೮೬. ಎಸ್. ಜಿ. ಮುಂಗರವಾಡಿ. ಸಂದರ್ಶನ : ದಿನಾಂಕ ೨೨-೧೦-೨೦೦೦ ಗೋಕಾಕ

delight.... Art is the rhythmic voice of life but a voice of inner Life " ೧೮೭ ಎನ್ನುವಂತೆ ಚೆಟ್ಟಿಯವರ ಚಿತ್ರಗಳು ಅವರ ಅಂತರಂಗದ ಭಾವನೆಗಳೇ ಆಗಿವೆ.

"ಭಾರತೀಯ ಕಲಾವಿದ ಮೊದಲಿನಿಂದಲೂ ತನ್ನ ಆಶಯಕ್ಕೆ ಮಹತ್ವ ಕೊಡುತ್ತ ಬಂದಿದ್ದು ಗಮನಾರ್ಹವಾದಂತಹ ವಿಷಯ ತನ್ನ ಆಶಯವನ್ನು ರೂಪಾಕೃತಿಯಲ್ಲಿ ಬಂಧಿಸುವ ಕಲಾವಿದ, ಅನೇಕ ಸಲ ರೂಪಾಕೃತಿಯ ಹೊರಮೈಯಲ್ಲಿರುವ ಚೆಲುವಿನೊಂದಿಗೇ, ವಸ್ತುವಿನ ಆಂತರಿಕ ಚೆಲುವನ್ನು ಅಂದರೆ ಆಧ್ಯಾತ್ಮಿಕ ಮತ್ತು ಆದಿ ಭೌತಿಕ ಸೌಂದರ್ಯವನ್ನು ಅಭಿವ್ಯಕ್ತಿಗೊಳಿಸುತ್ತಾ ಬಂದಿದ್ದು ತುಂಬಾ ಮಹತ್ವದ ಅಂಶ" ೧೮೮ ಅದಕ್ಕೆ ನಿದರ್ಶನವಾಗಿ ಚೆಟ್ಟಿಯವರ ಕಲಾಕೃತಿಗಳು ರಚನೆಯಾಗಿವೆ. ವಿದೇಶಿ ಪದ್ಧತಿಯಲ್ಲಿ ಕಲಾ ಶಿಕ್ಷಣವನ್ನು ಪಡೆದರೂ ದೇಶಿಯತೆಯನ್ನು ತಮ್ಮ ಚಿತ್ರಗಳಲ್ಲಿ ಉಳಿಸಿಕೊಂಡು ಬಂದಿದ್ದಾರೆ. ನಾಡಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಜೀವಂತವಾಗಿ ಬದುಕಿಸಿಕೊಂಡು ಬಂದ ಹಿರಿಮೆ ಇವುಗಳಿಗೆ ಇದೆ. ಯಾಕೆಂದರೆ ವಿದೇಶಿ ಪದ್ಧತಿ ಪ್ರಭಾವ ಹೆಚ್ಚಾಗಿ ಆಗಿರುವುದು ರೂಪ ಮತ್ತು ತಂತ್ರಗಳಲ್ಲಿ. ಹೊರತು ವಸ್ತು ಹಾಗೂ ಅನುಭವಗಳಲ್ಲಿ ಅಲ್ಲ. ಹೀಗೆ ಇಲ್ಲಿನ ರೂಪ ಅವರದಾದರೂ ಅನುಭವಗಳು ಚೆಟ್ಟಿಯವರವೇ ಎಂದು ಹೇಳಬಹುದು.

ಇನ್ನೂ ನಾವು ಈ ರೂಪದ ನೈಜ ಹಾಗೂ ಸಾದೃಶ್ಯದ ಬಗ್ಗೆ ನಮ್ಮ ಭಾರತೀಯರೆ ಚಿತ್ರಕಲೆಯಲ್ಲಿ ಅಳವಡಿಸಿಕೊಂಡಿದ್ದಾರೆಂಬ ವಿಷಯ ತಿಳಿದು ಬರುತ್ತದೆ. 'ವಿನಯಾಗಮ'ವೆಂಬ ಗ್ರಂಥವು ಅಂದಿನ ಕಲಾವಿದರ (೩ ನೇ ಶತಮಾನದಿಂದ ೬ ನೇ ಶತಮಾನ) ಚಿತ್ರಗಳಲ್ಲಿನ ನೈಜ ನಿರೂಪಣೆಯು ನಿಜ ವಸ್ತುವಿನ ಭ್ರಮೆಹುಟ್ಟಿಸುವಷ್ಟು ಸಾದೃಶ್ಯತೆ ಹೊಂದಿತ್ತೆಂದೂ ತಿಳಿಸಿದೆ. ಇದರಿಂದ ನಾವು ಗ್ರಹಿಸಬಹುದಾದ ಮುಖ್ಯಾಂಶವೆಂದರೆ ಭಾರತೀಯ ಕಲೆಯಲ್ಲಿಯೂ ನೈಜಸಾದೃಶ್ಯತೆ ಅಥವಾ ವಾಸ್ತವಿಕತೆಯ ಉನ್ನತ ಆದರ್ಶವು ಹಿಂದೆಯೇ ಇದ್ದಿತೆಂಬುದು" ೧೮೯ ಪಾಶ್ಚಾತ್ಯರಲ್ಲಿ ಈ ಆದರ್ಶದ ಪರಮಾವಧಿಯು ಇಂದಿಗೆ ಸುಮಾರು ನೂರು ವರ್ಷಗಳಿಗೆ ಹಿಂದೆ ವಿಜೃಂಭಿಸಿತ್ತು.

ಚೆಟ್ಟಿಯವರು ತಮ್ಮ ಕಣ್ಣಲ್ಲಿ. ಮನಸ್ಸಿನಲ್ಲಿ ಜೀವನದ ಕಣಕಣದಲ್ಲಿ ತುಂಬಿಕೊಂಡ ಕಲೆಗೆ ತಮ್ಮ ವಿಶಿಷ್ಟ ಮೆರಗು ಕೊಟ್ಟು ಆಹ್ಲಾದಕರವಾದ ರೀತಿಯಲ್ಲಿ ಚಿತ್ರಿಸಿ. ಒಂದು ಹೊಸ ಸೃಷ್ಟಿಮಾಡಿ ನಿಲ್ಲಿಸುತ್ತಾರೆ. ನಿಸರ್ಗದೃಶ್ಯ. ಸಜೀವಚಿತ್ರ. ಭಾವಚಿತ್ರ. ಸ್ಥಿರಜೀವನಚಿತ್ರ. ರೇಖಾಚಿತ್ರ ಯಾವುದು ಬೇಕಾದರೂ ಸರಿ ಚೆಟ್ಟಿಯವರದು ಸಿದ್ಧಹಸ್ತ. ಅವರು ಚಿತ್ರಿಸುವ ಚಿತ್ರ ಜೀವ ತುಂಬಿಕೊಂಡು ವರ್ಣಗಳಲ್ಲಿ ಮೂಡಿ ಬಂದಿರುವುದಕ್ಕೆ ಅದು ಅವರ ಮನಸ್ಸಿನಲ್ಲಿ ಮೊದಲು ನಿರ್ಮಾಣಗೊಂಡಿರುವುದೇ ಕಾರಣವಾಗಿದೆ. ಅವರು

---

೧೮೭. ಮಹಾಲಿಂಗ ಯಾಳಗಿ (ಸಂ.): ಕಲಾತಪಸ್ವಿ ಎಂ. ಪಿ. ಚೆಟ್ಟಿಯವರ ಅಭಿನಂದನ ಗ್ರಂಥ. ಪುಟ ೧೬

೧೮೮. ಚಂದ್ರಕಾಂತ ಕುಸನೂರ : ಕಲೆ: ಅನುಭವ ಮತ್ತು ಅನುಭಾವ. ಪುಟ ೬೨

೧೮೯. ಎಂ. ಟಿ. ವಿ. ಆಚಾರ್ಯ : ಕಲೆ ಮತ್ತು ನಾನು. ಪುಟ ೮೮

ತಮ್ಮನ್ನು ಸಂಪೂರ್ಣವಾಗಿ ಅದಕ್ಕೆ ಅರ್ಪಿಸಿಕೊಂಡಿರುವುದರಿಂದಲೇ ಕಲಾಕೃತಿ ಸಮಗ್ರವಾಗಿ ಸಂಪೂರ್ಣಗೊಂಡು ಹೊರಬರಲು ಸಾಧ್ಯವಾಗಿದೆ.

"ಯಾವ ವಸ್ತು ವಿಷಯದ ಬಗ್ಗೆ ಹೆಚ್ಚು ಗೌರವ ಇದೆಯೋ ಅಲ್ಲಿ ಚೆಟ್ಟಿಯವರು ಬಹಳ ಕೆಲಸ ಮಾಡಿದ್ದಾರೆ. ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ಸ್ವಾಮಿಗಳ, ಬಸವಾದಿ ಪ್ರಮಥರ ಅನೇಕ ವಿಭೂತಿ ಪುರುಷರ ಚಿತ್ರಗಳಲ್ಲಿ ಇದನ್ನು ನಾವು ಗುರುತಿಸಬಹುದಾಗಿದೆ. ಅವರು ಪುರಾಣಗಳಲ್ಲಿ ಧಾರ್ಮಿಕ ವಿಷಯಗಳಲ್ಲಿ ಅಪಾರವಾದ ನಂಬಿಕೆಯುಳ್ಳವರಾಗಿದ್ದರು. ಆ ನಂಬಿಕೆಯನ್ನು ನೇರವಾಗಿ ಒಪ್ಪಿಕೊಳ್ಳುವಂಥ ಮನಸ್ಸು ಅವರಿಗಿತ್ತು. ಆ ಹಿನ್ನೆಲೆಯ ಭಾವನೆಗಳಿಂದ ಇವರು ಚಿತ್ರ ರಚಿಸಿದ್ದರಿಂದ ಆ ಚಿತ್ರಗಳು ಹೆಚ್ಚು ಹೆಚ್ಚು ಜನರ ಮನಸ್ಸನ್ನು ಮುಟ್ಟಿದವು"[೧೯೦] ಇದು ಅವರ ಚಿತ್ರಗಳ ಯಶಸ್ಸಿನ ಹಾದಿಯೂ ಆಗಿದೆ. ಸಾ. ಕೃ. ರಾಮಚಂದ್ರರಾವ್ ಹೇಳುವಂತೆ "ವ್ಯಕ್ತಿಯ ಕಲಾಭಿವ್ಯಕ್ತಿಯು ಅವನ ಸಂಸ್ಕಾರದ ಕುರುಹು; ಉತ್ತಮ ಸಂಸ್ಕಾರವಿದ್ದರೇ ಉತ್ತಮ ಕಲೆ. ಪರಂಪರೆಯಿಂದ ಬಂದ ಆದರ್ಶ, ತತ್ವ, ಕಾವ್ಯ, ಆಚಾರ, ವಿಚಾರ, ವಿನೋದ, ವಿಹಾರ, ಎಲ್ಲವೂ ಕಲೆಯ ಹಿನ್ನೆಲೆಯಲ್ಲಿರಬೇಕು. ನೈಜವಾದ ಭಾರತೀಯತೆ ವಸ್ತುವಿನಲ್ಲಿ ಮಾತ್ರವಿದ್ದರೆ ಸಾಲದು; ಸಂವಿಧಾನದಲ್ಲೂ ಇರಬೇಕು. ಎರಡಕ್ಕಿಂತ ಹೆಚ್ಚಾಗಿ ಕಲೆಗಾರನ ಬದುಕಿನಲ್ಲೂ ಇರಬೇಕು"[೧೯೧] ಇವರ ವಿಚಾರಗಳು ಚೆಟ್ಟಿಯಂತಹ ಕಲಾವಿದರನ್ನು ಉದ್ದೇಶಿಸಿಯೇ ಹೇಳಿದಂತಿವೆ. ಇಂತಹ ಸಂಸ್ಕಾರದ ಹಿನ್ನೆಲೆಯನ್ನು ಚೆಟ್ಟಿಯವರು ಹೊಂದಿದ್ದರು. ಅವರ ಚಿತ್ರಗಳನ್ನು ನೋಡಿದಾಗಲೆಲ್ಲ ಈ ಅಂಶ ಯಾರಿಗಾದರೂ ಸ್ಪಷ್ಟವಾಗುತ್ತದೆ. ಚೆಟ್ಟಿಯವರ ಕಲಾ ಕೃತಿಗಳ ಹರವು ವಿಸ್ತಾರವಾದುದು ಜಲವರ್ಣ, ತೈಲವರ್ಣ, ಪೆನ್ಸಿಲ್ ಮಾಧ್ಯಮ, ಇಂಕ ಹಾಗೂ ಚಾರ್ಕೋಲ್ ಮಾಧ್ಯಮದ ರೇಖಾ ಚಿತ್ರ ಹಾಗೂ ಸಂಕೀರ್ಣ ಮಾಧ್ಯಮದ ಚಿತ್ರಗಳನ್ನು ಹೆಚ್ಚಾಗಿ ರಚಿಸಿದ್ದಾರೆ. ವೈವಿಧ್ಯಮಯವಾದ ಅವರ ಕಲಾಕೃತಿಗಳು ದೇಶ ವಿದೇಶಗಳಲ್ಲಿ ಮತ್ತು ಅನೇಕರ ಮನೆ-ಮಠ, ದೇವಾಲಯ, ಬಸದಿಗಳಲ್ಲಿ, ಸರಕಾರಿ ಕಛೇರಿ, ವಿಶ್ವವಿದ್ಯಾನಿಲಯ ಹಾಗೂ ಕಲಾಭಿಮಾನಿಗಳ ಮನೆಗಳಲ್ಲಿ ಸಂಗ್ರಹಗೊಂಡಿವೆ. ಸಾವಿರಾರು ಕಲಾಕೃತಿಗಳು ದೇಶ-ವಿದೇಶಗಳ ಕಲಾಸಕ್ತರ ಸಂಗ್ರಹದಲ್ಲಿದ್ದು, ಸದ್ಯ ನಮಗೆ ಅವುಗಳ ಸಮಗ್ರ ವಿವರ ಸಿಗುತ್ತಿಲ್ಲ ಸಿಕ್ಕಷ್ಟು ಕಲಾಕೃತಿಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

---

೧೯೦. ಆರ್. ಎಮ್. ಹಡಪದ : ಸಂದರ್ಶನ ದಿನಾಂಕ ೧೪-೪-೨೦೦೦ ಬೆಂಗಳೂರು

೧೯೧. ಸಾ. ಕೃ. ರಾಮಚಂದ್ರರಾವ್ : ಕಲಾತಪಸ್ವಿ ವೆಂಕಟಪ್ಪ ಪುಟ ೧೨೪

ಅಧ್ಯಾಯ ಏಳು

ಚೆಟ್ಟಿಯವರ ಚಿತ್ರಗಳ ರಚನಾ ವಿಧಾನ ಮತ್ತು ಶೈಲಿ



ಭಾರತೀಯ ಚಿತ್ರಕಲೆಗೆ ಪ್ರಪಂಚದಲ್ಲಿ ವಿಶಿಷ್ಟಸ್ಥಾನವಿದೆ. ಸಾವಿರಾರು ವರ್ಷಗಳ ವೈವಿಧ್ಯಮಯ ಸಂಸ್ಕೃತಿ, ನಾಗರಿಕತೆ ಮತ್ತು ಪರಂಪರೆ ಹೊಂದಿದ ನೆಲೆವೀಡು ಭಾರತ. ಹೀಗಾಗಿ ಇಲ್ಲಿಯ ಕಲೆಗೆ ಹತ್ತು ಹಲವು ಮುಖಗಳು. ಈ ಪರಂಪರೆ ಆದಿಮಾನವನಿಂದ ಆರಂಭಗೊಂಡು ಇಂದಿನ ಆಧುನಿಕ ಮನುಷ್ಯನ ತನಕ ಹಾಸಿಕೊಂಡಿದೆ. ಉನ್ನತ ಕಲಾವಂತಿಕೆ ಭಾರತೀಯ ಕಲೆಯ ಮೂಲಗುಣ. ವಿಭಿನ್ನಧರ್ಮ, ನಡವಳಿಕೆ, ಆಚರಣೆ ನಮ್ಮ ಕಲೆಯನ್ನು ಶ್ರೀಮಂತಗೊಳಿಸಿವೆ. ಬಹುಶಃ ಇಲ್ಲಿರುವಷ್ಟು ಸಂಕೀರ್ಣವಾದ ವೈವಿಧ್ಯಮಯ ಬದುಕು, ರೂಢಿ ಜಗತ್ತಿನಲ್ಲಿ ಇನ್ನೆಲ್ಲಿಯೂ ಸಿಗದು. ಅದಕ್ಕೆ ಇಲ್ಲಿಯ ಪ್ರಾಚೀನ ಕಲೆಯ ಇಂದಿನ ಆಧುನಿಕ ಕಲೆಯವರೆಗೆ ಹಲವು ಶೈಲಿ ತಂತ್ರ ಸಿದ್ಧಾಂತಗಳನ್ನು ಒಳಗೊಂಡು ಬೆಳೆಯುತ್ತ ಬಂದಿದೆ ಸಮೃದ್ಧಿಗೊಂಡಿದೆ[೧] ಇಂತಹ ಸಮೃದ್ಧಿಯಾದ ಚಿತ್ರಕಲಾ ಪ್ರಪಂಚದಲ್ಲಿ ಶ್ರೀ ಚೆಟ್ಟಿಯವರು ತಮ್ಮದೇ ಆದ ರೇಖಾ ವಿನ್ಯಾಸ, ವರ್ಣಗಾರಿಕೆ, ತಂತ್ರ ಹಾಗೂ ಶೈಲಿಯ ವಿಶಿಷ್ಟ ಕೊಡುಗೆಯನ್ನು ನೀಡಿ ಕಲಾಕೃತಿಗಳು ಜನಮನವನ್ನು ಸೂರೆಗೊಳ್ಳುವಂತೆ ಮಾಡಿದ ಈ ಶತಮಾನದ ಒಬ್ಬ ಪ್ರಮುಖ ಕಲಾವಿದರು. ಅವರದೇ ಆದ ಶೈಲಿ, ಅಭಿವ್ಯಕ್ತಿನಿರೂಪಣೆ ಹಾಗೂ ವಿಭಿನ್ನ ವೈಶಿಷ್ಟ್ಯಗಳನ್ನು ನಾವು ಅವರ ಈ ಎಲ್ಲಾ ಕಲಾಕೃತಿಗಳ ಅಧ್ಯಯನದಿಂದ ತಿಳಿದುಕೊಳ್ಳಲು ಸಾಧ್ಯ.

" ಇತಿಹಾಸ ಪೂರ್ವಕಾಲದ ಚಿತ್ರಗಳ ಸೃಷ್ಟಿಯ ಹಿಂದಿನ ಹಾಗೂ ಆನಂತರದ ಹಾಗೂ ಇಂದಿನ ಸಮಕಾಲೀನ ಕಲಾ ಸೃಷ್ಟಿಯ ಆಶಯಗಳು ಒಂದೇ ಆಗಿಲ್ಲ. ಹಾಗಾಗುವುದು ಸಾಧ್ಯವೇ ಇಲ್ಲ. ವಿವಿಧ ಸಂದರ್ಭಗಳು, ವೈವಿಧ್ಯಮಯವಾದ ಕಲಾವಿದರು, ಅವರ ಬದುಕು, ವೈವಿಧ್ಯಮಯವಾದ ಚಿತ್ರ, ಶಿಲ್ಪ, ಗ್ರಾಫಿಕ್ ಇತ್ಯಾದಿಗಳನ್ನು ನೋಡುವುದು ಅನುಭವಿಸುವದು ಸಾಧ್ಯವಾಗಿದೆ ".[೨] ಅಂತೆಯೇ ಚೆಟ್ಟಿಯವರ ಆಶಯಗಳು, ಸಂದರ್ಭಗಳು, ಉದ್ದೇಶಗಳು ಆ ಕಾಲದ ಮೌಲ್ಯವನ್ನು ಕಲಾಕೃತಿಗಳಲ್ಲಿ ಎತ್ತಿಹಿಡಿದಿರುವುದನ್ನು ಕಾಣಬಹುದು.

---

೧. ಡಿ. ಎಸ್. ಚೌಗಲೆ : ಬಿ. ಕೆ. ಹುಬಳಿ : ಪುಟ ೧

೨. ಕೆ ವಿ. ಸುಬ್ರಹ್ಮಣ್ಯಂ : ಕಲಾ ಸಂವೇದನೆಯ ಒಳನೋಟಗಳು : ಪುಟ ೧೫

"ಯಾವುದೇ ಕಲೆ ಕಲಾವಿದನ ವ್ಯಕ್ತಿತ್ವದ ಪ್ರಕಟಣೆ ಯಾಗುವುದು ಮುಖ್ಯ. ತಂತ್ರ ಮಂತ್ರಯಾವುದಾದರೇನು ? ಪೂರ್ವದೇಶಗಳ ಕಲೆಯ ಗುಣಾಂಶಗಳನ್ನೇ ಹೀರಿಕೊಂಡು ಪಶ್ಚಿಮದ ಕಲಾ ಪ್ರಪಂಚದಲ್ಲಿ ಸರ್ವಮಾನ್ಯವೂ, ಸರ್ವೆ ಸಾಮಾನ್ಯವೂ ಎನಿಸುವ ತಾಂತ್ರಿಕ ಕೌಶಲ್ಯ ಹಾಗೂ ವೈಚಾರಿಕ ಶಿಶ್ರುಂಖಲತೆ. ಇವೆರಡನ್ನೂ ಸಮನ್ವಯಗೊಳಿಸಿ ಆವಿರ್ಭವಿಸುವ ವ್ಯಕ್ತಿ ಮೂಲವಾದ ಕಲಾಯೋಗವೇ ಭಾರತೀಯ ಕಲಾವಿದನ ಸಿದ್ಧಿ ಎನಿಸುವುದು "[೩] ಎನ್ನುವಂತೆ ಚೆಟ್ಟಿಯವರು ಪಾಶ್ಚಾತ್ಯ ಪದ್ಧತಿಯಲ್ಲಿ ಕಲಾಭ್ಯಾಸ ಮಾಡಿದರೂ ತಮ್ಮ ಕಲಾಕೃತಿಗಳಲ್ಲಿ ದೇಶಿಯತೆಯ ಸೊಗಡನ್ನು ಅಭಿವ್ಯಕ್ತಿಸಿದ ರೀತಿ ಅನುಪಮಾಗಿದೆ. "ಸಂವೇದನೆಯ ನೆಲೆಗಳು ಬದುಕಿನ ವೈವಿಧ್ಯಮಯ ಮಜಲುಗಳ ಪ್ರಭಾವದಿಂದ ಬದಲಾಗುವ ಒಬ್ಬನೇ ಕಲಾವಿದ ತನ್ನ ಬದುಕಿನ ವಿವಿಧ ಘಟ್ಟಗಳಲ್ಲಿ ವಿಭಿನ್ನ ಸಂವೇದನೆಗಳಿಗೆ ಒಳಗಾಗಿ ವೈವಿಧ್ಯಮಯವಾಗಿ ಸೃಷ್ಟಿಸುವಂತೆ "[೪] ಚೆಟ್ಟಿಯವರ ಕಲಾಕೃತಿಗಳಲ್ಲೂ ಈ ವೈವಿಧ್ಯತೆಯನ್ನು ಕಾಣುತ್ತೇವೆ. ಚೆಟ್ಟಿಯವರು ತಮ್ಮ ಈ ೯೪ ವರ್ಷಗಳ ಜೀವನಾವಧಿಯಲ್ಲಿ ಚಿತ್ರಗಳ ರಚನೆಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡವರು ಸಾವಿರಾರು ಚಿತ್ರಗಳನ್ನು ರಚಿಸಿದ್ದಾರೆ. ಈ ಕಲಾ ಕೃತಿಗಳು ಅವರ ಕಲಾಸಾಧನೆಯ ಪ್ರತೀಕಗಳಾಗಿವೆ.

ರೇಖಾವಿನ್ಯಾಸ :

ಚೆಟ್ಟಿಯವರ ರೇಖಾವಿನ್ಯಾಸ ಅವರದೇ ಆದ ವಿಶಿಷ್ಟತೆಯಿಂದ ಕೂಡಿದ್ದಾಗಿದೆ. ಭಾವಚಿತ್ರಗಳಲ್ಲಿಯಾಗಲಿ, ನಿಸರ್ಗ ಚಿತ್ರಗಳಲ್ಲಿಯಾಗಲಿ, ಸಂಯೋಜನಾ ಚಿತ್ರಗಳಲ್ಲಿಯೇ ಆಗಲಿ ರೇಖೆಗಳು ಭಾವಸಂಚಾರ ವಿಸ್ಮಯಕಾರಿಯಾದ ಸೌಂದರ್ಯಾನುಭೂತಿಯಿಂದ ಕೂಡಿದ ಶಕ್ತಿಪಡೆದುಕೊಂಡಂತಿವೆ. ಈ ರೇಖಾ ಶೈಲಿಯು ರಸಾನುಭವದ ಭಾವಸೂಚಕವಾದ ತಮ್ಮದೆ ಆದ ವಿನ್ಯಾಸವನ್ನು ರೂಪಿಸಿಕೊಂಡಿವೆ. ಅವರ ರೇಖೆಗಳಲ್ಲಿ ಭಾರತೀಯ ಸೊಗಡಿನ ಸುಕುಮಾರತೆಗಳನ್ನು ವಿವಿಧ ಭಂಗಿಗಳಲ್ಲಿ ವಿವಿಧ ಹಾವ ಭಾವಗಳ ಸೊಬಗಿನಲ್ಲಿ ಆನಂದಿಸಬಹುದಾಗಿದೆಯಲ್ಲದೆ ರೇಖೆಯನ್ನು ಸಹಿತ ಕಥನ ಕಲೆಗೆ ಹೊಂದಿಸಿ ಚಿತ್ರಿಸಿದ್ದಾರೆ. ಇಂತಹ ಚಿತ್ರಗಳನ್ನು ನಾವು ೧೯೫೪ ರ ಸಿದ್ದೇಶ್ವರ ಪುರಾಣದಲ್ಲಿಯೇ ಕಾಣುತ್ತೇವೆ. ಕಥನ ಶೈಲಿಯನ್ನು ರೇಖೆಗಳಲ್ಲಿ ಮೂಡಿಸಿ ಕಾವ್ಯದ ಸೊಬಗನ್ನು ತಂದು ಕೊಟ್ಟಿರುವುದನ್ನು ನೋಡುತ್ತೇವೆ.

ಚೆಟ್ಟಿಯವರ ರೇಖಾಚಿತ್ರಗಳ ಹರವು ವಿಸ್ತಾರವಾಗಿರುವುದರಿಂದ ಇಲ್ಲಿ ನಾವು ಸ್ಥೂಲವಾಗಿ ಸೂಕ್ಷ್ಮವಾದ ವಿವರಗಳನ್ನು ಪರಿಗಣಿಸಿ ಚರ್ಚಿಸಲಾಗಿದೆ. ಅವರ ರೇಖಾವಿನ್ಯಾಸವನ್ನು ಮೂರು ಹಂತದಲ್ಲಿ ಗುರ್ತಿಸಬಹುದು. ಮೊದನೆಯದಾಗಿ ಚಿತ್ರಗಳಿಗಾಗಿ ಅವರು ಚಿತ್ರಿಸಿದ ಕರಡು ಚಿತ್ರಗಳು ಅಥವಾ ಅಭ್ಯಾಸ ಅಂಕನೆ (sketch) ಅಥವಾ ಪೂರ್ವ ಸಿದ್ಧತೆಯ ಚಿತ್ರಗಳೆಂದೂ. ಎರಡನೆಯದಾಗಿ ಪುರಾಣ ಗ್ರಂಥಗಳಿಗೆ ರಚಿಸಿದ ರೇಖಾಚಿತ್ರಗಳು. ಮೂರನೆಯದಾಗಿ ವರ್ಣಚಿತ್ರಗಳಲ್ಲಿಯ ಅವರ ರೇಖಾವಿನ್ಯಾಸ.

---

೩. ಕು. ಶಿ. ಹರಿದಾಸ ಭಟ್ಟ : ಕಟಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು : ಪುಟ ೩೪

೪. ಕೆ ವಿ. ಸುಬ್ರಹ್ಮಣ್ಯಂ : ಕಲಾ ಸಂವೇದನೆಯ ಒಳನೋಟಗಳು : ಪುಟ ೩೫-೩೬

I) ಪೂರ್ವಸಿದ್ಧತೆಯ ರೇಖಾ ಚಿತ್ರ :

ಈ ಪೂರ್ವಸಿದ್ಧತೆಯ ರೇಖಾ ಚಿತ್ರರಚಿಸಲು ಕಲಾವಿದನಾದವನಿಗೆ ದೀರ್ಘಕಾಲದ ಪರಿಶ್ರಮ ಬೇಕಾಗುತ್ತದೆ. ಅಭ್ಯಾಸ ಬೇಕಾಗುತ್ತದೆ. " ಆಕೃತಿಗಳ ಗುಣಲಕ್ಷಣಗಳನ್ನು ಕಂಡು ಹಿಡಿಯುವ ಕಣ್ಣು ಬೇಕು; ಬಣ್ಣ ಬೆಳಕುಗಳ ಸ್ಪಷ್ಟವಾದ ಕಲ್ಪನೆ ಇರಬೇಕು. ಪಳಗಿದ ಚಿತ್ರಕಾರ ಈ ವಿಚಾರದಲ್ಲಿ ಕಣ್ಣಿನ ಸೂಕ್ಷ್ಮತೆ ಬೆಳೆಯಿಸಿಕೊಂಡಂತೆ ನೋಡಿದೊಡನೆ ರೇಖಿಸಬಲ್ಲ ಚುರುಕುತನಗಳಿಸುತ್ತಾನೆ. ಮುಂದೆ ಅಂಥ ಅಭ್ಯಾಸ ನೆನಪಿಗೆ ಬಂದು ಯಾವ ಆಕೃತಿಯನ್ನು ಕಾಣದೆಯೂ ಬರೆಯಲು ನೆರವಾಗುತ್ತದೆ. ಇಂಥ ಪೂರ್ವಸಿದ್ಧತೆ ಇದ್ದಂಥ ವ್ಯಕ್ತಿ ನಾಳೆದಿನ ಒಂದು ದೊಡ್ಡ ಚಿತ್ರಸೃಷ್ಟಿಯನ್ನು ಮಾಡುವಾಗ ತಾನು ಹಿಂದೆ ಅಂಕಿಸಿಕೊಂಡ ರೇಖಣೆಗಳನ್ನು ತನ್ನ ಸೃಷ್ಟಿಯಲ್ಲಿ ಬಳಸುವುದು ಸಾಧ್ಯವಾಗುತ್ತದೆ " [೫] ಈ ಹಿನ್ನೆಲೆಯಲ್ಲಿ ಚಿಟ್ಟಿಯವರ ಅಗಾಧ ಸಾಧನೆಯನ್ನು ಈ ಚಿತ್ರಗಳಲ್ಲಿ ಕಾಣಬಹುದಾಗಿದೆ.

ಚಿತ್ರ ೧ : ಡೊಳ್ಳುಬಾರಿಸುವವರು : ಉತ್ತರ ಕರ್ನಾಟಕದ ಒಂದು ನೃತ್ಯಮೇಳ ಈ ತರದ ಸಂಯೋಜನಾ ಚಿತ್ರವನ್ನು ತೈಲವರ್ಣದಲ್ಲಿ ಚಿತ್ರಿಸಿದ್ದಾರೆ. ಅದಕ್ಕಿಂತ ಮೊದಲು ಇದು ಅದರ ಅಂಕನೆ (Sketch) ಆಗಿದೆ. ವಿಷಯಕ್ಕೆ ತಕ್ಕಂತೆ ರೇಖೆಗಳ ಮೇಳ (harmony) ಇಲ್ಲಿ ನೋಡಬಹುದು. ಅಲ್ಲದೆ ಒಂದೊಂದು ರೇಖೆ ಒಂದೊಂದು ಭಾವನೆ ಕೊಡುತ್ತದೆ. ಡೊಳ್ಳನ್ನು ಬಾರಿಸುವ ಅವರಜೋರು ಶಕ್ತಿ. ಕಾಲಿನ ಮೇಲೆ ಅವುಗಳ ಭಾರ ಆ ಭಾರದಿಂದ ಹಿಂದಕ್ಕೆ ಬಾಗಿದಂತೆ ಮತ್ತೆ ಆ ಭಾರದ ಜೊತೆಗೆ ಕುಣಿಯುವ ತಾಳದ ಹೆಜ್ಜೆಗಳ ಭಾವನೆಯೂ ಇದೆ. ಒಂದು ರೀತಿಯ ಕುಣಿತದ. ಬಾರಿಸುವ ಧ್ವನಿ ಆ ರೇಖೆಗಳ ಮಧ್ಯದಿಂದ ಹೊರಹೊಮ್ಮುತ್ತಿದೆ. ಇದೇ ರೇಖಾವಿನ್ಯಾಸ ಮುಂದೆ ವರ್ಣದಲ್ಲಿ ಇನ್ನೂ ವರ್ಣಮಯವಾಗಿ ಲಯಬದ್ಧವಾಗಿ ಮೂಡಿ ಬಂದಿದೆ.

ಚಿತ್ರ ೨ : ಇದೊಂದು, ಸಕ್ಕರಿ ಕರಿಡೆಪ್ಪನವರು ಬಳ್ಳಾರಿ ಅವರ ಜೀವ ಮಾದರಿ ಚಿತ್ರವಾಗಿದೆ. ಇದು ಸಹಿತ ತೈಲವರ್ಣದಲ್ಲಿ ಚಿತ್ರಿತವಾಗಿದೆ. ಆದರೆ ಅದು ಈಗ ಲಭ್ಯವಿಲ್ಲ. ಅದರ ಕಪ್ಪುಬಿಳುಪು ಚಿತ್ರ ಚಿಟ್ಟಿಯವರ ಅಭಿನಂದನ ಗ್ರಂಥದಲ್ಲಿ ಲಭ್ಯವಿದೆ.

ಇಲ್ಲಿ ಚಿತ್ರಿತ ವ್ಯಕ್ತಿಯ ಸ್ವಭಾವಗುಣ ಆ ರೇಖೆಗಳಲ್ಲಿ ಕಣ್ಣಿನ ಭಾವನೆಯಲ್ಲೇ ಕಾಣಿಸುತ್ತದೆ. ನೇರವಾಗಿ ಹಾಗೂ ಅಡ್ಡಲಾಗಿ ಹಾಕಿದ ರೇಖೆ ಹಾಗೂ ಛಾಯಾಂಕನ ಅದು ರೇಶ್ಮೆಯ ಬಟ್ಟೆಯಂತೆ. ಕೊರಳಲ್ಲಿ ಲಿಂಗದಕಾಯಿ ಹಣೆಯ ಗೆರೆಗಳು ವಿಭೂತಿಯನ್ನು ಸೂಚಿಸಿದರೆ ಧೋತರದಲ್ಲಿ ಕಡುಪಾಗಿ ಎಳೆದ ರೇಖೆಗಳು ಅದರ ಅಂಚನ್ನು ಬರೆದಷ್ಟೇ ಪರಿಣಾಮಕಾರಿಯಾಗಿದೆ. ಹಿನ್ನೆಲೆಯಲ್ಲಿ ಮಸುಕಾಗಿ ಮಠದ ಚಿತ್ರವಿದೆ. ಇದು ಮುಂದೆ ವರ್ಣ ಚಿತ್ರದಲ್ಲಿ ದಟ್ಟವಾಗಿ ಕಡುಪಾಗಿ ಚಿತ್ರಸಲಾಗಿದೆ. ಅಕ್ಕ ಪಕ್ಕದ ಮರದ ಅಂಕನೆಗಳು ಮುಂದೆ ತೆಂಗಿನ ಮರಗಳಾಗಿ ಮಾರ್ಪಾಡು ಹೊಂದಿವೆಯಾದರು ಈ ಅಂಕನೆಯನ್ನು ನೋಡಿದರೆ ವರ್ಣಚಿತ್ರ ಥಟ್ಟನೆ ಕಾಣಿಸುವಂತೆ ರೇಖೆಗಳು ಲಾಲಿತ್ಯವಾಗಿ ಮೂಡಿಬಂದಿವೆ. ಚಿಟ್ಟಿಯವರ ಸಂಗ್ರಹ ಅಳತೆ ೧೬ ಸೆಂ.ಮಿ. x ೧೯ ಸೆಂ.ಮಿ. ಇದನ್ನು ೧೯೭೭ ರಲ್ಲಿ ಚಿತ್ರಿಸಿದ್ದಾರೆ.

---

೫. ಡಾ. ಶಿವರಾಮ ಕಾರಂತ : ಕಲಾ ಪ್ರಪಂಚ : ಪುಟ ೬೭

ಚಿತ್ರ ೩ : " ಚೆಳ್ಳಗುರಿಕೆ ಎರ್ರಿತಾತ ಹಾದಿಹೋಕನೊಬ್ಬನಿಗೆ ಹುತ್ತಿನ ಹಾವನ್ನೇ ಆಶೀರ್ವದಿಸಿದ್ದು "[೬] ಈ ಚಿತ್ರದಲ್ಲಿ ಗೆರೆಗಳಲ್ಲಿಯೇ ಮೃದುತ್ವ ಹಾಗೂ ಗಡಸುತನದ ಅನುಭವವಾಗುತ್ತದೆ. ತಾತನವರ ದೇಹದ ರೇಖೆಗಳು ಮೃದುತ್ವದಿಂದ ಕೂಡಿದ್ದರೆ, ದಾರಿಹೋಕನು ಕುರಿಕಾಯುವವ ಸಧೃಡಕಾಯದವ ಅವನ ದೇಹದ ರೇಖೆಗಳು ಒರಟುತನವನ್ನು, ಸಧೃಡದ ಭಾವನೆಯನ್ನು ವ್ಯಕ್ತಪಡಿಸಿದರೆ ಹಾವಿನ ರೇಖೆಗಳು ಅಷ್ಟೇ ನುಣುಪುತನವನ್ನು ಅಭಿವ್ಯಕ್ತಿಸಿ ಇನ್ನೇನು ಜಾರಿ ಜೋಳಿಗೆಯಲ್ಲಿ ಬೀಳುವ ಅನುಭವ ನೀಡುತ್ತದೆ. ಕಣ್ಣಿನ ರೇಖೆಗಳಲ್ಲಿ ಸಹಿತ ಕೃಪಾದೃಷ್ಟಿ, ಧನ್ಯಭಾವವನ್ನು ನೀಡುತ್ತವೆ. ಅಲ್ಲದೆ ಬರಿಯ ಬಾಹ್ಯರೇಖೆಗಳಿಂದಲೇ ಮಾನವಶರೀರದ ದುಂಡುತನ, ಚೆಲುವು, ಜೀವಂತಿಕೆಯನ್ನು ತೋರಿಸಿದ್ದಾರೆ. ಇದು ಅವರ ರೇಖಾವಿನ್ಯಾಸದ ಚೆಲುವಿಗೆ ಒಂದು ಮಾದರಿಯೆನ್ನಬಹುದು.

II) ಪುರಾಣಗ್ರಂಥಗಳಿಗೆ ಸಂಪೂರ್ಣ ರೇಖಾ ಚಿತ್ರಗಳನ್ನು ರಚಿಸಿದ್ದು :

ಶ್ರೀ ವಿರಕ್ತ ತೋಂಟದಾರ್ಯ ವಿರಚಿತ ಶ್ರೀ ಸಿದ್ದೇಶ್ವರ ಮಹಾಪುರಾಣಕ್ಕೆ ಹೆಚ್ಚು ರೇಖಾ ಚಿತ್ರಗಳನ್ನು ಚಿತ್ರಿಸಿಕೊಟ್ಟಿದ್ದಾರೆ. ರೇಖೆಗಳಿಂದಲೇ ನೆರಳು ಬೆಳಕಿನ ಪರಿಣಾಮವನ್ನು ತೋರಿಸಿದ್ದಾರೆ. ಈ ಚಿತ್ರಗಳ ರೇಖಾ ವಿನ್ಯಾಸ ಗಮನಾರ್ಹವಾದವು. ಪ್ರಕಾಶ ಹೆಚ್ಚಿರುವ ಮತ್ತು ಕಡಿಮೆಯಿರುವ ಆಕೃತಿಗಳಿಗೂ ಪರಸ್ಪರ ಮೇಳವನ್ನು ಯೋಜನಾಬದ್ಧವಾಗಿ ಚಿತ್ರಿಸಿದ್ದಾರೆ.

ಚಿತ್ರ ೪ : " ಸಿದ್ಧಲಿಂಗನ ಭಕ್ತೆಯೊಬ್ಬಳು ಕೆರೆಯಲ್ಲಿ ತೇಲಿ ಹೋಗುತ್ತಿರುವ ಕೊಡವನ್ನು ಸಿದ್ಧಲಿಂಗನ ಮೇಲೆ ಆಣೆ ಇಟ್ಟು ನಿಲ್ಲಿಸಿದುದು "[೭] ಚಿತ್ರದಲ್ಲಿ ಕೆಲವೇ ಆಕೃತಿಗಳಿಂದ ಸನ್ನಿವೇಶದ ಸಂಪೂರ್ಣ ಕಲ್ಪನೆಯನ್ನು ಚಿತ್ರಿಸಿದ್ದಾರೆ. ಇಲ್ಲಿಯ ರೇಖಾವಿನ್ಯಾಸ ಅತ್ಯಂತ ಸಮತೋಲ (balanced) ಮಯವಾಗಿದೆ. ಕೊಡವನ್ನು ಕಳೆದುಕೊಂಡ ಹೆಣ್ಣುಮಗಳು ಚಿತ್ರದ ಬಲಭಾಗದಲ್ಲಿ ಮಧ್ಯಭಾಗಕ್ಕೆ ಸಮೀಪವಾಗಿ ನಿಂತಿದ್ದಾಳೆ ಆಕೆಯ ಕೊಡ ಎಡಭಾಗದ ತುದಿಗೆ ಹರಿದು ಹೋಗಿದೆ. ಅವೆರಡು ಆಕೃತಿಗಳಿಗೆ ರೇಖೆಗಳಿಂದ ಕಡುಪಾದ ಛಾಯಾಂಕನ ಚಿತ್ರಿಸಿ ಸಮತೋಲನವನ್ನು ನಿರ್ಮಿಸಿದ್ದಾರೆ. ಹಿನ್ನೆಲೆಯ ಆಕೃತಿಗಳಿಗೆ ಯಾವುದೇ ಛಾಯಾಂಕನ ಇಲ್ಲದೇ ಬರೀ ರೇಖೆಗಳಿಂದಲೇ ದುಂಡತನವನ್ನು ಚಿತ್ರಿಸಿದ್ದಾರೆ. ಅಲ್ಲದೇ ಹರಿದು ಹೋಗುತ್ತಿರುವ ಕೊಡ ನಿಂತಲ್ಲೇ ತಿರುಗುವಾಗಿನ ಅಲೆಗಳು, ನದಿಯು ಹರಿಯುವ ರೇಖೆಗಳು, ಹೆಣ್ಣುಮಗಳು ಲಾಲಿತ್ಯವಾಗಿ ನಿಂತಭಂಗಿ ಚಿತ್ರಕ್ಕೆ ಚಲನೆಯನ್ನು ತಂದಿದೆ. ಅಲ್ಲದೆ ಅಲ್ಲಿ ನಿಂತಿರುವಂತಹ ಉಳಿದ ಜನರ ಮುಖದಲ್ಲಿ ವಿಸ್ಮಯ, ಸಂತೋಷದ ಭಾವನೆಯನ್ನು ಕಾಣುತ್ತೇವೆ. ಚಿತ್ರದಲ್ಲಿ ದೃಶ್ಯಾಂತರವನ್ನು ತೋರಿಸಿದ್ದಾರೆ. ಅಲ್ಲದೆ ರೇಖೆಗಳ ಮುಖಾಂತರ ವಸ್ತುವಿನ ಮೈವಳಿಕೆಯ ಅನುಭವವು ನಮಗಾಗುತ್ತಿದೆ. ಬೋರಾಲಾಗಿ ಬಿದ್ದಿರುವ ಕೊಡ ತಾಮ್ರದ ಕೊಡದಂತೆ ನೋಟದಲ್ಲೇ ಸ್ಪರ್ಶದ ಅನುಭವ ನೀಡುತ್ತದೆ. ಇದು ಚಿಟ್ಟಿಯವರ ಆಳವಾದ ಅಭ್ಯಾಸದ ಅರಿವನ್ನೀಡುತ್ತದೆ ಆಕೃತಿಗಳ ನಡುವಣ ಅವಕಾಶ (space) ಹಿಂದು ಮುಂದುಗಳ ಕಲ್ಪನೆ ಸುಸಂಗತವಾಗಿದೆ.

---

೬. ಸಿ. ವ. ಚೆನ್ನಬಸವೇಶ್ವರ : ಚೆಳ್ಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಲೀಲಾವಿಲಾಸ, ಪುಟ ೨೨

೭. ಶ್ರೀ ಸಂಗನ ಬಸವ ಚರಮೂರ್ತಿಗಳು (ಸಂ.) : ಶ್ರೀ ವೀರಕ್ತ ತೋಂಟದಾರ್ಯ ಶ್ರೀ ಸಿದ್ದೇಶ್ವರ ಮಹಾಪುರಾಣವು : ಪುಟ ೫೭

ಚಿತ್ರ ೫ : " ಸಿದ್ಧಲಿಂಗ ಸ್ವಾಮಿಯ ಪ್ರಸಾದವನ್ನು ಶಿಲೆಯ ಬಸವನು ಸವಿಯ ಹತ್ತಿದುದು " [೮]

ಈ ಚಿತ್ರದಲ್ಲಿ ಆಕೃತಿಗಳು ಬಹಳವಿದ್ದರೂ ರೇಖಾ ವಿನ್ಯಾಸದಲ್ಲಿ ಸಮತೋಲನವಿದೆ. ಚಿತ್ರದ ಬಲಭಾಗ ಪೂರ್ತಿ ಪ್ರಕಾಶಮಯವಾಗಿದ್ದು ಎಡಭಾಗ ಪೂರ್ತಿ ಕಡುಪುತನದಿಂದ ಕೂಡಿದೆಯಾದರೂ ಒಂದು ಆಕೃತಿಯಿಂದ ಇನ್ನೊಂದು ಆಕೃತಿಗೆ ನಮ್ಮ ಕಣ್ಣು ಹರಿಯುವಂತೆ ಕಡುಪಾದ ಭಾಗದಲ್ಲಿ ಸ್ವಲ್ಪ ಛಾಯಾಂಕನ ಹೊಂದಿದ ಬೆಳಕಿನಿಂದ ಕೂಡಿದ ಆಕೃತಿಗಳನ್ನು ಚಿತ್ರಿಸಿರುವುದರಿಂದ ಈ ನಿರೂಪಣೆ ಚಿತ್ರಕ್ಕೆ ಪುಷ್ಟಿಕೊಟ್ಟಿದೆ. ಲಿಂಗಪೂಜೆಯಲ್ಲಿ ನಿರತಳಾದ ಹೆಣ್ಣುಮಗಳು ತನ್ನ ಎಡೆಯನ್ನು ಕಲ್ಲುಬಸವ ಭಂಜಿಸುವುದನ್ನು ನೋಡಿ ಗಾಬರಿಯಾಗಿದ್ದಾಳೆ. ಸುತ್ತೆಲ್ಲ ಇರುವ ಆಕೃತಿಗಳ ಮುಖದಲ್ಲೂ ಆಶ್ಚರ್ಯಭಾವನೆ ಇದೆ. ಸಣ್ಣಮಗುವಿಗೆ ಇದೊಂದು ಸಂತೋಷದಾಯಕವಾದ ಸನ್ನಿವೇಶವಾದ್ದರಿಂದ ಮಗುಚಪ್ಪಾಳೆ ತಟ್ಟುತ್ತಿದೆ. ಹೀಗೆ ರೇಖೆಗಳಿಂದಲೇ ಕಣ್ಣಿನ ದೃಷ್ಟಿಯಲ್ಲೆ ಭಾವನೆಗಳು ವ್ಯಕ್ತವಾಗಿವೆಯಲ್ಲದೆ ಕಲ್ಲುಬಸವ ಮುಖತಿರುಗಿಸಿ ಪ್ರಸಾದವನ್ನು ಭಂಜಿಸುತ್ತಿರುವದು. ಆ ಹೆಣ್ಣುಮಗಳು ಅದನ್ನು ತಡೆಯಲು ಕೈಮುಂದಕ್ಕೆ ಚಾಚಿರುವುದು ಇಲ್ಲಿ ಹಿನ್ನೆಲೆಯಲ್ಲಿಯ ಜನರ ಹಾವಭಾವ ಚಿತ್ರಕ್ಕೆ ಚಾಲನೆಯನ್ನು ತಂದುಕೊಟ್ಟಿವೆ. ಅಲ್ಲದೆ ರೇಖೆಗಳ ಛಾಯಾಂಕಣದಿಂದ ಬಸವನ ಮೈವಳಿಕೆ ಕಲ್ಲಿನದೆಂಬ ಭಾವನೆ ಬರುವಂತೆಯೇ ಚಿತ್ರಿಸಿದ್ದಾರೆ. ಚಿತ್ರದಲ್ಲಿ ದೃಶ್ಯಂತರವಿದೆ. ಒಟ್ಟಾರೆ ಸನ್ನಿವೇಶದ ನಿರೂಪಣೆ ಅದರ ಕಲ್ಪನೆ ನೋಡುಗನ ಮನಸ್ಸಿನ ಭಾವನೆಗಳಿಗೆ ಸ್ಪಂದಿಸುವಂತಿದೆ. ಇಂತಹ ಚಿತ್ರಗಳು ಮುಂದಿನ ಪೀಳಿಗೆಯ ಕಲಾ ವಿದ್ಯಾರ್ಥಿಗಳಿಗೆ ಒಂದು ರೀತಿಯಲ್ಲಿ ಅಭ್ಯಾಸಕ್ಕೆ ಮೂಲ ಆಕರಗಳಾಗಿವೆ.

ಚಿತ್ರ ೬ : " ಸಿದ್ಧಲಿಂಗೇಶನು ಗುರುವಿನ ಲಿಂಗಾರ್ಚನೆಯ ಸಮಯದಲ್ಲಿ ನೀರಿನಿಂದ ದೀಪವನ್ನು ಉರಿಸಿದುದು ".[೯]

ಈ ಚಿತ್ರದಲ್ಲಿ ಎರಡೇ ಆಕೃತಿಗಳಿಂದ ಆಯತಾಕಾರದ ಅವಕಾಶವನ್ನು ಅತ್ಯಂತ ಸಮತೋಲನೆಯಿಂದ ರಚಿಸಿದ್ದಾರೆ. ಚಿತ್ರದ ಬಲಭಾಗದಲ್ಲಿ ಆಕೃತಿ ಪೂಜೆಯಲ್ಲಿ ನಿರತವಾಗಿದ್ದರೆ. ಮಧ್ಯದಲ್ಲಿ ಎಂಬಂತೆ ದೀಪವನ್ನು ಇರಿಸಿ ಅದನ್ನು ಪೂರ್ತಿ ಕಡುಪಾಗಿ ರೇಖಿಸಿದ್ದಾರೆ. ಎಡಭಾಗದಲ್ಲಿ ನೀರು ಹಾಕುವ ಬಾಲಕನನ್ನು ಪ್ರಕಾಶಮಾನವಾಗಿ ಚಿತ್ರಿಸಿದ್ದಾರೆ. ಬಲಭಾಗದ ಕಂಬಕ್ಕೆ ಪೂರಕವಾಗಿ ಎಡಗಡೆ ಅಷ್ಟೇ ಕಡುಪಿನಿಂದ ಪುಸ್ತಕ ಇಡುವ ಮಾಡು. ಇನ್ನಿತರ ವಸ್ತುಗಳು ಸಮತೋಲವಾಗಿವೆ. ಹೀಗೆ ಕಡಿಮೆ ಆಕೃತಿಗಳ ರೇಖಾವಿನ್ಯಾಸ ಅತ್ಯಂತ ಜಾಣ್ಮೆಯಿಂದ ಚಿತ್ರಿಸಿದ್ದಾರೆ. ಸನ್ನಿವೇಶಕ್ಕೆ ತಕ್ಕಂತೆ ವಸ್ತುಗಳನ್ನು. ಆ ಕಲ್ಪನೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಆಕೃತಿಗಳು ಅಲ್ಲದೇ ದೀಪಕ್ಕೆ ನೀರು ಹಾಕುವ ಬಾಲಕನ ಆಕೃತಿ ಹಿಂದಕ್ಕೆ ತಿರುಗಿದ ಭಂಗಿ ಚಿತ್ರಕ್ಕೆ ಚಲನೆಯನ್ನು ನೀಡಿದೆ.

ಹೀಗೆ ಚಿಟ್ಟಿಯವರ ಸಂಯೋಜನಾಜಾಣ್ಮೆಯನ್ನು ರೇಖಾ ವಿನ್ಯಾಸವನ್ನು ನೇರವಾಗಿ ರೇಖಾಚಿತ್ರಗಳಲ್ಲಿ ನೋಡಿದಾಗ ಸ್ಪಷ್ಟವಾದ ನಿರೂಪಣೆ ವೀಕ್ಷಕನಿಗೆ ನೀಡುತ್ತದೆ. ಈ ಚಿತ್ರಗಳನ್ನು ಅಭ್ಯಾಸಿಸಿದಾಗ ಕಂಡುಬರುವ

---


೮. ಶ್ರೀ ಸಂಗನ ಬಸವ ಚರಮೂರ್ತಿಗಳು (ಸಂ.) : ಶ್ರೀ ವೀರಕ್ತ ತೋಂಟದಾರ್ಯ ಶ್ರೀ ಸಿದ್ದೇಶ್ವರ ಮಹಾಪುರಾಣವು : ಪುಟ ೧೮೭

೯. ಶ್ರೀ ಸಂಗನ ಬಸವ ಚರಮೂರ್ತಿಗಳು (ಸಂ.) : ಶ್ರೀ ವೀರಕ್ತ ತೋಂಟದಾರ್ಯ ಶ್ರೀ ಸಿದ್ದೇಶ್ವರ ಮಹಾಪುರಾಣವು : ಪುಟ ೬೦

ಡೊಳ್ಳು ಬಾರಿಸುವವರು



ಚಿತ್ರ ೧



ಚಿತ್ರ ೨

ಸಕ್ಕರಿ ಕರಿಡೆಪ್ಪನವರು ಬಳ್ಳಾರಿ



ಶ್ರೀ ಎರ್ರಿಸ್ವಾಮಿಗಳು ಓರ್ವ ಭಕ್ತನಿಗೆ ಹಾವನ್ನು ಆಶೀರ್ವದಿಸಿ ಹಾವು ಬಂಗಾರವಾಗಿ ತೋರಿಸಿದ ಪವಾಡದ ಚಿತ್ರ

ಚಿತ್ರ ೩



ಒಬ್ಬ ಭಕ್ತಳು ಕೆರೆಯಲ್ಲಿ ಗಾಳಿಯು ಹೊಡೆತಕ್ಕೆ ದೂರ ತೇಲಿಹೋದ ಕೊಡವನ್ನು ಸಿದ್ಧೇಶನ ಆಣೆಯನ್ನಿಟ್ಟು ತನ್ನೆಡೆಗೆ ಬರಮಾಡಿದುದು.

ಚಿತ್ರ ೪







ಸಿದ್ಧೇಶನ ಪ್ರಸಾದವನ್ನು ಶಿಲೆಯ ಬಸವನು ಭುಂಜಿಸಿದುದು.

ಚಿತ್ರ ೫



ಸಿದ್ಧಲಿಂಗೇಶನು ಗುರುವಿನ ಲಿಂಗಾರ್ಚನೆಯ ಸಮಯದಲ್ಲಿ ಬೆಳಗುವ ದೀಪವನ್ನು [illegible]

ಚಿತ್ರ ೬



ಶರಣನ ಸಮಾಧಿ (ಗದ್ದುಗೆ)

ಚಿತ್ರ 2



ಅಂಶಗಳೆಂದರೆ ಭಾವನಾತ್ಮಕತೆ, ವಸ್ತುಗಳ ವಿವಿಧ ಮೈವಳಿಕೆಗಳ ಅನುಭವ, ಚಿತ್ರದಲ್ಲಿ ಚಲನೆ, ಘನತ್ವ, ದೃಶ್ಯಾಂತರ, ಸೂಕ್ಷ್ಮವಾದ ವಿವರಣೆ ಸ್ಪಷ್ಟವಾದ ಸಮತೋಲನೆ, ಆಕೃತಿಗಳ ನಡುವಣ ಯೋಜನಾಬದ್ಧ ಅವಕಾಶ ಪ್ರಕಾಶ ಹೆಚ್ಚಿರುವ ಮತ್ತು ಕಡಿಮೆಯಿರುವ ಆಕೃತಿಗಳೊಳಗಿನ ಪರಸ್ಪರ ಮೇಳ. ಹೀಗೆ ಒಟ್ಟಾರೆ ಕಲ್ಪನೆಯ ಸುಸಂಗತ ರೇಖಾವಿನ್ಯಾಸದ ನಿರೂಪಣೆಯನ್ನು ನೋಡುತ್ತೇವೆ. ಚಿಟ್ಟಿಯವರ ರೇಖಾ ವಿನ್ಯಾಸದ ರೀತಿಯನ್ನು ನಿಸರ್ಗ ಚಿತ್ರದ ಮೂಲಕ ಈ ರೀತಿ ಗುರುತಿಸಬಹುದಾಗಿದೆ.

ಚಿತ್ರ ೭ : ವಿರೇಶ ಶರಣರ ಪುರಾಣದಲ್ಲಿಯ ಚಿತ್ರ, " ಶ್ರೀ ಸಿದ್ಧರಾಮೇಶ್ವರ ದೇವಾಲಯ " [೧೦]ದ ಭೂದೃಶ್ಯ **(Landscape)** ಇದಾಗಿದೆ. ೧೯೩೪ ರಲ್ಲಿ ಈ ಚಿತ್ರ ಚಿತ್ರಿಸಿದ್ದಾರೆ. ಇಂಕ ಮಾಧ್ಯಮದ ರೇಖಾಚಿತ್ರ ಇದಾಗಿದೆ. ಈ ಚಿತ್ರ ವಿವರಣೆಯ ಪರಾಕಾಷ್ಟೆಯನ್ನು ಮುಟ್ಟಿದೆ. ಬಲಭಾಗದ ಹಿನ್ನೆಲೆಯಲ್ಲಿ ಶ್ರೀ ಸಿದ್ಧರಾಮೇಶ್ವರ ದೇವಸ್ಥಾನ ಮುನ್ನೆಲೆಯಲ್ಲಿ ವಿರೇಶ ಶರಣರ ಸಮಾಧಿ ಸುತ್ತೆಲ್ಲ ಗಿಡ-ಮರಗಳು, ಮುಂದೆ ನೀರಿನ ಕೊಳವಿದೆ.

ಚಿಟ್ಟಿಯವರು ಇಲ್ಲಿ ಗಿಡದ ಎಲೆಗಳು, ತೆಂಗಿನ ಮರದ ಎಸಳುಗಳು ನೀರಿನಲ್ಲಿಯ ಕಮಲಗಳನ್ನು ಮೊದಲ್ಗೊಂಡು ಎಲ್ಲಾ ವಿವರವಾಗಿ ಚಿತ್ರಿಸಿದ್ದಾರೆ. ಚಿತ್ರದಲ್ಲಿ ದೃಶ್ಯಾಂತರವಿದೆ. ಸಮಾಧಿಯ ಬಳಿಯಲ್ಲಿ ನಿಂತ ಜನರನ್ನು ಸಹ ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಪ್ರತಿಯೊಂದು ವಸ್ತುವಿನ ಮೈವಳಿಕೆಯ ಗುಣ ಇಲ್ಲಿ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ. ದೂರದಲ್ಲಿ ಕಾಣುವ ಸಿದ್ಧರಾಮೇಶ್ವರನ ದೇವಾಲಯದ ಮೇಲಿನ ಕೆತ್ತನೆಯನ್ನು ಸಹ ಚಿತ್ರಿಸಿದ್ದಾರೆ. ಅಲ್ಲದೆ ನೀರಿನಲ್ಲಿ ಪ್ರತಿಬಿಂಬಕೂಡ ಛಾಯಾಂಕನವನ್ನು ಸಂಪೂರ್ಣವಾಗಿ ರೇಖೆಗಳಿಂದಲೇ ಮಾಡಿ ಒಟ್ಟಾರೆ ನಿರೂಪಣೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಇಲ್ಲಿ ಚಿತ್ರಿಸದೇ ಉಳಿದ ವಸ್ತುವೇ ಇಲ್ಲವೆಂಬಷ್ಟು ವಿವರಣೆಯನ್ನು ಹೊಂದಿದೆ. ಈ ಚಿತ್ರವನ್ನು ಪುರಾಣದ ೨೩೧ ನೇ ಪುಟದಲ್ಲಿ ನೋಡಬಹುದಾಗಿದೆ. ಕೆಲವೇ ರೇಖೆಯ ಆಕೃತಿಗಳನ್ನು ಚಿತ್ರಿಸಿದಂತೆ ಅಷ್ಟೇ ವಿವರಪೂರ್ಣವಾದ ಚಿತ್ರವನ್ನು ಅವರು ಚಿತ್ರಿಸುತ್ತಿದ್ದರೆಂಬುದಕ್ಕೆ ಈ ಚಿತ್ರ ಒಂದೇ ನಿದರ್ಶನ.

ವರ್ಣಚಿತ್ರಗಳಲ್ಲಿ ರೇಖಾ ವಿನ್ಯಾಸ :

ವರ್ಣಚಿತ್ರಗಳ ರೇಖಾ ವಿನ್ಯಾಸಕ್ಕೆ ಅವರು ಮೊದ ಮೊದಲು ಚಿತ್ರಿಸಿದ ಚಿತ್ರಗಳು ಉತ್ಕೃಷ್ಟವಾಗಿದ್ದು ರೇಖಾ ಪ್ರಧಾನವಾಗಿವೆ. ವರ್ಣಗಳ ಜೊತೆಗೆ ರೇಖಾವಿನ್ಯಾಸದ ನಿರೂಪಣೆಯನ್ನು ನೋಡಬಹುದಾಗಿದೆ. ವರ್ಣಗಳಿಗೆ ಕುಂದು ಬರದಂತ ರೀತಿಯಲ್ಲಿ ರೇಖಾವಿನ್ಯಾಸವನ್ನು ರಚಿಸಿದ್ದಾರೆ.

ಚಿತ್ರ ೮ : ಇದೊಂದು ಜಲವರ್ಣ ಚಿತ್ರ. ಸರಸ್ವತಿ ಬ್ರಹ್ಮರು ವಾಹನವಾದ ನವಿಲಿನ ಬೆನ್ನಮೇಲೆ ಕುಳಿತು ಆಕಾಶಮಾರ್ಗವಾಗಿ ಹೋಗುತ್ತಿದ್ದಾರೆ. ಅತ್ಯಂತ ತೆಳು ಬಣ್ಣಗಳನ್ನು ಲೇಪಿಸಿದ್ದಾರೆ. ಆಕೃತಿಗಳ ಹೊರಮೈ ರೇಖೆಗಳಿಂದ ಚಿತ್ರಿಸಿದ್ದಾರೆ. ಆಕೃತಿಗಳಲ್ಲಿಯ ರೇಖಾ ಲಾಲಿತ್ಯ ನೋಡುಗರ ಭಾವನೆಗಳನ್ನು ಉದ್ದೀಪನ

೧೦. ದ್ಯಾಂಪುರ ಚನ್ನಕವಿ : ಶಿವಶರಣ ವೀರೇಶ್ವರ ಪುರಾಣ : ಪುಟ ೨೩೧

ಗೊಳಿಸುವಂತೆ ಮೋಹಕವಾಗಿ ಇವೆ. ಅವರನ್ನು ಹೊತ್ತುಕೊಂಡ ನವಿಲು ಅತ್ಯಂತ ಘನವೆಂಬಂತೆ ಅಭಿಮಾನದಿಂದ ಹಾರುತ್ತಿದೆ. ಕಾಲಲ್ಲಿ ಹಾವನ್ನು ಹಿಡಿದಿದೆ. ಅದರ ರೇಖೆಗಳು ನುಣುಪುತನದ ಅನುಭವ ನೀಡುತ್ತವೆ. ನವಿಲಿನ ಪುಚ್ಛದ ಹರವಿನಲ್ಲಿ ಅತ್ಯಂತ ಶೃಂಗಾರ ಭಂಗಿಯಲ್ಲಿ ಬ್ರಹ್ಮ ಸರಸ್ವತಿಯರು ಆಸೀನರಾಗಿದ್ದಾರೆ. ಸರಸ್ವತಿಯ ನಾಲ್ಕು ಕೈಗಳಲ್ಲಿ ಎರಡು ವೀಣೆಯನ್ನು ಹಿಡಿದದ್ದರೆ ಇನ್ನೊಂದು ಕೈ ನವಿಲಿನ ಮೂಗುದಾಣವನ್ನು ಹಿಡಿದಿದೆ. ನವಿಲು ರೆಕ್ಕೆ ಬಿಚ್ಚಿ ಕಾಲನ್ನು ಹಿಂದಕ್ಕೆ ತಳ್ಳಿ ಹಾರುತ್ತಿರುವ ರೀತಿ ಚಿತ್ರಕ್ಕೆ ಚಾಲನೆನೀಡಿದೆ. ಸುತ್ತೆಲ್ಲ ಮೊಡಗಳು. ದೂರದಲ್ಲಿ ಬೆಟ್ಟ ಸರಸ್ವತಿಯು ಅರೆನಗ್ನಳಾಗಿದ್ದರೂ ಯಾವ ವಿಕಾರ ಭಾವನೆಗೂ ಎಡೆಗೊಡದೆ ಶೃಂಗಾರ ಭಾವದಿಂದ ಕೂಡಿದೆ. ಈ ಚಿತ್ರ ರೇಖಾ ಪ್ರಧಾನವಾಗಿರುವುದರಿಂದ ವರ್ಣಗಳ ಮೇಳದಲ್ಲಿ ಲೋಪವಾಗದ ರೀತಿಯಲ್ಲಿ ರೇಖಾವಿನ್ಯಾಸವಿದೆ. ಎಲ್ಲಿಯೂ ಅಡೆತಡೆಕಾಣದೆ ಒಂದು ರೀತಿಯಲ್ಲಿ ವರ್ಣ ಹಾಗೂ ರೇಖೆಗಳ ಮೇಳ (harmony) ಚಿತ್ರಕ್ಕೆ ಸೊಬಗು ತಂದಿದೆ. ಆಭರಣಗಳನ್ನು ಸಹಿತ ವಿವರವಾಗಿ ಚಿತ್ರಿಸಿದ್ದಾರೆ. ಅಳತೆ ೧೫" x ೧೨" ಚೆಟ್ಟಿಯವರ ಸಂಗ್ರಹ ಇದನ್ನು ೧೯೫೬ ರಲ್ಲಿ ಚಿತ್ರಿಸಲಾಗಿದೆ.

ಚಿತ್ರ ೯ : ನಟರಾಜ : ಇದು ಸಹಿತ ರೇಖಾ ಪ್ರಧಾನವಾದ ಚಿತ್ರ. ಈ ಚಿತ್ರದಲ್ಲಿ ೧೮ ಕೈಗಳ ಶಿವ ವಿವಿಧ ಕೈಗಳ ಮುದ್ರೆಯೊಂದಿಗೆ ನೃತ್ಯವನ್ನು ಮಾಡುತ್ತಿರುವ ಭಂಗಿ ಇದು ಚಿತ್ರದಲ್ಲಿ ಚಲನೆಯನ್ನು ತಂದಿದೆ ಇಲ್ಲಿ ಚಿತ್ರದಲ್ಲಿ ಆಕೃತಿ ಎರಡೇ ಇವೆ. ಒಂದು ಶಿವ ಇನ್ನೊಂದು ಹಿನ್ನೆಲೆಯಲ್ಲಿ ಆತನ ವಾಹನ ಬಸವ. ಶಿವನನ್ನು ಮಧ್ಯದಲ್ಲಿ ಚಿತ್ರಿಸಿರುವುದರಿಂದ ಉಳಿದ ಸುತ್ತಲಿನ ಅವಕಾಶ (space) ವೆಲ್ಲ ಆತನ ಕೈಗಳ ಚಲನವಲನದಿಂದ ತುಂಬಿಕೊಂಡಿದೆ. ಹಿನ್ನೆಲೆಯಲ್ಲಿ ಹಿಮಪರ್ವತ ತೆಳುವಾದ ವರ್ಣ ಮಿತವಾದ ಛಾಯಾಂಕನವಿದೆ. ಆಕೃತಿಗೆ ಚಪ್ಪಟೆಯಾದ ಜಲವರ್ಣ ಬಳಸಿದ್ದರೂ. ಆಕೃತಿಯ ಹೊರ ರೇಖೆಗಳು ಅದಕ್ಕೆ ಪೂರಕ ಎನ್ನುವಂತೆ ಸುಸಂಗತ ರೀತಿಯಲ್ಲಿ ಚಿತ್ರಿತವಾಗಿವೆ. ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲವನ್ನು ವಿವರವಾಗಿ ಚಿತ್ರಿಸಿದ್ದಾರೆ. ರೇಖೆಗಳು ವರ್ಣಗಳನ್ನು ಬೇರ್ಪಡಿಸದೇ ಹೊಂದಿಕೊಂಡಂತೆ ಚಿತ್ರದಲ್ಲಿ ಒಂದು ರೀತಿಯ ವರ್ಣರೇಖೆಗಳ ಸುಂದರವಾದ ಮೇಳ (harmony) ನೋಡುತ್ತೇವೆ.


ಚಿತ್ರ ೧೦ : ಶಿವನ ಶಂಖನಾದ : ಇದು ಸಹಿತ ಜಲವರ್ಣದ ಚಿತ್ರ. ಈ ಚಿತ್ರದಲ್ಲಿಯೂ ರೇಖಾವಿನ್ಯಾಸ ಅದ್ಭುತವಾಗಿದೆ. ಇಲ್ಲಿಯ ರೇಖಾವಿನ್ಯಾಸ ಲಲಿತ ಭಾವನೆಗಳನ್ನು ಪ್ರೇರೆಪಿಸುತ್ತದೆ. ಹೆಚ್ಚಾಗಿ ವಕ್ರರೇಖೆಗಳು. ತರಂಗಿತ ರೇಖೆಗಳ ನಿರೂಪಣೆಯನ್ನು ಇಲ್ಲಿ ಕಾಣುತ್ತೇವೆ. ಶಿವನು ಧರಿಸಿದ ನಾಗಾಭರಣಗಳ ರೇಖೆಗಳೆಲ್ಲ ವರ್ಣಗಳ ಜೊತೆ ಮೇಳವಿಸಿ ನುಣುಪುತನದ ಅನುಭವ ನೀಡುತ್ತವೆ. ತೋಳಲ್ಲಿ ಸುತ್ತಿದ ನಾಗ ಜಾರಿ ಬೀಳುತ್ತದೆಯೋ ಎಂಬ ಅನುಭವ. ಶಿವನ ಆಕೃತಿಗೆ ಸಮ ತೋಲವಾಗಿ ಬಲಗಡೆಯ ಕೆಳಭಾಗದಲ್ಲಿ ನಂದಿಯನ್ನು ರಚಿಸಿದ್ದಾರೆ. ಶಿವನ ಪ್ರತಿಯೊಂದು ಅವಯವ ಕಣ್ಣು. ತುಟಿಯ ರೇಖೆ ಮೊದಲ್ಗೊಂಡು ಲಾಲಿತ್ಯಮಯವಾಗಿ ಚಿತ್ರಿಸಿದ್ದಾರೆ. ಇಡೀ ಚಿತ್ರದಲ್ಲಿ ಎಲ್ಲಿಯೂ ನೇರ ರೇಖೆ ಇಲ್ಲ. ಶಂಖನಾದದ ತರಂಗವನ್ನು ರೇಖೆಯಿಂದಲೇ ಸೆರೆಹಿಡಿದಿದ್ದಾರೆ. ಶಿವನ ಶಾಂತ. ಪ್ರಸನ್ನ ನಗೆಮೊಗದ ಭಾವ ಇಲ್ಲಿ ವ್ಯಕ್ತವಾಗಿದೆ. ಹಿನ್ನೆಲೆ. ಶಿವನ ಮೈವರ್ಣ. ಎತ್ತಿನ ವರ್ಣ ಒಂದೇ ತೆರನಾಗಿದ್ದರೂ ಆಕೃತಿಗಳ ಹೊರ ರೇಖೆಯಿಂದ ಆಕೃತಿಗಳ ನಡುವಿನ ಅವಕಾಶ. ಹಿನ್ನೆಲೆ. ಮುನ್ನೆಲೆಯ. ಪರಿಣಾಮವನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಅಳತೆ ೧೫" x ೧೨"



೮ ಸರಸ್ವತಿ ಬ್ರಹ್ಮ



೯ ನಟರಾಜ



೧೦. ಶಿವನ ಶಂಖನಾದ

ಹೀಗೆ ಚೆಟ್ಟಿಯವರ ರೇಖಾ ವಿನ್ಯಾಸ ವರ್ಣ ಚಿತ್ರ ರಚನೆಯಲ್ಲೂ ಅಷ್ಟೇ ಗಮನಾರ್ಹವಾಗಿದೆ. ಚಿತ್ರಗಳಲ್ಲಿ ರಚಿತವಾಗುವಂಥ ಸರಳ ರೇಖೆಯೇ ಇರಲಿ ವಕ್ರರೇಖೆಯೇ ಇರಲಿ ವರ್ಣಗಳ ಜೊತೆಯಲ್ಲೇ ಪೂರಕವಾಗಿ ಚಿತ್ರಿಸಿದ ರೀತಿ ಅವರ ಸಾಧನೆಯ ಪ್ರತಿಫಲವಾಗಿದೆ. ಸರಳ ಇಲ್ಲವೇ ವಕ್ರ ರೇಖೆಗಳು ಒಂದಕ್ಕೊಂದು ವಿರುದ್ಧವಾಗಿ ಕಾಣಿಸದೆ, ಪೂರಕವಾಗಿರಬೇಕು. ಈ ಕಾರಣದಿಂದ ಚಿತ್ರಕಾರರು ಆಕೃತಿ ನಿರುಪಣೆ (design) ಗೆ ವಿಶೇಷ ಪ್ರಾಧಾನ್ಯ ಕೊಡುತ್ತಾರೆ. ವಿವಿಧ ರೂಪ (form) ಗಳನ್ನು ಸುಸಂಗತವಾಗಿ ನಿರೂಪಿಸುವ ವಿಧಾನವೇ ಚಿತ್ರಕ್ಕೆ ಪುಷ್ಟಿಕೊಡುವ ಗುಣ ಎನ್ನಬಹುದು. ಚೆಟ್ಟಿಯವರ ಜಲವರ್ಣ ಚಿತ್ರಗಳೇ ಆಗಲಿ, ತೈಲವರ್ಣ ಚಿತ್ರಗಳೇ ಆಗಲಿ, ಸ್ವತಂತ್ರ ರೇಖಾ ಚಿತ್ರಗಳೇ ಆಗಲಿ ಅತ್ಯಂತ ಸಮತೋಲನೆಯಾಗಿ ನಿರೂಪಿಸಿದ್ದು, ವಿಕ್ಷಕನ ಮನಸ್ಸನ್ನು ಆಕರ್ಷಿಸುವ ರೀತಿಯಲ್ಲಿ ಚಿತ್ರಿತವಾಗಿವೆ. ಅಲ್ಲದೆ ಶ್ರೀ ಎಮ್. ಆರ್. ಬಾಳಿಕಾಯಿಯವರು ಚೆಟ್ಟಿಯವರ ರೇಖಾವಿನ್ಯಾಸದ ಬಗೆಗಿನ ಅಭಿಪ್ರಾಯ ಹೀಗಿದೆ " ಅವರು ರಚಿಸುವ ರೇಖೆಯಲ್ಲಿ ವೇಗ, ಚಲನೆ, ಜೊತೆಗೆ ಶಕ್ತಿ, ಜೀವ ರೇಖೆಯಲ್ಲಿ ತಂದುಕೊಡ್ತಾ ಇದ್ರು. ಸ್ವತಃ ನಾನೇ ನೋಡಿದ್ದೇನೆ. ವೇಗದ ಕುದುರೆ ಚಿತ್ರಿಸಿದಾಗ ನಿಜವಾಗಿಯೂ ಅದರಲ್ಲಿ ವೇಗ ಇದೆ ಒಂದು ಜೀವ ಇದೆ ಓಡಿ ಹೋಗ್ತಾ ಇದೆಯೇನೋ ಕುದುರೆ ಎನ್ನುವಂತಹ ಭಾವನೆ ಕೂಡ ಆ ರೇಖೆಗಳಲ್ಲಿ ಮೂಡಿಸಿದ್ದಾರೆ. ಆ ವಿಧಾನ ಅತ್ಯಂತ ಪರಿಣಾಮಕಾರಿಯಾದದ್ದು" [೧೧] ಆಗಿದೆ. ಹೀಗೆ ಚೆಟ್ಟಿಯವರ ರೇಖಾ ವಿನ್ಯಾಸವನ್ನು ನೇರವಾದ ರೇಖಾ ಚಿತ್ರಗಳಲ್ಲಿ ಹಾಗೂ ವರ್ಣ ಚಿತ್ರಗಳಲ್ಲೂ ಅಷ್ಟೇ ಸಮತೋಲನವಾಗಿ ಲಯಬದ್ಧವಾಗಿ ಎಲ್ಲ ರಸ, ಭಾವಗಳನ್ನು ಸ್ಫುರಿಸುವ ಚೈತನ್ಯಮಯವಾದ ರೇಖಾ ವಿನ್ಯಾಸದ ಅಭಿವ್ಯಕ್ತಿಯನ್ನು ಕಾಣುತ್ತೇವೆ.

ವರ್ಣಗಾರಿಕೆ :

ಚೆಟ್ಟಿಯವರ ವರ್ಣಗಾರಿಕೆಯು ಅಷ್ಟೇ ಕುತೂಹಲಕಾರಿಯಾದದ್ದು. ಜಲವರ್ಣ, ತೈಲವರ್ಣ ಎರಡರಲ್ಲೂ ಮಹತ್ವದ ಸಾಧನೆಯನ್ನು ಗೈದವರು. ಜಲವರ್ಣವನ್ನು ಬಹಳಷ್ಟು ದುಡಿಸಿಕೊಂಡು ಅನೇಕ ಚಿತ್ರಗಳನ್ನು ರಚಿಸಿದ್ದಾರೆ. ಭಾವಚಿತ್ರಗಳಲ್ಲೇ ಆಗಲಿ, ಜೀವಮಾದರಿ ಚಿತ್ರಗಳಲ್ಲಾಗಲಿ, ನಿಸರ್ಗ ಚಿತ್ರವೇ ಆಗಲಿ, ಸಂಯೋಜನಾ ಚಿತ್ರಗಳಲ್ಲೇ ಆಗಲಿ ಆಯಾ ಗುಣಧರ್ಮಕ್ಕೆ ತಕ್ಕಂತೆ ನೋಡುಗನ ಮನಸ್ಸಿನಲ್ಲಿ ಭಾವನೆಗಳನ್ನು ಉದ್ದೀಪನಗೊಳಿಸುವ ತಂತ್ರಗಾರಿಕೆ ಈ ಚಿತ್ರಗಳ ವರ್ಣಗಳಲ್ಲಿ ನೋಡಬಹುದು.

I) ಜಲವರ್ಣ ಚಿತ್ರಗಳಲ್ಲಿಯ ವರ್ಣಗಾರಿಕೆ :

ಚಿತ್ರ ೧೧ : ಇದೊಂದು ಹೆಣ್ಣುಮಗಳ ಭಾವಚಿತ್ರ ಜಲವರ್ಣ. ಈ ಚಿತ್ರದಲ್ಲಿ ಪ್ರಮುಖ ಬೆಳಕನ್ನು (highlight) ಮೂಗಿನ ತುದಿಯಲ್ಲಿ ನೀಡಿದ್ದು ಬೆಳಕು ಚಿತ್ರದ ಬಲಭಾಗದಿಂದ ಬರುವ ಕಾರಣವಾಗಿ ಎಡಭಾಗದಲ್ಲಿ ಛಾಯೆಯನ್ನು ಚಿತ್ರಿಸಿದ್ದಾರೆ. ಚೆಟ್ಟಿಯವರ ಜಲವರ್ಣದ ಮೇಲಿನ ಹಿಡಿತ ಇಲ್ಲಿ ಮನವರಿಕೆ ಆಗುತ್ತದೆ. ಮುಖದಲ್ಲಿ ಕೆಲವೇ ವರ್ಣಗಳನ್ನು ಬಳಸಿ ಹಣೆಯ ಮೇಲಿನ ನಿರಿಗೆ ಮುಂತಾದ ಚರ್ಮದ ಪರಿಣಾಮದ ಜೊತೆಗೆ ಕಣ್ಣಿನಲ್ಲಿ ಪ್ರಮುಖ ಬೆಳಕು ನೀಡುವುದರೊಂದಿಗೆ ಜೀವಂತಿಕೆಯನ್ನು ಮೂಡಿಸಿದ್ದಾರೆ. ತಲೆಯ ಮೇಲೆ ಹೊದ್ದುಕೊಂಡ ಸೀರೆಯು

---

೧೧. ಎಮ್. ಆರ್. ಬಾಳಿಕಾಯಿ (ಚೆಟ್ಟಿಯವರ ವಿದ್ಯಾರ್ಥಿ) ಅವರೊಂದಿಗಿನ ಸಂದರ್ಶನ : ಧಾರವಾಡ ದಿನಾಂಕ ೨೮-೫-೧೯೯೯

ಮಡಿಕೆಗಳಲ್ಲಿ ಕುಂಚಗಳ ಎಳೆತದಿಂದ ವರ್ಣಛಾಯೆಯನ್ನು ನಿರ್ಮಿಸಿ ಹತ್ತಿಯ ಸೀರೆಯ ಪರಿಣಾಮ ಚಿತ್ರಿಸಿದ್ದಾರೆ. ಮುಖದಲ್ಲಿ ಕುಂಚಗಳ ಎಳೆತಗಳಿಲ್ಲದೆ ವರ್ಣಗಳ ಬೆರಕೆಯನ್ನು ಕಾಣುತ್ತೇವೆ. ಆಭರಣಗಳನ್ನು ಸಹಿತ ಸಂಕ್ಷಿಪ್ತವಾಗಿ ಚಿತ್ರಿಸುವುದರ ಮೂಲಕ ಅವುಗಳ ಮೂಲ ಗುಣ ಆಕಾರ ನಿಖರವಾಗಿ ಮೂಡಿಬಂದಿವೆ. ಭಾವ ಚಿತ್ರದಲ್ಲಿ ಮೇಳವಿಸಿದಂತ ಪ್ರತಿಯೊಂದು ವಸ್ತುವಿನ ಕುಂಚದ ಎಳೆತಗಳು ಅವುಗಳ ಇರುವಿಕೆಗೆ ಅನುಗುಣವಾಗಿ ಚಿತ್ರಿಸಿ ಒಟ್ಟಾರೆ ಪರಿಣಾಮವನ್ನು ತಂದಿದ್ದಾರೆ. ಹಿನ್ನೆಲೆ ಕಡುಪಾದ. ಕಂದುಬಣ್ಣದ ಮುನ್ನೆಲೆಗೆ ತಕ್ಕಂತೆ ತೆಳು ನೀಲಿ ಹಾಗೂ ಹಳದಿಮಿಶ್ರಿತ ವರ್ಣಗಳನ್ನು ಲೇಪಿಸಿದ್ದಾರೆ.

ಚಿತ್ರ ೧೨ : ಇದೊಂದು ಕುಳಿತ ಪುರುಷನ ಜೀವಮಾದರಿ ಚಿತ್ರವಾಗಿದೆ. ರೂಪದರ್ಶಿಯನ್ನು ಬಳಸಿಕೊಂಡು ಚಿತ್ರಿಸಿದ ಚಿತ್ರ ಇದಾಗಿದೆ. ಇಂತಹ ಚಿತ್ರಗಳಲ್ಲಿ ಕುಂಚಗಳ ಎಳೆತಗಳನ್ನು ಬಣ್ಣಗಳ ಹಿಡಿತ ಒಂದರ ಪಕ್ಕದಲ್ಲಿ ಇನ್ನೊಂದು ವರ್ಣವನ್ನಿರಿಸಿ ಪರಿಣಾಮವನ್ನು ನಿರ್ಮಿಸಿರುವುದನ್ನು ಕಾಣುತ್ತೇವೆ. ಆದರೆ ಛಾಯ ಚಿತ್ರದ ಆಧಾರದಿಂದ ಚಿತ್ರಿಸಿದ ಕಲಾಕೃತಿಗಳಲ್ಲಿ ಬಣ್ಣಗಳ ಬೆರಿಕೆ ಹಾಗೂ ಕುಂಚದ ಮೃದು ಚಲನೆಯನ್ನು ಕಾಣುತ್ತೇವೆ. ಈ ಚಿತ್ರದಲ್ಲಿ ಬೆಳಕು ಚಿತ್ರದ ಬಲಭಾಗದಿಂದ ಬಂದಿರುವುದರಿಂದ ಎಡಭಾಗದಲ್ಲಿ ನೆರಳನ್ನು ಚಿತ್ರಿಸಿದ್ದಾರೆ. ಇದರಿಂದ ತ್ರಿಮಾನದ ಕಲ್ಪನೆ ಕೊಡಲು ಸಾಧ್ಯ. ಮುಖದ ಮೇಲಿನ ವಯಸ್ಸನ್ನು ಸೂಚಿಸುವ ನೆರಿಗೆಗಳ ಜೊತೆಗೆ. ಚರ್ಮದ ಪರಿಣಾಮವಿದೆ. ಮೂಗಿನ ಮೇಲೆ ಪ್ರಮುಖ ಬೆಳಕು. ಬಿಳಿಯಮೀಸೆ. ಕಣ್ಣಿನಲ್ಲಿ ಜೀವಂತಿಕೆ ತಲೆಯ ಮೇಲಿನ ಹಳದಿಬಣ್ಣದ ರುಮಾಲು ನುಣುಪು ಮೈವಳಿಕೆಯೆಂಬುದು ವರ್ಣಗಳಿಂದ ಪರಿಣಾಮ ಕಾರಿಯಾಗಿ ಅನುಭವಕ್ಕೆ ಬರುತ್ತದೆ. ಅದರಲ್ಲಿ ವಿಂಗಡಿಸಿದ ಬೆಳಕು. ನೆರಳು ಕುಂಚದ ಎಳೆತ ಆ ಬಟ್ಟೆಯ ಮೈವಳಿಕೆಯನ್ನು ಸ್ಪಷ್ಟವಾಗಿ ಅನುಭವಕ್ಕೆ ತರುತ್ತವೆ. ಮುಖದಲ್ಲಿಯ ಉಬ್ಬುತಗ್ಗುಗಳಿಗೆ ಅನುಸಾರವಾಗಿ ವರ್ಣದ ಲೇಪನೆ ಅವರ ಶರಿರ ಅಂಗರಚನೆಯ (Anatomy) ಸಾಧನೆಯನ್ನು ಎತ್ತಿ ತೋರಿಸುತ್ತದೆ. ಮೈಮೇಲಿನ ಬಿಳಿಯ ಜುಬ್ಬ (ಅಂಗಿ)ದ ಛಾಯೆಯನ್ನು ಗೋಪಿ (yellowochre) ಹಾಗೂ ನಿಲುವರ್ಣದ ಕುಂಚದ ಎಳೆತಗಳಿಂದ ತೋರಿಸುವದರೊಂದಿಗೆ ಅದರ ಮಡಿಕೆಗಳ ಅನುಭವವನ್ನು ನೀಡಿದ್ದಾರೆ.

ಯಾವುದೇ ಚಿತ್ರವನ್ನು ಚಿತ್ರಿಸಬೇಕಾದರೂ ಚಿತ್ರದಲ್ಲಿ ಬೆಳಕು ಅವಶ್ಯ. ಬೆಳಕಿನಿಂದಲೇ ನಮಗೆ ವಸ್ತುಗಳ ಬಣ್ಣಗಳು ಅದರಿಂದ ಅವುಗಳ ರೂಪವನ್ನು ಗುರುತಿಸಲು ಸಾಧ್ಯ. ಭಾವ ಚಿತ್ರ. ಜೀವಮಾದರಿ. ನಿಸರ್ಗ ಚಿತ್ರಗಳಲ್ಲಂತೂ ಬೆಳಕು ಅವಶ್ಯ ಬೇಕೆಬೇಕು. ಅಲ್ಲದೆ ವಿವಿಧ ರೀತಿಯ ಗುಣಧರ್ಮದ ವಸ್ತುಗಳು ವಿವಿಧ ರೀತಿಯಲ್ಲಿ ಪ್ರಕಾಶವನ್ನು ಹೊರಚೆಲ್ಲುವುದರಿಂದ ಅಲ್ಲಿ ಕಲಾವಿದನು ವಿವಿಧ ವರ್ಣ ಛಾಯೆಯನ್ನು ರೂಪಿಸುವುದರ ಜೊತೆಗೆ ಅವುಗಳ ಮೈವಳಿಕೆಯನ್ನು ತನ್ನ ಕೌಶಲ್ಯ ಪೂರ್ಣವಾದ ಕುಂಚಗಳ ಎಳೆತದಿಂದ ಬಣ್ಣಗಳ ಬೆರಿಕೆಯಿಂದ ತೋರಿಸಬಹುದಾಗಿದೆ. ಬೆಳಕಿನಿಂದಲೇ ವಸ್ತುಗಳ ದೂರ ಸಮೀಪ. ಅವಕಾಶದ ಕಲ್ಪನೆಯನ್ನು ತರಲು ಸಾಧ್ಯ. ಅಂತೆಯೇ ಬೆಟ್ಟಿಯವರು ಸಹಿತ ವಸ್ತುಗಳಲ್ಲಿ ಹೊಮ್ಮುವ ಪ್ರಮುಖ ಬೆಳಕನ್ನು ಅತ್ಯಂತ ನಿಖರವಾಗಿ

ಗುರುತಿಸುವುದರೊಂದಿಗೆ ಅದರ ಜೀವಂತಿಕೆಯನ್ನು ಚಿತ್ರದಲ್ಲಿ ಸೆರೆಹಿಡಿಯುತ್ತಿದ್ದರು. ಹಾಗೂ ತಾದ್ರೂಪ್ಯತೆಯನ್ನು ತಂದುಕೊಡುತ್ತಿದ್ದರು. " ಅವರು ಚಿತ್ರ ತೆಗೆದುಕೊಡುವುದಿದ್ದರೆ ಹಗಲು ರಾತ್ರಿ ಆ ಚಿತ್ರ ಮಾಡ್ತಾ ಇದ್ದರು. ಅಲ್ಲದೆ ಚಿತ್ರ ಕೊನೆಗೊಳಿಸುವ ಸಂದರ್ಭದಲ್ಲಿ ಪ್ರಮುಖ ಬೆಳಕು (highlight) ಎಲ್ಲಿ ಕೊಡಬೇಕೋ ಅಲ್ಲಿಯೇ ನೇರವಾಗಿ ಕೈ ಹೋಗುತ್ತಿದ್ದವು. ಅಷ್ಟು ಅವರು ಚಿತ್ರ ಕಲೆಯಲ್ಲಿ ಪ್ರಭುತ್ವ ಪಡೆದಿದ್ದರು. ಕಲೆಯ ಮೂಲಕವೇ ಏಕಾಗ್ರತೆ ಸಾಧ್ಯ"[೧೨] ಎಂದು ತೋರಿಸಿಕೊಟ್ಟಿದ್ದಾರೆ. ಆಗಿನ ಅವರ ಕಾಲದಲ್ಲಿ ತಾದ್ರೂಪ್ಯತೆಯನ್ನು ಜನ ಬಯಸುತ್ತಿದ್ದರು. ಅಲ್ಲದೆ ಆಗ ಬಣ್ಣದ ಛಾಯಾ ಚಿತ್ರಗಳಿರಲಿಲ್ಲ. ಕಲಾವಿದರಿಂದಲೇ ಭಾವಚಿತ್ರಗಳನ್ನು ಬರೆಸಿಕೊಳ್ಳುವ ಪರಂಪರೆ ಇತ್ತು.

ಇನ್ನೂ ನಿಸರ್ಗ ಚಿತ್ರದಲ್ಲಿ ಜಲವರ್ಣಗಾರಿಕೆಯ ಬಗೆಯನ್ನು ಇಲ್ಲಿ ಗುರುತಿಸಬಹುದಾಗಿದೆ. ಜಲವರ್ಣಗಾರಿಕೆ ಬಹಳ ಕಷ್ಟದ ಕೆಲಸ ಅದರಲ್ಲೂ ಮುಖ್ಯವಾಗಿ ಪಾರದರ್ಶಕ ಜಲವರ್ಣ. ಇದನ್ನು ದುಡಿಸಿಕೊಳ್ಳುವ ಕಲಾವಿದನಿಗೆ ಅದರ ಮೇಲೆ ಪ್ರಭುತ್ವ ಸಾಧಿಸಿದಾಗ ಮಾತ್ರ ಚಿತ್ರಿಸಲು ಸಾಧ್ಯ ಇಲ್ಲದಿದ್ದರೆ ಜಲವರ್ಣ ಎಲ್ಲೆಂದರಲ್ಲಿ ಹರಿದು ಹೋಗುತ್ತದೆ. ಆ ತಂತ್ರದ ಆಳವಾದ ಜ್ಞಾನದಿಂದ ಉತ್ತಮ ಕೃತಿ ರಚಿಸಲು ಸಾಧ್ಯ ಅಂತೆಯೇ ಚಿಟ್ಟಿಯವರು ಜಲವರ್ಣದ ಪ್ರತಿಯೊಂದು ವರ್ಣಛಾಯೆ (hue) ಗಳ ಮೇಲೆ ಪ್ರಭುತ್ವ ಸಾದಿಸಿದ್ದಾರೆಂಬುದಕ್ಕೆ ಅವರ ಈ ಕೃತಿಗಳೇ ಸಾಕ್ಷಿ. ವರ್ಣಗಾರಿಕೆಯ ದೃಷ್ಟಿಯಿಂದ ಕೆಲವು ಕೃತಿಗಳನ್ನು ಮಾತ್ರ ಇಲ್ಲಿ ಚರ್ಚಿಸಲಾಗಿದೆ. ಅವರು ವಿದ್ಯಾರ್ಥಿದೆಸೆಯಲ್ಲಿದ್ದಾಗ ರಚಿಸಿದ ಉದಯಪುರದ ನಿಸರ್ಗ ಚಿತ್ರ. ಮುಂಬೈಯ ವ್ಹಿ. ಟಿ. ಸ್ಟೇಶನ್‌ದ ಚಿತ್ರ ಇದನ್ನು ಎತ್ತರದ ಮಹಡಿಯ ಮೇಲೆ ಕುಳಿತು ಚಿತ್ರಿಸಿದ್ದಾರೆ. ಗುಲ್ಬರ್ಗಾದ ಮಸೀದಿಯ ಭೂದೃಶ್ಯ ಇತ್ಯಾದಿ.

ಚಿತ್ರ ೧೩ : ಉದಯಪುರದ ಅರಮನೆಯ ಮುಂದಿನ ಚಿತ್ರ. ಅತ್ಯಂತ ವಿವರವಾಗಿ ಇದನ್ನು ಚಿತ್ರಿಸಿದ್ದಾರೆ. ಇಲ್ಲಿ ಚಿತ್ರದ ೧/೪ ಅಂಶ ಭಾಗ ಆಕಾಶವಿದ್ದು ೩/೪ ಅಂಶ ಭಾಗ ಭೂಮಿ ಹಾಗೂ ಅದರ ಮುಂದಿನ ನೀರಿನ ಭಾಗವನ್ನು ನೋಡಬಹುದು. ಇದರಲ್ಲಿ ಜೆ. ಜೆ. ಕಲಾ ಶಾಲೆಯ ಪ್ರಭಾವವನ್ನು ಚೆನ್ನಾಗಿ ಗುರುತಿಸಬಹುದು. ತಾದ್ರೂಪ್ಯತೆ ಇದೆ. ಆಕಾಶದಲ್ಲಿಯ ನೀಲಿ ವರ್ಣ ಅದರ ಛಾಯೆ ನೈಜತೆಯಿಂದ ಕೂಡಿವೆ. ನಂತರದ ಅರಮನೆಯ ಗೋಡೆಯ ನೆರಳು ಬೆಳಕಿನ ಛಾಯಾಂಕನ ಅದರ ಮುಂದಿನ ಮರಗಳಲ್ಲಿ ತೆಳುಹಸಿರು. ಕಪ್ಪುಹಸಿರಿನ ವರ್ಣದ ಮರಗಳು ನಂತರ ನೀರಿನಲ್ಲಿ ಮಾತ್ರ ಆಕಾಶದ ನೀಲಿ. ಗಿಡಗಳ ಹಸಿರು. ಕಟ್ಟಡದ ತೆಳು ಹಳದಿ ವರ್ಣ ಪ್ರತಿಬಿಂಬವನ್ನು ತೇಲಿಸಿದಂತೆ ಕುಂಚದ ಎಳೆತದಿಂದ ವರ್ಣಬಳಸಿರುವುದರಿಂದ ಚಿತ್ರದಲ್ಲಿ ಚಲನೆಯ ಭಾವನೆ ಇದೆ. ಯಾವ ರೀತಿ ಇಂಗ್ಲಂಡಿನ ಟರ್ನರ ಕಲಾವಿದ ತನ್ನ ನಿಸರ್ಗ ಚಿತ್ರಗಳಲ್ಲಿ ಜಡ ವಸ್ತುಗಳಿಗೂ ಚೈತನ್ಯ ತುಂಬುತ್ತಿದ್ದನೋ ಅದೇ ರೀತಿಯ ಪರಿಣಾಮ ಇಲ್ಲಿ ಇದೆ. ಬೆಳಕಿಗೆ ಹೊಳೆಯುವ ನೀರಿನ ಪ್ರಕಾಶವನ್ನು ಅದರಲ್ಲಿ ಚಿತ್ರಿಸಿರುವುದು ಅಗಾಧ. ಈ ಚಿತ್ರಗಳಲ್ಲಿ ಸೌಮ್ಯವರ್ಣಗಳೇ ಹೆಚ್ಚಿರುವುದರಿಂದ ಸೌಮ್ಯ. ಶೀತಲ ವಾತಾವರಣ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

---

೧೨. ಬಸವರಾಜ ಚಿಟ್ಟಿ ಯವರ ಸಂದರ್ಶನ. ದಿನಾಂಕ ೬-೮-೨೦೦೦. ವಿಜಾಪುರ

ಚಿತ್ರ ೧೪ : ಮುಂಬೈನ ವ್ಹಿ. ಟಿ. ಸ್ಟೇಶನ್‌ದ ಚಿತ್ರ ಇದನ್ನು "ಐದನೇ ಅಂತಸ್ತಿನ ಮೇಲೆ ಕುಳಿತು ಚಿತ್ರಿಸಿದ್ದು"[೧೩] ಜಲವರ್ಣ ಈ ಚಿತ್ರದಲ್ಲಿ ಆಕಾಶದ ಮೋಡಗಳನ್ನು ಪರಿಣಾಮಕಾರಿಯಾಗಿ ನೈಜವಾಗಿ ಬರುವಂತೆ ನೀಲಿ ಹಳದಿ ಸ್ವಲ್ಪ ಕೆಂಪು ವರ್ಣವನ್ನು ಮಿಶ್ರಣಮಾಡಿ ಆ ಪರಿಣಾಮವನ್ನು ತಂದಿದ್ದಾರೆ. ಬ್ರಿಟೀಷ ಶೈಲಿಯ ಕಟ್ಟಡವು ಸಹಿತ ಅಷ್ಟೇ ವಿವರ ಪೂರ್ಣವಾಗಿ ಮೂಡಿಬಂದಿದೆ. ಅದರಲ್ಲಿ ಗೋಪಿ (yellowochre) ವರ್ಣವನ್ನು ನೆರಳಿನ ಛಾಯೆಯಲ್ಲಿ ನೀಲಿ ವರ್ಣವನ್ನು ಬಳಸಿದ್ದಾರೆ. ಕೆಳಗಡೆ ಬಸ್ಸುಗಳ ಓಡಾಟವನ್ನು ಕೆಂಪುವರ್ಣ ಹಾಗೂ ಜನಸಂದಣಿಯನ್ನು ಬಿಳಿವರ್ಣದಿಂದ ಚಿತ್ರಿಸಿ ಚಿತ್ರದಲ್ಲಿ ಚಲನೆಯನ್ನು ಮೂಡಿಸಿದ್ದಾರೆ. ಚಿತ್ರದಲ್ಲಿ ದೃಶ್ಯಂತರವಿದೆ. ಇಲ್ಲಿ ವರ್ಣದಿಂದಲೇ ದೃಶ್ಯಾಂತರವನ್ನು ತೋರಿಸಿದ್ದಾರೆ. ಕೆಂಪುವರ್ಣ ಪ್ರಖರವಾಗಿದ್ದು ಮುಂದೆ ಬಂದಂತೆ ಸಮೀಪವನ್ನು. ನೀಲಿವರ್ಣ ಸೌಮ್ಯವರ್ಣವಾಗಿದ್ದು ಅದನ್ನು ಹಿನ್ನೆಲೆಯಲ್ಲಿ ಬಳಸಿದ್ದರಿಂದ ದೂರದ ಅನುಭವವನ್ನು ನೀಡುತ್ತದೆ.

ವಿದ್ಯಾರ್ಥಿ ದೆಸೆಯಲ್ಲಿ ಚಿತ್ರಿಸಿದ ಈ ಚಿತ್ರಗಳಲ್ಲಿ ವಿವರಣೆ ಬಹಳಷ್ಟಿದ್ದು ಅಭ್ಯಾಸಿಕ (studied) ರೀತಿಯಲ್ಲಿ ಚಿತ್ರಿಸಿದಂತೆ ಕಾಣುತ್ತವೆ. ತದ ನಂತರದ ಅವರ ನಿಸರ್ಗ ಚಿತ್ರಗಳಲ್ಲಿ ವರ್ಣಗಳನ್ನು ಬೋಲ್ಡ ಆಗಿ ಲೇಪಿಸಿರುವುದನ್ನು ಕಾಣುತ್ತೇವೆ. ಅಂತಹ ಕುಂಚದ ಎಳೆತವನ್ನು ಈ ಮುಂದಿನ ಒಂದು ಚಿತ್ರದಲ್ಲಿ ಕಾಣಬಹುದು.

ಚಿತ್ರ ೧೫ : ಗುಲ್ಬರ್ಗಾದ ಬಂದೇನವಾಜ ಮಸೀದಿಯ ಒಳಾಂಗಣದ ದೃಶ್ಯ ಇದಾಗಿದೆ. ಭವ್ಯವಾದ ಕಟ್ಟಡವನ್ನು ಅತ್ಯಂತ ಸಮೀಪದಿಂದ ಚಿತ್ರಿಸಿದ್ದರಿಂದ ಕಟ್ಟಡದ ಆಕೃತಿ ಸ್ಪಷ್ಟವಾಗಿ ಗೋಚರವಾಗಿದೆ. ನಿಸರ್ಗ ಚಿತ್ರರಚಿಸುವಾಗ ಎದುರಿಗಿನ ದೃಶ್ಯವನ್ನು ಅವಕಾಶ (space) ದಲ್ಲಿ ಸಂಯೋಜಿಸುವುದು ಸಹಿತ ಅಷ್ಟೇ ಜಾಣತನ ಕಲಾವಿದನಲ್ಲಿ ಇರಬೇಕಾಗುತ್ತದೆ. ಅಂತೆಯೇ ಚೆಟ್ಟಿಯವರು ಈ ಚಿತ್ರದಲ್ಲಿ ಪಾರ್ಶ್ವ ಹಾಗೂ ಎದುರಿಗಿನ ಭಾಗವನ್ನು ಮಾತ್ರ ಅವಕಾಶದಲ್ಲಿ ಸಂಯೋಜಿಸಿದ್ದು. ಪಾರ್ಶ್ವ ಕಟ್ಟಡದ ಗೋಡೆಯ ಮೇಲೆ ಬಿದ್ದಂಥ ಬೆಳಕನ್ನು ಹಾಗೆ ಬಿಟ್ಟು ಉಳಿದ ಭಾಗದಲ್ಲಿ ವರ್ಣಛಾಯೆಯಿಂದ ಗೋಡೆಯ ಮೈವಳಿಕೆಯ ಅನುಭವವನ್ನು ನೀಡುವಂತೆ ಚಿತ್ರಿಸಿದ್ದಾರೆ. ಆಕಾಶದ ನೀಲಿ ಹಿನ್ನೆಲೆಯ ಅನುಭವ ನೀಡಿದರೆ. ದೊಡ್ಡದಾದ ಗಿಡದ ನೆರಳು ಕಟ್ಟಡದ ಮೇಲೆ ನೆಲದ ಮೇಲೆ ಚೆಲ್ಲಿದಂತೆ ಚಿತ್ರಿಸಿದ್ದಾರೆ. ಆ ನೆರಳಿನಲ್ಲಿ ಕುಳಿತ ನಿಂತ ಆಕೃತಿಗಳಿಗೂ ಬೋಲ್ಡಆಗಿ ವರ್ಣ ಲೇಪನ ಮಾಡಿದ್ದಾರೆ. ಈ ಚಿತ್ರದಲ್ಲಿ ಚೆಟ್ಟಿಯವರದೇ ಆದ ವರ್ಣಲೇಪನದ ಕುಂಚಗಳ ಎಳೆತ ಶೈಲಿ ನೋಡಬಹುದು ಇಲ್ಲಿ ಅವರ ಸ್ವತಂತ್ರ ವರ್ಣ ಶೈಲಿ ಮೂಡಿಬಂದಿದೆ. ಇಷ್ಟೊಂದು ಪ್ರಮಾಣದಲ್ಲಿ ಬೋಲ್ಡ ಆಗಿ ವರ್ಣಲೇಪನ ಮಾಡಿ ನೈಜದ ಪರಿಣಾಮ ತರುವಲ್ಲಿ ಅವರ ಹಿಂದಿನ ಸಾಧನೆಯ ಆಳವಾದ ಅರಿವಾಗುತ್ತದೆ. ಇದೊಂದು ಅತ್ಯುತ್ತಮ ಜಲವರ್ಣ ಭೂದೃಶ್ಯವಾಗಿದೆ. ಇದು ಕರ್ನಾಟಕ ಲಲಿತಕಲಾ ಅಕಾಡೆಮಿಯ ಸಂಗ್ರಹದಲ್ಲಿದೆ.

ಇನ್ನು ಅವರ ಸಂಯೋಜನಾ ಚಿತ್ರಗಳು ಮೂರು ಹಂತದಲ್ಲಿ ಅವರ ವರ್ಣಗಾರಿಕೆಯನ್ನು ನೋಡಬಹುದಾಗಿದೆ. ಮೊದಲನೆಯದಾಗಿ ಅವರು ಜೆ. ಜೆ. ಕಲಾ ಶಾಲೆಯಿಂದ ಬಂದನಂತರ ನೇರವಾಗಿ ಮಠಮಾನ್ಯಗಳ ಚಿತ್ರಗಳ ರಚನೆಯಲ್ಲಿ ತೊಡಗಿದ್ದಾಗ ಅನೇಕ ಜಲವರ್ಣದ ಚಿತ್ರಗಳನ್ನು ಪುರಾಣ ಗ್ರಂಥಗಳಿಗಾಗಿ

---

೧೩. ಕೆ. ವಿ. ಕುಂದಗೋಳ (ಚೆಟ್ಟಿಯವರ ವಿದ್ಯಾರ್ಥಿ) ಸಂದರ್ಶಿಸಿದ್ದು. ದಿನಾಂಕ ೧೫-೨-೧೯೯೯. ಗದಗ

ರಚಿಸಿಕೊಟ್ಟಿದ್ದಾರೆ. ಅಂಥವುಗಳಲ್ಲಿ ಅವರ ಜೆ. ಜೆ. ಕಲಾಶಾಲೆಯ ಪ್ರಭಾವದ ವರ್ಣಗಾರಿಕೆಯನ್ನು ಮೊದ ಮೊದಲ ಗ್ರಂಥಗಳಲ್ಲಿ ಚಿತ್ರಿಸಿಕೊಟ್ಟ ಚಿತ್ರಗಳಲ್ಲಿ ಕಾಣುತ್ತೇವೆ. ಆಗಿನ್ನೂ ಶೈಕ್ಷಣಿಕ ಪ್ರವಾಸ ಮಾಡಿದ ಅಜಂತಾ ಮುಂತಾದ ಕಡೆಗಳಲ್ಲಿಯ ಅಭ್ಯಾಸದ ಛಾಯೆಯನ್ನು ಈ ಚಿತ್ರಗಳಲ್ಲಿ ಕಾಣುತ್ತೇವೆ.

ಚಿತ್ರ ೧೬ : ಚೆನ್ನಬಸವ ಪುರಾಣ ೧೯೩೪ ರಲ್ಲಿ ಪ್ರಕಟಿಸಲ್ಪಟ್ಟಿದೆ. ಇದರಲ್ಲಿ "ಚೆನ್ನಬಸವೇಶನ ಪುಷ್ಪಕೋತ್ಸವ" [೧೪] ಜಲವರ್ಣ. ಈ ಚಿತ್ರದಲ್ಲಿ ವರ್ಣಗಳ ಜೊತೆಗೆ ಆಕೃತಿ (form) ಗಳ ಮೇಳವು ಅದ್ಭುತವಾಗಿದೆ. ಅರಮನೆಯ ಹೊರಗಿನ ದೃಶ್ಯ. ಉತ್ಸವವು ತಿರುಗಿ ಅರಮನೆಯ ಒಳಗೆ ಪ್ರವೇಶಿಸುತ್ತಿರುವಂತಿದೆ. ಅನೇಕ ಆಕೃತಿಗಳನ್ನು ಇಲ್ಲಿ ಚಿತ್ರಿಸಿದ್ದರೂ ಬೇರೆ ಬೇರೆ ವರ್ಣಗಳಿಂದ, ವರ್ಣಛಾಯೆ (hue) ಯಿಂದ ಪ್ರತಿಯೊಂದು ಆಕೃತಿಯನ್ನು ಗುರ್ತಿಸಬಹುದಾಗಿದೆ. ಈ ಚಿತ್ರದಲ್ಲಿ ಅಜಂತ ಭಿತ್ತಿಚಿತ್ರದ ವರ್ಣಗಳ ಪ್ರಭಾವವಿದ್ದುದರಿಂದ ಇದೊಂದು ಭಿತ್ತಿ ಚಿತ್ರದಂತೆ ಭಾಸವಾಗುತ್ತದೆ. ಆವ್ಯಕ್ತಿಗಳ ಬಟ್ಟೆಗಳಿಗೆ ಬಳಸಿದ ಬಣ್ಣವು ಸಹಿತ ಅವರ ವ್ಯಕ್ತಿತ್ವವನ್ನು ಸೂಚಿಸುವಂತಿವೆ. ಬಸವಣ್ಣ, ಅಕ್ಕನಾಗಮ್ಮನವರ ಪ್ರಕಾಶಮಾನವಾದ ಬಣ್ಣಗಳು ಅವರ ಜ್ಞಾನ ಹಾಗೂ ಸಾತ್ವಿಕ ಗುಣಗಳನ್ನು ವ್ಯಕ್ತಪಡಿಸುತ್ತವೆ. ವಾದ್ಯ ನುಡಿಸುವವರ ಆಕೃತಿಗಳ ವೇಷ ಭೂಷಣವಂತೂ ಅಜಂತೆಯ ಮಾದರಿಯವಾಗಿವೆ. ಆಕೃತಿಗಳ ಮುಖ ಚಹರೆಯಲ್ಲಿ ಚೆಟ್ಟಿಯವರ ವಿಶೇಷವೆನಿಸುವ ಆ ವ್ಯಕ್ತಿಗಳದೇ ಆದ ತಾದ್ರೂಪ್ಯತೆಯನ್ನು ಚಿತ್ರಿಸುವ ರೀತಿಯನ್ನು ಕಾಣುತ್ತೇವೆ.

ಉತ್ಸವದ ಮುಂದಿರುವ ಜನರ ಗುಂಪನ್ನು ಒಂದೇ ವರ್ಣದಲ್ಲಿ ಚಿತ್ರಿಸಿದ್ದರೆ ಪುಷ್ಪದ ಪಲ್ಲಕ್ಕಿಯ ಸುತ್ತಲೂ ಇರುವ ಗುಂಪನ್ನು ಬೇರೆ ಬೇರೆ ವರ್ಣಗಳಿಂದ ಚಿತ್ರಿಸಿದ್ದಾರೆ. ಹಳದಿ, ಕಂದು, ಕಡುನೀಲಿ, ಪಾಚಿಹಸಿರು ಮುಂತಾದ ವರ್ಣಮೇಳದಿಂದ ನಮ್ಮ ದೃಷ್ಟಿ ಮೊದಲಿಗೆ ಪುಷ್ಪಕೋತ್ಸವದ ಕೇಂದ್ರವಾದ ಮಗುವಿನ ಮೇಲೆ ನೆಟ್ಟು ಕೊನೆಗೆ ಕೋಟೆಯ ಒಳಗಡೆಯ ಅರಮನೆಯ ಕಡೆ ಹೋಗುತ್ತದೆ. ವರ್ಣಗಳಲ್ಲಿಯೂ ಚಲನೆಯನ್ನು ಕಾಣುತ್ತೇವೆ. ಆ ವರ್ಣಗಳಿಗೆ ಬಾಧೆ ಬರದಂತೆ ಅದರಲ್ಲಿಯ ನಕ್ಷೆಗಳನ್ನು ಚಿತ್ರಿಸಿದ್ದಾರೆ. ಚಿತ್ರದ ಬಲಗೋಡೆಯ ಮೂಲೆಯಲ್ಲಿ ಕಡಪುಬಣ್ಣಗಳಿಂದ ವಸ್ತುಗಳನ್ನು ಚಿತ್ರಿಸಿ ಅಲ್ಲಿ ನೆರಳಿನ ಅನುಭವವನ್ನು ನೀಡುತ್ತಾರಲ್ಲದೆ ಬಣ್ಣಗಳಿಂದಲೇ ಹಿಂದು ಮುಂದುಗಳನ್ನು ಸೃಷ್ಟಿಸಿದ್ದಾರೆ.

ಎರಡನೆಯ ಹಂತದಲ್ಲಿ ಹಿನ್ನೆಲೆಯನ್ನೇ ಛಾಯಾಂಕನದಲ್ಲಿ ಬಳಸಿಕೊಂಡ ರೀತಿಯನ್ನು ಕಾಣುತ್ತೇವೆ.

ಚಿತ್ರ ೧೭ : ಶ್ರೀ ಅಪರಾಧಿ ಫಲಾಹಾರೇಶ್ವರ ಪುರಾಣಗ್ರಂಥಕ್ಕೆ ರಚಿಸಿಕೊಟ್ಟ ಚಿತ್ರ ೧೯೫೧ ರಲ್ಲಿ ಚಿತ್ರರಚಿಸಿಕೊಟ್ಟಿದ್ದಾರೆ. ಜಲವರ್ಣ "ಶ್ರೀ ಫಲಾಹಾರೇಶನು ಚಂದ್ರಗಿರಿಯ ಸಮೀಪದ ಪರ್ವತದಲ್ಲಿ ಲಿಂಗಾನುಷ್ಠಾನಕ್ಕೆ ಕುಳಿತಾಗ ಉದುಪುಡಿಯ ರಾಣಿಯು ಆತನ ಕಂಟಲಿ ಬಸವನ ಸೇವೆಯನ್ನು ಮಾಡಿ ಕೃತಾರ್ಥಳಾದುದು" [೧೫]

---

೧೪. ವೀರಭದ್ರಪ್ಪ ಹಾಲಭಾವಿ (ಸಂ.) : ವಿರೂಪಾಕ್ಷ ಪಂಡಿತ ವಿರಚಿತ : ಚೆನ್ನಬಸವ ಪುರಾಣ : ಪುಟ ೬೦

೧೫. ಪಂ. ವೈ ನಾಗೇಶ ಶಾಸ್ತ್ರಿಗಳು : ಶ್ರೀ ಫಲಾಹಾರ ಶಿವಯೋಗೀಶ್ವರ ಪುರಾಣವು : ಪುಟ ೧೭೯

ಈ ಚಿತ್ರವು ತಂತ್ರದ ದೃಷ್ಟಿಯಿಂದ ವೈಶಿಷ್ಟ್ಯವಾಗಿದೆ. ಇಲ್ಲಿ ಚಿಟ್ಟಿಯವರು ಹಿನ್ನೆಲೆಯಾಗಿ ಬಳಸಿದ ಕಾಗದದ ವರ್ಣವನ್ನೇ ನೇರವಾಗಿ ಛಾಯಾಂಕನದಲ್ಲಿ ಬಳಸಿಕೊಂಡಿದ್ದಾರೆ. ಈ ಚಿತ್ರದಲ್ಲಿ ನೀಲವರ್ಣವನ್ನು ಬಿಳಿವರ್ಣವನ್ನು ಬಿಟ್ಟರೆ ಬೇರಾವ ಬಣ್ಣಗಳನ್ನು ಬಳಸಿರುವದಿಲ್ಲ. ಹಿನ್ನೆಲೆಯಾದ ತೆಳು ಕಂದು ಬಣ್ಣವನ್ನೇ ಛಾಯಾಂಕನವಾಗಿ ಬಳಸಿಕೊಂಡಿದ್ದಾರೆ. ಇಂತಹ ಬದಲಾವಣೆಗಳನ್ನು ಇಲ್ಲಿ ಕಾಣುತ್ತೇವೆ. ಈ ಗ್ರಂಥಕ್ಕಾಗಿ ಚಿತ್ರಿಸಿದ ಎಲ್ಲಾ ಚಿತ್ರಗಳಲ್ಲೂ ಇದೇ ರೀತಿಯ ವರ್ಣಪ್ರಯೋಗ ಮಾಡಿದ್ದಾರೆ. ಚಿತ್ರದಲ್ಲಿ ದೃಶ್ಯಾಂತರವಿದೆ. ದೊಡ್ಡ ದೊಡ್ಡ ಮರಗಳು ಅವುಗಳನ್ನು ಸಹಿತ ನೀಲವರ್ಣದಲ್ಲೇ ಚಿತ್ರಿಸಿದ್ದಾರೆ. ಒಂದು ರೀತಿಯಲ್ಲಿ (Monochrome) ಎಂದು ಹೇಳಬಹುದು. ರೇಖೆಗಳಿಂದ ಆಕೃತಿಗಳಿಂದ ಒಂದೇ ವರ್ಣದ ತೆಳು ಹಾಗೂ ಕಡುಪಾದ ಲೇಪನದಿಂದ ಇಲ್ಲಿ ದೃಶ್ಯಾಂತರ ಕಾಣಬಹುದಾಗಿದೆ. ಬಸವನ ಮೇಲಿನಹೊದಿಕೆ ಅದರಲ್ಲಿ ಛಾಯಾಂಕನ ಹಾಗೂ ಚಿತ್ರದಲ್ಲಿ ಅವಶ್ಯವಿದ್ದ ಪ್ರಾಣಿಗಳು ಮರಗಳು ಇತ್ಯಾದಿಯ ಛಾಯಾಂಕನದಲ್ಲಿ ಹಿನ್ನೆಲೆಯ ಕಾಗದದ ವರ್ಣವನ್ನೇ ಬಳಸಿಕೊಂಡಿದ್ದಾರೆ. ಪ್ರಮುಖ ಬೆಳಕನ್ನು ನೀಡುವಲ್ಲಿ ಕುಂಚದ ಎಳೆತಗಳನ್ನು ಕಾಣುತ್ತೇವೆ.

ಹೆಣ್ಣುಮಗಳ ಆಭರಣದಲ್ಲೆಲ್ಲ ಪ್ರಮುಖವಾದ ಬೆಳಕನ್ನು ಬಿಳಿವರ್ಣದಿಂದ ಚಿತ್ರಿಸಿದ್ದಾರೆ. ಒಟ್ಟಾರೆಯಾಗಿ ಈ ರೀತಿಯ ವರ್ಣಪ್ರಯೋಗ ಮಾಡಿದರೂ ಸಹಿತ ಎಲ್ಲಾ ವಸ್ತುಗಳು ತಮ್ಮ ನೈಜಗುಣದ ಮೈವಳಿಕೆಯ ಹಿರಿಮೆಯನ್ನು ಮೆರೆದಿವೆ. ಅಂತಹ ಒಂದು ಸಾಮರಸ್ಯ ಈ ಚಿತ್ರದಲ್ಲಿದೆ. ಇದೇ ರೀತಿಯ ಚಿತ್ರಗಳನ್ನು ಬೇರೆ ಬೇರೆ ಗ್ರಂಥಗಳಿಗಾಗಿ ರಚಿಸಿರುವುದನ್ನು ನಾವು ಕಾಣುತ್ತೇವೆ. ಸನ್ನಿವೇಶದ ಒಟ್ಟು ಪರಿಣಾಮವನ್ನು ಇಲ್ಲಿ ಚಿತ್ರಿಸಿದ್ದಾರೆ. ಇಂತಹ ಚಿತ್ರಗಳು ಪ್ರಾರಂಭದ ದೆಸೆಯಲ್ಲಿ ಚಿತ್ರಿಸಿದ ಚಿತ್ರಗಳಿಗಿಂತಲೂ ತಂತ್ರದ ವರ್ಣಗಳ ದೃಷ್ಟಿಯಿಂದ ಭಿನ್ನವಾಗಿವೆ. ಈ ಚಿತ್ರವನ್ನು ಅವರಾಧಿ ಶ್ರೀ ಫಲಾಹಾರೇಶ್ವರ ಮಠದಲ್ಲಿಯೂ ನೋಡಬಹುದಾಗಿದೆ.

ಇನ್ನೂ ಮೂರನೆಯ ಹಂತದ ಚಿತ್ರಗಳ ರಚನೆಯಲ್ಲಿ ಬದಲಾವಣೆಯ ಜೊತೆಗೆ ಅವರದೇ ಶೈಲಿಯ ಆಕೃತಿಗಳನ್ನು ಕಾಣುತ್ತೇವೆ.

ಚಿತ್ರ ೧೮ : ಕೋಲೆ ಬಸವ : ಜಲವರ್ಣ ಚಿತ್ರ. ಈ ಸಂಯೋಜನೆಯಲ್ಲಿ ಇರುವ ವ್ಯಕ್ತಿ ನೈಜ ಶೈಲಿಯ ಆಕೃತಿಗಿಕ್ಕಿಂತಲೂ ಅಂಗಾಂಗಗಳನ್ನು ಹೆಚ್ಚು ನೀಳವಾಗಿ ರಚಿಸಿರುವುದನ್ನು ಕಾಣುತ್ತೇವೆ. ಮುಂದೆ ಅವರು ರಚಿಸಿದ ಎಲ್ಲಾ ಚಿತ್ರಗಳಲ್ಲೂ ಇದೇ ರೀತಿಯ ಲಕ್ಷಣಗಳನ್ನು ಕಾಣುತ್ತೇವೆ. ಇದೊಂದು ಸಾಮಾಜಿಕ ವಿಷಯವನ್ನು ಕುರಿತು ಚಿತ್ರಿಸಿದಂಥ ಚಿತ್ರ. ' ಬಸವನನ್ನು ಶೃಂಗರಿಸಿ ಮನೆ ಮನೆಗೆ ಹೋಗಿ ವಾದ್ಯ ಬಾರಿಸುತ್ತ ದುಡ್ಡನ್ನು ಬೇಡುವುದು ' ಕೆಲವೇ ವರ್ಣಗಳನ್ನು ಇಲ್ಲಿ ಬಳಸಿದ್ದಾರೆ. ಮನೆ ತಿರುಗಿ ಬೇಡುವವನ ಮೈ ಚರ್ಮ ಬಿಸಿಲು ಚಳಿಗೆ ಕಪ್ಪಾಗಿ ಒರಟಾಗಿರುವಂಥ ಅನುಭವ ನೀಡುತ್ತದೆ. ಇಲ್ಲಿ ಕುಂಚದ ಎಳೆತಗಳನ್ನು ಕಾಣುತ್ತೇವೆ. ಆಕೃತಿಗಳ ಅಂಕು ಡೊಂಕುಗಳಿಗನುಗುಣವಾಗಿ ಕುಂಚಗಳ ಎಳೆತಗಳಿವೆ. ಅವು ಆಯಾ ಆಕೃತಿಗಳ ಮೃದು ಒರಟುತನದ ಮೈವಳಿಕೆಯ ನೈಜತೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿವೆ. ನೀಲಿ. ಹಳದಿ. ಕೆಂಪು ವರ್ಣಗಳನ್ನು ಮಾತ್ರ ಬಳಸಿದ್ದಾರೆ. ಆ



१२.



११



೧೨. ಜಲ ಮಂದಿರ, ಉದಯಪುರ



೧೪ ಮುಂಬಯಿ ವ್ಹಿ.ಟಿ ಸ್ಟೇಶನ್

೧೭. ಮಸೀದಿ - ಕಲಬುರ್ಗಿ



೧೮. ಚೆನ್ನಬಸವೇಶನ ಪುಷ್ಪಕೋತ್ಸವ





೧೭. ಫಲಹಾರೇಶನು ಲಿಂಗಾನುಷ್ಠಾನಕ್ಕೆ ಕುಳಿತಾಗ ಉದುಪುಡಿಯ ರಾಣಿ ಕಂಟಲಿ ಬಸವನ ಸೇವೆಯನ್ನು ಮಾಡಿದುದು.



೧೮. ಕೋಲೆ ಬಸವ

ವರ್ಣಗಳನ್ನು ಅಷ್ಟೇ ಹಿತವಾಗಿ ಕಣ್ಣಿಗೆ ಹೊಡೆದು ಕಾಣಿಸದ ರೀತಿಯಲ್ಲಿ ಲೇಪಿಸಿದ್ದಾರೆ. ಅಂತಹ ಪ್ರಖರವಾದ ವರ್ಣಗಳಿಂದ ಬಸವನ ಮೇಲೆ ಹೊದಿಸಿದ ಬಟ್ಟೆ ಮಾಸಿದ. ಹಳೆಯದಾದ ಅನುಭವ ನೀಡುವಂತೆ ಬಳಸಿರುವ ವರ್ಣಗಾರಿಕೆ ಅದ್ಭುತವಾಗಿದೆ. ಇಲ್ಲಿಯ ವರ್ಣಗಳ ಮೇಳ ಕಣ್ಣಿಗೆ ಆನಂದವನ್ನು ನೀಡುತ್ತದೆ.

ಹೀಗೆ ಚೆಟ್ಟಿಯವರ ಜಲವರ್ಣಗಾರಿಕೆ ಹಂತ ಹಂತದಲ್ಲಿ ಬದಲಾವಣೆ ಹೊಂದಿರುವದನ್ನು ಕಾಣುತ್ತೇವೆ. ಕೊನೆಯಲ್ಲಿ ತಮ್ಮದೇ ಆದ ಶೈಲಿ ತಂತ್ರದಿಂದ ಈ ವರ್ಣಗಳನ್ನು ದುಡಿಸಿಕೊಂಡಿರುವುದನ್ನು ಕಾಣುತ್ತೇವೆ. ಜಲವರ್ಣದ ಮೇಲಿನ ಅವರ ಹಿಡಿತ ಅವುಗಳನ್ನು ಬಳಸಿ ಸನ್ನಿವೇಶಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುವ ರೀತಿ ವರ್ಣಗಳಲ್ಲಿ ದೃಶ್ಯಾಂತರ ಕಲ್ಪಿಸುವ. ವಿವಿಧ ವಸ್ತುಗಳ ಮೈವಳಿಕೆಯನ್ನು ನೈಜವಾಗಿ ಚಿತ್ರಿಸಿರುವ ತಂತ್ರ ವೈಶಿಷ್ಟ್ಯಮಯವಾಗಿದೆ.

ತೈಲವರ್ಣ ಚಿತ್ರಗಳಲ್ಲಿಯ ವರ್ಣಗಾರಿಕೆ :

ತೈಲವರ್ಣದ ಚಿತ್ರ ರಚನೆಯಲ್ಲೂ ಸಾಧನೆಗೈದ ಚೆಟ್ಟಿಯವರು ಅನೇಕ ಭಾವಚಿತ್ರ. ಜೀವಮಾದರಿ ಚಿತ್ರ. ನಿಸರ್ಗ ಚಿತ್ರ ಹಾಗೂ ಸಂಯೋಜನಾ ಚಿತ್ರಗಳನ್ನು ಚಿತ್ರಿಸಿದ್ದಾರೆ. ಆಗಿನ್ನು ವರ್ಣಛಾಯ ಚಿತ್ರ ಪ್ರಚಲಿತವಿಲ್ಲದ ಕಾರಣವಾಗಿ. ಭಾವಚಿತ್ರ. ಜೀವಮಾದರಿ ಚಿತ್ರಗಳನ್ನೇ ರಚಿಸಿದ್ದು ಹೆಚ್ಚು ಗಮನೀಯ ಸಂಗತಿ. ವರ್ಣಗಳ ಆಳವಾದ ಅಭ್ಯಾಸ ಅವು ನೀಡುವ ಪರಿಣಾಮವನ್ನು ಸಂದರ್ಭಕ್ಕೆ ತಕ್ಕಂತೆ ಬಳಸಿರುವ ತಂತ್ರವನ್ನು ಇಲ್ಲಿ ಕಾಣುತ್ತೇವೆ. ಕೆಲವೆಡೆ ಬಣ್ಣಗಳ ಪ್ರಕಾಶವನ್ನು ತಗ್ಗಿಸಬೇಕಾಗುತ್ತದೆ. ಇನ್ನೂ ಕೆಲವೆಡೆ ಹೆಚ್ಚಿಸಿತೋರಿಸುವ ಹಾಗೂ ಪ್ರಖರ ಹಾಗೂ ಸೌಮ್ಯ ವರ್ಣಗಳ ಮೇಳದಿಂದ ಸೌಮ್ಯವಾತಾವರಣವನ್ನೇ ನಿರ್ಮಿಸುವ ಅವರ ಕೌಶಲ್ಯವನ್ನು ಈ ಚಿತ್ರಗಳಲ್ಲಿ ನೋಡಬಹುದಾಗಿದೆಯಲ್ಲದೆ ಈ ಬಣ್ಣಗಳು ಅಪಾರದರ್ಶಕ (opaque) ಬಣ್ಣಗಳಾಗಿದ್ದು. ಕಡುಪಿನಿಂದ ಪ್ರಕಾಶಮಾನ ಬಣ್ಣಗಳನ್ನು ಬಳಸುವ ರೀತಿ ಇದಾಗಿದೆ.

ಚೆಟ್ಟಿಯವರ ಭಾವ ಚಿತ್ರಗಳ. ಜೀವಮಾದರಿ ಚಿತ್ರಗಳ ರಚನೆಯಲ್ಲಿ ರೂಪದರ್ಶಿಯನ್ನು ಬಳಸಿ ಚಿತ್ರಿಸಿದ ಚಿತ್ರಗಳಲ್ಲಿ ಕುಂಚದ ಎಳೆತಗಳು ಬೇರೆಯೇ ಇದ್ದು. ಕಪ್ಪು ಬಿಳುಪು ಛಾಯಾಚಿತ್ರನೋಡಿ ವರ್ಣಚಿತ್ರ ರಚಿಸಿದಲ್ಲಿ ಕುಂಚದ ಎಳೆತಗಳು (handling) ಬೇರೆಯೇ ಆಗಿದೆ. ಆದರೂ ಸಹಿತ ತಾದ್ರೂಪ್ಯತೆ (likeness) ಯ ಅಂಶ ಮಾತ್ರ ಎರಡರಲ್ಲೂ ಒಂದೇ ಇರುವುದನ್ನು ನಾವು ಕಾಣುತ್ತೇವೆ ಇಂತಹ ತಾದ್ರೂಪ್ಯತೆಯನ್ನು ತರುವಲ್ಲಿ ಚೆಟ್ಟಿಯವರ ಕಲಾ ಕೌಶಲ್ಯ ಅವರ ಆ ಹಿಂದಿನ ಸಾಧನೆಯನ್ನು ಈ ಚಿತ್ರಗಳ ಮುಖಾಂತರ ನೋಡಬಹುದಾಗಿದೆ.

ಚಿತ್ರ ೧೯ : ಭಾವಚಿತ್ರ ರೂಪದರ್ಶಿಯನ್ನು ಬಳಸಿ ಚಿತ್ರಿಸಿದ್ದು. ಇದೊಂದು ಕಪ್ಪುವರ್ಣದ ವಯಸ್ಸಾದ ಪುರುಷನ ಚಿತ್ರ. ಕಪ್ಪುವರ್ಣದ ಚರ್ಮದ ಮೈವಳಿಕೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸುವುದು ಅಷ್ಟೇ ಕಷ್ಟದ ಕೆಲಸ ಇಲ್ಲಿ ಕಲಾವಿದನಿಗೆ ವರ್ಣಗಳ ಆಳವಾದ ಅನುಭವ ಬೇಕಾಗುತ್ತದೆ. ಈ ಚಿತ್ರ ಅವಲೋಕಿಸಿದಾಗ ಬೆಳಕು ಸ್ವಲ್ಪ ಎದುರುಮುಖವಾಗಿರುವುದರಿಂದ ಮುಖದ ಎರಡೂ ಕಡೆ ನೆರಳು ಬೆಳಕನ್ನು ಕಾಣುತ್ತೇವೆ. ಇಲ್ಲಿ ಸ್ವಲ್ಪ ಬಲಗಡೆ

ಹೆಚ್ಚಿರುವುದರಿಂದ ಎಡಗಡೆ ಆ ಅಂಶ ಸ್ವಲ್ಪ ಕಡಿಮೆಯಾಗಿದೆ. ಮುಖದಲ್ಲಿ ಪ್ರಮುಖ ಬೆಳಕು ಮೂಗಿನ ನೇರ ಹಾಗೂ ಹಣೆಯ ಮೇಲೆ ಇದೆ. ಮುಖದ ಉಬ್ಬು ತಗ್ಗುಗಳಿಗೆ ಅನುಸಾರವಾಗಿ ಕುಂಚಗಳ ಎಳೆತಗಳಿವೆ. ಚರ್ಮದ ಮೈವಳಿಕೆಯಲ್ಲಿ ಕಲ್ಪಗೆ ನುಣುಪಾಗಿ ಹೊಳೆಯುವ ನೈಜತೆ ಇದೆ. ಪ್ರಮುಖ ಬೆಳಕಿನಲ್ಲಿ ವರ್ಣಛಾಯೆಗೆ ಅನುಗುಣವಾಗಿ ನೀಲಿವರ್ಣದಲ್ಲಿ ಬಿಳಿವರ್ಣ ಬೆರಸಿ ಮೂಲ ವರ್ಣಕ್ಕೆ ಪೂರಕವಾಗುವ ರೀತಿಯಲ್ಲಿ ಲೇಪಿಸಿ ತ್ರೀಮಾನದ ಅನುಭವದೊಂದಿಗೆ ತಾದ್ರೂಪ್ಯವೂ ಇದೆ. ತಲೆಗೆ ಸುತ್ತಿಕೊಂಡ ರುಮಾಲು ಬಿಳಿವರ್ಣದ್ದಾಗಿದ್ದು ಅಲ್ಲಿ ನೆರಳಿನ ಛಾಯೆಯನ್ನು ಕುಂಚದ ಬೋಲ್ಡ್ ಆದ ಎಳೆತಗಳಿಂದ ಚಿತ್ರಿಸಿ ನೈಜ ನೆರಿಗೆಗಳ ಅನುಭವ ನೀಡಿದ್ದಾರೆ. ಬಿಳಿವರ್ಣದ ಮೀಸೆ ಅದರಲ್ಲಿ ನೀಲಿವರ್ಣದಿಂದ ನೆರಳು ಅಂತೆಯೇ ತೊಟ್ಟ ಬಿಳಿ ಅಂಗಿಯಲ್ಲೂ ಸಹಿತ ಕಾಣಬಹುದು. ಹಿನ್ನೆಲೆ ಪ್ರಕಾಶಮಾನವಾಗಿದ್ದರೂ ಬಿಳಿಅಂಗಿಯನ್ನು ಬೇರ್ಪಡಿಸಿದಂತೆ ತೋರಿಸಲು ಮಾತ್ರ ಅದರ ಮೇಲೆ ಕಡುಪಾದ ವರ್ಣಗಳನ್ನು ಬಳಸಿ ಭಾವಚಿತ್ರವನ್ನು ಕಲಾಕೃತಿಯಂತೆ ಚಿತ್ರಿಸಿರುವುದನ್ನು ನಾವಿಲ್ಲಿ ಕಾಣುತ್ತೇವೆ.

ಚಿತ್ರ ೨೦ : ಕಪ್ಪು ಬಿಳುಪು ಛಾಯಾ ಚಿತ್ರವನ್ನು ನೋಡಿ ವರ್ಣಚಿತ್ರ ರಚಿಸಿದ್ದು. ಈ ಚಿತ್ರ ಹೆಣ್ಣುಮಗಳ ಚಿತ್ರವಾಗಿದ್ದು ಈ ಚಿತ್ರದಲ್ಲಿ ಚೆಟ್ಟಿಯವರ ಬಣ್ಣಗಳ ಬೆರಕೆ ಹಾಗೂ ಕುಂಚಗಳ ಹಿಡಿತ ಬೇರೆಯೇ ಆಗಿದೆ. ಗೌರವ ವರ್ಣವನ್ನು ಹೊಂದಿದ್ದಾಳೆ. ಇಲ್ಲಿ ವರ್ಣಗಳನ್ನು ಚೆನ್ನಾಗಿ ಬೆರೆಸಿ ಮೃದು ತನದ ಅನುಭವವನ್ನು ತಂದಿದ್ದಾರೆ. ಅದರಲ್ಲಿಯೇ ತಕ್ಕಮಟ್ಟಿಗೆ ನೆರಳಿನ ಛಾಯೆಯನ್ನು ಬೆರತಂತೆ ಚಿತ್ರಿಸಿದರೂ ಮುಖದ ಅಂಗರಚನೆ (Anatomy) ಯಲ್ಲಿ ಯಾವುದೇ ತರಹದ ವರ್ಣ ಬೇರ್ಪಡದಂತೆ ಬೆರೆತುಕೊಂಡು ಚರ್ಮದ ಮೈವಳಿಕೆಯ ಮೃದು ತನದ ಅನುಭವ ನೀಡುತ್ತವೆ. ಹೆಚ್ಚಾಗಿ ಛಾಯಾ ಚಿತ್ರದಿಂದ ಚಿತ್ರರಚಿಸಲು ಕೊಟ್ಟಂತಹ ಜನ ಇದೇ ರೀತಿಯ ಪರಿಣಾಮವನ್ನು (effect) ಬಯಸುತ್ತಾರಾದ್ದರಿಂದ ಇಂತಹ ಚಿತ್ರಗಳಲ್ಲಂತೂ ತಾದ್ರೂಪ್ಯತೆ ಸಂಪೂರ್ಣವಾಗಿ ಕಂಡಬರುತ್ತದೆ. ಸೀರೆಯ ವರ್ಣ ಹಾಗೂ ಅದರ ಮಡಿಕೆಗಳಲ್ಲಿ ವರ್ಣಗಳ ಬೆರಕೆ. ಜೆ. ಜೆ. ಕಲಾಶಾಲೆಯ ಕಲಿಕೆಯ ಅನುಭವದ ಪ್ರತೀಕವಾಗಿರುವುದನ್ನು ನಾವಿಲ್ಲಿ ಗಮನಿಸುತ್ತೇವೆ. ಸೀರೆಯ ಜರಿ ಅಂಚನ್ನು ಅದರ ಮಡಿಕೆಗಳಲ್ಲಿ ಜರಿಯ ಬಿರಿಸುತನವನ್ನು ಗೋಪಿ (yellowochre) ವರ್ಣದಿಂದ ಚಿತ್ರಿಸಿ ಜರಿಯ ಅನುಭವ ನೀಡಿದ್ದಾರೆ. ಮುಖದಲ್ಲಿ ಹಣೆಯ ಮೇಲಿನ ವಿಭೂತಿ ಬಿಳಿ ವರ್ಣವನ್ನು ಹೊಂದಿದ್ದರೂ ಕೂಡಾ ಮುಖದ ಮೇಲೆ ಇರುವ ಪ್ರಮುಖ ಬೆಳಕಿಗೆ ಯಾವುದೇ ರೀತಿಯಲ್ಲಿ ಅಡತಡೆ ಉಂಟುಮಾಡದೇ ನಮ್ಮ ದೃಷ್ಟಿ ಎಲ್ಲ ಕಡೆಗೂ ಸಮನಾಗಿ ಹರಿಯುವಂತೆ ಚಿತ್ರಿಸಿರುವುದೇ ಚೆಟ್ಟಿಯವರ ಇಂತಹ ಚಿತ್ರ ರಚಿಸುವ ತಂತ್ರವಾಗಿದೆ ಎನ್ನಬಹುದು. ಇದರಿಂದ ಇಂತಹ ಚಿತ್ರಗಳು ನೈಜಕ್ಕೆ ಬಹಳ ಹತ್ತಿರವಾಗಿವೆ. ಕಣ್ಣಿನಲ್ಲಿ ಜೀವಕಳೆ. ಮೂಗಿನ ಆಭರಣ ಕೊರಳಲ್ಲಿಯ ಕರಿಮಣಿ ಸರ. ಕುಪ್ಪಸದ ಬಟ್ಟೆಯ ಹತ್ತಿಯ ಅನುಭವದ ಮೈವಳಿಕೆ. ಅದರಲ್ಲಿಯ ಚೌಕಾಕಾರದ ನಕ್ಷೆ ಎಲ್ಲವನ್ನು ವಿವರವಾಗಿ ಚಿತ್ರಿಸಿದ್ದಾರೆ. ಕೆಂಪುವರ್ಣದ ಉಡುಗೆಗೆ ತಕ್ಕಂತೆ ಅದು ಮುಂದೆ ಇರುವಂತೆ ತೋರಲು ಹಿನ್ನೆಲೆಯಲ್ಲಿ ಅದಕ್ಕೆ ವಿರೋಧವಾದ ಹಸಿರು ಬಣ್ಣದ ಬೆರಕೆಯ ವರ್ಣವನ್ನು ಲೇಪಿಸಿದರೂ ಸಹಿತ ಇಲ್ಲಿ ಕಣ್ಣಿಗೆ ತಂಪಾದ (cool) ಅನುಭವವನ್ನೇ ನೀಡುವ ರೀತಿಯಲ್ಲಿ ಚಿತ್ರಿಸಿದ್ದು ಅವರ ಕಲಾ ವೈಶಿಷ್ಟ್ಯವಾಗಿದೆ.

ಚಿತ್ರ ೨೧ : ಇದೊಂದು ಜೀವಮಾದರಿ ಚಿತ್ರ. ಒಬ್ಬ ಯಜಮಾನ ಮನುಷ್ಯ ಚಿಲುಮೆಯನ್ನು ಸೇದುತ್ತಾ ಕುಳಿತಿರುವುದು. ರೂಪದರ್ಶಿಯನ್ನು ಬಳಸಿ ಚಿತ್ರಿಸಿದ ಚಿತ್ರವಿದು.

ಶಿರಭಾವ ಚಿತ್ರದಲ್ಲಿ ಕಲಾವಿದನು ಮುಖಕ್ಕೆ ಮಾತ್ರ ಪ್ರಾಮುಖ್ಯತೆಯನ್ನು ಕೊಟ್ಟರೆ, ಇಲ್ಲಿ ಇಡಿ ದೇಹದ ಎಲ್ಲಾ ಭಾಗಗಳಿಗೂ ಅಷ್ಟೇ ಮಹತ್ವವನ್ನು ಕೊಡಬೇಕಾಗುತ್ತದೆ. ಇದರಿಂದ ಶರೀರ ರಚನಾ ಶಾಸ್ತ್ರ (Anatomy) ದ ಸಂಪೂರ್ಣ ಅಧ್ಯಯನದ ಅನುಭವ ಇರಬೇಕಾಗುತ್ತದೆ.

ಈ ಚಿತ್ರದಲ್ಲಿ ಚಿಂತಾಕ್ರಾಂತನಾಗಿ ಕುಳಿತ ಮನುಷ್ಯ ಚಿಲುಮೆ ಸೇದುವದರೊಂದಿಗೆ ಯಾವುದೋ ಚಿಂತೆಯಲ್ಲಿ ಮುಳುಗಿದ ಅನುಭವ ನೀಡುತ್ತದೆ. "ವ್ಯಕ್ತಿಗಳ ಬಾಹ್ಯ ರೂಪ ಅವರ ಅಂತರಂಗವನ್ನು ಬಿಂಬಿಸಿದಾಗಲೇ ಕಲೆಯಾದೀತು"[೧೬] ಎಂಬ ಸೂತ್ರವನ್ನು ಸಾರುವಂತಿದೆ. ಈ ಚಿತ್ರದಲ್ಲಿ ಚೆಟ್ಟಿಯವರು ವರ್ಣಗಳನ್ನು ಬಳಸುವಲ್ಲಿ ಕೆಲವು ಭಾಗದಲ್ಲಿ ಕುಂಚದ ಎಳೆತಗಳಿದ್ದರೆ ಇನ್ನುಕೆಲವು ಭಾಗಗಳಲ್ಲಿ ವರ್ಣಗಳ ಮಿಶ್ರಣದ ಮೆದುತನ ಕಂಡುಬರುತ್ತದೆ. ಗೋಪಿ ವರ್ಣದ ಚರ್ಮದ ಮೈವಳಿಕೆ ನೈಜವಾಗಿದ್ದು ಹಣೆಯ ಮೇಲಿನ ಗೆರೆಗಳು ಮುಖದಲ್ಲಿಯ ಸುಕ್ಕುಗಟ್ಟಿದ ಚರ್ಮದ ಪರಿಣಾಮವನ್ನು ಕುಂಚದ ಎಲೆತಗಳಿಂದ ಚಿತ್ರಿಸಿದರೆ ಉಳಿದ ಭಾಗ ಮೆದುವಾಗಿ ಸಮ್ಮಿಶ್ರ ಮಾಡಿಲೇಪಿಸಿದ್ದಾರೆ. ದಪ್ಪನಾದ ಮೀಸೆಯಲ್ಲೂ ಕುಂಚದ ನವಿರಾದ ಎಳೆಗಳಿದ್ದು ನೆರಳು ಬೆಳಕಿನ ಛಾಯಂಕನದೊಂದಿಗೆ ಮೀಸೆಯ ಕೂದಲು ಎಳೆ ಎಳೆಯಾಗಿ ಕಾಣುವಂತೆ ಚಿತ್ರಿಸಿದ್ದಾರೆ. ಕೈ, ಕಾಲಿಗೂ ಮುಖದಷ್ಟೇ ಪ್ರಾಮುಖ್ಯತೆ ನೀಡಿ ಅಲ್ಲಿಯೂ ನೆರಳು ಬೆಳಕಿನ ವಿಂಗಡಣೆ ಕುಂಚದ ಎಳೆತಗಳನ್ನು ಕಾಣುತ್ತೇವೆ. ಕಾಲ್ಬೆರಳು ಉಗುರುಗಳನ್ನು ಎಡಗಣ್ಣಿಗೆ ಆದ ಗುಳ್ಳೆಯನ್ನು ಸಹಿತ ಕೆಂಪು ಮಿಶ್ರಿತ ವರ್ಣ ಬಳಸುವದರೊಂದಿಗೆ ನೈಜವಾಗಿ ಚಿತ್ರಿಸಿದ್ದು ಕಣ್ಣಿನ ಒಳಗಿನ ರಕ್ತದ ಛಾಯೆಯನ್ನು ಚಿತ್ರಿಸಿದ್ದಾರೆ. ಈ ಎಲ್ಲ ಅಂಶಗಳಿಂದ ತದ್ರೂಪ್ಯ ನಿರ್ಮಾಣವಾಗಿದೆ. ಇನ್ನೂ ಉಟ್ಟಂತಹ ಬಟ್ಟೆಗಳಲ್ಲಿ ಹರಿದ ಅಂಗಿ ಹಾಗೂ ಧೋತರದಲ್ಲಿ ಬಟ್ಟೆಯ ನಿರಿಗೆಗಳಿಗೆ ತಕ್ಕಂತೆ ಕುಂಚದ ಎಳೆತಗಳನ್ನು ಕಾಣುತ್ತೇವೆ. ಬಿಳಿವರ್ಣದ ಬಟ್ಟೆಗಳಾಗಿದ್ದರೂ ಅವು ಮಾಸಿದವುಗಳಾಗಿರಬೇಕು. ಆ ಮಾಸಿದ ಅನುಭವವನ್ನು ಹಳದಿ. ನೀಲಿ. ಕಂದು ಬಣ್ಣಗಳ ಮಿಶ್ರಣದ ಛಾಯಾಂಕನದಿಂದ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಮಾಸಿದ ಬಟ್ಟೆಗಳಾದ್ದರಿಂದ ಆ ಬಟ್ಟೆಯು ತಾಜಾತನವನ್ನು ಕಳೆದುಕೊಂಡಂತ ರೀತಿ ಅನುಭವಕ್ಕೆ ಬರುತ್ತಿದೆ. ಮುನ್ನೆಲೆಯ ವರ್ಣಗಳಿಗೆ ಅನುಗುಣವಾಗಿ ಹಿನ್ನೆಲೆಯ ವರ್ಣಗಳಲ್ಲಿಯೂ ನೆರಳು ಬೆಳಕನ್ನು ಚಿತ್ರಿಸಿದ್ದಾರೆ. ರೂಪದರ್ಶಿಯ ಬಲಭಾಗದಲ್ಲಿ ಇಟ್ಟಿರುವ ತಾಮ್ರದ ತಂಬಿಗೆ ಕಬ್ಬಿಣದ ಕುಡಗೋಲು ಇವುಗಳಲ್ಲಿಯೂ ಸಹಿತ ಪ್ರಮುಖ ಬೆಳಕನ್ನು ತೋರಿಸಿ ವಸ್ತುವಿನ ಗುಣಧರ್ಮಗಳಿಗನುಸಾರವಾಗಿ ವರ್ಣಗಳನ್ನು ಬಳಸಿ ಆ ಪರಿಣಾಮವನ್ನು ಇಲ್ಲಿ ಸೃಷ್ಟಿಸಿದ್ದಾರೆ. ಅಂಗಿಯ ತೋಳಿನ ಮುಂದೆ ಮಡಿಚಿ ಹೊಲಿದ ರೀತಿಯನ್ನು ಚಿತ್ರಿಸಿದ್ದಾರೆ. ಚಿಲುಮೆಯ ಹೊಗೆಯ ತರಂಗಗಳು ಸುಳಿಯಾಗಿ ಮೇಲೆ ತೇಲಿಹೋಗುವುದು. ಕಣ್ಣಿನ ದೃಷ್ಟಿ ಚಿತ್ರಕ್ಕೆ ಜೀವಂತಿಕೆ, ಚೈತನ್ಯವನ್ನು ನೀಡಿವೆ.

---

೧೬. ಶಿವರಾಮ ಕಾರಂತ : ಕಲಾಪ್ರಪಂಚ : ಪುಟ ೨೯೦

ಚಿತ್ರ ೨೨ : ಮೈಸೂರಿನ ಆಗಿನ ಕರ್ನಾಟಕ ವಿಶ್ವವಿದ್ಯಾನಿಲಯದ ಚಾನ್ಸಲರ್ ಆಗಿದ್ದ ಶ್ರೀ ಜಯಚಾಮರಾಜ ಒಡೆಯರವರ ಜೀವಮಾದರಿ ಚಿತ್ರ. ಇದನ್ನು ಛಾಯಾ ಚಿತ್ರನೋಡಿ ಚಿತ್ರಿಸಲಾಗಿದೆ. ಈ ಚಿತ್ರದಲ್ಲೂ ವರ್ಣಗಳ ಮೆದು ಬೆರಕೆಯು ಪ್ರಾಮುಖ್ಯವಾಗಿದೆ. ಮುಖದಲ್ಲಿ ಗಾಂಭೀರ್ಯ ಕಳೆಇದ್ದು ಪ್ರತಿಯೊಂದು ಒಡವೆಯ ವಿವರ ಚಿತ್ರಣ ಇಲ್ಲಿದೆ ಈ ಚಿತ್ರದಲ್ಲಿ ಪ್ರತಿಯೊಂದು ವಸ್ತುವಿಗೂ ಅಷ್ಟೇ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಧರಿಸಿದ ರೇಶ್ಮೆ ಬಟ್ಟೆಯ ಅನುಭವ ನೀಡುವ ವರ್ಣಗಾರಿಕೆ ನಮ್ಮನ್ನು ೧೪ ನೇ ಶತಮಾನದ ಪಾಶ್ಚಾತ್ಯ ಕಲಾತಂತ್ರದತ್ತ ಎಳೆದುಕೊಂಡು ಹೋಗುತ್ತದೆ. ಈ ಚಿತ್ರದಲ್ಲಿಯ ಬಟ್ಟೆಯ ಮೈವಳಿಕೆ. ನಿರಿಗೆಗಳ ರಚನೆಯಲ್ಲಿ ಪಾಶ್ಚಾತ್ಯರ ಪ್ರಭಾವ ಕಂಡುಬರುತ್ತದೆ. ಬೆಳಕಿನ ಮೂಲ ಮತ್ತು ಅವಗಳಿಂದ ಉಂಟಾದ ನೆರಳು ಬೆಳಕು ಚಿತ್ರದ ಪ್ರತಿಯೊಂದು ವಸ್ತುಗಳಲ್ಲಿಯೂ ವ್ಯಕ್ತಿಯಲ್ಲೂ ಕಾಣಿಸುತ್ತದೆ. ಕೈಯಲ್ಲಿ ಹಿಡಿದ ಬಂಗಾರದ ಕವಚದ ಖಡ್ಗ ಮುನ್ನೆಲೆಗೆ ತಕ್ಕಂತೆ ಹಿನ್ನೆಲೆಯಲ್ಲಿ ಕಡುಪಾದ ಹಸಿರು ವರ್ಣ ಛಾಯೆಯ ಪರದೆಯನ್ನು ಚಿತ್ರಿಸಿದ್ದಾರೆ. ತೈಲವರ್ಣದ ತಂತ್ರಗಾರಿಕೆಯನ್ನು ಅರಿತುಕೊಳ್ಳಲು ಜೀವಮಾದರಿ ಚಿತ್ರಗಳಲ್ಲಿ ಇದು ಉತ್ತಮ ಮಾದರಿಯಾಗಿದೆ.

ನಿಸರ್ಗ ಚಿತ್ರಗಳಲ್ಲಿಯ ವರ್ಣಗಾರಿಕೆ :

ನಿಸರ್ಗ ಚಿತ್ರದಲ್ಲಿ ವಿವಿಧ ಆಕೃತಿಗಳು ಹಂಚಿ ಚಿತ್ರಿಸುವ ಜಾಣ್ಮೆ ಇರಬೇಕಾಗುತ್ತದೆ. ಕೆಲವೊಮ್ಮೆ ಕೆಲವು ಬೇಡವಾದ ಆಕೃತಿಗಳನ್ನು ತೆಗೆದುಹಾಕಬೇಕಾಗುತ್ತದೆ. ಇದೇ ಕಲಾವಿದನಿಗೂ ಕ್ಯಾಮರಾಕ್ಕೂ ಇರುವ ವ್ಯತ್ಯಾಸ ಇಂತಹ ಚಿತ್ರಗಳಲ್ಲಿ ನೆಲ. ನೀರು. ಆಕಾಶಗಳ ಕಟ್ಟಡಗಳನ್ನು ವಿವಿಧ ರೀತಿಯ ವೈಭವಗಳನ್ನು ಸೂಕ್ಷ್ಮವರ್ಣಗಳ ವೈವಿಧ್ಯದಿಂದ ಚಿತ್ರಿಸಿದ್ದಾರೆ. ಮೊದಲಹಂತದಲ್ಲಿ ಅವರು ಮುಂಬೈನಲ್ಲಿ ಇದ್ದಾಗ ಚಿತ್ರಿಸಿದ ಚಿತ್ರವಿದು.

ಚಿತ್ರ ೨೩ : ಮುಂಬೈಯಿಯ ಆಗಿನ ಕಾಲದ ಕಟ್ಟಡಗಳ ವಿನ್ಯಾಸವನ್ನು ತಮ್ಮ ಚಿತ್ರದಲ್ಲಿ ಸೆರೆಹಿಡಿದಿದ್ದಾರೆ. ಆಕಾಶದಲ್ಲಿಯ ಮೋಡಗಳು ನೈಜವಾಗಿ ಚಿತ್ರಿತವಾಗಿವೆ. ವಾಸ್ತುಗಳ ವಿನ್ಯಾಸವನ್ನು ವಿವರವಾಗಿ ಚಿತ್ರಿಸಿದ್ದಾರೆ. ಬೆಳಕು ನೆರಳಿನ ವಿಂಗಡಣೆಯಿಂದ ಚಿತ್ರದ ಬಲಭಾಗದ ಕಟ್ಟಡದ ನೆರಳು ಅದರ ಎದುರುಗಿನ ಕಟ್ಟಡದವರೆಗೆ ಅಲ್ಲಲ್ಲಿ ಹರಡಿದಂತೆ ಚಿತ್ರಿಸಿದ್ದಾರಲ್ಲದೇ ಮೇಲಿನಿಂದ ಈ ದೃಶ್ಯವನ್ನು ಚಿತ್ರಿಸಿದ್ದರಿಂದ ಕೆಳಗಿನ ಜನರನ್ನು ಗುಂಪಾಗಿ ಹೋಗುತ್ತಿರುವಂತೆ ಕಂಡರೂ ದೂರದಿಂದ ಆಕೃತಿಗಳ ನಿಖರ ರೂಪದಂತೆ ಪರಿಣಾಮಕಾರಿಯಾಗಿ ವರ್ಣಲೇಪನ ಮಾಡಿದ್ದಾರೆ. ವರ್ಣಗಳ ಮುಖಾಂತರವೇ ಅವು ಎಷ್ಟು ಹಳೆಯ ಕಟ್ಟಡಗಳೆಂಬುದು ಗೋಚರವಾಗುತ್ತದೆ. ಮೊದಮೊದಲು ಚಿತ್ರಿಸಿದಂಥ ಚಿತ್ರಗಳು ಇವಾದ್ದರಿಂದ ಇಲ್ಲಿ ಪಾಶ್ಚಾತ್ಯ ಶೈಲಿಯ ಪ್ರಭಾವ ಕಾಣುತ್ತೇವೆ. ಚಿತ್ರದಲ್ಲಿ ದೃಶ್ಯಾಂತರವಿದೆ. ಜನರ ಸಂಚಾರದಿಂದ ಚಿತ್ರದಲ್ಲಿ ಚಲನೆಯನ್ನು ಕಾಣುತ್ತೇವೆ.

ಚಿತ್ರ ೨೪ : ದೇವಾಲಯದ ಭೂದೃಶ್ಯ. ಈ ಚಿತ್ರದಲ್ಲಿ ದೃಶ್ಯಾಂತರವಿದ್ದು. ಮುನ್ನೆಲೆಯಲ್ಲಿ ಎರಡು ಮರಗಳಿವೆ. ಗುಡಿಯ ಎದುರಿಗೂ ಒಂದು ಮರವಿದೆ. ಅದರ ಮುಂದೆ ಒಂದು ನೀರಿನ ಕೊಳವಿದೆ. ಜನರು ಅಲ್ಲಿ ಸ್ನಾನ ಮಾಡುತ್ತಿದ್ದಾರೆ. ಆ ನೀರಿನಲ್ಲಿ ಮರದ ಪ್ರತಿಫಲನೆ ಇರುವುದರಿಂದ ನೀರನ್ನು ಹಸಿರು ಬಣ್ಣ ಹಾಗೂ ಆಕಾಶದ ನೀಲಿ

ಬಣ್ಣದಿಂದ ಚಿತ್ರಿಸಿದ್ದಾರೆ. ಅಲ್ಲಲ್ಲಿ ಜನರು ಓಡಾಡುತ್ತಿರುವಂತೆ ದೇವಸ್ಥಾನದಲ್ಲಿ ಪೂಜೆಗೈಯುತ್ತಿರುವಂತೆಯೂ ಚಿತ್ರಿಸಿದ್ದಾರೆ. ಜನರನ್ನು ಕುಂಚದಿಂದ ಹಾಗೆ ಅಲ್ಲಲ್ಲಿ ಎಳೆದಿದ್ದಾರೆ. ಆದರೂ ಅದರಲ್ಲಿ ನಿಖರ ಆಕೃತಿಯನ್ನು ಕಾಣುತ್ತೇವೆ. ಗಿಡದ ಬೊಡ್ಡೆಯಲ್ಲಿ ಅದರ ಮೇಲಿನ ತೊಗಟೆ ನೈಜವಾಗಿಬರುವಂತೆ ನಾನಾ ಬಣ್ಣಗಳ ಕುಂಚದ ಎಳೆತಗಳಿವೆ. ಟೊಂಗೆಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ಗಿಡದ ಎಲೆಗಳನ್ನು ಮಾತ್ರ ಕುಂಚದ ಸಣ್ಣ ಸಣ್ಣ ಹೊಡೆತಗಳಿಂದ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ದೇವಾಲಯವಿದೆ ಅದರ ಎಡಭಾಗದಲ್ಲಿಯೂ ಸಣ್ಣ ಸಣ್ಣ ದೇವಾಲಯಗಳಿವೆ. ಅವುಗಳ ಮಧ್ಯದಿಂದಲೂ ಮರ ಬೆಳೆದು ಬಂದಿರುವುದನ್ನು ಇಲ್ಲಿ ಕಾಣುತ್ತೇವೆ. ದೇವಾಲಯದ ಮುಂದಿನ ಕಟ್ಟೆಯಭಾಗ ಜನರು ನೀರಿನಿಂದ ಎದ್ದು ಹೋದಕಾರಣವಾಗಿಯೋ ಎಂಬಂತೆ ಅಲ್ಲಲ್ಲ ನೀರು ಚಲ್ಲಿದಂತೆ ಭಾಸವಾಗುತ್ತದೆ.

ಚಿತ್ರ ೨೫ : ಮರದ ಬೊಡ್ಡೆಯ ಚಿತ್ರ. ಇಂತಹ ಮರದ ಬೊಡ್ಡೆಗಳನ್ನು ಚೆಟ್ಟಿಯವರು ಸಾಕಷ್ಟು ಚಿತ್ರಿಸಿದ್ದಾರಲ್ಲದೆ. ಅವರ ಇಂತಹ ಒಂದು ಚಿತ್ರಕ್ಕೆ ಪ್ರಶಸ್ತಿಯೂ ಲಭಿಸಿರುವ ಬಗ್ಗೆ ಈಗಾಗಲೇ ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ. ಮರದ ಬೊಡ್ಡೆಯನ್ನೇ ಪ್ರಮುಖ ಕೇಂದ್ರವಾಗಿ ಚಿತ್ರದಲ್ಲಿ ಚಿತ್ರಿಸಿರುವುದರಿಂದ ಅದರ ಒಂದು ಸಂಪೂರ್ಣ ಆಕೃತಿಯರಚನೆಗೆ ಮಹತ್ವನೀಡಿದ್ದು ಕಂಡುಬರುತ್ತದೆ. ತೈಲವರ್ಣದಲ್ಲಿ ಅಪಾರದರ್ಶಕದ ರೀತಿಯಲ್ಲಿ ಈ ಚಿತ್ರ ನೈಜವಾಗಿ ಚಿತ್ರಿತಗೊಂಡಿದೆ. ಬೊಡ್ಡೆಯ ಮೇಲೆ ಬೆಳಕು ನೆರಳಿನ ವಿಂಗಡಣೆ. ಮರದ ತೊಗಟೆಯ ವರ್ಣ ಅದರ ನೈಜ ಮೈವಳಿಕೆಗೆ ಪೂರಕವಾಗಿದೆ. ನೆರಳಿನ ಭಾಗದಲ್ಲೂ ಬೇರೆ ಬೇರೆ ವರ್ಣಗಳನ್ನು ಇಲ್ಲಿ ಲೇಪಿಸಿರುವುದನ್ನು ನೋಡುತ್ತೇವೆ. ಮೇಲ್ಭಾಗ ಅಲ್ಲಲ್ಲಿ ಕೆತ್ತಿದಂತಿದೆ. ಇಂತಹ ಪರಿಣಾಮ ಬೀರುವ ಚೆಟ್ಟಿಯವರ ಕುಂಚಗಾರಿಕೆಯ ಕೈಚಳಕ ಅತ್ಯಂತ ಪ್ರಭಾವಶಾಲಿಯಾದುದು ಅಂತೆಯೇ ನಮ್ಮ ಮನಸ್ಸಿನಲ್ಲಿ ಆ ಭಾವನೆಗಳು ಥಟ್ಟನೆ ಹೊಳೆಯುತ್ತವೆ. ಗಿಡದ ಎಲೆಗಳನ್ನು ಕುಂಚದ ಸಣ್ಣ ಸಣ್ಣ ಹೊಡೆತಗಳಿಂದ ಚಿತ್ರಿಸಿದ್ದಾರೆ. ಇದರಿಂದ ಅಲ್ಲಿಯೂ ನೆರಳು ಬೆಳಕಿನ ವಿಂಗಡಣೆ ಸ್ಪಷ್ಟವಾಗಿದೆ. ಚಿತ್ರದಲ್ಲಿ ದೃಶ್ಯಾಂತರವಿದೆ. ಹಿನ್ನೆಲೆಯಲ್ಲೂ ಸಾಲುಮರಗಳಿವೆ. ಆ ಗಿಡಗಳ ಮಧ್ಯದಿಂದ ಹರಿದುಬಂದ ಬೆಳಕು ಭೂಮಿಯ ಮೇಲೆ ಚೆಲ್ಲಿ ಅಲ್ಲಲ್ಲಿ ನೆರಳನ್ನು ನಿರ್ಮಿಸಿದುದು ಕಾಣಬಹುದು. ಬಣ್ಣ. ಬೆಡಗುಗಳನ್ನು ತಮ್ಮ ಚಿತ್ರಗಳಲ್ಲಿ ಸೆರೆಹಿಡಿಯುವುದರಲ್ಲಿ ಚೆಟ್ಟಿಯವರು ನಿಸ್ಸೀಮರೆನಿಸಿದ್ದಾರೆ. ಯಾವುದೇ ವಸ್ತುವಿರಲಿ ಅದರ ಪ್ರತಿಯೊಂದು ಭಾಗಕ್ಕೂ ಅಷ್ಟೇ ಪ್ರಾಮುಖ್ಯತೆ ನೀಡಿ ಅಷ್ಟೇ ಸತತ ಅಭ್ಯಾಸದ ಪರಿಣಾಮವನ್ನು ನಾವು ಇಂತಹ ಚಿತ್ರಗಳಲ್ಲಿ ಗುರ್ತಿಸಬಹುದಾಗಿದೆ.

ಸಂಯೋಜನಾ ಚಿತ್ರಗಳಲ್ಲಿಯ ವರ್ಣಗಾರಿಕೆ :

ಈ ಚಿತ್ರಗಳಲ್ಲಿಯೂ ನಾವು ಮೂರು ಹಂತಗಳನ್ನು ಕಾಣುತ್ತೇವೆ. ಮೊದ ಮೊದಲು ಅಂದರೆ ಕಲಾಭ್ಯಾಸ ಮುಗಿದ ತಕ್ಷಣ ರಚಿಸಿದ ಚಿತ್ರಗಳು. ಎರಡನೆಯದಾಗಿ ಅನೇಕ ಧಾರ್ಮಿಕ. ಐತಿಹಾಸಿಕ ವಿಷಯಗಳ ಚಿತ್ರಗಳು ತದನಂತರದಲ್ಲಿ ಇತ್ತೀಚೆಗೆ ಚಿತ್ರಿಸಿದ ಸಾಮಾಜಿಕ. ಜಾನಪದ ವಿಷಯಗಳ ಮೇಲೆ ಚಿತ್ರಿಸಿದ ಚಿತ್ರಗಳು. ಇಲ್ಲಿ

ಆಕೃತಿಗಳ ಜೊತೆಗೆ ಅವರ ವರ್ಣಗಾರಿಕೆಯೂ ಹಂತಹಂತವಾಗಿ ಬದಲಾವಣೆ ಆಗಿರುವುದನ್ನು ಗಮನಿಸುತ್ತೇವೆ. ಅದನ್ನು ಈ ಚಿತ್ರಗಳ ಮೂಲಕ ಮನನ ಮಾಡಿಕೊಳ್ಳಬಹುದಾಗಿದೆ.

ಚಿತ್ರ ೨೬ : ಲಕ್ಷ್ಮೀ ನಾರಾಯಣರ ಸಂಯೋಜನಾ ಚಿತ್ರ. ಇದನ್ನು ೧೯೩೮ ರಲ್ಲಿ ಚಿತ್ರಿಸಲಾಗಿದೆ. ಈ ಚಿತ್ರವನ್ನು ಅಕಾಡೆಮಿಕ್ ಶೈಲಿಯಲ್ಲಿ ಚಿತ್ರಿಸಿದ್ದಾರೆ. ಈ ಚಿತ್ರದಲ್ಲಿ ರವಿವರ್ಮನ ಪ್ರಭಾವವನ್ನು ಕಾಣುತ್ತೇವೆ. ಸಮುದ್ರದೊಳಗಿನಿಂದ ಬಂದ ಸರ್ಪದ ಹೆಡೆ ಆಕಾಶ ಭೂಮಿಗಳನೊಂದು ಮಾಡಿನಿಂತಂತಿದೆ. ಅದರ ಮೇಲೆ ಆಸೀನನಾದ ನಾರಾಯಣ ಅಂತರದಲ್ಲಿರುವನೆಂದೆನಿಸಿದರೂ ಅದಕ್ಕೆ ಸಮತೋಲನವಾಗಿ ಲಕ್ಷ್ಮೀಯನ್ನು ಲಂಬವಾಗಿ ನಿಲ್ಲಿಸಿ ಅದಕ್ಕೆ ಆಧಾರವನ್ನು ಒದಗಿಸಿದ್ದಾರೆ. ಶೃಂಗಾರ ಭಂಗಿಯಲ್ಲಿ ಆಕೃತಿಗಳನ್ನು ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಸೂರ್ಯನ ಹೊಂಬಣ್ಣ ಅದರಲ್ಲಿ ತೇಲುವ ಮೋಡಗಳು. ಎಡಗಡೆ ಆಭರಣಗಳಿಂದ ಶೃಂಗಾರಗೊಂಡ ಆನೆ ಸೊಂಡಿಲೆತ್ತಿ ನಮಸ್ಕರಿಸುವಂತಿದೆ. ಅದರ ವರ್ಣ ಛಾಯೆ ನೈಜತೆಯಿಂದ ಕೂಡಿದೆ. ಹರಿಯುವ ನೀರಿನಿಂದ ಚಿಮ್ಮುತ್ತಿರುವ ತೆರೆಗಳು ಅದರ ಹನಿಗಳು. ಮಧ್ಯದಲ್ಲಿ ದೊಡ್ಡದಾದ ಅರಳಿದ ಕಮಲ ಹಾರಾಡುವ ಪಕ್ಷಿಗಳು. ಅಂದಿನ ಜನರ ಭಾವನೆಯಂತೆಯೇ ದೇವತೆಗಳ ಆಕೃತಿಗಳನ್ನು ಚಿತ್ರಿಸಿದ್ದಾರೆ. ಇಲ್ಲಿ ಪ್ರಖರವಾದ ಕೆಂಪುವರ್ಣ ಬಳಸಿದ್ದರೂ ಕೂಡಾ ಚಿತ್ರದಲ್ಲಿ ಕಣ್ಣಿಗೆ ಹೊಡೆಯದೇ ಅದು ಸೌಮ್ಯ ಗುಣದೊಂದಿಗೆ ಶೃಂಗಾರ ರಸಭಾವನೆಯನ್ನು ವೀಕ್ಷಕನಲ್ಲಿ ಮೂಡಿಸುತ್ತದೆ. ತೈಲವರ್ಣವಾದರು ಲಕ್ಷ್ಮಿಯು ಧರಿಸಿದಂತ ವಸ್ತ್ರಗಳನ್ನು ಪಾರದರ್ಶಕವಾಗಿ ಚಿತ್ರಿಸಿದ್ದಾರೆ. ರವಿವರ್ಮನ ಗಾಢವಾದ ಪ್ರಭಾವಕ್ಕೊಳಗಾದ ಅಂದಿನ ಜನರು ಇಂತಹ ಚಿತ್ರಗಳನ್ನೇ ಬಯಸುತ್ತಿದ್ದರಿಂದ ಚೆಟ್ಟಿಯವರು ಸಹಿತ ಅದೇ ಕಲಾತಂತ್ರ ಬಳಸಿ ಚಿತ್ರಿಸಿರುವುದನ್ನು ನಾವು ಇಲ್ಲಿ ಕಾಣುತ್ತೇವೆ. ಇಲ್ಲಿ ಬಣ್ಣಗಳ ಬೆರಕೆ ಕುಂಚದ ಮೆದು (smooth) ಓಡಾಟವನ್ನು ನೋಡುತ್ತೇವೆ. ಚಿತ್ರಗಳ ಆಕೃತಿಗಳ ಅಂಚನ್ನು ಕಡಿದಾಗಿ ಕಾಣಿಸದೆ. ಅದುಮಗ್ಗುಲ ಜಾಗದೊಡನೆ ಬೆರೆಯುವಂತೆ ಬೆಳಕು ನೆರಳುಗಳನ್ನು ಜಾರಿಸಿ ತೋರಿಸಿದ್ದಾರೆ. ಚಿತ್ರದಲ್ಲಿ ಬೆರೆಯುವ ಬಣ್ಣಗಳ ಮೇಳದ (harmony) ಜತೆಯಲ್ಲೇ ಬೆಳಕು ಮತ್ತು ನೆರಳುಗಳ ಹಂಚಿಕೆಯಿಂದ ಚಿತ್ರ ತೃಪ್ತಿಕರವಾಗಿದೆ ಸಮತೋಲನವಾಗಿಯೂ ಕಾಣುವಂತೆ ಚಿತ್ರಿಸಿದ್ದಾರೆ.

ಚಿತ್ರ ೨೭ : ಬುದ್ಧನು ಧ್ಯಾನಾಸಕ್ತನಾಗಿ ಕುಳಿತಿರುವನು ಜನರು ಆತನ ದರ್ಶನಕ್ಕಾಗಿ ಪೂಜೆಗೈಯಲು ಬರುತ್ತಿರುವುದು. ತೈಲವರ್ಣಚಿತ್ರ. ಈ ಚಿತ್ರದಲ್ಲಿ ತೈವರ್ಣವಾದರೂ ಭಿತ್ತಿಚಿತ್ರದ ವರ್ಣಗಳ ಮೇಳ ಇಲ್ಲಿದೆ. ಅಲ್ಲದೆ ಭಾರತೀಯ ಚಿತ್ರಕಲೆಯಂತೆ ಅಲಂಕಾರಿಕವಾಗಿ ಚಿತ್ರಿಸಿರುವುದನ್ನು ನಾವು ಇಲ್ಲಿ ಕಾಣುತ್ತೇವೆ. ತಂಪಾದ ವರ್ಣಗಳನ್ನು ಹಿನ್ನೆಲೆಯಲ್ಲಿ ಬಳಸಿ ಮುನ್ನೆಲೆಯಲ್ಲಿ ಪ್ರಖರವರ್ಣಗಳನ್ನು ಲೇಪಿಸುವುದರೊಂದಿಗೆ ವರ್ಣಗಳಿಂದಲೇ ದೃಶ್ಯಾಂತರವನ್ನು ತೋರಿಸಿದ್ದಾರೆ. ಪ್ರಖರ ವರ್ಣಗಳಿದ್ದರೂ ಅವು ಕಣ್ಣಿಗೆ ಹೊಡೆಯು ಕಾಣದ ರೀತಿಯಲ್ಲಿ ಚಿತ್ರಿಸಿರುವುದು ಅವರ ಕಲಾತಂತ್ರದ ವಿಶಿಷ್ಟತೆಯಾಗಿದೆ. ಬುದ್ಧನ ವಸ್ತ್ರಗಳನ್ನು ಶುಭ್ರವಾದ ಬಿಳಿವರ್ಣದಿಂದ ತೋರಿಸಿ ಅಲ್ಲಿ ಹಳದಿ. ನೀಲಿ ವರ್ಣಗಳಿಂದ ನವಿರಾದ ಛಾಯಾಂಕನವನ್ನು ಮಾಡಿ ಬಟ್ಟೆಯ ನೆರಿಗೆಗಳನ್ನು ಸೃಷ್ಟಿಸಿದ್ದಾರೆ. ಈ ಬಿಳಿವರ್ಣ ನಮ್ಮ ಕಣ್ಣಿಗೆ ಪ್ರಮುಖವಾಗಿ ಕಂಡರೂ ಆಕೃತಿಗಳ ಸಮತೋಲನದಿಂದಾಗಿ ಕಲಾಕೃತಿಯಲ್ಲಿ

ಚಲನೆಯನ್ನು ಕಾಣುತ್ತೇವೆ. ಹಿನ್ನೆಲೆಯಲ್ಲಿ ದೂರದಲ್ಲಿ ತಿಳಿಕೆಂಪು ವರ್ಣದ ಆಕಾಶ ಅದರ ನಂತರ ತಿಳಿನೀಲಿಯ ಬೆಟ್ಟಗಳು. ನಂತರ ಕಡುನೀಲಿಯಲ್ಲಿ ಮರಗಳ ಸಾಲೂ ನಂತರದಲ್ಲಿ ಸ್ವಲ್ಪ ವಿವರವಾದ ಮರಗಳು. ಪ್ರಾಣಿಗಳನ್ನು ಚಿತ್ರಿಸಿದ್ದಾರೆ ತೀರ ಮುನ್ನೆಲೆಯಲ್ಲಿ ಎಲ್ಲವನ್ನು ಸ್ಪಷ್ಟವಾಗಿ ಆಭರಣ. ಗಿಡದ ಹೂ ಮೊದಲುಗೊಂಡು ಎಲ್ಲವನ್ನು ಆಲಂಕಾರಿಕವಾಗಿ ಚಿತ್ರಿಸಿದ್ದಾರೆ. ಅಲ್ಲದೆ. ಚಿತ್ರದಲ್ಲಿ ಇಷ್ಟೆಲ್ಲ ವಿವಿಧ ವರ್ಣಗಳ ಮೇಳವಿದ್ದರೂ ಕೊನೆಗೆ ಬುದ್ಧನ ಆಕೃತಿಯೂ ಶಾಂತತೆಯ ಮುಖಭಾವದೊಂದಿಗೆ ಆ ಇಡಿ ವಾತಾವರಣವನ್ನು ಶಾಂತ ಭಕ್ತಿರಸದಲ್ಲಿ ಹಿಡಿದಿಡುವ ಪರಿಣಾಮವು ಇಲ್ಲಿದೆ.

ಚಿತ್ರ ೨೮ : ಜಾನಪದ ವಿಷಯದ ಚಿತ್ರ ಜೋಗತಿ ತೈಲಚಿತ್ರ ಉತ್ತರ ಕರ್ನಾಟಕದ ಎಲ್ಲಮ್ಮ ದೇವತೆಯನ್ನು ಹೊತ್ತು ಗೆಜ್ಜೆ ಕಟ್ಟಿಕೊಂಡು ಹಾಡುತ್ತ ತಿರುಗುವವರು. ಈ ಚಿತ್ರದಲ್ಲಿ ಇಬ್ಬರು ಹೆಣ್ಣು ಮಕ್ಕಳು ಒಬ್ಬಪುರುಷನಿದ್ದಾನೆ. ಚೆಟ್ಟಿಯವರು ಇಲ್ಲಿ ಬಳಸಿದ ಬಣ್ಣಗಳ ವೈಖರಿಯೇ ಬೇರೆಯಾಗಿದೆ. ಆದರೂ ನೀಲವರ್ಣವನ್ನು ಮಾತ್ರ ಯಥೇಚ್ಛವಾಗಿ ಇಲ್ಲಿ ದುಡಿಸಿಕೊಂಡಿದ್ದಾರೆ. ಜೋಗತಿಯರ ಮುಖಗಳು ಸಹಿತ ನೀಲಮಯವಾಗಿದ್ದು ಅದಕ್ಕೆ ವಿರೋಧವೆನ್ನುವಂತೆ ಹಣೆಯ ಮೇಲೆ ಹಳದಿಯ ಭಂಡಾರವನ್ನು ಲೇಪಿಸಿ ಬಿಸಿಲು ಮಳೆ ಎನ್ನದೇ ತಿರುಗುವ ಅವರ ಶರೀರದ ಮೈವಳಿಕೆಯನ್ನು ಒರಟೊರಟಾಗಿ ಚಿತ್ರಿಸಿದ್ದಾರೆ. ಇಲ್ಲಿ ಅವರದೇ ಶೈಲಿಯ ಉದ್ದನೆಯ ಆಕೃತಿಗಳನ್ನು ಕಾಣುತ್ತೇವೆ. ಮಧ್ಯದ ಆಕೃತಿ ದೇವರನ್ನು ಹೊತ್ತುಕೊಂಡು ಹೆಜ್ಜೆ ಹಾಕುತ್ತಿದ್ದರೆ. ಅಕ್ಕಪಕ್ಕದ ಆಕೃತಿಗಳು ವಾದ್ಯ (ಚೌಡಿಕೆ) ನುಡಿಸುತ್ತಾ ಹಾಡುತ್ತಿದ್ದಾರೆ. ಇಲ್ಲಿ ಚೆಟ್ಟಿಯವರು ಕೆಲವೇ ವರ್ಣಗಳನ್ನು ದುಡಿಸಿಕೊಂಡಿದ್ದು ಆ ವರ್ಣ ಮೇಳ (harmony) ದಿಂದ ಚಿತ್ರವನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಚಿತ್ರದಲ್ಲಿ ಚಲನೆ ಇದೆ. ಹಿನ್ನೆಲೆಯ ಮರಗಳನ್ನು ನೈಜವಾಗಿ ಚಿತ್ರಿಸಿದ್ದಾರೆ.

ಚಿತ್ರ ೨೯ : ಮೀನುಗಾರರ ಸಂಯೋಜನಾ ಚಿತ್ರ. ಈ ಚಿತ್ರದಲ್ಲಿಯೂ ಸಹಿತ ಚೆಟ್ಟಿಯವರನ್ನು ಗುರುತಿಸುವ ಅವರದೇ ಶೈಲಿಯ ಉದ್ದನೆಯ ಆಕೃತಿಗಳು. ಇಲ್ಲಿಯ ಆಕೃತಿಗಳನ್ನು ಶಕ್ತಿಯುತರನ್ನಾಗಿ ಚಿತ್ರಿಸಿದಂತಿದೆ. ಕೆಲಸಕ್ಕೆ ತಕ್ಕಂತೆ ಶರೀರದ ದೃಢತೆ ಅಲ್ಲಿ ಎದ್ದು ಕಾಣುತ್ತದೆ. ಈ ಚಿತ್ರವನ್ನು ಪ್ಯಾಲೆಟಿನಲ್ಲಿ ಉಳಿದ ಬಣ್ಣಗಳಿಂದ ಚಿತ್ರಿಸಿದ್ದೆಂದು ಕಾಣುತ್ತದೆ ಎಂದು ಅವರ ವಿದ್ಯಾರ್ಥಿಯೊಬ್ಬರು ಈ ರೀತಿ ಹೇಳಿದ್ದಾರೆ. " ಮೀನುಗಾರರ ಕಾಂಪೋಜಿಶನ್ ಪ್ಯಾಲೆಟ್ಟಿನಾಗಿನ ಉಳಿದ ಬಣ್ಣ ತೆಗೆದುಕೊಂಡು ಹಾರ್ಡಬೋರ್ಡ ಮೇಲೆ ಹಚ್ಚ್ಯಾರ ಅದು ಅತ್ಯಂತ ನೈಜವಾಗಿ ಮೂಡಿ ಬಂದಿದೆ. ಆ ಪೆಂಟಿಂಗ ಇವತ್ತಿಗೂ ಅವರ ಮನೆಯಲ್ಲಿ ಇದೆ "[೧೭] ಈ ಚಿತ್ರ ಅವರ ಸಂಗ್ರಹದಿಂದಲೇ ತೆಗೆದುಕೊಂಡದ್ದು. ಇದನ್ನು ಹಾರ್ಡಬೋರ್ಡ್ ಮೇಲೆ ರಚಿಸಿದ್ದು ಅಲ್ಲಲ್ಲಿ ಕೆಲವು ಭಾಗದಲ್ಲಿ ಹಾರ್ಡಬೋರ್ಡನ್ನೇ ಹಿನ್ನೆಲೆಯಾಗಿ ಬಳಸಿಕೊಂಡಿದ್ದಾರೆ. ಅಲ್ಲಿ ಛಾಯೆಗೆ ಮಾತ್ರ ತೆಳುವಾದ ವರ್ಣ ಲೇಪಿಸಿದ್ದಾರೆ. ಮೀನುಗಳನ್ನು ಕುಂಚದ ಒಂದೇ ಎಳೆತದಲ್ಲಿ ಚಿತ್ರಿಸಿದ್ದಾರೆ. ಬುಟ್ಟಿಹೊತ್ತ ಹೆಣ್ಣುಮಗಳು ನಿಂತ ಭಂಗಿ ಲಾಲಿತ್ಯಮಯವಾಗಿದೆ. ಹಿನ್ನೆಲೆಯಲ್ಲಿ ಸಮುದ್ರದ ನೀರು ಅದರಿಂದ ಅಲ್ಲಿಯ ವಾತಾವರಣ ಮಸುಕು ಮಸುಕಾಗಿರುವಂತೆ ನೈಜವಾಗಿ

---

೧೭. ಕೆ. ವಿ. ಕುಂದಗೋಳ (ಚೆಟ್ಟಿಯವರ ವಿದ್ಯಾರ್ಥಿ) ಅವರೊಡನೆ ಸಂದರ್ಶನ. ದಿನಾಂಕ ೧೫-೨-೧೯೯೯. ಗದಗ



൨൦.



൧൯.



೨೨. ಮೈಸೂರು ಜಯಚಾಮರಾಜ ಒಡೆಯರ



೨೧.



೧೩. ಮುಂಬೈಯ ಒಂದು ದೃಶ್ಯ



೧೪ ದೇವಾಲಯದ ಭೂ ದೃಶ್ಯ



೨೫ ಮರದ ಬೊಡ್ಡೆ

೨೬. ಲಕ್ಷ್ಮೀನಾರಾಯಣ



೨೭. ಬುದ್ಧನು ಧ್ಯಾನಕ್ಕೆ ಕುಳಿತದ್ದು





೨೭. ಮೀನುಗಾರರು



೨೮. ಜೋಗತಿ

ಚಿತ್ರಿಸಿದ್ದಾರೆ. ದೂರದಲ್ಲಿ ತೇಲುತ್ತಿರುವ ಚಿಕ್ಕದಾಗಿ ಕಾಣುವ ಹಡಗುಗಳಿಗೆ ಹಾರ್ಡಬೋರ್ಡನ್ನೆ ಹಿನ್ನೆಲೆಯಾಗಿ ಬಳಸಿದ್ದಾರೆ. ನೀಲಿಯ ವರ್ಣದ ಮಧ್ಯದಲ್ಲಿ ಕೆಂಪು ಹಳದಿ ವರ್ಣಗಳನ್ನು ಲೇಪಿಸಿದ್ದರೂ ಯಾವ ಬಣ್ಣವೂ ಕಣ್ಣಿಗೆ ಹೊಡೆಯುವಂತೆ ಕಾಣುವುದಿಲ್ಲ. ಕೆಲವೇ ಬಣ್ಣಗಳಿದ್ದರೂ ಸನ್ನಿವೇಶ ಪರಿಣಾಮಕಾರಿಯಾಗಿ ಮೂಡಿಬಂದಿದೆ.

ಈ ರೀತಿಯಾಗಿ ಚೆಟ್ಟಿಯವರ ವರ್ಣಗಾರಿಕೆಯನ್ನು ಹಂತಹಂತದಲ್ಲಿ ವಸ್ತು ವಿಷಯಗಳಿಗನುಗುಣವಾಗಿ ದುಡಿಸಿಕೊಂಡಿರುವುದನ್ನು ಹಾಗೂ ವರ್ಣಗಳ ಬಳಸುವಿಕೆಯ ಮೇಲಿನ ಹಿಡಿತವು ನಮಗಿಲ್ಲಿ ಮನವರಿಕೆ ಆಗುತ್ತದೆ. ಚೆಟ್ಟಿಯವರು ವರ್ಣಗಳನ್ನು ಎಂದೂ ಹಾಳಾಗದಂತೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಬಳಸುತ್ತಿದ್ದರಲ್ಲದೆ ಉಳಿದ ವರ್ಣಗಳಿಂದ ಚಿತ್ರಗಳನ್ನು ರಚಿಸಿರುವುದನ್ನು ನೋಡಿದ್ದೇವೆ. ವರ್ಣಗಳನ್ನು ಬೆರೆಸಿಕೊಳ್ಳುವ ರೀತಿ ಪ್ರಖರ ಹಾಗೂ ಸೌಮ್ಯವರ್ಣಗಳ ಮೇಳವಿದ್ದರೂ ಕಣ್ಣಿಗೆ ಹೊಡೆದು ಕಾಣದಂತೆ ಚಿತ್ರಿಸುವ ಅವರ ತಂತ್ರ, ನೈಜತೆಯೊಂದಿಗೆ ಭಾವನೆಗಳನ್ನು ಉದ್ದೀಪನಗೊಳಿಸುವ ರೀತಿ ಚೆಟ್ಟಿಯವರ ವರ್ಣಗಾರಿಕೆಯ ಬಗ್ಗೆ ಕಲಾವಿದರಾದ ಶ್ರೀ ಜಿ. ಎಸ್. ಖಂಡೇರಾವ್ ಅವರ ಅಭಿಪ್ರಾಯ ಹೀಗಿದೆ. " ಇವರು ಅತ್ಯಂತ ತಂಪಾದ (cool) ಬಣ್ಣಗಳನ್ನೇ ಉಪಯೋಗ ಮಾಡ್ತಾ ಇದ್ರು. ಅತ್ಯಂತ ಕಠಿಣವಾದ ಕಣ್ಣಿಗೆ ಹೊಡೆಯುವ ಬಣ್ಣಗಳನ್ನು ಉಪಯೋಗಿಸುತ್ತಿರಲಿಲ್ಲ. ಅತಿ ವಿಜೃಂಭಣೆಯ ಚಿತ್ರಗಳಾಗಿದ್ದರೂ ಕೆಲವೇ ಬಣ್ಣಗಳನ್ನು ಉಪಯೋಗಿಸುತ್ತಿದ್ದರು "[೧೮] ಎನ್ನುವಂತೆಯೇ ಅವರ ಚಿತ್ರಗಳಲ್ಲಿ ಇಲ್ಲಿಯವರೆಗೆ ನಾವು ಗಮನಿಸಿದ್ದೇವೆ.

ಒಂದೇ ವಿಷಯದ ನಿರೂಪಣೆಯ ಚಿತ್ರಗಳು ಬೇರೆ ಬೇರೆ ಮಾಧ್ಯಮದಲ್ಲಿ ಚಿತ್ರಿಸಿದ ಬಗೆ. ಒಂದೇ ವಿಷಯವನ್ನು ಚೆಟ್ಟಿಯವರು ಪೂರ್ವಸಿದ್ಧತೆಯ ರೇಖಾಚಿತ್ರದಲ್ಲಿ, ಸಂಪೂರ್ಣ ರೇಖಾ ಚಿತ್ರದಲ್ಲಿ, ಜಲವರ್ಣ ಹಾಗೂ ತೈವರ್ಣದ ಚಿತ್ರದಲ್ಲಿ ದುಡಿಸಿಕೊಂಡ ರೀತಿಯನ್ನು ಇಲ್ಲಿ ವಿವರಿಸಿರುವ ಚಿತ್ರಗಳ ಮುಖಾಂತರ ನೋಡಬಹುದಾಗಿದೆ.

ಮೋಹಿನಿ ಭಸ್ಮಾಸುರ ವಿಷಯದ ಚಿತ್ರಗಳು :

ಚಿತ್ರ ೩೦ : ಪೂರ್ವ ಸಿದ್ಧತೆಯ ರೇಖಾಚಿತ್ರ : ಇಲ್ಲಿಯ ವಿಷಯ ನಾರಾಯಣನು ಭಸ್ಮಾಸುರನನ್ನು ಸಂಹರಿಸಲು ಮೋಹಿನಿ ರೂಪವನ್ನು ತಾಳಿದಂಥ ಸನ್ನವೇಶ. ಶಿವಶಕ್ತಿಯಿಂದ ಹುಟ್ಟಿದ ಇವನು ಶಿವನಿಗೆ ಸದಾಕಾಲ ಭಸ್ಮವನ್ನು ಒದಗಿಸುವ ಕೆಲಸ ನೇಮಿಸಲಾಗಿತ್ತು. ಕೆಲವು ಸಾರಿ ಭಸ್ಮ ಸಿಗದೇ ಇರುವ ಸಂದರ್ಭದಲ್ಲಿ ಈ ಅಸುರನು ಬೇರೆ ಬೇರೆ ವಸ್ತುಗಳನ್ನು ಸುಟ್ಟು ಭಸ್ಮಮಾಡುವ ಶಕ್ತಿತನಗೇ ಕರುಣಿಸಬೇಕೆಂದು ಶಿವನಿಂದ 'ಕೆಂಡದ ಹಸ್ತ' ಪಡೆದುಕೊಂಡು ತನಗೆ ಬೇಕಾದ ವಸ್ತುಗಳ ಮೇಲೆ ಕೈಯಿರಿಸಿದಾಕ್ಷಣ ಅದು ಸುಟ್ಟು ಭಸ್ಮವಾಗುತ್ತಿತ್ತು. ಆಗ ಒಂದು ಸಾರಿ ಶಿವನು ಧ್ಯಾನಾಸಕ್ತನಾದ ಸಂದರ್ಭದಲ್ಲಿ ಅವನನ್ನೇ ಸುಟ್ಟುಬಿಟ್ಟರೆ, ತನ್ನ ಈ ದಿನವೂ ಆತನಿಗೆ ಒದಗಿಸುವ ಭಸ್ಮದ ಕೆಲಸ ಕೊನೆಗೊಳ್ಳುತ್ತದೆಂದು ಭಾವಿಸಿ ಆ ರೀತಿ ಮಾಡಲು ಹೋದಾಗ ಶಿವನು ಎಚ್ಚೆತ್ತು ನಾರಾಯಣನ ಹತ್ತಿರ


---

೧೮. ಜಿ. ಎಸ್. ಖಂಡೇರಾವ ಅವರೊಂದಿಗಿನ ಸಂದರ್ಶನ : ದಿನಾಂಕ ೪-೧೧-೧೯೯೯. ಗುಲ್ಬರ್ಗ

ಓಡಿಬಂದು ತನ್ನನ್ನು ರಕ್ಷಿಸಬೇಕೆಂದಾಗ ನಾರಾಯಣನು ಮೋಹಿನಿ ಎಂಬ ಸ್ತ್ರೀ ವೇಷಧರಿಸಿ ಭಸ್ಮಾಸುರನ ಹತ್ತಿರ ಹೋದಾಗ ಆತ ಆಕೆಯ ಸೌಂದರ್ಯಕ್ಕೆ ಮರುಳಾಗಿ ಆಕೆ ಹೇಳಿದ ಹಾಗೆ ಮಾಡಲು ಸಿದ್ಧನಾಗುತ್ತಾನೆ. ಅಂತೆಯೇ ಮೋಹಿನಿ ನೃತ್ಯ ತಾನು ಮಾಡಿದಂತೆಯೇ ಮಾಡಲು ತಿಳಿಸಿದಳು. ಮಾಡುತ್ತಾ ಮಾಡುತ್ತಾ ತನ್ನ ಬಲಗೈ ತಲೆಯ ಮೇಲೆ ಒಯ್ಯಲು ಆತನು ಹಾಗೆ ಮಾಡುವನು. ಅದರಿಂದ ಸ್ವತಃ ತಾನೆ ಸುಟ್ಟು ಭಸ್ಮವಾಗುತ್ತಾನೆ. ಶಿವಪುರಾಣದಲ್ಲಿ ಬರುವ ಒಂದು ಸನ್ನಿವೇಶದ ಹಿನ್ನೆಲೆಯ ಚಿತ್ರ ಇದಾಗಿದೆ. ಇಲ್ಲಿ ಮೋಹಿನಿ ಭಸ್ಮಾಸುರನಿಗೆ ನೃತ್ಯವನ್ನು ಕಲಿಸುತ್ತಿದ್ದಾಳೆ.

ಈ ರೇಖಾಚಿತ್ರದಲ್ಲಿ ಭಸ್ಮಾಸುರನು ನೃತ್ಯದಲ್ಲಿ ಮೋಹಿನಿಯೊಂದಿಗೆ ಹೆಜ್ಜೆಗೆ ಹೆಜ್ಜೆ ಹಾಕುತ್ತಿದ್ದಾನೆ. ಆತನ ಮೋಹದ ದೃಷ್ಟಿಮಾತ್ರ ಮೋಹಿನಿಯ ಮೇಲೆ ಕೇಂದ್ರಿತವಾದಂತೆ ಚಿತ್ರಿಸಿದ್ದಾರೆ. ಕಾರಣ ಆತ ನೃತ್ಯ ಕಲಿಯುತ್ತಿರುವುದು ಆಕೆಯ ಸೌಂದರ್ಯಕ್ಕೆ ಮರುಳಾಗಿಯೇ ಎನ್ನುವುದನ್ನು ನಾವು ಇಲ್ಲಿ ಗಮನಿಸಬೇಕು. ಅಸುರನ ಆಕೃತಿಗೆ ತಕ್ಕಂತಹ ಮೋಹಿನಿಯ ಕೋಮಲ ಭಾವನೆಯ ಶೃಂಗಾರಮಯವಾದ ಶರೀರದ ರಚನೆ ನೋಡುಗರನ್ನು ಆ ಶೃಂಗಾರ ಭಾವದಲ್ಲಿ ತೇಲುವಂತೆ ಮಾಡುತ್ತದೆ. ಈ ಚಿತ್ರದಲ್ಲಿ ನೃತ್ಯದ ಭಂಗಿ ಬೇರೆಯೇ ಇದೆ. ಬಹುಶಃ ಆತನ ಬಲಗೈಯಲ್ಲಿ ಕೆಂಡವಿದೆ ಎಂಬುದನ್ನು ತೋರಿಸಬೇಕೆಂಬ ಉದ್ದೇಶದಿಂದ ಆ ರೀತಿ ಚಿತ್ರಿಸಿರಬೇಕು ಏಕೆಂದರೆ ಬಲಗೈ ಮಧ್ಯದಲ್ಲಿ ಕೆಂಡದ ಕಿರಣದಂತೆ ಕೆಲವು ರೇಖೆಗಳನ್ನು ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿಯ ಗಿಡದ ಆಕೃತಿಯನ್ನು ಸಂಕ್ಷಿಪ್ತವಾಗಿ ಚಿತ್ರಿಸಿದ್ದಾರೆ. ನೃತ್ಯದ ಲಯದ ಧ್ವನಿ ಕೇಳಿಬರುವಂತಿದೆ. ಇದರಿಂದ ಚಿತ್ರದಲ್ಲಿ ಚಲನೆಯು ಇದೆ. ಶ್ರವ್ಯ ಭಾವನೆಯನ್ನು ನಾವು ದೃಶ್ಯ ಮಾಧ್ಯಮದಿಂದ ಕಂಡುಕೊಳ್ಳಬಹುದಾಗಿದೆ. ಎಂಬಂತೆ ಈ ರೇಖಾಚಿತ್ರ ಚಿತ್ರಿಸಿದ್ದಾರೆ. ಇಲ್ಲಿ ಯಾವುದೇ ಇತರ ಅಲಂಕಾರಿಕೆ ಇಲ್ಲ. ಇದೊಂದು ಪೂರ್ವಸಿದ್ಧತೆಯ ಚಿತ್ರವಾಗಿದ್ದರಿಂದ ಆ ವಿಷಯದ ಸಂಯೋಜನೆಯ ಅಂಕನೆ ಇದಾಗಿದೆ.

ಚಿತ್ರ ೩೧ : ಈ ಚಿತ್ರ ಜಲವರ್ಣ (poster colour) ದಿಂದ ಚಿತ್ರಿಸಲಾಗಿದೆ. ಇಲ್ಲಿ ಚಿಟ್ಟಿಯವರು ಅಲಂಕಾರಿಕೆಗೆ ಬಹಳ ಮಹತ್ವ ನೀಡಿದದು ಕಂಡು ಬರುತ್ತದೆ. ಇಲ್ಲಿ ಆಕೃತಿಗಳ ಗುಣಧರ್ಮವನ್ನು ವರ್ಣಗಳ ಮುಖಾಂತರ ಹೊರಹಾಕಿದ್ದಾರೆ. ಮೋಹಿನಿ ಭಸ್ಮಾಸುರ ಎದುರು ಬದುರಾಗಿ ನೋಡುತ್ತಿರುವಂತೆ ಇದ್ದು. ಮೋಹಿನಿಯ ದೇಹ ಎದುರು ಮುಖವಾಗಿದ್ದರೂ ಮುಖಮಾತ್ರ ಎಡಪಕ್ಕಕ್ಕೆ ಹೊರಳಿದೆ. ನವಿರಾದ ಛಾಯಾಂಕನವಿದೆ. ಗೌರವವರ್ಣದ ಮೋಹಿನಿ ಮೈತುಂಬಾ ಆಭರಣಗಳನ್ನು ಧರಿಸಿದ್ದಾಳೆ. ಆಕೆ ಧರಿಸಿದ ವಸ್ತ್ರಗಳನ್ನು ಪಾರದರ್ಶಕವಾಗಿ ಚಿತ್ರಿಸಿದ್ದಾರೆ. ಮೋಹಕ ಭಂಗಿ ಇದಾಗಿದೆ. ಅದೇ ಭಂಗಿಯಲ್ಲಿ ಆಕೆಯನ್ನು ಕಣ್ಣಿನಲ್ಲೇ ಹೀರಿಬಿಡುವನೆಂಬ ಭಾವನೆ ಅಸುರನಲ್ಲಿ ಇದೆ. ನೀಲ ವರ್ಣದ ಶರೀರ ಅಸುರನ ವ್ಯಕ್ತಿತ್ವಸಾರುವ ಬಲಿಷ್ಠದೇಹ. ಭಯಂಕರವಾದ ಮೀಸೆ. ಕ್ರೂರ ಕಣ್ಣುಗಳ ಒಂದೆ ಬಯಕೆಯ ಭಾವನೆ ಇರುವಂತೆ ಚಿತ್ರಿಸಿದ್ದಾರೆ. ಆತನು ಸಹಿತ ಆಭರಣಗಳಿಂದ ಅಲಂಕಾರ ಮಾಡಿಕೊಂಡಿದ್ದಾನೆ. ನೀಲಕ್ಕೆ ವಿರೋಧವಾದ ಕೆಂಪು ಕಿತ್ತಳೆ ವರ್ಣದ ಪಂಚೆ ಚಿತ್ರಿಸಿದ್ದಾರೆ. ಜೊತೆಗೆ ಉದ್ದನೆಯ ಉಗುರು. ಆಕೆ ನೃತ್ಯ ಮಾಡಿದಂತೆ ಆತನು ಮಾಡಿದ್ದಾನೆ. ಹಿನ್ನೆಲೆಯ ಮರವನ್ನು ಅದರ ಮೈವಳಿಕೆಯನ್ನು ನೆರಳು ಬೆಳಕಿನೊಂದಿಗೆ



ಮೋಹಿನಿ ಭಸ್ಮಾಸುರರು ಲಯಬದ್ಧವಾಗಿ ನೃತ್ಯಮಾಡುತ್ತಿರುವ ದೃಶ್ಯ.

ಚಿತ್ರ ೩೦



ಮೋಹಿನಿ ಭಸ್ಮಾಸುರರ ಚಿತ್ರ

೨೧.



೨೨.



ನೈಜತೆಯಿಂದ ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಸೂರ್ಯನ ಹೊಂಬಣ್ಣವಿದೆ. ಇಲ್ಲಿ ಭಸ್ಮಾಸುರನಿಗೆ ನೃತ್ಯಕ್ಕಿಂತಲೂ ಮೋಹಿನಿಯ ಮೇಲೆ ಸಂಪೂರ್ಣ ಗಮನವಿದೆ. ಆಕೃತಿಯ ಭಾವನೆಗಳೊಂದಿಗೆ ವೀಕ್ಷಕನ ಭಾವನೆಯೂ ಒಂದಾಗುವಂತೆ ಚಿತ್ರಿಸಿದ್ದಾರೆ. ಭಾರತೀಯ ಚಿತ್ರಗಳಂತೆ ಅಲಂಕಾರಿಕೆ ಹೆಚ್ಚಿದೆ.

ಚಿತ್ರ ೩೨ : ಈ ಚಿತ್ರವನ್ನು ತೈಲವರ್ಣದಲ್ಲಿ ರಚಿಸಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರಿನ ಸಂಗ್ರಹದಲ್ಲಿದೆ ಈ ಚಿತ್ರದಲ್ಲಿ ಆಕೃತಿಗಳು ಹಿಂದು ಮುಂದಕ್ಕೆ ನಿಂತಂತೆ ಚಿತ್ರಿಸಿದ್ದಾರೆ. ಇಲ್ಲಿ ಭಸ್ಮಾಸುರನು ಆಕೆಯ ಮೇಲಿನ ದೃಷ್ಟಿಯೊಂದಿಗೆ ನೃತ್ಯದ ಕಡೆಗೂ ಗಮನಹರಿಸಿದಂತಿದೆ. ಹೀಗೆ ಚಿತ್ರಿಸಿದಾಗ ನಾರಾಯಣನು ಕೈಕೊಂಡ ಕಾರ್ಯಸಾಧಿಸಲು ಸುಲಭವಾಗುತ್ತದೆ. ಆದ್ದರಿಂದ ಈ ಚಿತ್ರದಲ್ಲಿ ಹೀಗೆ ಸ್ವಲ್ಪ ಬದಲಾವಣೆಯನ್ನು ಮಾಡಿದಂತೆ ಕಾಣುತ್ತದೆಯಲ್ಲದೆ. ಇಲ್ಲಿ ಅಲಂಕಾರಿಕೆ ಇಲ್ಲ. ಇಲ್ಲಿ ಮೋಹಿನಿ ತನ್ನ ಬಲಗೈಯನ್ನು ತಲೆಯ ಮೇಲಕ್ಕೆ ಒಯ್ಯುತ್ತಿರುವಂತೆ, ಆತನೂ ಹಾಗೇ ಮಾಡಿದ್ದಾನೆ. ಅಂದರೆ ಸನ್ನಿವೇಶದ ಪ್ರಮುಖ ನಟನೆಯನ್ನು ಇಲ್ಲಿ ಕಾಣಬಹುದು. ಇಲ್ಲಿ ವರ್ಣಗಳನ್ನು ಸ್ವಲ್ಪ ತೆಳುವಾಗಿ ಲೇಪಿಸಿದ್ದಾರೆ. ಭಸ್ಮಾಸುರನಿಗೆ ಇಲ್ಲಿಯೂ ಭಯಂಕರ ಮೀಸೆಯನ್ನು ಚಿತ್ರಿಸಿದರೂ ಮುಖದಲ್ಲಿ ಭಯಂಕರತೆ ಇಲ್ಲ. ಆದರೆ ಆಸೆ ಇದೆ. ಹಿನ್ನೆಲೆಯ ಮರವನ್ನು ಸಂಕ್ಷಿಪ್ತವಾಗಿ ಚಿತ್ರಿಸಿದ್ದಾರೆ. ನೆರಳು ಬೆಳಕಿನ ವಿಂಗಡಣೆ ಹಿತಮಿತವಾಗಿದೆ.

ಸಿದ್ದೇಶ್ವರನು ನದಿಯನ್ನು ದಾಟುತ್ತಿರುವ ಸನ್ನಿವೇಶದ ಚಿತ್ರಗಳು :

ಇಲ್ಲಿ ಎರಡು ರೇಖಾ ಚಿತ್ರ ಹಾಗೂ ಒಂದು ತೈಲವರ್ಣ ಚಿತ್ರವನ್ನು ನೋಡಬಹುದಾಗಿದೆ. ಮೊದಲನೆಯದು ಪೂರ್ವಸಿದ್ಧತೆಯ ಚಿತ್ರ. ಎರಡನೆಯದು ಸಂಪೂರ್ಣ ಇಂಕ ಮಾಧ್ಯಮದ ರೇಖಾ ಚಿತ್ರ ಮೂರನೆಯದು ತೈಲವರ್ಣ ಚಿತ್ರ ಇಲ್ಲಿಯೂ ಸ್ವಲ್ಪ ಬದಲಾವಣೆ ಕಂಡರೂ ಮಾಧ್ಯಮಕ್ಕೆ ತಕ್ಕಂತೆ ಅವುಗಳ ಮೈವಳಿಕೆಯ ಅನುಭವವು ಬಿನ್ನವಾಗಿರುವುದನ್ನು ಇಲ್ಲಿ ನೋಡಬಹುದಾಗಿದೆ.

ಈ ಚಿತ್ರಗಳ ಮೂಲ ವಿಷಯ ಶ್ರೀ ಎಡೆಯೂರು ಸಿದ್ಧೇಶ್ವರ ಪುರಾಣದಲ್ಲಿ ಬರುವ ಸಿದ್ಧೇಶ್ವರರ ಲೀಲೆ. ನದಿಯನ್ನು ದಾಟುವ ಸಂದರ್ಭದಲ್ಲಿ ಆ ನದಿಯೇ ಇವರಿಗೆ ದಾರಿಯನ್ನು ಬಿಟ್ಟುಕೊಟ್ಟ ಸನ್ನಿವೇಶದ ಚಿತ್ರಣ ಇವುಗಳಲ್ಲಿದೆ.

ಚಿತ್ರ ೩೩ : ಪೂರ್ವಸಿದ್ಧತಾ ಚಿತ್ರ : ಈ ಚಿತ್ರ ತೈಲ ಚಿತ್ರದ ಪೂರ್ವಸಿದ್ಧತಾ ಚಿತ್ರವಾಗಿದೆ. ಇಲ್ಲಿ ಸಂಕ್ಷಿಪ್ತವಾಗಿ ಆಕೃತಿಗಳನ್ನು ರೇಖಿಸಿಕೊಂಡಿರುವುದು ಕಂಡುಬರುತ್ತದೆ. ಹಿನ್ನೆಲೆಯ ಚಿತ್ರದಲ್ಲಿ ಸಹಿತ ದೂರದ ಬೆಟ್ಟಗಳನ್ನು ಹಾಗೆ ಗೆರೆ ಎಳೆದು ಅದರ ಅನುಭವ ಬರುವ ರೀತಿಯಲ್ಲೇ ಚಿತ್ರಿಸಿದ್ದಾರೆ. ನದಿ ದಾರಿಗಳನ್ನು ಬಿಟ್ಟಾಗ ಅದರ ನೀರಿನ ಅಲೆಗಳು ಆಕಡೆ ಇಕಡೆ ಸರಿಯುವದನ್ನು ಪೆನ್ಸಿಲ್ಲಿನ ಕಡುಪಾದ ಛಾಯೆಯಿಂದ ತೋರಿಸಿರುವರಲ್ಲದೆ. ನೀರಿನ ತಳದಲ್ಲಿದ್ದ ಮೀನು ಮುಂತಾದ ಜಲಚರಗಳನ್ನು ಸಂಕ್ಷಿಪ್ತವಾಗಿ ಚಿತ್ರಿಸಿದ್ದಾರೆ. ಶಿವಲಿಂಗ ಯತಿಗಳನ್ನು ಸಂಕ್ಷಿಪ್ತವಾಗಿ ಅವರು ನಡೆದು ಬರುತ್ತಿರುವಂತ ಭಂಗಿಯಲ್ಲಿ ಮಾತ್ರ ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಇರುವ ಅವರ ಅನುಯಾಯಿಗಳನ್ನು

ಹಾಗೆ ಪೆನ್ಸಿಲ್‌ನಿಂದ ಅಲ್ಲಲ್ಲಿ ಗೆರೆ ಎಳೆದು ಗುಂಪಾಗಿ ಬರುತ್ತಿರುವಂತೆ ಸೂಚನೆಯನ್ನು ನೀಡುವಂತೆ ಚಿತ್ರಿಸಿದ್ದಾರೆ. ಒಟ್ಟಾರೆ ಚಿತ್ರದ ಪೂರ್ವ ಕಲ್ಪನೆ ಸ್ಪಷ್ಟವಾಗಿಯೇ ಇಲ್ಲಿ ಮೂಡಿಬಂದಿದೆ.

ಚಿತ್ರ ೩೪ : ಇಂಕ ಮಾಧ್ಯಮದ ರೇಖಾ ಚಿತ್ರ ಇದನ್ನು ಶ್ರೀ ವಿರಕ್ತ ತೋಂಟದಾರ್ಯ ವಿರಚಿತ ಶ್ರೀ ಸಿದ್ಧೇಶ್ವರ ಮಹಾಪುರಾಣದ ೨೭೫ ನೇ ಪುಟದಲ್ಲಿ ನೋಡಬಹುದಾಗಿದೆ. ಈ ಚಿತ್ರದಲ್ಲಿ ಸಿದ್ಧಲಿಂಗ ಯತಿಗಳು ಹಾಗೂ ಅವರ ಅನುಯಾಯಿಗಳೆಲ್ಲ ಸ್ವಲ್ಪ ಚಿತ್ರದ ಬಲಭಾಗದಿಂದ ಬರುತ್ತಿದ್ದಾರೆ. ನದಿಯು ಅವರಿಗೆ ದಾರಿಮಾಡಿಕೊಟ್ಟಿರುವುದರಿಂದ ನೀರು ಎರಡೂ ಮಗ್ಗಲುಗೆ ಸರಿದಿದೆ. ನೀರು ಆ ರೀತಿ ಸರಿದಿರುವ ನೀರಿನ ಸೆಳೆತವನ್ನು ಗೆರೆಗಳನ್ನು ತೀವ್ರವಾಗಿ ಎಳೆದು ತೋರಿಸಿದ್ದಾರೆಯಲ್ಲದೆ ನೀರಿನ ಬುರುಗನ್ನು ಗುಳ್ಳೆಗಳನ್ನು ಅದರ ಜೊತೆಗೆ ಚಿತ್ರಿಸಿದ್ದಾರೆ. ನೀರಿನ ಮೈವಳಿಕೆಯ ಅನುಭವ ನೀಡುತ್ತದೆ. ನೀರಿನ ತಳದಲ್ಲಿಯ ಶಂಖ. ಚಿಪ್ಪು. ಹಾಗೂ ಮೀನು. ಕಪ್ಪೆಗಳು ದಿಕ್ಕೆಟ್ಟು ಓಡುತ್ತಿವೆ. ಚಿತ್ರದಲ್ಲಿ ದೃಶ್ಯಾಂತರವಿದೆ. ಹಿಂದೆ ಬರುತ್ತಿರುವ ಜನಸ್ತೋಮ ಗಾಬರಿಗೊಂಡು ಬಾಯಿಮೇಲೆ ಕೈಯಿಟ್ಟುಕೊಂಡು ಆಶ್ಚರ್ಯ ವ್ಯಕ್ತಪಡಿಸುತ್ತಿದೆ. ಅವರ ಮುಖದಲ್ಲಿ ಗಾಬರಿಯ ಭಾವವಿದೆ. ಹಿನ್ನೆಲೆಯಲ್ಲಿ ಮರಗಿಡಗಳು ಅದರ ಹಿಂದೆ ಬೆಟ್ಟ ನಂತರದಲ್ಲಿ ಆಗಸವನ್ನು ಚಿತ್ರಿಸಿದ್ದಾರೆ. ಯತಿಗಳನ್ನು ಆಶೀರ್ವದಿಸುವ ರೂಪದಲ್ಲಿ ಚಿತ್ರಿಸಿದ್ದಾರೆ.

ಚಿತ್ರ ೩೫ : ಇದು ತೈಲವರ್ಣದ ಚಿತ್ರ. ಇಲ್ಲಿ ಬಣ್ಣಗಳಲ್ಲಿ ದೃಶ್ಯಾಂತರವನ್ನು ತೋರಿಸಿದ್ದಾರೆ. ಇಲ್ಲಿ ಸಿದ್ಧಲಿಂಗಯತಿಗಳನ್ನು ಮಧ್ಯದಲ್ಲೇ ಚಿತ್ರಿಸಿದ್ದು. ಹಿನ್ನೆಲೆಯಲ್ಲಿ ಅವರ ಅನುಯಾಯಿಗಳನ್ನು ಅದೇ ರೇಖೆಯಲ್ಲಿ ಚಿತ್ರಿಸಿದ್ದಾರೆ. ಇಲ್ಲಿ ಎಲ್ಲ ಜನಸ್ತೋಮದ ಮುಖಗಳನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಹರಿಯುವ ನದಿ ಅದೇ ರೀತಿ ದಾರಿಮಾಡಿಕೊಟ್ಟಿದೆ. ಆದರೆ ಇಲ್ಲಿ ಹಾವುಗಳು. ಮೀನು. ಕಪ್ಪೆ ನೀರಿನ ಜೆತೆಯಲ್ಲೇ ಮೇಲಕ್ಕೆ ಹಾರಿವೆ. ವರ್ಣಗಳಿಂದ ನೀರಿನ ಮೈವಳಿಕೆ ನೈಜತೆಯಿಂದ ಮೂಡಿಬಂದಿದೆ. ದೂರದಲ್ಲಿ ಹೊಂಬಣ್ಣದ ಆಕಾಶ ನಂತರ ತೆಳು ನೀಲಿವರ್ಣದ ಬೆಟ್ಟ ದೂರದ ಕಲ್ಪನೆ ನೀಡಿದರೆ ಯತಿಗಳು ಧರಿಸಿದ ಕಾವಿ ವರ್ಣ ಮುನ್ನೆಲೆಯ ಸಮೀಪದ ಅನುಭವ ನೀಡುತ್ತದೆ. ನೀರಿನಲ್ಲಿಯ ತಳದಲ್ಲಿಯ ಬಂಡೆಗಳನ್ನು ನೈಜವಾದ ವರ್ಣಗಳಿಂದ ರಚಿಸಿದ್ದಾರೆ. ಹಿಂದಿನ ರೇಖಾ ಚಿತ್ರದಲ್ಲಿಯಂತೆಯೇ ಇಲ್ಲಿಯೂ ಕೂಡಾ ಜನಸ್ತೋಮದಲ್ಲಿ ಗಾಬರಿ. ಆಶ್ಚರ್ಯದ ಭಾವನೆಗಳನ್ನು ಕಾಣುತ್ತೇವೆ. ಇಲ್ಲಿ ಪ್ರತಿಯೊಂದನ್ನು ವಿವರವಾಗಿ ಚಿತ್ರಿಸಿದ್ದಾರೆ. ಉಡುಗೆಯಲ್ಲಿಯ ನವಿರಾದ ನೆರಳು. ಬೆಳಕು. ಮುಖದಲ್ಲಿ ಪ್ರಸನ್ನತೆ ಇದೆ. ಚಿತ್ರದಲ್ಲಿ ಚಲನೆ ಇದೆ. ಯತಿಗಳ ಬಲಗೈ ನೆರಳು ಕೂಡಾ ಅವರ ಮೈಮೇಲಿನ ಅರಿವೆಯ ಮೇಲೆ ಬಿದ್ದಿರುವಂತೆ ಚಿತ್ರಿಸಿದ್ದಾರೆ.

ಈ ಎಲ್ಲ ಚಿತ್ರಗಳನ್ನು ಅವಲೋಕಿಸಿದಾಗ ವಿಷಯ ಒಂದೇ ಆದರೂ ಅವುಗಳ ಮಾಧ್ಯಮಕ್ಕೆ ತಕ್ಕಂತೆ ನಿರೂಪಣೆ ಬೇರೆ ಬೇರೆ ಯಾಗಿದೆ. ಆದರೆ ಸನ್ನಿವೇಶದ ಅನುಭವ ಒಂದೇ ರೀತಿಯಾಗಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಮಾಧ್ಯಮಕ್ಕೆ ತಕ್ಕಂತಹ ಸಿರಿತನ (Richness) ಚಿತ್ರದಲ್ಲಿ ಮೂಡಿ ಬಂದಿದೆ.



ಚಿತ್ರ ೩೩



ಸಿದ್ಧಲಿಂಗೇಶ್ವರನಿಗೆ ತುಂಬಿ ಹರಿಯುತ್ತಿರುವ ನದಿಯು ದಾರಿ ಕೊಟ್ಟುದುದು.

ಚಿತ್ರ ೩೪







೨೭. ಶ್ರೀ ಸಿದ್ಧಲಿಂಗ ಯತಿಗಳಿಗೆ ಹರಿಯುವ ನೀರು ದಾರಿ ನೀಡಿದ್ದು

ಪ್ರಭಾವ :

ಚಿತ್ರಕಲಾ ಇತಿಹಾಸದಲ್ಲಿ ಅನೇಕ ಕಲಾವಿದರು ತಮ್ಮದೇ ಆದ ಶೈಲಿ ವೈಶಿಷ್ಟ್ಯತೆಯಿಂದ ತಮ್ಮ ಸಮಕಾಲೀನ ಕಲಾವಿದರಿಂದ ಬೇರೆಯೇ ಎನ್ನುವಂತೆ ತಮ್ಮ ಕಲಾಕೃತಿಗಳ ಮೂಲಕ ತಮ್ಮ ತನವನ್ನು ಅಭಿವ್ಯಕ್ತಿಪಡಿಸಿದ್ದಾರೆ. ಪ್ರಪಂಚದ ಎಲ್ಲಾ ಚಿತ್ರಕಲಾವಿದರು ಒಂದಿಲ್ಲಾ ಒಂದು ರೀತಿಯಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಪ್ರಾರಂಭದ ದೆಸೆಯಲ್ಲಿ ಪ್ರಭಾವ ಬೀರಿರುವದನ್ನು ಕಾಣುತ್ತೇವೆ. ಕೊನೆಗೆ ತಮ್ಮದೆ ಆದ ಮಾರ್ಗದಲ್ಲಿ ಚಿತ್ರಗಳನ್ನು ರಚಿಸಿ ತಮ್ಮ ಪ್ರತಿಭೆಯನ್ನು ಮೆರೆದು ತಮಗೆ ತಾವೇ ಸಾಟಿಯಾಗಿರುವುದನ್ನು ನೋಡುತ್ತೇವೆ.

ಎಂ. ಎ. ಚೆಟ್ಟಿಯವರು ಕೂಡಾ ಇದರಿಂದ ಹೊರತಾಗಿಲ್ಲ. ಅವರು ಚಿತ್ರಕಲಾ ಅಭ್ಯಾಸ ಮಾಡುವಾಗಿನ ಸಂದರ್ಭದಲ್ಲಿ ಅವರ ಗುರುಗಳ ಅಲ್ಲಿಯ ಅಕಾಡೆಮಿಕ್ ಕಲಾ ವಾತಾವರಣದ ಪ್ರಭಾವ ಒಂದೆಡೆಯಾದರೆ ಅಜಂತಾ. ಕಿರುರೂಪ (miniature) ಚಿತ್ರಗಳು ಹಾಗೂ ಆಗಿನ ಕಾಲದ ನಾಟಕದ ಪ್ರಭಾವವನ್ನು ಶಿಲ್ಪಗಳ ಪ್ರಭಾವ ಇವರ ಪ್ರಾರಂಭದ ದೆಸೆಯಲ್ಲಿಯ ಚಿತ್ರಗಳಲ್ಲಿ ನೋಡುತ್ತೇವೆ. ತದನಂತರದಲ್ಲಿ ಅವರು ತಮ್ಮದೇ ಆದ ಮಾರ್ಗದಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ.

ಅವರ ಮೇಲೆ ಪ್ರಭಾವ ಬೀರಿದ ಕೆಲವು ಲಕ್ಷಣಗಳನ್ನು ಕಾಣುವ ಚಿತ್ರಗಳನ್ನು ಇಲ್ಲಿ ಚರ್ಚಿಸಲಾಗಿದೆ. ಚೆಟ್ಟಿಯವರು ಮುಂಬೈನ ಜೆ. ಜೆ. ಕಲಾ ಶಾಲೆಯಲ್ಲಿ ಕಲಿಯುವಾಗ ಪಾಶ್ಚಾತ್ಯರ ಆಳ್ವಿಕೆಗೆ ಒಳಪಟ್ಟಂಥ ಈಶಾಲೆಯಲ್ಲಿ ಪಾಶ್ಚಾತ್ಯ ಕಲಾ ಶಾಲೆಯಂತೆ. ಅಕಾಡಿಮಿಕ್ ಶೈಲಿಯ ತಂತ್ರವನ್ನೇ ಹೇಳಿಕೊಡುತ್ತಿದ್ದರು.[೧೯] ಇದರಿಂದಾಗಿ ಆಲದ ಮರದಂತೆ ಹಬ್ಬಿನಿಂತ ಈ ಕಲಾ ಶಾಲೆಯ ಅಭ್ಯಾಸ ಕ್ರಮದ ನೆರಳನ್ನು ಆಗಿನ ಕಾಲದ ಎಲ್ಲಾ ಕಲಾವಿದರ ಕಲಾಕೃತಿಗಳಲ್ಲೂ ಕಾಣುತ್ತೇವೆ. ಹೀಗಾಗಿ ಭಾರತೀಯ ಹಾಗೂ ಪಾಶ್ಚಾತ್ಯ ಮಿಶ್ರ ಕಲಾ ಸಂಪ್ರದಾಯದ ಚಿತ್ರಕಾರರು ಬೆಳೆದು ಬಂದರು ಅದರಲ್ಲಿ ಚೆಟ್ಟಿಯವರು ಒಬ್ಬರು. ಅವರ ಆ ಪ್ರಭಾವವನ್ನು ಈ ಚಿತ್ರದಲ್ಲಿ ನೋಡಬಹುದು.

ಚಿತ್ರ ೩೬ : ಲಕ್ಷ್ಮೀನಾರಾಯಣರ ಚಿತ್ರ. ಇದನ್ನು೧೯೩೮ ರಲ್ಲಿ ಚಿತ್ರಿಸಲಾಗಿದೆ. ಈ ಚಿತ್ರದಲ್ಲಿ ವಿಷಯ. ಭಾವನೆಗಳು ಭಾರತೀಯವಾದರೂ ಚಿತ್ರರಚಿಸುವಂಥ ಶೈಲಿ. ತಂತ್ರ ಪಾಶ್ಚಾತ್ಯ. ಅಕಾಡೆಮಿಕ್ ಶೈಲಿಯ ಒಂದು ರೀತಿಯ ಅಭ್ಯಾಸಪೂರ್ಣವಾದ ಕಲಾಕೃತಿ ಇದಾಗಿದೆ. ವರ್ಣಗಳನ್ನು ಬೆರೆಸುವರೀತಿ. ಆಕೃತಿಗಳ ನೆರಳು ಬೆಳಕು ತ್ರಿಮಾನದ ಅನುಭವ ದೂರ ಸಮೀಪಗಳ ಕಲ್ಪನೆ. ಜೀವಂತ ಹಾಗೂ ಜಡ ವಸ್ತುಗಳ ನೈಜವಾದ ವ್ಯವಳಿಕೆ. ತಾದ್ರೂಪ್ಯತೆ. ಪ್ರತಿಯೊಂದು ವಸ್ತುವಿನ ವಿವರ. ಆಕೃತಿಗಳನ್ನು ಪ್ರಮಾಣ ಬದ್ಧವಾಗಿ ರಚಿಸುವರೀತಿ. ಬಟ್ಟೆಯಲ್ಲಿಯ ನೆರಿಗೆಗಳು ಆಕೃತಿಗಳ ನಿಯೋಜನೆ ಎಲ್ಲದರಲ್ಲೂ ಮುಂಬೈಯಿಯ ಜೆ. ಜೆ. ಕಲಾ ಶಾಲೆಯ ಪ್ರಭಾವವನ್ನು ನೋಡುತ್ತೇವೆ. (ಇದೇ ಅಧ್ಯಾಯದ ಚಿತ್ರ ೨೬ ನೋಡಿರಿ.)

ಚಿತ್ರ ೩೭ : ವಿರೂಪಾಕ್ಷ ಪಂಡಿತ ವಿರಚಿತ ಚನ್ನಬಸವ ಪುರಾಣಕ್ಕೆ ಚೆಟ್ಟಿಯವರು ಚಿತ್ರಿಸಿಕೊಟ್ಟ ಚಿತ್ರಗಳಲ್ಲಿ ಅಜಂತೆಯ ಪ್ರಭಾವವನ್ನು ಕಾಣುತ್ತೇವೆ. ಅದರಲ್ಲಿಯ "ಪ್ರಸಾದ ಸೇವಿಸುವ ನಾಗಲಾಂಬಿಕೆ"[೨೦]

---

೧೯. ಮೂರನೇ ಅಧ್ಯಾಯದಲ್ಲಿ ಪಾಶ್ಚಾತ್ಯ ಅಭ್ಯಾಸ ಕ್ರಮದ ಬಗ್ಗೆ ವಿವರವಾಗಿ ಮಾಹಿತ ನೋಡಬಹುದಾಗಿದೆ.

೨೦. ವೀರಭದ್ರಪ್ಪ ಹಾಲಭಾವಿ (ಸಂ.) : ವಿರೂಪಾಕ್ಷ ಪಂಡಿತ ವಿರಚಿತ : ಚೆನ್ನಬಸವ ಪುರಾಣ : ಪುಟ ೩೧

ರೇಖಾಪ್ರಧಾನವಾದ ಈ ಚಿತ್ರ ಆಕೃತಿ ವರ್ಣಗಳಲ್ಲಿ ಅಜಂತೆಯ ಚಿತ್ರಗಳ ಪ್ರಭಾವವಿದೆ. ನೀಳವಾದ ಆಕೃತಿ ಕಣ್ಣು, ಕೈಬೆರಳು ಅಜಂತಾ ಮಾದರಿಯವೇ. ೧೨ ನೇ ಶತಮಾನದ ನಾಗಲಾಂಬಿಕೆಯ ಉಡುಗೆ ತೊಡುಗೆ ಈ ರೀತಿಯದ್ದಾಗಿರಲಿಲ್ಲ. ಈ ಕಲ್ಪನೆಯಲ್ಲಿ ನಾಗಲಾಂಬಿಕೆಯ ಆಕೃತಿ. ಉಡುಗೆ ತೊಡುಗೆಯನ್ನು ಗಂಧರ್ವ ಕನ್ಯೆಯಂತೆ ಚಿತ್ರಿಸಿದ್ದಾರೆ. ಚರಮೂರ್ತಿಯಾಗಿ ಬಂದ ಶಿವನನ್ನು ನೀಳಕಾಯದಲ್ಲಿ ತೋರಿಸಿದ್ದಾರೆ. ಅವರ ಇಬ್ಬರ ಮುಖದಲ್ಲೂ ಸಾತ್ವಿಕ ಕಳೆಯಿದೆ. ಅಜಂತಾದ ಸೌಮ್ಯ ಬಣ್ಣಗಳಿದ್ದು ಅತ್ಯಂತ ವಿರಳವಾದ ನೆರಳು ಬೆಳಕನ್ನು ಇಲ್ಲಿ ತೋರಿಸಿದ್ದಾರೆ. ಜಲವರ್ಣದಲ್ಲಿ ರಚಿಸಿದ್ದು

ಚಿತ್ರ ೩೮ : ಅಜವಿಲಾಪ. ಜಲವರ್ಣದಲ್ಲಿ ರಚಿಸಿದ್ದು. ರಾಮಾಯಣದಲ್ಲಿ ಬರುವ ಒಂದು ಸನ್ನಿವೇಶದ ಚಿತ್ರ ಇದಾಗಿದೆ. ಇದರಲ್ಲಿ ಭಾರತೀಯ ಕಿರುರೂಪ (miniature) ಚಿತ್ರದ ಪ್ರಭಾವವನ್ನು ಕಾಣುತ್ತೇವೆ. ಚಿತ್ರದ ಪ್ರಬಂಧ (composition) ದಿಂದ ಹಿಡಿದು ಆಕೃತಿ ಹಿನ್ನೆಲೆ ಎಲ್ಲದರಲ್ಲೂ ಆ ಪ್ರಭಾವವನ್ನು ಕಾಣುತ್ತೇವೆ. ಅಜನು ಕುಳಿತ ಆಸನ ಅಲಂಕಾರಿಕವಾಗಿದೆ. ಆ ಆವರಣದ ಸುತ್ತಲೂ ಜಾಲಂದ್ರದ ಕಿರಿದಾದ ಪ್ರಕಾರವಿದೆ. ಆಕೃತಿಗಳೆಲ್ಲ ನೀಳವಾದ ದೇಹವನ್ನುಹೊಂದಿದ್ದು ರೇಖಾಪ್ರಧಾನವಾಗಿವೆ. ಹಿನ್ನೆಲೆಯಲ್ಲಿಯ ಗಿಡಗಳು. ಪಕ್ಷಿಗಳನ್ನು ವಿವರವಾಗಿ ಚಿತ್ರಿಸಲಾಗಿದೆ. ಚಪ್ಪಟೆಯ ವರ್ಣದಲ್ಲಿ ಅತಿಸೂಕ್ಷ್ಮವಾದ ಛಾಯಾಂಕನವಿದೆ. ಎಲ್ಲ ಆಕೃತಿಗಳ ಉಡುಗೆ ತೊಡುಗೆಗಳು ಅಲಂಕಾರಿಕವಾಗಿವೆ. ಆ ಶೋಕ ದೃಶ್ಯವನ್ನು ನೋಡಲು ಬಂದಂಥ ಮುನ್ನೆಲೆಯಲ್ಲಿಯ ಪ್ರಾಣಿ ಪಕ್ಷಿಗಳ ಮುಖದಲ್ಲಿ ಆಶ್ಚರ್ಯ ಭಾವವಿದ್ದರೆ ಉಳಿದೆಲ್ಲ ಆಕೃತಿಗಳ ಮುಖದಲ್ಲಿ ಶೋಕ ಭಾವನೆ ಇದೆ. ಚಿತ್ರದಲ್ಲಿ ದೃಶ್ಯಾಂತರವಿದೆ. ಈ ಚಿತ್ರದ ಸಂಯೋಜನೆ ರಜಪುತ ಚಿತ್ರ ಶೈಲಿಯಂತೆ ಕಾಣುತ್ತದೆ.

ಚಿತ್ರ ೩೯ : ಕವಿ ಪಂ. ಪುಟರಾಜ ಗವಾಯಿಗಳು ರಚಿಸಿದಂಥ ಶ್ರೀ ಬಸವೇಶ್ವರ ಹಿಂದಿಭಾಷೆಯ ಅನುವಾದ ಪುರಾಣ ಗ್ರಂಥಕ್ಕೆ ೧೯೬೦ ರಲ್ಲಿ ಚಿಟ್ಟಿಯವರು ರಚಿಸಿದಂಥ ಚಿತ್ರಗಳಲ್ಲಿ ನಾಟಕೀಯ ಪ್ರಭಾವವನ್ನು ಕಾಣುತ್ತೇವೆ. ಆಗ ಪ್ರಚಲಿತದಲ್ಲಿದ್ದ ವೃತ್ತಿ ರಂಗ ನಾಟಕಗಳ ರಂಗಸಜ್ಜಿಕೆ. ಬೆಳಕಿನ ಸಂಯೋಜನೆ ಚತುರದೃಶ್ಯ. ಭಾವೋದ್ರೇಕವಾದ ಅಭಿನಯ. ಭಂಗಿ. ಹಿನ್ನೆಲೆಯಲ್ಲಿ ಬಳಸಿದ ಪರದೆ. ಕಂಬಗಳನ್ನು ಅತ್ಯಂತ ಪ್ರಭಾವಶಾಲಿಯಾಗಿ ದುಡಿಸಿಕೊಂಡಿದ್ದಾರೆ. " ವಸ್ತ್ರ ಅಕ್ಷಯವಾಗುವ ಲೀಲೆ " [೨೧] ಎನ್ನುವ ಚಿತ್ರವನ್ನು ಇಲ್ಲಿ ಗಮನಿಸಿದಾಗ ಈ ಮೇಲಿನ ಅಂಶಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಇಲ್ಲಿ ನೀಲಾಂಬಿಕೆಯ ಪಟ್ಟೆ ಸೀರೆಗೆ ಆಸೆ ಪಟ್ಟವ್ಯಕ್ತಿಗೆ ಅದನ್ನು ಬಸವಣ್ಣನವರು ಸೆಳೆದು ಕೊಡುತ್ತಿರುವ ದೃಶ್ಯ. ಹಿನ್ನೆಲೆಯ ಬೆಳಕಿನಲ್ಲಿ ಆಕೃತಿಗಳ ನೆರಳಿವೆ ಇಲ್ಲಿ ರಾತ್ರಿ ಆಡುವ ನಾಟಕದ ರಂಗ ಸಜ್ಜಿಕೆಯ ಬೆಳಕಿನಂತೆ ತೋರುತ್ತದೆ. ಹಿನ್ನೆಲೆಯ ದೊಡ್ಡದಾದ ಪರದೆಯ ನೆರಿಗೆಗಳು ಅದರ ತುದಿಯಲ್ಲಿಯ ದಾರದ ಗೊಂಡೆಗಳನ್ನು ಅದರಲ್ಲಿಯ ನಕ್ಷೆಯನ್ನು ಚಿತ್ರಿಸಿದ್ದಾರೆ. ಆಕೃತಿಯ ಉಡುಗೆಯ ನೆರಿಗೆಗಳೂ ಕಂಭಗಳು ಸಹ ಅಷ್ಟೇ ನಾಟಕದಲ್ಲಿ ರಟ್ಟಿನಿಂದ ಮಾಡಿ ನಿಲ್ಲಿಸಿದಂಥ ಕಂಬಗಳ ಅನುಭವ ನೀಡುತ್ತವೆ. ಅದರ ಅಲಂಕಾರಿಕೆಯನ್ನು ಕೊರೆದು ಮಾಡಿದಂತಿದೆ. ಆಕೃತಿಗಳು ಭಾವಾತೀರೇಕದಿಂದ ಮಾತನಾಡುತ್ತಿರುವಂತಿವೆ. ಆ ಆಕೃತಿಗಳ ಬಣ್ಣಗಳಲ್ಲಿ ಪ್ರಮುಖ

---

೨೧. ಪಂ. ಪುಟ್ಟರಾಜ ಗವಾಯಿಗಳು : ಶ್ರೀ ಬಸವೇಶ್ವರ ಪುರಾಣ : ಪುಟ ೧೨೭

ಬೆಳಕನ್ನು ನೀಡಿ ನಾಟಕ ಸನ್ನಿವೇಶದ ಚಿತ್ರಣದಂತೆ ಪರಿಣಾಮಕಾರಿಯಾಗಿ ಚಿತ್ರಿಸಿರುವುದನ್ನು ನಾವಿಲ್ಲಿ ಕಾಣುತ್ತೇವೆ. ಇಂತಹ ನಾಟಕದ ಪ್ರಭಾವವನ್ನು ನಾವು ರವಿವರ್ಮನ ಚಿತ್ರದಲ್ಲಿ ಕಾಣುತ್ತೇವೆ. ಈ ಚಿತ್ರವನ್ನು ಜಲವರ್ಣ (poster colour) ದಲ್ಲಿ ರಚಿಸಿದ್ದಾರೆ.

ಚಿತ್ರ ೪೦ : ಚೆಟ್ಟಿಯವರ ಕೆಲವು ಚಿತ್ರಗಳಲ್ಲಿ ಶಿಲ್ಪಗಳ ಪ್ರಭಾವವನ್ನು ನೋಡುತ್ತೇವೆ. ಅಂತಹ ಪ್ರಭಾವದಿಂದ ಚಿತ್ರಿತವಾದ ಜಲವರ್ಣದ ನಟರಾಜನ ಚಿತ್ರವನ್ನು ನೋಡಬಹುದಾಗಿದೆ. ಬಾದಾಮಿಯ ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಒಂದಾದ ಈ ನಟರಾಜನ ಶಿಲ್ಪದ ಪ್ರಭಾವ ಇವರ ಈ ಚಿತ್ರದಲ್ಲಿದೆ. ಕಾರಣ ಶಿಲೆಯಲ್ಲಿ ನಿರ್ಮಿಸಿದ ಈ ಶಿಲ್ಪದ ಪ್ರಭಾವ ಚಿತ್ರದಲ್ಲಿ ಮೃದುವಾಗಿ ಪರಿವರ್ತಿತಗೊಂಡದ್ದನ್ನು ನೋಡಬಹುದಾಗಿದೆ. ನೀಳವಾದ ೧೮ ಕೈಗಳನ್ನು ಹೊಂದಿದ. ನೃತ್ಯ ಭಂಗಿಯಲ್ಲಿರುವ ನಟರಾಜ ಹಸನ್ಮುಖಿಯಾಗಿದ್ದಾನೆ. ಅಲ್ಲದೆ ಅಂಗಗಳ ಹಾವ ಭಾವ ಚಿತ್ರಕ್ಕೆ ಲಾಲಿತ್ಯವನ್ನು ತಂದಿವೆ. ಹಿನ್ನೆಲೆಯಲ್ಲಿ ನಿಂತ ಆತನ ವಾಹನವಾದ ಬಸವನೂ ಕೂಡಾ ಭಾವಪೂರ್ಣವಾಗಿ ಮೂಡಿಬಂದಿರುವುದನ್ನು ಇಲ್ಲಿ ಕಾಣುತ್ತೇವೆ. ಹಿನ್ನೆಲೆಯಲ್ಲಿ ಕೈಲಾಸ ಪರ್ವತದ ಕಲ್ಪನೆ ಇದೆ. ಈ ಚಿತ್ರಕ್ಕೆ ಪ್ರೇರಣೆಯಾದ ಶಿಲ್ಪದ ರೇಖಾ ಅಂಕನ (sketch) ಯನ್ನು ಪೆನ್ಸಿಲ್ ಮಾಧ್ಯಮದ ರೇಖಾ ಚಿತ್ರಗಳ ಬಗ್ಗೆ ವಿವರಿಸಿರುವ ಅಧ್ಯಾಯ ೫ ರಲ್ಲಿ ನೋಡಬಹುದಾಗಿದೆ. (ಇದೇ ಅಧ್ಯಾಯದ ಚಿತ್ರ ೯ ನೋಡಿರಿ.)

ಹೀಗೆ ಚೆಟ್ಟಿಯವರ ಪ್ರಾರಂಭಿಕ ಚಿತ್ರಗಳ ರಚನೆಯಲ್ಲಿ ಹಲವಾರು ಪ್ರಭಾವಗಳನ್ನು ಕಾಣುತ್ತೇವೆ. ಮುಂದೆ ಇಂತಹ ಪ್ರಭಾವಗಳಿಂದ ಬೇರ್ಪಟ್ಟು ತಮ್ಮದೇ ಆದ ಶೈಲಿ ವಿಶಿಷ್ಟತೆಯಿಂದ ಜನಮನ ಸೂರೆಗೊಳ್ಳುವಲ್ಲಿ ಚಿತ್ರಕಲಾ ಪ್ರಪಂಚದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಾರೆ.

ಶೈಲಿ :

" ಚಿತ್ರರಚನೆಯ ಕಾಲದಲ್ಲಿ ಕಲಾವಿದನಿಗಿರುವ ಮಾನಸಿಕ ಭಾವನೆಗಳಂತೆ ಅವನ ಕಲಾ ಕೌಶಲ್ಯಕೂಡಾ ಬದಲಾಗುತ್ತದೆ. ಒಂದೊಂದು ಬಗೆಯ ವಿಚಾರಗಳನ್ನು ತಿಳಿಸಲು ಒಂದೊಂದು ಬಗೆಯ ಕೌಶಲ್ಯ ಹಾಗೂ ಶೈಲಿ ಬೇಕಾಗಬಹುದು. ಅದನ್ನು ಕಲಾವಿದ ತಾನಾಗಿಯೇ ತನ್ನ ಮನಸ್ಸಿನಿಂದ ಭಾವನೆಗಳಿಗೆ ರೂಪಕೊಡಲು ಯೋಗ್ಯವೆನಿಸುವ ಶೈಲಿಯನ್ನು ಪ್ರಯೋಗಿಸುತ್ತಾನೆ. ಮಾನಸಿಕ ಭಾವಗಳನ್ನು ಹೊರಗೆಡಹಲು ಪ್ರತಿಯೊಬ್ಬ ಕಲಾವಿದ ತನ್ನದೇ ಆದ ಶೈಲಿಯನ್ನು ಗುರುತಿಸಿ ರೂಪಿಸಿ ಬೆಳೆಸಿಕೊಳ್ಳಬೇಕಾಗುತ್ತದೆ " [೨೨] ಎಂಬ ಅಭಿಪ್ರಾಯದಂತೆ ಚೆಟ್ಟಿಯವರ ಸಮಗ್ರ ಕಲಾ ಕೃತಿಗಳ ಅಧ್ಯಯನ ಮಾಡಿದಾಗ ಮೊದ ಮೊದಲು ಅಕಾಡೆಮಿಕ್ ಕಲಿಕೆಯಲ್ಲಿ ಪಶ್ಚಿಮದ ಕಲೆಯು. ಕಲಾವಿದರ. ಹಾಗೂ ಭಾರತೀಯ ಬೇರೆ ಬೇರೆ ಕಲಾ ಶೈಲಿಯ ಪ್ರಭಾವಕ್ಕೆ ಒಳಗಾಗಿದ್ದರೂ ಸಹಿತ ತದನಂತರದಲ್ಲಿ ಪಶ್ಚಿಮದ ಮಾಧ್ಯಮ. ಶೈಲಿ. ರೂಪ. ತಂತ್ರ ಇತ್ಯಾದಿಗಳನ್ನು ನಮ್ಮ ನೆಲದ ಸೊಗಡಿಗೆ. ವಸ್ತುವಿಗೆ ಹೊಂದಿಸುವ ಪ್ರಯತ್ನ ಮಾಡಿದರು. ಅಂತೆಯೇ ಅಲ್ಲಿ ತಮ್ಮ ಭಾವನೆಗಳಿಗೆ. ವಸ್ತು ವಿಷಯಗಳಿಗನುಗುಣವಾಗಿ

---

೨೨. ಶಂಕರ ಪಾಟೀಲ : ಚಿತ್ರಕಲಾ ಚಿಂತನೆ : ಪುಟ ೫೦

ನೈಜ ಶೈಲಿಗೆ ಬದ್ಧರಾಗಿರುವದು ಕಂಡುಬರುತ್ತದೆ. ಅದರಲ್ಲಿಯೇ ಅವರ ಸೃಜನ ಶೀಲತೆಯನ್ನು ಕಾಣಬಹುವಾಗಿದೆ. ಕಲಾವಿದನ ಸ್ವಂತ ಅನುಭವ ಸಂವೇದನೆ ನಿರೂಪಿಸಲು ಶೈಲಿಗಳು ವಾಹಕವಿದ್ದ ಹಾಗೆ.

ಚೆಟ್ಟಿಯವರು ನೈಜ ಕಲೆಯನ್ನೇ ಚಿತ್ರಸಲು ಕಾರಣ ಆಗಿನ ಸಮಕಾಲೀನ ಜನರು ಒಪ್ಪಿಕೊಳ್ಳುತ್ತಿದ್ದರು. ಮತ್ತು ಇವರಿಗೂ ತೃಪ್ತಿ ಇತ್ತು ಅದಕ್ಕೆ " ಕಲಾಕೃತಿಗಳು ಒಂದು ಯುಗದ ಆಸಕ್ತಿ ಮತ್ತು ಕುತೂಹಲಗಳ ಮೊತ್ತವಾಗಿರುತ್ತವೆ. ಎಂಬ ಮಾತುಗಳು ಕಲಾ ಸೃಷ್ಟಿಯ ಮೂಲ ಮತ್ತು ಅದು ಮಾಡುವ ಪರಿಣಾಮಗಳ ಸಾಮಾಜಿಕ ಸ್ವರೂಪವನ್ನು ವ್ಯಕ್ತಪಡಿಸುತ್ತವೆ " [೩೩] ಇಂತಹ ಒಂದು ನೈಜ ಶೈಲಿಯ ಪರಂಪರೆಯಲ್ಲಿ ಆಕೃತಿಗಳನ್ನು ರಚಿಸುವಲ್ಲಿ ಮಾನವ ಅಂಗಾಂಗಳನ್ನು ಇರುವುದಕ್ಕಿಂತ ಹೆಚ್ಚುನೀಳವಾಗಿ ತೋರಿಸುವ ಒಂದು ಲಕ್ಷಣ ಅವರ ವೈಯಕ್ತಿಕತೆಯನ್ನು ಬಿಂಬಿಸುತ್ತದೆ.

ಕಲೆಗೆ ಒಂದು ಚಾಲನೆ (movement) ಇರುತ್ತದೆ. ಇದರಿಂದಾಗಿ ಚೆಟ್ಟಿಯವರ ಚಿತ್ರಗಳ ಬಗ್ಗೆ ಪ್ರೊ. ವಿ. ಜಿ. ಅಂದಾನಿಯವರು ಈ ರೀತಿ ಅಭಿಪ್ರಾಯಪಡುತ್ತಾರೆ. " ಅವರ ಕಾಲದಲ್ಲಿ ಅವರು ಮಾಡುವಂಥ ಚಿತ್ರಗಳಿಗೆ ಬೆಲೆ ಇತ್ತು. ಆಗ ಆ ರೀತಿಯಲ್ಲೇ ಚಿತ್ರ ರಚಿಸಬೇಕಾಗಿತ್ತು. ಅದು ಅಲಂಕಾರಿಕವಾಗಿರಲಿ. ಮಾನವ ಆಕೃತಿಗಳನ್ನೇ ಹೊಂದಿರಲಿ. ಈಗಿನ ಸಮಕಾಲೀನದಲ್ಲಿಯ ವಿಚಾರದಲ್ಲಿ ಬೇಕಾದಷ್ಟು ಬೆಳವಣಿಗೆ ಆಗಿದೆ. ಆದರೆ ಆ ಕಾಲದಲ್ಲಿ ಅವರು ನೋಡಿದಂಥ ದೃಷ್ಟಿ ಆಗಿನ ವಿಕಾಸಗೊಳ್ಳುತ್ತಿರುವಂಥ ಕಲೆಯ ಆಕೃತಿ (Art form) ಗಳನ್ನು ಒಡಿದುಕೊಂಡು ತಮಗೆ ಇಷ್ಟವಾದಂಥ ವಿಷಯಗಳ ಮೇಲೆ ಚಿತ್ರರಚಿಸಿದ್ದಾರೆ. ಇದು ಅವರದೇ ಆದಂಥ ಶೈಲಿ ಎಂದು ಹೇಳಬಹುದು ".[೩೪] ಎಂಬ ಅಭಿಪ್ರಾಯವಾಗಿದೆ.

ಚೆಟ್ಟಿಯವರ ಚಿತ್ರಗಳಲ್ಲಿ ರೇಖೆಗೆ ಪ್ರಾಧಾನ್ಯತೆ ಇದೆ. ಅದರ ಜೊತೆಗೆ ವರ್ಣಗಳನ್ನು ಬಳಸಿದ್ದಾರೆ. ಅದರ ಜೊತೆ ಸಂಯೋಜನೆಯಲ್ಲಿ ವೈವಿಧ್ಯತೆ ಇರುವ ಅಂಶಗಳನ್ನು ಕಾಣುತ್ತೇವೆ. ಆಗಿನ ಸಮಕಾಲೀನ ಚಿತ್ರಗಳಲ್ಲಿ ಇರುವ ಕೃತಿಗಳು ಅಷ್ಟೇ ಶಕ್ತಿಯುತವಾದ ಕಲಾ ಕೃತಿಗಳೆಂದು ಹೇಳಬಹುದು. ವಿಷಯಗಳ ಭಿನ್ನತೆಯ ಜೊತೆಗೆ ಆ ಇಡೀ ಬದುಕಿನ. ಸಂಸ್ಕೃತಿಯ ಅನೇಕ ಬೆಳವಣಿಗೆಯ ಹಂತವನ್ನು ಅವರ ಚಿತ್ರಗಳಲ್ಲಿ ಕಾಣುತ್ತೇವೆ. " ಮನುಷ್ಯನ ಜೀವನದಲ್ಲಿ ಕಾಲ ಕಾಲಕ್ಕೆ ಹೊಸತನವನ್ನು ಕಾಣುತ್ತೇವೆ. ಇಂತಹ ಬದುಕನ್ನು ಪ್ರತಿಬಿಂಬಿಸುವಂತಹದು ಕಲೆ ಆಗಿದೆ. ಆದ್ದರಿಂದ ಅಂತಹ ಆಗಿನ ಕಲಾಕೃತಿಗಳು ಆ ಕಾಲವನ್ನು ಗುರ್ತಿಸುತ್ತ ಹೊದವು. ಇದರಿಂದಾಗಿ ಆ ಚಿತ್ರಗಳಲ್ಲಿ ಅದು ಹೊಸತಾಗಿಯೇ ಉಳಿಯಿತು. ಇಡೀ ನಮ್ಮ ಬದುಕಿನ ಹೊಸತನ. ಉಡುಗೆ ತೊಡುಗೆಯ ಹೊಸತನ ಹೀಗೆ ಅನೇಕ ವಿಷಯಗಳನ್ನು ನಾವು ಚಿತ್ರದಲ್ಲಿ ನೋಡುತ್ತೇವೆ ".[೩೫]

ಅಂತಹ ಅನೇಕ ವಿಷಯಗಳನ್ನು ಚೆಟ್ಟಿಯವರ ಚಿತ್ರಗಳಲ್ಲಿ ಕಾಣುತ್ತೇವೆ. ಈ ಅಂಶಗಳನ್ನು ಹಾಗೂ ಶೈಲಿ ವೈಶಿಷ್ಟ್ಯತೆಯನ್ನು ಈ ಮುಂದೆ ವಿವರಿಸಿದ ಚಿತ್ರಗಳಲ್ಲಿ ಕಾಣುತ್ತೇವೆ. ಆ ಅಂಶಗಳೆಂದರೆ ಮಾತುಗಳನ್ನೇ

---

೩೩. ಆರ್. ಎ. ಶಾಂತರಾಜ್ (ಸಂ.) ಕಲೆಗಳಲ್ಲಿ ಸಾಂಸ್ಕೃತಿ ಹಾಗೂ ಪರಂಪರೆ : ಪುಟ ೧೧

೩೪. ವ್ಹಿ. ಜಿ. ಅಂದಾನಿಯವರ ಸಂದರ್ಶನ : ದಿನಾಂಕ ೨-೧೧-೧೯೯೯. ಗುಲ್ಬರ್ಗಾ

೩೫. ವ್ಹಿ. ಜಿ. ಅಂದಾನಿಯವರ ಸಂದರ್ಶನ : ದಿನಾಂಕ ೨-೧೧-೧೯೯೯. ಗುಲ್ಬರ್ಗಾ

ಚಿತ್ರರೂಪದಲ್ಲಿ ಭಾವಪೂರ್ವಕಾಗಿ ಚಿತ್ರಿಸುವುದು. ಎರಡು ಮೂರು ಸನ್ನಿವೇಶಗಳ ಪರಿಣಾಮವನ್ನು ಒಂದೇ ಅವಕಾಶದ (space) ಮೇಲೆ ಸಂಯೋಜನೆ ಮಾಡುವ ರೀತಿ. ಭಾವನೆಗಳನ್ನು ವ್ಯಕ್ತಪಡಿಸುವ ಭಾವನಾತ್ಮಕತೆ. ವೇಷ ಭೂಷಣಗಳು. ಮೀಸೆಯ ಪ್ರಭಾವ ಸನ್ನವೇಶದ ಕಲ್ಪನೆ. ಆಕೃತಿಗಳ ವಿವರಣೆ ಹಾಗೂ ಭಾವ ಚಿತ್ರಗಳ ಹಿನ್ನೆಲೆಯಲ್ಲಿ ನಿಸರ್ಗ ರಚಿಸುವ ರೀತಿ. ಪ್ರಾಣಿಗಳೇ ಇರಲಿ ಮನುಷ್ಯನೇ ಇರಲಿ ಅತ್ಯಂತ ಸೂಕ್ಷ್ಮವಾಗಿ ಅಭ್ಯಾಸ ಮಾಡಿರುವದು ನಮಗೆ ಕಂಡುಬರುತ್ತದೆ.

ಚಿತ್ರ ೪೧ : "ಬಾವಿಯಲ್ಲಿ ಬಿದ್ದು ಮೃತಪಟ್ಟ ನಂದೀಬಸವಮ್ಮರಿಗೆ ಶ್ರೀ ಚೆನ್ನಬಸವಸ್ವಾಮಿಗಳವರು ಪ್ರಾಣದಾನ ಮಾಡಿದ್ದು"[೨೬]

ಈ ಚಿತ್ರದಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಎಲ್ಲ ಆಕೃತಿಗಳು ಮಾತನಡುತ್ತಿರುವಂತೆ ಭಾಸವಾಗುತ್ತದೆ. ನಂದೀ ಬಸವಮ್ಮ ಮೃತಳಾದ್ದರಿಂದ ಕೆಲವರು ಸ್ವಾಮಿಗಳನ್ನು ಕೈಮುಗಿದು ಆಕೆಯನ್ನು ಬದುಕಿಸಿರಿ ಎನ್ನುವಂತಿದ್ದರೆ ಕೆಲವು ಹೆಂಗಸರು ಇದೇನಾಯಿತು ಎಂದು ಹಣೆಗೆ ಕೈಹಚ್ಚಿ ಗೋಳಿಡುತ್ತಿರುವಂತಿದೆ. ಸ್ವಾಮಿಗಳು ಏನಾಗದು ಎಂಬ ಅಭಯವನ್ನಿತ್ತು ಭಸ್ಮವನ್ನು ಲೇಪಿಸಿರಿ ಎನ್ನುವಂತಿದ್ದರೆ. ಕೆಳಗೆ ಕುಳಿತ ಮನುಷ್ಯನು ಕೈಯಲ್ಲಿ ವಿಭೂತಿಯನ್ನು ಹಿಡಿದುಕೊಂಡು ಈ ಭಸ್ಮವನ್ನು ಹಚ್ಚಲೇ? ಎಂದು ಸ್ವಾಮಿಯ ಆಜ್ಞೆಯ ನೀರಿಕ್ಷೆಯಲ್ಲಿರುವಂತಿದೆ. ಬಾವಿಯಹತ್ತಿರದ ಹೆಂಗಸರು ಬಾವಿಯ ಆಳವನ್ನು ಗಮನಿಸಿ ಇದರಲ್ಲಿ ಬಿದ್ದರೆ ಹೇಗೆ ಬದುಕ್ಯಾಳು ಎಂಬ ಭಾವನೆ. ಹೀಗೆ ಮಾತುಗಳನ್ನೇ ಚಿತ್ರರೂಪದಲ್ಲಿ ಭಾವಪೂರ್ವಕವಾಗಿ ಚಿತ್ರಿಸಿರುವ ಅವರ ಈ ಶೈಲಿಯನಿರೂಪಣೆ ಜನರನ್ನು ತನ್ನತ್ತ ಆಕರ್ಷಿಸುವಲ್ಲಿ ಸಫಲವಾಗಿದೆ. ಈ ಚಿತ್ರವನ್ನು ಪುರಾಣ ಗ್ರಂಥದ 65 ನೇ ಪುಟ ಹಾಗೂ ನರಗುಂದದ ವಿರಕ್ತಮಠದಲ್ಲಿ ನೋಡಬಹುದಾಗಿದೆ. ಜಲವರ್ಣದಲ್ಲಿ ಚಿತ್ರಿಸಿದ್ದು.

ಚಿತ್ರ ೪೨ : ಎರಡು ಮೂರು ಸನ್ನಿವೇಶಗಳ ಪರಿಣಾಮವನ್ನು ಒಂದೇ ಅವಕಾಶ (space) ದ ಮೇಲೆ ಸಂಯೋಜನೆ ಮಾಡುವರೀತಿ ಇಲ್ಲಿ ಅಲ್ಲಮ ಪ್ರಭುಗಳು ಮಾಯೆಯನ್ನು ಗೆದ್ದಂತಹ ಚಿತ್ರ. ಇಲ್ಲಿ ಎರಡು ಸನ್ನಿವೇಶಗಳಿವೆ. ಮೊದಲನೆಯದು ಅಲ್ಲಮಪ್ರಭುಗಳು ವನದಲ್ಲಿ ಋಷಿಮುನಿಗಳ ಮಧ್ಯ ಇರುವಾಗ ಮಾಯೆ ಅಲ್ಲಮಪ್ರಭುಗಳನ್ನು ಹುಡುಕುತ್ತ ಅಲ್ಲಿಗೆ ಬರುತ್ತಾಳೆ. ಋಷಿಗಳೆಲ್ಲ ಹೆದರಿ ದಿಕ್ಕುಗಾಣದೆ ಓಡುತ್ತಿರಲು ಅವರನ್ನು ಓಡಿದಿರಿಸಲು ಅಲ್ಲಮನು ಅವರಂತೆ ಕಾಣಿಸಿಕೊಂಡು ಇತ್ತ ಮಾಯೆಗೆ ಅಲ್ಲಮನು ನಿಜರೂಪ ತೋರಿಸುತ್ತಿರುವಂತೆ ಚಿತ್ರದ ಬಲಭಾಗದಲ್ಲಿ ಅಲ್ಲಮನನ್ನು ಮಸುಕಾಗಿ ಚಿತ್ರಿಸಿದ್ದಾರೆ. ಮಾಯೆ ಅವರತ್ತಧಾವಿಸಿ ಓಡುತ್ತಿದ್ದಾಳೆ. ಇತ್ತ ಎಡಭಾಗದಲ್ಲಿ ಅಲ್ಲಮನ ನಿಜರೂಪಸ್ಪಷ್ಟವಾಗಿ ಇದೆ. ಮಾಯೆಯನ್ನು ತಿರಸ್ಕರಿಸಿ ಹೊರಟಿದ್ದಾನೆ. ಮಾಯೆ ನೆಲದಲ್ಲಿ ಕೆಡೆದು ವಿರಹದ ದುಃಖವನ್ನು ಅನುಭವಿಸುತ್ತಿರುವಂತೆ ಉಳಿದವರು ಆಕೆಗೆ ಸಾಂತ್ವಾನ ಮಾಡುತ್ತಿರುವಂತೆ ಇವೆ. ಅವರಲ್ಲಿ ಒಬ್ಬಗೆಳತಿ ಕೈಮುಗಿದು ಅಲ್ಲಮನಿಗೆ ಮಾಯೆಯ ಬಗ್ಗೆ ನಿವೇದಿಸುವಂತಿದೆ. ಹೀಗೆ ಹಲವಾರು ವಿಷಯಗಳನ್ನು ಹಲವಾರು ವಾಕ್ಯಗಳಲ್ಲಿ ಹೇಳಬಹುದಾದ ಸನ್ನಿವೇಶಗಳನ್ನು ಒಂದೇ ಅವಕಾಶದಲ್ಲಿ

---

೨೬. ಪಂ. ವಾಯ್. ನಾಗೇಶ ಶಾಸ್ತ್ರಿಗಳು : ಶ್ರೀ ನರಗುಂದ ವಿರಕ್ತಮಠದ ಶ್ರೀ ಚೆನ್ನಬಸವ ಶಿವಯೋಗೀಶ್ವರ ಲೀಲೆ : ಪುಟ ೬೫

ಪರಿಣಾಮಕಾರಿಯಾಗಿ ಚಿತ್ರಿಸಿರುವುದನ್ನು ಇಲ್ಲಿ ನೋಡುತ್ತೇವೆ. ಎಲ್ಲಾ ಸನ್ನಿವೇಶಗಳಲ್ಲಿ ಬರುವ ಒಂದೇ ಆಕೃತಿಗಳು ಸ್ವಲ್ಪವೂ ಬದಲಾವಣೆ ಹೊಂದದೆ ಇರುವಂತೆ ಚಿತ್ರಿಸುವುದೇ ಅವರ ವೈಶಿಷ್ಟ್ಯವಾಗಿದೆ. ವರ್ಣಮೇಳವು (Harmony) ಸಹಿತ ಕಣ್ಣಿಗೆ ಅಷ್ಟೇ ಹಿತವನ್ನು ನೀಡುತ್ತದೆ. ಇಂತಹ ಅನೇಕ ಚಿತ್ರಗಳನ್ನು ಆರನೇಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಅಲ್ಲಿಯೂ ನೋಡಬಹುದು. ಈ ಚಿತ್ರ ಚಾಮರಸನ ಪ್ರಭುಲಿಂಗ ಲೀಲೆ ಗ್ರಂಥದ ಪ್ರಾರಂಭದ ಪುಟದಲ್ಲಿ ನೋಡಬಹುದು. ಜಲವರ್ಣದಲ್ಲಿ ರಚಿಸಲಾಗಿದೆ.

ಚೆಟ್ಟಿಯವರ ಎಲ್ಲಾ ಕಲಾಕೃತಿಗಳು ಭಾವನಾತ್ಮಕವಾದವುಗಳೇ. ಭಾವನಾಪ್ರಧಾನ ಚಿತ್ರಗಳು. ಭಕ್ತಿ. ಕರುಣಾ. ವಿಸ್ಮಯ ಶೃಂಗಾರ ಮುಂತಾದ ರಸಪ್ರಧಾನವಾದ ಕಾವ್ಯಮಯವಾದ ಚಿತ್ರಗಳಾಗಿವೆ. ಅಂತಹ ಎಲ್ಲಾ ಚಿತ್ರಗಳ ಚರ್ಚೆ ಆರನೇ ಅಧ್ಯಾಯದಲ್ಲಿ ಮಾಡಲಾಗಿದ್ದರೂ ಸಹಿತ ಅವರ ಶೈಲಿಯ ವಿಶಿಷ್ಟತೆಗಾಗಿ ಇಲ್ಲಿ ಅಕ್ಕಮಹಾದೇವಿಯ ಒಂದು ಚಿತ್ರ ವಿವರಿಸಲಾಗಿದೆ.

ಚಿತ್ರ ೪೩ : ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನ್ನು ಅರಸುತ್ತ ಹೊರಟಿರುವ ದೃಶ್ಯ. ಇಲ್ಲಿ ಅಕ್ಕಮಹಾದೇವಿಯ ವಚನವೇ ಚಿತ್ರಮಯವಾಗಿ ಆ ಸನ್ನಿವೇಶವನ್ನು ಒಟ್ಟಾರೆ ಕಟ್ಟಿಕೊಡುವ ವೈಶಿಷ್ಟ್ಯತೆ ಇಲ್ಲಿದೆ.

" ಚಿಲಿ ಪಿಲಿ ಎಂದೋದುವ ಗಿಳಿಗಳಿರಾ
ನೀವು ಕಾಣಿರೆ ನೀವು ಕಾಣಿರೆ !
ಸರವೆತ್ತಿಪಾಡುವ ಕೋಗಿಲೆಗಳಿರಾ
.... ತುಂಬಿಗಳಿರಾ ...... ಹಂಸಗಳಿರಾ
ನವಿಲುಗಳಿರಾ ನೀವು ಕಾಣೀರೇ !
ಚೆನ್ನಮಲ್ಲಿಕಾರ್ಜುನನೆಲ್ಲಿರ್ದಹನೆಂದು
ನೀವು ಹೇಳಿರೆ. ನೀವು ಹೇಳಿರೆ " [೨೭]

ಹೀಗೆ ಅಕ್ಕಮಹಾದೇವಿ ಇಲ್ಲಿ ಪ್ರಸ್ತಾಪಿಸುವ ರೀತಿ " ಪಾರಮಾರ್ಥಿಕ ವಿರಹ: ವಿರಹ ಶೃಂಗಾರವು ಸಾಂಪ್ರದಾಯಿಕ ಕಾವ್ಯಗಳಲ್ಲಿ ಸಂಸಾರಿಗಳು ಅನುಭವಿಸುವ ಅಂತಃಕರುಣವನ್ನು ಹಿಂಡುವ ಒಂದು ಸನ್ನಿವೇಶ " [೨೮] ಚಿತ್ರದಲ್ಲಿ ಈ ಎಲ್ಲ ಅಂಶಗಳು ಒಟ್ಟಾರೆಯಾಗಿ ಕಾವ್ಯಮಯವಾಗಿ ಮೂಡಿಬಂದಿವೆ. ಹಿನ್ನೆಲೆಯಲ್ಲೆಲ್ಲ ವನ ಅದರ ಮಧ್ಯದಲ್ಲಿ ಶಿವನ ನಗುಮುಖ. ಅಕ್ಕಮಹಾದೇವಿ ಹುಡುಕುತ್ತಿರುವುದು ಚೆನ್ನಮಲ್ಲಿಕಾರ್ಜುನನ್ನು ಎಂದು ಸಾಂಕೇತಿಕವಾಗಿ ಚಿತ್ರಿಸಿದ್ದಾರೆ. ಅಕ್ಕಮಹಾದೇವಿಯ ಸುತ್ತಲೂ ಗಿಳಿಗಳು. ಕೋಗಿಲೆಗಳು. ದುಂಬಿಗಳು. ಹಂಸಗಳು. ನವಿಲುಗಳು ನಿಜವಾಗಿಯೂ ಅವು ಓದುವ. ಕೂಗುವ. ಹಾಡುವ ಧ್ವನಿ ಕೇಳಿಬರುತ್ತಿರುವಂತಿದೆ.

---

೨೭. ಶ್ರೀ ಟಿ. ಹೆಚ್. ಎಮ್. ಸದಾಶಿವಯ್ಯನವರು : ಉಡುತಡಿಯ ಮಹಾದೇವಿಯಕ್ಕನವರ ಸಾಹಿತ್ಯ : ಪುಟ ೫೭

೨೮. ಶ್ರೀ ಟಿ. ಹೆಚ್. ಎಮ್. ಸದಾಶಿವಯ್ಯನವರು : ಉಡುತಡಿಯ ಮಹಾದೇವಿಯಕ್ಕನವರ ಸಾಹಿತ್ಯ : ಪುಟ ೬೭

ಅಕ್ಕಮಹಾದೇವಿ ಬೆರಳನ್ನು ಮುಂದೆ ಮಾಡಿ ಗಿಳಿಹಿಂಡಿಗೆ ನೀವು ಕಾಣಿರೇ....? ಎಂದು ಪ್ರಶ್ನಿಸುವಂತಿದೆ. ವೀರವಿರಾಗಿಣಿಯ ಸೌಮ್ಯ ಸಾತ್ವಿಕ ಕಳೆ, ಚಿತ್ರದ ತುಂಬಾ ಸೌಮ್ಯವಾದ ತಂಪಾದ (cool) ವರ್ಣಗಳನ್ನೇ ಬಳಸಿ ಇಡೀ ಸನ್ನಿವೇಶವನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಈ ಚಿತ್ರವು ಜಲವರ್ಣದ್ದಾಗಿದೆ. ಇದು ತೇಲಸಂಗದ ಮಠದಲ್ಲಿ ಲಭ್ಯವಿದೆ. ಹೀಗೆ ಚೆಟ್ಟಿಯವರು ತಮ್ಮ ಕಲಾಕೃತಿಗಳಲ್ಲಿ ಭಾವನಾತ್ಮಕತೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ನೋಡುಗರು ಸಹಿತ ಆ ಚಿತ್ರದಲ್ಲಿ ಒಂದಾಗುವಂತೆ ಮಾಡುವ ಕೌಶಲ್ಯ ಅವರ ಕೃತಿಗಳಲ್ಲಿ ಕಾಣುತ್ತೇವೆ.

ಒಂದೇ ಅವಕಾಶದಲ್ಲಿ (space) ಅನೇಕ ಜನರನ್ನು ಆಕೃತಿಗಳನ್ನು ಯೋಜನಾಬದ್ಧವಾಗಿ ಚಿತ್ರಿಸುವುದಲ್ಲದೆ ಪ್ರತಿಯೊಂದು ಆಕೃತಿಯನ್ನು ಸ್ಪಷ್ಟವಾಗಿ ಗುರುತಿಸುವ ರೀತಿಯಲ್ಲಿ ಚಿತ್ರಿಸುವುದು ಇವರ ಇನ್ನೊಂದು ವೈಶಿಷ್ಟ್ಯವಾಗಿದೆ. ಇಂತಹ ಒಂದು ಸಂಯೋಜನಾ ತಂತ್ರ ಅವರ ಗುರುಗಳಿಂದಲೇ ಬಂದಂತಹದು ಒಂದೊಂದು ಆಕೃತಿಯ ಮೇಲೂ ಉಚಿತ ವರ್ಣವನ್ನು ಲೇಪಿಸಿದ್ದಾರೆ. ಅಷ್ಟೊಂದು ಆಕೃತಿಗಳಿದ್ದರೂ ಹಿನ್ನಲೆ. ಮುನ್ನಲೆ. ಆಕೃತಿ. ಆಕೃತಿಗಳ ನಡುವೆ ಇರಬೇಕಾದ ಅವಕಾಶ (space) ದ ಕಲ್ಪನೆ ಅದ್ಭುತವಾದದ್ದು. ಅಂತಹ ಒಂದು ಕಲಾ ಕೃತಿಯನ್ನು ಇಲ್ಲಿ ನೋಡಬಹುದಾಗಿದೆ.

ಚಿತ್ರ ೪೪ : ಸಿಡಸೋಸಿಯ ಶ್ರೀ ಮಠದಲ್ಲಿರುವ ಜಲವರ್ಣದ ಚಿತ್ರ ಇದನ್ನು ೧೯೭೧ ರಲ್ಲಿ ಚಿತ್ರಿಸಿದ್ದಾರೆ. " ಶ್ರೀ ನಿಜಲಿಂಗೇಶ್ವರರ ತಾಯಂದಿರಾದ ಲಿಂಗಮ್ಮನವರ ದಿವ್ಯಸ್ವಪ್ನ" [೨೯]

ಈ ಚಿತ್ರದಲ್ಲಿ ಲಿಂಗಮ್ಮನವರು ಕೈಲಾಸದ ಕನಸನ್ನೇ ಕಂಡಂಥ ಸನ್ನಿವೇಶ. ಇಲ್ಲಿ ಚೆಟ್ಟಿಯವರು ಚಿತ್ರದ ಮೇಲ್ಭಾಗದಲ್ಲಿ ಇಡೀ ದೇವತಾಗಣಗಳ ಸಮೂಹವನ್ನೇ ಚಿತ್ರಿಸಿದ್ದಾರೆ. ಬ್ರಹ್ಮ. ವಿಷ್ಣು. ಮಹೇಶ್ವರ. ಪಾರ್ವತಿ. ಸರಸ್ವತಿ. ಲಕ್ಷ್ಮಿ. ಗಣಪತಿ ಅವರ ವಾಹನಗಳು. ಆಯುಧಗಳ ಸಮೇತವಾಗಿ ಅಲ್ಲದೆ ನೂರಾರು ದೇವಗಣಂಗಳನ್ನು ಚಿತ್ರಿಸಿದ್ದಾರೆ. ಚಿತ್ರದಲ್ಲಿ ಭವ್ಯತೆಯಿದೆ. ಅಲಂಕಾರಿಕವಾಗಿ ಆ ಎಲ್ಲ ದೇವತೆಗಳ ಉಡುಗೆ ಹಾಗೂ ಎಲ್ಲಾ ಆಭರಣಗಳನ್ನು ಮೊದಲ್ಗೊಂಡು ಅವರ ಮುಖದಲ್ಲಿಯ ವಿಭಿನ್ನ ಭಾವಗಳನ್ನು ಸೆರೆಹಿಡಿದಿದ್ದಾರೆ. ಋಷಿಗಣಂಗಳು ಸಹಿತ ಸೇರಿದ್ದಾರೆ. ನೃತ್ಯಮಾಡುವವರು ವಿವಿಧ ವಾದ್ಯಗಳನ್ನು ನುಡಿಸುವವರು. ಛತ್ರ. ಚಾಮರ ಬೀಸುವವರು ಹೀಗೆ ಇಡೀ ಸ್ವರ್ಗಲೋಕದ ಕಲ್ಪನೆಯನ್ನು ಕಟ್ಟಿಕೊಟ್ಟಿದ್ದಾರೆ. ದೃಶ್ಯಂತರವಂತೂ ಅದ್ಭುತವಾದದ್ದು ಹಿಮಾಲಯ ಪರ್ವತ ಅದರ ಹಿಂದೆ ಮತ್ತೆ ದಿಗಂತ ಪ್ರತಿಯೊಂದು ಆಕೃತಿಗಳ ಮುಖಗಳನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಪ್ರಖರ ವರ್ಣಗಳನ್ನು ಬಳಸಿದ್ದರೂ ಅವು ಭವ್ಯತೆಯ ಸಂಕೇತವಾಗಿ ಪರಿಣಾಮಕಾರಿಯಾಗಿ ಲೇಪಿಸಿದ್ದಾರೆ.

ಚಿತ್ರದ ಕೆಳಭಾಗದಲ್ಲಿ ಕನಸನ್ನು ಕಾಣುತ್ತಿರುವ ಆಕೃತಿ ಶಿವನ ಕೃಪೆಯಿಂದ ಧರೆಗೆ ಬರುತ್ತಿರುವ ಮಗುವಿನ ಚಿತ್ರ ಆ ಎರಡು ಭಾಗಗಳನ್ನು ಒಂದುಗೂಡಿಸುವಂತಿದೆ. ಚಿತ್ರದ ಮಧ್ಯಭಾಗದಲ್ಲಿ ಆ ಹೆಣ್ಣು ಆಕೃತಿ ಆ ದೃಶ್ಯವನ್ನು ಆಶ್ಚರ್ಯದಿಂದ (ಕನಸಿನಲ್ಲಿ) ನೋಡುತ್ತಿರುವಂತಿದೆ. ಕೆಳಭಾಗದ ಚಿತ್ರದಲ್ಲೂ ದೃಶ್ಯಾಂತರವಿದೆ. ಹೂದೋಟವಿದೆ. ಮನೆಯ ಒಳಭಾಗದ ದೃಶ್ಯವು ಇದೆ. ಈ ಕಲಾಕೃತಿಯಲ್ಲಿ ಮೂಡಿಬಂದ ದೃಶ್ಯಗಳು ಬೇರೆ ಬೇರೆಯಾದರೂ ಒಂದೇ

---

೨೯. ಚಿತ್ರದ ತಲೆಬರಹದಲ್ಲಿ ಹೀಗೆ ಬರೆದಿದೆ.

ಸನ್ನಿವೇಶಕ್ಕೆ ಸಂಬಂಧಿಸಿದವೆಂಬಂತೆ ಪ್ರಬಂಧ (Composition) ರಚಿಸಿರುವ ಅವರ ವೈಶಿಷ್ಟ್ಯತೆ ಬೆರಗುಗೊಳಿಸುವಂತಹದು. ಇಂತಹ ಅನೇಕ ಆಕೃತಿಗಳನ್ನು ಹೊಂದಿದಂತಹ ಬೇರೆ ಬೇರೆ ಚಿತ್ರಗಳನ್ನು ಈ ಮೊದಲಿನ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಚಿಟ್ಟಿಯವರು ಚಿತ್ರದಲ್ಲಿ ಸಣ್ಣ ವಸ್ತುವಿಗೂ ಅಷ್ಟೇ ಪ್ರಾಮುಖ್ಯತೆಯನ್ನು ಕೊಡುತ್ತಾ ಇದ್ದದು ಇಲ್ಲಿ ಕಂಡು ಬರುತ್ತದೆ. ಅತ್ಯಂತ ವಿವರಪೂರ್ಣವಾಗಿ ಸೂಕ್ಷ್ಮವಾಗಿ ಎಲ್ಲಾ ವಸ್ತುಗಳನ್ನು ಚಿತ್ರಿಸುವ ರೀತಿಗೆ. ಈ ಚಿತ್ರವೇ ಮಾದರಿಯಾಗಿದೆ ಎಂದು ಹೇಳಬಹುದು. ಮಲಗಿ ಕನಸು ಕಾಣುತ್ತಿರುವ ಲಿಂಗಮ್ಮನ ಹಣೆಯಮೇಲೆ ವಿಭೂತಿ. ಕುಂಕುಮ. ಕೈಯಲ್ಲಿ ಹಸಿರುಗಾಜಿನ ಬಳೆಯ ಜೊತೆಗೆ ಮುತ್ತಿನ ಬಳೆಗಳು. ಕೊರಳಲ್ಲಿ ಮಾಂಗಲ್ಯ ಜೊತೆಗೆ ಬಂಗಾರದ ಸರ. ಲಿಂಗದಕಾಯಿ, ಕಾಲಲ್ಲಿ ಕಾಲುಂಗುರ ಉಟ್ಟಸೀರೆಯ ಮೇಲಿನ ಜರಿ ಅಂಚು ಹಾಗೂ ನಕ್ಷೆ. ಆಕೆಹೊದ್ದುಕೊಂಡಂಥ ಶಾಲಿನ ಮೇಲಿನ ಕಸೂತಿ ನಕ್ಷೆ ಅದರ ಕೊನೆಗಿರುವ ಗೊಂಡೆ. ಮಂಚದ ಸುತ್ತಲಿನ ನಕ್ಷೆ ಅದರ ಮೇಲೆ ಹಾಸಿದ ಹಾಸಿಗೆಯ ನಕ್ಷೆ. ನೆಲಹಾಸಿನ ನಕ್ಷೆ ಮೊದಲಾದರೆ. ಹಿನ್ನೆಲೆನಲ್ಲಿರುವ ಉದ್ಯಾನದಲ್ಲಿ ನಾನಾತರದ ವೃಕ್ಷಗಳು ಮಧ್ಯದಲ್ಲಿ ಕಾರಂಜಿ, ಸಮೀಪದ ಗಿಡಗಳ ಹೂವು. ಎಲೆ. ಮೊದಲಾಗಿ ವಿವರವಾಗಿ ಚಿತ್ರಿಸಿದ್ದಾರೆ. ಮೇಲ್ಭಾಗದ ಚಿತ್ರದಲ್ಲಿಯ ಸೂಕ್ಷ್ಮತೆಯನ್ನು ವರ್ಣಿಸಲಸಾಧ್ಯವಾದುದು. ಪ್ರತಿಯೊಂದು ಆಕೃತಿಯ ನಿಖರ ಲಕ್ಷಣಗಳನ್ನು ಚಿತ್ರಿಸಿದ್ದಾರೆ.

ಹೀಗೆ ಚಿಟ್ಟಿಯವರ ಸನ್ನಿವೇಶದ ಕಲ್ಪನೆ. ಅನೇಕ ಆಕೃತಿಗಳ ಸಂಯೋಜನಾ ಚಾತುರ್ಯ. ಸೂಕ್ಷ್ಮ ವಿವರಣೆ ವೇಷ ಭೂಷಣಗಳ ವೈಖರಿಯನ್ನು ತಿಳಿದುಕೊಳ್ಳಲು ಇದೊಂದೆ ಚಿತ್ರ ಸಾಕೆನಿಸುತ್ತದೆ. ಹಾಗೆಯೇ ಇವರ ಪ್ರತಿಯೊಂದು ಚಿತ್ರದಲ್ಲಿಯ ಪ್ರಾಣಿ. ಪಕ್ಷಿಗಳ ಆಕೃತಿಗಳನ್ನು ಗಮನಿಸಿದಾಗ ಅವುಗಳ ಆಳವಾದ. ಸೂಕ್ಷ್ಮವಾದ ಅಧ್ಯಯನದ ಅರಿವಾಗುತ್ತದೆ. ಅಂತಹ ಎಲ್ಲಾ ಸೂಕ್ಷ್ಮವಾದ ವಿವರಣೆಗಳನ್ನು ಈ ಹಿಂದಿನ ಅಧ್ಯಾಯದಲ್ಲಿ ನೋಡಬಹುದಾಗಿದೆ.

ಇನ್ನೊಂದು ಅವರ ವಿಶಿಷ್ಟತೆ ಏನೆಂದರೆ ಭಾವಚಿತ್ರಗಳಲ್ಲಿ ವಿಶೇಷವಾಗಿ ಜೀವಮಾದರಿ ಚಿತ್ರಗಳಲ್ಲಿ ಹಿನ್ನೆಲೆಯಲ್ಲಿ ನಿಸರ್ಗವನ್ನು ಚೆನ್ನಾಗಿ ದುಡಿಸಿಕೊಂಡಿದ್ದನ್ನು ಕಾಣುತ್ತೇವೆ. ಅದು ಮೇಲಾಗಿ ಶರಣರ ಚಿತ್ರಗಳಲ್ಲಿ ಸಾಮಾನ್ಯ ಜನರ ಚಿತ್ರಗಳಲ್ಲಿ ಮನೆಯ ಒಳಭಾಗವನ್ನೋ ಅಥವಾ ಮಂಟಪದ ಕಂಬಗಳಂತಹ ಹಿನ್ನೆಲೆಯನ್ನು ತೋರಿಸಿದ್ದಾರೆ. ಎಂದೂ ಹಿನ್ನೆಲೆಯ ಅವಕಾಶ (space) ವನ್ನು ಕೇವಲ ವರ್ಣಗಳಿಂದ ಚಿತ್ರಿಸದೇ ಇರುವುದು ಅವರ ಇಲ್ಲಿಯವರೆಗೆ ಅಧ್ಯಯನ ಮಾಡಿದ ಚಿತ್ರಗಳಿಂದ ತಿಳಿದುಬರುತ್ತದೆ. ಇಲ್ಲಿ ಅಂತಹ ಒಂದು ಚಿತ್ರವನ್ನು ನೋಡಬಹುದು.

ಚಿತ್ರ ೪೫ : ಅಥಣಿಯ ಶಿವಯೋಗಿಗಳು ನಿಂತ ಜೀವಮಾದರಿ ಚಿತ್ರ. ಈ ಚಿತ್ರದಲ್ಲಿ ಶಿವಯೋಗಿಗಳು ಕೈಯಲ್ಲಿ ಬೆತ್ತವನ್ನು ಹಿಡಿದುಕೊಂಡು ನಿಂತಿದ್ದಾರೆ. ನಿಸರ್ಗದ ಮಧ್ಯದಲ್ಲಿ ನಿಂತಂತೆ ಚಿತ್ರಿಸಿದ್ದಾರೆ. ಅವರ ಪಾದದಡಿಯಲ್ಲಿ

ತೃಣ ಹಾಸಿಗೆ ಪಕ್ಕದಲ್ಲಿ ಮೊಲಗಳು ಹಿನ್ನೆಲೆಯಲ್ಲಿ ವಿವಿಧ ವೃಕ್ಷಗಳು ನವಿಲು. ಹುಲಿ. ಜಿಂಕೆ ಮೊದಲಾದ ಪ್ರಾಣಿಗಳು ನಿರ್ಭಯವಾಗಿ ಓಡಾಡುತ್ತಿವೆ. ದೂರದಲ್ಲೊಂದು ಹರಿಯುವ ನದಿ ಪಕ್ಕದಲ್ಲೊಂದು ದೇವಾಲಯ ಅದರ ಹಿಂದೆ ದಿಗಂತ ಸೂರ್ಯನ ಹೊಂಬೆಳಕು. ಸಮೀಪದ ವೃಕ್ಷದಲ್ಲಿ ಅನೇಕ ವಿಧವಾದ ಪಕ್ಷಿಗಳು ಹಾರಾಡುತ್ತಿರುವಂತಿದೆ. ಎಲೆ. ಹೂ. ಮೊದಲು ಮಾಡಿ ವಿವರವಾಗಿ ಚಿತ್ರಿಸಿದ್ದಾರೆ. ಆಯಾ ಆಕೃತಿಗಳಿಗೆ ಉಚಿತವಾದ ವರ್ಣ ಲೇಪನವನ್ನು ಮಾಡಿದ್ದಾರೆ. ಒಂದು ರೀತಿಯಲ್ಲಿ ಸಮೃದ್ಧವಾದ ನಿಸರ್ಗ ಚಿತ್ರಿಸುವುದರೊಂದಿಗೆ ಪ್ರಕೃತಿ ಆರಾಧನೆಯೇ ದೈವದಾರಾಧನೆ ಎಂಬಂತೆ ಚಿತ್ರಿಸಿದ್ದಾರೆ. ಎಲ್ಲೆಲ್ಲೂ ತಂಪಾದ ವರ್ಣಲೇಪನ ಶಿವಯೋಗಿಗಳ ಬಟ್ಟೆಯಲ್ಲಿ ಮಾತ್ರ ಹಿತಮಿತವಾದ ಛಾಯಾಂಕನವಿದೆ. ಇದೊಂದು ತೈಲವರ್ಣದಲ್ಲಿ ರಚಿಸಿದ ಚಿತ್ರವಾಗಿದೆ. ಹೀಗೆ ಚೆಟ್ಟಿಯವರು ಚಿತ್ರಿಸಿದ ಇಂತಹ ಕಲಾಕೃತಿಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಿರಿವುದನ್ನು ಗಮನಿಸಿದಾಗ ಅವರ ಈ ಹಿನ್ನೆಲೆಯ ನಿಸರ್ಗ ಚಿತ್ರಣದ ವೈಶಿಷ್ಟ್ಯತೆಯ ಬಗ್ಗೆ ತಿಳಿದುಬರುತ್ತದೆ.

ಚೆಟ್ಟಿಯವರ ಕಲಾಕೃತಿಗಳಲ್ಲಿಯ ಗಮನೀಯವಾದ ವೈಶಿಷ್ಟ್ಯತೆ ಎಂದರೆ ಮೀಸೆ. ಚೆಟ್ಟಿಯವರು ದಪ್ಪನಾದ. ಉದ್ದನೆಯ ಮೀಸೆಯ ಬಗ್ಗೆ ಬಹಳಷ್ಟು ಆಸಕ್ತಿಯನ್ನು ಹೊಂದಿದವರಾಗಿದ್ದರು. ಸ್ವತಃ ಅವರೆ ಆ ರೀತಿಯ ಮೀಸೆಯನ್ನು ಇಲ್ಲಿಯವರೆಗೂ ಕಾಪಾಡಿಕೊಂಡು ಬಂದಿದ್ದಾರೆ. ಅಂತೆಯೇ ಅವರು ರಚಿಸಿದ ಭಾವಚಿತ್ರಗಳೆಲ್ಲವು ಹೆಚ್ಚಾಗಿ ಪುರುಷರ ಚಿತ್ರಗಳಾಗಿದ್ದು ಅದರಲ್ಲೂ ಮೀಸೆ ಪ್ರಧಾನವಾಗಿ ಇರುವಂಥವರ ಚಿತ್ರಗಳೇ ಇವೆ. ಅವರು ಅಂತಹ ರೂಪದರ್ಶಿಗಳನ್ನೇ ಆರಿಸಿ ಚಿತ್ರಿಸುತ್ತಿದ್ದರು. ಈ ಪ್ರಭಾವ ಅವರ ಸಂಯೋಜನಾ ಚಿತ್ರದಲ್ಲೂ ಕಾಣುತ್ತೇವೆ. ಜನಸಾಮಾನ್ಯರನ್ನು ಚಿತ್ರಿಸುವ ಸಂದರ್ಭದಲ್ಲಿ ಎಲ್ಲ ಪುರುಷರಿಗೂ ಮೀಸೆಯನ್ನು ಪ್ರಮುಖವಾಗಿ ಚಿತ್ರಿಸಿದ್ದಾರೆ.

ವೇಷಭೂಷಣಗಳು ಅಷ್ಟೇ ಆಯಾಕಾಲದ ಹಾಗೂ ವ್ಯಕ್ತಿತ್ವಕ್ಕೆ ತಕ್ಕಂತಹ ವೇಶಗಳನ್ನು ಚಿತ್ರಿಸಿದ್ದಾರೆ. ಹೆಚ್ಚಾಗಿ ಕೆಲವು ಚಿತ್ರಗಳಲ್ಲಂತೂ ಉತ್ತರ ಕರ್ನಾಟಕದ ಸೀರೆ. ಕುಪ್ಪುಸಗಳನ್ನೇ ಚಿತ್ರಿಸಿದ್ದಾರೆ. ಗಂಡಸರಿಗೆ ತಲೆಯ ಮೇಲೆ ರುಮಾಲು. ಆಗ ಹೆಂಗಸರೆಲ್ಲ ಯಾವಾಗಲೂ ತಲೆಯ ತುಂಬಾ ಸೆರಗನ್ನು ಹೊತ್ತುಕೊಂಡಿರುವಂತಹದ್ದು. ಹೀಗೆ ಆ ಕಾಲದ ಉಡುಗೆ ತೊಡುಗೆ ಜೊತೆಯಲ್ಲಿ ಸಂಸ್ಕೃತಿ. ಸಂಪ್ರದಾಯಗಳ ಆಚರಣೆ. ಆಗಿನ ಕಾಲದಲ್ಲಿ ಉಪಯೋಗಿಸತಕ್ಕಂತಹ ದಿನೋಪಯೋಗಿ ವಸ್ತುಗಳು. ಜನ ಜೀವನದ ಮುಖವನ್ನು ತಮ್ಮ ಕಲಾಕೃತಿಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಅತ್ಯಂತ ಮೃದು ವರ್ಣಗಳನ್ನು ಬಳಸುವದರೊಂದಿಗೆ ನೆರಳು ಬೆಳಕನ್ನೂ ಅತ್ಯಂತ ಪ್ರಭಾವಶಾಲಿಯಾಗಿ ಯೋಜಿಸಿದ್ದಾರೆ. ಚಿತ್ರಗಳಲ್ಲಿ ಸೂಕ್ಷ್ಮತೆಯನ್ನು ಸ್ಪಷ್ಟತೆಯನ್ನು ಹಿನ್ನೆಲೆಯ ನಿಸರ್ಗ. ವ್ಯಕ್ತಿಗಳ ಗಾಂಭೀರ್ಯ. ಉತ್ಸುಕತೆ. ಭಾವಪರವಶತೆ ಎಲ್ಲ ನವರಸಗಳಿಂದ ಕೂಡಿ ಕಾವ್ಯಮಯವಾದ ಅಪೂರ್ವವಾದ ಕಳೆಯನ್ನು ತಂದುಕೊಟ್ಟಿವೆ.

ಚೆಟ್ಟಿಯವರ ಪಾಂಡಿತ್ಯ ಪ್ರತಿಭೆಯಂತೆ ಚಿತ್ರಗಳ ವಿಷಯಗಳು ಅಮೋಘವಾದವು. ಪವಾಡ ಪುರುಷರ ನೈಜ ಜೀವನದ ಚಿತ್ರಣವನ್ನು ನಮ್ಮೆದುರಿಗೆ ಸಿಲ್ಲಿಸುವ ಇವರ ಕಲಾಕೃತಿಗಳ ಒಂದು ವೈಶಿಷ್ಟ್ಯವೆಂದು ಹೇಳಬಹುದು.



೩೭. ಪ್ರಸಾದ ಸೇವಿಸುವ ನಾಗಲಾಂಬಿಕೆ



೩೮. ಅಜವಿಲಾಪ

೩೯. ವಸ್ತ್ರ ಅಕ್ಷಯವಾದ ಲೀಲೆ



वस्त्र अक्षय होने की लीला

೪೧. ಶ್ರೀ ಚೆನ್ನಬಸವಸ್ವಾಮಿಗಳು ನಂದೀ ಬಸಮ್ಮನವರಿಗೆ ಪ್ರಾಣದಾನ ಮಾಡಿದ್ದು





೪೨. ಪ್ರಭು ಮಾಯೆಗೆ ಸಿಕ್ಕದೇ ಹೋದದ್ದು



೪೩ ವೀರ ವಿರಾಗಿಣಿ ಅಕ್ಕಮಾಹಾದೇವಿ



೪೪. ನಿಡಸೋಸಿ ಆದ್ಯ ನಿಜಲಿಂಗೇಶ್ವರರ ತಾಯಂದಿರಾದ ಲಿಂಗಮ್ಮನವರ ದಿವ್ಯ ಸ್ವಪ್ನ



೪೫. ಅಥಣಿ ಶ್ರೀ ಮುರುಘೇಂದ್ರ ಶಿವಯೋಗಿಗಳು

" ಪಾಕಶಾಸ್ತ್ರದ ಪರೀಕ್ಷೆ ಭೋಜನದಲ್ಲಿ ಅಂತೆ ಕಲಾಕೃತಿಯ ಪರೀಕ್ಷೆ ರಸಾನುಭಾವದಲ್ಲಿದೆ. ಇದರ ಸೃಷ್ಟಿಸಕಲ ಸಾಮಾಜಿಕರಿಗಾಗಿ ಬರಿ ತಂತ್ರಜ್ಞರಿಗಾಗಿ ಅಲ್ಲ "[೩೦] ಎನ್ನುವ ದೃಷ್ಟಿಯಿಂದ ಬಹುಶಃ ಅವು ಚಿತ್ರಿಸಿದಂತೆ ಕಂಡುಬರುತ್ತದೆ.

ಈ ರೀತಿಯಾಗಿ ಕಲಾವಿದ ಚೆಟ್ಟಿಯವರ ರೇಖಾವಿನ್ಯಾಸ, ವರ್ಣಗಾರಿಕೆ, ಪ್ರಭಾವ ಶೈಲಿಯ ವಿಶಿಷ್ಟ ಕೊಡುಗೆಯ ಅಪಾರ ವಿಷಯ ವೈವಿಧ್ಯತೆ ಅಷ್ಟೇ ಮೌಲಿಕವಾದುದಾಗಿದೆ. ಅವುಗಳನ್ನು ನಿಜವಾಗಿ ಅನುಭವಿಸುವದಾದರೆ ಅವರ ಮೂಲ ಚಿತ್ರಗಳನ್ನೇ ನೋಡಬೇಕು.

ಚಿತ್ರಿಸಲು ಬಳಸಿದ ಕಲಾಸಾಮಗ್ರಿಗಳು :

ಇಲ್ಲಿಯವರೆಗೆ ಅವರ ಜಲವರ್ಣ, ತೈಲವರ್ಣ ಪೆನ್ಸಿಲ್ ಮಾಧ್ಯಮದಲ್ಲಿ ಅವರದೇ ಆದ ಶೈಲಿ-ವಿಶಿಷ್ಟತೆ, ರೇಖಾವಿನ್ಯಾಸ, ವರ್ಣಗಳ ಬಳಕೆ, ಲಯಬದ್ಧತೆ, ಮುಂತಾದ ವಿಷಯಗಳನ್ನು ಅವರ ಕಲಾಕೃತಿಗಳ ಮೂಲಕ ತಿಳಿದುಕೊಳ್ಳಲಾಯಿತು. ಹಾಗೆಯೇ ಈಗ ಅವರು ಅಂತಹ ಪರಿಣಾಮ ಬೀರುವಂತ ಚಿತ್ರಗಳಿಗಾಗಿ ಬಳಸಿರುವ ಸಾಧನಗಳ ಬಗ್ಗೆಯೂ ತಿಳಿದುಕೊಳ್ಳುವುದು ಅವಶ್ಯವಾಗಿದೆ.

ಜಲವರ್ಣಕ್ಕಾಗಿ ಬಳಸಿದ ಕಾಗದ ಹಾಗೂ ರಟ್ಟುಗಳು : ಚೆಟ್ಟಿಯವರು ಪಾರದರ್ಶಕ ಟ್ಯೂಬ ಜಲವರ್ಣ ಹಾಗೂ ಅಪಾರದರ್ಶಿಕೆಯಾದ ಪೋಸ್ಟರ್ ಜಲವರ್ಣಗಳನ್ನು ಬಳಸಿ ಚಿತ್ರಿರಸಿದ್ದಾರೆ. ಇಂತಹ ವರ್ಣಗಳನ್ನು ಉಪಯೋಗಿಸುವಾಗ ಅದಕ್ಕೆ ತಕ್ಕಂತಹ ಕಾಗದಗಳನ್ನು ಬಳಸಿದ್ದಾರೆ. ಪಾರದರ್ಶಕ ಜಲವರ್ಣ ನಿಸರ್ಗಚಿತ್ರ ರಚಿಸುವಲ್ಲಿ ಅದಕ್ಕಾಗಿಯೇ ವಿಶೇಷವಾಗಿ ತಯಾರಿಸಿದ ಕೈಕಾಗದ (hand made paper) ವನ್ನು ಬಳಸಿದ್ದಾರೆ. ಈ ಕಾಗದವು ಸಾಕಷ್ಟು ಧೃಡತೆಯನ್ನು ಹೊಂದಿರುವುದಷ್ಟೇ ಅಲ್ಲ ಅನೇಕ ಸಾರಿ ಜಲವರ್ಣವನ್ನು ಲೇಪಿಸಿದರೂ ಕೂಡಾ ಶಿಥಿಲಗೊಳ್ಳುವುದಿಲ್ಲ. ಈ ಬಗೆಯ ಕಾಗದಗಳಲ್ಲಿ ಜಲದೊಂದಿಗೆ ವರ್ಣಗಳೂ ಆಳ ಪದರಗಳಿಗೆ ಇಳಿದು ಸ್ಥಿರವಾಗಿ ನಿಲ್ಲುತ್ತವೆ. ಅಂತೆಯೇ ಎಷ್ಟೋ ವರ್ಷಗಳಾದರೂ ಅವು ತಾಜಾತನವನ್ನು ಹೊಂದಿವೆ. ಇನ್ನೂ ಅಪಾರದರ್ಶಕಗಳಾದ ಪೋಸ್ಟರ್ ವರ್ಣಗಳನ್ನು ಬಳಸುವಾಗ ಕೆಲವು ಚಿತ್ರಗಳಿಗೆ ಬಿಳಿಯ ಡ್ರಾಯಿಂಗ ಕಾಗದವನ್ನು ಬಳಸಿದ್ದಾರೆ ಇನ್ನೂ ಕೆಲವು ಚಿತ್ರಗಳಿಗೆ ಬಣ್ಣದ ಪೋಸ್ಟರ್ ಕಾಗದ ಬಳಸಿ ಆ ಬಣ್ಣವನ್ನೇ ಒಂದು ಛಾಯೆಯಾಗಿ ಬಳಸಿಕೊಂಡಿದ್ದಾರೆ. ಇನ್ನು ಕೆಲವು ಚಿತ್ರಗಳಿಗೆ ರಟ್ಟುಗಳನ್ನು (ತೆಳ್ಳನೆಯ ಪ್ಲಾಯ್‌ವುಡ್) ಬಳಸಿದ್ದಾರೆ. ಹೀಗೆ ಒಟ್ಟಾರೆಯಾಗಿ ತಾವು ಚಿತ್ರಿಸಿದ ಚಿತ್ರದ ಪರಿಣಾಮ (effect) ನೈಜತೆ ಅದರಲ್ಲಿ ಮೂಡಿ ಬಂದಿದೆ.

ತೈಲವರ್ಣ ಚಿತ್ರಗಳಿಗಾಗಿ ಉಪಯೋಗಿಸಿದ ಕಾಗದ ಹಾಗೂ ರಟ್ಟರಿವೆ (Canvas) ಗಳು : ತೈಲವರ್ಣ ಚಿತ್ರಗಳಿಗಾಗಿಯೇ ಕಾಗದವನ್ನು ತಯಾರಿಸುತ್ತಾರೆ. (Oil papers) ಈ ಕಾಗದಗಳು ಒಂದು ರೀತಿಯ ಒರಟು ಮೇಲ್ಮೈನ್ನು ಹೊಂದಿದ್ದು ವರ್ಣಗಳು ಆಳಕ್ಕೆ ಇಳಿದು ಬಿಗಿಯಾಗಿ ಕಾಗದವನ್ನು ಹಿಡಿದುಕೊಳ್ಳುತ್ತವೆ ಅಲ್ಲದೆ ಈ

---

೩೦. ವಿ. ಕೃ. ಗೋಕಾಕ (ಸಂ.) : ವಿಮರ್ಶಾ ತತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ : ಪುಟ ೨೫

ಕಾಗದಗಳು ತೈಲವನ್ನು ಹೀರಿಕೊಳ್ಳದೆ ಆ ಹೊಳಪನ್ನು ಹಾಗೆ ಇರಲು ಸಹಾಯ ಮಾಡುತ್ತವೆ. ಕೆಲವು ಚಿತ್ರಗಳಿಗೆ ಇಂತಹ ಕಾಗದ ಉಪಯೋಗಿಸಿದ್ದಾರೆ. ಹೆಚ್ಚಾಗಿ ತೈಲಚಿತ್ರಗಳನ್ನು ಕ್ಯಾನ್‌ವಾಸ್ ಮೇಲೆಯೇ ಚಿತ್ರಿಸಿದ್ದಾರೆ. ಈ ಕ್ಯಾನವಾಸ್‌ಗಳು ವಿವಿಧ ಅಳತೆಗಳಲ್ಲಿ ಸಿದ್ಧವಾಗಿಯೇ ಸಿಗುತ್ತವೆ. ಕೆಲವು ಸಾರೆ ಕಲಾವಿದರೆ ಅದನ್ನು ತಯಾರಿಸಿಕೊಳ್ಳಬಹುದು. ಇನ್ನೂ ಕೆಲವು ಸಾರಿ ಹಾರ್ಡ ಬೋರ್ಡ ಮೇಲೆ ನೇರವಾಗಿ ಉಳಿದಂಥ ವರ್ಣಗಳನ್ನು ಲೇಪಿಸಿಯೂ ಚಿತ್ರಗಳನ್ನು ರಚಿಸಿದ್ದಾರೆ.

ವರ್ಣ ಹಾಗೂ ಕುಂಚಗಳು :

ಜಲವರ್ಣ, ತೈಲವರ್ಣ, ಪೋಸ್ಟರ್ ಜಲವರ್ಣಗಳನ್ನು ದೇಶಿಯ ಉತ್ಪಾದನೆಗಳನ್ನು ಬಳಸಿದ್ದರೂ ಅದರಲ್ಲಿ ಹೆಚ್ಚಾಗಿ ಕ್ಯಾಮಲ್ ಕಂಪನಿಯ ' ಆರ್ಟಿಸ್ಟ್ ವರ್ಣಗಳನ್ನೇ ' ಬಳಸಿರುವುದು ಅವರ ಸ್ಟುಡಿಯೋ ಗಮನಿಸಿದಾಗ ಕಂಡುಬಂದ ಅಂಶಗಳು ಅಲ್ಲದೇ ಅವರು ತಮ್ಮ ಮಿತ್ರರು ಯಾರೇ ವಿದೇಶಕ್ಕೆ ಹೋದರು. ಅಲ್ಲಲ್ಲಿ ವರ್ಣಗಳನ್ನು ಕುಂಚಗಳನ್ನು ತರಿಸಿ ಅವುಗಳನ್ನು ತಮ್ಮ ಚಿತ್ರಗಳಲ್ಲಿ ದುಡಿಸಿಕೊಂಡಿದ್ದಾರೆ. ನಾನಾ ರೀತಿಯ ಕುಂಚಗಳನ್ನು ಕೂಡಿಸಿಡುವ ಹವ್ಯಾಸ ಶ್ರೀ ಚೆಟ್ಟಿಯವರದಾಗಿತ್ತಲ್ಲದೆ ಅವುಗಳ ಬಳಕೆಯನ್ನು ಮಾಡುತ್ತಿದ್ದರು. ಈ ವರ್ಣಗಳಿಂದಾಗಿ ಹಾಗೂ ಅವುಗಳನ್ನು ದುಡಿಸಿಕೊಳ್ಳುವ ಚೆಟ್ಟಿಯವರ ಕೌಶಲ್ಯದಿಂದಾಗಿ ಎಷ್ಟೋ ವರ್ಷಗಳಾದರೂ ಆ ಚಿತ್ರಗಳು ಹೊಚ್ಚ ಹೊಸದರಂತೆ ಇವೆ. ಅವರು ಬಣ್ಣದ ಚೂರಿ (colour knife) ಯನ್ನು ಬಳಸಲೇ ಇಲ್ಲ ಏನಿದ್ದರೂ ಕುಂಚಗಳ ಮುಖಾಂತರವೆ. ಚಿತ್ರಗಳ ಒಟ್ಟಾರೆ ಪರಿಣಾಮವನ್ನು ಸೆರೆಹಿಡಿದಿದ್ದಾರೆ.

ರೇಖಾ ಚಿತ್ರಗಳನ್ನಂತೂ ಪೆನ್ಸಿಲ್, ಇಂಕ (ಮಸಿ) ಚಾರ್ಕೋಲಸಿಂದ ಚಿತ್ರಿಸಿರುವುದನ್ನು ಕಾಣುತ್ತೇವೆ. ಒಳ್ಳೆಯ ಪರಿಣಾಮಬೀರಲು ಪೆನ್ಸಿಲ್‌ಗಳೇ ಒಳ್ಳೆಮಾಧ್ಯಮವೆಂದು ಅವರ ಅಭಿಪ್ರಾಯವಾಗಿತ್ತು. ' ಪೇಂಟಿಂಗಕ್ಕಿಂತ ಪೆನ್ಸಿಲ್ ಡ್ರಾಯಿಂಗ ಬಹಳ ಉತ್ತಮ ' ಎಂದು ಅವರು ಹೇಳುತ್ತಿದ್ದರು.[೩೧] ಕಾರಣ ಇದರಿಂದ ಸುಲಭವಾಗಿ ಛಾಯಾಂಕನವನ್ನು ರಚಿಸಿ ಚಿತ್ರದ ನೈಜ ಪರಿಣಾಮವನ್ನು ತತಕ್ಷಣ ನೋಡಬಹುದೆಂದು ಅಲ್ಲದೆ ಇವು ಬಹಳ ವರ್ಷಗಳವರೆಗೆ ಬಾಳಿಕೆ ಬರುವವು. ಚಾರ್ಕೋಲಿನಲ್ಲಿ ಈ ಪರಿಣಾಮ ಬಂದರು ಅವುಗಳನ್ನು ಕಾಯ್ದಿರಿಸುವುದು ಬಹಳ ಕಷ್ಟದ ಕೆಲಸ. ಅಂತೆಯೇ ಚೆಟ್ಟಿಯವರು ಅಂಕನೆ (sketchs) ಗಳಿಗಾಗಿ ಪೆನ್ಸಿಲ್ಲನ್ನೇ ಹೆಚ್ಚು ಉಪಯೋಗಿಸಿದ್ದಾರೆ.

ಚಿತ್ರಗಳ ಮೇಲೆ ಮೊದ ಮೊದಲು ಮು. ಅ. ಚೆಟ್ಟಿ ಎಂದು ಕನ್ನಡದಲ್ಲಿ ತಮ್ಮ ಹಸ್ತಾಕ್ಷರ ಬಳಸಿದರೆ ತದನಂತರದ ಚಿತ್ರಗಳಲ್ಲಿ ಇಂಗ್ಲೀಷನಲ್ಲಿ M. A. CHETTI ಎಂದು ಹಸ್ತಾಕ್ಷರ ಬಳಸಿದ್ದಾರೆ. ಬಹುಶಃ ಹೊರ ರಾಜ್ಯಗಳಿಗೆ ಚಿತ್ರಗಳನ್ನು ಕಳಿಸಿಕೊಟ್ಟಾಗ ಅವರಿಗೆ ಕಲಾವಿದ ಯಾರು ಎಂಬ ಅಂಶ ತಿಳಿಯಬೇಕೆಂದು ಈ ರೀತಿ ಬರೆಯಲು ಪ್ರಾರಂಭಿಸಿರಬೇಕು. ಇನ್ನೂ ಕೆಲವು ಚಿತ್ರಗಳಿಗೆ ರೇಖಾ ಅಂಕನೆ (sketch) ಗಳಿಗೆ ಹಸ್ತಾಕ್ಷರವನ್ನೇ ಹಾಕಿಲ್ಲ. ಅವರ ವಿಶಿಷ್ಟವಾದ ಶೈಲಿಯ ಮೂಲಕವೇ ಅವನ್ನು ಗುರುತಿಸಬಹುದಾಗಿದೆ.

---

೩೧. ಕೆ. ವಿ. ಕುಂದಗೋಳ ಅವರೊಂದಿಗೆ ಸಂದರ್ಶನ. ದಿನಾಂಕ ೧೫-೨-೧೯೯೯. ಗದಗ

ಚೆಟ್ಟಿಯವರ ಕಲಾಕೃತಿಗಳು ನಮ್ಮ ನಾಡಿನ ಆಸ್ತಿ ಹೀಗಿರಲು ಅವುಗಳ ಸಂರಕ್ಷಣೆ ಬಹಳ ಮಹತ್ವವಾದದ್ದು. ಚೆಟ್ಟಿಯವರ ಕಲಾಕೃತಿಗಳು ಅವರ ಮನೆಯ ಮಂದಿಗಷ್ಟೇ ಸಂಬಂಧಿಸಿದ್ದುವುಗಳಲ್ಲ. ಅವು ಸಮಾಜಕ್ಕೂ ಸಂಬಂಧಿಸಿದವು. ಆದ್ದರಿಂದ ಅವುಗಳ ರಕ್ಷಣೆಯನ್ನು ಮಾಡುವಲ್ಲಿ ಸರ್ಕಾರ ಮುಂದೆ ಬರಬೇಕು. ಅಕಾಡೆಮಿಯಾಗಲಿ. ವಿಶ್ವವಿದ್ಯಾಲಯಗಳಾಗಲಿ, ಇನ್ನಿತರ ಸಂಘ, ಸಂಸ್ಥೆಗಳು. ಚಿತ್ರಕಲಾ ಶಾಲೆಗಳು ಮುಂದೆ ಬರಬೇಕು. ನನಗೆ ತಿಳಿದಂತೆ ಈಗಾಗಲೇ ಎಷ್ಟೋ ಚಿತ್ರಗಳು ಹುಳು ಹತ್ತಿ ಹಾಳಾಗಿ ಹೋಗಿವೆ. ಕೆಲವು ಧೂಳು ತಿಂದಿವೆ. ಮಳೆಯ ನೀರು ಮುಂತಾದವುಗಳಿಂದ ಮಾಸಿ ನಶಿಸಿ ಹೋಗುತ್ತಿವೆ. ಪಾಶ್ಚಾತ್ಯ ದೇಶಗಳಲ್ಲೂ ಸಹಿತ ಒಂದು ಕಾಲಕ್ಕೆ ಲಿಯೊನಾರ್ಡೊ-ಡ-ವಿಂಚಿ ರಚಿಸಿದ 'ಮೊನಾಲಿಸ' ಕಲಾಕೃತಿ' ತಿರಸ್ಕೃತವಾಗಿತ್ತು. ಆದರೆ ಈಗ ಅದನ್ನು ಕಾವಲು ಕಾಯಲು ಸೈನ್ಯವನ್ನೇ ಇಟ್ಟಿದ್ದಾರೆ. ಪಿಕಾಸೋನ ಅನೇಕ ಕೃತಿಗಳು ಇಂದು. ಕೋಟಿ ರೂಪಾಯಿಗಳ ಮೌಲ್ಯವನ್ನು ಹೊಂದಿವೆ. ನಮ್ಮ ನಾಡಿನ ನಮ್ಮ ಪರಂಪರೆಯ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬಂದ ನಮ್ಮ ಸಂದರ್ಭದ ಗಮನಾರ್ಹ ಕಲಾವಿದರಾದ ಚೆಟ್ಟಿಯವರ ಕಲಾಕೃತಿಗಳು ಅವರು ಇನ್ನೂ ಜೀವಂತ ಇರುವಾಗಲೇ ಹಾಳಾಗಿ ಹೋಗುತ್ತಿವೆ. ಇಂತಹ ಸ್ಥಿತಿ ಒದಗಿರುವುದು ವಿಷಾದನೀಯ ಸಂಗತಿಯಾಗಿದೆ. ಆದ್ದರಿಂದ ಈಗಲೇ ಅವುಗಳನ್ನು ಸಂರಕ್ಷಿಸುವಂತಹ ಕಾರ್ಯವನ್ನು ಕೈಗೊಳ್ಳಬೇಕು ಇಲ್ಲವಾದರೆ ಇನ್ನೂ ಸ್ವಲ್ಪ ದಿನಗಳಲ್ಲಿ ಅವೂ ಕೂಡ ನಾಶವಾಗಿ ಹೋಗುವ ಸಂಭವವಿದೆ.



೩೭ ಚೆಟ್ಟಿಯವರ ಮನೆಯಲ್ಲಿನ ಚಿತ್ರಗಳ ಈಗಿನ ವಸ್ತು ಸ್ಥಿತಿ

ಅಧ್ಯಾಯ ಎಂಟು

ಸಮಾರೋಪ



ಕಲೆ ಸಂಸ್ಕೃತಿಯ ಒಂದು ಅಂಗ, ಒಂದು ಸಮುದಾಯದ ಕಲೆ. ಜನಜೀವನಗಳು ಆ ನಾಡಿನ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತವೆ. ಸಂಸ್ಕೃತಿಯ ಜೀವಂತಿಕೆಯ ಹಿಂದೆ ಹಲವು ವ್ಯಕ್ತಿಗಳ ಕಾಯಕದ ಶಕ್ತಿ ಚೈತನ್ಯವಿದೆ. ಬದುಕನ್ನೇ ಕಲೆ ಸಂಸ್ಕೃತಿಗಾಗಿ ಮುಡುಪಾಗಿಟ್ಟು ಬೆಳಸಿಕೊಂಡು ಬಂದವರು ಚೆಟ್ಟಿಯವರು. ನಾಡಿನ ಚಿತ್ರಕಲೆಯ ಅಧ್ಯಯನದಲ್ಲಿ ಅಂತಹ ಕಲಾವಿದರ ಜೀವನ ಹಾಗೂ ಅವರ ಸಾಧನೆ ಕಲಾಕೃತಿಗಳ ಕೊಡುಗೆ ಅಷ್ಟೇ ಮಹತ್ವಪೂರ್ಣವಾದುದು. ನಾಡಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಹಿನ್ನೆಲೆಯಲ್ಲಿ ಕಲಾವಿದ ಎಂ. ಎ. ಚೆಟ್ಟಿಯವರ ಜೀವನ ಕಲಾಕೃತಿಗಳ ಒಂದು ಅಧ್ಯಯನ ಮಹಾಪ್ರಬಂಧ ರೂಪಗೊಂಡಿದೆ. ಒಟ್ಟು ಎಂಟು ಅಧ್ಯಾಯಗಳಲ್ಲಿ ವಿಷಯ ವಸ್ತುವಿನ ನಿರೂಪಣೆಯಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಸ್ವರೂಪ, ವಿಧಾನಗಳನ್ನು ಹೇಳಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಚಿತ್ರಕಲಾ ಪ್ರಪಂಚಕ್ಕೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಕಲಾವಿದ ಎಂ. ಎ. ಚೆಟ್ಟಿಯವರ ವಂಶಾವಳಿ, ಜನನ, ಬಾಲ್ಯ, ಪ್ರಾಥಮಿಕ ಶಿಕ್ಷಣದಲ್ಲಿ ಅವರೊಂದಿಗಿದ್ದ ಗೆಳೆಯರು, ಗುರುವೃಂದ ಅಲ್ಲದೆ ಇವರು ಕಲಾವಿದರಾಗಿ ರೂಪಗೊಳ್ಳುವಲ್ಲಿ ಪ್ರಭಾವ ಬೀರಿದ ಸಾಂಸ್ಕೃತಿಕ ಅಂಶಗಳು ಚಿಕ್ಕಪ್ಪನವರ ಆಶ್ರಯ, ಪರಿಶುದ್ಧ ಕಾಯಕದ ಬದುಕು, ಕೌಟುಂಬಿಕ ಜೀವನ, ಅವರ ಬದುಕಿನ ವಿವರಗಳನ್ನು ವಿವರಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಕಲಾವಿದ ಎಂ. ಎ. ಚೆಟ್ಟಿಯವರು ಕಲಾವ್ಯಾಸಂಗಕ್ಕಾಗಿ ಮುಂಬೈನ ಸರ್ ಜೆ. ಜೆ. ಕಲಾಶಾಲೆಯನ್ನು ಸೇರಿ ಡ್ರಾಯಿಂಗ ಮತ್ತು ಪೇಂಟಿಂಗ ವಿಷಯ ಆರಿಸಿಕೊಂಡು ಅಧ್ಯಯನ ಮಾಡಿದ ಬಗ್ಗೆ, ಅಲ್ಲಿ ಖ್ಯಾತ ಕಾಲವಿದರಾದ ಶ್ರೀ ಕೆ. ಬಿ. ತಾಸ್ಕರ್, ಶ್ರೀ ಎಂ. ವಿ. ಧುರಂಧರ ಅವರು ಇವರಿಗೆ ಗುರುಗಳಾಗಿದ್ದರು. ಯುರೋಪಿಯನ್ ಡೈರೆಕ್ಟರ್‌ರಾದ ಕ್ಯಾಪ್ಟನ್ ಗ್ಲಾಡಸನ್ ಸಲೋಮನ್‌ರವರು ಪ್ರಾಚಾರ್ಯರಾಗಿದ್ದರು. ಅವರ ಮಾರ್ಗದರ್ಶನದಲ್ಲಿ ಯಾವ ರೀತಿ ಕಲಾಭ್ಯಾಸವನ್ನು ಕಟ್ಟುನಿಟ್ಟಾಗಿ ಮಾಡಿದರು, ಎಂಬುದರ ಬಗ್ಗೆ ಹೇಳಲಾಗಿದೆ. ಹಾಗೂ ಆಗಿನ ಕಾಲದ ಪಠ್ಯಕ್ರಮ, ಪರೀಕ್ಷಾ ಪದ್ಧತಿ, ಅಧ್ಯಾಪಕವರ್ಗ ಅವರು ವರ್ಗದಲ್ಲಿ ತಿಳಿಸಿಕೊಡುವ ರೀತಿ, ವಿದ್ಯಾರ್ಥಿಗಳ ಮೇಲೆ ಅವರ ಪ್ರಭಾವ, ಅವರು ಚಿತ್ರಗಳನ್ನು ರಚಿಸುವ ಶೈಲಿ, ತಂತ್ರ ಹಾಗೂ ಅಲ್ಲಿಯ

ಚಿತ್ರಪ್ರದರ್ಶನಗಳ ರೀತಿ, ಕಲಾವಾತಾವರಣ, ಶೈಕ್ಷಣಿಕ ಪ್ರವಾಸದ ಜೊತೆಗೆ ಚಿತ್ರಗಳ ರಚನೆಯ ಬಗ್ಗೆ ವಿವರಿಸಲಾಗಿದೆಯಲ್ಲದೆ, ಚಿಟ್ಟಿಯವರ ಅಧ್ಯಯನ ಕಾಲದಲ್ಲಿ ನಡೆದ ಅನೇಕ ಮಹತ್ವದ ಘಟನೆಗಳು ಹಾಗೂ ಅಲ್ಲಿ ಸಪ್ತವರ್ಣ ಗುಂಪು ಎಂದು ಎಲ್ಲರಿಂದ ಕರಿಸಿಕೊಳ್ಳಲ್ಪಟ್ಟ ಕರ್ನಾಟಕದ ಏಳು ಜನ ಶ್ರೇಷ್ಠ ಕಲಾವಿದರಾದ ಶ್ರೀ ಎಂ. ವಿ. ಮಿಣಜಗಿ, ಶ್ರೀ ಡಿ. ಜಿ. ಬಡಿಗೇರ, ಶ್ರೀ ಅಮೀನ ಸಾಹೇಬ ಕಮಡೊಳ್ಳಿ, ಶ್ರೀ ಡಿ. ವಿ. ಹಾಲಭಾವಿ, ಶ್ರೀ ಜಿ. ಎಸ್. ದಂಡಾವತಿಮಠ. ಶ್ರೀ ಸಿ. ವಿ. ಕಾರಡಗಿ, ಶ್ರೀ ಎಂ. ಎ. ಚೆಟ್ಟಿಯವರು. ಈ ಗುಂಪಿನ ಮಹತ್ವದ ವಿವರಗಳನ್ನು ಈ ಸ್ನೇಹಿತ ಬಳಗದ ಕಲಾಸಾಧನೆ ಕುರಿತು ಇಲ್ಲಿ ಅಧ್ಯಾಯನ ಮಾಡಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಕಲಾವಿದ ಎಂ. ಎ. ಚೆಟ್ಟಿಯವರ ವೃತ್ತಿ ಜೀವನ ಹಾಗೂ ಕಲಾಬದುಕನ್ನು ಕುರಿತು ಚರ್ಚಿಸಲಾಗಿದೆ. ಚೆಟ್ಟಿಯವರು ಮುಂಬೈನ ಸರ್ ಜೆ. ಜೆ. ಕಲಾ ಶಾಲೆಯಿಂದ ಡಿಪ್ಲೋಮಾ ಮುಗಿಸಿಕೊಂಡು ಸೊಲ್ಲಾಪುರಕ್ಕೆ ಬಂದು ನೆಲೆಸಿದರು. ಮೊಟ್ಟಮೊದಲು ಪುರಾಣಕ್ಕೆ ಚಿತ್ರರಚಿಸಿದ್ದು ಇಲ್ಲೆ. ಅಲ್ಲದೇ ಮೊದಲ ತೈಲವರ್ಣ ಚಿತ್ರವನ್ನು ರಚಿಸಿ ಅಖಿಲ ಭಾರತ ಸ್ಪರ್ಧೆಯಲ್ಲಿ ಮೊದಲ ಸ್ಥಾನಗಳಿಸಿದ್ದು ಇಲ್ಲೇ. ಹೀಗಾಗಿ ಅವರ ಚಿತ್ರಕಲಾ ವೃತ್ತಿ ಇಲ್ಲಿಂದಲೇ ಪ್ರಾರಂಭವಾಗಿದ್ದು. ಅದಕ್ಕೆ ದೊರೆತ ಮನ್ನಣೆ ಆಗಿನ ಅವರ ಅನುಭವಗಳ ಕುರಿತು ವಿವರಿಸಲಾಗಿದೆ. ಮುಂದೆ ಗದುಗಿಗೆ ಬಂದು ನೆಲೆಸಿದರು. ಅಲ್ಲಿಯ ಶ್ರೀ ಟಿ. ಪಿ. ಅಕ್ಕಿಯವರ ಜೊತೆಗೂಡಿ ವಿಜಯ ಕಲಾಮಂದಿರದಲ್ಲಿ ಶಿಕ್ಷಕರಾಗಿ ಮುಂದೆ ಉಪಪ್ರಾಚಾರ್ಯರಾಗಿ ೨೫ ವರ್ಷ ಅಮೋಘವಾದ ಸೇವೆ ಸಲ್ಲಿಸಿದ್ದಾರೆ. ವಿದ್ಯಾರ್ಥಿಗಳಿಗೆ ಉತ್ತಮವಾದ ಕಲಾಚಟುವಟಿಕೆಗಳ ಕುರಿತು ಮಾರ್ಗದರ್ಶನ ನೀಡಿದ್ದುದರ ಬಗ್ಗೆ ಚರ್ಚಿಸಲಾಗಿದೆ. ಈ ಸಂದರ್ಭದಲ್ಲಿ ಇವರಿಗೆ ಭಾವ ಚಿತ್ರಗಳನ್ನು ರಚಿಸಲು ಮನೆ-ಮಠಗಳಿಂದ ಕರೆ ಬಂದುದರ ಬಗ್ಗೆ, ಚಿತ್ರಗಳ ನಿರ್ವಹಣೆಯ ಜೊತೆಗೆ ಕಲಾವಿದ ಚೆಟ್ಟಿಯವರ ವೃತ್ತಿ ಹಾಗೂ ಕಲಾಬದುಕಿನ ಮಹತ್ವದ ವಿವರಳಗನ್ನು ಗಮನಿಸಲಾಗಿದೆ.

ಅಧ್ಯಾಯ ಐದರಲ್ಲಿ ಕಲಾವಿದ ಎಂ. ಎ. ಚೆಟ್ಟಿಯವರ ಪೆನ್ಸಿಲ್ ಇಂಕ್, ಚಾರ್ಕೋಲ್ ಮಾಧ್ಯಮದ ರೇಖಾ ಚಿತ್ರಗಳ ಕುರಿತು ಅಧ್ಯಯನ ಮಾಡಲಾಗಿದೆ. ಇದರಲ್ಲಿ ಶಿರಭಾವ ಚಿತ್ರ. ಜೀವಮಾಧರಿ ಚಿತ್ರ, ಸ್ಥಿರ ವಸ್ತು ಚಿತ್ರಣ. ನಿಸರ್ಗ ಚಿತ್ರಗಳು. ಸಂಯೋಜನಾ ಚಿತ್ರಗಳು ಎಂದು ಉಪಭಾಗಗಳಾಗಿ ವಿಂಗಡಿಸಲಾಗಿದೆ. ಅದರಲ್ಲಿ ಪುರಾಣಗ್ರಂಥ ಚಿತ್ರಗಳು. ಧಾರ್ಮಿಕ. ಐತಿಹಾಸಿಕ. ಸಾಮಾಜಿಕ. ಮತ್ತು ದೈನಂದಿನ ಅಂಕನೆ (sketih) ಗಳು ಹಾಗೂ ಶಿಲ್ಪಗಳ ರೇಖಾ ಚಿತ್ರಗಳನ್ನು ಚರ್ಚಿಸಲಾಗಿದೆ. ರೇಖೆಗಳಲ್ಲಿಯ ಅವರ ಭಾವಾಭಿವ್ಯಕ್ತತೆ. ಸನ್ನಿವೇಶದ ಪರಿಣಾಮ. ಲಯ. ಆನಂದ. ಅನುಕಂಪ. ವಿಸ್ಮಯ ಮೊದಲಾದ ಭಾವಸಂಚಾರ. ಜೀವನೋಲ್ಲಾಸ ಭಯ. ಕಾತರ. ನೋವು ಮುಗ್ಧತೆ ಇಂಥವೆಲ್ಲದರ ಭಾವಗಳು ಸಹಜವೆನಿಸುವ ರೀತಿಯಲ್ಲಿ ಅಭಿವ್ಯಕ್ತಿಸಿರುವುದರ ಬಗ್ಗೆ ಅಧ್ಯಾಯನ ಮಾಡಲಾಗಿದೆ.

ಅಧ್ಯಾಯ ಆರರಲ್ಲಿ ಕಲಾವಿದ ಎಂ. ಎ. ಚೆಟ್ಟಿಯವರ ವರ್ಣಚಿತ್ರಗಳನ್ನು ಕುರಿತು ಅಧ್ಯಾಯನ ಮಾಡಲಾಗಿದೆ. ಇಲ್ಲಿ ಜಲವರ್ಣ. ತೈಲವರ್ಣ ಹಾಗೂ ಪೆಸ್ಟಲ್ ಮಾಧ್ಯಮದ ವರ್ಣ ಚಿತ್ರಗಳ ಬಗ್ಗೆ ಚರ್ಚಿಸಲಾಗಿದೆ. ಚೆಟ್ಟಿಯವರು ಸಂಪ್ರದಾಯ (ಪಾರಂಪರಿಕ) ಕಲಾವಿದರಾಗಿದ್ದು ನಮ್ಮ ನಾಡಿನ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದವರು.

ವಿದೇಶಿ ಪದ್ಧತಿಯಲ್ಲಿ ಕಲಾ ಶಿಕ್ಷಣವನ್ನು ಪಡೆದರೂ ದೇಶಿಯತೆಯನ್ನು ತಮ್ಮ ಚಿತ್ರಗಳಲ್ಲಿ ಉಳಿಸಿಕೊಂಡು ಬಂದಿದ್ದಾರೆ. ಇದರಲ್ಲಿಯೂ ಸಹಿತ ಉಪವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಅವು ಶಿರಭಾವಚಿತ್ರ. ಜೀವಮಾದರಿ ಚಿತ್ರ ಸ್ಥಿರವಸ್ತು ಚಿತ್ರಣ ನಿಸರ್ಗ ಚಿತ್ರಗಳು ಸಂಯೋಜನಾ ಚಿತ್ರಗಳು ಅದರಲ್ಲಿ ಪುರಾಣಗ್ರಂಥ ಚಿತ್ರಗಳು. ಧಾರ್ಮಿಕ. ಐತಿಹಾಸಿಕ. ಸಾಮಾಜಿಕ ಚಿತ್ರಗಳು. ಪುಸ್ತಕದ ಮುಖಪುಟದ ಚಿತ್ರಗಳು. ಅವುಗಳಲ್ಲಿ ನಮ್ಮ ಸಂಸ್ಕೃತಿಯ ಪರಂಪರೆಯ ಮೌಲ್ಯಗಳನ್ನು ಉಳಿಸಿಕೊಂಡು ಬಂದ ಅಸಾಧಾರಣ ಪ್ರತಿಭಾಶಕ್ತಿಯ ಬಗ್ಗೆ ಮತ್ತು ಅವರ ಕಲಾಕೃತಿಗಳ ಸಂಯೋಜನಾರೀತಿ. ಬಣ್ಣ. ರೇಖೆಗಳ ಬಗ್ಗೆಯೂ ವಿವರವಾಗಿ ಅಧ್ಯಯನ ಮಾಡಲಾಗಿದೆ.

ಏಳನೇ ಅಧ್ಯಾಯದಲ್ಲಿ ಕಲಾವಿದ ಎಂ. ಎ. ಚೆಟ್ಟಿಯವರ ರೇಖಾವಿನ್ಯಾಸ. ವರ್ಣಗಾರಿಕೆ. ಕಲಾತಂತ್ರ ಪ್ರಭಾವ. ಶೈಲಿ. ವಿಶಿಷ್ಟ ಕೊಡುಗೆಯ ಬಗ್ಗೆ ಚರ್ಚಿಸಲಾಗಿದೆ. ಚೆಟ್ಟಿಯವರ ಕಾಲದ ಆಗಿನ ಪರಿಸರ ನೈಜ ಚಿತ್ರಗಳನ್ನು ಹೆಚ್ಚು ಪ್ರೀತಿಸುತ್ತಿದ್ದುದರಿಂದ ಮತ್ತು ಸಮಕಾಲೀನ ಕಲಾವಿದರ. ಕಲಾಗುರುಗಳ ಕೆಲಮಟ್ಟಿನ ಪ್ರಭಾವವು ಇವರ ಮೇಲೆ ಆಗಿರುವುದರಿಂದ ಚೆಟ್ಟಿಯವರು ವಿಶೇಷವಾಗಿ ಪಾರಂಪರಿಕ ನೈಜವಾದ ಚಿತ್ರಗಳನ್ನು ಚಿತ್ರಿಸುವುದರಲ್ಲಿ ಸಿದ್ಧಹಸ್ತರಾಗಿದ್ದರು. ಇವರ ರೇಖಾ ವಿನ್ಯಾಸದಲ್ಲಿಯ ಭಾವಗಳು. ಸಮತೋಲನೆಯ. ಆ ರೇಖೆಗಳ ಬಗ್ಗೆ ಗಮನಹರಿಸಲಾಗಿದೆ. ಮೃದು ವರ್ಣಗಳ ಜೊತೆಗೆ ಪ್ರಖರ ವರ್ಣಗಳ ಮೇಳಾಪದಿಂದ ಸೌಮ್ಯವಾತಾವರಣದ ಪರಿಣಾಮವನ್ನು ನೀಡುವ ರೀತಿ. ಅವರರದೇ ಆದ ವಿಶೀಷ್ಟ ಕೊಡುಗೆ ಆಗಿದೆ. ಜಲವರ್ಣ. ತೈಲವರ್ಣಗಳ ಮೇಲಿನ ಅವರ ಹಿಡಿತದ ಬಗ್ಗೆ ಚರ್ಚಿಸಲಾಗಿದೆ. ಅಲ್ಲದೆ ಅವರ ಮೇಲಾದ ವಿವಿಧ ರೀತಿಯ ಪ್ರಭಾವದ ಬಗ್ಗೆ ಹಿನ್ನೆಲೆಯನ್ನೇ ಬಳಸಿಕೊಂಡು ಒಳ್ಳೆಯ ಪರಿಣಾಮವನ್ನು ನೀಡುವ ಕಲಾತಂತ್ರ ಅಲ್ಲದೇ ಇವರ ಕಲಾ ಶೈಲಿಯ ವಿಶಿಷ್ಟ ಕೊಡುಗೆಯನ್ನು ಕುರಿತಾದ ವಿವರಗಳನ್ನು ಇಲ್ಲಿ ಅಧ್ಯಾಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ ಎಂಟರಲ್ಲಿ ಪ್ರಸ್ತುತ ಮಹಾಪ್ರಬಂಧದ ಎಲ್ಲ ಅಧ್ಯಾಯಗಳ ಸಮೀಕ್ಷೆಯನ್ನು ಸ್ಥೂಲವಾಗಿ ವಿವರಿಸಲಾಗಿದೆ.

ಚೆಟ್ಟಿಯವರ ಎಲ್ಲಾ ಚಿತ್ರಗಳಲ್ಲಿ ಸಮಕಾಲೀನ ಸಮಾಜದಲ್ಲಿಯ ಅಂಶಗಳನ್ನೇ ಕಾಣುತ್ತೇವೆ. ಚೆಟ್ಟಿಯವರ ಚಿತ್ರಗಳ ಅಧ್ಯಯನವೆಂದರೆ ಸಮಕಾಲೀನ ಸಂಸ್ಕೃತಿಯ ಅಧ್ಯಯನವೇ ಆಗಿದೆ. ಈ ಹಿನ್ನೆಲೆಯಲ್ಲಿ ಸಮಕಾಲೀನ ಸಾಂಸ್ಕೃತಿಕ ವಿವರಗಳು ಅವರ ಚಿತ್ರಗಳಲ್ಲಿ ಆಯಾ ಸನ್ನಿವೇಶದ ಹಿನ್ನೆಲೆಯಲ್ಲಿ ದಾಖಲುಗೊಂಡಿವೆ. ಮುಂದೆ ಹೆಚ್ಚು ಸಾಂಸ್ಕೃತಿಕ ಅಧ್ಯಯನ ಮಾಡುವವರಿಗೆ ವಿಪುಲವಾದ ಸಾಮಗ್ರಿ ಚೆಟ್ಟಿಯವರ ಕಲಾಕೃತಿಗಳಲ್ಲಿ ಇರುವುದನ್ನು ನಾವು ಕಾಣುತ್ತೇವೆ. ಈ ದಿಶೆಯಲ್ಲಿ ಪ್ರತ್ಯೇಕವಾದ ಸಾಂಸ್ಕೃತಿಕ ಅಧ್ಯಯನವನ್ನು ಮಾಡಬಹುದಾಗಿದೆ. ಅವರ ಸಮಗ್ರ ಚಿತ್ರಗಳ ಸ್ಥೂಲವಾದ ಒಂದು ಸಮೀಕ್ಷೆಯ ನೋಟವನ್ನು ಮಾತ್ರ ಪ್ರಸ್ತುತ ಅಧ್ಯಯನದ ಮೂಲಕ ಮಾಡಿಕೊಡುವ ಪ್ರಯತ್ನ ಮಾಡಲಾಗಿದೆ.

ಅನುಬಂಧ

GOVERNMENT OF BOMBAY
ART EXAMINATIONS.

DIPLOMA AWARDED TO


Murigeppa Adiveppa Chetty

WHO SUCCESSFULLY PASSED THE FINAL EXAMINATION IN

Drawing & Painting

HELD IN THE YEAR 1930 [illegible]

Secretary to Government
Educational Department.



Gladstone Solomon Scholarship Fund

Exhibition

Sir J. J. School of Art

Bombay

1936

Honourable Mention

M. A. Chetty.

for Oil Painting.

THE SHOLAPUR DISTRICT

ART AND HOME HANDICRAFT EXHIBITION

SHOLAPUR

January 1939

PAINTING — NEEDLE WORK — MODELLING — CARVING — CLOTH PRINTING — EMBROIDERY — FLOWER MAKING

CERTIFICATE of MERIT

with

Gold medal

for

painting

EXHIBITED BY

Mr M. A. Chetti

Chintalwar — SECRETARY

M. Shiva — CHAIRMAN



" ಸಿರಿಗನ್ನಡಂ ಗೆಲ್ಗೆ "

ಅಖಿಲ ಭಾರತ ೩೨ನೇ ಕನ್ನಡ ಸಾಹಿತ್ಯ ಸಮ್ಮೇಳನ

ಕಾರವಾರ, ೧೯೪೯

ಪ್ರಶಸ್ತಿ ಪತ್ರಿಕೆ

ಶ್ರೀ|| ಎಮ್. ಎ. ಚೆಟ್ಟಿ. ಗದಗ

ಇವರಿಗೆ


ಕಲಾ ಮತ್ತು ಕುಶಲ ಕೈಗಾರಿಕೆ ಪ್ರದರ್ಶನದ

ನೀರ ರಂಗ ಚಿತ್ರ ವಿಭಾಗದಲ್ಲಿ ಎರಡನೇ ಸ್ಥಾನ ಪಡೆದ ಬಗ್ಗೆ

ಈ ಪ್ರಶಸ್ತಿ ಪತ್ರಿಕೆಯನ್ನು ಅಭಿನಂದನೆಗಳೊಡನೆ ಕೊಡಲಾಗಿದೆ.

ಸಂಘಟಕರು,	ಅಧ್ಯಕ್ಷ,	ಅಧ್ಯಕ್ಷ,
ಕಲಾ ಮತ್ತು ಕುಶಲ ಕೈಗಾರಿಕೆ ಪ್ರದರ್ಶನ	ಸಾಹಿತ್ಯ ಸಮ್ಮೇಳನ	ಸ್ವಾಗತ ಸಮಿತಿ

ಕಾರವಾರ, ದಿನಾಂಕ —೫—೧೯೪೯.





ಮೈಸೂರು ರಾಜ್ಯದ ಲಲಿತಕಲಾ ಅಕಾಡಮಿ

ಬೆಂಗಳೂರು

ಪ್ರಶಸ್ತಿಪತ್ರ

ಶ್ರೀ ~~[illegible]~~ ಎಂ. ಎ. ಚೆಟ್ಟಿ, ಜೆ. ಡಿ. ಆರ್ಟ್ (ಮುಂಬಯಿ)
ಶ್ರೇಷ್ಠ ಕಲಾವಿದ. ಅವರು

ದೀರ್ಘಕಾಲ ಶ್ರಮಿಸಿ ಚಿತ್ರಕಲಾ ಕ್ಷೇತ್ರದ

ಲಲಿತಕಲೆಯಲ್ಲಿ ದೊರಕಿಸಿಕೊಂಡಿರುವ ಪ್ರಾವೀಣ್ಯದ ಗೌರವಾರ್ಥವಾಗಿಯೂ

ಕನ್ನಡ ನಾಡಿನ ಲಲಿತಕಲೆಗಳ ಪುರೋಭಿವೃದ್ಧಿಗಾಗಿ ಸಲ್ಲಿಸಿರುವ ಸೇವೆಗಾಗಿಯೂ

೨.೧೧.೧೯೬೬ ಸಾಲಿನಲ್ಲಿ ಅಕಾಡಮಿ ಒಪ್ಪಿಸುತ್ತಿರುವ ಪ್ರಶಸ್ತಿಪತ್ರ.

ಅಧ್ಯಕ್ಷರು
ಪ್ರಶಸ್ತಿ ಪ್ರದಾನ ಸಮಾರಂಭ

ಅಧ್ಯಕ್ಷರು
ಮೈ. ರಾ. ನಾ. ಸಂ. ಅಕಾಡಮಿ



MYSORE DASARA
INDUSTRIAL &
CULTURAL
EXHIBITION, MYSORE

1975

Second Prize
has been awarded to

M. A. Chetti

Gadag
for

Portrait in oil colour

General Secretary

President



ಬದಾಮಿ ತಾಲೂಕ ರಾಷ್ಟ್ರೀಯ ವಿಸ್ತರಣ ಯೋಜನೆಯ ಅಂಗವಾಗಿ ಏರ್ಪಡಿಸಿದ

ಒಕ್ಕಲುತನ ಕೈಗಾರಿಕೆ ಹಾಗೂ ಕಲಾಪ್ರದರ್ಶನ

ಶಿವಯೋಗಮಂದಿರ

೧೯೬೦

ಪ್ರಶಸ್ತಿ ಪತ್ರಿಕೆ

ಶ್ರೀ ಎಮ್. ವಿ. ಚಿಟ್ಟಿ ಜಿ. ಡಿ. ಆರ್ಟ ಬಾಂಬೆ, ಗದಗ

ಸಾ. ಗದಗ ತಾ. ಗದಗ

ಇವರು, ತಮ್ಮ ~~ಒಕ್ಕಲುತನ/ಕೈಗಾರಿಕೆ~~/ಕಲಾಕೃತಿ/ಉತ್ಪಾದನೆಯನ್ನು ಉತ್ತಮ ತರಗತಿಯಲ್ಲಿ ತಯಾರಿಸಿದ್ದಕ್ಕಾಗಿ

೧ ನೆಯ ಬಹುಮಾನವೆಂದು ಕೊಡಲಾಗಿದೆ.

ಹಾನಗಲ್ಲ ಶಿ. ಗಯ್ಯ

ಅಧ್ಯಕ್ಷರು

ಶಿವಯೋಗಮಂದಿರ

೨೬-೨-೧೯೬೦

ಕ ರ್ನಾ ಟ ಕ ವಿ ಶ್ವ ವಿ ದ್ಯಾ ಲ ಯ

ಧಾ ರ ವಾ ಡ

ಏಳನೆಯ

ಅಖಿಲಕರ್ನಾಟಕ ಜಾನಪದ ಸಮ್ಮೇಲನ

ಪ್ರ ಶ ಸ್ತಿ ಪ ತ್ರ

ಶ್ರೀ / [redacted] ....ಕ.ಲಾ.ವಿಜ್ಞಾ.ಶಾ..ಆ..(ಶ್ರೀ)....ಮು.ಎ.ರಿ.ಗೆ.ಕೃಷ್ಣ....ಒ.ತ.ಷ್ಟಿ..ಅವರು

೧೯೮೦ ಜನೆವರಿ ೨೦, ೨೧ ರಂದು ಗದಗಿನ ಶ್ರೀ ತೋಂಟದಾರ್ಯ ಜಗದ್ಗುರುಗಳ ಸನ್ನಿಧಿಯಲ್ಲಿ, ಜಗದ್ಗುರು ತೋಂಟದಾರ್ಯ ಕಾಲೇಜದ ಆಶ್ರಯದಲ್ಲಿ ಜರುಗಿದ ಏಳನೆಯ ಅಖಿಲಕರ್ನಾಟಕ ಜಾನಪದ ಸಮ್ಮೇಲನದ ರಂಗದರ್ಶನದಲ್ಲಿ ಭಾಗವಹಿಸಿ ತಮ್ಮ ಕಲಾಪ್ರೌಢಿಮೆಯನ್ನು ಪ್ರದರ್ಶಿಸಿದುದಕ್ಕಾಗಿ ಈ ಪ್ರಶಸ್ತಿಪತ್ರವನ್ನು ಕೊಡಲಾಗಿದೆ.

ಪ್ರೊ. ಎಸ್. ಎಸ್. ಹಿರೇಮಠ
ಸಮ್ಮೇಲನದ ನಿರ್ದೇಶಕರು

ಎಚ್. ಎಲ್. ನಾಗೇಗೌಡ
ಸಮ್ಮೇಲನಾಧ್ಯಕ್ಷರು

೨೦ ನೇ ಮಹಾ ಅಧಿವೇಶನ

ಅಖಿಲಭಾರತ ವೀರಶೈವ ಮಹಾಸಭಾ ಮೈಸೂರು-೧

೨೪ - ೪ - ೧೯೮೩

ಪ್ರಶಸ್ತಿ ಪತ್ರ

ಅಖಿಲಭಾರತ ವೀರಶೈವ ಮಹಾಸಭಾ ೨೦ ನೇ ಮಹಾ ಅಧಿವೇಶನದ
ಚಿತ್ರ–ಶಿಲ್ಪ ಸಾಹಿತ್ಯ ಮತ್ತು ಕರಕುಶಲ ವಿಭಾಗದಲ್ಲಿ

ಶ್ರೀ/~~ಶ್ರೀಮತಿ~~ ಎಂ. ಎ. ಚಿಟ್ಟಿ. ಗದಗ.

ಅವರು ತಮ್ಮ ಚಿತ್ರ ಕಲಾ ಕೃತಿ ಪ್ರದರ್ಶನವಾಗಿದ್ದು ಸಾರ್ವಜನಿಕರ
ಮನ್ನಣೆಗೆ ಪಾತ್ರವಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

ಪ್ರಧಾನ ಕಾರ್ಯದರ್ಶಿಗಳು

ಅಧ್ಯಕ್ಷರು ([redacted])

ಕರ್ನಾಟಕ ಲಲಿತ ಕಲಾ ಅಕಾಡೆಮಿ.

ಬೆಂಗಳೂರು.

ಅಕಾಡೆಮಿಯು ದಿನಾಂಕ ೭-೧೧-೧೯೮೩ ರಿಂದ ೧೦-೧೧-೧೯೮೩ ರ ವರೆಗೆ ಬದಾಮಿ ಗುಹೆ ಬಳಿ

ಏರ್ಪಡಿಸಿದ್ದ ಕಲಾ ವಿದ್ಯಾರ್ಥಿಗಳ ಕಲಾ ಶಿಬಿರದಲ್ಲಿ

ಶ್ರೀ ಎಮ್. ಎ. ಬೆಟ್ಟಿ ಗದಗ ಇವರು

ಮಾರ್ಗದರ್ಶಕರಾಗಿ/~~ಅಭ್ಯರ್ಥಿಯಾಗಿ~~ ಭಾಗವಹಿಸಿದ್ದರು.

ಅಧ್ಯಕ್ಷರು. ರಿಜಿಸ್ಟ್ರಾರ್. ಮುಖ್ಯ ಅತಿಥಿಗಳು.

ತಾ. ೧೦-೧೧-೧೯೮೩. ಸ್ಥಳ : ಬದಾಮಿ.

ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಜನ್ಮಶತಾಬ್ಧ

ರಾಜ್ಯಮಟ್ಟದ ಚಿತ್ರಕಲಾ ಪ್ರದರ್ಶನ

ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು
ಇವರ ಸಹಯೋಗದೊಂದಿಗೆ

1990 ಜನವರಿ 11, 12, 13 ಮತ್ತು 14

ಸ್ಥಳ : ಪಿ.ವಿ.ಎಸ್. ಕಲಾಕುಂಜ, ಮಂಗಳೂರು

ಪ್ರಶಸ್ತಿ ಪತ್ರ

ಶ್ರೀ/ಶ್ರೀಮತಿ ಎಮ್. ಎ. ಶೆಟ್ಟಿ ಯವರು

ಚಿತ್ರಕಲಾ ಪ್ರದರ್ಶನದಲ್ಲಿ ತಮ್ಮ ಕಲಾಕೃತಿ ಪ್ರದರ್ಶಿಸಿರುತ್ತಾರೆ.

ಡಿ. ವೀರೇಂದ್ರ ಹೆಗ್ಗಡೆಯವರು

ಕರ್ನಾಟಕ ಸರಕಾರ

ಕರ್ನಾಟಕ ಅರಣ್ಯ ಇಲಾಖೆ

1992-93

ಪ್ರಶಸ್ತಿ ಪತ್ರಿಕೆ

~~ಕುಮಾರ/ಕುಮಾರಿ~~ ಶ್ರೀ ಎಂ. ಎ. ಚೆಟ್ಟಿ .


ಇವರು ಗದಗ ಅರಣ್ಯ ವಿಭಾಗದಲ್ಲಿ 38 ನೇ ವನ್ಯ ಪ್ರಾಣಿ ಸಪ್ತಾಹದ

ಅಂಗವಾಗಿ ಏರ್ಪಡಿಸಿದ ಚಿತ್ರಕಲಾ ಸ್ಪರ್ಧೆಯಲ್ಲಿ

ವಿಶೇಷ ನೇ ಸ್ಥಾನವನ್ನು ಪಡೆದಿರುತ್ತಾರೆ.

ವಿ. ಪಿ. ಹಿರೇಮಠ
ಭಾ.ಅ.ಸೇ.
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಗದಗ ವಿಭಾಗ, ಗದಗ.

ಗದಗ
ದಿನಾಂಕ 1-10-1992



ಕರ್ನಾಟಕ ಚಿತ್ರಕಲಾಚಾರ್ಯರಾದ

ಶ್ರೀ ಎಂ. ಎ. ಚೆಟ್ಟಿ (ಜಿ. ಡಿ. ಆರ್ಟ್ಸ್) ಇವರಿಗೆ

ಮೈಸೂರು ಪ್ರದೇಶ ಚಿತ್ರಕಲಾ ಪರಿಷತ್ತು

ಕೆನರಾ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ. ಪಿ. ಜೆ. ಪ್ರಭುರವರ ಅಧ್ಯಕ್ಷತೆಯಲ್ಲಿ

ರಾಜ್ಯದ ರೆವಿನ್ಯೂ ಸಚಿವರಾದ ಶ್ರೀ ಎನ್. ಹುಚ್ಚಮಾಸ್ತಿಗೌಡರು ಪ್ರದಾನಮಾಡುವ

ಸನ್ಮಾನ ಪತ್ರ

30-3-1973ನೇ ಶುಕ್ರವಾರ

ಸನ್ಮಾನ್ಯ ಶ್ರೀ ಚೆಟ್ಟಿಯವರೇ,

ಕನ್ನಡನಾಡಿನ ರಾಜಧಾನಿಯಾದ ಬೆಂಗಳೂರು ನಗರದಲ್ಲಿ ಪ್ರಜಾ ಸರ್ಕಾರದ ಆಡಳಿತ ಕೇಂದ್ರ ಕಛೇರಿಯ ಈ ಭವ್ಯ ವಿಧಾನಸೌಧದ ಸಭಾಂಗಣದಲ್ಲಿ ತಮ್ಮನ್ನು ಗೌರವಿಸಲು ಏರ್ಪಟ್ಟ ಈ ಸಭೆಗೆ ತಾವು ದಯಮಾಡಿಸಿ, ಕಲಾವಿದರ, ಕಲಾಭಿಮಾನಿಗಳ ಪರಿಯಿಂದ ಸಮರ್ಪಿಸಲಾಗುತ್ತಿರುವ ಈ ಸನ್ಮಾನ ಪತ್ರವನ್ನು ಸ್ವೀಕರಿಸುತ್ತಿರುವುದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ.

ಈ ಸಂದರ್ಭದಲ್ಲಿ ತಮ್ಮ ಕಲಾಜೀವನಕ್ಕೆ ಸಂಬಂಧಿಸಿದಂತೆ ಕೆಲವು ಮುಖ್ಯ ಸಂಗತಿಗಳನ್ನು ಪ್ರಸ್ತಾಪಿಸುವುದು ನಮ್ಮ ಕರ್ತವ್ಯವಾಗಿದೆ.

ಕರ್ನಾಟಕದ ಹೆಸರಾದ ಯೋಗೀಶ್ವರರಲ್ಲಿ ಅಥಣೀ ಶಿವಯೋಗಿಗಳು ಪ್ರಮುಖರು. ಈ ಅಥಣೀ ಕ್ಷೇತ್ರದಲ್ಲಿ ಜನಿಸಿದ ತಾವು ತಮ್ಮ ಚಿಕ್ಕವಯಸ್ಸಿನಲ್ಲಿಯೇ ಅಭಿವ್ಯಕ್ತಗೊಳಿಸಿದ ಚಿತ್ರಕಲೆಯ ವೈವಿಧ್ಯತೆಯನ್ನು ಬೊಂಬಾಯಿ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್ ಹೆಸರಾಂತ ಕಲಾಶಾಲೆಯು ಹದಗೊಳಿಸಿತು. ವೀರಶೈವ ಜನ್ಮದಲ್ಲಿ ಜನಿಸಿದ ತಮಗೆ ಭಗವಂತನಲ್ಲಿಯೂ ಶಿವಶರಣರಲ್ಲಿಯೂ ಅಪಾರವಾದ ಭಕ್ತಿ ಶ್ರದ್ಧೆ ಮೈಗೂಡಿದ್ದಿತು. ತಜ್ಞ ಕಲಾವಿದರಾದನಂತರ ನಿಮ್ಮ ದೈವೀ ಸಂಪತ್ತಿನ ಶ್ರದ್ಧೆಯು ಶ್ರೀ ಕೃಷ್ಣಪರಮಾತ್ಮ ಪರಮ ಶಿಷ್ಯ ಅರ್ಜುನನಿಗೆ ಅನುಗ್ರಹಿಸಿದ ವಿಶ್ವರೂಪ ದರ್ಶನ ಹಾಗೂ ಅನೇಕಾನೇಕ ಶಿವಶರಣರ ಲೀಲೆಗಳನ್ನು ವರ್ಣಚಿತ್ರ ಕೃತಿಗಳ ಮೂಲಕ ಕನ್ನಡನಾಡಿಗೆ ಅನುಗ್ರಹಿಸುತ್ತ ಬಂದಿರುವಿರಿ. ಉತ್ತರ ಕರ್ನಾಟಕದ ಅನೇಕ ಗುರುಪೀಠಗಳು ನಿಮ್ಮ ಕಲೆಯ ಪ್ರಕಾಶನಕ್ಕೆ ಅವಕಾಶ ಮಾಡಿಕೊಟ್ಟರು. ಅಲ್ಲದೆ ಪೋಟ್ರೇಟ್ ಚಿತ್ರ ರಚನೆಗೆ ನೀವು ವಿಖ್ಯಾತರಾಗಿದ್ದೀರಿ. ಸ್ವತಂತ್ರವಾಗಿ ನಿಮ್ಮ ಕಲಾ ಸೇವೆಯನ್ನು ದೀರ್ಘಕಾಲ ಮುಂದುವರಿಸಿದಿರಿ. ಪ್ರಕೃತಿ ಚಿತ್ರರಚನೆಯಲ್ಲಿಯೂ ನೀವು ಪ್ರೌಢಿಮೆ ಪಡೆದುದಕ್ಕೆ ಬೊಂಬಾಯಿ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್ ಪ್ರಿನ್ಸಿಪಾಲ್ ಗ್ಲಾಡ್ಸ್‌ಟನ್ ಸಾಲೊಮನ್ ಅವರು ನಿಮ್ಮ ಪ್ರಕೃತಿ ಚಿತ್ರಕ್ಕೆ ವಿವಿಧ ರೀತಿಯಿಂದ ಮೆಚ್ಚುಗೆ ಸೂಚಿಸಿರುವುದೇ ನಿದರ್ಶನ. ಕಳೆದ ಇಪ್ಪತ್ತು ವರ್ಷಗಳಿಂದ ಗದುಗಿನ ವಿಜಯ ಆರ್ಟ್ಸ್ ಇನ್‌ಸ್ಟಿಟ್ಯೂಟಿನಲ್ಲಿ ಕಲಾಶಿಕ್ಷಕರು ಮತ್ತು ವೈಸ್ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸುತ್ತಿರುವುದು ಅಭಿಮಾನದ ವಿಷಯ. ಅಖಿಲ ಭಾರತದ ಅನೇಕ ಪ್ರದರ್ಶನಗಳಲ್ಲಿ ನಿಮ್ಮ ಚಿತ್ರಗಳು ಬಹುಮಾನ ಪಡೆದಿವೆ. ನೀವಿಂದು ಅರವತ್ತನೇ ವರ್ಷ ವಯಸ್ಸಿನ ಸಮೀಪದಲ್ಲಿದ್ದೀರಿ, ಅಲ್ಲದೇ ಮೈಸೂರಿನ ಶ್ರೀ ಚಾಮರಾಜೇಂದ್ರ ಕಲಾಶಾಲೆಗೆ ಶ್ರೇಷ್ಠ ಕಲಾ ಶಿಕ್ಷಕರಾಗಿ ನಿಮ್ಮ ಸುಪುತ್ರರೇ ನಿಯಾಮಕರಾಗಿರುವುದನ್ನು ಇಲ್ಲಿ ಪ್ರಸ್ತಾಪಿಸಲು ಸಂತೋಷ ಪಡುತ್ತೇವೆ. ಭಗವದನುಗ್ರಹದಿಂದ ನೀವು ದೀರ್ಘ ಆಯುರಾರೋಗ್ಯವನ್ನು ಹೊಂದಲೆಂದೂ, ನಿಮ್ಮ ಆಳವಾದ ಕಲಾಭ್ಯಾಸದ ಉಪಯೋಗವು ಇನ್ನೂ ಹೆಚ್ಚಿನ ವಿಶೇಷ ರೀತಿಯಿಂದ ಕನ್ನಡನಾಡಿಗೆ ಲಭಿಸಲೂ ದಯಾಮಯನು ಅನುಗ್ರಹಿಸಲಿ. ನಮ್ಮ ಈ ಭಕ್ತಿ ಕಾಣಿಕೆಯನ್ನು ನೀವು ಸ್ವೀಕರಿಸುವುದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ.

॥ ಶ್ರೀ ಗುರು ಬಸವಲಿಂಗಾಯ ನಮಃ ॥

ತೆಲಸಂಗ ಹಿರಿಯಮಠದಲ್ಲಿ ನಡೆಯುವ ದಸರಾ ಮಹೋತ್ಸವದ ಶುಭ ಸಂದರ್ಭದಲ್ಲಿ

ಶ್ರೀ ಷ. ಬ್ರ. ಬಸವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು

ತೆಲಸಂಗ ಅವರ ಅಪ್ಪಣೆಯ ಮೇರೆಗೆ

ಶ್ರೀ ಷ. ಬ್ರ. ಗುಪ್ತೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರು

ಹಿರಿಯಮಠ ಕನ್ನೂರ ಅವರ ಅಧ್ಯಕ್ಷತೆಯಲ್ಲಿ

ಚಿತ್ರಕಲಾಕೋವಿದರಾದ, ಚಿನ್ನದ ಪದಕ ವಿಜೇತ

ಕಲಾಕಾರ **ಶ್ರೀ ಮುರುಗೆಪ್ಪನವರು ಚೆಟ್ಟಿ,** ಗದಗ ಅವರಿಗೆ ಸಮರ್ಪಿಸಿದ

ಸನ್ಮಾನ ಪತ್ರ

ಶ್ರೀ ಶಿವಯೋಗಿಯ ಕರುಣದ ಕಂದರೇ,

ಶ್ರೀ ಮುರುಘೇಂದ್ರ ಶಿವಯೋಗಿಗಳವರ ಪಾದಸ್ಪರ್ಶದಿಂದ ಅಥಣಿ ಪವಿತ್ರ ಕ್ಷೇತ್ರವಾಗಿದೆ. ಶಾಂತಿದಾಯಕ ಧಾಮವಾಗಿದೆ. ಶಿವಯೋಗಿಗಳಡಿಗೆ ಭಕ್ತಿಧನ ಸಮರ್ಪಿಸಿ ಮುಕ್ತಿಯ ಮಾರ್ಗ ಕಂಡವರನೇಕ. ಅಂಥವ ಭಕ್ತರಲ್ಲಿ ಚೆಟ್ಟಿ ಮನೆತನವೂ ಅಗ್ರಗಣ್ಯವಾಗಿದೆ. ಮಾಮಲೇದಾರರಾಗಿದ್ದ ಲಿಂ. ಬಸೆಟ್ಟೆಪ್ಪನವರಿಂದಂತೂ ಚೆಟ್ಟಿ ಮನೆತನಕ್ಕೆ ಜಂಗಮ ಭಕ್ತಿಯ ಮಹಾಪೂರವೇ ಬಂದಿತೆನ್ನಬಹುದು. ಈ ಮನೆತನದ ಶರಣ ದಂಪತಿಗಳಾದ ಶ್ರೀ ಅಡಿವೆಪ್ಪಾ ಹಾಗೂ ಶ್ರೀಮತಿ ಶಿವಗಂಗಮ್ಮನವರ ಪುಣ್ಯಗರ್ಭದಲ್ಲಿ ೧೯೦೮ರಲ್ಲಿ ಜನಿಸಿದವರು ತಾವಾಗಿರುವಿರಿ. ಶ್ರೀ ಶಿವಯೋಗಿಗಳ ಆಶೀರ್ವಾದದಿಂದ ಹುಟ್ಟಿದ ತಮಗೆ ಮುರುಘೇಶ ಎಂದೇ ನಾಮಕರಣ ಮಾಡಿದರು. ಉಜ್ವಲ ಭವಿಷ್ಯವಿದೆ ಎಂದು ಶ್ರೀ ಶಿವಯೋಗಿಗಳಿಂದ ಕೃಪೆ ಪಡೆದವರು ತಾವಾಗಿರುವಿರಿ. ಶ್ರೀ ಶಿವಯೋಗೀಶನ ಕರುಣದ ಕಂದರು ತಾವಾಗಿರುವಿರಿ.

ಚಿತ್ರಕಲಾ ಚತುರರೇ,

ಸೃಷ್ಟಿಕರ್ತನ ಸೃಷ್ಟಿಯಲ್ಲಿ ಕಣ್ಮರೆಯಾಗಿ ಹೋದವರು ಮರಳಿ ಬಂದಿಲ್ಲ, ಬರುವದಿಲ್ಲ, ಬಾರರು. ಆದರೆ ಕಲಾಕೋವಿದರಾದ ತಾವು ಮಾತ್ರ ಶತ ಶತಮಾನಗಳ ಹಿಂದಿನ ಮಹಾವಿಭೂತಿಗಳನ್ನು ಲೋಕದ ಕಣ್ಮುಂದೆ ತಂದು ನಿಲ್ಲಿಸಿರುವಿರಿ. ಹುಟ್ಟು ಹುಟ್ಟುವಾಗಲೇ ಕಲೆಯನ್ನು ಕಟ್ಟಿಕೊಂಡೇ ಬಂದವರು ತಾವಾಗಿರುವಿರಿ. ತಾವು ಬಾಲ್ಯದಲ್ಲಿ ತೋರಿದ ಚಿತ್ರಕಲಾ ನೈಪುಣ್ಯಕ್ಕೆ ಮೆಚ್ಚಿಯೇ ಮುಂಬಯಿಯ ಜೆ. ಜೆ. ಸ್ಕೂಲ ಆಫ್ ಆರ್ಟವರು ತಮ್ಮನ್ನು ಬರಮಾಡಿಕೊಂಡರು. ತಮ್ಮ ಬುದ್ಧಿಮತ್ತೆ ಅಗಾಧವಾದುದು. ಚನ್ನಬಸವ ಪುರಾಣ, ಪ್ರಭುಲಿಂಗಲೀಲೆ ಮುಂತಾದ ಶ್ರಾವ್ಯ ಕಾವ್ಯಗಳಲ್ಲಿ ಕವಿ ಪುಂಗವರು ಚಿತ್ರಿಸಿದ ಶಬ್ದ ಚಿತ್ರಗಳನ್ನು ದೃಶ್ಯ ಭೂಮಿಕೆಯ ಮೇಲೆ ತಂದು ನಿಲ್ಲಿಸಿದ ನಿಮ್ಮ ಜಾಣತನಕ್ಕೆ ತಲೆದೂಗದವರಿಲ್ಲ. ಶಿವಯೋಗಿಗಳ, ಶರಣ ಶರಣೆಯರ ಭಾವಚಿತ್ರ ತೆಗೆವಲ್ಲಿ ಸಿದ್ಧಿಯನ್ನು ಪಡೆದಿದೆ ತಮ್ಮ ಹಸ್ತ. ಚಿತ್ರಕಲೆಯನ್ನು ತಮ್ಮ ರಕ್ತದ ಕಣ ಕಣಗಳಲ್ಲಿ ಅಳವಡಿಸಿಕೊಂಡಿರುವಿರಿ. ಈ ಕೆಲೆಂಡರ ಯುಗದಲ್ಲಿ ಜನಾಕರ್ಷಣೆಗಾಗಿಯಾಗಲಿ, ಹಣದಾಶೆಗಾಗಿಯಾಗಲಿ, ಮನಮೋಹಕ ಚಿತ್ರ ರಚಿಸಿದ್ದರೆ ನೀವು ಲಕ್ಷಾಧೀಶರಾಗಿ ಮೆರೆಯಬಹುದಿತ್ತು. ಹಣದ ಬೆನ್ನುಹತ್ತದೆ, ಕೀರ್ತಿಶನಿಯ ದಾಸರಾಗದೆ ನಿಮ್ಮ ಮನೆತನದ ಗೌರವಧನದ ನಿಜ ವಾರಸುದಾರರಾಗಿ ಚಿತ್ರಕಲೆಯಲ್ಲಿ ಮಡಿವಂತಿಕೆಯನ್ನು ಕಾಯ್ದುಕೊಂಡು ಬಂದವರು ತಾವಾಗಿರುವಿರಿ. ನಿಮ್ಮ ಚಿತ್ರಗಳೆಂಥವು ಎಂದರೆ ಕೈಮುಗಿದುಕೊಂಡು ಮುಟ್ಟಬೇಕಾದಂಥವುಗಳಾಗಿವೆ. ನಿಮ್ಮ ಚಿತ್ರಗಳನ್ನು ನೋಡಿದಾಗ ಎಂಥವರಿಗೂ ಭಕ್ತಿಮೂಡುವದು. ಚಿತ್ರಕಲಾ ಚತುರರಾಗಿ ಕನ್ನಡ ನಾಡಿನ ತುಂಬ ಮೆರೆಯುತ್ತಿರುವಿರಿ.

ಕಾಯಕ ಯೋಗಿಗಳೇ,

ನೀವಿರುವ ಶಿಸ್ತಿನಿಂದ ನಿಮ್ಮನ್ನು ನೋಡಿದಾಗಲೆಲ್ಲ ಕೆಳದಿಯ ಶಿವಪ್ಪನಾಯಕರ ನೆನಪು ಬರುವದು. ನಿತ್ಯ ಕಾಯಕ ನಿರತರಾದ ನೀವು ಕಾಯಕಯೋಗಿಗಳೇ ಆಗಿರುವಿರಿ.

ಶಿವಾಚಾರ ಸಂಪನ್ನರೇ,

ಜಂಗಮರೆಂದರೆ ಹಿರಿಹಿರಿ ಹಿಗ್ಗಿ ತಾಯ ಕಂಡ ಮಗುವಿನಂತೆ ನಲಿದಾಡುವವರು ತಾವಾಗಿರುವಿರಿ. ಶಿವಾರ್ಚನ, ಶಿವವ್ರತ, ಶಿವಾರಾಧನೆಗಳಲ್ಲಿ ನಿಮಗೆ ಎಲ್ಲಿಲ್ಲದ ಆನಂದ. ವ್ರತವೆಂಬುದು ಸುಜ್ಞಾನಿಯ ಮುತ್ತು, ಆಚಾರವೇ ಸ್ವರ್ಗ. ಮುಂತಾದ ಶರಣರ ಒಳ್ನುಡಿಗಳನ್ನು ಜೀವನಪಟದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡವರು ತಾವಾಗಿರುವಿರಿ. ನಿಮ್ಮ ಸಂಯಮ, ತತ್ವನಿಷ್ಠೆ, ಕರ್ತವ್ಯದಕ್ಷತೆ ಸಹೃದಯತೆ ಮುಂತಾದ ಲೋಕೋತ್ತರ ಗುಣಗಳು ಜನಮನವನ್ನು ಲೋಹಚುಂಬಕದಂತೆ ಆಕರ್ಷಣ ಮಾಡುತ್ತಿವೆ.

ಪುಣ್ಯದ ಪುತ್ಥಳಿಗಳೇ,

ಸದಾಚಾರ, ಸದ್ಭಕ್ತಿ, ಸದ್ವ್ರತಗಳಿಂದ ನಿಮ್ಮ ತನುಮನಧನಗಳು ಪುನೀತವಾಗಿವೆ. ಹಾಲು, ತುಪ್ಪ, ಸಕ್ಕರೆ, ಬೆಲ್ಲದಂತೆ ಇರುವವರು ಶರಣರು ಎಂಬ ಕಾಡಸಿದ್ಧೇಶ್ವರ ವಚನದಂತೆ ತಾವಿರುವಿರಿ. ನಾಡಿನಲ್ಲೆಲ್ಲ ಧವಳ ಕೀರ್ತಿಯಿಂದ ಬೆಳಗುವ ತಾವು ನಮ್ಮ ತಾಲೂಕಿನವರೇ, ನಮ್ಮವರೆ ಆಗಿರುವದು ನಮಗೆ ಹೆಮ್ಮೆಯ ಮಾತಾಗಿದೆ. ದೇವರು ತಮಗೆ ಸುಖ, ಶಾಂತಿ, ಸಂಪತ್ತು, ಆಯುರಾರೋಗ್ಯಗಳನ್ನಿತ್ತು ಕರುಣಿಸಲೆಂದು ತುಂಬಿದೆದೆಯಿಂದ ಹರಸುವೆವು.

ಸತ್ಯಂ ಶಿವಂ ಸುಂದರಂ !!

ತೆಲಸಂಗ, ಹಾಲಳ್ಳಿ, ಬನ್ನೂರದ ಸಕಲ ಸದ್ಭಕ್ತರು

ದಿನಾಂಕ ೮-೧೦-೧೯೮೧

ದಸರಾ – ತೆಲಸಂಗ

ಶ್ರೀ ಗೊಮಟೇಶ್ವರಾಯ ನಮಃ

ಸ್ವಸ್ತಿಶ್ರೀಮದ್ರಾಯ ರಾಜಗುರು ಭೂಮಂಡಲಾಚಾರ್ಯವರ್ಯಾದ್ಯನೇಕ ಬಿರುದಾವಳೀ
ವಿರಾಜಮಾನ ಶ್ರೀ ಮದ್ಬೆಳ್ಗೊಳ ಸಿದ್ಧ ಸಿಂಹಾಸನಾಧೀಶ್ವರ ಕರ್ಮಯೋಗಿ

ಶ್ರೀಮದಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರು

ವಾರ್ಷಿಕ ಪಂಚಕಲ್ಯಾಣ ಮಹೋತ್ಸವದ ಸಂದರ್ಭದಲ್ಲಿ

ಗದಗ ಗ್ರಾಮದ ಚಿತ್ರಕಲಾ ಕೋವಿದರಾದ

ಶ್ರೀ ಮುರಿಗಪ್ಪನವರು ಚೆಟ್ಟಿಯವರಿಗೆ

ಆ ಶೀ ರ್ವ ದಿ ಸಿ ದ

ಸ ನ್ಮಾ ನ ಪ ತ್ರ

ಶಿಲ್ಪಕಲಾ ಸಂಭೂತರೆ,

ಸುಪ್ರಸಿದ್ಧ ಪಾವನ ಭೂಮಿಯಲ್ಲಿ ಶಿವ ಶರಣರ ಚೆಟ್ಟಿ ಮನೆತನದಲ್ಲಿ ಶ್ರೀ ಅಡಿವೆಪ್ಪಾಚಾರ ಧರ್ಮಪತ್ನಿ ಶ್ರೀಮತಿ ಶಿವಗಂಗಮ್ಮನವರ ಸುಪುತ್ರರಾಗಿ ಜನಿಸಿ ಪರಮ ಪೂಜ್ಯ ಯೋಗಿಗಳ ಆಶೀರ್ವಾದದಿಂದ ವಿದ್ಯಾರ್ಜನೆಯನ್ನು ಮಾಡುತ್ತಾ ಚಿತ್ರಕಲಾನೈಪುಣ್ಯತೆಯನ್ನು ಗಳಿಸಿ ಪ್ರಸಿದ್ಧರಾಗಿದ್ದೀರಿ. ಅನೇಕರ ಭಾವಚಿತ್ರಗಳನ್ನು ತಮ್ಮ ಸಿದ್ಧ ಹಸ್ತದಿಂದ ಜೀವಕಳೆಯಂತೆ ಹಾವ ಭಾವ ವಿಲಾಸಮಯವಾಗಿ ರಚಿಸಿರುತ್ತೀರಿ. ಚನ್ನಬಸವ ಪುರಾಣ, ಪ್ರಭುಲಿಂಗಲೀಲೆ ಇತ್ಯಾದಿ ಕಾವ್ಯ ಚಿತ್ರಣಗಳನ್ನು ದೃಶ್ಯರೂಪಕ್ಕೆ ಪರಿವರ್ತಿಸಿರುವುದು ತಮ್ಮ ಕುಶಲತೆಗೆ ದೀಪಿಕೆಯಾಗಿದೆ.

ಶಿಲ್ಪಕಲಾ ನಿಪುಣರೇ,

'ಕಾಯಕವೇ ಕೈಲಾಸ' ಎಂಬ ತತ್ವಕ್ಕೆ ಅನುಸಾರವಾಗಿ ತಮ್ಮ ಧನವಾದ ಚಿತ್ರಕಲಾ ಸಂಪತ್ತನ್ನು ವೃದ್ಧಿಪಡಿಸುವ ಕಾರ್ಯದಲ್ಲಿ ಅಹರ್ನಿಶಿ ದುಡಿದು ನಿಸ್ವಾರ್ಥ ಸೇವೆಯನ್ನು ನಾಡಿನ ಕಲಾರಂಗಕ್ಕೆ ಅರ್ಪಿಸುತ್ತಾ ಹಿರಿಮೆಯನ್ನು ಗಳಿಸಿರುತ್ತೀರಿ. ಶ್ರವಣಬೆಳಗೊಳದಲ್ಲಿ ಜರುಗಿದ ಭಗವಾನ್ ಶ್ರೀ ಬಾಹುಬಲಿಸ್ವಾಮಿ ಸಹಸ್ರಾಬ್ಧಿ ಮಹಾಮಸ್ತಕಾಭಿಷೇಕ ಮಹೋತ್ಸವದ ಸುಸಂದರ್ಭದಲ್ಲಿ ತಾವು ರಚಿಸಿದ ವರ್ಣಮಯ ಪೌರಾಣಿಕ, ಚಾರಿತ್ರಿಕ, ಧಾರ್ಮಿಕ ಚಿತ್ರಗಳು ಮನೋಹರವಾಗಿದ್ದು ಭವ್ಯ ಜನರ ಕಣ್ಮನಗಳನ್ನು ತಣಿಸುತ್ತಿವೆ. ಶ್ರೀ ಚಾಮುಂಡರಾಯರ ಜೀವನ ಚರಿತ್ರೆಗಳು ಭಕ್ತಿ, ಜ್ಞಾನ, ವೈರಾಗ್ಯಗಳ ದ್ಯೋತಕಗಳಾಗಿ ಸಾಕ್ಷಾತ್ತಾಗಿ ಪ್ರದರ್ಶಿಸುತ್ತಿದೆಯೋ ಎಂಬಂತೆ ಭಾಸವಾಗುತ್ತಿವೆ. ಪ್ರೇಕ್ಷಣೀಯವಾದ ಈ ಚಿತ್ರಗಳನ್ನು ನೋಡಿ ಪ್ರವಾಸಿಗರು ತಣಿದು ತೃಪ್ತರಾಗುತ್ತಿದ್ದಾರೆ.

ಧೀಮಂತರೇ, ಚಿತ್ರಕಲಾ ಪಂಡಿತರಾಗಿ ಆ ಭಾಗದಲ್ಲಿ ಅಪಾರ ಜ್ಞಾನ ಸಂಪತ್ತನ್ನು ಹೊಂದಿ, ವಿನಯಭೂಷಿತರಾಗಿ ಕಲಾನಿರತರಾಗಿ ಸೇವೆ ಸಲ್ಲಿಸುತ್ತಿರುವುದು ಮಹಾಸನ್ನಿಧಿಯ ಅಭಿಮಾನಕ್ಕೆ ಪಾತ್ರರಾಗಿರುತ್ತೀರಿ. ತಮಗೆ '**ಚಿತ್ರಕಲಾ ಪ್ರವೀಣ**' ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಲು ಆನಂದವಾಗುತ್ತಿದೆ. ತಮ್ಮ ಪವಿತ್ರಸೇವೆಯು ಆಚಂದ್ರಾರ್ಕವಾಗಿ, ಆಕಲ್ಪಾಂತರ ಸ್ಥಾಯಿಯಾಗಿ ನಿತ್ಯ ಚಿರಂತನವಾಗಿ ವರ್ಧಿಸಲಿ ಎಂದು ಹರಸುತ್ತೇವೆ.

ಇತೀ ಭದ್ರಂ ಭೂಯಾತ್ ವರ್ಧತಾಂ ಜಿನ ಶಾಸನಂ

ಮಹಾವೀರ ಜಯಂತಿ
ದಿನಾಂಕ 13-4-84
ಶ್ರವಣಬೆಳಗೊಳ.

ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರು.
ಅಧ್ಯಕ್ಷರು,
ಎಸ್. ಡಿ. ಜೆ. ಎಂ. ಐ. ಮೆನೇಜಿಂಗ್ ಕಮಿಟಿ

ಶ್ರೀ ಪದ್ಮಾಂಬ ಪ್ರಿಂಟರ್ಸ್, ಹಾಸನ

ಶ್ರೀ ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳವರ

ಏಳನೆಯ ವರ್ಷದ

ಲಿಂಗೈಕ್ಯ ದಿನಾಚರಣೆಯ ಸಮಯದಲ್ಲಿ

ಅರಭಾವಿ ಪುಣ್ಯಾರಣ್ಯದ ಮಹಾತಪಸ್ವಿಗಳಾದ

ಶ್ರೀ ನಿ. ಪ್ರ. ಸ್ವ. ಮಹಾಂತ ಶಿವಯೋಗಿಗಳು

ಅವರ ದಿವ್ಯ ಸನ್ನಿಧಾನದಲ್ಲಿ

ಶ್ರೀ ನಿ. ಪ್ರ. ಸ್ವ. ಮಹಾಂತ ಸ್ವಾಮಿಗಳು, ಶ್ರೀ ಮುರುಘಾಮಠ, ಧಾರವಾಡ

ಅವರ ಅಪ್ಪಣೆಯ ಮೇರೆಗೆ

ಶ್ರೀ ಮುರಿಗೆಪ್ಪನವರು ಚಟ್ಟಿ

ಅವರಿಗೆ ಅರ್ಪಿಸಿದ

ಸನ್ಮಾನಪತ್ರ

ಸತ್ಪುತ್ರರೇ,

ಶ್ರೀಮಠಣೆ ಶಿವಯೋಗಿಗಳ ಸನ್ನಿಧಾನದಿಂದ ಭೂಕೈಲಾಸವೆನಿಸಿದೆ. ಅಲ್ಲಿ ಅನೇಕ ಶರಣ-ಶರಣೆಯರು ಜನ್ಮತಳೆದಿರುವರು. ಅಂತಹ ಶರಣ ಸಂಪ್ರದಾಯಕ್ಕೆ ಚಟ್ಟಿ ಮನೆತನ ಸುಪ್ರಸಿದ್ಧವಾದುದು. ಶರಣಜೀವನದಿಂದ ಪವಿತ್ರವಾದ ಚಟ್ಟಿ ದಂಪತಿಗಳ ಉದರದಲ್ಲಿ ಶಿವಯೋಗಿಗಳ ಪರಮಾಶೀರ್ವಾದದಿಂದ ತಾವು ಜನಿಸಿದುದೊಂದು ಭಾಗ್ಯವಿಶೇಷ ; ನಾಡಿನ ಪುಣ್ಯವೆಂದೇ ನಮ್ಮೆಲ್ಲರ ಭಾವನೆ.

ಶ್ರೇಷ್ಠ ಕಲಾವಿದರೇ,

ಕೋಟಿ ವರುಷಗಳ ಪುಣ್ಯದ ಫಲವಾಗಿ ಕಲಾವಿದನ ಜನನವಾಗುತ್ತದೆಯಂತೆ. ಆಜನ್ಮ ಕಲಾವಿದರಾದ ತಾವು ಬಾಲ್ಯದಲ್ಲಿಯೇ ಚಿತ್ರ-ಕಲೆಯ ಬಗೆಗೆ ವಿಶೇಷ ಆಸ್ಥೆಯನ್ನು ತೋರಿ ಮುಂಬಯಿಯ ಜೆ.ಜೆ. ಸ್ಕೂಲ ಆಫ್ ಆರ್ಟ ಸೇರಿದಿರಿ. ಅಲ್ಲಿ ಅಪೂರ್ವವಾದ ಯಶವನ್ನು ಪಡೆದು ಚಿತ್ರಕಲಾಕ್ಷೇತ್ರದಲ್ಲಿ ವಿಕ್ರಮವನ್ನು ಪ್ರತಿಷ್ಠಾಪಿಸಿರುವಿರಿ. ಅಪೂರ್ವವಾಗಿ ಪಡೆದ ಈ ಕಲಾಶಕ್ತಿಯನ್ನು ತಾವು ಅನೇಕ ಶಿವಶರಣರ ಜೀವನಚಿತ್ರಗಳನ್ನು ರೇಖಿಸುವುದಕ್ಕಾಗಿ ವಿನಿಯೋಗಿಸಿರುವುದೊಂದು ನಾಡಿನ ಸುದೈವ. ಭಾಕ್ತಿಕ ಜೀವಿಗಳಾದ ತಮ್ಮಂತಹರ ಕೈಯಲ್ಲಿ ಶರಣರ ಭಾವಚಿತ್ರಗಳಿಗೆ ವಿಶೇಷ ಕಳೆ ಪ್ರಾಪ್ತವಾಗಿದೆ. ಆ ದಿಸೆಯಲ್ಲಿ ತಮ್ಮದು ಸಿದ್ಧಹಸ್ತವೆಂದು ಧೈರ್ಯವಾಗಿ ಹೇಳಬಯಸುತ್ತೇವೆ. ಶಿವನಂತದೀಯಶರರವ್ರಜದ ಭಾವಚಿತ್ರಣಕ್ಕಾಗಿ ತಮ್ಮ ಕಲೆ ಮೀಸಲಾಗಿದೆ. ತಾವು ತೆಗೆದ ಸಾವಿರಾರು ಚಿತ್ರಗಳು ಲೋಕಪ್ರಿಯವಾಗಿವೆ.

ಶೀಲಸಂಪನ್ನರೇ,

ಶರಣಸಂಪ್ರದಾಯಕ್ಕೆ ವಿಶಿಷ್ಟವಾದ ಆಚಾರ-ವಿಚಾರಗಳಿಂದ ನಿಮ್ಮ ಜೀವನ ಪವಿತ್ರತಮವಾಗಿದೆ. ತಮ್ಮ ನಡೆ ಚೆನ್ನ; ನುಡಿ ಚೆನ್ನ. ಮೃದುವಚನವೇ ಸದಾಶಿವನ ಒಲುಮೆಯೆಂಬುದಕ್ಕೆ ವ್ಯಾಖ್ಯಾನವಾಗಿದೆ ನಿಮ್ಮ ಜೀವನ. ಶೀಲ ಚೊಕ್ಕ ಚಿನ್ನವಾಗಿದೆ. ಗುರುಲಿಂಗಜಂಗಮದಲ್ಲಿ ತಮ್ಮ ನಿಷ್ಠೆ ಅಪೂರ್ವವಾಗಿದೆ.

ಕಾಯಕನಿಷ್ಠರೇ,

ಕಾಯಕವೇ ಕೈಲಾಸವೆಂಬ ತತ್ವವನ್ನು ತಾವು ಜೀವನದಲ್ಲಿ ಅಳವಡಿಸಿಕೊಂಡಿರುವಿರಿ. ನಿರಪೇಕ್ಷ ಭಾವನೆಯಿಂದ ಜನ ಬದುಕಲೆಂದು ತಾವು ಚಿತ್ರಕಲಾ ವ್ಯವಸಾಯದಲ್ಲಿ ನಿರತರಾಗಿರುವಿರಿ. ಬಡತನದ ಬೇಗೆಯಲ್ಲಿ ಬೆಂದು ಬೇಗುದಿಗೊಂಡಿರುವಿರಿ. ಆದರೆ ತಮ್ಮ ಮನದ ಮೊನೆಯ ಕೊನೆಯಿಂದ ಹೊಮ್ಮಿದ ಚಿತ್ರಗಳು ಶಾಶ್ವತಕಲಾಕೃತಿಗಳಾಗಿವೆ ; ವರ್ಣಬ್ರಹ್ಮನ ಉಸಿರಾಗಿವೆ.

ಮಹಾಶರಣರೇ,

ಶ್ರೀ ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳ ಪರಮಕೃಪೆಗೆ ಪಾತ್ರರಾದ ತಾವು ಅವರ ಸೇವೆಗೆ ತನುಮನಗಳನ್ನು ಸವೆಸಿರುವಿರಿ. ಶಿವಯೋಗಿಗಳು ತಮಗೆ ಇತೋಪ್ಯತಿಶಯವಾದ ಆಯುರಾರೋಗ್ಯಭಾಗ್ಯವನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.


ಅನುಬಂಧ ೨

ಕಲಾವಿದ ಚಿಟ್ಟಿಯವರ ಕಲಾಕೃತಿಗಳಿರುವ ಪ್ರಮುಖ ಸ್ಥಳಗಳು

ಅ. ನಂ.	ನೆಲೆ	ಊರು	ತಾಲೂಕು	ಜಿಲ್ಲೆ
೧.	ಎಱ್ರಿತಾತನ ಜೀವ ಸಮಾಧಿ	ಚೆಳ್ಳಗುರ್ಕಿ	ಬಳ್ಳಾರಿ	ಬಳ್ಳಾರಿ
೨.	ಅನುಭವ ಮಂಟಪ	ಬಸವ ಕಲ್ಯಾಣ	ಬಸವ ಕಲ್ಯಾಣ	ಬೀದರ
೩.	ಸಜ್ಜಲಗುಡ್ಡ ಶರಣಮ್ಮನವರಮಠ	ಸಜ್ಜಲಗುಡ್ಡ	ಇಲಕಲ್	ಬಾಗಲಕೋಟ
೪.	ಶ್ರೀ ಬಸವರಾಜ ಎಂ. ಚಿಟ್ಟಿ	ಬಿಜಾಪುರ	ಬಿಜಾಪುರ	ಬಿಜಾಪುರ
೫.	ಶ್ರೀ ಸಿದ್ದೇಶ್ವರ ದೇವಸ್ಥಾನ	ಬಿಜಾಪುರ	ಬಿಜಾಪುರ	ಬಿಜಾಪುರ
೬.	ತಹಶೀಲ್ದಾರ ಕಚೇರಿ	ಅಥಣಿ	ಅಥಣಿ	ಬೆಳಗಾಂವ
೭.	ಶ್ರೀ ಮುರುಘೇಂದ್ರ ಶಿವಯೋಗಿಗಳ ಮಠ (ಗಚ್ಚಿನ ಮಠ)	ಅಥಣಿ	ಅಥಣಿ	ಬೆಳಗಾಂವ
೮.	ಗೋಕಾಕ ಅರ್ಬನ್ ಕೋ-ಆಪ್. ಬ್ಯಾಂಕ	ಗೋಕಾಕ	ಗೋಕಾಕ	ಬೆಳಗಾಂವ
೯.	ಶ್ರೀ ನಿಜಲಿಂಗೇಶ್ವರ ಮಠ	ನಿಡಸೋಸಿ	ಹುಕ್ಕೇರಿ	ಬೆಳಗಾಂವ
೧೦.	ಶ್ರೀ ಶಿವಲಿಂಗೇಶ್ವರ ಮಠ	ಸಾವಳಗಿ	ಗೋಕಾಕ	ಬೆಳಗಾಂವ
೧೧.	ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆ ಕಾರ್ಯಾಲಯ	ಸಂಕೇಶ್ವರ	ಹುಕ್ಕೇರಿ	ಬೆಳಗಾಂವ
೧೨.	ಶಿರಸಂಗಿ ಲಿಂಗರಾಜ ಟ್ರಸ್ಟ್	ಬೆಳಗಾಂವ	ಬೆಳಗಾಂವ	ಬೆಳಗಾಂವ
೧೩.	ಆರ್. ಎಲ್. ಎಸ್. ವಿಜ್ಞಾನ ಕಾಲೇಜ	ಬೆಳಗಾಂವ	ಬೆಳಗಾಂವ	ಬೆಳಗಾಂವ
೧೪.	ಶ್ರೀ ಸೋಮಶೇಖರ ಕೋಟಿವಾಲ	ನಿಪ್ಪಾಣಿ	ನಿಪ್ಪಾಣಿ	ಬೆಳಗಾಂವ
೧೫.	ಶ್ರೀ ಮಲ್ಲಿಕಾರ್ಜುನಪ್ಪ ಹತ್ತಿ	ತೆಲಸಂಗ	ಅಥಣಿ	ಬೆಳಗಾಂವ
೧೬.	ಶ್ರೀ ಹಿರೇಮಠ ಅವರ ಮನೆ	ತೆಲಸಂಗ	ಅಥಣಿ	ಬೆಳಗಾಂವ
೧೭.	ಕರ್ನಾಟಕ ಸರಕಾರ ವಸ್ತು ಸಂಗ್ರಹಾಲಯ	ಕಿತ್ತೂರ	ಬೈಲಹೊಂಗಲ	ಬೆಳಗಾವಿ
೧೮.	ಶ್ರೀ ಫಲಹಾರೇಶ್ವರ ಸ್ವಾಮಿಗಳು ಮಠ	ಅವರಾದಿ	ರಾಮದುರ್ಗ	ಬೆಳಗಾಂವ
೧೯.	ಶ್ರೀ ಸರ್ಪಭೂಷಣ ಮಹಾಸ್ವಾಮಿಗಳ ಮಠ	ಬೆಂಗಳೂರು	ಬೆಂಗಳೂರು	ಬೆಂಗಳೂರು
೨೦.	ಕರ್ನಾಟಕ ಲಲಿತಕಲಾ ಅಕಾಡೆಮಿ	ಬೆಂಗಳೂರು	ಬೆಂಗಳೂರು	ಬೆಂಗಳೂರು
೨೧.	ಸಾರ್ವಜನಿಕ ಶಿಕ್ಷಣ ಇಲಾಖೆ	ಬೆಂಗಳೂರು	ಬೆಂಗಳೂರು	ಬೆಂಗಳೂರು
೨೨.	ಕರ್ನಾಟಕ ವಿಶ್ವವಿದ್ಯಾಲಯ	ಧಾರವಾಡ	ಧಾರವಾಡ	ಧಾರವಾಡ
೨೩.	ಶ್ರೀ ಮುರುಘಾಮಠ	ಧಾರವಾಡ	ಧಾರವಾಡ	ಧಾರವಾಡ
೨೪.	ಶ್ರೀ ಸಿ. ಎಸ್. ಬೆನ್ನೂರ	ಧಾರವಾಡ	ಧಾರವಾಡ	ಧಾರವಾಡ
೨೫.	ಶ್ರೀ ಆರ್. ಬಿ. ಮಿಣಜಗಿ	ಧಾರವಾಡ	ಧಾರವಾಡ	ಧಾರವಾಡ
೨೬.	ಶ್ರೀ ಮಲ್ಲಿಕಾರ್ಜುನಪ್ಪ ಮರಸಾಲಿ	ಧಾರವಾಡ	ಧಾರವಾಡ	ಧಾರವಾಡ
೨೭.	ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ	ಧಾರವಾಡ	ಧಾರವಾಡ	ಧಾರವಾಡ
೨೮.	ಶ್ರೀ ಮೂರುಸಾವಿರ ಮಠ	ಹುಬ್ಬಳ್ಳಿ	ಹುಬ್ಬಳ್ಳಿ	ಧಾರವಾಡ
೨೯.	ಶ್ರೀ ನಂದೀಶ್ವರ ಮಠ	ಅಣ್ಣಿಗೇರಿ	ನವಲಗುಂದ	ಧಾರವಾಡ
೩೦.	ಶ್ರೀ ವೀರಭದ್ರಪ್ಪ ಹುಬ್ಬಳ್ಳಿ	ಅಣ್ಣಿಗೇರಿ	ನವಲಗುಂದ	ಧಾರವಾಡ

೩೧.	ಶ್ರೀ ಎಸ್. ಎಸ್. ಹರ್ಲಾಪುರ	ಅಣ್ಣಿಗೇರಿ	ನವಲಗುಂದ	ಧಾರವಾಡ
೩೨.	ಶ್ರೀ ಈಶ್ವರಪ್ಪ ಬೆಂಡಿಗೇರಿ	ಅಣ್ಣಿಗೇರಿ	ನವಲಗುಂದ	ಧಾರವಾಡ
೩೩.	ಶ್ರೀ ತೋಂಟದಾರ್ಯ ಮಠ	ಅಣ್ಣಿಗೇರಿ	ನವಲಗುಂದ	ಧಾರವಾಡ
೩೪.	ಶ್ರೀ ಮುರಘರಾಜೇಂದ್ರ ಮಠ	ದಾವಣಗೇರಿ	ದಾವಣಗೇರಿ	ದಾವಣಗೇರಿ
೩೫.	ಶ್ರೀ ಎಂ. ಎ. ಚೆಟ್ಟಿಯವರ ಮನೆ	ಗದಗ	ಗದಗ	ಗದಗ
೩೬.	ಶ್ರೀ ರಾಜು ಗಂಗಾಧರಪ್ಪ ಮಾನ್ವಿ	ಗದಗ	ಗದಗ	ಗದಗ
೩೭.	ಶ್ರೀ ಜಗದ್ಗುರು ತೋಂಟದಾರ್ಯ ಮಠ	ಗದಗ	ಗದಗ	ಗದಗ
೩೮.	ಶ್ರೀ ರುದ್ರಯ್ಯ ಸ್ವಾಮಿ ಮಾಳಿಕೊಪ್ಪ ಮಠ	ಗದಗ	ಗದಗ	ಗದಗ
೩೯.	ಶ್ರೀ ಶಿವಪ್ಪ ಅಡಿವೆಪ್ಪ ತುಪ್ಪದ	ಗದಗ	ಗದಗ	ಗದಗ
೪೦.	ಅಕ್ಕನ ಬಳಗ	ಗದಗ	ಗದಗ	ಗದಗ
೪೧.	ಶ್ರೀ ಜಗದ್ಗುರು ತೋಂಟದಾರ್ಯ ಕಾಲೇಜ	ಗದಗ	ಗದಗ	ಗದಗ
೪೨.	ಶ್ರೀ ಎಸ್. ಜಿ. ಕೃಷ್ಣರಾವ	ಗದಗ	ಗದಗ	ಗದಗ
೪೩.	ಶ್ರೀ ಎಂ. ಪಿ. ಚಿಕ್ಕಮಠ	ಗದಗ	ಗದಗ	ಗದಗ
೪೪.	ಶ್ರೀ ಪಿ. ಸಿ. ಪಟ್ಟಣಶೆಟ್ಟಿ	ಗದಗ	ಗದಗ	ಗದಗ
೪೫.	ಡಾ. ಜಾಲಿಹಾಳ	ಗದಗ	ಗದಗ	ಗದಗ
೪೬.	ಪಂ. ಪಂಚಾಕ್ಷರ ಗವಾಯಿಗಳ ಪುಣ್ಯಾಶ್ರಮ	ಗದಗ	ಗದಗ	ಗದಗ
೪೭.	ಪ್ರೊ. ನಾಡಗೌಡ	ಗದಗ	ಗದಗ	ಗದಗ
೪೮.	ಶ್ರೀ ಎಂ. ಎ. ಗೋಖಲೆ	ಗದಗ	ಗದಗ	ಗದಗ
೪೯.	ಶ್ರೀ ಎಂ. ಎಂ. ಪಟ್ಟಣಶೆಟ್ಟಿ	ಗದಗ	ಗದಗ	ಗದಗ
೫೦.	ಡಾ. ಎಸ್. ಎಸ್. ಬಿರಾದಾರ	ಗದಗ	ಗದಗ	ಗದಗ
೫೧.	ಶ್ರೀ ಕಲ್ಲನಗೌಡ ಕುರಹಟ್ಟಿ	ಗದಗ	ಗದಗ	ಗದಗ
೫೨.	ಶ್ರೀ ನಗರೇಶ್ವರ ದೇವಸ್ಥಾನ	ಗದಗ	ಗದಗ	ಗದಗ
೫೩.	ಶ್ರೀ ಬುಳ್ಳಾ	ಗದಗ	ಗದಗ	ಗದಗ
೫೪.	ಡಾ. ಕಲ್ಲೋಳಗಿ	ಗದಗ	ಗದಗ	ಗದಗ
೫೫.	ಕೃತಪುರ ಜಿನ್ನಿಂಗ ಆ್ಯಂಡ ಪ್ರೆಸ್ಸಿಂಗ ಫ್ಯಾಕ್ಟರಿ	ಗದಗ	ಗದಗ	ಗದಗ
೫೬.	ಮಹಾಲಕ್ಷ್ಮೀ ಜಿನ್ನಿಂಗ ಆ್ಯಂಡ ಪ್ರೆಸ್ಸಿಂಗ ಫ್ಯಾ.	ಗದಗ	ಗದಗ	ಗದಗ
೫೭.	ಶ್ರೀಮತಿ ಮಹಾದೇವಿ ಕಿತ್ತೂರ	ಗದಗ	ಗದಗ	ಗದಗ
೫೮.	ವಿಜಯಕಲಾ ಮಂದಿರ	ಗದಗ	ಗದಗ	ಗದಗ
೫೯.	ಶ್ರೀ ಬಾಲಲಿಲಾ ಮಹಾಂತ ಶಿವಯೋಗಿ ಮಠ	ಮುಳಗುಂದ	ಗದಗ	ಗದಗ
೬೦.	ಶ್ರೀ ಅನ್ನದಾನ ಮಹಾಸ್ವಾಮಿಗಳ ಮಠ	ಮುಂಡರಗಿ	ಮುಂಡರಗಿ	ಗದಗ
೬೧.	ಶ್ರೀ ಮಹಾಲಿಂಗ ಯಾಳಗಿ	ಮುಂಡರಗಿ	ಮುಂಡರಗಿ	ಗದಗ
೬೨.	ಶ್ರೀ ವಿರಕ್ತಮಠ	ನರಗುಂದ	ನರಗುಂದ	ಗದಗ
೬೩.	ಶ್ರೀ ಜೈನ ಮಠ	ಶ್ರವಣಬೆಳಗೋಳ	ಚೆನ್ನರಾಯಪಟ್ಟಣ	ಹಾಸನ
೬೪.	ಶ್ರೀ ಚೆನ್ನಬಸವೇಶ್ವರ ದೇವಸ್ಥಾನ	ಉಳವಿ	ಜೋಯಿಡಾ	ಕಾರವಾರ
೬೫.	ಶ್ರೀ ಪಿ. ಆರ್. ತಿಪ್ಪೇಸ್ವಾಮಿ	ಮೈಸೂರು	ಮೈಸೂರು	ಮೈಸೂರು
೬೬.	ಶ್ರೀ ನಾರದಗಡ್ಡೆ ಮಠ	ರಾಯಚೂರ	ರಾಯಚೂರ	ರಾಯಚೂರ
೬೭.	ಶ್ರೀ ಯಡೆಯೂರ ಶಿದ್ದಲಿಂಗೇಶ್ವರಮಠ	ಎಡೆಯೂರ	ಕುಣಿಗಲ್	ತುಮಕೂರು
೬೮.	ಶ್ರೀ ವೀರೇಂದ್ರ ಹೆಗ್ಗಡೆ	ಧರ್ಮಸ್ಥಳ	ಬೆಳ್ತಂಗಡಿ	ಮಂಗಳೂರು

ಕಲಾವಿದ ಚೆಟ್ಟಿಯವರ ಕಲಾಕೃತಿಗಳಿರುವ ಪ್ರಮುಖ ಸ್ಥಳಗಳು



○ ಚೆಟ್ಟಿಯವರು ರಚಿಸಿಕೊಟ್ಟಿರುವ ಪ್ರಮುಖ ಚಿತ್ರಗಳ ಕೆಲವು ಸ್ಥಳಗಳು



ಅನುಬಂಧ ೩

ಗ್ರಂಥ ಋಣ

೧. **ಅಮೀನಸಾಹೇಬ ಕಮಡೋಳಿ** : ಡಾ. ಬಿ. ಕೆ. ಹಿರೇಮಠ
ಕರ್ನಾಟಕ ಕಲಲಿತಕಲಾ ಅಕಾಡೆಮಿ ಬೆಂಗಳೂರು

೨. **ಅಲ್ಲಮ ಪ್ರಭುದೇವರು** : ಯೋಗೀಶ ಯಡ್ರಾವಿ
ವೀರಶೈವ ಭಾರತಿ ಪುಸ್ತಕ ಸಂಪದ, ಹುಬ್ಬಳ್ಳಿ ೧೯೮೫

೩. **ಅಲ್ಲಮ ಪ್ರಭುದೇವರ ವಚನಸಂಪುಟ -೨** : ಸಂ. ಡಾ. ಬಿ. ವ್ಹಿ. ಮಲ್ಲಾಪುರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು. ೧೯೯೫

೪. **ಆಯ್ದಕ್ಕಿ ಮಾರಯ್ಯ** : ಬಿ. ಎಸ್. ಸ್ವಾಮಿ
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೩

೫. **ಆರ್. ಎಂ. ಹಡಪದ** : ಎಂ. ಎಚ್. ಕೃಷ್ಣಯ್ಯ
ಕರ್ನಾಟಕ ಕಲಲಿತಕಲಾ ಅಕಾಡೆಮಿ ಬೆಂಗಳೂರು. ೨೦೦೦

೬. **ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ ಒಂದು ಅಧ್ಯಯನ** : ಯಾದಪ್ಪ ಬ. ಪರದೇಶಿ
ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ
ಕನ್ನಡ ವಿ.ವಿ. ಹಂಪಿ. ೨೦೦೨

೭. **ಉತ್ತರ ಕರ್ನಾಟಕದ ಜನಪದ ಗೀತ ಮೇಳಗಳು : ಒಂದು ಸಾಂಸ್ಕೃತಿಕ ಅಧ್ಯಯನ** : ಡಾ. ವಿರೇಶ ಶೇ. ಬಡಿಗೇರ
ವಿಮೋಚನಾ ದೇವದಾಸಿ ಪುನರ್ವಸತಿ ಸಂಘ.
ಅಥಣಿ. ಜಿ. ಬೆಳಗಾವಿ. ೧೯೯೯

೮. **ಉಡುತಡಿಯ ಮಹಾದೇವಿಯಕ್ಕನವರ ಸಾಹಿತ್ಯ** : (ಸಂ.) ಟಿ.ಎಚ್.ಎಂ. ಸದಾಶಿವಯ್ಯನವರು
ಮಲ್ಲಾಬಾದಿ ಮಹಾಂತಪ್ಪ ಸಹೋದರರು
ಪಂಪಾ ಸಾಹಿತ್ಯ ಪ್ರಕಟನಾಲಯ. ದಾವಣಗೆರೆ. ೧೯೬೦

೯. **ಉರಿಲಿಂಗದೇವ** : ಎಮ್. ಎಸ್. ಇಂಚಲ
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೩

೧೦. **ಎಸ್. ಹನುಮಯ್ಯ** : ಕೆ. ವಿ. ಸುಬ್ರಮಣ್ಯ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೮೮

೧೧. **ಎಂ. ಎ. ಚೆಟ್ಟಿ** : ಪ್ರೊ. ಅನ್ನದಾನಿ ಹಿರೇಮಠ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೮೫

೧೨. **ಎಂ. ಟಿ. ಭೋಪಲೆ** : ಡಿ. ಎಸ್. ಅಕ್ಕಿ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೯೫

೧೩. **ಎಂ. ವಿ. ಮಿಣಜಗಿ** : ಗವೀಶ ಹಿರೇಮಠ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೮೩

೧೪. **ಒಡನಾಟ** : ಕಾವೆಂಶ್ರೀ
ಕಲಾಚೇತನ ಪ್ರಕಾಶನ. ಗದಗ. ೧೯೯೭

೧೫. **ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಪುರಾಣ** : ಪುಟ್ಟರಾಜ ಕವಿ ಗವಾಯಿಗಳು
ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ
ಮೂರುಸಾವಿರ ಮಠ. ಹುಬ್ಬಳ್ಳಿ. ೧೯೮೯

೧೬. **ಕದಿರೆ ರೇವಯ್ಯ** : ಡಾ. ಪುಟ್ಟರಾಜ ಗವಾಯಿಗಳು
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೨

೧೭. **ಕರ್ನಾಟಕದ ಜನಪದ ಚಿತ್ರಕಲೆ** : ಡಾ. ಎಸ್. ಸಿ. ಪಾಟೀಲ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ.
ಗದಗ. ೧೯೯೩

೧೮. **ಕರ್ನಾಟಕ ದೃಷ್ಟಿಕೋನ, ಹಿನ್ನೋಟ - ೧** : ಎಚ್. ಎ. ಅನಿಲಕುಮಾರ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೨೦೦೦

೧೯. **ಕರ್ನಾಟಕ ಭಿತ್ತಿಚಿತ್ರ ಪರಂಪರೆ** : ಅ. ಲ. ನರಸಿಂಹನ್
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೮೮

೨೦. **ಕರ್ನಾಟಕ ಸಂಸ್ಕೃತಿ ಸಮೀಕ್ಷೆ** : ಎಚ್. ತಿಪ್ಪೇರುದ್ರಸ್ವಾಮಿ
ಕೃಷ್ಣಮೂರ್ತಿ ಪುರಂ. ಮೈಸೂರು
(೧ನೇ ಮುದ್ರಣ ೧೯೬೮, ೨ ನೇ ಮುದ್ರಣ ೧೯೭೪)

೨೧. **ಕರ್ನಾಟಕದ ಭಿತ್ತಿಚಿತ್ರಗಳು : ಚಿತ್ರ ಸಂಪುಟ - ೧** : (ಸಂ.) ಎಸ್. ಎನ್. ಚಂದ್ರಶೇಖರ್
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೮೫

೨೨. **ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು** : ಕು. ಶಿ. ಹರಿದಾಸಭಟ್ಟ
ಪ್ರಾದೇಶಿಕ ಜಾಪದದ ರಂಗ ಕಲೆಗಳ ಕೇಂದ್ರ. ಉಡುಪಿ. ೧೯೮೮

೨೩. **ಕಲಾಕೋಶ** : ಪಿ. ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೯೪

೨೪. **ಕಲಾಗುರು ದಂಡಾವತಿಮಠ** : ಬಿ. ಕೆ. ಹಿರೇಮಠ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೮೩

೨೫. **ಕಲಾ ಚರಿತ್ರೆ** : ಅಶೋಕ ಅಕ್ಕಿ
ಎಂ. ಎಸ್. ಶಾಬಾದಿಮಠ. ಗದಗ. ೧೯೯೮ (೫ನೆ ಮುದ್ರಣ)

೨೬. **ಕಲಾ ತಪಸ್ವಿ ವೆಂಕಟಪ್ಪ** : ಪ್ರೊ. ಸಂ. ಕೃ. ರಾಮಚಂದ್ರರಾವ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಕರ್ನಾಟಕ ಸರಕಾರ. ೧೯೮೮

೨೭. **ಕಲಾ ಪ್ರಪಂಚ** : ಶಿವರಾಮ ಕಾರಂತ
ವ್ಯಾಸಂಗ ವಿಸ್ತರಣ ಪ್ರಕಟಣ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ. ೧೯೭೮

೨೮. **ಕಲಾ ಸಂವೇದನೆಯ ಒಳನೋಟಗಳು** : (ಸಂ.) ಕೆ. ವ್ಹಿ. ಸುಬ್ರಹ್ಮಣಿ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೯೭

೨೯. **ಕಲಾನುಭವ** : ವಿ. ಸೀತಾರಾಮಯ್ಯ
ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು. ೧೯೭೬

೩೦. **ಕಲಾವಿದ ಹೆಬ್ಬಾರರ ರೇಖಾಲಾವಣ್ಯ** : ವ್ಯಾಸರಾಯ ಬಲ್ಲಾಳ
ನವಕರ್ನಾಟಕ ಪಬ್ಲಿಕೇಶನ. ಬೆಂಗಳೂರು. ೧೯೯೯

೩೧. **ಕಲಾವಿದನ ನೆನಪುಗಳು** : ಪಿ. ಆರ್. ತಿಪ್ಪೇಸ್ವಾಮಿ
ಉದಯರವಿ ಪ್ರಿಂಟರ್ಸ್. ಮೈಸೂರು

೩೨. **ಕಲಾವಿದರು ನಡೆದು ಬಂದ ದಾರಿ** : ಗವೀಶ ಹಿರೇಮಠ
ಐಡಿಯಲ್ ಫಾಯಿನ್ ಆರ್ಟ್ಸ್ ಸೊಸಾಯಿಟಿ. ಗುಲಬರ್ಗಾ. ೧೯೮೩

೩೩. **ಕಲೆ ಅನುಭವ ಮತ್ತು ಅನುಭಾವ** : ಚಂದ್ರಕಾಂತ ಕುಸನೂರ
ಮಾಲಗತ್ತಿ ಪ್ರಿಂಟಿಂಗ ಮತ್ತು ಪಬ್ಲಿಶಿಂಗ ಹೌಸ, ಬೆಳಗಾಂವ. ೧೯೯೦

೩೪. **ಕಲೆ ಮತ್ತು ನಾನು** : ಎಂ. ಟಿ. ವಿ. ಆಚಾರ್ಯ
ಆಚಾರ್ಯ ಚಿತ್ರ ಕಲಾಭವನ. ಬೆಂಗಳೂರು, ೧೯೮೫

೩೫. **ಕಲೆ ಮತ್ತು ರಸಸ್ವಾದನೆ** : (ಸಂ.) ಎಂ. ಎಚ್. ಕೃಷ್ಣಯ್ಯ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು, ೧೯೮೯

೩೬. **ಕಲೆಗಳಲ್ಲಿ ಸಂಸ್ಕೃತಿ ಹಾಗೂ ಪರಂಪರೆ** : (ಸಂ.) ಆರ್. ಎ. ಶಾಂತರಾಜ
ಸ್ಪಂದನ ಚಿತ್ರಕಲಾವಿದರ ಯುವ ಬಳಗ, ಬೆಂಗಳೂರು, ೧೯೯೫

೩೭. **ಕವಿ ಷಡಕ್ಷರ ದೇವ** : ವಿರೂಪಾಕ್ಷ ಬಡಿಗೇರ
ವೀರಶೈವ ಭಾರತಿ ಪುಸ್ತಕ ಸಂಪದ, ಹುಬ್ಬಳ್ಳಿ, ೧೯೮೫

೩೮. **ಕಾರಿಕಾಲಮ್ಮೆ** : ಎಸ್. ವಿ. ಶಹಾಪುರಮಠ
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೭

೩೯. **ಗಣದಾಸಿ ವೀರಣ್ಣ** : ಸಿಂ. ಪಿ. ಲಿಂಗಣ್ಣ
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೫

೪೦. **ಗುಡ್ಡಾಪುರದ ದಾನಮ್ಮ** : ಸಿಂ. ಪಿ. ಲಿಂಗಣ್ಣ
ವೀರಶೈವ ಭಾರತಿ ಪುಸ್ತಕ ಸಂಪದ, ಹುಬ್ಬಳ್ಳಿ ೧೯೮೩

೪೧. **ಚಾಮರಸ ಕೃತ ಪ್ರಭುಲಿಂಗಲೀಲೆ** : (ಸಂ.) ಹು. ಫ. ಕಟ್ಟಿಮನಿ
ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ . ಧಾರವಾಡ . ೧೯೩೪

೪೨. **ಚಿತ್ರಕಲಾ ಚಿಂತನ** : ಶಂಕರ ಪಾಟೀಲ
ಪ್ರಗತಿ ಪ್ರಕಾಶನ. ದಾವಣಗೇರಿ. ೧೯೯೫

೪೩. **ಚಿತ್ರಕಲಾ ಪ್ರಪಂಚ** : (ಸಂ.) ಅ. ಲ. ನರಸಿಂಹನ್, ಎನ್. ಮರಿಶಾಮಾಚಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೯೩

೪೪. **ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು** : ಡಾ. ಎಸ್. ಸಿ. ಪಾಟೀಲ
ಸ್ಕೂಲ ಆಫ್ ಆರ್ಟ್. ಧಾರವಾಡ. ೧೯೭೬

೪೫. **ಚಿತ್ರ ಚಿತ್ತ** : ಜಿ. ಸು. ಕೃಷ್ಣ ಶೆಟ್ಟಿ
ಇಳಾ ಪ್ರಕಾಶನ. ಬೆಂಗಳೂರು. ೨೦೦೦

೪೬. **ಚಿತ್ರಾಕ್ಷಿ** : (ಸಂ.) ಡಾ. ಎಸ್. ಸಿ. ಪಾಟೀಲ
ಶ್ರೀ ಡಿ. ವಿ. ಹಾಲಭಾವಿ ಸ್ಕೂಲ್ ಆಫ್ ಆರ್ಟ. ಧಾರವಾಡ. ೧೯೯೬

೪೭. **ಚೀಳ್ಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಲೀಲಾವಿಲಾಸ** : ಸಿ. ಪ. ಚೆನ್ನಬಸವೇಶ್ವರ
ಚೀಳ್ಳಗುರಿಕೆ ಶ್ರೀ ಎರ್ರಿತಾತನ ಮಠದ ಧರ್ಮದರ್ಶಿಗಳು. ೧೯೬೩

೪೮. **ಜೆ. ಎಸ್. ಶೆಣೈ** : ಡಾ. ಕಾಸರವಳ್ಳಿ ಕೆ. ಜಿ. ರವೀಶ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೯೫

೪೯. **ಡಿ. ಜಿ. ಬಡಿಗೇರ** : ಪ್ರೊ. ಅನ್ನದಾಸಿ ಹಿರೇಮಠ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೮೩

೫೦. **ಡಿ. ವಿ. ಹಾಲಭಾವಿ** : ಎಸ್. ಕೆ. ಹೂಗಾರ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೮೭

೫೧. **ದೋಹರ ಕಕ್ಕಯ್ಯ** : ಟಿ. ನೀಲಾಂಬಿಕೆ
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೨

೫೨. **ದೃಶ್ಯಕಲಾ ವಿಮರ್ಶೆ** : (ಸಂ.) ವಿ. ಜಿ. ಅಂದಾನಿ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೨೦೦೦

೫೩. **ದೃಶ್ಯಕಲೆ ಎಂದರೇನು** : ಚಿ. ಸು. ಕೃಷ್ಣ ಶೆಟ್ಟಿ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೯೫

೫೪. **ದೃಶ್ಯಕಲೆ ಆರಾಧಕರು** : (ಸಂ.) ಜಿ. ವಿ. ಕೆ. ಶಾಸ್ತ್ರಿ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೯೦

೫೫. **ದೃಶ್ಯ ಕಲಾ** : ಎನ್. ಮರಿಶಾಮಾಚಾರ್
ಲಕ್ಷ್ಮಿ ಮುದ್ರಣಾಲಯ, ಬೆಂಗಳೂರು. ೨೦೦೧

೫೬. **ನಮ್ಮ ಗದಗ - ಬೆಟಗೇರಿ** : (ಸಂ.) ಹ. ರಾ. ಕಿದಿಯೂರು
ಡಾಯರಕ್ಟರಿ ಪಬ್ಲಿಶರ್ಸ್, ಗದಗ. ೧೯೭೫

೫೭. **ನಡೆದು ಬಂದ ದಾರಿ - ೨** : (ಸಂ) ಜಿ. ಬಿ. ಜೋಶಿ.
ಮನೋಹರ ಗ್ರಂಥಮಾಲಾ. ಧಾರವಾಡ. ಕೀರ್ತಿನಾಥ ಕುರ್ತಕೋಟಿ

೫೮. **ನಿಡಸೋಸಿಯ ಶ್ರೀ ಶಿವಲಿಂಗ ಶಿವಯೋಗೀಶ್ವರ ಪುರಾಣ** : (ಸಂ.) ಡಾ. ಬಿ. ವ್ಹಿ. ಶಿರೂರ
ಶ್ರೀ ನಿಜಲಿಂಗೇಶ್ವರ ಗ್ರಂಥಮಾಲೆ. ನಿಡಸೋಸಿ. ೧೯೯೯

೫೯. **ನಿಜಗುಣ ಶಿವಯೋಗಿ** : ಈಶ್ವರಚಂದ್ರ ಚಿಂತಾಮಣಿ
ವೀರಶೈವ ಭಾರತಿ ಪುಸ್ತಕ ಸಂಪದ. ಹ್ಬುಳ್ಳಿ ೧೯೮೩

೬೦. **ನುಲಿಯ ಚಂದಯ್ಯ** : ಪ್ರೊ. ಎಸ್.ಎಸ್. ಭೂಸರೆಡ್ಡಿ
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೪

೬೧. **ಪುರಂದರ ದಾಸರ ಜೀವನ ಚರಿತ್ರೆ** : ಜಿ. ವ್ಹಿ. ಶಾಸ್ತ್ರಿ
ಪಾರು ಪ್ರಕಾಶನ. ಗದಗ. ೨೦೦೦

೬೨. **ಪ್ರಭುಲಿಂಗ ಲೀಲೆ** : (ಅನು) ಡಾ. ಎಸ್. ವಿದ್ಯಾಶಂಕರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಬೆಂಗಳೂರು. ೧೯೮೫

೬೩. **ಪ್ರಶಸ್ತಿ ಪಡೆದ ಕಲಾವಿದರು** : (ಸಂ.) ಪಿ. ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೯೩

೬೪. **ಬಸಟೆಪ್ಪ ಸಂಗಪ್ಪ ಚೆಟ್ಟಿ : ಚೆಟ್ಟಿ ಮಾಮಲೇದಾರರ ಚರಿತೆ** : (ತುಕಾರಾಮ) ರತ್ನಪ್ಪ ಖೋಪರ್ಡೆ
ಜಗದ್ಗುರು ಮೂರು ಸಾವಿರ ಮಠ. ಹುಬ್ಬಳ್ಳಿ. ೧೯೪೦

೬೫. **ಬಸವಣ್ಣನವರ ವಚನಗಳು** : (ಸಂ) ಡಾ. ಆರ್. ಸಿ. ಹಿರೇಮಠ
ಶ್ರೀ ಮುರುಘಾಮಠ. ಧಾರವಾಡ. ೧೯೮೮

೬೬. **ಬಾಲಲೀಲಾ ಮಹಾಂತೇಶ್ವರ ಪುರಾಣ** : ಕವಿರತ್ನ ಚೆನ್ನಕವಿ
ಶ್ರೀಮುರುಘಾಮಠ ಧಾರವಾಡ. ೧೯೭೩ (೨ನೇ ಮುದ್ರಣ)

೬೭. **ಬಿ. ಕೆ. ಹುಬಳಿ** : ಡಿ. ಎಸ್. ಚೌಗಲೆ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು. ೧೯೯೯

೬೮. **ಬಿಜ್ಜ ಮಹಾದೇವಿ** : ಕು. ಸುವರ್ಣಾ ವಾಲಿಶೆಟ್ರು
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೪

೬೯. **ಬುದ್ಧ ಚರಿತ** : ಕಾಶೀನಾಥ ಪ್ರೋತವಾರ
ಕರ್ನಾಟಕ ಪ್ರಕಾಶನ. ಕರ್ನಾಟಕ ಹೌಸ. ಮುಂಬೈ. ೧೯೫೬

೭೦. **ಭಾರತೀಯ ಚಿತ್ರಕಲೆ** : ಶಿವರಾಮ ಕಾರಂತ
ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು, ೧೯೯೮

೭೧. **ಭಾರತದ ದೃಶ್ಯ ಕಲಾವಿದರು** : ಎನ್. ಮರಿಶಾಮಾಚಾರ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು, ೧೯೯೨

೭೨. **ಭಾರತೀಯ ಚಿತ್ರಕಲೆ** : ಶಿವರಾಮ ಕಾರಂತ
ಶಿವರಾಮ ಕಾರಂತ ಪುತ್ತೂರು. (ದಕ್ಷಿಣ ಕನ್ನಡ), ೧೯೩೦

೭೩. **ಭೀಮಕವಿ ವಿರಚಿತ ಬಸವಪುರಾಣ** : (ಸಂ.) ಡಾ. ಆರ್. ಸಿ. ಹಿರೇಮಠ
ಮುರುಘಾಮಠ ಧಾರವಾಡ. ೧೯೭೧

೭೪. **ಮಡಿವಾಳ ಮಾಚಿದೇವ** : ದು. ನಿಂ. ಬೆಳಗಲಿ
ವೀರಶೈವ ಭಾರತಿ ಪುಸ್ತಕ ಸಂಪದ, ಹುಬ್ಬಳ್ಳಿ ೧೯೮೪

೭೫. **ಮಹಾಕವಿ ರಾಘವಾಂಕ** : ಮಾರುತಿ ಹ. ಒಡೆಯರ
ವೀರಶೈವ ಭಾರತಿ ಪುಸ್ತಕ ಸಂಪದ, ಹುಬ್ಬಳ್ಳಿ ೧೯೮೪

೭೬. **ಮಹಾಶಿವಶರಣೆ ನೆಲ್ಲೂರ ನೆಂಬೆಕ್ಕ** : ಚೆನ್ನವೀರಸ್ವಾಮಿ ಹಿರೇಮಠ
ವೀರಶೈವ ಭಾರತಿ ಪುಸ್ತಕ ಸಂಪದ, ಹುಬ್ಬಳ್ಳಿ ೧೯೮೪

೭೭. **ಮರುಳ ಶಂಕರದೇವರು** : ಡಾ. ಬಿ. ಸಿ. ಜವಳಿ
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೩

೭೮. **ಮಲುಹಣದೇವ** : ಡಾ. ವಿ. ಶಿವಾನಂದ
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೨

೭೯. **ಮುಕ್ತಾಯಕ್ಕ** : ಎಚ್. ಎಸ್. ಮುಕ್ತಾಯಕ್ಕ
ವೀರಶೈವ ಭಾರತಿ ಪುಸ್ತಕ ಸಂಪದ, ಹುಬ್ಬಳ್ಳಿ ೧೯೮೨

೮೦. **ಮೂರುಸಾವಿರ ಮಠದ ಕರ್ತೃ ಗುರುಸಿದ್ಧೇಶ್ವರರು** : ಶ್ರೀಮತಿ ಶಶಿಕಲಾ ವಸ್ತ್ರದ
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೩

೮೧. **ಮೋಳಿಗಿಯ ಮಹಾದೇವಿ** : ಡಾ. ನಿಜಲಿಂಗಮ್ಮ ಕೊಪ್ಪಳ
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೩

೮೨. **ಮೋಳಿಗೆಯ ಮಾರಯ್ಯ** : ಡಾ. ದೇವೇಂದ್ರಕುಮಾರ ಹಕಾರಿ
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೨

೮೩. **ರೇಖಾ ಚಿತ್ರ** : (ಸಂ.) ಬಿ. ವಿ. ಕೆ. ಶಾಸ್ತ್ರಿ
ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರ. ೧೯೯೧

೮೪. **ಲೀಲಾಮೃತ : ಚೇಳ್ಳಗುರಿಕೆ ಎರ್ರಿಸ್ವಾಮಿಗಳ ಚರಿತ್ರೆ** : ಪಂ. ಶ್ರೀ ವೈ. ನಾಗೇಶ ಶಾಸ್ತ್ರಿಗಳು
ಎರ್ರಿಸ್ವಾಮಿಗಳ ಜೀವಸಮಾಧಿಮಠ. ಚೇಳ್ಳಗುರಿಕೆ. ೧೯೬೬

೮೫. **ವರ್ಣ ಸಂಚಯ** : ಡಾ. ಎಸ್. ಸಿ. ಪಾಟೀಲ
ವಿಜಯ ಲಲಿತಕಲಾ ಮಹಾವಿದ್ಯಾಲಯ. ಇಲಕಲ್ಲ. ೨೦೦೧

೮೬. **ವರ್ಣಾವರಣ** : ಪ್ರಜಾವಾಣಿ ಕಲಾ ವಿಮರ್ಶೆ : ಚಿ. ಸು. ಕೃಷ್ಣ ಶೆಟ್ಟಿ
ಚಿತ್ತಾರ ಪ್ರಕಾಶನ. ಬೆಂಗಳೂರು. ೨೦೦೧

೮೭. **ವಿಮರ್ಶೆ ತತ್ತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ** : (ಸಂ.) ವಿ. ಕೃ. ಗೋಕಾಕ
ಕನ್ನಡ ಸಾಹಿತ್ಯ ಅಕಾಡೆಮಿ. ಬೆಂಗಳೂರು. ೧೯೮೦

೮೮. **ವಿಶ್ವ ಕನ್ನಡ ಸಂಪುಟ - ೩** : (ಸಂ.) ಎಸ್. ಎಸ್. ರಾಮಪ್ರಸಾದ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಬೆಂಗಳೂರು. ೧೯೮೬

೮೯. **ಶರಣ ಅಜಗಣ್ಣ** : ಪ್ರೊ. ಎಮ್. ಎನ್. ವಾಲಿ
ವೀರಶೈವ ಭಾರತಿ ಪುಸ್ತಕ ಸಂಪದ, ಹುಬ್ಬಳ್ಳಿ ೧೯೮೪

೯೦. **ಶರಣಬಸವೇಶ್ವರರು** : ಬ. ಗಿ. ಯಲ್ಲಟ್ಟಿ
ವೀರಶೈವ ಭಾರತಿ ಪುಸ್ತಕ ಸಂಪದ, ಹುಬ್ಬಳ್ಳಿ ೧೯೮೫

೯೧. **ಶರಣ ಮೇದಾರ ಕೇತಯ್ಯ** : ಡಾ. ಮಲ್ಲಿಕಾರ್ಜುನ ಲಠ್ಠೆ
ವೀರಶೈವ ಭಾರತಿ ಪುಸ್ತಕ ಸಂಪದ, ಹುಬ್ಬಳ್ಳಿ ೧೯೮೩

೯೨. **ಶಿವಶರಣ ವೀರೇಶ್ವರ ಪುರಾಣ** : ಚನ್ನಕವಿ ದ್ಯಾಂಪೂರ
ಧರ್ಮ ಪ್ರಕಾಶ ಪ್ರೆಸ್, ಮಂಗಳೂರು, ೧೯೩೩

೯೩. **ಶಿವಶರಣ ಹರಳಯ್ಯ** : ಬಾಳೇಶ ಲಕ್ಕಶೆಟ್ಟಿ
ವೀರಶೈವ ಭಾರತಿ ಪುಸ್ತಕ ಸಂಪದ, ಹುಬ್ಬಳ್ಳಿ ೧೯೮೩

೯೪. **ಶ್ರೀ ಚನ್ನಬಸವಣ್ಣನವರು** : ಯೋಗೀಶ ಯಡ್ರಾವಿ
ವೀರಶೈವ ಭಾರತಿ ಪುಸ್ತಕ ಸಂಪದ, ಹುಬ್ಬಳ್ಳಿ ೧೯೮೪

೯೫. **ಶ್ರೀ ಜಗದ್ಗುರು ಜಯದೇವ ದಿಗ್ವಿಜಯ** : ಡಾ. ಕಣಕುಪ್ಪಿ ಕೊಟ್ಟೂರು ಬಸವಪ್ಪ
ಕರಕುಪ್ಪಿ ಗುರುಪಾದಪ್ಪ, ದಾವಣಗೇರಿ, ೧೯೬೬

೯೬. **ಶ್ರೀ ಜಯದೇವ ಲೀಲೆ** : ಪಂ. ಎಳಬೆಂಟೆ ನಾಗೇಶ ಶಾಸ್ತ್ರಿಗಳು
ಮುರುಘಾಮಠ. ಧಾರವಾಡ. ೧೯೫೯

೯೭. **ಶ್ರೀಮದಥಣಿ ಶಿವಯೋಗೀಶ್ವರ ಚಾರಿತ್ರ್ಯ** : ಪಂ. ಸದಾಶಿವ ಕವಿ
ಮುರುಘಾಮಠ. ಧಾರವಾಡ. ೧೯೮೨

೯೮. **ಶ್ರೀ ನರಗುಂದ ವಿರಕ್ತಮಠದ** : ಪಂ. ವಾಯ್. ನಾಗೇಶ ಶಾಸ್ತ್ರಿಗಳು
ಶ್ರೀ ಚೆನ್ನಬಸವ ಶಿವಯೋಗಿಶ್ವರ ಲೀಲೆ (ಪುರಾಣ)
ವೀರಶೈವ ಸಮಾಜ ಉನ್ನತ ಧರ್ಮಸಂಸ್ಥೆ. ವಿರಕ್ತಮಠ.
ನರಗುಂದ. ೧೯೬೩

೯೯. **ಶ್ರೀ ಫಲಹಾರ ಶಿವಯೋಗಿಶ್ವರ ಪುರಾಣವು** : ಶಿ. ಪ. ವೈ. ನಾಗೇಶಕವಿ
ಫಲಹಾರೇಶ್ವರ ಮಠ. ಅವರಾದಿ. ೧೯೫೩

೧೦೦. **ಶ್ರೀ ಸಿದ್ಧರಾಮ ಶಿವಯೋಗಿ** : ಶ್ರೀಮತಿ ಶಾಂತಲಾ ಯೋಗೀಶ ಯಡ್ರಾವಿ
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೪

೧೦೧. **ಶ್ರೀ ಸಿದ್ದೇಶ್ವರ ಮಹಾಪುರಾಣವು** : ವಿರಕ್ತ ತೋಂಟದಾರ್ಯ
ಗದುಗಿನ ಶ್ರೀ ಮ.ನಿ.ಜಗದ್ಗುರು ತೋಂಟದಾರ್ಯ ಮಹಾಸಂಸ್ಥಾನ
ಮೌನದ ನಂದಿ ಸಂಗನಬಸವ ಚರಮೂರ್ತಿಗಳು. ೧೯೫೧

೧೦೨. **ಸರ್ವಭೂಷಣ ಶಿವಯೋಗಿ** : ಬಾಳೇಶ ಲಕ್ಶೆಟ್ಟಿ
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೫

೧೦೩. **ಸಕಲೇಶ ಮಾದರಸ** : ಮಲ್ಲಿಕಾರ್ಜುನ ದೇವರು ತೇಲಸಂಗ
ವೀರಶೈವ ಭಾರತಿ ಪುಸ್ತಕ ಸಂಪದ. ಹುಬ್ಬಳ್ಳಿ ೧೯೮೩

೧೦೪. **ಸಂಗೀತ ಸುಧಾಕರ ಸಿದ್ಧರಾಮ ಜಂಬಲದಿನ್ನಿ** : ಶಾಂತರಸ
ತ್ವರಿತ ಮುದ್ರಣಾಲಯ. ಗದಗ. ೨೦೦೦

೧೦೫. **ಸಾವಳಗಿ ಶ್ರೀ ಶಿವಲಿಂಗೇಶ್ವರ ಪುರಾಣ** : (ಸಂ.) ಶ್ರೀ ಮನ್ನಿರಂಜನ ಪ್ರಣವಸ್ವರೂಪಿ
ಸಂಸ್ಥಾನ ಸಾವಳಗಿಮಠ. ಸಿದ್ಧರಾಮ ಸ್ವಾಮಿಗಳು ಸಂಸ್ಥಾನಮಠ
ಸಾವಳಗಿ

೧೦೬. **ಸೋಮಶೇಖರ ಸಾಲಿ** : ಡಾ. ಬಿ. ಕೆ. ಹಿರೇಮಠ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೯
೧೦೭. **ಸೌಂದರ್ಯ ಮತ್ತು ಕಲೆ** : ಡಾ. ಕೆ. ಬಿ. ರಾಮಕೃಷ್ಣರಾವ
ಪ್ರಸಾರಾಂಗ ಮೈಸೂರು, ವಿಶ್ವವಿದ್ಯಾಲಯ, ೧೯೭೧
೧೦೮. **ಸೌಂದರ್ಯ ಸಮೀಕ್ಷೆ** : ಜಿ. ಎಸ್. ಶಿವರುದ್ರಪ್ಪ
ಸತ್ಯಶ್ರೀ ಪ್ರಿಂಟರ್ಸ್, ಬೆಂಗಳೂರು, ೧೯೬೫
೧೦೯. **ಹಂಪೆಯ ಹರಿಹರ** : ಡಾ. ಬಸವರಾಜ ಮಲಶೆಟ್ಟಿ
ವೀರಶೈವ ಭಾರತಿ ಪುಸ್ತಕ ಸಂಪದ, ಹುಬ್ಬಳ್ಳಿ ೧೯೮೪
೧೧೦. **ಹಾವಿನಹಾಳ ಕಲ್ಲಯ್ಯ** : ಸಿಂಪಿ ಲಿಂಗಣ್ಣ
ವೀರಶೈವ ಭಾರತಿ ಪುಸ್ತಕ ಸಂಪದ, ಹುಬ್ಬಳ್ಳಿ ೧೯೮೨

ಹಿಂದಿ - ಮರಾಠಿ :

೧೧೧. **ಕಲಾಮಂದಿರಾಂತಿಲ ಏಕಚಾಲಿಸ ವರ್ಷ** : ರಾವ್‌ಬಹಾದ್ದೂರ್ ಎಂ. ವಿ. ಧುರಂಧರ್
ವಾಗ್ಲೆ ಪ್ರೊಸೆಸ್ ಸ್ಟುಡಿಯೊ ಆ್ಯಂಡ್ ಪ್ರೆಸ್ ಲಿ., ಬಾಂಬೆ, ೧೯೪೦
೧೧೨. **ಶ್ರೀ ಬಸವೇಶ್ವರ ಪುರಾಣ** : ಉಭಯ ಗಾಯನಾಚಾರ್ಯ ಪಂ. ಪುಟ್ಟರಾಜ (ಅನು)
ಶ್ರೀ ಕುಮಾರೇಶ್ವರ ಕೃಪಾಪೋಷಿತ ಸಂಗೀತ ಸಾಹಿತ್ಯ
ಮಹಾವಿದ್ಯಾಲಯ ಶ್ರೀ ವಿರೇಶ್ವರ ಪುಣ್ಯಾಶ್ರಮ, ಗದಗ, ೧೯೬೦

ಇಂಗ್ಲೀಷ :

೧೧೩. **Sir J. J. School of Arts, Bombay a hundred years of its career, 1970** : N. N. Kelkar
೧೧೪. **My Contemporary Artists** : D. V. Halabhavi
School of Art Dharwad, 1968
೧೧೫. **Prof. Nicholas Rorich and his Himalayan Paintings, Vol. I and II** : Pushpa Dravid
(Unpublished thesis) Bangalore University, Bangalore, 1998
೧೧೬. **The History and Development of the Sir J. J. School Art Bombay, Vol. I and II** : D. B. Pardeshi
(Unpublished thesis), University of Bombay, 1985
೧೧೭. **Indian Painting** : C. ShivaramaMurthi
National Book Trust of India, New Delhi, 1970

ಸಂಸ್ಮರಣ ಗ್ರಂಥಗಳು :

೧೧೮. ಕಲಾತಪಸ್ವಿ : ಶ್ರೀ ಮುರಿಗೆಪ್ಪಣ್ಣ ಚೆಟ್ಟಿ ಅಭಿನಂದನ ಗ್ರಂಥ. ೧೯೯೧ : (ಸಂ.) ಮಹಾಲಿಂಗ ಯಾಳಗಿ
೧೧೯. ಷಷ್ಟಬ್ದಿ ಪೂರ್ತಿ ಹಾಗೂ ಪ್ರಥಮ ದ್ವಾದಶ ಪಟ್ಟಮಹೋತ್ಸವ ಸಮಿತಿ, ನಿಡಸೋಸಿ, ೧೯೮೪ : (ಸಂ.) ದಕ್ಷಿಣ ಮೂರ್ತಿ ಪುರಾಣಿಕ ಗಂಗಾಧರ ವಾಲಿ

೧೨೦. **ಅರವತ್ತರ ಒಸಗೆ** : (ಸಂ.) ಕಲಾಪ್ರಸಾದಿ ಹಾಲಭಾವಿ ದಾನಪ್ಪ
ಶ್ರೀ ಡಿ. ವಿ. ಹಾಲಭಾವಿ ಸ್ಕೂಲ್ ಆಫ್ ಆರ್ಟ. ಧಾರವಾಡ. ೧೯೬೮

೧೨೧. **ಶಿಕ್ಷಣ ಸಂಪದ ಪ್ರೊ. ವಿ. ಜಿ. ಮಾರಿಹಾಳ ಅಭಿನಂದನ ಗ್ರಂಥ.** : ಡಾ. ಎಸ್.ಸಿ. ಪಾಟೀಲ
ವಿ. ಜಿ. ಮಾರಿಹಾಳ ಸತ್ಕಾರ ಸಮಿತಿ. ವಿದ್ಯಾಗಿರಿ. ಧಾರವಾಡ

ಅರ್ಥಕೋಶ - ವಿಶ್ವಕೋಶ - ಗೆಜೆಟಿಯರಗಳು :

೧೨೨. ಜ್ಞಾನ ಗಂಗೋತ್ರಿ ಸಂಪುಟಗಳು

೧೨೩. ಕನ್ನಡ ನಿಘಂಟು

೧೨೪. ಕಲಾ ಕೋಶ

೧೨೫. ಕಸ್ತೂರಿ ಕೋಶ

೧೨೬. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ

೧೨೭. Webster's New 20th Century Dictionery

೧೨೮. Webster's New World Encyclopaedia

೧೨೯. ಧಾರವಾಡ ಜಿಲ್ಲಾ ಗೆಜೆಟಿಯರ ೧೯೯೬

೧೩೦. ಕರ್ನಾಟಕ ರಾಜ್ಯ ಗೆಜೆಟಿಯರ ೧೯೮೬

ಲೇಖನಗಳು :

೧. ಶರಣಭಾವ ರವಿವರ್ಮ ಪ್ರಭಾವ : ಎಲ್. ಶಿವಲಿಂಗಪ್ಪ. ಕನ್ನಡ ಪ್ರಭ. ದಿನಾಂಕ ೧೬-೩-೧೯೯೭

೨. ವಯೋವೃದ್ಧನ ಕಲೆಗೆ ಸಿಕ್ಕ ತಕ್ಕ ಪುರಸ್ಕಾರ : ಎಲ್. ಶಿವಲಿಂಗಪ್ಪ. ಕರ್ಮವೀರ. ೧೩-೪-೧೯೯೭

೩. ತಾಸ್ಕರವರ ಚಿರಬಂದಿ ಮನೆ : ಮಾಧವ ಗಡಕರಿ. ಲೋಕಪ್ರಭ. ದೀವಾಲಿ. ೧೯೮೮

೪. ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ ತಾಸ್ಕರ ಮಾಸ್ತರ : ಬಾಬುರಾವ ಸಡವೇಲ್ಕರ. ಲೋಕಪ್ರಭ. ೧೯೮೮

೫. ಭಾರತೀಯ ಚಿತ್ರಕಲಾಚಿ ಶತಾಬ್ದಿ : ಸತೀಶ ನಾಯಕ. ಲೋಕಪ್ರಭ. ದೀವಾಲಿ ಮರಾಠಿ ಮಾಸ ಪತ್ರಿಕೆ. ೧೯೮೮

೬. ರಿಯಲಿಸ್ಟಿಕ ಕಲೆಯ ರಸಋಷಿ ಮುರಿಗೆಪ್ಪಣ್ಣ ಚೆಟ್ಟಿ : ಕಾವೆಂಶ್ರೀ. ನೂತನ ಪತ್ರಿಕೆ. ೧೯-೩-೨೦೦೦

೭. ನೈಜಕಲೆಯ ರಸಋಷಿ ೯೦ ರ ಹರೆಯದ ಮುರಿಗೆಪ್ಪಣ್ಣ ಎ. ಚೆಟ್ಟಿ : ಕಾವೆಂಶ್ರೀ. ತರಂಗ. ೧೭-೧೧-೧೯೯೬

೮. ಮರಿಗೆಪ್ಪಣ್ಣ ಚಟ್ಟಿ : ಸಿ. ಎಂ. ಹೊನಗುಡಿ. ನವೋದಯ. ೨೩-೨-೧೯೯೨

೯. ಚಿತ್ರಬ್ರಹ್ಮ ಎಂ. ಎ. ಚೆಟ್ಟಿ : ವಿಶ್ವನಾಥ ಗುಗ್ಗರಿ. ನವೋದಯ ೭-೨-೧೯೮೭